೭



ಶಾಂತಿನಾಥ–ಆಂಡಯ್ಯ ಸಂಪುಟ

ಸುಕುಮಾರ ಚರಿತಂ
ಕಬ್ಬಿಗರ ಕಾವಂ

ಸಂಪಾದಕರು

ಪ್ರೊ. ಪಿ. ವಿ. ನಾರಾಯಣ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಗ್ರ
ಕನ್ನಡ ಜೈನಸಾಹಿತ್ಯ
ಸಂಪುಟ-೬



೧.	ಪಂಪ ಸಂಪುಟ	ಸಂ. ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರೀ
೨.	ಶಿವಕೋಟ್ಯಾಚಾರ್ಯ-ಚಾವುಂಡರಾಯ ಸಂಪುಟ	ಸಂ. ಪ್ರೊ. ಕಮಲಾ ಹಂಪನಾ
೩.	ಪೊನ್ನ-ಕಮಲಭವ ಸಂಪುಟ	ಸಂ. ಪ್ರೊ. ಹಂಪ ನಾಗರಾಜಯ್ಯ
೪.	ರನ್ನ ಸಂಪುಟ	ಸಂ. ಪ್ರೊ. ಹಂಪ ನಾಗರಾಜಯ್ಯ
೫.	ನಾಗವರ್ಮ ಸಂಪುಟ	ಸಂ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
೬.	ಶಾಂತಿನಾಥ-ಆಂಡಯ್ಯ ಸಂಪುಟ	ಸಂ. ಪ್ರೊ. ಪಿ.ವಿ. ನಾರಾಯಣ
೭.	ನಾಗಚಂದ್ರ ಸಂಪುಟ	ಸಂ. ಡಾ. ಶಾಂತಿನಾಥ ದಿಬ್ಬದ
೮.	ನಯಸೇನ ಸಂಪುಟ	ಸಂ. ಪ್ರೊ. ಎಸ್.ಪಿ. ಪಾಟೀಲ
೯.	ಬ್ರಹ್ಮಶಿವ-ವೃತ್ತವಿಲಾಸ ಸಂಪುಟ	ಸಂ. ಡಾ. ಎಂ.ಎಂ. ಕಲಬುರ್ಗಿ
೧೦.	ನೇಮಿಚಂದ್ರ ಸಂಪುಟ	ಸಂ. ಪ್ರೊ. ದೇ. ಜವರೇಗೌಡ
೧೧.	ಬಂಧುವರ್ಮ ಸಂಪುಟ	ಸಂ. ಬಿ.ಎಸ್. ಸಣ್ಣಯ್ಯ
೧೨.	ಅಗ್ಗಳ-ಆಚಣ್ಣ ಸಂಪುಟ	ಸಂ. ಜಿ.ಜಿ. ಮಂಜುನಾಥನ್
೧೩.	ಜನ್ನ ಸಂಪುಟ	ಸಂ. ಪ್ರೊ. ಸಿ.ಪಿ. ಕೃಷ್ಣಕುಮಾರ್
೧೪.	ಇಮ್ಮಡಿ ಗುಣವರ್ಮ-ಪಾರ್ಶ್ವಪಂಡಿತ ಸಂಪುಟ	ಸಂ. ವೈ.ಸಿ. ಭಾನುಮತಿ
೧೫.	ಬಾಹುಬಲಿ-ಮಧುರ ಸಂಪುಟ	ಸಂ. ಪ್ರೊ. ಎನ್. ಬಸವಾರಾಧ್ಯ
೧೬.	ಮಂಗರಸ ಸಂಪುಟ	ಸಂ. ಡಾ. ಬಿ.ವಿ. ಶಿರೂರ
೧೭.	ರತ್ನಾಕರವರ್ಣಿ ಸಂಪುಟ	ಸಂ. ಪ್ರೊ. ಎಂ.ಜಿ. ಬಿರಾದಾರ
೧೮.	ಸಾಳ್ವ ಸಂಪುಟ	ಸಂ. ಡಾ. ಎಂ.ಎ. ಜಯಚಂದ್ರ
೧೯.	ದೇವಚಂದ್ರ ಸಂಪುಟ	ಸಂ. ಪ್ರೊ. ಎಚ್. ಜೆ. ಲಕ್ಕಪ್ಪಗೌಡ
೨೦.	ವಾಕ್ಯ ಮಾಣಿಕ್ಯ ಸಂಪುಟ	ಸಂ. ಪ್ರೊ. ಜಿ.ಎಸ್. ಶಿವರುದ್ರಪ್ಪ

ಸುವರ್ಣ ಕರ್ನಾಟಕ - ೨೦೦೬

ಶಾಂತಿನಾಥ-ಆಂಡಯ್ಯ ಸಂಪುಟ

ಸುಕುಮಾರ ಚರಿತಂ-ಕಬ್ಬಿಗರ ಕಾವಂ

ಸಂಪಾದಕರು

ಪ್ರೊ. ಪಿ.ವಿ. ನಾರಾಯಣ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ - ಹಂಪಿ

೨೦೦೬

Samagra Kannada Jaina Sahitya Series - 6

SHANTHINATHA-AANDAIAH SAMPUTA

Edited by

Prof. P.V. Narayana

'Tangali'

R.B.I. Colony, 2nd Main Road, 2nd Cross, 3rd Block,

Jayanagar, Bangalore-560 011

Ph.: 080-26344440

Published by

Prof. Mallepuram G. Venkatesha

Director, Prasaranga

Kannada University, Hampi

Vidyaranya - 583 276

Pages : **XL + 304** **Price : Rs. 100/-**

First Impression : 2006

www.Kannadauniversity.org

ಪ್ರಕಾಶನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ನಿರ್ದೇಶಕರು, ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಮುದ್ರಣ

ಸತ್ಯಶ್ರೀ ಪ್ರಿಂಟರ್ಸ್ (ಪ್ರೈ.) ಲಿ.,

ಚಾಮರಾಜಪೇಟೆ, ಬೆಂಗಳೂರು - ೧೮

ದೂರವಾಣಿ : ೨೬೫೨ ೫೭೩೬, ೨೬೫೦ ೬೦೨೩

ಆರ್ಥಿಕ ನೆರವು

ಕಂದಾಯ ಇಲಾಖೆ (ಮುಜರಾಯಿ)

ಕರ್ನಾಟಕ ಸರ್ಕಾರ

ಉನ್ನತ ಸಲಹಾ ಸಮಿತಿ

ಅಧ್ಯಕ್ಷರು

ಡಾ. ಬಿ.ಎ. ವಿವೇಕ ರೈ

ಕುಲಪತಿಗಳು

ಸದಸ್ಯರು

ಡಾ. ದೇ. ಜವರೇಗೌಡ

ಡಾ. ಜಿ.ಎಸ್. ಶಿವರುದ್ರಪ್ಪ

ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ಡಾ. ಹಂಪ ನಾಗರಾಜಯ್ಯ

ಡಾ. ಕಮಲಾ ಹಂಪನಾ

ಡಾ. ಚಂದ್ರಶೇಖರ ಕಂಬಾರ

ಡಾ. ಎಂ.ಎಂ. ಕಲಬುರ್ಗಿ

ಡಾ. ಎಚ್.ಜೆ. ಲಕ್ಕಪ್ಪಗೌಡ

ಡಾ. ಎಂ.ಜಿ. ಬಿರಾದಾರ

ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಮುಜರಾಯಿ)

ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಡಾ. ಕರೀಗೌಡ ಬೀಚನಹಳ್ಳಿ, ಕುಲಸಚಿವರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಡೀನ್ ಭಾಷಾನಿಕಾಯ

ಡಾ. ಎಂ. ಉಷಾ. ಸಂಚಾಲಕರು, ಜೈನ ಸಾಹಿತ್ಯ ಅಧ್ಯಯನ ಪೀಠ

ಅಱಿವುದು ಧರ್ಮಮಂ ಕಾವ್ಯಧರ್ಮಮುಮಂ

ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ರೂಪಿಸಿ, ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮಹತ್ವಪೂರ್ಣವಾದದ್ದು. ೨೦೦೬ರ ಶ್ರವಣಬೆಳಗೊಳದ ಐತಿಹಾಸಿಕ ಗೊಮ್ಮಟ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯು ಈ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯನ್ನು ರೂಪಿಸಿ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿತು. ಕರ್ನಾಟಕ ಸರ್ಕಾರವು ಈಗಾಗಲೇ ಸಮಗ್ರ ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಸಂಪುಟಗಳನ್ನು ಹೊರತಂದಿದ್ದು, ಈಗ ಸಮಗ್ರ ಜೈನಸಾಹಿತ್ಯ ಸಂಪುಟಗಳ ಪ್ರಕಟಣೆಯ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯದ ಬಹಳ ಮಹತ್ವದ ಶರೀರವೊಂದನ್ನು ಪೂರ್ಣಗೊಳಿಸುತ್ತಿದೆ. ಈ ಸಮಗ್ರ ಜೈನಸಾಹಿತ್ಯ ಸಂಪುಟದ ಯೋಜನೆಯನ್ನು ೨೦೦೬ರ ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದ ಭಾಗವಾಗಿ ಕರ್ನಾಟಕ ಸರಕಾರ ಅಂಗೀಕರಿಸಿ ಸಾರಸ್ವತ ಮಹಾಮಸ್ತಕಾಭಿಷೇಕ ಮಾಡಿದ ಪುಣ್ಯಕ್ಕೆ ಪಾತ್ರವಾಗಿದೆ. ಈ ಯೋಜನೆಯ ಮಹತ್ವವನ್ನು ಮನಗಂಡು ಉದಾರವಾದ ಆರ್ಥಿಕ ನೆರವು ನೀಡಿದ ಆಗಿನ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎನ್. ಧರ್ಮಸಿಂಗ್ ಅವರಿಗೂ, ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರಿಗೂ, ಸನ್ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಎಚ್.ಡಿ. ರೇವಣ್ಣ ಅವರಿಗೂ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದು ಚಾಲನೆಗೊಂಡ ಯೋಜನೆಗೆ ಮತ್ತೆ ಜೀವ ತುಂಬಿದ ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಗೆ ವಿಶೇಷ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪ್ರಸ್ತಾವವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿದ ಪರಿಷತ್ತಿನ ಸದಸ್ಯರಾದ ಡಾ. ಎಂ.ಆರ್. ತಂಗಾ, ಡಾ. ಚಂದ್ರಶೇಖರ ಕಂಬಾರ, ಡಾ. ಎಲ್. ಹನುಮಂತಯ್ಯ, ಶ್ರೀ ಹಸನಬ್ಬ ಅವರ ನೆರವನ್ನು ವಿಶೇಷವಾಗಿ ಸ್ಮರಿಸುತ್ತೇನೆ. ಕನ್ನಡದ ಹಿರಿಯ ಸಾಹಿತಿಗಳಾದ ಮತ್ತು ಜೈನಸಾಹಿತ್ಯದಲ್ಲಿ ವಿಶೇಷ ಪಾಂಡಿತ್ಯವುಳ್ಳ ಡಾ. ಹಂಪ. ನಾಗರಾಜಯ್ಯ ಮತ್ತು ಡಾ. ಕಮಲಾ ಹಂಪನಾ ಅವರು ಈ ಸಂಪುಟಗಳ ರೂಪರೇಷೆಯಿಂದ ತೊಡಗಿ ಕರ್ನಾಟಕ ಸರ್ಕಾರಕ್ಕೆ ಇವರ ಮಹತ್ವವನ್ನು ಮನವರಿಕೆ ಮಾಡಿಕೊಡುವವರೆಗೆ ವಿಶೇಷವಾದ ಕಾಳಜಿ ವಹಿಸಿ ಸಹಕರಿಸಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯ ಆರಂಭವಾಗುವುದೇ ಜೈನ ಸಾಹಿತ್ಯ ಕೃತಿಗಳ ಮೂಲಕ. ಆದಿಕವಿ ಪಂಪನ **ವಿಕ್ರಮಾರ್ಜುನ ವಿಜಯ** ಮತ್ತು **ಆದಿಪುರಾಣಗಳು** ಕನ್ನಡ ಸಾಹಿತ್ಯದ ಮೊತ್ತಮೊದಲ ಮಹಾಕಾವ್ಯಗಳು. ಶಿವಕೋಟ್ಯಾಚಾರ್ಯರ **ವೊಡ್ಡಾರಾಧನೆ** ಕನ್ನಡದ ಮೊತ್ತಮೊದಲ ಉಪಲಬ್ಧ ಗದ್ಯಗ್ರಂಥ. ಸಂಸ್ಕೃತವೇ ಸಾಹಿತ್ಯನಿರ್ಮಾಣದ ಪ್ರಧಾನ

ಭಾಷೆಯಾಗಿದ್ದ ಭಾರತ ದೇಶದಲ್ಲಿ ಕನ್ನಡದಂತಹ ಪ್ರಾದೇಶಿಕ ಭಾಷೆಯಲ್ಲಿ ಕಾವ್ಯರಚನೆ ಮಾಡುವ ಮೂಲಕ ಜೈನಕವಿಗಳು, ಪ್ರಾದೇಶಿಕ ಸಾಹಿತ್ಯ ನಿರ್ಮಾಣಕ್ಕೆ ನಾಂದಿ ಹಾಡಿದರು. ಆದಿಕವಿ ಪಂಪ **ಇದು ನಿಚ್ಚಂ ಪೊಸತು ಅರ್ಣವಂಬೋಲ್ ಅತಿ ಗಂಭೀರಂ ಕವಿತ್ವಂ** ಎಂದು ಹೇಳಿದ್ದಾನೆ. ಪಂಪಕವಿಯು **ಆದಿಪುರಾಣ**ದಲ್ಲಿ ಆದಿನಾಥನ ಭವಾವಳಿಗಳನ್ನು ಮತ್ತು ಆತನ ಮಕ್ಕಳಾದ ಭರತ ಬಾಹುಬಲಿಯರು ರಾಜ್ಯದ ಒಡೆತನಕ್ಕಾಗಿ ಪರಸ್ಪರ ಎದುರಾಳಿಗಳಾಗುವ ಸನ್ನಿವೇಶವನ್ನು ಚಿತ್ರಿಸಿದ್ದಾನೆ. ಅಣ್ಣ ತಮ್ಮಂದಿರ ನಡುವೆ ಮುಖಾಮುಖಿ ಯುದ್ಧದಲ್ಲಿ ಅಣ್ಣ ಭರತ ಸೋಲುತ್ತಾನೆ, ತಮ್ಮ ಬಾಹುಬಲಿ ಗೆಲ್ಲುತ್ತಾನೆ. ಆದರೆ ಈ ರೀತಿ ಗೆದ್ದ ಬಾಹುಬಲಿಯು ರಾಜ್ಯದ ಒಡೆತನವನ್ನು ನಿರಾಕರಿಸಿ ವೈರಾಗ್ಯಪರನಾಗಿ ಪ್ರತಿಮಾ ಯೋಗದಲ್ಲಿ ನಿಂತು ಗೊಮ್ಮಟನಾಗುತ್ತಾನೆ. ಅಂತಹ ವೈರಾಗ್ಯದ ಪ್ರತಿಮೆಯಾದ ಗೊಮ್ಮಟನ ಮಹಾಮಸ್ತಕಾಭಿಷೇಕದ ನೆನಪಿಗಾಗಿ ಕನ್ನಡ ಸಾಹಿತ್ಯದ ಗೊಮ್ಮಟ ಸದೃಶ ಜೈನಕೃತಿಗಳನ್ನು ಮತ್ತೆ ಹೊಸದಾಗಿ ಶುಭ್ರಗೊಳಿಸಿ ಸಾಹಿತ್ಯ ಮತ್ತು ಶಾಸ್ತ್ರದ ವಿಭಿನ್ನ ಅರ್ಚನೆಗಳ ಮೂಲಕ ಅವುಗಳಿಗೆ ಪ್ರಕಟಣೆಯ ಅಭಿಷೇಕವನ್ನು ಮಾಡಲಾಗಿದೆ.

ಆದಿಕವಿ ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ **ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ** ಎಂದು ಹೇಳಿಕೊಂಡಿದ್ದಾನೆ. ಹೀಗಾಗಿ ಪ್ರಾಚೀನ ಕಾವ್ಯಗಳಲ್ಲಿ ಲೌಕಿಕ ಮತ್ತು ಆಗಮಿಕ ಎನ್ನುವ ಕಾವ್ಯ ಮತ್ತು ಪುರಾಣಗಳ ನಿರ್ಮಾಣದ ಒಂದು ಪರಂಪರೆ ಕಾಣಿಸಿಕೊಳ್ಳುತ್ತದೆ. ಪಂಪನಿಂದ ತೊಡಗಿ ಪೊನ್ನ, ರನ್ನರಿಂದ ಮುಂದುವರಿದು ಮುಂದಿನ ಕವಿಗಳಲ್ಲಿ ಆಗಮಿಕ ಕಾವ್ಯಗಳಾದ ತೀರ್ಥಂಕರರ ಪುರಾಣ ಕೃತಿಗಳ ನಿರ್ಮಾಣ ಒಂದು ಸೋಂಪಿಯಂತೆ ಕಾಣಸಿಗುತ್ತದೆ. ಇನ್ನೊಂದು ಕಡೆ ನಯಸೇನ, ಜನ್ನ, ಬ್ರಹ್ಮಶಿವ, ವೃತ್ತವಿಲಾಸರಂತಹ ಕವಿಗಳು ಲೌಕಿಕ ಕಥೆಗಳಿಗೆ ಜೈನ ಆವರಣವನ್ನು ನಿರ್ಮಾಣ ಮಾಡಿ ಲೌಕಿಕ-ಧಾರ್ಮಿಕಗಳನ್ನು ಒಂದು ಗೂಡಿಸುವ ವಿಶಿಷ್ಟ ಕಲೆಗಾರಿಕೆಯನ್ನು ಮೆರೆಯುತ್ತಾರೆ. ಹೀಗೆ ೨೪ ತೀರ್ಥಂಕರರ ಪುರಾಣಕಾವ್ಯ ಒಂದು ಧಾರೆಯಾದರೆ ಚರಿತ್ರೆ ಲೌಕಿಕಕಥೆ ನೀತಿಕಥೆಗಳ ಮೂಲಕ ಸಮಕಾಲೀನ ಬದುಕಿಗೆ ಸ್ಪಂದಿಸಿದ ವೈವಿಧ್ಯಮಯ ಕಾವ್ಯಪರಂಪರೆಯ ಪ್ರಾಚೀನ ಜೈನಸಾಹಿತ್ಯದ ಇನ್ನೊಂದು ಮುಖ್ಯಧಾರೆಯಾಗಿದೆ. ಇದರೊಂದಿಗೆ ಗದ್ಯ ಸಾಹಿತ್ಯದ ದೃಷ್ಟಿಯಿಂದ ಶಿವಕೋಟ್ಯಾಚಾರ್ಯರ **ವೊಡ್ಡಾರಾಧಾನೆ** ಮತ್ತು ಚಾವುಂಡರಾಯನ **ಚಾವುಂಡರಾಯ ಪುರಾಣ** ಇನ್ನೊಂದು ಪರಂಪರೆಯನ್ನು ಕಟ್ಟಿಕೊಡುತ್ತದೆ. ಒಂದು ಕಡೆ ಜೈನಧರ್ಮದ ಚೌಕಟ್ಟಿನ ಒಳಗಡೆ ಕತೆಗಳು ಮಾಧ್ಯಮವಾಗಿ ಬಳಕೆಯಾದರೆ, ಇನ್ನೊಂದೆಡೆ ಜೈನಧರ್ಮದ ಮೇಲ್ಮೈಗಾಗಿ ಸಾಧನೆ ಮಾಡಿದ ಸಾಂಸ್ಕೃತಿಕ ವ್ಯಕ್ತಿಯ ಸುತ್ತ ಕಥನವೊಂದು ನಿರ್ಮಾಣವಾಗುತ್ತದೆ. ಇವುಗಳ ನಡುವೆ ಇಮ್ಮಡಿ ನಾಗವರ್ಮನಂತಹ ಶಾಸ್ತ್ರಕಾರನು ಭಾಷೆ ಮತ್ತು ಕಾವ್ಯ ಲಕ್ಷಣಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ರಚಿಸಿದ್ದಾನೆ. ಮಧ್ಯಯುಗೀನ ಕಾಲದಲ್ಲಿ ರತ್ನಾಕರವರ್ಣಿಯಂತಹ ಕವಿಯು ಸಾಂಗತ್ಯದಲ್ಲಿ **ಭರತೇಶ ವೈಭವ** ಕಾವ್ಯರಚಿಸಿ ಜೈನ ಕಾವ್ಯಗಳ ಆಶಯದ ಸಾಂಸ್ಕೃತಿಕ ಪಲ್ಲಟವನ್ನು ದಾಖಲಿಸುತ್ತಾನೆ. ೧೮೦೦ರ ಕಾಲಕ್ಕೆ ಬರುವ ದೇವಚಂದ್ರನ **ರಾಜಾವಳಿ ಕಥೆ**ಯು ಆಧುನಿಕ ಕನ್ನಡದ ಪೂರ್ವದ ಕಥಾರಚನೆಯ ಅರುಣೋದಯದ ಹೆಜ್ಜೆಯಾಗಿ ಮುಖ್ಯವಾದ ಕೃತಿಯಾಗಿದೆ.

ಒಂದು ಅಂದಾಜಿನ ಪ್ರಕಾರ ಸುಮಾರು ೪೫೦ ಜೈನಕವಿಗಳು ೫೨೦ಕ್ಕೂ ಹೆಚ್ಚಿನ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸುಮಾರು ಅರ್ಧದಷ್ಟು ಕೃತಿಗಳು ಲಭ್ಯವೆಂದು ನಾವು ಭಾವಿಸಿದರೂ ಇವುಗಳ ಪ್ರಮಾಣ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಗಣನೀಯ ಎನ್ನಿಸುತ್ತದೆ. ಮಹಾಕಾವ್ಯದಿಂದ ತೊಡಗಿ ಮುಕ್ತಕದ ವರೆಗೆ, ಗಣಿತಶಾಸ್ತ್ರದಿಂದ ಹಿಡಿದು ಸೂಪಶಾಸ್ತ್ರದ ವರೆಗೆ,

ಜನಪದ ಕಥೆಯಿಂದ ಆರಂಭಿಸಿದ ವಿಡಂಬನ ಸಾಹಿತ್ಯದ ವರಗೆ ಕನ್ನಡ ಜೈನಸಾಹಿತ್ಯದ ಹರಹು ವ್ಯಾಪಿಸಿಕೊಂಡಿದೆ.

ಪಂಪ ಕವಿಯು ತನ್ನ ಕಾವ್ಯದಲ್ಲಿ ಮಾರ್ಗ ಮತ್ತು ದೇಸಿಗಳ ಕುರಿತು ಮಾತನಾಡುತ್ತಾನೆ. ಕನ್ನಡ ಜೈನಸಾಹಿತ್ಯದ ಬಗ್ಗೆ ಹೇಳುವಾಗ ಜೈನ ಪುರಾಣಗಳ ಪರಿಭಾಷೆ ಮತ್ತು ಪರಿಮಾಣಗಳು ಮಾರ್ಗವಾದರೆ, ಇತಿಹಾಸ, ಸಮಾಜ, ಲೌಕಿಕ ಪ್ರಪಂಚ ದೇಸಿಯಾಗುತ್ತದೆ. ಪಂಪನ ಕಾವ್ಯಗಳ ನಾಣ್ನುಡಿಯಿಂದ ತೊಡಗಿ, ವಡ್ಡಾರಾಧನೆ ಕತೆಗಳ ಗ್ರಾಮೀಣ ಬದುಕಿನಿಂದ ಮುಂದುವರಿದು, ನಯಸೇನನ ಧರ್ಮಾಮೃತದ ಕಥೆಗಳ ಮಾಲೋಪಮೆಗಳಿಂದ ಹಾದು ಬಂದು, ರತ್ನಾಕರನ ಭರತೇಶ ವೈಭವದ ನುಡಿಗಟ್ಟುಗಳ ವರೆಗೆ ಕನ್ನಡದ ನಿಜವಾದ ದೇಸಿಯನ್ನು ಜೈನ ಸಾಹಿತ್ಯ ನಿರ್ಮಿಸಿಕೊಂಡಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಂಪೂಕಾವ್ಯ ಪ್ರಕಾರ ಜೈನರಿಂದ ಆರಂಭವಾಯಿತು. ಸಾಂಗತ್ಯಕಾವ್ಯ ಪ್ರಕಾರಕ್ಕೆ ನಾಂದಿ ಹಾಡಿದವರು ಜೈನಕವಿಗಳು. ಗದ್ಯವನ್ನು ಮೊದಲು ಮಾಡಿದವರು ಜೈನ ಕಥೆಗಾರರು. ಕಾವ್ಯಶಾಸ್ತ್ರ, ಛಂದಸ್ಸು, ವ್ಯಾಕರಣ, ಸೂಪಶಾಸ್ತ್ರದಂತಹ ಶಾಸ್ತ್ರ ಪಾಂಡಿತ್ಯವನ್ನು ಕನ್ನಡದಲ್ಲಿ ಕಟ್ಟಿಕೊಟ್ಟವರು ಜೈನರು. ಹೀಗೆ ಕನ್ನಡದ ವಿದ್ವತ್ತು, ವಿವೇಕ ಮತ್ತು ವಿಸ್ಮಯ ಕನ್ನಡ ಸಾಹಿತ್ಯದಲ್ಲಿ ಜೈನ ಕವಿಗಳಿಂದ ಅಪೂರ್ವವಾಗಿ ನಿರ್ಮಾಣವಾಗಿದೆ ಮತ್ತು ಪ್ರಸಾರವಾಗಿದೆ.

ಈ ಹಿನ್ನೆಲೆಯಲ್ಲಿ ಸಮಗ್ರ ಕನ್ನಡ ಜೈನ ಸಾಹಿತ್ಯ ಯೋಜನೆಯನ್ನು ನಿಗದಿತ ಕಾರ್ಯವಿಧಾನದ ಮೂಲಕ ರೂಪಿಸಿಕೊಂಡು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಬೇಕೆಂದು ನಾವು ತೀರ್ಮಾನಿಸಿಕೊಂಡೆವು. ಇದಕ್ಕಾಗಿ ಈ ಕ್ಷೇತ್ರದಲ್ಲಿ ನುರಿತ ನಾಡಿನ ಹಿರಿಯರನ್ನೊಳಗೊಂಡ ಉನ್ನತ ಸಲಹಾ ಸಮಿತಿ ಹಾಗೂ ಸಂಪನ್ಮೂಲ ವಿದ್ವಾಂಸರನ್ನು ಈ ಯೋಜನೆಯ ವ್ಯಾಪ್ತಿಗೆ ಒಳಗೊಳ್ಳಲು ಬಯಸಲಾಯಿತು. ಅದರಂತೆ ನಾಡಿನ ಗಣ್ಯ ವಿದ್ವಾಂಸರು ಈ ಬೃಹತ್ ಯೋಜನೆಯಲ್ಲಿ ಪಾಲ್ಗೊಂಡರೆಂಬುದು ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿ.

ಸಮಗ್ರ ಕನ್ನಡ ಜೈನ ಸಾಹಿತ್ಯ ಸಂಪುಟದ ಯೋಜನೆಯ ಉನ್ನತ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ. ಜವರೇಗೌಡ, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಡಾ. ಹಂಪ. ನಾಗರಾಜಯ್ಯ, ಡಾ. ಕಮಲಾ ಹಂಪನಾ, ಡಾ. ಚಂದ್ರಶೇಖರ ಕಂಬಾರ, ಡಾ. ಎಂ.ಎಂ. ಕಲಬುರ್ಗಿ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಎಂ.ಜಿ. ಬಿರಾದಾರ ಮತ್ತು ಕನ್ನಡ ಸಂಸ್ಕೃತಿ ನಿರ್ದೇಶಾಲಯದ ನಿರ್ದೇಶಕರು, ಕರ್ನಾಟಕ ಸರ್ಕಾರದ ಕಂದಾಯ ಮತ್ತು ಮುಜರಾಯಿ ಇಲಾಖೆಯ ಕಾರ್ಯದರ್ಶಿಗಳು ತಮ್ಮ ಸೂಚನೆ ಸಲಹೆಗಳಿಂದ ಈ ಸಂಪುಟಗಳ ಸ್ವರೂಪ ಮತ್ತು ಅನುಷ್ಠಾನಗಳ ಎಲ್ಲಾ ಹಂತಗಳಲ್ಲಿಯೂ ಮಾರ್ಗದರ್ಶನ ಕೊಟ್ಟಿದ್ದಾರೆ. ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಸಮಿತಿಯ ಸಂಚಾಲಕರಾಗಿ ಇಡೀ ಯೋಜನೆಯ ಅನುಷ್ಠಾನದ ಕೆಲಸವನ್ನು ಹೆಜ್ಜೆ ಹೆಜ್ಜೆಗೂ ಸಮರ್ಥವಾಗಿ ನಿರ್ವಹಿಸಿದ್ದಾರೆ. ಕುಲಸಚಿವರಾದ ಪ್ರೊ. ಕರೀಗೌಡ ಬೀಚನಹಳ್ಳಿ ಅವರು ಯೋಜನೆಯ ಆಡಳಿತಾತ್ಮಕ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಡೆಸಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ಜೈನ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಂ. ಉಷಾ ಅವರು ಈ ಯೋಜನೆಯನ್ನು ರೂಪಿಸುವಲ್ಲಿ ವಿಶೇಷವಾಗಿ ಸಹಕರಿಸಿದ್ದಾರೆ.

ವಿಶ್ವವಿದ್ಯಾಲಯವು ಈ ಯೋಜನೆಯನ್ನು ಕೈಗೆತ್ತಿಕೊಂಡಾಗ ಪ್ರಕಟಣ ಸ್ವರೂಪವನ್ನು ಸ್ಥೂಲವಾಗಿ ಹೀಗೆ ಗುರುತಿಸಿಕೊಳ್ಳಲಾಯಿತು. ಇದು ಡೆಮ್ಮಿ ೧/೮ ಆಕಾರದ ಸುಮಾರು ಇಪ್ಪತ್ತು ಸಂಪುಟಗಳಿಂದ ಕೂಡಿರಬೇಕು. ಪ್ರತಿ ಸಂಪುಟವೂ ಅಂದಾಜು ೬೦೦

ಪುಟಗಳಾಗಿರಬೇಕು. ಸಂಪುಟದ ಸಂಪಾದಕರು ಆಯಾ ಸಂಪುಟಕ್ಕೆ ಸೂಕ್ತವಾದ ಕವಿ ಕಾವ್ಯ ಪರಿಚಯ, ಚಾರಿತ್ರಿಕ ಹಾಗೂ ಸಾಹಿತ್ಯಿಕ ಮಹತ್ವ ಇತ್ಯಾದಿ ವಿವರಗಳನ್ನು ಒಳಗೊಂಡ ಪ್ರಸ್ತಾವನೆ ಬರೆಯಬೇಕೆಂದು ನಿರ್ಣಯಿಸಲಾಯಿತು. ಸಂಪುಟಗಳು ಜನಪ್ರಿಯ ಆವೃತ್ತಿ ಆಗಿರುವುದರಿಂದ ಪಠ್ಯಗಳಲ್ಲಿ ಪಾಠಾಂತರಗಳನ್ನು ನೀಡಬೇಕಾಗಿಲ್ಲ. ಪ್ರತಿಯೊಬ್ಬ ಕವಿಯ ಸಮಗ್ರ ಕಾವ್ಯವನ್ನು ಒಂದು ಸಂಪುಟದಲ್ಲಿ ತರುವುದೆಂದು ಸಮಿತಿ ತೀರ್ಮಾನಿಸಿತು. ವಸ್ತು ವಿಷಯಕ್ಕೆ ಅನುಗುಣವಾಗಿ ಬೇರೆ ಬೇರೆ ಎರಡೆರಡು ಕಾವ್ಯಗಳನ್ನು ಒಂದೇ ಸಂಪುಟದಲ್ಲಿ ಅಳವಡಿಸುವುದು ಸೂಕ್ತವೆಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಈಗಾಗಲೇ ಸಂಪಾದನೆಗೊಂಡು, ಪ್ರಕಟವಾಗಿರುವ ಕಾವ್ಯಗಳನ್ನು ಮೊದಲ ಹಂತದಲ್ಲಿ ತೆಗೆದುಕೊಳ್ಳುವುದೆಂದೂ ಅಪೂರ್ವ ಕೃತಿಗಳನ್ನು ಈ ಮಾಲೆಯಲ್ಲಿ ಸೇರಿಸಿಕೊಳ್ಳುವುದೆಂದೂ ನಿಶ್ಚಯಿಸಲಾಯಿತು. ಪಂಪ, ಪೊನ್ನ, ರನ್ನ, ಜನ್ನ, ನಾಗವರ್ಮ, ನಯಸೇನ, ಸಾಳ್ವ ಮುಂತಾದವರ ಕಾವ್ಯಗಳು ಈಗಾಗಲೇ ಮುದ್ರಣಗೊಂಡಿವೆ. ಆದರೂ ಪಾಠಕ್ಲೇಶ ಅರ್ಥಕ್ಲೇಶಗಳು ಹೇಗೋ ಉಳಿದುಬಿಟ್ಟಿವೆ. ಆದುದರಿಂದ ಎಲ್ಲ ಮುದ್ರಿತ ಪಾಠಗಳನ್ನು ಗಮನಿಸಿ ಈ ಎಲ್ಲ ಕ್ಲೇಶಗಳನ್ನು ನಿವಾರಿಸಿ ಸರ್ವಪ್ರತಿಪಾಠಗಳನ್ನು ಇಟ್ಟುಕೊಳ್ಳುವುದು ಅಗತ್ಯವೆಂದು ಸಮಿತಿ ಭಾವಿಸಿತು. ಗ್ರಂಥದ ಕೊನೆಗೆ ಶಬ್ದಾರ್ಥಕೋಶ, ಪಾರಿಭಾಷಿಕಕೋಶ, ಸಹಾಯಕ ಸಾಹಿತ್ಯ ನೀಡುವುದು ಅಗತ್ಯವೆಂದು ಸಂಪಾದಕರಿಗೆ ಬಿನ್ನವಿಸಿಕೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಇಪ್ಪತ್ತು ಸಂಪುಟಗಳು ನಿಮ್ಮ ಎದುರಿಗಿವೆ. ಶ್ರಮಸಾಧ್ಯವಾದ ಇಂಥ ಕಾವ್ಯಗಳನ್ನು ಸಂಪಾದಿಸಿಕೊಟ್ಟ ಕನ್ನಡದ ಹಿರಿಯ ವಿದ್ವಾಂಸರಾದ ಎಲ್ಲ ಸಂಪಾದಕರಿಗೆ ಕೃತಜ್ಞತೆ ಹೇಳುವುದು ಮಾತ್ರ ಈಗ ನಮಗೆ ಸಾಧ್ಯವಾಗಿದೆ.

ಪ್ರಾಚೀನ ಕನ್ನಡ ಜೈನ ಸಾಹಿತ್ಯ ಪರಂಪರೆಯಲ್ಲಿ ಶಾಂತಿನಾಥನ '**ಸುಕುಮಾರ ಚರಿತಂ**' ಚಂಪೂಕಾವ್ಯವು ಅನೇಕ ದೃಷ್ಟಿಗಳಿಂದ ಅನನ್ಯವಾದ ವಿಶಿಷ್ಟವಾದ ಕೃತಿಯಾಗಿದೆ. ಹತ್ತನೆಯ ಶತಮಾನದ್ದೆಂದು ಹೇಳಲಾಗುವ ಶಿವಕೋಟ್ಯಾಚಾರ್ಯನ **ವೊಡ್ಡಾರಾಧನೆ**, ಜೈನ ಕಥೆಗಳ ಗದ್ಯ ರೂಪದ ಸಂಗ್ರಹ. ಅದೇ ಶತಮಾನದ ಆದಿಕವಿ ಪಂಪನ **ಆದಿಪುರಾಣ** ಮೊದಲನೆಯ ತೀರ್ಥಂಕರನಾದ ಆದಿನಾಥನ ಜೀವನ ಚರಿತೆಯ ಪುರಾಣ. ಪಂಪನ ಇನ್ನೊಂದು ಕಾವ್ಯವಾದ **ವಿಕ್ರಮಾರ್ಜುನ ವಿಜಯಂ** ಪುರಾಣ ಮತ್ತು ಇತಿಹಾಸಗಳನ್ನು ಸಮೀಕರಣ ಮಾಡಿದ ಲೌಕಿಕ ಚಂಪೂ ಕಾವ್ಯ. ವೊಡ್ಡಾರಾಧನೆಯ ಜೈನಕತೆಗಳು ಲೌಕಿಕದ ಮಾದರಿಯಲ್ಲಿ ಇದ್ದುಕೊಂಡೇ ಜೈನಧರ್ಮದ ಸಾರವನ್ನು ಪ್ರಸಾರ ಮಾಡುವ ಲೌಕಿಕ ಉದ್ದೇಶವನ್ನು ಹೊಂದಿವೆ. ಆದಿಪುರಾಣದಂಥ ಪುರಾಣಕಾವ್ಯ ಜೈನತೀರ್ಥಂಕರರ ಜೀವನ ಚರಿತೆಯಾಗಿ ನಿರ್ದಿಷ್ಟ ಆಗಮಿಕ ಚೌಕಟ್ಟಿಗೆ ಒಳಗಾಗಿದೆ. ಈ ಕೃತಿಗಳ ಬೆನ್ನಲ್ಲೆ ಬಂದ ಹನ್ನೊಂದನೆಯ ಶತಮಾನದ ಸುಕುಮಾರಚರಿತೆ, ವೊಡ್ಡಾರಾಧನೆ ಹಾಗೂ ಆದಿಪುರಾಣದ ಆಶಯಗಳನ್ನು ಒಟ್ಟುಗೂಡಿಸಿಯೂ ಅವುಗಳಿಗಿಂತ ಪ್ರತ್ಯೇಕವಾಗಿ ಉಳಿಯುತ್ತದೆ.

ವೊಡ್ಡಾರಾಧನೆಯಲ್ಲಿನ ಸುಕುಮಾರನ ಗದ್ಯಕತೆ ಶಾಂತಿನಾಥನಲ್ಲಿ ಚಂಪೂ ಕೃತಿಯಾಗಿ ವಿಸ್ತರಣೆಗೊಂಡಿದೆ. ಪಂಪನ ಆದಿಪುರಾಣದ ವಿನ್ಯಾಸವಿದ್ದರೂ **ಸುಕುಮಾರ ಚರಿತೆ** ತೀರ್ಥಂಕರರ ಪುರಾಣಚರಿತೆ ಅಲ್ಲ. ಲೌಕಿಕ ಕಥೆಯೊಂದಕ್ಕೆ ಚಂಪೂಕಾವ್ಯದ ಆಕಾರವನ್ನು ತೊಡಿಸಿ ಜೈನಧರ್ಮದ ಸಾರ ಮತ್ತು ಪ್ರಸಾರ ಮಾಡುವ ಜಾಣತನ ಶಾಂತಿನಾಥನಲ್ಲಿ ಕಾಣಿಸುತ್ತದೆ. ಕೆಲವು ಶತಮಾನಗಳ ಬಳಿಕ ಬರುವ ನಯಸೇನನ ಧರ್ಮಾಮೃತದ ಜತೆಗೆ ಹೋಲಿಸುವಾಗ ಶಾಂತಿನಾಥನ ವಿಶಿಷ್ಟತೆ ಗಮನ ಸೆಳೆಯುತ್ತದೆ. ನಿಜವಾದ ಅರ್ಥದಲ್ಲಿ

ಮಾರ್ಗದ ದೇಹದೊಳಗೆ ದೇಸಿಯ ಆತ್ಮವನ್ನು ಮೊದಲು ತಂದುಕೊಟ್ಟವನು ಶಾಂತಿನಾಥ. ಇದಕ್ಕೆ ಪೂರಕವಾಗಿ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಬಹುದು. ಶಾಂತಿನಾಥನ **ಸುಕುಮಾರಚರಿತ** ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಹೆಚ್ಚು ಬಾರಿ ಉಲ್ಲೇಖಗೊಂಡ ಕೃತಿ. ಈ ಚಂಪೂ ಕಾವ್ಯದಲ್ಲಿ ಕನ್ನಡದ ದೇಸಿಮಟ್ಟುಗಳಾದ ತ್ರಿಪದಿ, ರಗಳೆ, ಪಿರಿಯಕ್ಕರ ಮತ್ತು ಅಂಶಷಟ್ಪದಿ ಕೂಡ ಪ್ರಯೋಗವಾಗಿದೆ. ರಗಳೆಯ ಮೂಲರೂಪವಾದ ಪದ್ಧಳಿ ಅಥವಾ ಪಜ್ಝಟಿಕಾ ನಮಗೆ ಮೊತ್ತಮೊದಲು ದೊರಕುವುದು ಶಾಂತಿನಾಥನ **ಸುಕುಮಾರಚರಿತೆ**ಯಲ್ಲಿಯೆ. ಪಂಪನ ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಒಂದು ವಿಶಿಷ್ಟ ಛಂದೋರೂಪ ಅಂಶಷಟ್ಪದಿ ಕನ್ನಡ ಕಾವ್ಯಗಳಲ್ಲಿ ಮೊದಲು ಕಾಣಿಸಿಕೊಳ್ಳುವುದು ಸುಕುಮಾರಚರಿತದಲ್ಲಿ. ಷಟ್ಪದ ಅಥವಾ ಮೂಲಷಟ್ಪದಿ ಎನ್ನುವ ಈ ಛಂದೋಬಂಧವನ್ನು ಈಗಾಗಲೇ ಛಂದಸ್ಸಿನ ವಿದ್ವಾಂಸರು ಸಾಕಷ್ಟು ಚರ್ಚಿಸಿದ್ದಾರೆ. ಹೀಗೆ ವಸ್ತು ಭಾಷೆ ಛಂದಸ್ಸುಗಳಲ್ಲಿ ಕನ್ನಡತನವನ್ನು ಇಟ್ಟುಕೊಂಡು ಚಂಪೂವಿನ ಕಾವ್ಯ ಮಾದರಿಯಲ್ಲಿ ಸುಕುಮಾರಚರಿತವನ್ನು ಶಾಂತಿನಾಥ ರಚಿಸಿರುವುದು ಕನ್ನಡ ಜೈನಸಾಹಿತ್ಯದ ಇತಿಹಾಸದಲ್ಲಿ ಒಂದು ಕುತೂಹಲಕಾರಿಯಾದ ಸಂಗತಿ. ಜೈನ ಕವಿಗಳು ಉದ್ದಕ್ಕೂ ದೇಸಿಯ ಕಡೆ ತುಡಿಯುತ್ತಿದ್ದರು ಎನ್ನುವುದಕ್ಕೆ ಈ ಶಾಂತಿನಾಥನ **ಸುಕುಮಾರ ಚರಿತೆ** ಉತ್ತಮ ಸಾಕ್ಷಿಯಾಗಿದೆ. ಜನ್ನ ನಯಸೇನ ಬ್ರಹ್ಮಶಿವ ವೃತ್ತವಿಲಾಸರಂಥ ಜೈನ ಕಥನಕವಿಗಳಿಗೆ ಸುಕುಮಾರನ ಕೃತಿ ಪ್ರೇರಣೆಯನ್ನು ಕೊಟ್ಟಿದೆ.

ಶಾಂತಿನಾಥ ಬಳಸುವ ಅನೇಕ ದೇಸಿಪದಗಳು ಕನ್ನಡ ಮತ್ತು ಸಂಸ್ಕೃತಗಳ ಪರ-ವಿರೋಧಗಳ ಚರ್ಚೆಗೆ ಪರೋಕ್ಷವಾಗಿ ಪ್ರೇರಣೆಯನ್ನು ಕೊಟ್ಟಿತೆಂದು ಕಾಣಿಸುತ್ತದೆ. ನಯಸೇನ ಸಂಸ್ಕೃತವನ್ನು ವಿರೋಧಿಸಿ ಕನ್ನಡ ಪರ ಮಾತಾಡುವುದಕ್ಕೂ ಆಂಡಯ್ಯನು ತನ್ನ **ಕಬ್ಬಿಗರ ಕಾವ**ದಲ್ಲಿ ಅಚ್ಚಗನ್ನಡವನ್ನು ತನ್ನ ಕಾವ್ಯದ ಭಾಷೆಯನ್ನಾಗಿ ರೂಪಿಸುವುದಕ್ಕೂ ಪರೋಕ್ಷವಾಗಿ **ಸುಕುಮಾರಚರಿತ**ದ ಪ್ರೇರಣೆ ಇದ್ದಿರಬಹುದು. ಕಥನದ ಶೈಲಿಯ ದೃಷ್ಟಿಯಿಂದಲೂ ಘಟನೆ ಮತ್ತು ವರ್ಣನೆಗಳನ್ನು ವಿಸ್ತರಿಸುವ ಕಲೆಗಾರಿಕೆಯನ್ನು ಇದು ಸಮರ್ಥವಾಗಿ ಬಳಸಿಕೊಂಡಿದೆ. ಭಿನ್ನ ಛಂದೋಮಾದರಿಗಳನ್ನು ಮಿಶ್ರಣ ಮಾಡುವುದರ ಮೂಲಕ ಕಥನ ಕಾವ್ಯವೊಂದಕ್ಕೆ ನಾಟಕೀಯ ಗುಣ ಪ್ರಾಪ್ತವಾಗಿದೆ. ಜನಪದ ಕಥೆಯನ್ನು ಕಾವ್ಯವಾಗಿ ರಂಗಭೂಮಿಗೆ ಪ್ರದರ್ಶನಗೊಳ್ಳುವ ಮಾದರಿಯನ್ನು ಸುಕುಮಾರಚರಿತದಲ್ಲಿ ಕಾಣಬಹುದು.

ಕನ್ನಡ ಜೈನಕವಿಗಳ ಸಾಹಿತ್ಯನಿರ್ಮಾಣದ ವಸ್ತು, ಆಕೃತಿ, ಉದ್ದೇಶಗಳು ತುಂಬಾ ಕುತೂಹಲಕಾರಿಯಾದವು. ಒಂದೇ ಕಾಲದಲ್ಲಿ ಜೀವಿಸಿದ್ದ ಜೈನಕವಿಗಳು ಕೂಡ ಭಿನ್ನಭಿನ್ನ ರೀತಿಯಲ್ಲಿ ತಮ್ಮ ಕೃತಿನಿರ್ಮಾಣ ಮಾಡಿದ್ದಾರೆ. ಕನ್ನಡದಲ್ಲಿ ಕಾವ್ಯ ಪರಂಪರೆಯನ್ನು ಆರಂಭಿಸಿದ ಜೈನಕವಿಗಳಿಗೆ ವಸ್ತು, ಭಾಷೆ, ಕಾವ್ಯರೂಪ, ಮೌಲ್ಯಗಳ ಪ್ರತಿಪಾದನೆ ಈ ದೃಷ್ಟಿಗಳಿಂದ ಕನ್ನಡದ್ದೇ ಆದ ಅನನ್ಯತೆಗಳನ್ನು ಸ್ಥಾಪಿಸಬೇಕು ಎನ್ನುವ ಆಸಕ್ತಿ ಮತ್ತು ಛಲ ಇತ್ತು. ಕನ್ನಡದ ಮೊದಲನೆಯ ಉಪಲಬ್ಧ ಲಕ್ಷಣಗ್ರಂಥ ಕವಿರಾಜಮಾರ್ಗದಲ್ಲಿಯೆ ಸಂಸ್ಕೃತ ಮೀಮಾಂಸಕಾರರಾದ ಭಾಮಹ-ದಂಡಿಯನ್ನು ಮೀರಿ ಕನ್ನಡದ ಕಾವ್ಯ ಲಕ್ಷಣಗಳನ್ನು ಹೇಳಬೇಕು ಎನ್ನುವ ಉತ್ಸಾಹ ಕಾಣಿಸುತ್ತದೆ. ಇದಕ್ಕಾಗಿಯೇ ಕನ್ನಡನಾಡು ಎನ್ನುವುದನ್ನು ಈ ಕವಿಗಳು ಭಾವನಾತ್ಮಕವಾಗಿ ಕಲ್ಪಿಸಿಕೊಂಡರು. ಭಾವನಾತ್ಮಕವಾಗಿ ಯಾಕೆಂದರೆ : ಅದು ಇಂದಿನಂತೆ ಭೌಗೋಳಿಕವಾದ, ರಾಜಕೀಯವಾದ ಗಡಿರೇಖೆಗಳಿಂದ ಅಂತರ್ಗತವಾದ ಕನ್ನಡನಾಡು ಆಗಿರಲಿಲ್ಲ. ತಮ್ಮ ಪರಿಸರದ ನೆಲ-ಜಲ-ಜನಗಳನ್ನು ಕಂಡು ಆಮೂಲಕ 'ಜೀವಕೇಂದ್ರಿತ' ಕನ್ನಡನಾಡನ್ನು

ಕಲ್ಪಿಸಿಕೊಂಡ ಕವಿಗಳಲ್ಲಿ ಪಂಪ ಮೊದಲನೆಯವನು. ಅವನ ಬನವಾಸಿಯ ವರ್ಣನೆ, ಮಾವು-ಮಲ್ಲಿಗೆಗಳ ಪ್ರೀತಿ ಇವು ಕಾವ್ಯದ ಆಕಸ್ಮಿಕ ಅವಯವಗಳಾದರೂ ಕನ್ನಡನಾಡಿನ ನೆನಪನ್ನು ಕಟ್ಟುವ ಕೆಲಸವನ್ನು ಮಾಡಿವೆ. ಹೀಗೆ ಕನ್ನಡನಾಡು ಕನ್ನಡದ್ದೇ ಆದ ದೇಸಿಯ ಭಾಷೆ ಮತ್ತು ಕನ್ನಡದ್ದೇ ಆದ ಒಂದು ಬದುಕು - ಇದರ ಕನಸನ್ನು ಕಂಡು ಕಾವ್ಯ ಬರೆದ ಏಕೈಕ ಕವಿ ಆಂಡಯ್ಯ. 'ಕನ್ನಡಮನಿಪ್ಪಾ ನಾಡು ಚೆಲ್ವಾಯ್ತು' ಎಂದು ಕನ್ನಡನಾಡನ್ನು ವರ್ಣಿಸುವ ಪದ್ಯದ ಜತೆಗೆ ಕಾವ್ಯದ ಮಾಧ್ಯಮವಾಗಿ ಅಚ್ಚಗನ್ನಡದ ಭಾಷೆಯೊಂದನ್ನು ನಿರ್ಮಿಸಿದ ಭಾಷಾಕೋವಿದನಾಗಿ ಆಂಡಯ್ಯ ಕನ್ನಡಸಾಹಿತ್ಯ ಮತ್ತು ಕನ್ನಡನಾಡಿನ ಇತಿಹಾಸದಲ್ಲಿ ಏಕಾಂಗಿಯಾಗಿ ಆದರೆ ಅನನ್ಯನಾಗಿ ಉಳಿಯುತ್ತಾನೆ. ಪಂಪನು ಮಾರ್ಗ-ದೇಸಿಗಳ ಸಮನ್ವಯದ ಬಗೆಗೆ ಮಾತನಾಡಿದರೆ, ನಯಸೇನನು ಕನ್ನಡದ ಪರವಾಗಿ ಸಕ್ಕದದಲಿನ್ನೇನು ಎಂದು ಪ್ರಶ್ನಿಸಿದರೆ, ಅದೇ ಕಾಲಕ್ಕೆ ಬಂದ ಆಂಡಯ್ಯನು ವಿಚಿತ್ರ ಎನಿಸಿದರೂ ಅಚ್ಚಗನ್ನಡದ ಹುಚ್ಚು ಸಾಹಸಕ್ಕೆ ಕೈಹಾಕಿ ಯಶಸ್ವಿಯಾಗಿದ್ದಾನೆ. ನಾಗವರ್ಮ ಮತ್ತು ಕೇಶಿರಾಜರ ವ್ಯಾಕರಣ ಗ್ರಂಥಗಳಲ್ಲಿರುವ ತದ್ಭವ ಪ್ರಕರಣಗಳನ್ನು ಹೋಲಿಸಿದಾಗ, ಯಾವುದೇ ಅನ್ಯದೇಶೀಯವನ್ನು ಕನ್ನಡದಲ್ಲಿ ತದ್ಭವೀಕರಿಸಲು ಸಾಧ್ಯ ಎಂಬ ಆತ್ಮವಿಶ್ವಾಸವನ್ನು ತಂದುಕೊಡುತ್ತಾನೆ. ಅಂಥ ಆತ್ಮವಿಶ್ವಾಸದಿಂದಲೇ ಕಾಮಕ್ಕೆ ಸಂಬಂಧಿಸಿದ ಪ್ರೇಮಕಥೆಗೆ ಅಚ್ಚಗನ್ನಡ ಭಾಷೆಯ ಆವರಣವನ್ನು ನಿರ್ಮಿಸುತ್ತಾನೆ. ಕಾಮ ಮತ್ತು ಜಿನರ ಸಮೀಕರಣ ತತ್ತ್ವವನ್ನು ಗಮನದಲ್ಲಿಟ್ಟುಕೊಂಡು ಪರೋಕ್ಷವಾಗಿ ಶಿವನನ್ನೆ ಕಾಮನೆಂದು ಸಾರುವ ಮೂಲಕ ಆ ಕಾಲದ ಶೈವಧರ್ಮಕ್ಕಿಂತ ಜಿನಧರ್ಮ ಶ್ರೇಷ್ಠ ಎನ್ನುವುದನ್ನು ಸಾರುವ ಒಳಉದ್ದೇಶ ಆಂಡಯ್ಯನಿಗಿದೆ. ಆದರೆ ಆಂಡಯ್ಯನು ಬ್ರಹ್ಮಶಿವ-ವೃತ್ತ ವಿಲಾಸರಂತೆ ಪರಧರ್ಮಗಳ ನಿಂದೆಗೆ ಕೈಹಾಕುವುದಿಲ್ಲ. ಪರಮ ಜಿನನಿಷ್ಠೆ ಮತ್ತು ಕನ್ನಡ ನಿಷ್ಠೆಗಳ ಒಬ್ಬ ಅವಧೂತನ ಮಾದರಿ ಆಂಡಯ್ಯ ಕವಿಯಲ್ಲಿ ಅಂತರ್ಗತವಾಗಿದೆ. ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಆಂಡಯ್ಯನ ಪ್ರಯೋಗಗಳು ಅಧ್ಯಯನಕ್ಕೆ ಯೋಗ್ಯವಾಗಿವೆ. ಆಧುನಿಕ ತಂತ್ರಜ್ಞಾನದ ಕ್ಷೇತ್ರದಲ್ಲಿ ಸಂಸ್ಕೃತ ಪದಗಳೇ ಕನ್ನಡ ಪದಗಳೆನ್ನುವ ಭ್ರಮೆಯನ್ನು ಉಂಟುಮಾಡಿ ಸಂವಹನದ ಕ್ಲಿಷ್ಟತೆಗೆ ಕಾರಣವಾಗಿರುವಾಗ ಆಂಡಯ್ಯನ ತದ್ಭವ ಪದಗಳ ಕಡೆಗೆ ಮತ್ತು ಪದ ನಿರ್ಮಾಣದ ಮಾದರಿಗಳ ಕಡೆಗೆ ಮತ್ತೊಮ್ಮೆ ಗಮನ ಹರಿಸುವ ಅಗತ್ಯವಿದೆ.

ಡಾ. ಪಿ.ವಿ. ನಾರಾಯಣ ಅವರು ಕನ್ನಡ ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಕನ್ನಡಪರ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ, ಕನ್ನಡದ ಕೆಲಸವನ್ನು ನಿರಂತರ ಮಾಡುತ್ತ ಬಂದಿದ್ದಾರೆ. ಅವರ ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ, ವಚನ ಸಮಗ್ರ, ಚಂಪೂ ಕವಿಗಳು - ಈ ಕೃತಿಗಳು ಕನ್ನಡ ಸಂಶೋಧನೆಯ ಮತ್ತು ವಿಮರ್ಶೆಯ ಕ್ಷೇತ್ರಕ್ಕೆ ಮಹತ್ವದ ಕೃತಿಗಳಾಗಿವೆ. ಡಾ. ಪಿ.ವಿ. ನಾರಾಯಣ ಅವರು ಅಚ್ಚಗನ್ನಡ ಕವಿ ಆಂಡಯ್ಯನ **ಕಬ್ಬಿಗರ ಕಾವ**ವನ್ನು, ದೇಸಿ ಪರಂಪರೆಯ ಕವಿ ಶಾಂತಿನಾಥನ **ಸುಕುಮಾರ ಚರಿತೆ**ಯನ್ನು ತುಂಬಾ ಪರಿಶ್ರಮ ಮತ್ತು ಆಸಕ್ತಿಯಿಂದ ಸಮರ್ಪಕವಾಗಿ ಸಂಪಾದಿಸಿಕೊಟ್ಟಿದ್ದಾರೆ. ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರಲು ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರನ್ನು ವಿಶೇಷವಾಗಿ ನೆನೆಯುತ್ತೇನೆ.

ಬಿ.ಎ. ವಿವೇಕ ರೈ

ಕುಲಪತಿ

ಸಂಪಾದಕರ ನುಡಿ

'ಸುಕುಮಾರಚರಿತಂ' ಕಾವ್ಯದ ಹಸ್ತ ಪತ್ರಿಗಳು ಅಪರೂಪವಾಗಿವೆ. ಕವಿಚರಿತಕಾರರು ತಮ್ಮ ಕೃತಿಯ ಮೊದಲ ಸಂಪುಟದಲ್ಲಿ ಈ ಕಾವ್ಯದ ಹಸ್ತ ಪ್ರತಿಯ ಬಗ್ಗೆ ಬರೆಯುತ್ತ "ಪ್ರತಿಯ ಆದ್ಯಂತಗಳಲ್ಲಿ ಓಲೆಗಳು ಹೋಗಿರುವುದಲ್ಲದೆ, ಮಧ್ಯದಲ್ಲಿಯೂ ಹಲವು ಕಡೆ ಓಲೆಗಳು ಶಿಥಿಲವಾಗಿಯೂ ಲುಪ್ತವಾಗಿಯೂ ಇರುವುದರಿಂದ ಗ್ರಂಥದ ಆನುಪೂರ್ವಿಯನ್ನು ತಿಳಿಸಲು ಸಾಧ್ಯವಿಲ್ಲವಾಗಿದೆ" ಎಂದಿದ್ದಾರೆ. ಕಾವ್ಯವನ್ನು ಮೊದಲ ಬಾರಿಗೆ ಪ್ರೊ. ಡಿ.ಎಲ್. ನರಸಿಂಹಾಚಾರ್ ಹಾಗೂ ಪ್ರೊ. ತ.ಸು. ಶಾಮರಾಯರು ಸಂಪಾದಿಸಿ ೧೯೩೪ರಲ್ಲಿ ಶಿವಮೊಗ್ಗ ಕರ್ನಾಟಕ ಸಂಘದ ಮೂಲಕ ಪ್ರಕಟಿಸಿದರು. ಆಗಲೂ ಸಂಪಾದಕರು ನೋಡಲು ಸಾಧ್ಯವಾಗಿ ಪಠ್ಯನಿರ್ಧಾರಕ್ಕೆ ಬಳಸಿಕೊಂಡದ್ದು ಎರಡು ಪ್ರತಿಗಳನ್ನಷ್ಟೆ. ಎರಡರಲ್ಲಿ ಒಂದು ಓಲೆಯ ಪ್ರತಿಯಾದರೆ, ಇನ್ನೊಂದು ಕೈಬರಹದ ಕಾಗದದ ಪ್ರತಿ. ಇವುಗಳಲ್ಲಿಯೂ ಗ್ರಂಥಪಾತಗಳು ತುಂಬ ಇವೆಯೆಂದೂ, ಹನ್ನೆರಡನೆಯ ಆಶ್ವಾಸದ ಕೊನೆಯ ಭಾಗ ಲುಪ್ತವಾಗಿದೆಯೆಂದೂ ಸಂಪಾದಕರು ತಿಳಿಸಿದ್ದಾರೆ. ಆನಂತರವೂ ಇದರ ಬೇರೆ ಪ್ರತಿಗಳು ದೊರಕಿಲ್ಲ. ಹೀಗಾಗಿ ಪ್ರಸ್ತುತ ಸಂಪುಟದ ಈ ಕಾವ್ಯವನ್ನು ಕರ್ನಾಟಕ ಸಂಘ ಪ್ರಕಟಿಸಿದ ಪ್ರತಿಯ ಆಧಾರದ ಮೇಲೆಯೇ ಸಿದ್ಧಪಡಿಸಲಾಗಿದೆ; ಆದರೆ ಕೆಲವೆಡೆ ಭಿನ್ನಪಾಠಗಳನ್ನು ಸ್ವೀಕರಿಸಲಾಗಿದೆ.

ಇನ್ನು, 'ಕಬ್ಬಿಗರ ಕಾವಂ'ಪಠ್ಯದ ಕುರಿತು. ಪ್ರೊ. ದೇ. ಜವರೇಗೌಡರು ಸಂಪಾದಿಸಿ ಮೈಸೂರಿನ ಶಾರದಾ ಮಂದಿರದವರು ಪ್ರಕಟಿಸಿರುವುದು ತುಂಬ ಸಮರ್ಪಕವಾಗಿರುವ ಸ್ವರೂಪದ್ದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಗದ್ಯಾನುವಾದ ಜೊತೆಗೆ ಈ ಕೃತಿಯನ್ನು ಪ್ರಕಟಿಸಿದೆ. ಇವೆರಡನ್ನೂ ಬಳಸಿಕೊಂಡು ಸಿದ್ಧಗೊಳಿಸಿರುವ ರೂಪವನ್ನು ಈ ಸಂಪುಟದಲ್ಲಿ ಸೇರಿಸಿದೆ. ಇಲ್ಲಿಯೂ ಕೆಲವೆಡೆ ಭಿನ್ನ ಲಭ್ಯಪಾಠಗಳನ್ನು ಸ್ವೀಕರಿಸಲಾಗಿದೆ. ಈ ಪೂರ್ವಸೂರಿಗಳಿಗೆ ನನ್ನ ಕೃತಜ್ಞತಾ ಪೂರ್ವಕ ನಮಸ್ಕಾರಗಳು.

ಗೊಮ್ಮಟೇಶ್ವರನ ಮಹಾಮಜ್ಜನದ ಸಂದರ್ಭಕ್ಕೆಂದು ಕನ್ನಡ ವಿಶ್ವವಿದ್ಯಾಲಯ, ಹಂಪಿ ಆಯೋಜಿಸಿರುವ ಸಮಗ್ರ ಜೈನ ಸಾಹಿತ್ಯ ಮಾಲೆಯ ಭಾಗವಾಗಿ ಈ ಸಂಪುಟ ಆ ಸಂಸ್ಥೆಯಿಂದ ಪ್ರಕಟಗೊಳ್ಳುತ್ತಿರುವುದು ಸಂತೋಷದ ವಿಷಯ. ಈ ಸಂಪುಟವನ್ನು ಸಿದ್ಧಗೊಳಿಸಲು ಹೇಳಿ ಅದನ್ನು ಅಚ್ಚುಕಟ್ಟಾಗಿ ಪ್ರಕಟಿಸುತ್ತಿರುವ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಅವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಉನ್ನತ ಸಲಹಾ ಸಮಿತಿಯ ವಿದ್ವಾಂಸರೆಲ್ಲರಿಗೂ ನನ್ನ ಪ್ರಾಂಜಲ ನಮಸ್ಕಾರಗಳು ಸಲ್ಲುತ್ತವೆ. ಉನ್ನತ

ಸಲಹಾ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಹಿರಿಯ ಕವಿಗಳಾದ ಪ್ರೊ. ಜಿ.ಎಸ್. ಶಿವರುದ್ರಪ್ಪ ಅವರ ಪ್ರೋತ್ಸಾಹವನ್ನು ನಾನು ನೆನೆಯುತ್ತೇನೆ.

ಈ ಸಂಪುಟವು ಬೇಗ ನನ್ನಿಂದ ಸಂಪಾದನೆಗೊಳ್ಳುವಲ್ಲಿ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಇವರ ಪಾತ್ರವೂ ಇದೆ. ಅವರು ನನ್ನೊಡನೆ ಸಹಕರಿಸಿದ್ದಾರೆ; ನನ್ನಲ್ಲಿ ಉತ್ಸಾಹ ತುಂಬಿದ್ದಾರೆ. ಕನ್ನಡಿಗರ ಅಭಿಮಾನಕ್ಕೆ ಅರ್ಹವಾದ ಕನ್ನಡ ವಿಶ್ವವಿದ್ಯಾಲಯವು ಈ ಗ್ರಂಥವನ್ನು ಪ್ರಕಟಿಸುತ್ತಿದೆ. ಇದೊಂದು ಸಾಹಿತ್ಯ ಯಜ್ಞ. ಇಲ್ಲಿ ಹೆಸರಿಸಲಾಗದ ಎಲ್ಲ ಪೂರ್ವಸೂರಿಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಬೆಂಗಳೂರು **ಪಿ.ವಿ. ನಾರಾಯಣ**

೨೫-೦೧-೨೦೦೬

ಪ್ರಸ್ತಾವನೆ

ಇದೊಂದು ಸಂಯುಕ್ತ ಸಂಪುಟ; ಇದರಲ್ಲಿ ಎರಡು ಕಾವ್ಯಗಳು ಪಾಠಾಂತರಗಳಿಲ್ಲದೆ ಪ್ರಸ್ತಾವನೆ-ಅರ್ಥಕೋಶಗಳೊಡನ ಸೇರ್ಪಡೆಯಾಗಿವೆ : ಅವುಗಳೆಂದರೆ ಶಾಂತಿನಾಥನ 'ಸುಕುಮಾರಚರಿತಂ' ಮತ್ತು ಆಂಡಯ್ಯನ 'ಕಬ್ಬಿಗರ ಕಾವಂ'. ಇವು ಕಾಲಾನುಗುಣವಾಗಿ ಈ ಕ್ರಮದಲ್ಲಿವೆ. ಎರಡೂ ಚಂಪೂ ಕೃತಿಗಳಾದರೂ, ಅವುಗಳ ಸ್ವರೂಪದಲ್ಲಿ ತುಂಬ ಭಿನ್ನತೆಯಿದೆ. ಮೊದಲನೆಯುದು ಸುಮಾರು ಒಂಬೈನೂರು ಪದ್ಯಗಳನ್ನು ಒಳಗೊಂಡಿದ್ದರೆ, ಎರಡನೆಯದರಲ್ಲಿರುವುದು ಕೇವಲ ಇನ್ನೂರ ಎಪ್ಪತ್ತೆರಡು ಪದ್ಯಗಳು. ಇವೆರಡೂ ಜೈನಕವಿಗಳ ರಚನೆಗಳು; ಆದರೆ 'ಸುಕುಮಾರಚರಿತಂ'ನಲ್ಲಿರುವ ಜೈನಮತಸಂಬಂಧೀ ವಿವರಗಳು 'ಕಬ್ಬಿಗರ ಕಾವಂ'ನಲ್ಲಿಲ್ಲ. ಹಾಗಾಗಿ ಇವೆರಡನ್ನೂ ಒಟ್ಟಿಗೆ ಸೇರಿಸಿರುವುದರಲ್ಲಿ ಬೇರಾವ ಉದ್ದೇಶವೂ ಇರದೆ, ಎರಡೂ ಪುಟ್ಟದಾಗಿವೆ ಎಂಬುದೇ ಕಾರಣವಾಗಿದೆ.

ಸುಕುಮಾರ ಚರಿತಂ

ಕವಿಕಾವ್ಯ ವಿಚಾರ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹನ್ನೊಂದನೆಯ ಶತಮಾನವನ್ನು ಸೃಜನಶೀಲ ಕೃತಿಸಂಖ್ಯೆಯ ದೃಷ್ಟಿಯಿಂದ 'ಬರಡುಗಾಲ'ವೆಂದು ಕೆಲವು ಮಂದಿ ಸಾಹಿತ್ಯ ಚರಿತ್ರಕಾರರು ಕರೆಯಲು ಇಷ್ಟಪಡುತ್ತಾರೆ. ಏಕೆಂದರೆ ಈ ಶತಮಾನದಲ್ಲಿ ಇಬ್ಬರೇ ಒಳ್ಳೆಯ ಕವಿಗಳು ಕೃತಿರಚನೆ ಮಾಡಿದ್ದು, ಒಬ್ಬ 'ಪಂಚತಂತ್ರ'ವನ್ನು ಬರೆದ ದುರ್ಗಸಿಂಹನಾದರೆ, ಮತ್ತೊಬ್ಬ 'ಸುಕುಮಾರಚರಿತಂ' ಎಂಬ ಕಾವ್ಯವನ್ನು ರಚಿಸಿದ ಶಾಂತಿನಾಥ. ಎರಡೂ ಚಂಪೂ ಕೃತಿಗಳಾದರೂ ರಾಜನೀತಿಗೆ ಸಂಬಂಧಿಸಿದ 'ಪಂಚತಂತ್ರ'ವು ಗದ್ಯ ಪ್ರಚುರತೆಯಿಂದ ಕೂಡಿ ವಸುಭಾಗಭಟ್ಟನ ಸಂಸ್ಕೃತ ಕೃತಿಯ ಅನುವಾದವಾಗಿದ್ದರೆ, 'ಸುಕುಮಾರಚರಿತಂ' ಅನ್ಯಮೂಲಗಳಿಂದ ಕಥಾವಸ್ತುವನ್ನು ಆಯ್ದುಕೊಂಡಿದ್ದರೂ ನಿರ್ವಹಣೆಯ ದೃಷ್ಟಿಯಿಂದ ಒಂದು ಸ್ವತಂತ್ರ ಜೈನ ಸಾಹಿತ್ಯ ಕೃತಿಯಾಗಿದೆ. ದುರ್ಗಸಿಂಹ ಬ್ರಾಹ್ಮಣ; ಶಾಂತಿನಾಥ ಜೈನ. ಜೈನಕವಿಗಳು ಇದುವರೆಗೆ ಧಾರ್ಮಿಕ ವಸ್ತುವನ್ನು ತೀರ್ಥಂಕರ ಚರಿತ್ರೆಗಳ ಮೂಲಕ ಪ್ರಚುರ ಪಡಿಸಲು ಚಂಪೂ ಪ್ರಕಾರವನ್ನು ಬಳಸಿದ್ದರು. ಪಂಪ ಪೊನ್ನ ರನ್ನರನ್ನು ಮುಂದಿನವರು ಕವಿ 'ರತ್ನತ್ರಯ'ರೆಂದು ಕರೆದದ್ದು ಈ ಕಾರಣಕ್ಕಾಗಿಯೇ. ಶಾಂತಿನಾಥ ಈ ದೃಷ್ಟಿಯಿಂದ ಹೊಸ ಮಾರ್ಗವನ್ನು ತುಳಿದ; ಸುಕುಮಾರಸ್ವಾಮಿಯ ಕತೆಯನ್ನು ವಿಸ್ತಾರವಾದ ಕಾವ್ಯವಾಗಿಸಲು ಪ್ರಯತ್ನಿಸಿ ತಕ್ಕ ಮಟ್ಟಿಗೆ ಸಫಲನಾದ. ಹಾಗಾಗಿ ಈ ಕೃತಿಗೆ ಚಂಪೂ ಕಾವ್ಯ ಪರಂಪರೆಯಲ್ಲಿ ಒಂದು ವಿಶಿಷ್ಟವಾದ ಮತ್ತು ತಕ್ಕಮಟ್ಟಿಗಿನ ಗೌರವಸ್ಥಾನ ಪ್ರಾಪ್ತವಾಗಿದೆ.

'ಸುಕುಮಾರಚರಿತಂ' ಕಾವ್ಯವನ್ನು ಬರೆದ ಶಾಂತಿನಾಥನು ತನ್ನ ಬಗ್ಗೆ ತಕ್ಕಮಟ್ಟಿನ ವಿವರಗಳನ್ನು ಎರಡು ಕಡೆ ನೀಡಿದ್ದಾನೆ; ತನ್ನ ಏಕೈಕ ಕಾವ್ಯದ ಒಡಲಲ್ಲಿ, ಮತ್ತು ಎರಡು, ಈ ಕಾವ್ಯ ರಚಿತವಾದನಂತರ ಶಾಂತಿನಾಥನೇ ಪದ್ಯ ರಚಿಸಿರುವ ಒಂದು ಶಾಸನದಲ್ಲಿ. ಅದನ್ನು ಶಿಕಾರಿಪುರದ ೧೩೬ನೇ ಶಾಸನ ಎಂದು ಗುರುತಿಸಲಾಗುತ್ತದೆ. ಅದರ ಪ್ರಕಾರ ಶಾಂತಿನಾಥನ ತಂದೆ ಗೋವಿಂದರಾಜ, ಗುರುಗಳು ವರ್ಧಮಾನಯತಿಗಳು; ಕರ್ಣಪಾರ್ಯ ಎಂಬ ಅಣ್ಣ ಹಾಗೂ ರೇವಣ ಎಂಬ ತಮ್ಮ.

ಜನಕಂ ಶ್ರೀಜೈನಭಾಸ್ವತ್ ಕ್ರಮಯುಗಲ ಸರೋಜಾತಭೃಂಗಂ, ವಿಶಿಷ್ಟೇ
ಷ್ಟವಿಧಾನಂ ಸತ್ಯ ರತ್ನಾಕರನೆನಿಸಿದ ಗೋವಿಂದರಾಜಂ ಮುನೀಂದ್ರಾ
ಭಿನುತ ಶ್ರೀವರ್ಧಮಾನಬ್ರತಪತಿಗಳುಪಾಧ್ಯಾಯರಾರ್ಹಂತ್ಯಧರ್ಮಂ
ತನಗಾರ್ಮಂ ಭೂಷೆ ರತ್ನತ್ರಯಮೆನೆ ನೆಗಟ್ದಿಂ ಧಾತ್ರಿಯೊಳ್ ಶಾಂತಿನಾಥಂ

ಈ ಪದ್ಯದಲ್ಲಿ ಕವಿಯ ಧಾರ್ಮಿಕಶ್ರದ್ಧೆ ಮತ್ತು ಅಭಿಮಾನ ಎದ್ದು ಕಾಣುತ್ತದೆ. ಅವನು ಕೆಲವಂಶಗಳಲ್ಲಿ ಪಂಪನನ್ನು ಹೋಲುತ್ತಾನೆ; ಮತ್ತೆ ಕೆಲವದರಲ್ಲಿ ಅವನನ್ನು ಅನುಸರಿಸುತ್ತಾನೆ. ಪಂಪನ ಆತ್ಮಪ್ರತ್ಯಯ ಇವನಲ್ಲೂ ಇದೆ. "ಸಹಜಕವಿ ಚತುರಕವಿ ನಿಸ್ಸಹಾಯಕವಿ ಸುಕರಕವಿ ಮಿಥ್ಯಾತ್ವಪ್ರಹರಕವಿ ಸುಭಗಕವಿ ಸುತ ಮಹಾಕವೀಂದ್ರಂ ಸರಸ್ವತೀಮುಖಮುಕುರಂ" ಎಂದು ತನ್ನ ಕಾವ್ಯಶಕ್ತಿಯನ್ನು ಹೊಗಳಿಕೊಳ್ಳುತ್ತಾನೆ.

ಪಂಪನೊಡನೆ ಈತನ ಕಾವ್ಯಶಕ್ತಿಯನ್ನು ಹೋಲಿಸಲಾಗದಿದ್ದರೂ, ಒಂದೆರಡು ವಿಷಯಗಳಲ್ಲಿ ಅವನ ಜೊತೆ ಈತನನ್ನೂ ಕುಳ್ಳಿರಿಸಬಹುದು. ಇವನು ಕ್ರಿ.ಶ. ೧೦೬೫ ರಿಂದ ೧೦೭೯ರವರೆಗೆ ಬನವಸೆ ಪನ್ನಿರ್ಛಾಸಿರ ನಾಡಿನ ಮಹಾಮಂಡಲೇಶ್ವರನಾಗಿದ್ದ ಲಕ್ಷ್ಮಣರಾಜನ ಆಶ್ರಯದಲ್ಲಿದ್ದವನು. ಈ ರಾಜನು ಚಾಲುಕ್ಯ ಚಕ್ರವರ್ತಿಗಳಾಗಿದ್ದ ತ್ರೈಲೋಕ್ಯಮಲ್ಲ ಸೋಮೇಶ್ವರ (ಕ್ರಿ.ಶ. ೧೦೪೨-೧೦೬೮) ಮತ್ತು ಭುವನೈಕಮಲ್ಲ ಸೋಮೇಶ್ವರ (ಕ್ರಿ.ಶ. ೧೦೬೮-೧೦೭೬) - ಈ ಇಬ್ಬರ ವಿಶ್ವಾಸಕ್ಕೆ ಪಾತ್ರನಾಗಿ ಪ್ರಬಲನಾಗಿದ್ದವನು. ಪ್ರಾಯಶಃ ಶಾಂತಿನಾಥನು 'ಸುಕುಮಾರಚರಿತಂ' ಕಾವ್ಯವನ್ನು ರಚಿಸಿದ ನಂತರ ಲಕ್ಷ್ಮಣರಾಜನ ಆಶ್ರಯಕ್ಕೆ ಬಂದಿರಬೇಕು. ಏಕೆಂದರೆ ಈ ಕಾವ್ಯದಲ್ಲಿ ಆತನ ಪ್ರಸ್ತಾಪವಿಲ್ಲ; ಆದರೆ ಶಾಸನದಲ್ಲಿ ಅವನನ್ನು ಕುರಿತ ಧಾರಾಳವಾದ ಸ್ತುತಿ ಪದ್ಯಗಳಿವೆ. ಈ ಶಾಸನದಲ್ಲಿ ಅನೇಕ ಪದ್ಯಗಳು ಮೂಲತಃ 'ಸುಕುಮಾರಚರಿತಂ' ಕಾವ್ಯದವಾಗಿದ್ದು ಕೆಲವೆಡೆ ಅಲ್ಪಸ್ವಲ್ಪ ಬದಲಾವಣೆಗಳಿಂದ ಕೂಡಿವೆ. ಈ ಶಾಸನದ ಕಾಲ ಕ್ರಿ.ಶ. ೧೦೬೮ (ಶಕ ೯೯೦); ಲಕ್ಷ್ಮಣರಾಜ ಮಹಾಮಂಡಲಾಧಿಪತಿಯಾದದ್ದು ಕ್ರಿ.ಶ. ೧೦೬೫ರಲ್ಲಿ. ಆದ್ದರಿಂದ 'ಸುಕುಮಾರಚರಿತಂ' ಕಾವ್ಯ ಅದಕ್ಕಿಂತ ಮುಂಚೆಯೇ ರಚಿತವಾಗಿದ್ದಿರಬೇಕು. ಆದರೆ ಎಷ್ಟು ಹಿಂದೆ? ನಗರದ ಎರಡು ಶಾಸನಗಳನ್ನು ಮಲ್ಲಿನಾಥ ಎಂಬೊಬ್ಬನು ಕ್ರಿ.ಶ. ೧೦೬೨ರಲ್ಲಿ ರಚಿಸಿದ್ದು, ನಗರದ ೫೮ನೇ ಶಾಸನದಲ್ಲಿನ ಪದ್ಯವೊಂದು 'ಸುಕುಮಾರಚರಿತಂ' ಕಾವ್ಯದ ಮೊದಲ ಆಶ್ವಾಸದ ೨೬ನೆಯ ಪದ್ಯದ ನೇರ ಪ್ರಭಾವಕ್ಕೆ ಒಳಗಾಗಿದೆಯೆಂದು ಹೇಳುವ ಡಿಎಲ್ಎನ್, ಆದ್ದರಿಂದ ಕಾವ್ಯದ ರಚನಾ ಕಾಲವು ಕ್ರಿ.ಶ. ೧೦೬೦ ಎಂದು ತೀರ್ಮಾನಿಸುತ್ತಾರೆ.

ಶಾಂತಿನಾಥನು ಲಕ್ಷ್ಮಣರಾಜನ ಆಪ್ತನಾಗಿದ್ದುದು ಮಾತ್ರವಲ್ಲದೆ, ಅವನ ಭಂಡಾರಾಧಿಕಾರಿಯೂ ರಾಜಕಾರ್ಯಧುರಂಧರನೂ ಆಗಿದ್ದನು. ಅಂದರೆ ಶಾಂತಿನಾಥನೂ ಪಂಪನಂತೆಯೇ ರಾಜವಲಯದಲ್ಲಿ ಪ್ರಭಾವಶಾಲಿಯೂ ಶ್ರೀಮಂತನೂ ಆದ ಕವಿಯಾಗಿದ್ದ. ಅತವ ಕಾವ್ಯ ಪ್ರೌಢಿಮೆಯು ರಾಜಾಶ್ರಯಕ್ಕೆ ಬರುವ ವೇಳೆಗಾಗಲೇ ಪ್ರಸಿದ್ಧವಾಗಿತ್ತು. ಹಾಗಾಗಿ, ಕವಿ ಕೇಳಿದಾಕ್ಷಣ ಲಕ್ಷ್ಮಣರಾಜನು ಬಳ್ಳಿಗಾವೆಯಲ್ಲಿ ಒಂದು "ಜಿನನಾಥಾವಾಸಮಂ ವಾಸವಕೃತಮೆನೆ ಮುನ್ನಂ ಶಿಲಾಕರ್ಮ್ಮದಿಂ ಶಾಸನಮಪ್ಪಂತಾಗಿರಲ್ಮಾಡಿಸಿ"ದನಂತೆ. ಈ ಬಸದಿಯ ಬಳಿ ಸ್ಥಾಪಿತಗೊಂಡ ಶಾಸನವೇ ಈಗ ಪ್ರಸಿದ್ಧವಾದ ಶಿಕಾರಿಪುರದ ೧೩೬ನೇ ಶಾಸನವೆಂದು ವಿದ್ವಾಂಸರ ಅಭಿಪ್ರಾಯ. ಇಂಥ ಶಾಂತಿನಾಥನು ಅದೇ ಪಂಪನಂತೆಯೇ "ಈ ಸುಕುಮಾರಚರಿತದೊಳ್ ನೋಜ್ಪೆ ಕಾವ್ಯಧರ್ಮಮುಮನಮಳ ಜಿನಧರ್ಮಮುಮಂ" ಎಂದು ತನ್ನ ರಚನೆಗೆ ಇಬ್ಬಗೆಯ ಉದ್ದೇಶವನ್ನು ಇರಿಸಿಕೊಂಡಿದ್ದಾನೆ. ಕವಿ ರಾಜಾಶ್ರಯಕ್ಕೆ ಬರುವ ಮುಂಚೆಯೇ ಕಾವ್ಯವನ್ನು ರಚಿಸಿದ್ದರಿಂದ ಪಂಪನಂತೆ ಅನವಶ್ಯಕವಾಗಿ ಆಶ್ರಯದಾತನ ವೈಭವೀಕರಣಕ್ಕೆ ಕೈಹಾಕಬೇಕಾದ ಅವಶ್ಯಕತೆಯೊದಗಲಿಲ್ಲ. ಅದು ಅವನ ಅದೃಷ್ಟ.

ಈ ಕಾವ್ಯದ ಪ್ರಾರಂಭದಲ್ಲಿ ಕವಿಯು ಅನೇಕ ಸಂಸ್ಕೃತ ಕನ್ನಡ ಕವಿಗಳ ಸ್ಮರಣೆ ಮಾಡಿದ್ದಾನೆ. ಅಕಳಂಕದೇವ, ವಾದಿರಾಜ, ಧನಂಜಯ - ಈ ಮೂವರು ಸಂಸ್ಕೃತ ಕವಿಗಳಾದರೆ, ಕನ್ನಡದ ಪಂಪ, ಪೊನ್ನ, ರನ್ನ - ಇವರನ್ನು ಹೊಗಳಿದ್ದಾನೆ. ಅಲ್ಲದೆ ಅವನು ಹೊಗಳುವ ಮತ್ತೊಬ್ಬ ಸಂಸ್ಕೃತ ಕವಿ ಒಬ್ಬ 'ಕವಿಗಳಾದಿತ್ಯ' ಎಂದು ಪ್ರಖ್ಯಾತನಾದವನು. ಪ್ರಾಯಶಃ ಅವನು ಸಂಸ್ಕೃತ ಗದ್ಯದಲ್ಲಿ ಶಲಾಕಾಪುರುಷರ ಕತೆಯನ್ನು ಹೇಳಿದ ಕವಿ ಪರಮೇಷ್ಠಿಯೆಂದು ಡಿಎಲ್‌ಎನ್ ಅವರ ಊಹೆ. ಕವಿಪ್ರಶಂಸೆಯ ನಂತರ ಶಾಂತಿನಾಥನು ಒಂದು ಗುರುಸಮೂಹವನ್ನೇ ಸ್ತುತಿಸಿದ್ದಾನೆ; ಅವರಲ್ಲಿ ಕವಿಯ ಸ್ವಂತ ಗುರುವಾದ ವರ್ಧಮಾನನ ಹೆಸರೂ ಸೇರಿದೆ. ಈ ಗುರುಗಣದವರೆಲ್ಲ ಕೊಂಡಕುಂದಾನ್ವಯ ಮೂಲಸಂಗ ದೇಶಿಗಣ ಪುಸ್ತಕಗಚ್ಛಕ್ಕೆ ಸೇರಿದವರು.

'ಸುಮಾರಚರಿತಂ' ಕಾವ್ಯದ ಮೂಲವಾವುದು ಎಂದು ಬಗ್ಗೆಯೂ ಜಿಜ್ಞಾಸೆ ನಡೆದಿದೆ. ಸಾಮಾನ್ಯವಾಗಿ ಪರಂಪರಾಗತವಾದ ಜೈನ ಕತೆಗಳನ್ನು ಪ್ರಾಕೃತದಲ್ಲಿ ಗಾಹೆಯ ರೂಪವಾಗಿ ಸಂಕ್ಷಿಪ್ತಗೊಳಿಸುವುದೂ, ಮುಂದೆ ಅವುಗಳನ್ನು ಆರಾಧನಾ ಗ್ರಂಥಗಳಲ್ಲಿ ವಿಸ್ತರಿಸಿ ರೇಖಾಚಿತ್ರದಂತೆ ಬರೆದಿರುವುದೂ, ಈ ಮುಂದೆ ಕೆಲವು ಕವಿಗಳು ಇವುಗಳನ್ನು ಮತ್ತಷ್ಟು ವಿಸ್ತಾರಗೊಳಿಸಿ, ವರ್ಣನೆ-ವಿವರಣೆಗಳಿಂದ ಪುಷ್ಟಗೊಳಿಸಿ ಕಾವ್ಯಗಳಾಗಿ ಬರೆದಿರುವುದೂ ಕಾಣುತ್ತದೆ. ಇವುಗಳಲ್ಲಿ ಸಾಕಷ್ಟು ಪ್ರಸಿದ್ಧವಾದ ಸುಕುಮಾರನ ಕತೆಯೂ ಈ ಪ್ರಕ್ರಿಯೆಗೆ ಒಳಗಾದದ್ದೇ. ಹಾಗಾಗಿ ಸುಕುಮಾರನ ಬಗೆಗಿನ ಕತೆಗಳು ಕನ್ನಡ ಸಂಸ್ಕೃತ ಪ್ರಾಕೃತ - ಈ ಮೂರೂ ಭಾಷೆಗಳಲ್ಲಿ ದೊರೆಯುತ್ತವೆ. ಶಾಂತಿನಾಥನಿಗಿಂತ ಹಿಂದೆ ಇದ್ದ ಸುಕುಮಾರ ಕತೆಗಳು ಪ್ರಾಕೃತದಲ್ಲಿವೆ, ಸಂಸ್ಕೃತದವು ಅವನಿಗಿಂತ ಈಚಿನವು. ಆದರೆ ಕ್ರಿ.ಶ. ೯೩೨ರ ಹೊತ್ತಿಗೆ ರಚಿತವಾದ ಹರಿಷೇಣನ ಸಂಸ್ಕೃತ 'ಬೃಹತ್ಕಥಾಕೋಶ' ಎಂಬ ಗ್ರಂಥದಲ್ಲಿ ಇನ್ನೂರ ಅರವತ್ತು ಶ್ಲೋಕಗಳಲ್ಲಿ ಸುಕುಮಾರನ ಕತೆ ಬಂದಿದೆ. ಅದನ್ನು ಕವಿ ನೋಡಿದ್ದಿರಬಹುದು. ಆದರೆ ಕನ್ನಡ 'ವಡ್ಡಾರಾಧನೆ'ಯಲ್ಲಿನ ವಿವರಗಳೊಂದಿಗೆ ಈ ಕಾವ್ಯದ ವಿವರಗಳು ಹೆಚ್ಚು

ತಾಳೆಯಾಗುವುದರಿಂದ ಅದನ್ನು ತನ್ನ ಸ್ಫೂರ್ತಿಯ ಸೆಲೆಯಾಗಿ ಬಳಸಿಕೊಂಡಿರುವ ಸಾಧ್ಯತೆಗಳು ಹೆಚ್ಚು. 'ವಡ್ಡಾರಾಧನೆ'ಯ ಕಾಲ ಖಚಿತವಾಗಿ ತಿಳಿಯದು; ಹೀಗಾಗಿ ಕೆಲವರು ಅದನ್ನು ಶಾಂತಿನಾಥನಿಗಿಂತ ಈಚಿನದಿರಬಹುದು, 'ಸುಕುಮಾರಚರಿತಂ' ಕಾವ್ಯದ ಪ್ರಭಾವವೇ 'ವಡ್ಡಾರಾಧನೆ'ಯ ಮೇಲಾಗಿರಬಹುದು ಎಂದೂ ಅನುಮಾನಿಸುತ್ತಾರೆ. ಇವೆರಡನ್ನು ಡಿಎಲ್‌ಎನ್ ವಿವರವಾಗಿ ಹೋಲಿಸಿದ್ದಾರೆ. ಎರಡರಲ್ಲಿಯೂ ಅಭಿಪ್ರಾಯ ಹಾಗೂ ಶಬ್ದವಿನ್ಯಾಸದಲ್ಲಿ ಸಾಕಷ್ಟು ಸಾಮ್ಯವಿದೆ; 'ವಡ್ಡಾರಾಧನೆ'ಯಲ್ಲಿ ಸಂಗ್ರಹವಾಗಿ ಸೂಚಿತವಾದ ಅನೇಕ ಅಂಶಗಳು 'ಸುಕುಮಾರಚರಿತಂ'ನಲ್ಲಿ ವಿಸ್ತರಣೆಗೊಂಡು ಕತೆ ವಿಸ್ತೃತರೂಪವನ್ನು ತಳೆಯುತ್ತದೆ; 'ವಡ್ಡಾರಾಧನೆ'ಯ ಪದಪ್ರಯೋಗ ರೀತಿ, ಶೈಲಿ, ಭಾಷಾಸ್ವರೂಪ ಇವೆಲ್ಲ ಶಾಂತಿನಾಥನಿಗಿಂತ ಹಿಂದಿನವು; ಶಾಂತಿನಾಥ ಅನುಕರಣಶೀಲನಾದ್ದರಿಂದ (ಪಂಪ ಪೊನ್ನ ರನ್ನರ ಕಾವ್ಯಗಳಿಗೆ ಅವನು ಸಾಕಷ್ಟು ಋಣಿಯಾಗಿದ್ದಾನೆ) 'ವಡ್ಡಾರಾಧನೆ'ಯನ್ನು ಅನುಸರಿಸಿರುವ ಸಾಧ್ಯತೆಯೇ ಹೆಚ್ಚು; ಅಲ್ಲದೆ ಕತೆ ಸಾಮಾನ್ಯವಾಗಿ ಸಂಕ್ಷಿಪ್ತತೆಯಿಂದ ವಿಸ್ತಾರದ ಕಡೆ ಸಾಗುವುದೇ ಹೊರತು ಅದರ ವಿರುದ್ಧವಾಗಿಯಲ್ಲ ಎಂದು ಹೇಳಿ, ಈ ಎಲ್ಲ ಕಾರಣಗಳಿಂದ ಶಾಂತಿನಾಥನು 'ವಡ್ಡಾರಾಧನೆ'ಯನ್ನೇ ಅನುಸರಿಸಿದ್ದಾನೆ ಎಂದು ತೀರ್ಮಾನಿಸುತ್ತಾರೆ, ಡಿಎಲ್‌ಎನ್. ಆದರೆ ಅವರು ಕೇವಲ ಅನುಕರಣಶೀಲನಲ್ಲ, ಸ್ವಂತಿಕೆಯೂ ಇದೆ. ಹೀಗಾಗಿ ವಿಸ್ತರಣಕಾರ್ಯದಲ್ಲೂ, ಕೆಲವಂಶಗಳನ್ನು ಬಿಡುವುದರಲ್ಲೂ, ಕೆಲವು ಹೊಸ ಅಂಶಗಳನ್ನು ಸೇರಿಸುವುದರಲ್ಲೂ ಅವನು ಸ್ವೋಪಜ್ಞತೆಯನ್ನು ತೋರಿಸುತ್ತಾನೆ. ಇದರಿಂದ ಅವನು 'ವಡ್ಡಾರಾಧನೆ'ಯ ಸುಮಾರು ಮೂವತ್ತು ಪುಟಗಳ ದೀರ್ಘತೆಯನ್ನು ಪಡೆದ ಕತೆಯನ್ನು ಒಂಭೈನೂರು ಪದ್ಯಗಳಿಗೂ ಮಿಕ್ಕಿದ ಕಾವ್ಯವಾಗಿ ಮಾರ್ಪಡಿಸಿ ತಕ್ಕಮಟ್ಟಿಗಿನ ಯಶಸ್ಸು ಪಡೆದಿದ್ದಾನೆ.

ಕತೆಯ ಹಂದರ

ಜಂಬೂದ್ವೀಪದ ಮೇರುಪರ್ವತದ ದಕ್ಷಿಣಕ್ಕಿರುವುದು ಮಹಿಮಾಸ್ಪದವಾದ ವತ್ಸದೇಶ; ಅದರ ರಾಜಧಾನಿ ಕೌಶಂಬಿಪುರ. ಅದರ ದೊರೆ ಅತಿಬಲ ಎಂಬ ಅರಸು; ರಾಣಿ ಮನೋಹರಿ. ರಾಜನಿಗೆ ಮಂತ್ರಿ ಮತ್ತು ಪುರೋಹಿತನಾಗಿದ್ದವನು ಸೋಮಶರ್ಮನೆಂಬ ಬ್ರಾಹ್ಮಣ, ಅವನ ಹೆಂಡತಿ ಕಾಶ್ಯಪಿ. ಈ ಬ್ರಾಹ್ಮಣ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಅಗ್ನಿಭೂತಿ ಮತ್ತು ವಾಯುಭೂತಿ ಎಂಬುವವರು. ಇವರಿಗೆ ವಿದ್ಯೆಯಲ್ಲಿ ಆಸಕ್ತಿಯಿರಲಿಲ್ಲ; ಆದರೆ ವಿಷಯಾಸಕ್ತಿ ಧಾರಾಳವಾಗಿತ್ತು. ಮನೆಯಲ್ಲಿ ಬೇಕಾದಷ್ಟು ಇದ್ದುದರಿಂದ ಈ ಮಕ್ಕಳು ಉಂಡುತಿಂದು ಉಂಡಾಡಿಗಳಾಗಿ ಬೆಳೆದರು; ತಂದೆ ಗಳಿಸಿದ್ದನ್ನು ಉಡಾಯಿಸುವುದೇ ತಮ್ಮ ಪರಮಕರ್ತವ್ಯವೆಂಬಂತೆ ವೆಚ್ಚ ಮಾಡಿದರು. ಇದರಿಂದಾಗಿ ತಂದೆಯ ಮನಸ್ಸು ಕೊರಗಿನಿಂದ ತುಂಬಿತು; ಕೆಲಕಾಲದ ಬಳಿಕ ಇದೇ ನೋವಿನಿಂದ ಅವನು ಕಾಲವಶನಾದ.

ಸೋಮಶರ್ಮನ ಸಾವಿನ ಸುದ್ದಿ ತಿಳಿದು ದುಃಖಿತನಾದ ಅತಿಬಲನು ಅಗ್ನಿಭೂತಿ-ವಾಯುಭೂತಿಗಳನ್ನು ಅರಮನೆಗೆ ಬರಮಾಡಿಕೊಂಡು ಸಾಂತ್ವನದ ಮಾತುಗಳನ್ನಾಡಿದ. ಅಲ್ಲದೆ ಅವರಿಗೆ ಗೌರವ ಸಲ್ಲಿಸಿ, ಅವರ ತಂದೆಯ ಪದವಿಯನ್ನು ದಯಪಾಲಿಸಿ ಕಳಿಸಿಕೊಟ್ಟ. ಆದರೇನು, ನಾಯಿ ಬಾಲಕ್ಕೆ ದಬ್ಬೆ ಕಟ್ಟಿದಂತಾಯಿತು. ಒಮ್ಮೆ

ರಾಜಾಸ್ಥಾನಕ್ಕೆ ವಿಜಯಜಿಷ್ಣುವೆಂಬ ವಾದಿ ಎಲ್ಲಿಂದಲೋ ಬಂದು ತನ್ನ ಚಾತುರ್ಯವನ್ನು ಪ್ರದರ್ಶಿಸಿದ. ತನ್ನಲ್ಲಿಯೂ ದೊಡ್ಡ ವಿದ್ವಾಂಸರಿರುವುದನ್ನು ಅವನಿಗೆ ತೋರಿಸಲು ರಾಜನು, ಸೋಮಶರ್ಮನ ಮಕ್ಕಳು ತಂದೆಯಂತೆಯೇ ಪಂಡಿತರೆಂದು ಭಾವಿಸಿದ್ದರಿಂದ, ಅವರನ್ನು ಬರಹೇಳಿದ. ಆದರೆ ಅವರು ಶುಂಠರಾದದ್ದರಿಂದ ಕಕ್ಕಾಬಿಕ್ಕಿಗಳಾಗಿ, ಕಣ್ಣೀರು ಸುರಿಸುತ್ತ ನಿಂತರೇ ವಿನಾ ವಾದಮಾಡುವ ಯಾವುದೇ ಸಾಮರ್ಥ್ಯವನ್ನು ಪ್ರದರ್ಶಿಸಲಿಲ್ಲ. ಇದರಿಂದ ಅತಿಬಲನಿಗೆ ನಿರಾಸೆಯೂ ಆಯಿತು; ಅವಮಾನವಾದಂತೆಯೂ ಆಯಿತು. ಅವರಿಗಿತ್ತಿದ್ದ ಸ್ಥಾನಮಾನಗಳನ್ನು ರಾಜ ಕಿತ್ತುಕೊಂಡು ಇಬ್ಬರನ್ನೂ ಮನೆಗಟ್ಟಿದ.

ಮನೆಗೆ ಮರಳಿದ ಅಣ್ಣತಮ್ಮಂದಿರು ತಾಯಿಗೆ ಮುಖ ತೋರಿಸಲಾರದೆ ಅಳುತ್ತ ನಿಂತರು. ಬಹಳ ವಿಚಾರಿಸಿದ ಮೇಲೆ ನಡೆದದ್ದನ್ನೆಲ್ಲ ವಿವರಿಸಿದರು; ವಿದ್ಯೆ ಕಲಿಯದೆ ಅವಮಾನಗೊಂಡ ಬಗೆಯನ್ನು ಅರುಹಿದರು; ಈಗ ತಾವು ವಿದ್ಯೆ ಕಲಿಯಲು ತಯಾರಿರುವುದನ್ನು ಸೂಚಿಸಿದರು. ತಾಯಿ ಮೊದಮೊದಲು ಮೂದಲಿಕೆಯ ಮಾತುಗಳನ್ನಾಡಿದರೂ ಕೊನೆಗೆ, ಅವರು ಪಶ್ಚಾತ್ತಾಪ ಪಡುವುದನ್ನು ಕಂಡು ಅವರನ್ನು ಸಮಾಧಾನಮಾಡಿ, ಇನ್ನೂ ಕಾಲ ಮಿಂಚಿಲ್ಲವೆಂದು ತಿಳಿಸಿ, ಮಗಧ ದೇಶದ ಸುಬಲ ಮಹಾರಾಜನ ಮಂತ್ರಿಯಾದ ಸೂರ್ಯಮಿತ್ರನು ತನ್ನ ನಾದಿನಿಯ ಗಂಡ, ಆದ್ದರಿಂದ ಅವರ ಸೋದರಮಾವ, ತುಂಬ ದೊಡ್ಡ ಪಂಡಿತ, ಅವನಲ್ಲಿ ಅವರು ವಿದ್ಯೆ ಕಲಿಯುವ ಏರ್ಪಾಟು ಮಾಡುವೆನೆಂದು ಆಶ್ವಾಸನೆಯಿತ್ತಳು. ಅಂತೆಯೇ ಸೂರ್ಯಮಿತ್ರನಿಗೆ ಒಂದು ಓಲೆಯನ್ನು ಬರೆಯಿಸಿ ಅವರ ಕೈಗಿತ್ತು ಸೂಕ್ತ ಹಿತವಚನಗಳೊಡನೆ ಅವರನ್ನು ಮಗಧಕ್ಕೆ ಕಳಿಸಿಕೊಟ್ಟಳು.

ಅಗ್ನಿಭೂತಿ-ವಾಯುಭೂತಿಯರು ಉತ್ಸಾಹದಿಂದ ಪ್ರಯಾಣ ಬೆಳೆಸಿ ಕೆಲವು ದಿನಗಳ ಬಳಿಕ ಮಗಧದ ರಾಜಧಾನಿ ರಾಜಗೃಹವನ್ನು ತಲುಪಿದರು; ಸೂರ್ಯಮಿತ್ರನನ್ನು ಕಂಡು ತಾಯಿ ಕೊಟ್ಟಿದ್ದ ಓಲೆಯನ್ನು ಅವನ ಕೈಗಿತ್ತರು. ಅದನ್ನು ಮನಸ್ಸಿನಲ್ಲಿಯೇ ಓದಿಕೊಂಡ ಆತನು, ವಿದ್ಯೆಗಾಗಿ ಬಂದ ಅವರನ್ನು ಸೋದರಳಿಯರೆಂದು ಒಪ್ಪಿಕೊಂಡರೆ ಅವರು ಸದರ ವಹಿಸಿ ಕಲಿಯಲಾರದೇ ಹೋಗಬಹುದೆಂದು ಹೆದರಿ, ತನಗೆ ಕಾಶ್ಯಪಿ ಯಾರು ಎಂಬುದೇ ತಿಳಿಯದು ಎಂದು ನಟಿಸಿ, ಆದರೂ ವಿದ್ಯೆಯ ಹಂಬಲದಿಂದ ಬಂದಿರುವುದರಿಂದ, ತಮ್ಮ ಆಹಾರದ ಏರ್ಪಾಟು ತಾವೇ ಮಾಡಿಕೊಂಡರೆ, ಅವರಿಗೆ ತಾನು ವಿದ್ಯೆ ಹೇಳಿಕೊಡುವುದಾಗಿ ಆಶ್ವಾಸನೆ ಕೊಟ್ಟು ತನ್ನ ಮನೆಯಲ್ಲಿಯೇ ಇರಿಸಿಕೊಂಡ. ಹೇಗಾದರೂ ವಿದ್ಯಾವಂತರಾದರೆ ಸಾಕೆಂದು ಒಪ್ಪಿದ ಅವರು ಭಿಕ್ಷೆ ಎತ್ತಿ ಹೊಟ್ಟೆ ಪಾಡು ನಿಭಾಯಿಸುವುದೆಂದು ನಿರ್ಣಯಿಸಿದರು. ಆದರೆ ಬೇಡಿ ತಂದ ಅನ್ನಕ್ಕೆ ಎಣ್ಣೆ-ಉಪ್ಪುಗಳನ್ನು ನೀಡಬಾರದೆಂದು ಸೂರ್ಯಮಿತ್ರ ಅಡಿಗೆಯವರಿಗೆ ಕಟ್ಟಪ್ಪಣೆ ಮಾಡಿದ.

ಸರಿ, ಅಣ್ಣ ತಮ್ಮಂದಿರ ವಿದ್ಯೆ ಆರಂಭಗೊಂಡಿತು. ಹುಡುಗರೂ ಬುದ್ಧಿವಂತರೇ, ಆದರೆ ಈವರೆಗೆ ಉಂಡಾಡಿಗಳಾಗಿದ್ದರು. ಈಗ ಶ್ರದ್ಧೆಯಿಂದ ಹಾಗೂ ಕಷ್ಟಪಟ್ಟು ಕಲಿಯಲು ತೊಡಗಿದ್ದರಿಂದ ಬೇಗ ಓದು ಕಲಿತರು; ಸೂರ್ಯಮಿತ್ರ ತುಂಬ ಕಕ್ಕುಲತೆಯನ್ನು ಮನಸ್ಸಿನಲ್ಲಿ ಹೊಂದಿದ್ದು ಅವರಿಗೆ ವಿದ್ಯೆಯನ್ನು ಧಾರೆ ಎರೆದ. ಕಾಲಕಾಲಕ್ಕೆ ಅವರಿಬ್ಬರೂ ವೇದವೇದಾಂತ, ತರ್ಕವ್ಯಾಕರಣ ಮುಂತಾದ ಆ ಕಾಲದ ಸಕಲಶಾಸ್ತ್ರಗಳಲ್ಲೂ ಪಾರಂಗತರಾದರು. ಆದರೆ

ವಿಚಿತ್ರ : ಒಂದೇ ತಂದೆತಾಯಿಗಳ ಮಕ್ಕಳಾಗಿದ್ದರೂ, ಒಂದೇ ವಾತಾವರಣದಲ್ಲಿಯೇ ಇಬ್ಬರೂ ವಿದ್ಯೆ ಕಲಿತಿದ್ದರೂ ಅವರಿಬ್ಬರ ಹುಟ್ಟುಗುಣಗಳ ವ್ಯತ್ಯಾಸದಿಂದಾಗಿ ಕಾಲಕ್ರಮೇಣ ಇಬ್ಬರೂ ಸ್ವಭಾವದಲ್ಲಿ ಭಿನ್ನರಾದರು; ಅಗ್ನಿಭೂತಿ ಸಾತ್ವಿಕನಾದರೆ, ವಾಯುಭೂತಿ ಗರ್ವಿಷ್ಠರಾದ. ಕಲಿಸಬಹುದಾದುದೆಲ್ಲವನ್ನೂ ಹೇಳಿಕೊಟ್ಟ ಮೇಲೆ ಸೂರ್ಯಮಿತ್ರ, ತಾನು ಅವರ ಸೋದರಮಾವನೇ ಎಂದು ಒಪ್ಪಿಕೊಂಡು, ಅದನ್ನು ನಿರಾಕರಿಸಿದ್ದ ತನ್ನ ಉದ್ದೇಶವನ್ನು ವಿವರಿಸಿ ಅವರನ್ನು ಸತ್ಕರಿಸಿದ; ಉಡಲು ತೊಡಲು ವಸ್ತ್ರಾಭರಣಗಳನ್ನಿತ್ತು ಔತಣ ಮಾಡಿಸಿ ಬೀಳ್ಕೊಟ್ಟ. ಅವರು ಊರಿಗೆ ವಾಪಸು ಹೊರಟರು. ಅಗ್ನಿಭೂತಿಗೆ ಸೂರ್ಯಮಿತ್ರನ ಬಗ್ಗೆ ಕೃತಜ್ಞತೆ ಬಲಗೊಂಡಿತು; ಆದರೆ ವಾಯುಭೂತಿಗೆ ತಮಗೆ ಯಾವ ಸೌಲಭ್ಯವನ್ನು ಕೊಡದ ಅವನ ಬಗ್ಗೆ ಮನಸ್ಸು ಕಹಿಯಾಯಿತು. ಅವನನ್ನು ಪಾಪಕರ್ಮಿ ಎಂದು ಜರೆದ; ಗುರುನಿಂದೆ ಮಾಡಿದ.

ಕೌಶಂಬಿಪುರಕ್ಕೆ ಅವರಿಬ್ಬರೂ ಮರಳಿದರು; ಮನೆಗೆ ಬಂದು ತಾಯಿಗೆ ನಮಸ್ಕರಿಸಿದರು. ತನ್ನ ಮಕ್ಕಳು ಈಗ ಸರಿದಾರಿಗೆ ಬಂದರಲ್ಲ ಎಂದು ಅವಳು ಸಂತಸಗೊಂಡಳು, ಸಕಲವಿದ್ಯಾಪಾರಂಗತರಾದ ಅವರ ಬಗ್ಗೆ ಅಭಿಮಾನ ತಾಳಿದಳು. ಮಾರನೆಯ ದಿನ ಅವರಿಬ್ಬರೂ ರಾಜನ ಬಳಿ ಬಂದು ತಮ್ಮ ಸಾಧನೆಗಳನ್ನು ತಿಳಿಸಿದರು. ಅವನಿಗೂ ಸಂತೋಷವಾಯಿತು. ಪಂಡಿತರಾದ ಇಬ್ಬರೂ ಈಗ ಎಲ್ಲ ಗೌರವಗಳಿಗೆ ಅರ್ಹರೆಂಬುದನ್ನು ಮನಗಂಡ ರಾಜನು ಅವರಿಗೆ ಹಿಂದಿನ ಪದವಿಗಳನ್ನಿತ್ತು ಸನ್ಮಾನಿಸಿದ. ಹೀಗೆ ಅವರ ಬದುಕು ಒಂದು ನಿಶ್ಚಿತ ಘಟ್ಟವನ್ನು ಮುಟ್ಟಿತು.

ಈ ಕಡೆ ರಾಜಗೃಹದಲ್ಲಿ ಒಂದು ದಿನ ಅನಿರೀಕ್ಷಿತ ಘಟನೆಯೊಂದು ನಡೆಯಿತು; ಸುಬಲ ಮಹಾರಾಜನು ಒಮ್ಮೆ ಸ್ನಾನಕ್ಕೆ ಹೋಗುವಾಗ ತನ್ನ ಬೆರಳಲ್ಲಿದ್ದ ರತ್ನಖಚಿತ ಉಂಗುರವೊಂದನ್ನು ತೆಗೆದು ಬಳಿಯಿದ್ದ ಸೂರ್ಯಮಿತ್ರನ ಕೈಗಿತ್ತ. ಅವನು ಅದನ್ನು ತನ್ನ ಬೆರಳಿಗೆ ಸಿಕ್ಕಿಸಿಕೊಂಡ. ಮಾರನೆಯ ಬೆಳಿಗ್ಗೆ ಸೂರ್ಯಮಿತ್ರನು ತೋಟದ ತಾವರೆಯ ಕೊಳದಲ್ಲಿ ಮಿಂದು ಅರ್ಘ್ಯವೀಯುವಾಗ ಅವನ ಬೆರಳಲ್ಲಿದ್ದ ಉಂಗುರ ಅವನಿಗರಿವಿಲ್ಲದಂತೆ ಜಾರಿತು. ಮುಂದೆ ಯಾವಾಗಲೋ ಒಮ್ಮೆ ಆಕಸ್ಮಾತ್ತಾಗಿ ಬೆರಳು ನೋಡಿಕೊಂಡಾಗ ಅವನಿಗೆ ಉಂಗುರದ ನೆನಪು ಬಂತು, ಗಾಬರಿಯಾಯಿತು; ಕಳೆದು ಹೋಯಿತು ಎಂದರೆ ರಾಜನಿಗೆ ಅನುಮಾನವೂ ಬರಬಹುದು ಎಂದು ಖೇದವಾಯಿತು. ಸುತ್ತುಮುತ್ತ ಹುಡುಕಿದರೂ ಪ್ರಯೋಜನವಾಗದೆ, ಅದನ್ನು ಹುಡುಕಲೆಂದು ಹೊರಗೆ ಹೊರಟ. ಸ್ವಲ್ಪ ದೂರ ಹೋದ ಮೇಲೆ ಸುಧರ್ಮಾಚಾರ್ಯರೆಂಬ ಒಬ್ಬ ಮುನಿಗಳು ಕಾಣಿಸಿದರು; ಇವನನ್ನು ಕಂಡ ತಕ್ಷಣವೇ ಇವರ ಚಿಂತೆಯ ಕಾರಣವಾವುದೆಂಬುದನ್ನು ತಿಳಿಸಿದುದಲ್ಲದೆ, ಸೂರ್ಯಮಿತ್ರ ಧರಿಸಿದ್ದ ಉಂಗುರ ಮೀಯುವಾಗ ಕಳಚಿಹೋಗಿ ತಾವರೆಯಲ್ಲಿ ಸಿಕ್ಕಿಕೊಂಡಿದೆಯೆಂದೂ ಮಾರನೆಯ ಬೆಳಿಗ್ಗೆ ಸೂರ್ಯೋದಯವಾದಾಗ ತಾವರೆ ಅರಳಿ ಉಂಗುರ ಸಿಕ್ಕುವುದೆಂದೂ ತಮ್ಮ ಅವಧಿಜ್ಞಾನದ ಬಲದಿಂದ ಹೇಳಿದರು.

ಸೂರ್ಯಮಿತ್ರ ರಾತ್ರಿಯೆಲ್ಲ ಕಾದು ಮರುದಿನ ಬೆಳಿಗ್ಗೆ ಕೊಳದ ಬಳಿ ಹೋಗಿ ನೋಡಿದರೆ, ಮುನಿಗಳು ಹೇಳಿದಂತೆಯೇ ಉಂಗುರ ಸಿಕ್ಕಿತು! ಅವನ ಗಮನ ಈಗ ಅವರ ಜ್ಞಾನದ ಕಡೆ ತಿರುಗಿತು; ತನಗೂ ಅದನ್ನು ಹೇಳಿಕೊಡಲು ಗುರುಗಳನ್ನು ಕೇಳಿಕೊಂಡ. ಆ ವಿದ್ಯೆ ದಿಗಂಬರ

ಮಲಧಾರಿಗೆ ಮಾತ್ರ ಸಾಧ್ಯವೆಂಬುದನ್ನು ಗುರುಗಳು ಹೇಳಿದಾಗ, ಅದನ್ನು ಕೈವಶಮಾಡಿಕೊಳ್ಳಬೇಕೆಂಬ ಸಂಕಲ್ಪದಿಂದ ತಾನೂ ಹಾಗೆಯೇ ಮಾರ್ಪಟ್ಟ. ದಿನ ಕಳೆದಂತ ಆಚಾರ್ಯರು ಹೇಳಿದ ಧರ್ಮಗ್ರಂಥಗಳನ್ನೆಲ್ಲ ಓದುತ್ತ, ಅವನಿಗೆ ಭವಿಷ್ಯ ಜ್ಞಾನದ ಮೇಲಣ ಮೋಹ ಕಡಿಮೆಯಾಗಿ ಸೃಷ್ಟಿ ರಹಸ್ಯವು ಬೆರಗುಂಟುಮಾಡಿ, ಸಂಸಾರದ ಅನಿತ್ಯತೆ ಅನುಭವಕ್ಕೆ ಬಂದು, ಜೈನತತ್ವದಲ್ಲಿ ನಂಬಿಕೆಯುಂಟಾಗಿ ತಪಸ್ಸು ಮಾಡಿ ಅವಧಿಜ್ಞಾನವನ್ನು ಸಾಧಿಸಿದರೂ ಕೈವಲ್ಯಕ್ಕೆ ಮನ ಹಾತೊರೆಯಿತು. ಅನೇಕ ವ್ರತಗಳನ್ನು ತಾಳಿ ಕೃಶವಾದ; ಕೊನೆಗೆ ಏಕವಿಹಾರಿಯಾಗಿ ಸಂಚಾರಕ್ಕೆಂದು ಹೊರಟ.

ಕೊನೆಗೊಮ್ಮೆ ಸೂರ್ಯಮಿತ್ರ ಭಟ್ಟಾರಕ ಕೌಶಂಬಿ ನಗರಕ್ಕೆ ಬಂದ. ಅಗ್ನಿಭೂತಿಯು ಗುರುವನ್ನು ಗುರುತಿಸಿ ಮನೆಗೆ ಕರೆತಂದು ಭಕ್ತಿಯಿಂದ ಸತ್ಕಾರಗೈದ. ಗುರುವನ್ನು ಬೀಳ್ಕೊಡುವಾಗ ತಮ್ಮನಾದ ವಾಯುಭೂತಿಯನ್ನೂ ಕಂಡು ಹರಸಬೇಕೆಂದು ಬೇಡಿಕೊಂಡ. ಅದರಂತೆ ಅವನ ಮನೆಗೆ ಅವನನ್ನು ಕರೆತಂದಾಗ ತಮ್ಮ ಕಂಡರೂ ಕಾಣದಂತೆ ಅವಜ್ಞೆಮಾಡಿ ಉದಾಸೀನನಾಗಿದ್ದ. ಅಗ್ನಿಭೂತಿ ಸಂಕಟದಿಂದ ತಮ್ಮನಿಗೆ ಬುದ್ಧಿಮಾತು ಹೇಳಿದ. ಸೋದರಮಾವನ ಮೇಲಿನ ಹಿಂದಿನ ಸಿಟ್ಟೆಲ್ಲ ಘನೀಭವಿಸಿ ಅಗ್ನಿಭೂತಿಯು ಸೂರ್ಯಮಿತ್ರನನ್ನೂ, ಅವನ ಕುಲವನ್ನೂ ಹೀನಾವಮಾನವಾಗಿ ಬೈದ. ಆದರೆ ಸೂರ್ಯಮಿತ್ರ ಕ್ಷಮಾಮೂರ್ತಿಯಾಗಿ ಸಮಾಧಾನಚಿತ್ತದಿಂದಲೇ ಅಲ್ಲಿಂದ ಹೊರಟ. ಗುರುಗಳಿಗೆ ತನ್ನಿಂದಲೇ ಅವಮಾನವಾಯಿತೆಂಬ ಪಾಪಪ್ರಜ್ಞೆಯಿಂದ ಬೆಂದುಹೋದ ಅಗ್ನಿಭೂಮಿಯು, ಅವನಲ್ಲಿಯೇ ದೀಕ್ಷೆ ಪಡೆದು ಗುರುವಿನೊಡನೆಯೇ ವಿಹಾರಕ್ಕೆ ಹೊರಟ.

ನಡೆಯುತ್ತ ಬಂದ ಅವರು ಅಂಗದೇಶದ ಚಂಪಾನಗರವನ್ನು ತಲುಪಿದರು. ಅಲ್ಲಿನ ಉದ್ಯಾನವನದಲ್ಲಿದ್ದ ನಾಗಮಂಟಪದಲ್ಲಿ ಉಳಿದುಕೊಂಡರು. ಮರುದಿನ ಗುರು ಅಗ್ನಿಭೂತಿಯನ್ನು ಭಿಕ್ಷೆಗೆ ಕಳಿಸಿದ. ದಾರಿಯಲ್ಲಿ ಅವನು ಒಂದು ನೇರಿಳೆ ಮರದ ಕೆಳಗೆ ತಡಕಾಡಿ ಹಣ್ಣು ಆಯುತ್ತಿದ್ದ ಒಬ್ಬ ಹುಟ್ಟುಗುರುಡಿ ಹೊಲೆಯ ಹುಡುಗಿಯನ್ನು ಕಂಡ. ಅವಳ ಮೈಯೆಲ್ಲ ಗಾಯಗಳು ರಕ್ತ ಕೀವುಗಳಿಂದ ಹೊಲಸು ನಾರುತ್ತಿತ್ತು. ಅವಳನ್ನು ಕಂಡಾಗ ಅಗ್ನಿಭೂತಿಗೆ ಮರುಕವುಂಟಾಯಿತು, ತನ್ನ ಕುಂಚದಿಂದ ನೇರಿಳೆ ಹಣ್ಣುಗಳನ್ನು ಗುಡಿಸಿ ಅವಳೆಡೆಗೆ ನೂಕಿ ವಿಹ್ವಲಮನದಿಂದಲೇ ಬೀಡುದಾಣಕ್ಕೆ ವಾಪಸಾದ.

ಅಗ್ನಿಭೂತಿಯು ಭಿಕ್ಷವಿಲ್ಲದೆ ಬಂದುದನ್ನು ಕಂಡು ಸೂರ್ಯಮಿತ್ರನು ವಿಷಯ ತಿಳಿದು ತನ್ನ ಅವಧಿಜ್ಞಾನದಿಂದ ಆ ಹುಟ್ಟುಗುರುಡಿಯ ವಿಷಯವನ್ನೆಲ್ಲ ತಿಳಿದು ಅಗ್ನಿಭೂತಿಗೆ ವಿವರಿಸಿದ; ಮುನಿಗೆ ಅವಮಾನ ಮಾಡಿದ ವಾಯುಭೂತಿಯ ಜೀವವೇ ಈಗ ಹೊಲತಿಯಾಗಿರುವುದು. ವಾಯುಭೂತಿ ಮುನಿಯಾಗಿದ್ದ ತನಗೆ ಅವಮಾನ ಮಾಡಿದುದಷ್ಟೇ ಅಲ್ಲದೆ, ಅಗ್ನಿಭೂತಿ ದೀಕ್ಷೆ ಪಡೆದ ಮೇಲೆ ಅವನ ಹೆಂಡತಿ ಸೋಮದತ್ತೆಯ ಆಸ್ತಿಯನ್ನು ಕಬಳಿಸಿ ಒದ್ದು ಮನೆಯಿಂದ ಹೊರಗ ಹಚ್ಚಿದ. ಆಗ ಸೋಮದತ್ತೆಯು ಕೋಪದಿಂದ ಒದ್ದ ಅವನ ಕಾಲುಗಳನ್ನು ಜನ್ಮಾಂತರದಲ್ಲಿಯಾದರೂ ಕಿತ್ತು ತಿನ್ನುವುದಾಗಿ ಶಪಥಮಾಡಿದಳು. ಆ ಕಾರಣದಿಂದ ವಾಯುಭೂತಿ ಕುಷ್ಠ ರೋಗದಿಂದ ಬಳಲಿ ಸತ್ತು, ಕೌಶಂಬಿಯ ಡೊಂಬನೊಬ್ಬನ ಮನೆಯ ಕತ್ತೆಯಾಗಿ ಹುಟ್ಟಿ ಸತ್ತು, ಮರುಜನ್ಮದಲ್ಲಿ ಹಂದಿಯಾಗಿ, ಆಮೇಲೆ ಹೆಣ್ಣು ನಾಯಿಯಾಗಿ,

ಈಗ ಇಲ್ಲಿ ಹೀಗೆ ಹುಟ್ಟಿದ್ದಾನೆ; ಸೋಮದತ್ತೆಯೂ ಜನ್ಮಾಂತರದಲ್ಲಿ ಸುತ್ತುತ್ತಿದ್ದಾಳೆ. ಹೀಗೆಂದು ತಿಳಿಸಿ "ಆ ಕುರುಡಿಗೆ ಈ ಜನ್ಮದಲ್ಲಿ ಇವತ್ತು ಮಾತ್ರ ಆಯುಸ್ಸಿದೆ. ನೀನು ಉಪದೇಶಮಾಡಿ ವ್ರತಗಳನ್ನಿತ್ತರೆ ಅವಳು ಸದ್ಗತಿಯೈದುವಳು" ಎಂದ. ಅಗ್ನಿಭೂತಿ ಅಂತೆಯೇ ಅವಳಿಗೆ ಅಣುವ್ರತಗಳನ್ನು ಉಪದೇಶಗೈದ. ಅವಳು ಆ ದಿನವೇ ಹಾವು ಕಚ್ಚಿ ಸತ್ತು, ಆ ಊರಿನ ರಾಜಪುರೋಹಿತನಾದ ನಾಗಶರ್ಮನ ಮಗಳು ನಾಗಶ್ರೀಯಾಗಿ ಜನ್ಮ ತಳೆದಳು.

ಅಲ್ಲಿಂದ ಮುಂದೆ ಸಾಗಿದ ಸೂರ್ಯಮಿತ್ರ - ಅಗ್ನಿಭೂತಿಯರು ಅನೇಕ ವರ್ಷಗಳ ಬಳಿಕ ಮತ್ತೆ ಚಂಪಾಪುರಕ್ಕೆ ಬಂದರು. ಅಷ್ಟು ಹೊತ್ತಿಗೆ ನಾಗಶ್ರೀ ಯುವತಿಯಾಗಿದ್ದಳು. ಅವಳು ನಾಗಪೂಜೆಗೆಂದು ನಾಗಮಂಟಪಕ್ಕೆ ಬಂದು ಇವರಿಬ್ಬರನ್ನೂ ನೋಡಿ ಜಾತಿಸ್ಮರಣೆಗೊಂಡಳು. ಅವಳ ವಿಷಯವನ್ನು ಸೂರ್ಯಮಿತ್ರ ಅಗ್ನಿಭೂತಿಗೆ ವಿವರಿಸಿದುದಲ್ಲದೆ, ಅವಳಿಗೆ ತತ್ವೋಪದೇಶ ಮಾಡಿದ. ಆ ವಿಷಯವನ್ನು ತಿಳಿದು ಕೋಪಗೊಂಡ ನಾಗಶರ್ಮನು ವ್ರತಗಳನ್ನು ಕೊಟ್ಟ ಮುನಿಯ ಬಳಿಯೇ ಅವುಗಳನ್ನು ಎಸೆಯಲು ಮಗಳನ್ನು ಕರೆತಂದ. ದಾರಿಯಲ್ಲಿ ಬರುವಾಗ ಒಬ್ಬ ಕೊಲೆಪಾತಕಿಯನ್ನು ವಧೆಗಾಗಿ ಕೊಂಡೊಯ್ಯುತ್ತಿದ್ದುದು, ಸುಳ್ಳನ್ನು ಹೇಳಿ ಶಿಕ್ಷೆಗೊಳಗಾದ ಕಳ್ಳ, ಹಣ ಕದ್ದವನು ಕ್ರೂರ ಶಿಕ್ಷೆಗೆ ಒಳಗಾದದ್ದು, ಹಾದರಕ್ಕಾಗಿ ನಾಗಸೂರನ ಜಾರೆಯ ತಲೆಯನ್ನು ಕತ್ತರಿಸಿ ಜಾರೆಯ ಕಿವಿಮೂಗು ತರಿದು ಮದ್ದಾನೆಯ ಕೊರಳಿಗೆ ಕಟ್ಟಿ ಬೀದಿಯಲ್ಲಿ ಕೊಂಡೊಯ್ಯುವುದು - ಇವನ್ನೆಲ್ಲ ಕಂಡು ತಂದೆಗೆ ವಿವರಿಸಿದ ಮೇಲೆ ವಾಪಸು ಮಾಡಬೇಕೆಂದು ಬಯಸಿದ್ದ ನಾಗಶ್ರೀಯ ಪಂಚಾಣುವ್ರತಗಳನ್ನು ತನ್ನಲ್ಲಿಯೇ ಉಳಿಸಿಕೊಳ್ಳಲು ತಂದೆ ಅವಳಿಗೆ ಅನುಮತಿಯಿತ್ತ. ಆದರೂ ನಾಗಶರ್ಮನು ಬಂದು ಸೂರ್ಯಮಿತ್ರನನ್ನು ಆಕ್ಷೇಪಿಸಿದಾಗ ಅವಳನ್ನು ತನ್ನ ಮಗಳೆಂದು ಹೇಳಿ ಅವಳನ್ನು ಸೂರ್ಯಮಿತ್ರ ತನ್ನೊಡನೆಯೇ ಉಳಿಸಿಕೊಂಡ.

ನಾಗಶರ್ಮ ದೊರೆಯ ಬಳಿ ಬಂದು ನಾಗಶ್ರೀಯನ್ನು ತನ್ನ ಮಗಳೆಂದು ಹೇಳುತ್ತಿರುವ ಮುನಿಯ ವಿರುದ್ಧ ದೂರುಕೊಟ್ಟ. ರಾಜನು ಪರಿವಾರಸಮೇತ ಅಲ್ಲಿಗೆ ಬಂದು ವಿಚಾರಣೆಯಾರಂಭಿಸಿದ. ತಾನು ಅವಳಿಗೆ ಶಾಸ್ತ್ರಾಗಮಗಳನ್ನು ಹೇಳಿಕೊಟ್ಟಿರುವುದಾಗಿ ತಿಳಿಸಿದ ಸೂರ್ಯಮಿತ್ರ ಅವಳ ಮೇಲೆ ಕೈಯಿರಿಸಿದಾಗ, ಎಲ್ಲರಿಗೂ ಅಚ್ಚರಿಯಾಗುವಂತೆ, ನಾಗಶ್ರೀ ವಾಯುಭೂತಿಯಾಗಿದ್ದಾಗಿನ ಜನ್ಮದಲ್ಲಿ ಸೂರ್ಯಮಿತ್ರನಿಂದ ಕಲಿತ ವಿದ್ಯೆಯನ್ನೆಲ್ಲ ಒಪ್ಪಿಸಿದಳು. ಇದರಿಂದಾದ ಆಶ್ಚರ್ಯದಿಂದಾಗಿ ರಾಜನಾದಿಯಾಗಿ ಅನೇಕರು ದೀಕ್ಷೆ ಪಡೆದರು. ಕೆಲವು ದಿನಗಳಲ್ಲಿಯೇ ಸೂರ್ಯಮಿತ್ರ ಮತ್ತು ಅಗ್ನಿಭೂತಿಗಳು ಮುಕ್ತಿ ಹೊಂದುತ್ತಾರೆ. ನಾಗಶ್ರೀ ತಪಸ್ಸು ಮಾಡಿ ಅಚ್ಯುತಕಲ್ಪದಲ್ಲಿ ಪದ್ಮಪ್ರಭನೆಂಬ ಹೆಸರಿನ ದೇವನಾಗಿ ಹುಟ್ಟುತ್ತಾಳೆ.

ಇತ್ತ, ಅವಂತಿ ದೇಶದ ಉಜ್ಜೇನಿಯಲ್ಲಿ ವೃಷಭಾಂಕನು ಆಳುತ್ತಿದ್ದ; ಅವನ ಮಹಾರಾಣಿ ಲಕ್ಷ್ಮಣಾದೇವಿ. ಅವನ ಪ್ರಧಾನ ಶ್ರೇಷ್ಠಿ ಇಂದ್ರದತ್ತ, ಭಾರಿ ಶ್ರೀಮಂತ. ಅವನ ಹೆಂಡತಿ ಮನೋರಮೆ. ಆ ಇಬ್ಬರ ಮಗ ಸೂರದತ್ತ; ಅವನ ಹೆಂಡತಿ ಯಶೋಭದ್ರೆ. ಆ ಶ್ರೇಷ್ಠಿದಂಪತಿಗಳಿಗೆ ಮಕ್ಕಳಿರಲಿಲ್ಲ. ಒಮ್ಮೆ ಅಭಿನಂದನ ಮುನೀಂದ್ರನು ಅಲ್ಲಿಗೆ ಬಂದ. ಅವರಿಗೆ ಒಬ್ಬ ಮಗನು ಹುಟ್ಟುವುದಾಗಿಯೂ, ಮಗುವಿನ ಮುಖ ಕಂಡ ತಕ್ಷಣ ಸೂರದತ್ತ ತಪಸ್ಸಿಗೆ ಹೋಗುತ್ತಾನೆಂದೂ, ಮಗುವೂ ಜಿನಮುನಿಯ ದರ್ಶನ ಮಾತ್ರದಿಂದಲೇ

ವಿರಾಗಿಯಾಗುವನೆಂದೂ ಮುನಿ ಭವಿಷ್ಯ ನುಡಿದ. ಕೆಲವು ಕಾಲದ ಮೇಲೆ ಯಶೋಭದ್ರೆ ಗಂಡುಮಗುವನ್ನು ಹೆತ್ತಳು; ಸೂರದತ್ತನಿಗೆ ತಕ್ಷಣವೇ ವೈರಾಗ್ಯ ಹುಟ್ಟಿ ದೀಕ್ಷೆ ಪಡೆದ. ಯಶೋಭದ್ರೆ ಮಗನಿಗೆ ಸುಕುಮಾರನೆಂಬ ಹೆಸರಿಟ್ಟು, ಅವನೆಲ್ಲಿ ಮುನಿಯು ಭವಿಷ್ಯ ನುಡಿದಂತೆ ವಿರಾಗಿಯಾಗುತ್ತಾನೋ ಎಂದು ಹೆದರಿ, ಅವನ ಕಣ್ಣಿಗೆ ಯಾವ ಮುನಿಯೂ ಕಾಣಸದಂತೆ ಅವನಿಗಾಗಿಯೇ ಒಂದು ಅರಮನೆಯನ್ನು ಕಟ್ಟಿಸಿ, ಅದರಲ್ಲಿ ಎಲ್ಲ ಅನುಕೂಲಗಳನ್ನೂ ಕಲ್ಪಿಸಿಕೊಟ್ಟು, ಮಗನನ್ನು ಒಂಟಿಯಾಗಿರಿಸಿದಳು. ಮುಂದೆ ಅವನಿಗೆ ಮೂವತ್ತೆರಡು ಕನ್ಯಾಮಣಿಗಳನ್ನು ತಂದು ಮದುವೆ ಮಾಡಿಸಿದಳು. ಅವನ ವೈಭವವನ್ನು ಕಂಡು ಆಗ ಆವಂತಿಯ ದೊರೆಯಾಗಿದ್ದ ವೃಷಭಾಂಕನೂ ಬೆರಗುವಡುವಂತಾಯಿತು.

ಒಮ್ಮೆ ಸುಕುಮಾರನ ಸೋದರಮಾವನೇ ಆಗಿದ್ದ ಯಶೋಭದ್ರ ಮುನಿಯು ಚಾತುರ್ಮಾಸದ ಆಚರಣೆಗಾಗಿ ಉಜ್ಜೇನಿಗೆ ಬಂದು ಸಕುಮಾರನ ಅರಮನೆಯ ಬಳಿಯಿದ್ದ ಉಪವನದ ಬಸದಿಯೊಂದರಲ್ಲಿ ಬೀಡುಬಿಟ್ಟ. ಆ ಮುನಿಯು ಅಲ್ಲಿರದಂತೆ ಮಾಡಲು ಯಶೋಭದ್ರೆ ಸಾಕಷ್ಟು ಪ್ರಯತ್ನಗಳನ್ನು ಮಾಡಿದರೂ ಫಲಕಾರಿಯಾಗಲಿಲ್ಲ. ಕೊನೆಗೆ ಅಲ್ಲಿರುವವರೆಗೂ ಮೌನವಾಗಿರಬೇಕೆಂದು ಕೇಳಿಕೊಂಡು ಅವನನ್ನು ಒಪ್ಪಿಸಿದಳು. ಸ್ವಲ್ಪ ನೆಮ್ಮದಿಯಿಂದ ಅವಳು ಉಸಿರಾಡುವಂತಾಯಿತು.

ಮುನಿಯ ಚಾತುರ್ಮಾಸ ಕಾರ್ತಿಕ ಹುಣ್ಣಿಮೆಯಂದು ಕೊನೆಗಂಡಿತು. ಅಂದು ಮಧ್ಯರಾತ್ರಿಯ ನಂತರ ಯಶೋಭದ್ರ ಮುನಿಯು ಮೌನ ಮುರಿದು ತ್ರಿಲೋಕ ಪ್ರಜ್ಞಪ್ತಿಯನ್ನು ಜೋರಾಗಿ ಹೇಳತೊಡಗದ. ಅದು ತನ್ನ ಅರಮನೆಯ ಉಪ್ಪರಿಗೆಯ ಮೇಲೆ ಮಲಗಿದ್ದ ಸುಕುಮಾರನನ್ನು ಎಚ್ಚರಿಸಿತು. ಆ ಧ್ವನಿಯು ಅವನಲ್ಲಿ ಜಾತಿಸ್ಮರಣೆಯನ್ನು ಉಕ್ಕಿಸಿತು; ಜೊತೆ ಜೊತೆಗೇ ಅವನಲ್ಲಿನ ವೈರಾಗ್ಯ ಕಟ್ಟೆಯೊಡೆಯಿತು. ಕಾವಲುಭಟರ ಕಣ್ತಪ್ಪಿಸಿ ಹೊರಬರಲು ಸುಕುಮಾರನಿಗೆ ಸಾಧ್ಯವಿರಲಿಲ್ಲ. ಹಾಗಾಗಿ ಅವನು ತನ್ನ ದಿವ್ಯವಸನಗಳನ್ನೇ ಒಂದರ ತುದಿಗಿನ್ನೊಂದರಂತೆ ಸೇರಿಸಿ ಮೇಲೆ ಬಿಗಿದು ಇಳಿಯಬಿಟ್ಟು ಅದರ ಸಹಾಯದಿಂದ ಕೆಳಗಿಳಿದು, ಕೊಳೆತ ಹುಲ್ಲು ಕಡ್ಡಿಯನ್ನು ಬಿಸಾಡಿದಂತೆ ತನ್ನ ಭೋಗವನ್ನೆಲ್ಲ ತೊರೆದು, ಮುನಿಗಳ ಬಳಿ ಬಂದು ಅವರ ಚರಣೋಪಾಂತದಲ್ಲಿ ದೀಕ್ಷೆ ಪಡೆದ. ಹೀಗೆ ಮುನಿಯಾದ ಸುಕುಮಾರನು ಗುರುಗಳ ಆಜ್ಞೆಯಂತೆ ಪ್ರಾಯೋಪಗಮನದಿಂದ ಆತ್ಮಾನುಸಂಧಾನದಲ್ಲಿ ತೊಡಗಲು ನಿಶ್ಚೈಸಿದ. ಅಷ್ಟರಲ್ಲಿ ಬೆಳಗಾಯಿತು; ಗುರುವು ದಕ್ಷಿಣದಿಕ್ಕಿನ ಚೈತ್ಯಾಲಯಕ್ಕೆ ತೆರಳಿದರೆ, ಸುಕುಮಾರನು ಉತ್ತರ ದಿಕ್ಕಿಗೆ ಪಯಣ ಬೆಳೆಸಿದ.

ಇತ್ತ, ಬೆಳಿಗ್ಗೆ ಎದ್ದಾಗ ತನ್ನ ಅಣ್ಣ ಜೊತೆಯಲ್ಲಿಲ್ಲದುದನ್ನು ಅರಿತ ಮನೋಹರಿ ಎಂಬ ಸುಕುಮಾರನ ಒಬ್ಬ ವಲ್ಲಭೆಯು ಅವನಿಗಾಗಿ ತಳಮಳದಿಂದ ಎಲ್ಲೆಡೆ ಹುಡುಕಾಡಿದಳು. ಯಶೋಭದ್ರೆಗೂ ಈ ವಿಷಯ ತಿಳಿಯಿತು. ಎಲ್ಲ ಕಡೆ ಶೋಧ ನಡೆಸಿದಾಗ ಕೊನೆಗೆ, ಮೇಲಿನಿಂದ ಇಳಿಯಬಿಟ್ಟಿದ್ದ ದಿವ್ಯವಸನಗಳ ಮಾಲೆ ಕಾಣಿಸಿತು. ವಿಷಯ ಎಲ್ಲರಿಗೂ ಸ್ಪಷ್ಟವಾಯಿತು. ಸುಕುಮಾರನಿಗಾಗಿ ಊರಲ್ಲೆಲ್ಲ ಹುಡುಕಿಸಿದರು. ಗಿಳಿ ಪಂಜರದಿಂದ ತಪ್ಪಿಸಿಕೊಂಡು ಹಾರಿ ಹೋಗಿತ್ತು. ತಾಯಿ ಮಗನ ಸುಳಿವು ಸಿಕ್ಕದೆ ಸೊರಗಿ ಹೋದಳು.

ಬರಿಗಾಲಲ್ಲಿ ನಡೆಯುತ್ತ ಹೊರಟ ಸುಕುಮಾರನ ಕಾಲುಗಳು ಗಾಯಗಳಿಂದ ತುಂಬಿಹೋಗಲು, ರಕ್ತ ಸೋರಿಸಿಕೊಂಡೇ ಸುಕೋಮಲನಾದ ಆತ ಮುನ್ನಡೆದ. ಕೊನೆಗೆ ಅವನು ತಲುಪಿದ್ದು ಮಹಾಕಾಳ ಎಂಬ ಮಸಣವನ್ನು. ಭೇದವಿಜ್ಞಾನಿಯಾಗಿ ಏಕಾಗ್ರಚಿತ್ತದಿಂದ ಅವನು ತಪಸ್ಸಿನಲ್ಲಿ ತೊಡಗಿದ. ಅಷ್ಟು ಹೊತ್ತಿಗೆ, ಸುಕುಮಾರನು ವಾಯುಭೂತಿಯಾಗಿದ್ದಾಗಿನ ಅತ್ತಿಗೆ ಸೋಮದತ್ತೆ ಹುಟ್ಟು ಸಾವುಗಳ ಚಕ್ರದಲ್ಲಿ ತಿರುಗುತ್ತ ಈ ಜನ್ಮದಲ್ಲಿ ಹೆಣ್ಣು ನರಿಯಾಗಿದ್ದಳು. ತನ್ನೆರಡು ಮರಿಗಳೊಡನೆ ಆ ನರಿ ಮಸಣದತ್ತ ನಡೆತಂದು, ನಿಶ್ಚಲನಾಗಿ ತಪಸ್ಸು ಮಾಡುತ್ತಿದ್ದ ಸುಕುಮಾರನನ್ನು ಶವವೆಂದು ಭಾವಿಸಿ ಒಂದು ಕಾಲನ್ನು ತಾನು, ಇನ್ನೊಂದನ್ನು ಮರಿಗಳು ತಿನ್ನಲು ತೊಡಗಿದವು. ಆ ಹೊತ್ತಿಗೆ "ಶರೀರ ಬೇರೆ, ಜೀವ ಬೇರೆ" ಎಂಬ ಭಾವ ತಳೆದಿದ್ದ ಸುಕುಮಾರನು ತನಗಾಗುತ್ತಿದ್ದ ನೋವಿನ ಕಡೆ ಕಿಂಚಿತ್ತೂ ಗಮನ ಹರಿಸಲಿಲ್ಲ. ಮುಂದೆರಡು ದಿನಗಳಲ್ಲಿ ನರಿ ಮತ್ತದರ ಮರಿಗಳು ಅವನ ದೇಹವನ್ನೆಲ್ಲ ಪೂರ್ತಿಯಾಗಿ ತಿಂದು ಹಾಕಿದವು. ಸುಕುಮಾರನ ಜೀವವು ಶುಕ್ಲಧ್ಯಾನದಲ್ಲಿರಲು, ಅವನ ಪ್ರಾಣಪಕ್ಷಿಯು ಹಾರಿಹೋಯಿತು. ಹೀಗೆ ದೇಹವನ್ನು ತೊರೆದ ಅವನು ಸರ್ವಾರ್ಥಸಿದ್ಧಿ ಎಂಬ ವಿಮಾನದಲ್ಲಿ ಅಹಮಿಂದ್ರನಾಗಿ ಹುಟ್ಟಿದ.

ಮಗನನ್ನು ಹುಡುಕುತ್ತ ಓಡಾಡುತ್ತಿದ್ದ ಯಶೋಭದ್ರೆಗೆ ಮೂರನೆಯ ದಿನದ ಸಂಜೆ ದೇವದುಂದುಭಿಯೊಡನೆ ದೇವತೆಗಳ ಹೊಗಳಿಕೆಯ ಧ್ವನಿ ಕೇಳಿಸಿ, ಸುಕುಮಾರನು ದೇಹತ್ಯಾಗ ಮಾಡಿರುವನೆಂದು ಅರಿತಳು. ಸೊಸೆಯಂದಿರಿಗೆ ಅಲಂಕಾರಗೊಳ್ಳಲು ತಿಳಿಸಿ, ಅವರೊಂದಿಗೆ ಮಹಾಕಾಳ ಶ್ಮಶಾನಕ್ಕೆ ಬಂದಳು. ಅಲ್ಲಿ ಸುಕುಮಾರನ ದೇಹ ಪುಷ್ಪವೃಷ್ಟಿಯಿಂದ ಮುಚ್ಚಿಹೋಗಿತ್ತು. ಎಲ್ಲರೂ ಜೋರಾಗಿ ಗೋಳಾಡಿದರು. ಕೊನೆಗೆ ಗರ್ಭವತಿಯರಾಗಿದ್ದ ಎಂಟು ಮಂದಿಯನ್ನು ಹೊರತುಪಡಿಸಿ ಉಳಿದ ಇಪ್ಪತ್ತನಾಲ್ಕು ಮಂದಿ ಸುಕುಮಾರನ ಹೆಂಡತಿಯರು ಯಶೋಭದ್ರೆಯ ಜೊತೆಯಲ್ಲಿ ದಯಾಭದ್ರರೆಂಬ ಗುರುಗಳ ಸನ್ನಿಧಿಯಲ್ಲಿ ದೀಕ್ಷೆ ಪಡೆದರು; ಕಂತಿಯರಾಗಿ ಸದ್ಗತಿ ಹೊಂದಿದರು. ಸುಕುಮಾರನು ದೇಹತ್ಯಾಗ ಮಾಡಿದ ನಂತರ ಅವನನ್ನು ದೇವತೆಗಳು ಪೂಜಿಸಿದ ಸುಗಂಧದ್ರವ್ಯಗಳು ಕರಗಿ ಉಜ್ಜೇನಿಯ ದಕ್ಷಿಣಭಾಗದಲ್ಲಿ "ಗಂಧವತಿ" ಎಂಬ ತೊರೆಯಾಗಿ ಈಗಲೂ ಹರಿಯುತ್ತಿದೆ!

'ಸುಕುಮಾರಚರಿತಂ'

ಕವಿಕಾವ್ಯ ವಿಚಾರ

ಈ ಕಾವ್ಯವು ನಿರ್ದಿಷ್ಟ ಉದ್ದೇಶವುಳ್ಳದ್ದು; ಧರ್ಮ-ಕಾವ್ಯಧರ್ಮಗಳನ್ನು ಮೇಳವಿಸಿ ಓದುಗರಿಗೆ ಉಣಬಡಿಸುವುದು. ಪಂಪನ ಈ ಆದರ್ಶವನ್ನೇ ಮುಂದಿನ ಎಲ್ಲ ಕನ್ನಡ ಕವಿಗಳೂ ಅನುಸರಿಸಿದ್ದು. ಆ ಕಾಲದ ನಂಬಿಕೆಯಂತೆ ಕವಿತೆಗೆ ತೂಕ ಬರುವುದು ಮೌಲ್ಯಗಳಿಗೆ ಆಕಾರ ಕೊಟ್ಟಾಗ ಮಾತ್ರ. ಶಾಂತಿನಾಥನು ಜೈನ ಕವಿಯಾಗಿ ಪಂಪನನ್ನು ತನ್ನ ಮಾದರಿಯಾಗಿ ಹೊಂದಿದ್ದುದು ಅಚ್ಚರಿಯಲ್ಲ. ಅದರ ಒಂದು ಭಾಗವಾಗಿ ಅವನಂತೆ ಇವನೂ ಚಂಪೂ ಕಾವ್ಯವನ್ನು ರಚಿಸಲು ಹೊರಟ. ಮಹಾಪುರಾಣದ ಆದಿ ತೀರ್ಥಂಕರನ ಪುರಾಣಕತೆಯನ್ನು ಅವನು ಕಾವ್ಯಸ್ಪರ್ಶದಿಂದ ಹೃದ್ಯವಾಗಿ ಮಾಡಿದುದೇ ಈ ನಮ್ಮ ಪ್ರಸ್ತುತ ಕವಿಗೂ ಪ್ರೇರಣೆಯೊದಗಿಸಿದೆ.

ಆದರೆ ಅವನಂತೆ ಇವನು ಮಾಂತ್ರಿಕನಲ್ಲ. ಹಾಗಾಗಿ ಅವನಲ್ಲಿ ಪುರಾಣದ ಕಣಕ ಕಾವ್ಯತ್ವದ ಹೂರಣವನ್ನು ತುಂಬಿಸಿಕೊಂಡಂತೆ ಇಲ್ಲಿ ಕಾಣುವುದಿಲ್ಲ. ಶಾಂತಿನಾಥ ಕಥಾ ನಿರೂಪಣೆಗೆ ಆಕರವಾಗಿ ಹೊಂದಿದ್ದ 'ವಡ್ಡಾರಾಧನೆ'ಯದು ಹೃದ್ಯಗದ್ಯದ ತಂಗಾಳಿಯ ತೀಟ; 'ಸುಕುಮಾರಚರಿತಂ' ಕಾವ್ಯದ್ದು ಬೀಸಣಿಗೆಯ ಬೀಸು. ಅಲ್ಲಿ ಸಾಹಿತ್ಯರಚನೆಯ ಉದ್ದೇಶವಿಲ್ಲದೆ ರಸಭರಿತ ಕಾವ್ಯ ಸೃಷ್ಟಿಯಾಗಿದೆ; ಇಲ್ಲಿ ಆ ಉದ್ದೇಶ ಅಲ್ಲಲ್ಲಿ ಯಶಸ್ಸು ಪಡೆದಿದೆ.

ಸಮ್ಯಗ್‌ದರ್ಶನದ ಒಂದು ಅಂಗವೇ 'ಧರ್ಮಪ್ರಭಾವನೆ'. ಅದು ಎಲ್ಲ ಜೈನ ಪುರಾಣ ಕವಿಗಳ ಗುರಿಯೂ ಹೌದು. ಪಂಪನ ಕೈಯಲ್ಲಿ 'ಆದಿಪುರಾಣ' ಜೈನಮತಸಂಬಂಧೀ ಪರಿಕಲ್ಪನೆಗಳನ್ನೂ, ತತ್ವಪ್ರತಿಪಾದನೆಯನ್ನೂ ಒಳಗೊಂಡಿದ್ದರೂ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣವಾದ ಭೋಗ ಮತ್ತು ಅಹಂಕಾರ (ಆಧುನಿಕ ಮನಶ್ಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ 'libido' ಮತ್ತು 'id') ಗಳ ನಿರಸನವನ್ನು ಸಾಂಕೇತಿಕವಾಗಿ ಚಿತ್ರಿಸುತ್ತದೆ. ವೃಷಭನಾಥನ ಭವಾವಳಿಗಳ ಮೂಲಕ ವ್ಯಕ್ತಿತ್ವವಿಕಸನ ಚಿತ್ರಿತವಾಗುತ್ತದೆ. (ಇದೇ ಪ್ರಾಯಶಃ ಜೈನ ಪುರಾಣಗಳ ಭವಾವಳಿಗಳು ಸಂಕೇತಿಸುವುದು). ಜೊತೆಗೆ ಭರತ-ಬಾಹುಬಲಿಗಳ ಪ್ರಸಂಗದಲ್ಲಿ ಅಧಿಕಾರ-ಅಹಂಕಾರಗಳ ಅಟ್ಟಹಾಸ ವೈರಾಗ್ಯದ ಮುಂದೆ ಮಣಿಯುವುದು ಚಿತ್ರಿತವಾಗಿದೆ. 'ಸುಕುಮಾರಚರಿತಂ'ನಲ್ಲಿ ಕೂಡ ಇಂಥ ಭವಾವಳಿಯ ಚಿತ್ರಣವಿದೆ. ಘೋರ ಪಾಪ (ಗುರುನಿಂದೆ)ದ ಪರಿಣಾಮವಾದ ಪರಿತಾಪ-ಪ್ರಾಯಶ್ಚಿತ್ತಗಳ ವಿವಿಧ ಘಟ್ಟಗಳನ್ನು ವಾಯುಭೂತಿಯ ಭವಾವಳಿಯು ಚಿತ್ರಿಸುತ್ತದೆ ಎಂದು ಆಧುನಿಕ ಮನಸ್ಸು ವ್ಯಾಖ್ಯಾನಿಸಬಹುದು. ಅದು ಸರಿ. ಆದರೆ ಅದರ ನಿರ್ವಹಣೆ ತಾನೇ ಕವಿಯ ಶಕ್ತಿಯ ನಿಕಷ? ಒಟ್ಟು ಕಥಾಸಂವಿಧಾನದಲ್ಲಿಯೇ ತತ್ವ ಅಡಕವಾಗುವುದು ಒಂದು ತೆರ; ಜೈನತತ್ವಗಳನ್ನು ಪಠ್ಯಪುಸ್ತಕದಲ್ಲಿನಂತೆ ವಿವರಿಸುವುದು ಇನ್ನೊಂದು ತೆರ. ಜಂಬೂದ್ವೀಪದ ವರ್ಣನೆ, ಸೂರ್ಯಮಿತ್ರನಿಗೆ ಸುಧರ್ಮಾಚಾರ್ಯರು ಮಾಡುವ ದ್ರವ್ಯಾನುಯೋಗದ ಉಪದೇಶ, ಹೊಲೆಯರ ಹುಡುಗಿಗೆ ಸೂರ್ಯಮಿತ್ರಮುನಿಯು ನೀಡುವ ಅಣುವ್ರತಗಳ ಉಪದೇಶ, ಅವನ ತಪಶ್ಚರ್ಯೆಯ ಬಣ್ಣನೆ, ಸಂಸಾರಸ್ವರೂಪನಿರೂಪಣೆ, ಚಂದ್ರವಾಹನರಾಜನಿಗೆ ಮಾಡಿದ ಜಿನತತ್ವಸ್ವರೂಪ, ನಾಗಶ್ರೀಯ ತಪಸ್ಸಿನ ವರ್ಣನೆ, ಯಶೋಭದ್ರರ ಚಾತುರ್ಮಾಸ, ತ್ರಿಲೋಕಪ್ರಜ್ಞಪ್ತಿ, ದ್ವಾದಶಾನುಪ್ರೇಕ್ಷಾಸ್ಮರಣೆ - ಇವುಗಳನ್ನು ಉಲ್ಲೇಖಿಸಿ ಡಿಎಲ್‌ಎನ್, "ಇದರಿಂದ ಅವನ ಗ್ರಂಥ ಜಿನಮತಾಚಾರದ ಕೈಪಿಡಿಯಾಗಿಬಿಟ್ಟಿದೆ" ಎಂದು ಹೇಳುವುದು ಸಮಂಜಸವಾಗಿಯೇ ಇದೆ. ಅಂದರೆ ಧರ್ಮ-ಕಾವ್ಯಧರ್ಮಗಳು ಇಲ್ಲಿ ಒಂದರೊಡನೊಂದು ಮಿಳಿತವಾಗದೆ, ಬೇರ್ಪಡಿಸಬಹುದಾದ ರೀತಿಯಲ್ಲಿರುವುದೇ ಕಾವ್ಯದ ಯಶಸ್ಸಿನ ಪರಿಮಿತಿಯನ್ನು ಸೂಚಿಸುತ್ತದೆ.

ಅಲ್ಲದೆ, ಶಾಂತಿನಾಥನ ಕಾವ್ಯಪ್ರತಿಭೆ ನಿಯಮೋಲ್ಲಂಘನೆ ಮಾಡುವಂಥದಲ್ಲ. ಹಾಗಾಗಿ ಅಷ್ಟಾದಶವರ್ಣನೆಗೂ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ ಆ ವರ್ಣನೆಗಳು ಬಹು ಕಡಿಮೆ; ಇರಬೇಕಾದುದರಿಂದ ಇದೆ ಎಂಬಂತೆ. ಅದು ಪರಿಮಿತಿಯಿಂದ ಕೂಡಿದೆ ಎಂಬುದು ಅವನ ಎಚ್ಚರವನ್ನೂ ಸೂಚಿಸುತ್ತದೆ. ಆದರ ವರ್ಣನೆಯಲ್ಲಿ ಕವಿಸಮಯಗಳ ಪ್ರಾಚುರ್ಯ ಹೆಚ್ಚು. ಕತೆಯೇ ಮೂಲತಃ ಹೃದಯಂಗಮವಾಗಿದೆ. ವಿವಿಧ ಮನೋಧರ್ಮಗಳ ಪ್ರಕಟಣೆ ಕತೆಗೆ

ಮೆರುಗನ್ನು ನೀಡುತ್ತದೆ. ಅಣ್ಣತಮ್ಮಂದಿರಾದರೂ ಅಗ್ನಿಭೂತಿ-ವಾಯುಭೂತಿಯರ ವ್ಯಕ್ತಿತ್ವಗಳಲ್ಲಿನ ವೈದೃಶ್ಯ, ಸೂರ್ಯಮಿತ್ರ ಉಂಗುರವನ್ನು ಕಳೆದುಕೊಂಡು ದೀಕ್ಷೆ ಪಡೆಯುವವರೆಗಿನ ಬೆಳವಣಿಗೆ ಅತ್ಯಪೂರ್ವವಾದ, ಆದರೆ ಸಹಜ ತಿರುವುಗಳನ್ನು ಪಡೆಯುತ್ತ ಕ್ಷಿಪ್ರವಾಗಿ ಅನಾವರಣಗೊಳ್ಳುವ ಸಹಜತೆ ಬೆರುಗೊಳಿಸುವಂಥದು. ನಾಗಶ್ರೀ ಅಣುವ್ರತಗಳನ್ನು ಉಳಿಸಿಕೊಳ್ಳಲು ಕಾರಣವಾಗುವ ದೃಶ್ಯಾವಳಿ, ಸುಕುಮಾರನ ಭೋಗ - ಇವೆಲ್ಲ ಅಪೂರ್ವ ಸನ್ನಿವೇಶಗಳು. 'ವಡ್ಡಾರಾಧನೆ'ಯಲ್ಲಿ ಇವೆಲ್ಲ ಅತ್ಯಂತ ಸಹಜವಾಗಿ ಅದರ ಗದ್ಯದ ಪರಿವಿನಲ್ಲಿ ತೇಲುತ್ತವೆ. ಆದರೆ ಇವು ಕಾವ್ಯದಲ್ಲಿ ಹಿಗ್ಗಲಿಕೆಗೊಳಗಾಗಿ ಕೆಲವೊಮ್ಮೆ ಬಿಗುವನ್ನೂ ಮೊನಚನ್ನೂ ಕಳೆದುಕೊಳ್ಳುತ್ತದೆ.

ಶಾಂತಿನಾಥನ ಶೈಲಿ ತೀರ ಪೆಡಸಾದುದೇನಲ್ಲ. ಅವನ ಗಮನ ಜನಸಾಮಾನ್ಯರ ಕಡೆಗಿದ್ದುದರಿಂದಲೂ, ವಸ್ತುವೇ ಪಾಂಡಿತ್ಯ ಪ್ರದರ್ಶನಕ್ಕೆ ತಗುವುದಲ್ಲವಾದುದರಿಂದಲೂ ಅವನು ತಕ್ಕಮಟ್ಟಿಗೆ ಸರಳ ಶೈಲಿಯ ಮಾರ್ಗವನ್ನು ಅನುಸರಿಸಿದ. ಅವನಿಗೆ ಪ್ರೇರಕವಾಗಿ 'ವಡ್ಡಾರಾಧನೆ' ಇದ್ದಿರಲೂ ಸಾಕು. ಎಷ್ಟೋ ಕಡೆಗಳಲ್ಲಿ ಅವನ ವಾಕ್ಯಸರಣಿ, ಅದನ್ನೇ ಬಹುಮಟ್ಟಿಗೆ ಅನುಸರಿಸುತ್ತದೆ, ಪ್ರೊ. ಡಿಎಲ್‌ಎನ್ ಇಂತಹ ಹತ್ತಾರು ಉಲ್ಲೇಖಗಳನ್ನು ನೀಡುತ್ತಾರೆ (ನೋಡಿ. 'ಸುಕುಮಾರಚರಿತಂ' ಕಾವ್ಯದ ಪ್ರಸ್ತಾವನೆ, ಪು : xxxvii-xxxviii). ಆದರೆ ಅವನ ಮೇಲೆ ಹಿಂದಿನ ಚಂಪೂ ಕವಿಗಳ ಶೈಲಿಯ ಪ್ರಭಾವವೂ ಆಗಿದೆ. ಇದಕ್ಕೆ ಎರಡು ಉತ್ತಮ ಉದಾಹರಣೆಗಳನ್ನು ನೀಡಬಹುದು.

ವ|| ಒಂದು ದಿನಮಾ ನರೇಂದ್ರಂ ಲೀಲೆಯಿಂದೊಡ್ಡೋಲಗಂಗೊಟ್ಟಿರ್ದಶೇಷ ವಿದ್ವಜ್ಜನ ಸಭಾಭ್ಯಂತರ ಮೃಗೇಂದ್ರವಿಷ್ಟರಾರೂಢನಾಗಿರ್ಪುದುಂ ಪರನೃಪಾಸ್ಥಾನದಿಂ ವಿಜಯಜಿಹ್ವನೆಂಬೊನೊರ್ವ ವಾದಿ ಸಕಲಕಲಾವೇದಿ ಸಂವಾದಾರ್ಥಿಯಾಗಿ ಬಂದು ನಿಜ ವಿದ್ಯಾಡಂಬರಮಂ ಮೆಱೆಯಲೆಂದರಮನೆಯ ಬಾಗಿಲೊಳ್ ನಿಂದು ಪತ್ರಾಲಂಬನಂ ಮಾಡಿರ್ಪುದುಂ ತದ್ವೃತ್ತಾಂತಮೆಲ್ಲಮನರಸನಱಿದು ಬರಮೇಳ್ವಿದುಮ-ಪೂರ್ವಮಪ್ಪ ಶ್ಲೋಕಸೂನ್ಯಾಸಸಮಾಸಸಂಸಾರವಚನರಚನೆಗಳಿನತಿಬಳನುಮಂ ತತ್ಸಭಾಜನಮುಮಂ ಮನಂಗೊಳಿಸಿ

ಮ|| ಅದೆಂತೆಂದೊಡಖಿಲಕರಿಮುಕರದಂತಘಾತೋಚ್ಚಲಚ್ಛೀಕರೋತ್ತುಂಗ ಭಂಗುರತರತ್ತರಂಗಮಾಲಾಕೀರ್ಣ ಲವಣಾರ್ಣವ ಪರಿವೃತಮುಮೇಕ ಲಕ್ಷ ಪರಿಮಾಣ ಯೋಜನ ಶುಂಭದ್ವಿಷ್ಕಂಭಮುಂ ಸಮವೃತ್ತಾಕಾರಪ್ರಕಾರಮುಂ ಪೂರ್ವಾಪರಾಯತ ಹಿಮವನ್ಮಹಾಹಿಮುವನ್ನಿಷಧನೀಲರುಕ್ಮಿಶಿಖರಿ ನಾಮಾಭಿರಾಮುವರ್ಷ ಧರ ಧರಾಧರಾವಭಾಸಿಯುಂ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯ ವತೈರಾವತಾಭಿದಾನ ಕ್ಷೇತ್ರಸಪ್ತಕ ವಿರಾಜಿತಮುಂ ಗಂಗಾ ಸಿಂಧು ರೋಹಿದ್ರೋಹಿ ತಾಸ್ಯಾ ಹರಿದ್ಧರಿಕಾಂತಾ ಸೀತಾಸೀತೋದಾನಾರೀ ನರಕಾಂತಾ ಸುವರ್ಣಮಾಲಾ ರೂಪ್ಯ ಕೂಳಾರಕ್ತಾರಕ್ತೋದಾಪ್ರಭೃತಿ ಚತುರ್ದಶಮಹಾನದೀಪ್ರವಾಹಕಮಯಮುಂ ಜಂಬೂವೃಕ್ಷಲಾಂಛನರಮಣೀಯಮುಮಾಗಿ ನೆಗಟ್ತೆಗಂ ಪೊಗಟ್ತೆಗುಮಗುಂದಲೆಯಾದ ಜಂಬೂದ್ವೀಪದ ನಟ್ಟನಡುವೆ

ಅವನ ಕಾವ್ಯಮಾರ್ಗದ ಮಾದರಿ ಪಂಪನಾದದರೂ, ಶೈಲಿಯಲ್ಲಿ ಶಾಂತಿನಾಥ ಅನೇಕ ಕಡೆಗಳಲ್ಲಿ ರನ್ನನ್ನು ಅನುಸರಿಸುತ್ತಾನೆ. ಇಂತಹ ಕೆಲವು ನಿದರ್ಶನಗಳನ್ನು ಪ್ರೊ. ಜಿ. ಬ್ರಹ್ಮಪ್ಪನವರು ಎತ್ತಿ ತೋರಿಸಿದ್ದಾರೆ (ನೋಡಿ, ಬೆಂಗಳೂರು ವಿಶ್ವವಿದ್ಯಾಲಯದ 'ಸಮಗ್ರ ಸಾಹಿತ್ಯ ಚರಿತ್ರೆ', ಸಂಪುಟ ೨, ಪು: ೨೨೨-೨೩).

ಆದರೆ ಶಾಂತಿನಾಥ ದೀರ್ಘೀಕರಣದ ಪ್ರಕ್ರಿಯೆಯಲ್ಲಿ ಕಸವನ್ನು ಹೆಚ್ಚು ತುಂಬಿಲ್ಲ. ಅಲ್ಲವೆ ಕೆಲವೊಮ್ಮೆ ಅವನ ಪ್ರತಿಭೆಯ ಹೊಳಹು ಕಾಣಿಸಿಕೊಂಡು ಮನಸ್ಸಿಗೆ ಉಲ್ಲಾಸವನ್ನು ತರುತ್ತದೆ. ಸುಕುಮಾರಸ್ವಾಮಿಯ ಭೋಗವೈಭವಗಳ ವರ್ಣನೆಯ ಚೆನ್ನಾಗಿದೆ. ಆದರೆ ಇದಕ್ಕೆ 'ವಡ್ಡಾರಾಧನೆ'ಯೇ ಪ್ರೇರಕ ಮತ್ತು ಅಲ್ಲಿ ಈ ಭಾಗವನ್ನು ತುಂಬ ಹೃದಯಂಗಮವಾಗಿಯೂ ಬೆಕ್ಕಸ ಬೆರಗುಪಡುವಂತೆಯೂ ಚಿತ್ರಿಸಲಾಗಿದೆ. ಇನ್ನುಳಿದ ಕೆಲವು ಕಡೆಗಳಲ್ಲಿಯೂ ಶಾಂತಿನಾಥ ತಕ್ಕಮಟ್ಟಿಗಿನ ಶಕ್ತಿಯನ್ನು ತೋರಿಸುತ್ತಾನೆ. ಅಂಥ ಕೆಲವನ್ನು ಉದಾಹರಿಸೋಣ. ಅಗ್ನಿಭೂತಿ-ವಾಯುಭೂತಿಗಳು ತಮ್ಮ ಬಾಲ್ಯದಲ್ಲಿ ಉಂಡಾಡಿಗಳಾಗಿ ಬೆಳೆದ ಬಗೆಯನ್ನು ಕವಿ ವರ್ಣಿಸುವ ರೀತಿಯಿದು :

ನಗರಾಭ್ಯಂತರ ದೇವತಾಭವನದೊಳ್ ಚೌವಟ್ಟದೊಳ್ ಬೀದಿವೀ
ದಿಗಳೊಳ್ ಜೂಜಿನದಿಂಡೆಯೊಳ್ ತಗರಕೇಳಿವಿದ್ಯೆಯೊಳ್ ದುರ್ಜನೋ
ಪಗತೋದ್ದೇಶದೊಳಂ ಪಣ್ಯವರ್ಮವೀಥಿವ್ರಾತದೊಳಮಾವಗಂ
ತಗುಣಾತ್ಮರ್ ವಿನಯಪ್ರಹೀನರವಿನೀತರ್ ನೀತಿಗೆಟ್ಟಾಡುವರ್

ತಂದೆ ಕಡಂಗಿ ಕಲ್ಪಿಸುವ ವಿದ್ಯೆಯನೊಲ್ಲದೆ ತಾಯ್ಮಗುಬ್ಬುನಿ
ರ್ವಂದದಿನೆಯ್ದೆ ಬಗ್ಗಿಸುವ ಬಗ್ಗಣೆಗಳ್ಕದೆ ಮಿತ್ರವರ್ಗಮೇ
ನೆಂದೊಡಮೆಂದುದಂ ನೆಗಟಿದೆ ಉದ್ಧತಿಯಿಂದಮವಂದಿರುರ್ಕ್ಕಿದ
ಕ್ಕುಂದಲೆವಾಯ್ವರಂತುಟೆ ಬಹುವ್ಯಸನಾರ್ತರಾನಾರೋ ಬಾರಿಪರ್ (೨. ೭-೮)

ಈ ವರ್ಣನೆಯಲ್ಲಿ ಅತಿಶಯವಾದದ್ದೇನೂ ಇಲ್ಲ. ಅದರ ಸಹಜತೆಯಲ್ಲಿಯೇ ಅದರ ಚೆಲುವಿಕೆಯಿದೆ. ಉಡಾಳರ ನಡವಳಿಕೆ ಎಲ್ಲ ಕಾಲಕ್ಕೂ ಇಂಥದೇ ಅಲ್ಲವೇ?

ಹುಟ್ಟು ಕುರುಡಿ ಮಾದಿಗರ ಹುಡುಗಿಯ ವರ್ತನೆಯನ್ನು ಈ ಕವಿ ಸಹಜವಾಗಿ ಚಿತ್ರಿಸುತ್ತಾನೆ : ಜಡೆಗಟ್ಟಿದ ತಲೆಗೂದಲು, ತಲೆಯ ಮೇಲಿಂದ ಬಾಯಿಗೆ ಇಳಿದು ಬರುವ ಹೇನುಗಳು, ದೇಹವು ಬಾವಲಿಯ ದೇಹದಂತೆ ಹೊಲಸು ವಾಸನೆಯಿಂದ ಕೂಡಿರುವುದು, ನೆಲದ ಮೇಲೆ ಚೆಲ್ಲಿದ ಅಗುಳುಗಳನ್ನೂ, ನೇರಿಳೆ ಹಣ್ಣುಗಳನ್ನೂ ತಡಕಾಡಿ ಆರಿಸಿಕೊಂಡು ತಿನ್ನುವ ಪರಿ ಇವೆಲ್ಲ - ಸನ್ನಿವೇಶಕ್ಕೆ ತಕ್ಕಂತೆ ನಿರೂಪಣೆಗೊಂಡಿವೆ. ಇಂಥದನ್ನು ಕಂಡಾಗ ಎಂಥವನಿಗೂ ಎದೆ ಧಸಕ್ಕೆಂದು ಬದುಕಿನ ನಿಗೂಢದ ಬಗ್ಗೆ ಮನಸ್ಸು ಯೋಚಿಸಲಾರಂಭಿಸುತ್ತದೆ. ಈಗಾಗಲೇ ಪಕ್ವಗೊಂಡ ಮನಸ್ಸಿನ ಅಗ್ನಿಭೂತಿ ಮುನಿ ಆ ಹುಡುಗಿಯನ್ನು ಕಂಡಾಗ ಅವನಿಗನ್ನಿಸುವ ಭಾವನೆಗಳಿವು :

ಇದೇಂ ಬಹುವಿಚಿತ್ರಮೋ ಭವವಿಕಲ್ಪಂ ವೈಚಿತ್ರ್ಯಮ್ ಇಂ
ತಿದೇನಘಟನಮಾನಮೊ ವಿಕೃತಘೋರಸಂಸಾರಮ್ ಇಂ

ತಿದೇಂ ವೃಜಿನಬಂಧಮೋ ಕುಸ್ಮೃತಿಬಂಧಸಂಬಂಧಮೆಂ
ದದೇಂ ತಳೆದನೊ ಮುನಿಪ್ರವರನಾಗಳುದ್ವೇಗಮಂ (೪. ೬೧)

ಮುನಿಯ ಉದ್ವೇಗದ ತೀವ್ರತೆಯನ್ನು ಅದನ್ನು ಹೇಳುವ ಮುಂಚಿನ ಉದ್ಗಾರಗಳ ಮೂಲಕ ಚಿತ್ರಿಸುವುದು, ಅಪರೂಪವಾದರೂ ಶಾಂತಿನಾಥನಲ್ಲಿದ್ದ, ಕುಶಲತೆಗೆ ಪ್ರತೀಕವಾಗಿದೆ.

'ಸುಕುಮಾರಚರಿತಂ' ಕಾವ್ಯದಲ್ಲಿ ಒಂದೆಡೆ ಬರುವ ಜಿನಪ್ರಾರ್ಥನೆ ಎಷ್ಟು ಹೃದಯಂಗಮವಾಗಿದೆ ನೋಡಿ :

ಕಿವಿಗಳ್ ನಿನ್ನ ಮೃದೂಕ್ತಿಯಂ ಬಯಸಿ ಕೇಳುತ್ತಿರ್ಕೆ ಕಣ್ಗಳ್ ಮಹೋ
ತ್ಸವದಿಂ ನಿನ್ನೆ ನೋಡುತ್ತಿರ್ಕೆ ಸಲೆ ಕೈಗಳ್ ನಿನ್ನ ಪಾದಾರವಿಂ
ದವನ್ ಓತು ಅರ್ಚಿಸುತ್ತಿರ್ಕೆ ಸಂದ ಮನಮೆಂದುಂ ನಿನ್ನ ದಿವ್ಯಸ್ವರೂ
ಪವನಾರಾಧಿಸುತ್ತಿರ್ಕೆ ವಿಶ್ರುತವಿನೇಯಸ್ವಾರ್ಥಚಿಂತಾಮಣೀ (೮. ೬೨)

ಸಹಜತೆಯಲ್ಲಿ ಸರಳತೆಯಿರುತ್ತದೆ; ಸರಳತೆ ಸಹಜತೆಯ ನಿಜಾಭಿವ್ಯಕ್ತಿ. ಇಲ್ಲಿನ ಪ್ರಾರ್ಥನೆ ಈ ಸಹಜತೆಯಿಂದಾಗಿಯೇ ಹೃದ್ಯವಾಗಿದೆ. ಚಮತ್ಕಾರವು ಸೋಲುವೆಡೆ ಸರಳತೆ ಗೆಲ್ಲುತ್ತದೆ; ಅದು ಭಕ್ತಿಯ ನಿರ್ಭರತೆಯಲ್ಲಿ ಇನ್ನೂ ಮಿಗಿಲು, ಶಾಂತಿನಾಥ ಇಲ್ಲಿ ಮೈಮರೆತು ಹಾಡಿದ್ದಾನೆ.

ಒಟ್ಟಿನಲ್ಲಿ, 'ಸುಕುಮಾರಚರಿತಂ'ನ ಶಾಂತಿನಾಥ ಪಂಪನ ಆದರ್ಶವಿಟ್ಟುಕೊಂಡು ಹೊರಟರೂ ಅವನ ಯಶಸ್ಸನ್ನು ಪಡೆದವನಲ್ಲ. ಎಷ್ಟೋ ಜನರ ಹಾಗೆ ಮಹಾಮಂಡಲೇಶ್ವರನ ಆಪ್ತನಾಗಿ ವೈಭವ-ಅಧಿಕಾರಗಳಲ್ಲಿ ಮೈಮರೆಯದೆ ಜನಹಿತವನ್ನು ಗೈಯುವ ಕಾವ್ಯರಚನೆಯ ಕಡೆ ಗಮನ ಕೊಟ್ಟದ್ದು ಅವನ ಸದಭಿರುಚಿಯನ್ನು ತೋರಿಸುತ್ತದೆ; ಒಂದು ಒಳ್ಳೆಯ ಕಥಾಚೌಕಟ್ಟನ್ನು ತನ್ನ ಕಾವ್ಯದ ವಸ್ತುವನ್ನಾಗಿ ಆಯ್ದುಕೊಂಡದ್ದು ಅವನ ಔಚಿತ್ಯಜ್ಞಾನವನ್ನು ಸೂಚಿಸುತ್ತದೆ; ತಕ್ಕಮಟ್ಟಿಗೆ ತನ್ನ ಪ್ರಯತ್ನದಲ್ಲಿ ಯಶಸ್ಸು ಪಡೆದದ್ದು ಅವನ ಶಕ್ತಿಯನ್ನು ತೋರಿಸುತ್ತದೆ. ತೀರ್ಥಂಕರೇತರ ಕತೆಯನ್ನು ಚಂಪೂ ಕಾವ್ಯವಾಗಿ ರಚಿಸುವ ಹೊಸ ಮಾರ್ಗವನ್ನು ಅನುಸರಿಸಿದ್ದು ಅವನ ಹೊಸತನದ, ಸ್ವೋಪಜ್ಞತೆಯ ಪ್ರತೀಕವಾಗಿದೆ. ಹಾಗಾಗಿ ಈ ಕಾವ್ಯಕ್ಕೆ ಚಂಪೂ ಪರಂಪರೆಯಲ್ಲಿ ಒಂದು ಗಣನೀಯ ಸ್ಥಾನವಿದೆ.

ಶಾಂತಿನಾಥನ ಕಾವ್ಯದ ಇತರ ವೈಶಿಷ್ಟ್ಯಗಳು

ನಮ್ಮ ಹಿಂದಿನ ಎಲ್ಲ ಕವಿಗಳಂತೆಯೇ ಶಾಂತಿನಾಥನೂ ಉಭಯಕವಿ, ಎಂದರೆ ಎರಡು ಭಾಷೆಗಳಲ್ಲಿ - ಸಂಸ್ಕೃತ ಮತ್ತು ಕನ್ನಡ - ಕವಿತ್ವ ಮಾಡಬಲ್ಲ ಶಕ್ತಿಯಿದ್ದವನು. ಶಕ್ತಿಯಿದ್ದೂ ಇವರಾರೂ ಸಂಸ್ಕೃತದಲ್ಲಿ ಬರೆಯಲು ಹೋಗದಿರಲು ಕಾರಣ, ತಮ್ಮ ಕಾವ್ಯವು ಜನಸಾಮಾನ್ಯರನ್ನು ತಲುಪಬೇಕಾದರೆ ಆಡುನುಡಿಯಾದ ಕನ್ನಡದಲ್ಲಿ ಬರೆಯಬೇಕೆಂಬ ಪ್ರಜ್ಞೆ. ಶಾಂತಿನಾಥನದು ಹಿಂದೆಯೇ ಸೂಚಿಸಿದಂತೆ, ಧರ್ಮಪ್ರಭಾವನೆಯ ಉದ್ದೇಶ, ಜೈನತತ್ತ್ವಗಳ ಪ್ರಚಾರ. ಹಾಗಾಗಿ ಸಹಜವಾಗಿಯೇ ಅವನ ಅಭಿವ್ಯಕ್ತಿಮಾಧ್ಯಮದ ಆಯ್ಕೆ ಕನ್ನಡವಾಯಿತು. ಅದಕ್ಕೆ ತಕ್ಕ ಪರಿಕರ ಅವನಲ್ಲಿತ್ತು, ಎಂದರೆ ಆ ಭಾಷೆಯ ಮೇಲಿನ ಪ್ರಭುತ್ವ ಮತ್ತು ವಸ್ತು ನಿರ್ವಹಣೆಯ ಕೌಶಲ. ಹಿಂದಿನ ಕವಿಗಳ ಮಾದರಿ ಅವನ ಕಣ್ಣ ಮುಂದಿದ್ದು ಅದನ್ನೇ ಅವನು ಅನುಸರಿಸಿದ. ಅಷ್ಟಾದಶ ವರ್ಣನೆಗಳು, ಆಶ್ವಾಸ ವಿಂಗಡಣೆ, ವೈವಿಧ್ಯಕ್ಕೆ ಮಧ್ಯೆ ಮಧ್ಯೆ ಅಕ್ಷರೇತರ

ಛಂದಸ್ಸಿನ ರಚನೆಗಳು ಇತ್ಯಾದಿ. ಹಾಗಾಗಿ 'ಸುಕುಮಾರಚರಿತಂ' ಕಾವ್ಯದಲ್ಲಿ ನಾನಾ ಬಗೆಯ ಅಕ್ಷರವೃತ್ತಗಳು, ಕಂದ ಮತ್ತು ಗದ್ಯ ಭಾಗಗಳಲ್ಲದೆ, ತ್ರಿಪದಿ, ರಗಳೆ, ಷಟ್ಪದಿ, ಪಿರಿಯಕ್ಕರ ಮುಂತಾದ ರಚನೆಗಳೂ ಸೇರಿಕೊಂಡಿವೆ. ಅವನು ಬಳಸಿರುವ ಎರಡು ತ್ರಿಪದಿಗಳು ಅಂಶಗಣಘಟಿತವಾದವು. ಹಾಗೆಯೇ ಎಂಟು ಕಡೆ ಬಳಸಿರುವ ಪಿರಿಯಕ್ಕರಗಳೂ ಲಕ್ಷಣ ಬದ್ಧವಾಗಿವೆ, ನಾಲ್ಕು ಕಡೆ ರಗಳೆಗಳ ಬಳಕೆಯಿದೆ. ಈ ರಗಳೆಗಳಲ್ಲಿ ಎರಡು ಕಡೆ ಬಳಸಿರುವುದನ್ನು ರಗಳೆಯೆಂದೂ, ಒಂದು ಕಡೆಯದನ್ನು ಪದ್ಧಳಿಯೆಂದೂ, ಮತ್ತೊಂದನ್ನು ಆದ್ಯಂತಪ್ರಾಸರಗಳೆಯೆಂದೂ ಕರೆದಿದೆ.

ಲಲಿತೆಯ ಶ್ರೀಪದತಳಗಳಶೋಕೆಯ
ತಳಿರಂ ಪೋಲ್ಪುವು ಭಾವಿಪೊಡಾಕೆಯ
ಚರಣಾಂಗುಳಿಗಳಮರ್ಕ್ಕೆಯಿನಪ್ಪಿದ
ಸುರದಂಪತಿಗಳಪೋಲ್ವೆಯನೊಪ್ಪಿದ
ವಿಳಿಲೆಯ ಪದಯುಗನಖದಾಕೃತಿಗಳ್
ಕೂರ್ಮೋನ್ನತಮೆನಿಸಿರ್ದ ಪದಂಗಳ್
ನರ್ಮಮನಾದರಿಸಿಸಿದವು ಮಡಂಗಳ್
ಪರಡು ನಿಗೂಢಂ ಲಲಿತ ಲತಾಂಗಿಯ
ವರ ಜಂಘಾಯುಗಲಂಗಳ ಭಂಗಿಯ
ನಱಿಯೆಂ ಪೊಗೞಲ್ ನೆಕ್ಕೊರವಟ್ಟೆಯ
ತೆಱನೇನಲ್ಲದೆ ಬಣ್ಣಿಪ ಬಟ್ಟೆಯ
ನಂಭೋಜಾನನೆಯೂರು ಯುಗಂಗಲ್
ರಂಭಾಸ್ತಂಭ ಯುಗ ಪ್ರತಿಮಂಗಳ್
ವನಿತೆಯ ಪುಲಿನ ನಿತಂಬೋದ್ದೇಶಂ
ಮನಸಿಜಮದಗಜ ಕುಂಭನಿಕಾಶಂ
ಲಾವಣ್ಯಾಂಬುರಸದ್ರವರೂಪಂ
ಭಾವಿಪೊಡಾಕೆಯ ನಾಭೀಕೂಪಂ
ನೋಡೆ ಕುಮಾರಿಯ ಬಳ್ಕುವ ಮಧ್ಯಂ
ನಾಡೆ ಮನೋಜ್ಞಂ ಪೊಗೞಲಸಾಧ್ಯಂ

ಮತ್ತು ಪದ್ದಳಿ ಎಂದು ಕರೆದಿರುವ ಈ ರಗಳೆಯನ್ನು ಗಮನಿಸಬಹುದು.

ಪದ್ಧಳಿ ॥ ಜಯಜಯ ಭುವನತ್ರಯಪರಮದೇವ ।
ದೇವೇಂದ್ರಾಭ್ಯರ್ಚಿತಚರಣಕಮಲ ॥
ಕಮಲವಿರಹಿತನಿರುಪಮದೇಹ ।
ದೇಹಾಶ್ರಿತಶುಭಲಕ್ಷಣವಿನೂತ ॥
ನೂತನಸಂಗತಕೈವಲ್ಯಬೋಧ ।

ಬೋಧಪ್ರಕಾಶವಸ್ತುಸ್ವರೂಪ ॥
ರೂಪಾತಿಶಯಾನ್ವಿತವಿತತವಿಭವ ।
ಭವನಿವಹಪಟಳನಿರ್ಮುಕ್ತಜೀವ ॥
ಜೀವಾಜೀವಾದಿಪದಾರ್ಥನಿಳಯ ।
ಲಯವರ್ಜಿತಗುಣಮಣಿಗಣವಿಭೂಷ ॥
ಭೂಷಾದಿರಹಿತಸೌಂದರ್ಯಸಹಿತ ।
ವಿನಿಹಿತವಿಶ್ರುತಪರಮಸಮಯ ॥
ಮಯಜನ್ಮಜರಾಮಯ ಭಯವಿನಾಶ ।
ನಾಶೀಕೃತವಿಷಯಕಷಾಯನಿಕರ ॥
ಕರಣಾಪಗಮಧ್ಯಾನೋಪಯೋಗ ।
ಯೋಗೀಶ್ವರವಂದಿತಪಾದಪೀಠ ।
ಪೀಠಪ್ರವಿರಾಜಿತ ಗಗನಗಮನ ।

ಇದೇನು ಕವಿಯೇ ಕರೆದಿರುವುದೋ, ಪ್ರತಿಕಾರರು ಹೇಳಿರುವುದೋ ಸ್ಪಷ್ಟವಾಗುವುದಿಲ್ಲ. ಸಿಕ್ಕಿರುವ ಎರಡೂ ಪ್ರತಿಗಳಲ್ಲಿ ಹೀಗಿರುವುದರಿಂದ ಪ್ರಾಯಶಃ ಕವಿಯೇ ಹಾಗೆಂದು ಕರೆದಿರಬಹುದು.

ಮಿಕ್ಕ ವಿಷಯಗಳು ಹಾಗಿರಲಿ, ಈ ಕಾವ್ಯದಲ್ಲಿ ಬಳಕೆಗೊಂಡಿರುವ ಷಟ್ಪದಿಯ ಬಗ್ಗೆ ಒಂದು ವಿಶೇಷವಿದೆ. ಅದೆಂದರೆ ಇಲ್ಲಿರುವ ಒಂದೇ ಒಂದು ಷಟ್ಪದಿಯ ಪದ್ಯ ಸಂಪೂರ್ಣವಾಗಿ ಅಂಶಗಣಘಟಿತವಾಗಿದ್ದು ಅಪರೂಪದ ಉದಾಹರಣೆಯಾಗಿದೆ. ರಾಘವಾಂಕನ ನಂತರದ ಕಾಲದಲ್ಲಿ ಅಂಶಷಟ್ಪದಿಯ ಬಳಕೆ ನಿಂತು ನಾನಾ ಬಗೆಯ ಮಾತ್ರಾಷಟ್ಪದಿಗಳಷ್ಟೇ ಬಳಕೆಗೊಂಡವು. ಆದರೆ ಇಲ್ಲಿನ ಈ ಪದ್ಯವು ನಾಗವರ್ಮನ 'ಛಂದೋಂಬುಧಿ'ಯ ಲಕ್ಷಣಪದ್ಯದಲ್ಲಿ ಹೇಳಿರುವ ಲಕ್ಷಣಗಳಿಗೆ ಸಂಪೂರ್ಣವಾಗಿ ಬದ್ಧವಾಗಿದೆ. ಇದನ್ನು ಪ್ರೊ. ತೀನಂಶ್ರೀ ಅವರು 'ಅಪೂರ್ವ ಷಟ್ಪದಿ' ಎಂದು ಕರೆದರು; ಸಾಮಾನ್ಯವಾಗಿ ವಿದ್ವಾಂಸರು ಸಂಪೂರ್ಣ ಅಂಶಗಣಘಟಿತವಾದುದನ್ನು 'ಷಟ್ಪದ' ಎಂದು ಕರೆಯುತ್ತಾರೆ, ಮಿಕ್ಕ ಷಟ್ಪದಿಗಳಿಗಿಂತ ಇದು ಭಿನ್ನ ಎಂದು ಸೂಚಿಸಲು. ಇದು ಎಲ್ಲ ಷಟ್ಪದಿಪ್ರಭೇದಗಳಿಗೆ ಮೂಲವೆಂಬುದು ಸಾಮಾನ್ಯ ತಿಳಿವಳಿಕೆ. ಇಂತಹ ಸಂಪೂರ್ಣ ಲಕ್ಷಣಬದ್ಧವಾದ ಅಂಶಷಟ್ಪದಿಗಳು ಸಿಕ್ಕುವುದು ಅಪರೂಪ; ಇಡೀ ಕನ್ನಡ ಸಾಹಿತ್ಯದಲ್ಲಿ ಇಂತಹವು ಎರಡೇ, ಒಂದು ಶಾಸನದಲ್ಲಿ ಬರುವುದು, ಮತ್ತೊಂದು 'ಸುಕುಮಾರಚರಿತಂ' ಕಾವ್ಯದ್ದು. (ನಾಗವರ್ಮನ ಲಕ್ಷಣ ಪದ್ಯವೂ ಮಾತ್ರಾಗಣಘಟಿತವಾದಂತೆಯೂ ಕಾಣಿಸುತ್ತದೆ!). ಹೀಗಾಗಿ ಶಾಂತಿನಾಥನ ಈ ಷಟ್ಪದಕ್ಕೆ ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ವಿಶೇಷ ಮಹತ್ವವಿದೆ. ಆ ಷಟ್ಪದ ಹೀಗಿದೆ :

ಅದು ಪರಮಾಸ್ಪದ
ಮದು ಪುಣ್ಯಸಂಪದ
ಮದು ಮಹಾಭ್ಯುದಯ ವಿಲಾಸಾವಾಸಂ

ಅದು ದಿವ್ಯಮದು ಸೇಬ್ಯ
ಮದು ಸೌಮ್ಯಮದು ರಮ್ಯ
ಮದು ಸುಖಾಧಾರ ಸಂಸಾರಸಾರಂ (೧೨.೫೦)

ಶಾಂತಿನಾಥ ಹಳಗನ್ನಡವನ್ನು ಬಳಸಿದವನು. ಅವನ ಹೊತ್ತಿಗಾಗಲೇ ಕೆಲವು ಶಬ್ದಗಳು ಹಿಂದೆ ಸರಿದಿದ್ದವು; ಅಂದರೆ ಅಂಥ ಶಬ್ದಗಳನ್ನು ನಾವು ಇತಹ ಕಾವ್ಯಗಳಲ್ಲಿ ಕಾಣಲಾರೆವು. ಆದರೆ ಈತ ಅಂತಹ ಕೆಲವನ್ನು ಬಳಸಿ ತನ್ನ ಶಬ್ದಕೋಶವನ್ನು ಹಿಗ್ಗಲಿಸಿಕೊಂಡಿದ್ದಾನೆ. 'ನೆಕ್ಕೊರವಟ್ಟೆ', 'ಎಕ್ಕಸಿಕ', 'ಕೊಡವಿ', 'ಮಾಸರ', 'ಪುಡುಕುಣರ್' ಮುಂತಾದವನ್ನು ಉಲ್ಲೇಖಿಸಬಹುದು. ಹಾಗಾಗಿ ಈ ಕವಿಯ ಕಾವ್ಯವನ್ನು ನಾವು ಕನ್ನಡ ಶಬ್ದ ಚರಿತ್ರೆಯ ದೃಷ್ಟಿಯಿಂದಲೂ ಅಭ್ಯಸಿಸಲು ಅವಕಾಶವಿದೆ.

'ಕಬ್ಬಿಗರ ಕಾವಂ'

ಸಂಸ್ಕೃತವು ಕನ್ನಡದ ಮೇಲೆ ಸವಾರಿ ಮಾಡಲು ಹೊರಟಾಗ ಅದನ್ನು ಪ್ರತಿಭಟಿಸಿದ ಅನೇಕ ಕವಿಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾಣಸಿಗುತ್ತಾರೆ. ಅವರಲ್ಲಿ 'ಧರ್ಮಾಮೃತ'ದ ಕರ್ತೃ ನಯಸೇನ ಮೊದಲನೆಯವನು. ಅವನಿಗೆ ಸಂಸ್ಕೃತದ ಬಗ್ಗೆ ವಿರೋಧವಿಲ್ಲ; ಕನ್ನಡ ಕಾವ್ಯದಲ್ಲಿ ಅನವಶ್ಯಕವಾಗಿ ಸಂಸ್ಕೃತ ಪದಗಳನ್ನು ಸೇರಿಸುವುದಕ್ಕಷ್ಟೇ ಅವನ ಆಕ್ಷೇಪಣೆ. ಅಲ್ಲದೆ ಕನ್ನಡದಲ್ಲಿ ಚಿಂತಿಸಿ ಸಂಸ್ಕೃತವನ್ನು ಬಳಸುವ ಎಡಬಿಡಂಗಿತನವನ್ನು ಅವನು ವಿಡಂಬಿಸುತ್ತಾನೆ. ತನ್ನ ಕಾವ್ಯದಲ್ಲಿ ಅವನು ಸಾಕಷ್ಟು ಸಂಸ್ಕೃತ ಶಬ್ದಗಳನ್ನು ಬಳಸಿದ; ಆದರೆ ಎಷ್ಟು ಹಿತವೋ ಅಷ್ಟು; ಅಥವಾ ಕನ್ನಡದಲ್ಲಿ ಸಂಪೂರ್ಣವಾಗಿ ಮಿಳಿತಗೊಂಡವನ್ನು ಮಾತ್ರ. ಹಾಗಾಗಿ ಅಂಥವು ಕನ್ನಡದವೇ ಶಬ್ದಗಳಾಗಿಬಿಟ್ಟಿರುವುದರಿಂದ ಅಲ್ಲೇನೂ ವೈಚಿತ್ರ್ಯ ಕಾಣಿಸುವುದಿಲ್ಲ. ಅನವಶ್ಯಕವಾಗಿ ಕನ್ನಡದಲ್ಲಿ ಸಂಸ್ಕೃತವನ್ನು ಸೇರಿಸುವುದಕ್ಕಷ್ಟೇ ಅವನ ವಿರೋಧ; ಹೀಗೆ ಮಾಡುವುದೆಂದರೆ ತುಪ್ಪದ ಜೊತೆ ಎಣ್ಣೆಯನ್ನು ಬೆರಸಿದ ಹಾಗೆ ಎಂಬುದು ಅವನ ಅಭಿಪ್ರಾಯ.

ಆಂಡಯ್ಯ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕನ್ನಡದ ಮೇಲಿನ ಸಂಸ್ಕೃತದ ಸವಾರಿಯನ್ನು ಪ್ರತಿಭಟಿಸುತ್ತಾನೆ. "ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ಪೇಟಿಲಾಜಿರ್ ಇನಿತುಂ ಸಲೆ ಮುನ್ನಿನ ಪೆಂಪನಾಳ್ದ ಕಬ್ಬಿಗರ್" ಎಂಬ ಭಾವನೆಯನ್ನು ಹೋಗಲಾಡಿಸಿ, "ಅಚ್ಚಗನ್ನಡಂ ಬಿಗಿವೊಂದಿರೆ ಕಬ್ಬಿಗರ ಕಾವನೊಲಪಿಂದೊರೆದಂ" ಎಂದು ಹೇಳುವಲ್ಲಿ ಅವನ ನಿಲವು ಸ್ಪಷ್ಟವಾಗುತ್ತದೆ. ತನ್ನ ಕಾವ್ಯದಲ್ಲಿ ನೇರವಾಗಿ ಸಂಸ್ಕೃತ ಶಬ್ದಗಳನ್ನು ಬಳಸುವುದಿಲ್ಲವೆಂಬುದು ಅವನ ಪ್ರತಿಜ್ಞೆ. ಆದರೆ ತದ್ಭವಗಳ ಬಳಕೆಗೆ ಅವನ ವಿರೋಧವಿಲ್ಲ; ಅವುಗಳೂ ಕನ್ನಡ ಶಬ್ದಗಳೆ ಎಂಬುದು ಅವನ ಭಾವನೆ. ತನ್ನ ಪ್ರತಿಜ್ಞೆಯನ್ನು ನೆರವೇರಿಸುವುದಕ್ಕಾಗಿ ಆಂಡಯ್ಯ ಹಲವಾರು ಹೊಸ ಶಬ್ದಗಳನ್ನು ಸೃಷ್ಟಿಸಿಕೊಳ್ಳುತ್ತಾನೆ, ತದ್ಭವಗಳನ್ನು ರೂಪಿಸಿಕೊಳ್ಳುತ್ತಾನೆ. ಇವನ ಮಾರ್ಗವನ್ನು ಮುಂದಿನ ಯಾರೂ ಅನುಸರಿಸದಿರುವುದು ಅಚ್ಚರಿಯ ವಿಷಯವೇನಲ್ಲ. ಏಕೆಂದರೆ ಅವನದು ಕೃತಕ ಮಾರ್ಗವಾಯಿತು. ಅನವಶ್ಯಕವಾಗಿ ಸಂಸ್ಕೃತವನ್ನು ಬಳಸುವುದಿಲ್ಲ ಎಂಬುದು ಸರಿಯಾದ ನಿಲುವೇ; ಆದರೆ ಸಂಸ್ಕೃತ ಶಬ್ದಗಳನ್ನೇ

ಬಳಸುವುದಿಲ್ಲ ಎಂಬುದು ಅಸಹಜ. ಏಕೆಂದರೆ ಬೇರೆ ಭಾಷೆಯ ಶಬ್ದಗಳು ಬೆರೆತುಕೊಂಡು ಜನಬಳಕೆಗೆ ಬಂದರ ಅವು ಕನ್ನಡದವೇ ಆಗಿಬಿಡುತ್ತದೆ. ಕನ್ನಡಿಗರಿಗೆ ಅರ್ಥವಾಗುವುದೆಲ್ಲ ಕನ್ನಡದವೇ, ಹೀಗಾಗಿ ಆಂಡಯ್ಯನ ಕನ್ನಡ ಪ್ರೇಮ ಅನುಕರಣೀಯವಾದರೂ, ಅವನ ಕನ್ನಡ ಬಳಕೆಯ ಮಾರ್ಗ ಅನುಸರಣೀಯವಾಗಲಿಲ್ಲ.

ಆಂಡಯ್ಯನ ಏಕೈಕ ಕೃತಿ ಇನ್ನೂರ ಎಪ್ಪತ್ತೆರಡು ಪದ್ಯಗಳ 'ಕಬ್ಬಿಗರ ಕಾವಂ'. ಇದರಲ್ಲಿ ಇವನು ತನ್ನ ಸ್ವಂತ ವಿಷಯವನ್ನು ಹೆಚ್ಚಿಗೆ ಹೇಳಿಕೊಂಡಿಲ್ಲ; ಆಶ್ರಯದಾತ, ತಾನಿದ್ದ ಮತ್ತು ಕಾವ್ಯರಚಿಸಿದ ಕಾಲ ಇವುಗಳ ಬಗ್ಗೆ ಏನನ್ನೂ ಹೇಳಿಕೊಳ್ಳುವುದಿಲ್ಲ. ಅವನ ಅಜ್ಜ 'ಲೆಕ್ಕಿಗರ ಪಿರಿಯ' ನಾಗಿದ್ದ ಆಂಡಯ್ಯ; ಆತ ಪರಮ ಜನಭಕ್ತ; ಅವನಿಗೆ ಸಾಂತ, ಗುಮ್ಮಟ ಮತ್ತು ವೈಜಣ ಎಂಬ ಮೂವರು ಮಕ್ಕಳು; ಇವರಲ್ಲಿ ಹಿರಿಯನಾದ ಸಾಂತ ಮತ್ತವನ ಹೆಂಡತಿ ಒಲ್ಲವ್ವೆಯರ ಮಗನೇ ತಾನು ಎಂದು ಕವಿ ಹೇಳಿಕೊಳ್ಳುತ್ತಾನೆ. ಹಿರಿಯರಂತೆ ಈತನೂ ಪರಮ ಜಿನಭಕ್ತ. ಕವಿಯ ಹೆಸರು ಅಪರೂಪದ್ದು. ಇದರ ಸ್ವರೂಪದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಪ್ರಾಕೃತದ 'ಆಂಡ' ಎಂಬ ಶಬ್ದದ ಜೊತೆ 'ಅಯ್ಯ' ಎಂಬ ಸಂಬಂಧ ಸೂಚಕ ಪದ ಸೇರಿ ಆಂಡಯ್ಯ ಎಂದಾಗಿರಬಹುದು. 'ಆಂಡ' ಎಂದರೆ ಶಿವ, ಕಾಮದೇವ ಎಂಬ ಅರ್ಥಗಳಿವೆಯಂತೆ. ಆದ್ದರಿಂದ ಆಂಡಯ್ಯ ಎಂಬುದು ಇವನ ಹೆಸರು ಎಂಬುದು ಪ್ರಾಯಶಃ ಒಪ್ಪಬಹುದಾದ ಅಭಿಪ್ರಾಯ.

ಆದರೆ ಆಂಡಯ್ಯನು "ಕಣ್ಣಮಯ್ಯನ (ಕರ್ಣಪಾರ್ಯ) ಕಡುಜಾಣ್, ರನ್ನನ ಮೆಯ್ಸಿರಿ, ಗಜಗನ ಬಿನ್ನಣಂ, ಅಗ್ಗಳನ ಕಾಣ್ಕೆ, ಜನ್ನಿಗನ (ಜನ್ನ) ಜಸಂ" ಇವುಗಳನ್ನು ತನ್ನ ಆದರ್ಶವಾಗಿ ಇರಿಸಿಕೊಂಡಿದ್ದಾನೆ. ಜೊತೆಗೆ ಇವನು ಹರಿಹರನ 'ಗಿರಿಜಾ ಕಲ್ಯಾಣ'ವನ್ನು ನೋಡಿರುವ ಸಾಧ್ಯತೆಯಿದೆಯೆಂದು ಕೆಲವು ವಿದ್ವಾಂಸರು ಭಾವಿಸುತ್ತಾರೆ. ಇವನು ಪ್ರಾಯಶಃ ಸುಮಾರು ಕ್ರಿ.ಶ. ೧೨೭೦ರ ಹೊತ್ತಿಗೆ ತನ್ನ ಕಾವ್ಯವನ್ನು ರಚಿಸಿರಬೇಕೆಂದು ವಿದ್ವಾಂಸರು ಭಾವಿಸುತ್ತಾರೆ. ಆಂಡಯ್ಯನು ಪ್ರಾಯಶಃ ಚಾಲುಕ್ಯರ ಮಹಾಮಂಡಲೇಶ್ವರನಾಗಿದ್ದ ಕದಂಬ ಕಾಮದೇವ (ಕ್ರಿ.ಶ.೧೧೮೦-೧೨೧೭)ನ ಆಶ್ರಯದಲ್ಲಿದ್ದಿರಬೇಕೆಂದು ಮುಳಿಯ ತಿಮ್ಮಪ್ಪಯ್ಯನವರು ವಾದಿಸುತ್ತಾರೆ. ಕಾಮ-ಕಾಮದೇವರ ಸಮೀಕರಣ ಈ ಕಾವ್ಯದಲ್ಲಿ ನಡೆದಿದೆ ಎಂಬುದು ಅವರೊಡನೆ ಇತರ ಅನೇಕ ವಿದ್ವಾಂಸರ ಅಭಿಪ್ರಾಯ. ಕಾಮನ ಗೆಲವಿನ ಬಣ್ಣನೆಯ ನೆವದಲ್ಲಿ ತನ್ನ ಆಶ್ರಯದಾತನ ವೀರಪರಾಕ್ರಮಗಳ ಬಣ್ಣನೆಯಿದೆ ಎಂಬುದು ತಿಳಿವಳಿಕೆ. ಈ ಕಾವ್ಯಕ್ಕೆ ಕವಿ ಕೊಟ್ಟ ಮೂಲ ಹೆಸರು 'ಕಾಮನ ಗೆಲ್ಲ' ಎಂಬುದು. ಅದು ಸಂಸ್ಕೃತೀಕರಣಗೊಂಡು 'ಮದನ ವಿಜಯ' ಎಂಬ ಹೆಸರನ್ನು ಪಡೆಯಿತೆಂದೂ, ಹೇಗೆಯೋ ಈ ಕಾವ್ಯಕ್ಕೆ 'ಸೊಬಗಿನ ಸುಗ್ಗಿ' ಎಂಬ ಹೆಸರೂ ಉಂಟಾಗಿ, ಪ್ರಾಯಶಃ ಪ್ರತಿಕಾರರ ಕೈತಪ್ಪಿನಿಂದಾಗಿ 'ಕಬ್ಬಿಗರ ಕಾವಂ' ಎಂಬ ಹೆಸರು ಬಂದಿದೆಯೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕವಿಗೆ ಅಚ್ಚಗನ್ನಡ ಭಾಷೆಯ ಬಗೆಗಿನ ಒಲವಿನಂತೆಯೇ ಕನ್ನಡ ನಾಡಿನ ಬಗ್ಗೆಯೂ ಅಪಾರ ಅಭಿಮಾನ ಅವನ ಪ್ರಸಿದ್ಧವಾದ ಪದ್ಯವಿದು :

ಪಲವುಂ ನಾಲಗೆಯುಳ್ಳವಂ ಬಗೆವೊಡೆಂಮಂ ಬಣ್ಣಿಸಲ್ಕಾಜಿನಾ
ನೆಲನಂ ಮತ್ತಿನ ಮಾನಿಸರ್ ಪೊಗಟಿಲೇನಂ ಬಲ್ಲರ್ ಎಂಬೊಂದು ಬ

ಲ್ಲುಲಿಯಂ ಸಟ್ಟಸ ತಾಳ್ದು ಕನ್ನಡಮನಿಪ್ಪಾ ನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತ ಕೊಳಂಗಳಿಂ ಕೆಜಿಗೆಳಿಂ ಕಾಲೂರ್ಗಳಿಂ ಕೆಯ್ಗಳಿಂ

ಇದನ್ನು ನೋಡಿದರೆ ಕವಿ ಮಲೆನಾಡಿನ ಪ್ರದೇಶದಲ್ಲಿದ್ದಿರಬಹುದಾದ ಸಾಧ್ಯತೆಯಿದೆ. ಇವನ ಆಶ್ರಯದಾತನಾದ ಕದಂಬ ಕಾಮದೇವನೂ ಕರಾವಳಿ ಪ್ರದೇಶದಲ್ಲಿದ್ದವನು; ಬನವಾಸಿ ಪ್ರಾಂತವನ್ನು ಗೆದ್ದವನು. ಇಡೀ ಕನ್ನಡ ನಾಡು ತಾನು ಬದುಕಿದ್ದ ಪ್ರದೇಶದ ರೀತಿಯಲ್ಲಿಯೇ ಕೊಳ ಕಾಲುವೆ ಕೆರಗಳಿಂದ ತುಂಬಿದೆ ಎಂದು ಹೇಳುವುದರಿಂದ ಈ ಊಹೆ ಮಾಡಬಹುದು.

ಕಥಾ ವಸ್ತು

ಶಿವನು ಕಾಮನನ್ನು ಸುಟ್ಟದ್ದು ವೈದಿಕ ಪುರಾಣಗಳಲ್ಲಿನ ಜನಜನಿತವಾದ ಕತೆ. ಆದರೆ ಅದೇ ಶಿವ ಮುಂದೆ ಕಾಮನಿಗೆ ವಶವಾಗಿ ಗಿರಿಜೆಯನ್ನು ಮದುವೆಯಾದ. ಆದ್ದರಿಂದಲೇ ಅವನು ಅರ್ಧನಾರೀಶ್ವರನಾದ. ಹೀಗಾಗಿ ಅವನು ಪೂರ್ತಿಯಾಗಿ ಕಾಮನನ್ನು ಗೆದ್ದವನಲ್ಲ ಎಂಬ ಅಂಶವನ್ನು ಓಡಿದೂ, ಜೈನ ಪುರಾಣಗಳಲ್ಲಿ ಕಾಮನಿಗಿರುವ ಮಹತ್ವವನ್ನೂ ತೋರಿಸಲೂ ಕವಿ ಈ ವಸ್ತುವನ್ನು ಆಯ್ಕೆಮಾಡಿಕೊಂಡಿರಬೇಕು. ಜೊತೆಗೆ ಕಾಮನನ್ನು ನಿಜವಾದ ಅರ್ಥದಲ್ಲಿ ಗೆದ್ದವನು ಜಿನನು ಮಾತ್ರ ಎಂದು ಪ್ರತಿಪಾದಿಸುವುದೂ ಅವನ ಉದ್ದೇಶ. ಅದರೊಡನೆ, ಬದುಕಿನಲ್ಲಿ ಕಾಮದ ತೀವ್ರತೆಯನ್ನೂ ಅನಿವಾರ್ಯತೆಯನ್ನೂ ತೋರಿಸುವುದೂ ಕವಿಯ ಉದ್ದೇಶವಿರಬಹುದು.

ಕಥಾಸಾರ

ಪೂವಿನ ಪೊಳಲಿನ ರಾಜ ನನೆಯಂಬ. ಅವನಿಗೆ ವಸಂತಋತುವಿನ ಒಂದು ರಾತ್ರಿ ಕನಸೊಂದು ಬಿತ್ತು. ಅದರಲ್ಲಿ ಅವನು ಕಂಡದ್ದು ಬೆಳುಂದಿಗಳ ಕಾಂತಿಯನ್ನೇ ಸೂರೆಗೊಂಡಂತಹ ದೇಹಶೋಭೆಯಿಂದ ಕೂಡಿದ್ದ ಒಬ್ಬ ಸುಂದರಿಯನ್ನು. ಈ ವಿಷಯವನ್ನು ಅವನು ತನ್ನ ಮೇಳದ ಕೆಳೆಯನಾದ ನಗೆಗಾರನಿಗೆ ಹೇಳುತ್ತಾನೆ. ಇದನ್ನು ಕೇಳಿದ ನಗೆಗಾರ, ಅದು ಬೆಳಗಿನ ಜಾವದ ಕನಸಾಗಿರುವುದರಿಂದ, ಬಹು ಬೇಗ ಸುಂದರಿಯೊಬ್ಬಳು ಅವನ ಕೈವಶವಾಗುವಳೆಂದು ನುಡಿಯುತ್ತಾನೆ. ಮುಂದೆ ನನೆಯಂಬನು ವಸಂತಕಾಲದಿಂದ ಕಂಗೊಳಿಸುವ ಉಪವನವನ್ನು ನೋಡಲು ಪರಿವಾರದೊಂದಿಗೆ ಹೋಗುತ್ತಾನೆ. ಮನ್ಮಥನ ನಗರದಂತಿದ್ದ ಆ ಸುಂದರ ವನವನ್ನು ನೋಡುತ್ತ ಬರುತ್ತಿರುವಾಗ, ದುಂಬಿಯನ್ನು ನಾಚಿಸುವ ತಲೆಗೂದಲ ಕಾಂತಿಯಿಂದಲೂ, ಚಕ್ರವಾಕಗಳಿಗೂ ಮಿಗಿಲಾದ ತೋರ ಮೊಲೆಗಳಿಂದಲೂ, ನೆಯ್ದಿಲೆಗಿಂತಲೂ ಚೆಲುವಾದ ಕಣ್ಣುಗಳಿಂದಲೂ, ಕೆಂಪು ಚಿಗುರನ್ನು ಮೀರಿಸುವ ಪಾದಗಳಿಂದಲೂ ಕಂಗೊಳಿಸುವ ಚೆಲುವೆಯೊಬ್ಬಳು ಕಾಣಿಸುತ್ತಾಳೆ. ನನೆಯಂಬನಿಗೆ ಅವಳನ್ನು ನೋಡಿ ಆ ಕನ್ಯೆಯು ಅಪ್ಸರೆ ಇರಬೇಕೆನ್ನಿಸುತ್ತದೆ. ಅವಳ ವಿಚಾರವನ್ನು ತಿಳಿಸಬೇಕೆಂದು ರಾಜನು ಕೇಳಿಕೊಳ್ಳಲು ಅವಳು ತನ್ನ ಪೂರ್ವಕತೆಯನ್ನು ಹೇಳತೊಡಗುತ್ತಾಳೆ.

ಕಂಪಿನ ಪೊಳಲು ಎಂಬುದೊಂದು ಬೀಡು. ಅದರ ರಾಜ ಕರ್ಪೂವಿಲ್ಲ; ಅವನ ಹೆಂಡತಿ ಇಚ್ಚೆಗಾರ್ತಿ. ಅವಳು ಪರಮ ಸುಂದರಿ. ಇಬ್ಬರೂ ತುಂಬ ಅನ್ಯೋನ್ಯವಾಗಿ ಬಾಳುತ್ತಿರುತ್ತಾರೆ.

ಒಂದು ದಿನ ಆಸ್ಥಾನಕ್ಕೆ ಬಂದ ತಂಬೆಲರು ತನ್ನೊಡನೆ ಜೊನ್ನಮಸುಣ್ಪ ಪಕ್ಕಿ ಎಂಬ ದೂತಿಯೊಬ್ಬಳನ್ನು ಕರೆತರುತ್ತಾನೆ, ರಾಜನಿಗೆ ಕಾಣಿಕೆಗಳನ್ನಿತ್ತ ಅವಳು ಈ ರೀತಿ ಬಿನ್ನಹಿಸುತ್ತಾಳೆ : "ನಿನಗೆ ಬಾಗದ ಮತ್ತು ನಿನಗೆ ಸೇವಕರಾಗದ, ನಿನ್ನ ಅಪ್ಪಣೆ ಪಾಲಿಸದ ಯಾರೂ ಇದುವರೆಗೆ ಇರಲಿಲ್ಲ. ಆದರೆ ಈಗ ಶಿವನೆಂಬ ಮಂಜುಬೆಟ್ಟದಲ್ಲಿ ವಾಸಿಸುವ ಗೊರವನು ಸನ್ಯಾಸಿಗಳನ್ನೇ ತನ್ನ ಪರಿವಾರವನ್ನಾಗಿ ಮಾಡಿಕೊಂಡು ನಿನ್ನನ್ನು ಲಕ್ಷಿಸದೆ ಇದ್ದಾನೆ. ನಿನ್ನೆ ರಾತ್ರಿ ಅವನು ಪೆರೆಯನ್ನು ಬಾಳ್ದಲೆವಿಡಿದ್ದಾನೆ. ಇದಕ್ಕೆ ತಕ್ಕುದನ್ನು ನೀನೇ ಬಲ್ಲೆ".

ಇದನ್ನು ಕೇಳಿದ ಕರ್ಪುರವಿಲ್ಲನಿಗೆ ಶಿವನ ಮೇಲಣ ಕೋಪ ಮೇರೆವರಿಯುತ್ತದೆ; ತಕ್ಷಣವೇ ಹೋಗಿ ಮುಕ್ಕಣ್ಣನನ್ನು ಇಕ್ಕಿಮೆಟ್ಟಿ ಚಂದ್ರನನ್ನು ಬಿಡಿಸಿಕೊಂಡು ಬರುತ್ತೇನೆ ಎಂದು ಗರ್ಜಿಸುತ್ತಾನೆ. ಆದರೆ ವಸಂತನು ಅವನನ್ನು ತಡೆದು, ಮೊದಲು ಶಿವನೆಡೆಗೆ ದೂತನೊಬ್ಬನನ್ನು ಕಳಿಸಬೇಕೆಂದೂ, ಸಂಧಾನ ವಿಫಲಗೊಂಡರೆ ಯುದ್ಧಕ್ಕೆ ಹೊರಡಬಹುದೆಂದೂ ನೀತಿನಿಪುಣತೆಯಿಂದ ಸಲಹೆಯೀಯುತ್ತಾನೆ. ಅದನ್ನು ಒಪ್ಪಿದ ದೊರೆ ತಂಗಾಳಿಯನ್ನು ದೂತನಾಗಿ ಶಿವನ ಬಳಿಕಳಿಸುತ್ತಾನೆ. ಅದರಂತೆ ಅವನು ಶಿವನೆಡೆಗೆ ಬಂದು ಕರ್ಪುವಿಲ್ಲನ ವೈಭವಾಡಂಬರಗಳನ್ನೂ ಶೌರ್ಯಪರಾಕ್ರಮಗಳನ್ನೂ ಬಣ್ಣಿಸಿದ ನಂತರ, "ಅಂತಹವನು ನಿಮ್ಮ ಜತೆ ಗೆಳೆತನವನ್ನು ಬಯಸಿರುವುದು ನಿಮ್ಮ ಪುಣ್ಯ. ಅದನ್ನೊಪ್ಪಿ ಈಗಲಾದರೂ ಚಂದ್ರನನ್ನು ಸೆರೆಯಿಂದ ಬಿಡುಗಡೆಗೊಳಿಸಿ" ಎನ್ನುತ್ತಾನೆ. ಇದನ್ನು ಕೇಳಿ ಕೋಪವುಂಟಾದರೂ ಅದನ್ನು ತೋರಗೊಡವೆ ಶಿವನು ರೂಪಿಲ್ಲದ ನನೆವಿಲ್ಲನನ್ನು ಹೀಯಾಳಿಸಿ, "ನಿನ್ನ ಯಜಮಾನನ ಬಾಣಕ್ಕೆ ಪ್ರತಾಪವಿರುವುದಾದರೆ ಯುದ್ಧಕ್ಕೆ ಕರೆ ತಾ. ಯಾರು ಹೆಚ್ಚು ಬಲಿಷ್ಠರೋ ನೀನೇ ನೋಡುವೆಯಂತೆ" ಎಂದು ತೀರ್ಮಾನಿಸಿ ನುಡಿಯುತ್ತಾನೆ.

ತಂಗಾಳಿ ಬಂದು ಸಂಧಾನ ವಿಫಲವಾದುದನ್ನು ದೊರೆಗೆ ತಿಳಿಸಲು, ನನೆವಿಲ್ಲನು ಯುದ್ಧಕ್ಕೆ ಸಿದ್ಧನಾಗುತ್ತಾನೆ. ಅವನ ಅಣತಿಯಂತೆ ರಾಜಗಿಳಿಗಳೆಂಬ ಕುದುರೆಯ ಪಡೆ, ದುಂಬಿಗಳೆಂಬ ಬಿಲ್ವೀರರು, ಕ್ರೌಂಚಪಕ್ಷಿಗಳೆಂಬ ಗುರಾಣಿಯೋಧರು, ಹಕ್ಕಿಗಳ ಸಮೂಹವೆಂಬ ಭರ್ಜಿಯಭಟರು - ಇಂಥ ಒಂದು ಪಡೆಯನ್ನು ವಸಂತನು ಸಿದ್ಧಪಡಿಸುತ್ತಾನೆ. ರಾಜ ಅದರೊಡನೆ ಯುದ್ಧಕ್ಕೆ ಹೊರಡುತ್ತಾನೆ. ದಾರಿಯಲ್ಲಿ ತಾನು ಬರುತ್ತಿದ್ದರೂ ವಿಚಲಿತರಾಗದ ಸವಣರನ್ನು ಕಂಡು ಅವನ ಮೇಲೆ ಕೋಪಗೊಂಡಾಗ, ವಸಂತನು ಅವನನ್ನು ಸಮಾಧಾನಮಾಡಿ, ಅರಿಷಡ್ವರ್ಗವನ್ನು ಗೆದ್ದು ಸ್ಥಿರಮನಸ್ಸಿನಿಂದ ಕೂಡಿರುವ ಈ ಸವಣರ ಮೇಲೆ ಕೈಮಾಡುವುದರ ಬದಲು ಶಿವನ ಮೇಲೆ ನಿನ್ನ ಪರಾಕ್ರಮವನ್ನು ತೋರಿಸು ಎನ್ನುತ್ತಾರೆ. "ತಾಪಸಿಗಳ ಮೇಲೆ ಏರಿ ಹೋದರೆ ನಿನ್ನ ಕಬ್ಬಿನ ಬಿಲ್ಲು ಮುರಿಯದಿರುತ್ತದೆಯೇ, ಹೂಬಾಣಗಳು ಸುಟ್ಟು ಹೋಗದಿರುವುದೇ, ದುಂಬಿಯಿಂದಾದ ಹೆದೆ ಹರಿಯದಿರುವುದೇ, ತಂಗಾಳಿ ಜಾರಿ, ಮಾವು ಒಣಗಿ, ಕೋಗಿಲೆಯ ದನಿ ಇಂಗಿಹೋಗದಿರುವುದೇ?" ಎಂದು ಎಚ್ಚರಿಸುತ್ತಾನೆ. ಅದನ್ನು ಕೇಳಿ ಹಿಂಜರಿದ ನನೆವಿಲ್ಲನು ಸವಣರಿಗೆ ವಂದಿಸಿ ಮುಂದೆ ಸಾಗುತ್ತಾನೆ. ಅಲ್ಲಿಂದ ಮುನ್ನಡೆದ ಅವನ ಸೈನ್ಯ ಕೊನೆಗೆ ರನ್ನಗಲ್ಲು ಎಂಬ ಬೆಟ್ಟದ ಬಳಿ ಬಂದು ಬೀಡು ಬಿಡುತ್ತದೆ.

ಪೂಗಣೆಯನ ಯುದ್ಧಯಾತ್ರೆಯ ವಿಷಯ ತಿಳಿದ ಶಿವನು ಕೆಂಡಾಮಂಡಲವಾಗಿ ಮುನಿಪಡೆಯೊಂದನ್ನು ಸೃಷ್ಟಿಸಿ ವೀರಭದ್ರನ ಮುಂದಾಳುತ್ವದಲ್ಲಿ ಕಾಮನೊಡನೆ ಕದನಕ್ಕೆ ಮುಲು

ಕಳಿಸುತ್ತಾನೆ. ಆ ಸೈನ್ಯದ ಕೆಲವರು ದಾರಿಯಲ್ಲಿನ ಬೆಟ್ಟವನ್ನೇ ಒಡೆದು ಚೆಂಡಾಡುತ್ತಿದ್ದರು; ಮತ್ತೆ ಕೆಲವರು ಸಿಂಹಕ್ಕೆ ಹಲ್ಲಣವನ್ನು ಹಾಕಿ ಸವಾರಿಗೈಯುತ್ತಿದ್ದರು; ಮತ್ತೂ ಕೆಲವರು ಸೂರ್ಯನನ್ನೇ ನುಂಗಲು ಮುಂದಾದರು; ಇನ್ನೂ ಕೆಲವರು ಸಮುದ್ರವನ್ನೇ ಹೀರಿ ಅರ್ಧ ಬರಿದುಗೊಳಿಸಿದರು. ಸರಿ ಎರಡೂ ಪಡೆಗಳ ನಡುವೆ ಘೋರ ಕದನ ಆರಂಭವಾಗುತ್ತದೆ. ದೀರ್ಘ ಕಾಲದ ನಂತರ ನನೆವಿಲ್ಲನು ಶತ್ರುಸೈನ್ಯವನ್ನು ತನ್ನ ತೋಳ್ಬಲದಿಂದ ಹಿಮ್ಮೆಟ್ಟಿಸಿದ; ಅವನ ಎದುರಿನಲ್ಲಿ ವೀರಭದ್ರನು ಸೋತುಹೋದ. ಆ ಮುಂದೆ ಎದುರಾಳಿಯಿಲ್ಲದ ಕಾಮ ಮಂಜುಬೆಟ್ಟವನ್ನು ಮುತ್ತುತ್ತಾನೆ.

ಮುಂದೆ ನಡೆಯುವುದು ಅಪರೂಪದ ಕಾಳಗ; ಶಿವ-ಕಾಮರ ಯುದ್ಧ. ಅದನ್ನು ನೋಡುವ ಸಲುವಾಗಿ ಸಗ್ಗಿಗರೆಲ್ಲ ಆಗಸದಲ್ಲಿ ನೆರೆಯುತ್ತಾರೆ. ಸ್ವಲ್ಪ ಹೊತ್ತಿಲ್ಲಿಯೇ ಶಿವನ ಸೈನ್ಯವೆಲ್ಲ ನುಚ್ಚುನೂರಾಗುತ್ತದೆ. ಆದರೆ ಅದನ್ನು ಲೆಕ್ಕಿಸದ ಈಶನು ಬೆಳ್ಳಿಯ ಬೆಟ್ಟದಂತೆ ದೃಢವಾಗಿ ನಿಂತು ಏಕಾಂಗಿಯಾಗಿ ಕಾಮನನ್ನೆದುರಿಸುತ್ತಾನೆ. ಎದುರಿಗೆ ಅವನನ್ನು ಕಂಡ ಕಾಮನು, "ಕಡುಪಿಂ ಪೂವಿನ ಕೋಲ್ಗಳ್ ಗಡಣಿಸಿ ಕವಿತಂದು ನಾಂಟುವಾಗಳ್ ನಿನ್ನೀ ಜಡೆಯುಂ ತೊವಲುಂ ಪಾವಿನ ತೊಡವುಂ ಲಾಗುಳಮುಂ ಅಡ್ಡಮೇಂ ಬಂದಪುವೇ?" ಎಂದು ಗರ್ಜಿಸಿ ಅವನ ಮೇಲೆ ಏರಿ ಹೋಗುತ್ತಾನೆ. ಈಗಲಾದರೂ ಚಂದ್ರನನ್ನು ಸೆರೆಯಿಂದ ಬಿಡುಗಡೆಗೊಳಿಸಿ ಬದುಕಿಕೋ ಎಂದು ಎಚ್ಚರಿಸುತ್ತಾನೆ. ಇದಕ್ಕೊಪ್ಪದ ಶಿವನ ಮೇಲೆ ಅನಿವಾರ್ಯವಾಗಿ ತನ್ನ ಹೂಬಾಣಗಳ ಮಳೆ ಸುರಿಸುತ್ತಾನೆ. ಹಿಂದೆ ಎಂತೆಂತಹ ಜಿತೇಂದ್ರಿಯರನ್ನೂ ದಿಕ್ಕುಗೆಡಿಸಿದ್ದ ಈ ಬಾಣಗಳು ಈಗಲೂ ನಾಟಿಕೊಂಡಾಗ ಬಲ್ಲಿದರು ಕೋಟಲೆಗೊಳಗಾಗುತ್ತಾರೆ. "ಕಟ್ಟಾಳ್ಗಳೆನಿಪ ರಕ್ಕಸರೆ ಒಟ್ಟಜೆಗೆಟ್ಟಜಿಲೆ, ಸಗ್ಗಿಗರ್ ನೆಲನನೊಂಡಬಟ್ಟಿರೆ, ಕಾಳಗದೆಡೆಯೊಳ್ ತೊಟ್ಟನೆ ಮಾದೇವಿಯರಸಂ ಅರೆವೆಣ್ಣಾದಂ!" ಇದರಿಂದ ಕೋಪಗೊಂಡ ಶಿವನು, "ದೊಡ್ಡವನೆಂಬ ಗೌರವವನ್ನು ತೋರಿಸದೆ ನನ್ನೊಡನೆ ಕಾದಿದೆ; ಈ ತಪ್ಪಿಗಾಗಿ ನೀನು ನಿನ್ನ ಮನಃಪ್ರಿಯೆಯನ್ನು ಸೇರದೆ ಇತರರಿಗೆ ತಿಳಿಯದಂತೆ ಎಲ್ಲಿಯಾದರೂ ಮರೆಯಾಗು" ಎಂದು ಶಾಪವೀಯುತ್ತಾನೆ.

ಈ ಶಾಪದ ವಿಷಯವು ವಸಂತನಿಂದ ತಿಳಿದ ಕೂಡಲೇ ಇಚ್ಚೆಗಾರ್ತಿ ಮೂರ್ಛೆವೋಗುತ್ತಾಳೆ. ವಿರಹಾಗ್ನಿಯಿಂದ ಅವಳ ಕಣ್ಣೀರೆಲ್ಲ ಬತ್ತಿಹೋಗುತ್ತದೆ; ಏಕಾವಳಿಯ ಮುತ್ತುಗಳೆಲ್ಲ ಹರಿದು ಚೆಲ್ಲಾಪಿಲ್ಲಿಯಾಗುತ್ತವೆ; ಶ್ರೀಗಂಧಧ ತಿಲಕವು ಕರಿಕಾಗುತ್ತದೆ. ಸ್ವಲ್ಪ ಕಾಲದ ಬಳಿಕ ಮೂರ್ಛೆಯಿಂದ ಎಚ್ಚೆತ್ತು ಕೊಳದ ತಣ್ಣೀರು, ಮರಳ ದಿಣ್ಣೆ, ಚಿಗುರಿನ ಹಾಸಿಗೆ, ಬಳ್ಳಿಮಾಡ - ಇವುಗಳ ನೆರವು ಪಡೆದು ತನ್ನ ದೇಹದ ಬೆಂಕಿಯನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಿದರೂ ವಿಫಲಳಾಗುತ್ತಾಳೆ. ಎಲ್ಲ ಕಡೆಯೂ ಪ್ರಿಯನಿಗಾಗಿ ಹುಡುಕಾಡಿ ಅವನನ್ನು ಕಾಣದೆ ಕೊರಗುತ್ತಾಳೆ. ಈ ಕತೆಯನ್ನು ಹೇಳಿದ ಅಪ್ಸರೆಯು ಆ ಕಾಮನೇ ನನೆಯಂಬನೆಂದೂ, ತನ್ನ ಮಾತನ್ನು ಕೇಳಿದ ಅವನ ಶಾಪ ವಿಮೋಚನೆಗೊಂಡಿತೆಂದೂ ಮತ್ತೆ ಅವನಿಗೆ ಹಿಂದಿನ ಜನ್ಮ ಪ್ರಾಪ್ತವಾಗುವುದೆಂದೂ ತಿಳಿಸಿ ಮಾಯವಾಗುತ್ತಾಳೆ.

ಅಪ್ಸರೆಯು ಹೇಳಿದ ಈ ಕತೆಯನ್ನು ಕೇಳಿದ ಗಿಳಿಯೊಂದು ಈ ವಿಷಯವನ್ನೆಲ್ಲ ವಸಂತನಿಗೆ ಅರುಹುತ್ತದೆ. ಅವನ ಮೂಲಕ ಇದನ್ನು ತಿಳಿದ ಇಚ್ಚೆಗಾರ್ತಿಯು, ಬಿಸಿಲಿನಲ್ಲಿ ಬೆಂದವನು

ತಂಪು ಕೊಳವನ್ನು ಹೊಕ್ಕಂತೆ, ಪುಲಕಗೊಳ್ಳುತ್ತಾಳೆ. ಶಿವನನ್ನು ಗೆದ್ದು ವಾಪಸಾಗುವ ನನ್ನೆಯಂಬನನ್ನು ಬರಮಾಡಿಕೊಳ್ಳಲು ಊರನ್ನೆಲ್ಲ ಸಿಂಗರಿಸಲು ಡಂಗುರ ಹೊಯಿಸುತ್ತಾಳೆ. ಬಂದ ರಾಜನನ್ನು ಇಚ್ಛೆಗಾರ್ತಿ ಹಾಗು ಪರಿವಾರದವರೆಲ್ಲ ಸಂತಸದಿಂದ ಸ್ವಾಗತಿಸುತ್ತಾರೆ.

ಕಾವ್ಯ ವಿಚಾರ

ಮಹಾಕಾವ್ಯಕ್ಕಿರಬೇಕಾದರ ಘನ ವಸ್ತುವಾಗಲೀ, ವ್ಯಾಪ್ತಿಯಾಗಲೀ ಇರದ ಈ ಕಾವ್ಯ ಹೊರನೋಟಕ್ಕೆ ವೀರಪ್ರಧಾನವಾಗಿ ಕಂಡರೂ ಅದು ದೇಹಬಲವನ್ನು ಸೂಚಿಸದೆ ಕಾಮದ ಬಲ್ಮೆಯನ್ನು ತೋರಿಸುತ್ತದೆ. ಪುರಾಣಗಳಲ್ಲಿ ಬರುವ ಅರ್ಧನಾರೀಶ್ವರನ ಕಲ್ಪನೆಯಲ್ಲಿ ಹುದುಗಿರುವ ಗಂಡು ಹೆಣ್ಣುಗಳ ಅನ್ಯೋನ್ಯತೆಯನ್ನು ಕಂಡುಕೊಂಡ ಆಂಡಯ್ಯನು ಕಾಮದ ಅದಮ್ಯತೆಯನ್ನು ಮನಗಾಣಿಸಲು ಈ ಕಾವ್ಯವನ್ನು ರಚಿಸಿದ್ದಾನೆಂಬುದು ಸ್ಪಷ್ಟ. ಹೀಗಾಗಿ ಕಾಮನು ಶಿವನನ್ನೇ ಗೆದ್ದನೆಂದು ಪ್ರತಿಪಾದಿಸಿ ಜೀವನದ ಪ್ರಬಲ ಶಕ್ತಿಯ ಚಿತ್ರಣವನ್ನು ಕವಿ ನೀಡುತ್ತಾನೆ. ಜೈನಪುರಾಣಗಳಲ್ಲಿ ಕಾಮನಿಗೆ ಶ್ರೇಷ್ಠ ಸ್ಥಾನವಿದೆ. ಅದನ್ನು ಹೇಳುವುದರ ಜೊತೆಗೆ, ಅವನನ್ನು ಗೆದ್ದ ಜಿನನ ಪಾರಮ್ಯವನ್ನು ನಿರೂಪಿಸುವುದೂ ಕವಿಯ ಒಂದು ಆಶಯ. ಇಲ್ಲಿನ ಪಾತ್ರಗಳೆಲ್ಲ, ಪುರಾಣನಿರೂಪಣೆಗೆ ಅನುಗುಣವಾಗಿಯೇ ಮನೋಭಾವಸೂಚಕವಾದ ಸಂಕೇತಗಳಾಗಿವೆ. ಆದರೆ ಎಲ್ಲ ಕಡೆ ವಾಚ್ಯ ವರ್ಣನೆಗೇ ಹೆಚ್ಚು ಪ್ರಾಮುಖ್ಯವಿರುವುದರಿಂದ ಕಾವ್ಯದ ಧ್ವನಿಶಕ್ತಿ ಕುಗ್ಗಿದೆ.

ಕವಿ ಜಿನಪರನಾದರೂ ಅನವಶ್ಯಕವಾಗಿ ಪರನಿಂದೆಗೆ ಕೈಹಾಕದಿರುವುದು ಅವನ ಸ್ಥಿಮಿತತೆಗೆ ಹಿಡಿದ ಕನ್ನಡಿಯಾಗಿದೆ. ಎಷ್ಟೋ ವೈರಾಗ್ಯಪರವಾದ ಕಾವ್ಯಗಳಲ್ಲೂ ಇಣುಕಿರಬಹುದಾದ ಅಸಹ್ಯವೆನ್ನಿಸುವ ಶೃಂಗಾರ ಇಲ್ಲಿಲ್ಲದಿರುವುದು ಅವನ ಔಚಿತ್ಯವನ್ನು ಎತ್ತಿ ತೋರಿಸುತ್ತದೆ. ವರ್ಣನೆಗಳು ಕೂಡ ಹಿತಮಿತವಾಗಿವೆ. ಅನವಶ್ಯಕ ಎಂಬ ವರ್ಣನಾಭಾಗಗಳು ಇದರಲ್ಲಿಲ್ಲ. ಯುದ್ಧರಂಗದಲ್ಲಿ ಶಿವ-ಕಾಮರು ಪರಸ್ಪರ ಮೂದಲಿಕೆಯನ್ನು ಮಾಡುವಾಗ ಕಂಡು ಬರುವ ವಿಡಂಬನೆಯು ಎದುರಾಳಿಗಳಿಬ್ಬರ ಭರ್ತ್ಸನೆಯೆಂಬಂತೆ ಭಾವಿಸಿದಾಗ ಅದು ಸಹಜವೇ ಅನ್ನಿಸುತ್ತದೆ. ಶಿವನಿಗೆ ಸಲ್ಲಬೇಕಾದ ಮರ್ಯಾದೆಯನ್ನು ಸಲ್ಲಿಸಿರುವ ಮೂಲಕ ಆಂಡಯ್ಯನು ಒಂದು ಬಗೆಯಲ್ಲಿ ವೈದಿಕ-ಜೈನ ಬಾಂಧವ್ಯವನ್ನು ಸಾಧಿಸುತ್ತಾನೆ. ಕವಿಯ ಆಶಯಕ್ಕನುಗುಣವಾಗಿ ಇದರದ್ದು ಪರಿಮಿತ ಆದರ್ಶ; ಅದಕ್ಕನುಗುಣವಾಗಿ ಇದೊಂದು ಖಂಡಕಾವ್ಯವಾಗಿ ರೂಪಿತವಾಗಿದೆ. ವಸ್ತುವಿಗೆ ಅನುಗಣವಾಗಿ ಇಡೀ ಕಾವ್ಯವು ಹುಸಿರೌದ್ರದ ವಾತಾವರಣವನ್ನು ಹೊದ್ದಿರುವುದು ತುಂಬ ಸಹಜವಾಗಿದೆ. ಆ ಮಟ್ಟಿಗೆ ಆಂಡಯ್ಯನನ್ನು ನಾವು ಮೆಚ್ಚಬಹುದು.

ಕಾವ್ಯವೈಶಿಷ್ಟ್ಯಗಳು

ಆಂಡಯ್ಯನಿಗೆ ತಾನು ಬಳಸಿರುವ ಕನ್ನಡದ ಸ್ವರೂಪದ ಬಗ್ಗೆ ಅಮಿತ ವಿಶ್ವಾಸ. “ಕನ್ನಡದೊಳ್ಪಿನ ನುಡಿಯಿಂ ಮುನ್ನಿದಜಿೊಳೆ ನೋಡಿ ತಿಳಿದುಕೊಳ್ಳುದು ಚದುರಂ; ರನ್ನದ ಕನ್ನಡಿಯಂ ನಲವಿನ್ನೋಡಿದವಂಗೆ ಕುಂದದೇನಾದಪುದೋ” ಎಂಬ ಆತ್ಮವಿಶ್ವಾಸ ಅವನದು. ಇಡೀ ಕಾವ್ಯ ಕೋಮಲ ಭಾವನೆಗಳ ಆಡುಂಬೊಲವಾಗಿರುವುದರಿಂದ ಕವಿ ಬಳಸುವ ತದ್ಭವಗಳು

ಅವಕ್ಕೆ ಅನುಗುಣವಾಗಿವೆ. ಅವನನ್ನು ಇತರರು ಅನುಸರಿಸಿರಲಿ ಬಿಡಲಿ, ಆಂಡಯ್ಯ ಕನ್ನಡದ ಬಗೆಗಿನ ಅಭಿಮಾನವನ್ನು ಕದಕಿ ಎಚ್ಚರ ಮೂಡಿಸಿದವನು. ಜೊತೆಗೆ ತನ್ನ ಸ್ವಂತಿಕೆಯಿಂದ ಅನೇಕ ಶಬ್ದಗಳನ್ನು ಟಂಕಹಾಕಿ ನುಡಿಯ ಕೋಶವನ್ನು ತುಂಬಿಸಿದ್ದಾನೆ. ನನೆವಿಲ್ಲ, ಇಂಗೋಲ, ಇಂಗೋಲ್ವಿಲ್ಲ, ಕರ್ವುವಿಲ್ಲ, ಪೂಗಣೆಯ, ಕಾವ, ಅಲರ್ಗಣೆಯ, ನನೆಗಣೆಯ, ಅಲರ್ವಿಲ್ಲ, ಕಮ್ಮಂಗೋಲ, ಕಮ್ಮಂಗಣೆಯ, ಪೂಸರಲ, ಅಲರಂಬ, ಅಲರ್ವಿಲ್ಲ, ರೂಪಿಲ್ಲದವ - ಇತ್ಯಾದಿ ಪರ್ಯಾಯಗಳನ್ನು ಕವಿಯು ಕಾಮನನ್ನು ಸೂಚಿಸಲು ಬಳಸಿದರೆ; ಶಿವ, ದುಟ್ಟಗೊರವ, ಮುಕ್ಕಣ್ಣ, ಬಡಗೊರಲ, ನೆತ್ತಿಗಣ್ಣವ, ಕರೆಗೊರಲಂ, ನಂಜುಗೊರಲ, ಮಾದೇವ, ತಿಸುಳಿ, ಎಳದೇವ, ಬಿಸುಗಣ್ಣ, ಬಿಸುಗಣ್ಗೊರವಂ, ಮಾದೇವಿಯರಸ, ಬಾಂದೊಱೆದಲೆಯ, ಉರಿಗಣ್ಣ, ಮೂರು ಕಣ್ಣನ್ ಇತ್ಯಾದಿ ಶಬ್ದಗಳನ್ನು ಶಿವನನ್ನು ಸೂಚಿಸಲು ಬಳಸಿರುವುದನ್ನು ನೋಡಿ. ಹಾಗೆಯೇ ಇಚ್ಛೆಗಾರ್ತಿ, ಜೊನ್ನಮನುಣ್ಬ ಪಕ್ಕಿ, ನಗೆಗಾರ, ನುಡಿವೆಣ್, ಬಿದುಗಲ್, ಅಱಿವಟ್ಟೆಗ, ದಪ್ಪಗ, ಮಲ್ಲಿಗೆಗೋಲ್ ಮುಂತಾದ ಅನೇಕ ಶಬ್ದಗಳನ್ನು ಸಹಜವಾಗಿ ಬಳಸಿರುವ ಆಂಡಯ್ಯ ನಿಜವಾಗಿಯೂ ಶಬ್ದಬ್ರಹ್ಮನೆಂದು ಕರೆಯಬಹುದಾದಷ್ಟು ಬಲ್ಲಿದ. ಇವನ ಅಚ್ಚಗನ್ನಡಪ್ರೇಮವನ್ನು ಈ ದೃಷ್ಟಿಯಿಂದ ಮುಂದೆ ಅನುಸರಿಸಿದವನು ಮುದ್ದಣನೊಬ್ಬನೇ. ಆಂಡಯ್ಯನ ವೀರ ಕನ್ನಡಾಭಿಮಾನ ಮುಂದೆ ಮಹಲಿಂಗರಂಗರಂತಹವರಲ್ಲಿಯೂ ಮಾರ್ದನಿಸಿದೆ. ಹೀಗಾಗಿ ಆಂಡಯ್ಯನು ಕನ್ನಡ ಜಾಗೃತ ಪ್ರಜ್ಞೆಯ ಪ್ರತಿನಿಧಿಗಳಲ್ಲೊಬ್ಬ ಎಂದರೆ ಅತಿಶಯೋಕ್ತಿಯಾಗಲಾರದು.

ಪರಿವಿಡಿ

ಅಱಿವುದು ಧರ್ಮಮಂ ಕಾವ್ಯಧರ್ಮಮುಮಂ ೧
ಸಂಪಾದಕರ ಮಾತು ೧
ಪ್ರಸ್ತಾವನೆ ೧

೧. **ಸುಕುಮಾರಚರಿತಂ** ೧-೧೯೬
೧. ಪ್ರಥಮಾಶ್ವಾಸಂ ೧-೧೫
೨. ದ್ವಿತೀಯಾಶ್ವಾಸಂ ೧೬-೩೧
೩. ತೃತೀಯಾಶ್ವಾಸಂ ೩೨-೪೪
೪. ಚತುರ್ಥಾಶ್ವಾಸಂ ೪೫-೫೬
೫. ಪಂಚಮಾಶ್ವಾಸಂ ೫೭-೬೯
೬. ಷಷ್ಠಾಶ್ವಾಸಂ ೭೦-೮೧
೭. ಸಪ್ತಮಾಶ್ವಾಸಂ ೮೨-೯೬
೮. ಅಷ್ಟಮಾಶ್ವಾಸಂ ೯೭-೧೧೩
೯. ನವಮಾಶ್ವಾಸಂ ೧೧೪-೧೩೪
೧೦. ದಶಮಾಶ್ವಾಸಂ ೧೩೫-೧೫೮
೧೧. ಏಕಾದಶಾಶ್ವಾಸಂ ೧೫೯-೧೮೨
೧೨. ದ್ವಾದಶಾಶ್ವಾಸಂ ೧೮೩-೧೯೬

೨. **ಕಬ್ಬಿಗರ ಕಾವಂ** ೧೯೭-೨೪೮

ಅನುಬಂಧಗಳು ೨೪೯-೩೦೪
೧. ಅನುಬಂಧ-೧ ಶಿಕಾರಿಪುರ ಶಾಸನ ೧೩೬ ೨೫೧-೨೬೦
೨. ಅನುಬಂಧ-೨ ಸುಕುಮಾರ ಚರಿತಂ ಶಬ್ದ ಸೂಚಿ ೨೬೧-೨೮೧
೩. ಅನುಬಂಧ-೩ ಕಬ್ಬಿಗರ ಕಾವಂ ಶಬ್ದ ಸೂಚಿ ೨೮೨-೨೯೮
೪. ಅನುಬಂಧ-೪ ಪಾರಿಭಾಷಿಕ ಪದ ಸೂಚಿ ೨೯೯-೩೦೨
೫. ಅನುಬಂಧ-೫ ಸಹಾಯಕ ಸಾಹಿತ್ಯ ೩೦೩

ಶಾಂತಿನಾಥ ವಿರಚಿತ

ಸುಕುಮಾರ ಚರಿತಂ

ಸುಕುಮಾರ ಚರಿತಂ

೧. ಪ್ರಥಮಾಶ್ವಾಸಂ

ಶ್ರೀಮನ್ನಾಕಾಧಿನಾಥಾನತ ಮಕುಟಮಣಿದ್ಯೋತಿ ತಾಂಘ್ರಿದ್ವಯಂ ನಿ
ಷ್ಕಾಮಂ ಶ್ರೀವರ್ಧಮಾನಪ್ರವರ ಮುನಿಜನಾನಂದ ಸಂಸ್ತುತ್ಯ ಸಿಂಧು
ಸ್ತೋಮಾಳಂಕಾರಿತಾಂಭೋನಿಧಿ ನಿರುಪಮ ಬೋಧಾಕರಂ ಮೋಕ್ಷಲಕ್ಷ್ಮೀ
ಧಾಮಂ ತ್ರೈಲೋಕ್ಯನಾಥಂ ಕುಡುಗೆಮಗಮೃತಾವಾಸಮಂ ವೀರನಾಥಂ ೧

ಪರಮಾನಂತ ಚತುಷ್ಟಯೈಕ ನಿಳಯರ್ ಲೋಕೈಕ ಪೂಜ್ಯರ್ ಪ್ರಸಿ
ದ್ಧರಮೂರ್ತರ್ ನಿರಪಾಯರಕ್ಷರರಜೇಯರ್ ನಿಷ್ಠಿತಾತ್ಮರ್ ಜಗ
ದ್ಗುರುಗಳ್ ಕರ್ಮಕಳಂಕಪಂಕರಹಿತರ್ ತಾಮೆಂಬಿಸಂ ಸಂದ ಸಿ
ದ್ಧರನಂತರ್ ದಯೆಗೆಯ್ವರಕ್ಕೆಮಗಮಂತೋದಾತ್ತ ಸಂಸಿದ್ಧಿಯಂ ೨

ಇರೆ ಷಟ್ತ್ರಿಂಶದ್ಗುಣಂಗಳ್ ತಮಗಮರ್ದಿರಲಾಚಾರಮಯ್ದುಂ ಬೆಡಂಗಿಂ
ದೊರೆವೆತ್ತತ್ಯಂತಮಾಗುತ್ತಿರಲಧಿಗಮಶಿಷ್ಯೋತ್ಕರಾನುಗ್ರಹತ್ವಂ
ನಿರುತಂ ಕೈಗಣ್ಮಿ ಪೊಣ್ಮುತ್ತಿರಲೆಸಗುವ ಚಾರಿತ್ರ ಸಂಶುದ್ಧರೀ ದು
ಸ್ತರ ಸಂಸಾರಾಬ್ಧಿಯಿಂದಂ ಪೊಱಮಡಿಸುಗೆ ಸದ್ಧರ್ಮರಾಚಾರ್ಯರೆಂದುಂ ೩

ನಡೆಯಿಂ ಧರ್ಮದ ಬಟ್ಟೆಯೊಳ್ ಬಿಸುಡಿಮಾ ದುಷ್ಪಾಪ ದುರ್ಮಾರ್ಗಮಂ
ಕಿಡಿಸಿಂ ಶಲ್ಯಕಷಾಯವರ್ಗರಿಪುವಂ ರತ್ನತ್ರಯಜ್ಯೋತಿಯಂ
ಪಡೆಯಿಂ ನೀಮೆನುತಂ ವಿನೇಯಜನಮಂ ಕಲ್ಪಿಪ್ಪುಪಾಧ್ಯಾಯರಾ
ಗಡುಮೆಮ್ಮಂ ಮನಮೊಲ್ದು ಕಲ್ಪಿಸುಗೆ ಸನ್ಮಾರ್ಗೋಪದೇಶಂಗಳಂ ೪

ಪಗೆ ಕರ್ಮಂ ಪೆಱವಲ್ಲವೆಂದಘಕುಲಪ್ರಧ್ವಂಸನೋಪಾಯಮಂ
ಬಗೆಯುತ್ತುಂ ಸಮಸಂದ ಮೂಲಗುಣಮಿರ್ಪತ್ತೆಂಟುಮಂ ತಾಳ್ದಿ ನಂ
ಬುಗೆಯಂ ಮಿಕ್ಕಜೀವಿಂ ಸದಾಚರಿತದಿಂ ಸನ್ಮಾರ್ಗದಿಂ ಸಲ್ವ ಸಾ
ಧುಗಳೆಮ್ಮಂ ದಯೆಯಿಂದೆ ಬೋಧಿಸುತಮಿರ್ಕೆಂದುಂ ಜಿನೇಂದ್ರೋಕ್ತಿಯಂ ೫

ವರಪುಣ್ಯೋದಯಹೇತು ಶಾಶ್ವತಮಹಿಂಸಾಲಕ್ಷಣಂ ಸದ್ಗುಣಾ
ಕರಮೊಳ್ಪಿಂಗೆಜೆವಟ್ಟು ನೆಟ್ಟನೆ ಪುನರ್ಜಾತಕ್ಷಯಶ್ರೀಗೆ ತಾ
(ಯ್ಗ)ರು ರತ್ನತ್ರಿತಯಾವಭಾವಿ ಬಹುಬಂಧಚ್ಛೇದಿ ಸಂಸಾರ ಸಂ
ಹರಣಂ ಧರ್ಮಮದಾರ್ಮಮಕ್ಕೆಮಗೆ ಸಂಸಾರಾಬ್ಧಿತೀರಂಬರಂ ೬

ಸುದತೀಸದ್ರೂಪಮಂ ತಾಳ್ದಿದ ವನಜಭವಪ್ರೇಯಸೀನಾಮಮಂ ತಾ
ಳ್ದಿದ ದುಗ್ಧಾಂಬೋಧಿಯೊಳ್ಪುಟ್ಟಿದ ಜಿನವಚನೋದ್ಭೂತೆ ಸನ್ಮಾರ್ಗದಿಂ ಕಂ
ದದ ಮೆಯ್ಯಿಂ ಮಂಡನಾಳಂಕರಣ ವಚನದಿಂ ವೃತ್ತವಕ್ಷೋಜದಿಂ ಸ
ತ್ಪದದಿಂದೊಪ್ಪಿರ್ದ ವಾಕ್ಸುಂದರಿ ಪರಮವಚೋವೃದ್ಧಿಯಂ ಮಾಡುಗೆಮ್ಮೊಳ್ ೭

ವಿಕಚೇಂದ್ರೀವರವಕ್ತ್ರೆ ಸನ್ಮರಕತಚ್ಛಾಯಾಂಗಿ ರಾಮಾಂಗೆ ವೃ
ತ್ತಕುಚದ್ವಂದ್ವೆ ವಿನೀಳಕುಂತಳೆ ವಿನೇಯಾಧಾರೆ ಸಂಪದ್ಗುಣಾ
ಧಿಕೆ ಸಿಂಹಾಸನೆ ಜೈನಶಾಸನ ವಿಶೇಷೋದ್ಭಾಸೆ ಕೂಷ್ಮಾಂಡಿಯಂ
ಬಿಕೆ ಯಕ್ಷೇಶ್ವರಿ ಕೂರ್ತು ರಕ್ಷಿಸುಗೆ ಭವ್ಯಾನೀಕಮಂ ಸಂತತಂ ೮

ಕನಕಚ್ಛಾಯನಜೇಯಸಂಹನನನೂನಸ್ವಾಪದೇಯಾದಿ ನಾ
ಥನಭೀರಸ್ವಗಿತಂ ಜಿನೇಂದ್ರಪದಪದ್ಮಾರಾಧಕಂ ಸಿಂಧುರಾ
ಸನನಬ್ಜಾಯತನೇತ್ರನೀಗಭಿಮತಂ ಸರ್ವಾಹ್ಣಯಕ್ಷಂ ವಿನೇ
ಯನಿಕಾಯಕ್ಕಭಿವೃದ್ಧಿಯಂ ಕೃತಿಗೆ ನಿರ್ವಿಘ್ನೋದಾತ್ತಸಂಸಿದ್ಧಿಯಂ ೯

ಪುರುಪರಮಜಿನಾದಿ ಪರಂ
ಪರೆಯಿಂ ಶ್ರೀವರ್ಧಮಾನಜಿನಪರ್ಯಂತಂ
ಬರಮರ್ಹದ್ದೀಕ್ಷಿತರಾ
ದರ ಚರಣ ಸರೋಜಮೆಮಗೆ(ಶ)ರಣಕ್ಕೆಂದುಂ ೧೦

ಶ್ರುತಕೈವಲ್ಯ ವಿಭೂತಿಯಂ ತಳೆದು ಶಿಷ್ಯಾನುಗ್ರಹೈಕಾರ್ಥನಿ
ಷ್ಠಿತರಾ ಮೋಕ್ಷುಗಳಾ ಮುನಿಪ್ರವರರಾ ಯೋಗೀಂದ್ರರಾ ಸಂಶ್ರಿತ
ಬ್ರತರಾ ಸಾಧುಗಳೆಂಬಿನಂ ವಸುಧೆಯೊಳ್ ಶ್ರೀ ವಿಷ್ಣುನಂದ್ಯಾಪರಾ
ಜಿತ ಗೋವರ್ಧನ ಭದ್ರಬಾಹುಮುನಿನಾಥಖ್ಯಾತಿಯಂ ತಾಳ್ದಿದರ್ ೧೧

ಜಯಭದ್ರಾಖ್ಯ ಸುಭದ್ರ ಪಾಂಡುಯತಿ ಕಂಸಾಚಾರ್ಯ ಲೋಹಾರ್ಯ ಸ
ಜ್ಜಯಪಾಳಾರ್ಯ ವಿಶಾಖದತ್ತ ಜಯಬಾಹ್ವಾದಿ ವ್ರತೀಕರ್ ತಪೋ
ನಿಯತರ್ ಚಾರುಚರಿತ್ರರೂರ್ಜಿತಯಶರ್ ನಿರ್ಮತ್ಸರರ್ ನಿರ್ಮಳರ್
ನಿಯಮಜ್ಞರ್ ಸರಳಾಗಮಜ್ಞರಮಳರ್ ಸಂದರ್ ಧರಾಚಕ್ರದೊಳ್ ೧೨

ಧೈರ್ಯಪರಸ್ಸ್ವಪರತಪ
ಸ್ಕಾರ್ಯರ್ ತತ್ತ್ವಾರ್ಥಕರ್ತೃಗಳ್ ಜಿನಮತತಾ
ತ್ಪರ್ಯರೆನೆ ಗೃಧ್ರಪಿಂಛಾ
ಚಾರ್ಯರನಾಚಾರ್ಯವರ್ಯರೆನ್ನದರೊಳರೆ ೧೩

ಶ್ರೀ ಮಂದರಸೇನ ಮುನಿ
ಸ್ವಾಮಿಗಳ ಮುನೀಂದ್ರವಂದ್ಯಪದ ಭೂತಬಲಿ
ಸ್ವಾಮಿಗಳ ಪುಷ್ಪದಂತ
ಸ್ವಾಮಿಗಳ ಸಮಾನರೊಳರೆ ಬಗೆವೊಡೆ ಜಗದೊಳ್ ೧೪

ಚತುರಂಗುಲಪ್ರಮಾಣೋ
ಚ್ಛ್ರಿತಋದ್ಧಿಪ್ರಾಪ್ತರಮಳಚಾರಿತ್ರ ಸಮ
ನ್ವಿತ ಗುಪ್ತಿಗುಪ್ತರತ್ಯೂ
ರ್ಜಿತಧೈರ್ಯರ್ ನೆಗೞ್ದಕೊಂಡಕುಂದಾಚಾರ್ಯರ್ ೧೫

ಅವನೀತಳದೊಳ್ ಕವಿ ಗಮ
ಕಿ ವಾದಿ ವಾಗ್ಮಿತ್ವ ತತ್ತ್ವಪಾರಗರೆಂದೇ
ನವಯವದಿಂ ಬಣ್ಣಿಸುವುದೊ
ಭುವನಂ ಶ್ರೀ ಪೂಜ್ಯಪಾದಭಟ್ಟಾರಕರಂ ೧೬

ಆಚಾರಾಂಬುಧಿಪಾರಗರ್ ಜಿತಮದರ್ ಜ್ಞಾನರ್ಧಿಸಂಪನ್ನರು
ರ್ವೀಚಕ್ರಸ್ತುತಪಾದಪಂಕಜರುಪೇಕ್ಷಾಸಂಯತರ್ ನಿಶ್ಚಿತಾ
ಳೋಚಜ್ಞರ್ ಜಿನತತ್ತ್ವತತ್ಪರರಜೇಯರ್ ಶ್ರೀ ಜಟಾಸಿಂಹನಂ
ದ್ಯಾಚಾರ್ಯರ್ ನೆಗೞ್ದರ್ ಪಯೋನಿಧಿಪರೀತಾಶೇಷ ಭೂಭಾಗದೊಳ್ ೧೭

ಪರಮೇಷ್ಠಿ ಸ್ವಾಮಿಗಳೀ
ಭರತಾವನಿಯೊಳಗೆ ನೋೞ್ಪೊಡಿವರೆಂದಿಂತೀ
ಧರೆ ಬಣ್ಣಿಸೆ ನೆಗೞ್ದರ್ ಕವಿ
ಪರಮೇಷ್ಠಿ ಸ್ವಾಮಿಗಳ್ ಸಮಸ್ತಾವನಿಯೊಳ್ ೧೮

ಯಮಿನಾಥೋತ್ತಮ ಸಿಂಹನಂದಿಜಯನಂದ್ಯಾಚಾರ್ಯಪಾದಾರವಿಂ
ದಮನೋರಂತೆ ನಿರಂತರಂನೆನೆವ ಚಿತ್ತಂ ....
....
....ನಿಲ್ಕೆ ಮಚ್ಚಿತ್ತದೊಳ್ ೧೯

ಸದಮಳಚರಿತರನುದ್ಧೂ
ತದೋಷರಂ ವಿಗತರೋಷರಂ ಸಕಳಕಳಾ
ವಿದರಂ ನೆಟ್ಟನೆ ಮಲಧಾ
ರಿದೇವರಂ ದೇವರೆಂದು ಬಣ್ಣಿಪುದು ಜಗಂ ೨೦

ಪರಮಪ್ರಭಾವರಂ ಶ್ರೀ
ಧರ ದೇವರನನುಪಮಾನಜಿನಸಮಯಸಮು
ದ್ಧರಣ ಪರಿಣತ ನಿಜಾಂತಃ
ಕರಣರನಖಿಳಾವನೀತಳಂ ಕೀರ್ತಿಸುಗುಂ ೨೧

ಭೂರಿಕಳಾವಿಬೋಧಿತ ಸುಧಾಕರರೂರ್ಜಿತ ಸಾಧು ಸಂಘನಿ
ಸ್ತಾರಕರಂಗಜಾತ ಮಹಿಜಾತ ವಿದಾರಕರುಗ್ರ ಕರ್ಮಸಂ
ಹಾರಕರತ್ಯುದಾರಕರ ನೂತನಗುಣಾನ್ವಿತ ಚಂದ್ರಕೀರ್ತಿಭ
ಟ್ಟಾರಕರೆಂದು ಬಣ್ಣಿಪುದು ವಾರಿಧಿವೇಷ್ಟಿತ ಭೂರಿಭೂತಳಂ ೨೨

ಮದಹರರೆಂಬುದೂರ್ಜಿತ ಬಹುಶ್ರುತರೆಂಬುದು ಸಾಧುಸಂಗರೆಂ
ಬುದು ಸುಚರಿತ್ರರೆಂಬುದು ಜಿತೇಂದ್ರಿಯರೆಂಬುದು ನಿಷ್ಕಷಾಯರೆಂ
ಬುದು ಗುರುಭಕ್ತರೆಂಬುದು ಗುಣಾನ್ವಿತರೆಂಬುದು ಗುಪ್ತಿಗುಪ್ತರೆಂ
ಬುದು ನಯನಂದಿ ದೇವರನಗಾಧಪಯೋಧಿಪರೀತಭೂತಳಂ ೨೩

ಅಮಿತಜಿನಮಾಳೆಯೊಳ್ ವ
ರ್ಧಮಾನಜಿನನೆಂತುಪಾಂತ್ಯದೊಳ್ ನೆಗಟ್ದವೊಲ
ಪ್ರಮಿತ ಮುನಿಮಾಳೆಯೊಳ್ ವ
ರ್ಧಮಾನಮುನಿ ನೆಗಟ್ದನೀ ಧರಿತ್ರೀತಳದೊಳ್ ೨೪

ಸಮತಾಭಾವನೆ ವರ್ಧಮಾನಮುಚಿತಧ್ಯಾನಕ್ರಮಂ ವರ್ಧಮಾ
ನಮೆ ಮಾನೋನ್ನತಿ ವರ್ಧಮಾನಮಮಳಜ್ಞಾನೋದಯಂ ವರ್ಧಮಾ
ನಮಶೇಷಂ ದಯೆ ವರ್ಧಮಾನಮಖಿಲಸ್ವಾಧ್ಯಾಯಮುಂ ವರ್ಧಮಾ
ನಮೆನಲ್ ತಾಂ ದೊರೆ ವರ್ಧಮಾನಮುನಿಯೊಳ್ ಶ್ರೀವರ್ಧಮಾನಾಹ್ವಯಂ ೨೫

ಕ್ಷಮೆ ಮೆಯ್ ಮಾರ್ದವಮೋಜೆ ಸಾಜಮಳವಟ್ಟಿರ್ದಾರ್ಜವಂ ಸೈಪುಶೌ
ಚಮುದಾತ್ತಸ್ಥಿತಿ ಸತ್ಯಮೊಂದಿದಜಿತಂ ತ್ಯಾಗಂ ಲಸತ್ಕೀರ್ತಿ ಸಂ
ಯಮಮಾಚಾರಗುಣಂ ತಪಂ ಛಲಮಕಿಂಚನ್ಯಂ ನಯಂ ಬ್ರಹ್ಮಚ
ರ್ಯ(ಮೆ) ಮಾನೋನ್ನತಿ ವರ್ಧಮಾನಮುನಿಗ್ಗಕುಂ ಪೆಜಿರ್ಗಕ್ಕುಮೇ ೨೬

ಕಾರ್ಯಮಿವೆ ಸತತಮೆಮಗೆ ಸ
ಪರ್ಯಮಿದೇ ಮುಕ್ತಿಪದಮನೆಯ್ದುವಿನಂ ತಾ
ತ್ಪರ್ಯಮಿದೆ ವರ್ಧಮಾನಾ
ಚಾರ್ಯ ಮಹೈಶ್ವರ್ಯಕರಣ ಚರಣಂ ಶರಣಂ ೨೭

ವಿದಿತವ್ಯಾಕರಣದ ತ
ರ್ಕದ ಸಿದ್ಧಾಂತದ ವಿಶೇಷದಿಂ ತ್ರೈವಿದ್ಯಾ
ಸ್ಪದರೆಂದೀ ಧರೆ ಬಣ್ಣಿಪು
ದು ದಿವಾಕರನಂದಿದೇವಸೈದ್ಧಾಂತಿಗಳಂ ೨೮

ಅನುಪಮ ಗುಣರನುಪಮ ತಪ
ರನುಪಮ ಸಿದ್ಧಾಂತ ವಾರ್ಧಿಪಾರಗರೆಂದೀ
ವನಧಿಪರೀವೃತ ಸಕಳಾ
ವನಿ ಪೊಗಟ್ಬುದು ಸಕಳಚಂದ್ರಸೈದ್ಧಾಂತಿಗಳಂ ೨೯

ಸಂತತಮೊಂದಿ ನಿಂದ ತಪದೊಳ್ ಶ್ರುತದೊಳ್ ಗುಣದೊಳ್ ವಿಶೇಷದಿಂ
ದಿಂತಿವರೆಲ್ಲರಿಂ ಪಿರಿಯರಿಂತಿವರ್ಗಗ್ಗಳದಗ್ರಗಣ್ಯರಾ
ರಿಂತಿವರೆಂದು ಕೀರ್ತಿಪುದು ನೋಡು ದಿವಾಕರ ನಂದಿದೇವ ಸೈ
ದ್ಧಾಂತಿ ಮುನೀಂದ್ರರಂ ನತನರೇಂದ್ರರನಬ್ಧಿಪರೀತ ಭೂತಳಂ ೩೦

ಕಂತುಮದಾಪಹರ್ ತಪದೊಳಿಂತಿವರೆಂದು ಮಹಾಪ್ರಸಿದ್ಧ ಸಿ
ದ್ಧಾಂತಪಯೋಧಿಗಳ್ ಶ್ರುತದೊಳಿನ್ನಿವರೆಂದು ವಿಶೇಷ ಭಕ್ತಿಯಿಂ
ಸಂತತಮಿಂತು ಬಣ್ಣಿಸುತಮಿರ್ಪುದು ನೆಟ್ಟನೆ ಮಾಘಣಂದಿ ಸೈ
ದ್ಧಾಂತಿ ಮುನೀಂದ್ರರಂ ಲವಣವಾರಿಧಿವೇಷ್ಟಿತ ಭೂರಿಭೂತಳಂ ೩೧

ಎನೆ ನೆಗಟ್ದ(ಭ್ಯು)ದಯನಿಕಾ
ಯನಿರತ ಯತಿ ವೃಷಭಚರಣನಳಿನಂಗಳ್ ಪಾ
ವನಚರಿತಂಗಳ್ ಮಾಟ್ಕೆಮ
ಗನೂನದಯೆಯಿಂದಗಾಧ ಬೋಧೋದಯಮಂ ೩೨

ಪರಮತಪೋಧನರಾರೊ
ರ್ವರಿನೊರ್ವರೆ ವಿತಾಂತೇಷಮನುಪಮರತ್ನಂ(?)
ಧರೆಯೊಳಗೊಂದೊಂದಜೆನೊಂ
ದು ರಂಜಿಪಂತಿರೆ ಸಮಗ್ರತಾಗುಣದಿಂದಂ ೩೩

ಪ್ರಕಟಯಶೋನಿಳಯರ್ ತಾ
ರ್ಕಿಕಚೂಡಾಮಣಿಗಳಮಳ ಜಿನಶಾಸನದೀ
ಪಕರಾರಯ್ವಡೆ ಸರ್ವ
ಜ್ಞಕಲ್ಪರಕಳಂಕದೇವರೆಂದಪುದು ಜಗಂ ೩೪

ದೊರೆವೆತ್ತ ತರ್ಕಶಾಸ್ತ್ರದ
ಪರಿಣತಿಗಂ ನೆಗಟ್ದಿ ಚಕ್ರವರ್ತಿ ಸಭೆಯೊಳ್
ಬೆರಲೆತ್ತಿದ್ದರೆಂದೊಡೆ ವಾ
ಜಿರಾಜದೇವರ ಸಮಾನಮಾರೀ ಧರೆಯೊಳ್ ೩೫

ಯಮಕದ ಗಮಕದ ಬಿನ್ನಣ
ಮಮರ್ವಿನೆಗಂ ತತ್ತ್ವಮುಂ ಕವಿತ್ವಮುಮೆತ್ತಂ
ಸಮಸಂದಿರೆ ಪೇೞ್ವೊಜೆಗೆ
ಸಮನಿಲ್ಲ ಧನಂಜಯಂಗೆ ಕವಿತಾಗಮಿಕರ್ ೩೬

ರವಿಯಿಂದೆಂತು ತಮಂ ಮೃಗಾಧಿಪನಿನೆಂತುಗ್ರದ್ವಿಪಂ ತೀವ್ರವಾ
ಯುವಿನೆಂತಭ್ರಕುಳಂ ತೆರಳ್ವ ತೆಱದಿಂ ಮಿಥ್ಯಾರಜಂ ತೂಳ್ದು ವಾ
ಱುವಿನಂ ನಿರ್ಮಳಧರ್ಮಮೊಂದಿ ನಿಲೆ ಪೇೞ್ದಿಂ ಪಂಪನತ್ಯಂತ ಸೌ
ಷ್ಠವದಿಂ(ದಾದಿ) ಪುರಾಣಮಂ ಬುಧಜನಪ್ರಸ್ತುತ್ಯ ಕಲ್ಯಾಣಮಂ ೩೭

ನಿರುಪಮ ನವರಸ ರಸಿಕತೆ
ದೊರೆವೆತ್ತಿರೆ ದೇಸೀ ದೇಸೆವೆತ್ತಿರೆ ಪರಮಾ
ದರದಿಂ ಶಾಂತಿಜಿನೇಶ್ವರ
ಪುರಾಣಮಂ ಪೇೞ್ದ ಪೊನ್ನನಂ ಪೊಗೞದರಾರ್ ೩೮

ಜಾಣಿನ ಬೆಡಂಗು ವಿಬುಧ
ಪ್ರೀಣನಕರಮೆನಿಸಿ ನೇರ್ಪುನೇರ್ವೊಡೆ ಪೇೞ್ದಿಂ
ಪ್ರಾಣಿಹಿತಾರ್ಥದಿನಜಿತ ಪು
ರಾಣಮನಳವಟ್ಟ ಕವಿತೆಯಿಂ ಕವಿರತ್ನಂ ೩೯

ಅವಿರಳ ಸಮ್ಯಕ್ತ್ವದೊಳಂ
ಕವಿತೆಯ ಬಲ್ಮೆಯೊಳಮೀ ಮಹೀಮಂಡಲದೊಳ್
ಕವಿ ಪಂಪನ ಕವಿ ಪೊನ್ನನ
ಕವಿರತ್ನನ ದೊರೆಗಮೊರೆಗಮೇಂ ಬಂದಪರೇ ೪೦

ಕವಿಪರಮೇಶ್ವರನೆನಿಸಿದ
ಕವೀಂದ್ರಚೂಡಾಮಣಿಯ ಕವಿತ್ವಂ ತತ್ತ್ವ
ಕ್ಕವಳಂಬನಮಾದುದು ಸ
ತ್ಕವಿಗಳ್ ಪೆಱರೊಳಕೆ ಕವಿಗಳಾದಿತ್ಯನವೊಲ್ ೪೧

ಸುಕರ ರಸಭಾವದಿಂ ಸಾ
ತ್ವಿಕ ಸೌಂದರ್ಯದಿನಪೂರ್ವ ಪದಗತಿಯಿಂದಾ
(ರ್ೖ)ಕೆಯ ದೊರೆಯೆನಿಸಿ ಕೃತಿ ಚತು
ರ ಕವಿಕದಂಬಕದ ಬಗೆಯನುಗಿಯಲ್ವೇಡಾ ೪೨

ವಿಪುಲ ಪದರಚನೆ ಪದರಚ
ನೆ ಪೊಚ್ಚ ಪೊಸದೇಸೆ ದೇಸೆ ಪೊಸ ಬಗೆ ಬಗೆ ರಂ
ಜಿಪ ರಸಿಕತೆ ರಸಿಕತೆ ಕುಸಿ
ವ ಪಸರಿಸುವ ರೀತಿ ರೀತಿಯೆನೆ ಮೆಚ್ಚದರಾರ್ ೪೩

ರಸದೊಳಮರ್ಕೆ ಬಿನ್ನಣದೊಳೊಟ್ಟಜೆ ಮಾತಿನ ರೀತಿಯೊಳ್ ಚಲಂ
ಕುಸಿವ ನಿಮಿರ್ಚುವೋಜೆಯೊಳುದಾತ್ತತೆ ಸೂಕ್ತಿಯೊಳರ್ಥಯುಕ್ತಿ ಕಾ
ಳಸೆಯೊಳಪೂರ್ವಭಂಗಿ ಪೊಸದೇಸೆಯೊಳೊಂದಿದ ಮಾರ್ಗಮೊಳ್ಪುವೆ
ತ್ತೆಸೆದಿರೆ ಪೇಟ್ದು ರಂಜಿಸದೆ ಕೆಮ್ಮನೆಬಲ್ಮೆಗೆ ಮುಯ್ಯನಾಂಪುದೇ ೪೪

ಪ್ರತಿಭಾಸಂಸ್ಕೃತಿಯಿಂದಳಂಕೃತಿಯನರ್ತ್ಥವ್ಯಕ್ತಿಯಿಂ ಸೂಕ್ತಮೀ
ಕೃತಿ ಪುಣ್ಯಕೃತಿ ತಾಂ ಚಮತ್ಕೃತಿವಿಲಾಸಾವಾಸಮೆಂದೆಂದು ಪಂ
ಡಿತರೆಲ್ಲಂ ಬಗೆಗೊಂಡು ಕೊಂಡುಕೊನೆಯುತ್ತಿರ್ಪನ್ನೆಗಂ ಪೇಱಿದು
ದ್ಧತ ಚಾಪಲ್ಯನ ಪೇಟ್ದಿ ಕಾವ್ಯಮನದಂ ಕೈಕೊಳ್ವರಾರ್ ಕೇಳ್ವರಾರ್ ೪೫

ಸುಕಥಾಳಾಪಮನೋತು ಪೇಟ್ವುದು ಪದಾರ್ಥಾರ್ಥೋಕ್ತಿಯಿಂ ಶಾಸ್ತ್ರವ
ಸ್ತುಕವೀಂದ್ರರ್ಬಗೆಗೊಳ್ವಿನಂ ಬಿಸುಟು ಮಿಥ್ಯಾಮಾರ್ಗಮಂ ಮಾಯೆ ಲೌ
ಕಿಕಮಂ ತತ್ತ್ವವಿರುದ್ಧಮಂ ಕುಮತಮಂ ಕುಸ್ಪಷ್ಟ ನಾನಾ ಕುಹೇ
ತುಕ ದೃಷ್ಟಾಂತ ಕುಮಾರ್ಗ ಕುತ್ಸಿಕ ಕುಭಾಷಾದ್ಯಾದಿ ದೋಷಂಗಳಂ ೪೬

ಭಾಷಾಸಂಸ್ಕರಣಮಾಣನಯನಿಕ್ಷೇಪರ್ ಜಿನೇಂದ್ರಾಗಮಾ
ಶೇಷಜ್ಞರ್ ನಿಕಷಜ್ಞರಪ್ಪುದುಚಿತಂ ವಿದ್ವತ್ಸಭಾಮಧ್ಯದೊಳ್
ಕಾಳೋಗ್ರೋರಗನಂತೆ ದಾರುಣಮುಖರ್ ದುಷ್ಟರ್ ಖಳರ್ ದುರ್ಮುಖರ್
ದೋಷಾನ್ವೇಷಣರಪ್ಪವರ್ ಪಱೆದೊಡೇನಂ ಮಾಟ್ಪರೇಗೆಯ್ಯರೋ ೪೭

ಗುಣದೊಷಮಿದೆಂದಱಿಯರ್
ಗುಣಂಗಳಂ ದೋಷಮೆಂದು ದೋಷಂಗಳುಮಂ
ಗುಣಮೆಂದು ಪೞಿವ ಪೊಗೞ್ವವ
ಗುಣಿಗಳ ಗುಣಮಂ ಗುಣಜ್ಞನೇನೆಣಿಸುವುದೇ ೪೮

ಜಿನಮಾರ್ಗಂ ಸ್ವೈರಮಾರ್ಗಂ ಜಿನಮತಮೆ ಮತಂ ಜೈನಧರ್ಮಂ ಸ್ವಧರ್ಮಂ
ಜಿನತತ್ತ್ವಂ ಸೂಕ್ತತತ್ತ್ವಂ ಜಿನಚರಿತಮೆ ನಿರ್ಣೀತ ಚಾರಿತ್ರಮಾದ
ತ್ತೆನಸುಂ ವಿದ್ವಜ್ಜನಂ ಬಣ್ಣಿಸೆ ನೆಗೞ್ದುದಱೆಂದೀತನತ್ಯಂತ ವಿದ್ವ
ಜ್ಜನಸಂದೋಹ ಪ್ರಣೂತಂ ಪರಮಜಿನಮತಾಂಭೋಜಿನೀರಾಜಹಂಸಂ ೪೯

ಜಿನವಚನವಿನಿರ್ಗತ ವಾ
ಗ್ವನಿತೆಗೆ ಮಾಂಗಲ್ಯಕಾರಣಂ ಮಂಡನಮೀ
ತನ ವಾಗ್ವಿಲಾಸಮಾದ
ತ್ತೆನಿಸಿದನೀತನೆ ಸರಸ್ವತೀಮುಖಮುಕುರಂ ೫೦

ಕ್ಷಯವೃಜಿನಂ ಜಿನಸಮಯಂ
ಸ್ಮಯರಹಿತಂ ಹಿತವಚಃಪ್ರಿಯಂ ಪ್ರಿಯಧರ್ಮಂ
ಪ್ರಯತಯುತಂ ಸದ್ವಿನಯಂ
ನಯವಾಕ್ಪಸರಂ ಸರಸ್ವತೀಮುಖಮುಕುರಂ ೫೧

ಸಹಜಕವಿ ಚತುರಕವಿ ನಿ
ಸ್ಸಹಾಯಕವಿ ಸುಕವಿ ಸುಕರಕವಿ ಮಿಥ್ಯಾತ್ವ
ಪ್ರಹರಕವಿ ಸುಭಗಕವಿ ನುತ
ಮಹಾಕವೀಂದ್ರಂ ಸರಸ್ವತೀಮುಖಮುಕುರಂ ೫೨

ಅಸಹಾಯನಾಗಿಯುಂ ಸುಜ
ನ ಸಹಾಯಂ ಮದವಿಹೀನನಾಗಿಯುಮೂರ್ಜಿ
ಪ್ರಸರೋತ್ಕಟನಾದಿಕನಂ
.... ೫೩

....
....
ಪ್ರಕಟಯಶಂ ಜೈನೇಂದ್ರಾಂ
ಘ್ರಿಕಮಲಭೃಂಗಂ ಸರಸ್ವತೀ ಮುಖ ಮುಕುರಂ ೫೪

ಜನಕಂ ಶ್ರೀ ಜೈನಭಾಸ್ವತ್ಕ್ರಮಯುಗಲಸರೋಜಾತಭೃಂಗಂ ವಿಶಿಷ್ಟೇ
ಷ್ಟವಿದಾನಂ ಸತ್ಯರತ್ನಾಕರನೆನಿಸಿದ ಗೋವಿಂದರಾಜಂ ಮುನೀಂದ್ರಾ
ಭಿನುತ ಶ್ರೀವರ್ಧಮಾನಬ್ರತಿಪತಿಗಳುಪಾಧ್ಯಾಯರಾರ್ಹಂತ್ಯಧರ್ಮಂ
ತನಗಾರ್ಮಂ ಭೂಷೆ ರತ್ನತ್ರಯಮನೆ ನೆಗಟ್ದಿಂ ಧಾತ್ರಿಯೊಳ್ ಶಾಂತಿನಾಥಂ ೫೫

ಸುಂದರ ತುಹಿನಾಚಳ ಸಂ
ಕ್ರಂದನಗಜ ಶಾರದಾಭ್ರ ತಾರಾದ್ರಿ ಪಯಃ
ಕುಂದೇಂದು ಯಶೋಭಾಸುರ
ನೆಂದು ಮನಂಗೊಂಡು ಕೊಂಡುಕೊನೆದಾದರದಿಂ ೫೬

ಮಿಗಿಲಾಗಿರ್ದಭಿದಾನಸಂಹತಿಗಳಂ ಮೆಯ್‌ಮೆಯ್ಯೊಳಿಟ್ಟಟ್ಟಿಜಿಂ
ಪೊಗಟಿಸ್ದೋರಂತೆ ಸಮಸ್ತ ವಸ್ತುಕವಿಗಳ್ ಚೆಲ್ವಪ್ಪಿನಂ ಬಂಧುರೋ
ಕ್ತಿಗಳಿಂ ನೀನಭಿವರ್ಣಿಸಿಂತಿದನೆನಲ್ ಕೈಕೊಂಡು ತಾತ್ಪರ್ಯದಿಂ
ಬಗೆದೆಂ ಬಣ್ಣಿಸಲುಂತೆ ಮೊಗ್ಗೆ ಜಿನಧರ್ಮಖ್ಯಾತಿಯಂ ಬಣ್ಣಿಸಲ್ ೫೭

ಅಮಳಕೃತಿ ತಾಯೆತ್ತಭ್ರ(?)
ಸಮಾಲ್ಪಮತಿಯೆತ್ತ ಪೇಟ್ವೆನಾಂ ಗಡಮೇಂ ಚಿ
ತ್ರಮೊ ಬಹುಳ ಬಹಳ ಗಗನ
ಪ್ರಮಾಣಮಂ ತಳದೊಳಳೆದು ಕಂಡರುಮೊಳರೇ ೫೮

ಭುವನಸ್ತುತ್ಯಜಿನಸ್ತವಂಗಳೊಳಗೊಂದಂ ಚಿತ್ತದೊಳ್ಮೆಚ್ಚಿ ಬೆ
ಚ್ಚವೊಲೆತ್ತಾನುಮೊಱಲ್ದು ಚಿಂತಿಸಿದವಂಗಂ ಸಾರ್ವ ಪುಣ್ಯಾಸ್ರವಂ
ಪವಣೆಲ್ಲೆಂದೊಡೆ ಮೇರೆಯಿಲ್ಲದ ಜಿನೋಕ್ತಾರ್ಥೋಕ್ತಿಯಂ ವ್ಯಕ್ತಮಾ
ಗೆ ವಲಂ ಭಕ್ತಿಯಿನೋತು ಪೇಟ್ದವನ ಪುಣ್ಯಪ್ರಾಪ್ತಿ ಸಾಮಾನ್ಯಮೇ ೫೯

ಪರಮಾತ್ಮಂ ನಿಷ್ಠಿತಾತ್ಮಂ ಜಿನಪತಿ ಪರಮಸ್ವಾಮಿ ಸದ್ಧರ್ಮಮಾರ್ಮಂ
ಗುರು ವಂದ್ಯಂ ವರ್ಧಮಾನ ವ್ರತಿಪತಿ ಸುಕುಮಾರಂ ಕಥಾನಾಯಕಂ ತ
ಚ್ಚರಿತಂ ಕಾವ್ಯಂ ಮದೀಯಾನುಜನನುಬಲಮೆಂದಂದೆ ದಲ್ ಮದ್ವಚೋವಿ
ಸ್ತರ ವಿನ್ಯಾಸಂ ಬಲಂಬೆತ್ತುದು ಪೆಱರ್ಗದನಿಂತಂತೆನಲ್ಕೆಂತು ತೀರ್ಗುಂ ೬೦

ಈ ಕೃತಿ ಕೇಳ್ದ ಭವ್ಯನಿವಹಕ್ಕೆ ಚಮತ್ಕೃತಿ ಮೆಚ್ಚುವೊಂಗೆ ಪು
ಣ್ಯಾಕೃತಿ ಭಾರತೀಸತಿಗೆ ಮಾಡಿದಳಂಕೃತಿ ಪುಷ್ಪಚಾಪ ಬಾ
ಣಾಕೃತಿ ಬಾಜಿಪೊಂಗೆ ಮುಕುರಾಕೃತಿ ಭಾವಿಸುವಂಗಗಾಧ ಬೋ
ಧಾಕೃತಿಯೆಂದೊಡಾರ್ಗಮಿದನಂತೆನಲುಂತೆನಲೆಂತು ತೀರ್ಗುಮೊ ೬೧

ಸುಕವೀಂದ್ರರುಂ ವಿನೇಯ
ಪ್ರಕರಣಮುಮುಱಿದವಱೊಳೇನನಿಂ ನೋಡುವರೀ
ಸುಕುಮಾರಚರಿತದೊಳ್ ನೋ
ಱ್ಪ್ಕೆ ಕಾವ್ಯಧರ್ಮಮುಮನಮಳಜಿನಧರ್ಮಮುಮಂ ೬೨

ನಿಯತಂ ಚತುರನುಯೋಗ
ಪ್ರಯೋಗ ಪೂರ್ವಾನುಯೋಗ ಸಾಗರವೀಚೀ
ಚಯದಿಂ ಪೊಱಪೊಣ್ಮಿದುದತಿ
ಶಯ ಸುಕಥಾನೂತ್ನ ರತ್ನ ರಶ್ಮಿ ಕಳಾಪಂ ೬೩

ಶ್ರೀಮದಘಾರಿ ವೀರಜಿನಸನ್ನಿಧಿಯೊಳ್ ವಿಪುಲಾದ್ರಿಯೊಳ್ ಜಿನ
ಸ್ವಾಮಿಮತೋಕ್ತಿಯಂ ಮಗಧನಾಯಕನಂ ತಿಳಿವಂತು ಗೌತಮ
ಸ್ವಾಮಿಗಳಱ್ಕಱಿಂ ತಿಳಿಯೆ ಪೇೞ್ದುದನೂರ್ಜಿತಮಾಗೆ ಪೇೞ್ವೆನು
ದ್ದಾಮಕವಿತ್ವತತ್ವರುಚಿಯಿಂ ಸುಕುಮಾರ ಕಥಾಪ್ರಬಂಧಮಂ ೬೪

ವ|| ಅದೆಂತೆಂದೊಡಖಿಲಕರಿಮಕರದಂತಘಾತೋಚ್ಚಲಚ್ಛೀಕರೋತ್ತುಂಗ ಭಂಗುರತರತ್ತರಂಗಮಾಲಾಕೀರ್ಣ ಲವಣಾರ್ಣವ ಪರಿವೃತಮುಮೇಕ ಲಕ್ಷ ಪರಿಮಾಣ ಯೋಜನ ಶುಂಭದ್ವಿಷ್ಕಂಭಮುಂ ಸಮವೃತ್ತಾಕಾರಪ್ರಕಾರಮುಂ ಪೂರ್ವಾಪರಾಯತ ಹಿಮವನ್ಮಹಾಹಿಮವನ್ನಿಷಧನೀಲರುಕ್ಮಿಶಿಖರಿ ನಾಮಾಭಿರಾಮವರ್ಷ ಧರ ಧರಾಧರಾವಭಾಸಿಯುಂ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯ ವತೈರಾವತಾಭಿದಾನ ಕ್ಷೇತ್ರಸಪ್ತಕ ವಿರಾಜಿತಮುಂ ಗಂಗಾ ಸಿಂಧು ರೋಹಿದ್ರೋಹಿ ತಾಸ್ಯಾ ಹರಿದ್ಧರಿಕಾಂತಾ ಸೀತಾಸೀತೋದಾನಾರೀ ನರಕಾಂತಾ ಸುವರ್ಣಮಾಲಾ ರೂಪ್ಯ ಕೂಳಾರಕ್ತಾರಕ್ತೋದಾಪ್ರಭೃತಿ ಚತುರ್ದಶಮಹಾನದೀಪ್ರವಾಹಕಮಯುಮುಂ ಜಂಬೂವೃಕ್ಷಲಾಂಛನರಮಣೀಯಮುಮಾಗಿ ನೆಗೞ್ತೆಗಂ ಪೊಗೞ್ತೆಗುಮಗುಂದಲೆಯಾದ ಜಂಬೂದ್ವೀಪದ ನಟ್ಟನಡುವೆ

ಇಳೆಯಂ ಸಾಸಿರಯೋಜನಂಬರೆಗಮಾನುರ್ಚ್ಚಿರ್ದನಿರ್ದುಂ ಮಹೀ
ತಳಮಧ್ಯಸ್ಥನೆನಂತುಮಲ್ಲದೆಯುಮಿಂದ್ರಾವಾಸಮಂ ಮುಟ್ಟಿದಂ
ಬೆಳಗುತ್ತಿರ್ಪ್ಪವು ತಾರತಾಪ್ರಭೃತಿಗಳ್ತಾವೆನ್ನನೆಂಬೊಂದು ಪೆಂ
ಪಳವಟ್ಟಿರ್ಪಿನಮಂತದೇನೆಸೆದುದೋ ತನ್ಮಂದರೋರ್ವೀಧರಂ ೬೫

ಅನಿಮೇಷಾವಳಿ ಮಾಳೆಗಟ್ಟಿ ತರದಿಂ ದುಗ್ಧಾಬ್ಧಿಯಂ ಮುಟ್ಟಿ ಕಾಂ
ಚನರೂಪ್ಯಂಗಳ ಕುಂಭದಿಂ ಮೊಗೆದು ಜೈ ಜೈಯೆಂಬಿನಂ ಪಾಕಶಾ
ಸನ ಹಸ್ತಾಗ್ರದೊಳೆತ್ತಿ ತಂದು ಕುಡೆ ಕೊಂಡಿಂದ್ರಂ ಜಿನೇಂದ್ರಂಗೆ ಮ
ಜ್ಜನಮಂ ಕುಂದದೆ ಮಾೞ್ಪನೆಂದೊಡದಱೊಳ್ಪಂ ಬಣ್ಣಿಸಲ್ಬರ್ಕುಮೇ ೬೬

ಒಗೆದುಚ್ಚೋನ್ನತಿಯೊಂದು ಪೆಂಪು ಸಲೆ ಸೂರ್ಯೇಂದುಗ್ರಹಾನೀಕಮೋ
ಲಗಿಸುತ್ತುಂ ಬಲವರ್ಪ ಪೆಂಪು ಜಿನನಾಥಸ್ನಾನಕಲ್ಯಾಣದಿಂ
ಜಗದೊಳ್ಪೊಂಪುಳಿವೋದ ಪೆಂಪು ಸುರಕೇಳೀಲೀಲೆಯಿಂ ತಳ್ತ ಪೆಂ
ಪು ಗಿರೀಂದ್ರಾಹ್ವಯಮಾದ ಪೆಂಪು ಮಿಗೆ ಪೆಂಪಂ ಪೆತ್ತುದಾ ಪರ್ವತಂ ೬೭

ಮಹಿಮೆವಡೆದಿಂತು ಸೊಗಯಿಸು
ವ ಹೇಮಕುತ್ಕೀಳದಿಂದೆ ತೆಂಕಣದೆಸೆಯೊಳ್
ಮಹಿ ಭರತಂ ಷಟ್ಖಂಡಾ
ವಹಮಲ್ಲಿ ಶುಭಾವಹಂ ವಿನೀತಾಖಂಡಂ ೬೮

ಅದು ಪೆಂಪಿಂಗೆ ತವರ್ ಸುಖಕ್ಕೆ ಕಣಿ ಸೌಖ್ಯಕ್ಕಾಗರಂ ಲೀಲೆಗಾ
ಸ್ಪದಮಾಯಕ್ಕೆಱೆವಟ್ಟು ಭೋಗದ ನೆಲಂ ಸದ್ಧರ್ಮದಾರ್ಮಂ ವಿಲಾ
ಸದ ತಾಣಂ ಚದುರಿಂಗೆ ತಾಯ್ ಗುರು ವಿನೋದಕ್ಕಾದಿ ತನ್ಮಧ್ಯಸಂ
ಪದಮಾಗಿರ್ದುದು ವತ್ಸಮೆಂಬುದು ಜನಾಂತಂ ಸಂತತೋತ್ಸಾಹದಿಂ ೬೯

ಆ ವತ್ಸವಿಷಯಮಖಿಲೋ
ರ್ವೀವದನಾಳಂಕೃತಂ ಧರಿತ್ರೀಕಾಂತಾ
ಲಾವಣ್ಯಹೇತು ಭೂಲಲ
ನಾವದನಲಲಾಮಮೆಂಬಿನಂ ಸೊಗಯಿಸುಗುಂ ೭೦

ಬಳಸಿರ್ದುದ್ಯಾನಮುದ್ಯಾನದೊಳೊದವಿದ ಪದ್ಮಾಕರಂ ಪದ್ಮಷಂಡಂ
ಗಳೊಳೆತ್ತಂ ಸುತ್ತುಗೊಂಡಿರ್ದಳಿಕುಳಮಳಿನೀಗೇಯದೊಳ್ಕೂಡಿ ತಳ್ತಿಂ
ದೊಳಮಿಂದೋಳಕ್ಕಳಂಕಾರಮನೊದವಿಸುವುತ್ಕೋಕಿಲಂ ಕೋಕಿಲಾಳೀ
ಕುಳನಾದಕ್ಕಾದಮೊಳ್ಪಂ ಪಡೆವ ಶುಕನಿಕಾಯಂ ಕರಂ ರಯ್ಯಮೆತ್ತಂ ೭೧

ಬಗೆಗೊಳಿಸಿರ್ದ್ದ ಮಾಧುಫಲಮುಣ್ಬುವ ಕಂಪನೆ ಬೀಱುತಿರ್ಪ ಸಂ
ಪಗೆ ಕರಮೊಪ್ಪಿ (ತೋರ್ಪ) ವಕುಳಂ ದೊರೆವೆತ್ತು ಮಡಲ್ತ ಬಳ್ಳಿಮ
ಲ್ಲಿಗೆಗಳ ಬಳ್ಳಿಮಾವುಗಳ ಬಳ್ಳಿಗವುಂಗಿನ ಬಳ್ಳವಳ್ಳಿಯೊಂ
ದಗಣಿತಲೀಲೆ ನೋಟ್ಪ ಜನಮಾಳೆಗೆ ಸೋಲಮನುಂಟುಮಾಡುಗುಂ ೭೨

ಮೊರೆವುನ್ಮತ್ತಮಧುಬ್ರಜಂ ಸುಳಿವಕಾದಂ(ಬಂ)ತೆಱಿಂಬೊಯ್ದು ಭೋ
ರ್ಗರೆದೆತ್ತಂ ಪುಗಲೆಂಬ ಕೋಕಿಲೆ ಸಮಂತಾದಟ್ಟಿಕೆಂ ಕೂಡುತಿ
ರ್ಪ ರಥಾಂಗಂ ನಲಿದಾಡಿ ನರ್ತಿಪ ನವಿಲ್ ಬಂಡುಂಬ ಪೆಣ್ದುಂಬಿ ಸು
ಸ್ವರದಿಂದೋದುವ ಕೀರಮಾರ ಬಗೆಗಂ ಸಮ್ಮೋಹಮಂ ಮಾಡವೇ ೭೩

ನವಗಂಧೋದ್ಗಮಗಂಧಶಾಳಿ ಶುಕಲೀಲಾಳಾಪದಿಂದಾದಮೊ
ಪ್ಪುವ ಚೆನ್ದಲ್ ಸಹಕಾರಪಕ್ವರಸಸಾರಾಸಾರಪಾನೀಯದಿಂ
ಸವಿಶೇಷಂ ಬೆಳೆದೊಪ್ಪಿ ತೋರ್ಪ್ಪ ಕಳಮಂ ತಾನೆಲ್ಲಿಯುಂ ಚೆಲ್ವು ಪೊ
ಣ್ಮುವಿನಂ ದೇಸೆಗೆ ದೇಸೆವೆತ್ತು ಬಹುಪೊಸಂ ಮಾಸಂ ದೇಶದೊಳ್(?) ೭೪

ಎಡೆವಱಿಯ (ಯದೊಳ್ಪದೊಡಂ)
ಬಡೆ ಬೆಡಂಗು ಪಿಂಗದೆ ವಿಲಾಸಮೋಸರಿಸದೆ ನೇ
ರ್ವೊಡೆ ನಗರ ಖೇಡ ಖರ್ವಡ
ಮಡಂಬ ಪತ್ತನಮವೆತ್ತಲುಂ ಸುತ್ತಿಱಿಗುಂ ೭೫

ಅತಿಶಯಮಾದ ದೇವಗೃಹಸಂಕುಳದಿಂ ಕರಮೊಪ್ಪುವಪ್ಸರಃ
ಪ್ರತತಿವಿಲಾಸದಂ ವಿಬುಧಸಂತತಿಯಿಂ ದಿವಿಜಾವನೀಕ ಸಂ
ಹತಿಯಿನಿದೊಂದು ಕಲ್ಪಮವಿಕಲ್ಪದಿನುರ್ವಿಯೊಳಾದುದೆಂಬ ವಿ
ಶ್ರುತವಚನಂಗಳಿಂ ನಿಖಿಲಶೋಭೆಯನಾಂತುದು ತನ್ಮಹೀತಳಂ ೭೬

ಇಳಿತಂದತ್ತಿಂದ್ರಲೋಕಂ ಗಗನವಲಯದಿಂ ಮಧ್ಯಲೋಕಕ್ಕೆ ಧಾತ್ರೀ
ತಳದೊಳ್ ಭೋಗೀಂದ್ರಲೋಕಂ ರಸೆಯಿನೊಗೆದು ನಿಂದತ್ತು ವಿದ್ಯಾಧರೋರ್ವೀ
ವಳಯಂ ತದ್ರಜತಾದ್ರೀಂದ್ರದಿನನುನಯದಿಂ ಬಂದು ಬೇಱೊಂದು ಪೆಂಪಂ
ತಳೆದತ್ತೆಂಬಂದದಿಂದಂ ಸೊಗಯಿಸುಗುಮಿಳಾಚಕ್ರದೊಳ್ ವತ್ಸದೇಶಂ ೭೭

ವ|| ಇಂತು ಮದನಮಂಗಳ ವೀರಲಕ್ಷ್ಮೀವಿಲಾಸನಿಳಯಮೆನಿಸಿದ ವತ್ಸಜನಪದವನಿತೆಗೆ ವದನಮೆನಿಸಿ

ಆಡುವವಹಿವಿಲಾಸದಿಂ
ದೆಡೆಯುಡುಗದೆ ರತ್ನದಿನನೂನ ಗಾಂಭೀರ್ಯದಿನಾ
ಕಡಲವಗಯಿಸಿ ತೋರ್ಪುದು
ವಿಡಂಬಿ ಮಹಿಮಾವಳಂಬಿ ಕೌಶಂಬಿಪುರಂ ೭೮

ಅಂಬುಧಿವೇಷ್ಟಿತಾಖಿಳಧರಾತಳದೊಳ್ ಪುರಮಿನ್ನದಿನ್ನುಮಿ
ಲ್ಲೆಂಬ ಪೊಗಱ್ತೆಗೆತ್ತಳಗಮೆಂಬ ನಗೆಱ್ತೆಗೆ ಜನ್ಮಭೂಮಿ ತಾ
ನೆಂಬ ಜಸಕ್ಕೆ ತಾಯ್ಗುರುವಿದೆಂಬ ವಿಭೂತಿಯನಾಂತುದಿಂತು ಕೌ
ಶಂಬಿಪುರಂ ಜಿತಾಮರಪುರಂ ಕಮನೀಯ ಚತುಷ್ಕಗೋಪುರಂ ೭೯

ವ|| ಅದನಾಳ್ವನವನತಾರಾತಿನೃಪ ಮಣಿಮಯ ಕಿರೀಟ ಪ್ರಭಾಲೀಢಚಳನ ನಳಿನಯುಗ್ಮನುದಾತ್ತ ವೀರಲಕ್ಷ್ಮೀಲತಾರ್ಪಣದ್ರುಮಾಯಿತಾಯತೋತ್ತುಂಗಾತ್ಮ ಕೌಕ್ಷೇಯಕಸ್ತಂಭವಧಃಕೃತಾನಂತ ಚಿರಂತನ ಜಗತ್ಪ್ರಣೂತ ಭೂತಳಾಧಿನಾಥನರ್ಥಿ

ಸಂಘತಾನವಬರ್ಹಿಣಾನಂದಕರಣ ಪ್ರತ್ಯಗ್ರಜಲಧರಾಗಮಂ ನಿರಂತರ ದಿಗಂತರಾಳ ಸ್ಥಿತದಂತಿಸಂತಾನದಂತಾಂತರೋಪಾಂತಪರಿಚುಂಬಮಾನ ಯಶಃ ಕಾಂತಾಕಾಂತನು ತ್ತುಂಗಭಂಗುರತರತರತ್ತರಂಗಸಂಘಾತಾರ್ಣನವಪರೀತಾಶೇಷಕ್ಷ್ಮಾ ಚಕ್ರಸಂರಕ್ಷಣದಕ್ಷ ದಕ್ಷಿಣಭುಜೋತ್ಖಡ್ಗನುದ್ದಾಮ ದಾರುಣ ಪ್ರತಾಪಕೋಪ ಪಾವಕ ಕಬಳಿಕಾರಾತಿ ಬಳನತಿಬಳನೆಂಬೊಂ

ಆ ಹಿರಿವಿಭವನ ನಯನಮ ।
ನೋಹರಿ ಹರಿಣಾಕ್ಷಿ ಹಂಸಗಾಮಿನಿ ಮಧುಪ ॥
ವ್ಯೂಹನಿಭ ಕುಟಿಳಚಿಕುರಮ ।
ನೋಹರೆ ಮನಸಿಜನ ಕಣೆಗೆ ದೊಣೆಯೆನೆ ನೆಗಟ್ದಳ್ ೭೯

ವ॥ ಅಂತು ಮನೋಹರಿ ಮಹಾದೇವಿಯೊಳಾ ಧರಾಧೀಶ್ವರನಿಷ್ಟವಿಷಯ ಕಾಮಭೋಗಂಗಳನನವರತಮನುಭವಿಸುತ್ತುಂ ಸುಖಸಂಕಥಾವಿನೋದದಿಂ ರಾಜ್ಯಂ ಗೆಯ್ಯುತ್ತಮಿರೆಯಿರೆ

ಮಲೆಪರ್ ಮಾಜಾಂಪರಿಲ್ಲಕ್ರಮದಿನದಟರಾಟಂದರಿಲ್ಲುರ್ಕಿ ಬೇಡ ।
ರ್ಚಲದಿಂ ಮಾರ್ಕೊಂಡರಿಲ್ಲೊಟ್ಟಜೆವೆರಸು ಕುಱುಂಬರ್ತಱುಂಬಿರ್ದ್ದರಿಲ್ಲೆ
ತ್ತಲುಮುದ್ದಂ ಬಂದು ದಳ್ಳಿಂದುರಿವ ರಿಪುಗಳಿಲ್ಲಳ್ಕಿಬಿರ್ಕ್ಕುತ್ತುರ್ತ್ತು ಭೂಮಂ ।
ಡಳಮಾಜ್ಞಾಸಿದ್ಧಮಾದತ್ತತಿಬಳವಿಭುಗಂಭೋಧಿಪರ್ಯಂತಮಾಗಳ್ ೮೦

ಜಿನಪಾದಪಂಕಜಭ್ರಮ
ರನೆನಿಸಿ ಜಿನಸಮಯದಿವ್ಯಭವನೋತ್ತಮಕಾಂ ॥
ಚನಕಳಶನೆನಿಸಿ ಜಿನಶಾ ।
ಸನದೀಪಕನೆನಿಸಿ ನೆಗಟ್ದನಾ ಧರಣೀಶಂ ೮೧

ದಯೆಯಿಂ ಮರ್ಯಾದೆಯಿಂ ಮೇರೆಯಿನನುಪನ ಸನ್ಮಾನದಿಂ ದಾನದಿಂ ಸ ।
ತ್ಕ್ರಿಯದಿಂದಂ ಸಂತತೋತ್ಸಾಹಮನನವರತಂ ಮಾಡುತುಂ ನೂತ್ನ ರತ್ನ
ತ್ರಯಭೂಷಾಭೂಷಿತಾಂಗಂ ಸುಖದಿನರಸುಗ್ಗೆಯ್ಯುತ್ತಮೊಪ್ಪಿರ್ದ ಕೌಶಂ ।
ಬಿಯೊಳತ್ಯುತ್ಸಾಹದಿಂದಂ ಪರಮಜಿನಮತಾಂಭೋಜಿನೀ ರಾಜಹಂಸಂ ೮೨

ಗದ್ಯ॥ ಇದು ಸಮಸ್ತ ವಿನಯಜನವಿನುತ ಶ್ರೀವರ್ಧಮಾನ ಮುನೀಂದ್ರ
ವಂದ್ಯ ಪರಮ ಜಿನೇಂದ್ರ ಶ್ರೀಪಾದಪದ್ಮ ವರಪ್ರಸಾದೋತ್ಪನ್ನ
ಸಹಜಕವೀಶ್ವರ ಶ್ರೀಶಾಂತಿನಾಥ ಪ್ರಣೀತಮಪ್ಪ
ಸುಕುಮಾರಚರಿತ್ರದೊಳ್ ಪೀಠಿಕಾಪ್ರಕರಣಂ
ಪ್ರಥಮಾಶ್ವಾಸಂ

೨. ದ್ವಿತೀಯಾಶ್ವಾಸಂ

ಶ್ರೀಮಹಿತನಹಿತಸಕಲಮ
ಹೀಮಹಿತಪಯೋಧರಪ್ರಭಂಜನನಸ್ತ್ವೀ
ತಾಮರವಿಲಾಸನೆಸೆದನಿ
ಳಾಮಂಡಳದೊಳ್ ಸರಸ್ವತೀಮುಖಮುಕ ರಂ ೧

ಆತಂಗೆ ವಿಜಯಲಕ್ಷ್ಮೀ
ಪ್ರೀತಂಗೆ ದಯಾನ್ವಿತಂಗೆ ನಿರುಪಮಗುಣನಿ
ಖ್ಯಾತಂಗೆ ವಿಜಿತಶತ್ರು
ವ್ರಾತಂಗೆ ಪುರೋಹಿತಂ ನಿಜ ಸ್ವಾಮಿಹಿತಂ ೨

ಕುಶಲಮತಿ ವಿಶ್ವವಿದ್ಯಾ
ವಿಶದಂ .... ಮಹೋದಾರಗುಣಂ
ವಿಶದಯಶೋನಿಳಯಂ ಸೋ
ಮಶರ್ಮನೆಂಬೊಂ ದ್ವಿಜನ್ಮವಂಶಲಲಾಮಂ ೩

ಆ ವಸುಧಆಮರಾಗ್ರಣಿಗೆ ಕಾಶ್ಯಪಿಯೆಂಬೊಳುದಾತ್ತ ಕೀರ್ತಿಲ
ಕ್ಷ್ಮೀವಿಭವಾಭಿರಾಮೆ ಗುಣಧಾಮೆ ಕುಲಾಂಗನೆ ಹಾವಭಾವಶೋ
ಭಾವಹರೂಪವಿಭ್ರಮವಿಲಾಸಸಮನ್ವಿತೆ ಕೋಮಳಾಸಿತೇಂ
ದೀವರಲೋಳನೇತ್ರೆಯೆನೆ ಸಂತೊಸದಿಂ ಸುಖಮಿರ್ದರಿರ್ಪಿನಂ ೪

ಅಭಿನುತಮಂ ಶ್ರೀಮಹತ್ತರ
ವಿಭೂತಿಯಂ ತಳೆದ ಸೋಮಶರ್ಮಂಗಂ ಶ್ರೀ
ನಿಭೆ ಕಾಶ್ಯಪಿಗಂ ಸುತರ
ಗ್ನಿ ಭೂತಿಯುಂ ವಾಯುಭೂತಿಯುಂ ಪೆಸರಿಂದಂ ೫

ವ॥ ಆ ಬಾಲಕರ್ ಬಾಲ್ಯದಿಂತೊಟ್ಟು ಗೋಳಾಂಗೂಳರಂತೆ ಸಹಜಚಾಪಲ್ಯರುಂ ಜಳೂಕಾಮುಖರಂತೆ ದೋಷಗ್ರಾಹಿಗಳುಂ ಸುರಶರಾಸನದಂತೆ ನಿರ್ಗುಣರುಂ ತೀಕ್ಷ್ಣ

ಕೌಕ್ಷೇಯದಂತೆ ನಿಸ್ತ್ರಿಂಶಭಾವರುಂ ಶಿಶಿರಕರನಿಕರದಂತೆ ಕುಮುದ ಪ್ರಕಾಶಕರರುಂ ಖರಕರನಂತೆ ಖರದಂಡಪ್ರಿಯರುಂ ಉದಧಿಯಂತೆ ಜಡಸ್ವಭಾವರುಂ ವಿಷೋರಗನಂತೆ ದ್ವಿಜಿಹ್ವರುಂ ಸಾರ್ವಭೌಮೋಪಜೀವಿಗಳಂತೆ ವಿಷಯಾಸಕ್ತರುಮೆನಿಸಿ ಮಾತಾಪಿತೃಗಳ ಮಾತುಗಳಂ ಕೈಕೊಳ್ಳದೆ ಸರ್ವಸ್ವಮಂ ಕೊಂಡು ಕೇಡಾಳಿಗಳಾಗೆ

ತಿಱಿಕಲ್ಲಾಡುವ ಬೊಟ್ಟುವೋರಿಸುವ ಸೆಂಡಂ ಪೊಯ್ವ ಬಾದಿಂಗೆ ಕೈ
ನಿಱಿದೆರ್ದಾಡುವ ಕೋಟಿಲಾವಗೆತಗರ್ಕೋಣಂ ವಿದಿಕೌಂಚಿಂಬಿವಂ(?)
ಸೆಱಿಗೆಯ್ದಕ್ಕಿಗೆ ಪೂಣ್ದು ಪೋರಿಸುವ ನಾನಾ ಕ್ರೀಡೆಯಿಂದಿರ್ವರುಂ
ತಱಿಸಂದುದ್ಧತಭಾವದುಬ್ಬರದಿನೇನುದ್ವೃತ್ತರಾಗಿರ್ದರೋ ೬

ವ॥ ಅಂತುಮಲ್ಲದೆಯುಂ

ನಗರಾಭ್ಯಂತರ ದೇವತಾಭವನದೊಳ್ ಚೌವಟ್ಟದೊಳ್ ಬೀದಿವೀ
ದಿಗಳೊಳ್ ಜೂಜಿನದಿಂಡೆಯೊಳ್ ತಗರಕೇಳೀ ವಿದ್ಯೆಯೊಳ್ ದುರ್ಜನೋ
ಪಗತೋದ್ದೇಶದೊಳಂ ಪಣ್ಯವರ್ಮವೀಥಿವ್ರಾತದೊಳಂ ಆವಗಂ
ತಗುಣಾತ್ಮರ್ ವಿನಯಪ್ರಹೀಣರವಿನೀತರ್ ನೀತಿಗೆಟ್ಟಾಡುವರ್ ೭

ತಂದೆ ಕಡಂಗಿ ಕಲ್ಪಿಸುವ ಕಲ್ಪಿಯನೊಲ್ಲದೆ ತಾಯ್ಮಗುಟ್ಟು ನಿ
ರ್ವಂದದಿನೆಯ್ದೆ ಬಗ್ಗಿಸುವ ಬಗ್ಗಣೆಗಳ್ಕದೆ ಮಿತ್ರವರ್ಗಮೇ
ನೆಂದೊಡಮೆಂದುದಂ ನೆಗಟಿದುದ್ಧತಿಯಿಂದಮವಂದಿರುರ್ಕ್ಕಿ ದ ।
ಕ್ಕುಂದಲೆವಾಯ್ವರಂತುಟೆ ಬಹುವ್ಯಸನಾರ್ತರನಾರೊ ಬಾರಿಪರ್ ೮

ಹರಿಣಿ ॥ ಸಿರಿಯ ತವಿಲಿಂ ಮಕ್ಕಳ್ಕೈ ಮಿಕ್ಕು ಪೇಟ್ದುದು ಗೆಯ್ವದಿ
ರ್ಪಿರವನವನೀದೇವಾಮ್ನಾಯಕ್ಕೆ ನೊಚ್ಚಿದನಾಗಿ ಮೆ
ಯ್ಗರೆವೆಸಕದಿಂ ನಿಚ್ಚಂ ಬೆಂಬಿರ್ದು ಚಿಂತಿಸಿ ದುಃಖದೊಳ್
ಪಿರಿದುಮವರಿಂ ಕಣ್ಗೆಟ್ಟಂ ಭಟ್ಟಂ ನಿಕೃಷ್ಟರ ದೂಸಱಿಂ ೯

ಕಲ್ಮಷಿಕವಾಗಿ ತನ್ನೊ
ಕ್ಕಲಮ್ಕ್ಷಳಿನೆಕ್ಕಸಿರ್ಕಮಾದೊಡೆ ಪಾರ್ವಂ
ಮಲ್ಮಲನೆ ಮಱುಗಿ ಕೂಡೆಯೊ
ಡಲ್ಮಸಿಯಪ್ಪಿನೆಗಮೆಯ್ದೆ ಬೆದವೆದ ಬೆಂದಂ ೧೦

ವ॥ ಇಂತಾತ್ಮೀಯಾತ್ಮಜರಿನಾದ ಕುಲಾಪವಾದಪರಾಭವದ ದಾವಾನಳದಿಂ ದ(ಂ)ದಹ್ಯಮಾನಮಾನಸನುಮಸಹ್ಯಮಾನ ಚಿಂತಾಂತರಂಗನುಮಾಗಿ ಕೆಲವು ವರಿ ಸಮಿರ್ಪವಸರದೊಳವಸರಂಬಡೆದನೆಂಬಂತೆ

ತೆಱಿಪುವಡೆದಡಸಿ ರುಜೆ ಮೆ
ಯ್ಮಱುಗುವಿನಮವುಂಕಿ ಸೋಂಕಿ ನಿಃಕರುಣತೆಯಿಂ
ಕಱುತು ಜವನೆಂಬ ಬಱಸಿಡಿ
ಲೆಱಗಿದುದೆಱಗುವವೊಲಹಿಯನಹಿಗರಳಹರಂ ೧೧

ವII ಅಂತು ಸೋಮಶರ್ಮಂ ಲೋಕಾಂತರಿತ(ನಾದ)ನೆಂಬುದನತಿಬಲಮ ಹಾರಾಜಂ ಕೇಳ್ದು

ವೇದವಿದಂ ಸಕಳಕಳಾ
ವೇದಿ ಸಮಸ್ತಾಧಿಕಾರಪರಿಚಿತನಾಶೀ
ರ್ವಾದಪ್ರಿಯಂ ಪರಿಮೃತ
ನಾದನೆ ವಿಶ್ರುತ ಬಹುಶ್ರುತೋದಾತ್ತಯಶಂ ೧೨

ಆ ದೊರೆಯ ಹಿತಪುರೋಹಿತ
ನಾದೊರೆಯ ಸುಮಂತ್ರಿ ಕಟಿದನೆಂದೊಡೆ ಪೆಱದೇ
ನೀ ದೊರೆಯ ರಾಜ್ಯಮೆನಗಿದ
ನಾದರಮಶ್ಲಾಘನೀಯಮಫಳಮಸೇವ್ಯಂ ೧೩

ವII ಎಂದು ಪಿರಿದುಂ ಕಟ್ಟುಕಡೆದು ಸೋಮಶರ್ಮನ ಮಕ್ಕಳಪ್ಪಗ್ನಿಭೂತಿಯಂ ವಾಯುಭೂತಿಯುಮಂ ತನ್ನಲ್ಲಿಗೆ ವರಿಸಿ ತದೀಯ ಹೃದಯಾಂತರ್ಗತ ಶೋಕಾಗ್ನಿ ಜ್ವಾಲಾಕಲಾಪಮನಾತ್ಮೀಯವಚೋವಿಸ್ತರಸಾರವಾರಿಪ್ರವಾಹದಿಂ ಪ್ರಶಮಿಸಿ ತಾಂಬೂಲಾದಿ ದಾನಸನ್ಮಾನಪುರಸ್ಸರಮುವರ ಪೂರ್ವವೃತ್ತಿಯುಮಂ ಕವ್ಮುವಟ್ಟೆಯುಮನಿತ್ತು ಬೀಡಿಂಗೆವೋಗಿಮೆಂಬುದುಂ

ಅವರನುನಯದಿಂ ಮನೆ
ಗೆ ವಂದು ಕಾಶ್ಯಪಿಯ ದುಃಖಮಂ ಕಳೆದು ಮಹೋ
ತ್ಸವಮಪ್ಪಂತಿರೆ ಸಂತೋ
ಷವಾರ್ತೆಯಂ ಪೇಟ್ದು ಸಂತಮಿರೆ ಕೆಲದಿವಸಂ ೧೪

ವII ಒಂದು ದಿನಮಾ ನರೇಂದ್ರಂ ಲೀಲೆಯಿಂದೊಡ್ಡೋಲಗಂಗೊಟ್ಟಿರ್ದಶೇಷ ವಿದ್ವಜ್ಜನ ಸಭಾಭ್ಯಂತರ ಮೃಗೇಂದ್ರವಿಷ್ಟರಾರೂಢನಾಗಿರ್ಪುದುಂ ಪರನೃಪಾಸ್ಥಾನದಿಂ ವಿಜಯಜಿಷ್ಣುನೆಂಬೊನೊರ್ವ ವಾದಿ ಸಕಲಕಲಾವೇದಿ ಸಂವಾದಾರ್ಥಿಯಾಗಿ ಬಂದು ನಿಜ ವಿದ್ಯಾಡಂಬರಮಂ ಮೆಱೆಯಲೆಂದರಮನೆಯ ಬಾಗಿಲೊಳ್ ನಿಂದು ಪತ್ರಾಲಂಬನಂ ಮಾಡಿರ್ಪುದುಂ ತದ್ವೃತ್ತಾಂತಮೆಲ್ಲಮನರಸನಱಿದು ಬರಮೇಟ್ಟುದುಮ- ಪೂರ್ವಮಪ್ಪ ಶ್ಲೋಕಸೂನ್ಯಾಸಸಮಾಸಸಂಸಾರವಚನರಚನೆಗಳಿನತಿಬಳನುಮಂ ತತ್ಸಭಾಜನಮುಮಂ ಮನಂಗೊಳಿಸಿ

ಪದವಿದ್ಯಾಮಾರ್ಗದೊಳ್ ವ್ಯಾಕರಣಪರಿಣತಾಳಾಪದೊಳ್ ಮಿಕ್ಕಷಟ್ತ
ರ್ಕದೊಳಾರ್ಗಂ ದುರ್ಗಮೆಂಬಂತಿರೆ ವಿಲಸದಲಂಕಾರದಿಂ ತಳ್ತುಪನ್ಯಾ
ಸದ ವಿನ್ಯಾಸಂ ಬಲಂಬೆತ್ತೆಸೆಯೆ ನೃಪಸಭಾಮಧ್ಯದೊಳ್ ಪೆರ್ಚಿ ವಾಗ್ಗುಂ
ಫದೊಳಾಗಳ್ ಬೆಟ್ಟಿನಲ್ಪಿಟ್ಟೆನಲೆಡೆಗುಡದಾಶ್ಚರ್ಯಮಂ ತಾಳ್ದಿ ನಿಂದಂ ೧೫

ವ॥ ಅಂತುತ್ತರೋತ್ತರೋಪನ್ಯಾಸನವೃತ್ತಿಸಂಪತ್ತಿಯಂ ತಾಳ್ದಿದ ಪರವಾದಿಗೆ ಪ್ರತ್ಯುತ್ತರಂಗುಡುವನ್ನರಾರುಮಿಲ್ಲದಿರ್ಪುದಂ ಕಂಡು ತಲೆಯಂ ತೂಗಿದೂಗಿ ವಿಸ್ಮಯೋದಾತ್ತಚಿತ್ತನಾಗಿ ಸೋಮಶರ್ಮಾಪತ್ಯರಂ ಬರವೇೞಿಮೆಂಬುದುಮಲ್ಲಲ್ಲಿ ಗೆಲ್ಲರುಂ ಪರಿತಂದಗ್ನಿಭೂತಿಯುಮಂ ಪಕ್ಕದೊಳಿರ್ದ ವಾಯುಭೂತಿಯುಮಂ ಕಂಡು ವಿಜಯಜಿಹ್ವವಾದಿಯಿನಾದ ವೃತ್ತಾಂತಮೆಲ್ಲಮಂ ಸವಿಸ್ತರಮಱಿಪಿ

ನಡೆಯಿಂ ತೊಡರ್ದವನೊಳ್ಗಲೆ
ನುಡಿಯಿಂ ನೀಮೆಂದು ಬಂದವರ್ನುಡಿವುದುಮಾ
ಜಡರಳ್ಕಿ ಬಳ್ಕಿ ನಡನಡ
ನಡುಗಿ ಸುರಳ್ದುಗಿದು ಸುಗಿದು ಬಂದತಿಭಯದಿಂ ೧೬

ವ॥ ತನ್ನೃಪೇಂದ್ರಭವನೋಚಿತೋದ್ದೇಶದೊಳ್

ಇಕ್ಕಿದ ಲೋಹಾಸನದೊಳ್
ತಕ್ಕರ್ ಮಾನ್ಯರ ವಿಶಿಷ್ಟರಂದದಿನೊಳಗಂ
ಪೊಕ್ಕು ಸಭಾಸಂಯೋಗ್ಯರ
ಪಕ್ಕದೆ ಕುಳ್ಳಿರ್ದೊಡತಿಬಲಕ್ಷ್ಮಾಪಾಲಂ ೧೭

ಪೃಥ್ವಿ ॥ ನಿರೀಕ್ಷಿಸಿ ನಿಕೃಷ್ಟದುಷ್ಟಗಣರಂ ಗತಪ್ರಜ್ಞ(ರ)ಂ
ನಿರಂತರ ದಿಗಂತರೋಪಗತ ದುರ್ಯಶಃಪ್ರಾಪ್ತರಂ
ದುರಾತ್ಮರನಖಿಲ್ಯರಂ ಬಟಿಕ ಸೋಮಶರ್ಮಾತ್ಮಜಾ
ತರಂ ಖಳವಿನೀತರಂ ವಿಕೃತಮಾರ್ಗ ವಿಖ್ಯಾತರಂ ೧೮

ಆಗ್ರಹಿಸಿ ತರ್ಕಶಾಸ್ತ್ರಸ
ಮಗ್ರತೆಯಂ ತೋರ್ಪುದಿಲ್ಲಿ ನೀಮೆನೆ ಕುಳಿಕಾ
ಹಿಗ್ರಸ್ತರಂತೆ ನುಡಿವುದ
ವಗ್ರಹಮೆಂದುರ್ಗುಗೊಂಡರಂತೆ ನಿತಾಂತಂ ೧೯

ವ॥ ಮೂಗುವಟ್ಟು ಬಾಯ್ವಿಟ್ಟು ನೀರೊಳ್ ಮುೞುಗಿದರಂತುಸಿರ್ಮಿಡಿವರಂತು(ಂ) ಪಾವಡರ್ದರಂತುಂ ಮೆಯ್‌ಬೆಮರುತ್ತುಮಿದಿರೊಳ್ ಕುಳ್ಳಿರ್ದ ವಿಜಯ ಜಿಹ್ವವಾದಿಯಂ ಭೋಂಕನೆ ಕಂಡು

ಬೆಕ್ಕಂ ಕಂಡಿಲಿಯಂತಿರು
ಸಿರ್ಕುಸಿದು ಕುನುಂಗಿ ತತ್ಸಭಾಭ್ಯಂತರದೊಳ್
ಮಾರ್ಕೊಳ್ಳದೆ ಮಾರ್ನುಡಿಯದೆ
ಬಿಕ್ಕೆನ್ನದೆ ಮಿಡುಕದಿರ್ದರಂತಿರ್ಪಿನೆಗಂ ೨೦

ವೇದವಿದಂ ಸಕಳಕಳಾ
ವೇದಿ ಸಮಸ್ತಾಧಿಕಾರ ಪರಿಚಿತನಾಶೀ
ರ್ವಾದ ಪ್ರಿಯಂ ಪರಿಮೃತ
ನಾದನೆ ವಿಶ್ರುತ ಬಹುಶ್ರುತೋದಾತ್ತಮತಂ ೨೧

ಅಯಶೋಮೂರ್ತಿಗಳತಿ ದು
ರ್ನಯವರ್ತಿಗಳನೂನಸಪ್ತವ್ಯಸನಾ
ಶ್ರಯರೆಂದಿರ್ದಪರಿರ್ದ
ಲ್ಲಿಯೆ ನುಡಿದ(ಂ)ಸಭೆಗೆ ಸೋಮಶರ್ಮಾತ್ಮಜರಂ ೨೨

ಅಱಿಯುತ್ತಂ ಕಲ್ಲೊಳ್ ನಾ
ರಱಿಸುವುದುಂ ಪಾಪಸೂತ್ರದೊಳ್ ಧರ್ಮಮನೋ
ಸ(ಱಿ)ಸುವುದುಮಿವರೊಳಕ್ಕರ
ಮಱಿಸುವುದುಂ ಭಾವಿಪಂದು ನಿಷ್ಫಳಮಲ್ತೇ ೨೩

ಬೀಣೆಯ ಕೊಟಿಲ ಬೆದಂಡೆಯ ।
ಗಾಣರ ಬಟಿವಿಡಿದು ಸುಟಿದು ಕುಂ(ದಿಂ)ಕಥಕ
ಶ್ರೇಣಿಯೊಡನೆಳಸಿ ಬಳಸುವ
ನಾಣಿಲಿಗಳನೀ ಬುಧಾಳಿಯೊಳ್ ಪುಗಿಸುವುದೆ ೨೪

ಈ ಜಡರನತರ್ಕಿತಬುಧ
ರಾಜಸಭಾಸದರೊಳಿರಿಸಿ ರಿಪುನೃಪಮಕುಟ
ವ್ರಾಜಿತಪದಾಬ್ಜ ವಿಬುಧಸ
ಮಾಜದೊಳಾದತ್ತು ಹಾಸ್ಯರಸಮಪ್ರತಿಮಂ ೨೫

ವ॥ ಎಂದಿಂತು ನಾನಾಪ್ರಕಾರದಿಂ ತಿರಸ್ಕರಿಸಿ ನುಡಿವುದಮತಿಬಳನತಿಲಜ್ಜಾಭರದಿಂ ಸಿಗ್ಗಾಗಿ

ಎನಗೆ ಹಿತಂ ಪುರೋಹಿತನನೂನಗುಣಾಗ್ರಣಿ ಸೋಮಶರ್ಮನಾ
ತನ ತನುಜಾತರಪ್ರಮಿತಶಾಸ್ತ್ರವಿಶಾರದರಾದೊರಕ್ಕುಮೆಂ

ಬಿನಿತನೆ ಮೆಚ್ಚಿ ಬಿಚ್ಚತಿಕೆಯಿಂ ಪರಿಭಾವಿಸದೀ ದುರಾತ್ಮ ದು
ರ್ಜನರ್ಗೆ ನಿಕೃಷ್ಟದುಷ್ಪರಿವರ್ಗಾನೊಸೆದಿತ್ತೆನುದಾತ್ತ ವೃತ್ತಿಯಂ ೨೬

ಗುಪ್ತಾಲೋಚನಕಾರ್ಯ
ಕ್ಕಾಪ್ತರ್ ವಿದ್ಯಾಬ್ಧಿಪಾರಗರ್ ಸಕಲಗುಣ
ಪ್ರಾಪ್ತರಿವರೆಂದು ಬಗೆದೆಂ
ಸಪ್ತವ್ಯಸನಾಭಿಭೂತರಪ್ಪುದನಱಿಯೆಂ ೨೭

ನೆರೆದೀ ಸಭೆಯೊಳ್ ಲಜ್ಜಾ
ಭರದಿಂ ತಲೆಯೆಱಕಮಾದುದಿಂದೆನಗೀ ದು
ಶ್ಚರಿತರನಿವಂದಿರಂ ಪರಿ
ಹರಿಸಿಮಯೋಗ್ಯರನಖಿಲ್ಯರಂ ನಿರ್ಗುಣರಂ ೨೮

ಪಱಿಯರಿವರೆನ್ನ ವಂಶಾ
ವಳಿಯಿಂದಂ ಬಂದರೆಂದು ಮನ್ನಿಸದೆ ಮಹೀ
ತಳನಾಥಂ ಮುನಿಸಿಂದಂ
ಕಳೆದಂ ನಿರ್ಗುಣರನಾರುಮೇಂ ಮಂನಿಪ(ರೆ) ೨೯

ವ॥ ಅಂತವರನರಮನೆಯಿಂ ಪೊಱಮಡಿಸಿ ಕಳೆದು ಪರವಾದಿಯಂ ದಾನ ಸನ್ಮಾನಾದಿಗಳಿಂ ಸಂತೋಷಂಬಡಿಸಿ ಸೋಮಶರ್ಮನ ದಾಯಿಗನಪ್ಪ ಸೋವಿಲನೆಂ ಬೊಂಗೆ ತನ್ಮಂತ್ರಿಪದವಿಯಂ ದಯಂಗೆಯ್ವುದುಮಾಪ್ರಪಂಚಮನೆಲ್ಲಮನಗ್ನಿಭೂತಿಯುಂ ವಾಯುಭೂತಿಯುಮಱಿದು ಚಿಂತಾಕ್ರಾಂತರಾಗಿ ತಮ್ಮ ಮನೆಗೆವಂದು

ಜನನಿಯ ಮೊಗಮಂ ನೋಡ
ಲ್ಕೆ ನಾಣ್ಚಿ ಸಿಗ್ಗಾಗಿ ಬಾಗಿ ತಲೆಯಂ ಚಿಂತಾ
ಬ್ಧಿನಿಮಗ್ನರಾಗಿ ಕಣ್ಣೀ
ರನಿಕ್ಕುತಿರೆ ನೋಡಿ ಕಂಡು ಕಾಶ್ಯಪಿ ಭರದಿಂ ೩೦

ಇದು ದಲ್ ವಿಸ್ಮಯಮಾಗಿ ತೋಱಿದಪುದೇನಿಂತೀಗಳೆನ್ನಿಂದಮಾ
ದುದೊ ಮೇಣಲ್ಲದೊಡಾಳ್ವನಿಂ ತೊಡಗಿತೋ ಮೇಣಾಪ್ತರಿಂದಿಂತು ಪು
ಟ್ಟಿದುದೋ ಮೇಣ್ಪರಿವಾರದಿಂ ಜನಿಯಿಸಿತ್ತೋ ಪೇಱಿಮೆಂದೆಂದು ಗ
ದ್ಗದಕಂಠಸ್ಥಿತೆಯಾಗಿ ತನ್ನ ಮನದೊಳ್ ವಿಭ್ರಾಂತಿಯಂ ತಾಳ್ದಿದಳ್ ೩೧

ವ॥ ಅಂತು ಪಿರಿದುಮುಬ್ಬೆಗದಿಂ ನಿಮಗಿನಿವಿರಿದು ಕೌತೂಹಳಮಾರಿಂದ ಮಾಯ್ತೆಂದು ಬೆಸಗೊಳ್ವುದುಮಗ್ನಿಭೂತಿ ವಿಜಯುಜಿಹ್ವವಾದಿಯಿನಾದ ವೃತ್ತಕಮುಮಂ

ಸಭಾಸದರ್ತಮ್ಮನವಕರ್ಣಿಸಿ ಕಿಡೆನುಡಿದುದುಮನತಿಬಳನೆಱೆದು ಕಳೆದುದುಮಂ ಸೋವಿಲಂಗೆ ಮಂತ್ರಿಮಹತ್ತರವೃತ್ತಿ ಸಾರ್ದುದುಮಂ ಸವಿಸ್ತರಮಱೆಪುವುದುಂ

ಮನದೊಳ್ ಪೆರ್ಚಿದ ಶೋಕಮುಣ್ಮೆ ತನುವಿಂ ಕೈಗಣ್ಮೆದುಃಖಂ ವಿಲೋ
ಚನದಿಂದಂ ಪೊಱಪೊಣ್ಮೆ ಬಾಷ್ಪ ಜಲಮಂದುದ್ವೇಗದಿಂದೀಗಳಿಂ
ತಿನಿತೊಂದಾದ ವಿಷಾದಮುಂ ಕುದಿ(ಪ)ಮುಂ ಮಾತೇಂ ಪೊದಳ್ದಿನ್ನ ಮು
ನ್ನಿನ ಕರ್ಮೋದಯಮೆಂದು ಬಾಯಟಿಿದು ಚಿಂತಾಕ್ರಾಂತೆಯಾಗಿರ್ಪುದುಂ ೩೨

ವ॥ ಆಗಳವರ್ ತಾಯ ಮೊಗಮನಾವ ಮೊಗದೊಳ್ ನೋಡುವಮೆಂದು ನಾಣ್ಚಿ ಚಿಂತಿಸುವ ಚಿಂತೆಯೊಳತಿಬಳನೃಪಾಸ್ಥಾಯಿಕೆಯೊಳ್ ಪುಲ್ಲಿಂ ನೊಚ್ಚಿದರಾದೆವೆಂಬೇವದೊಳಂ ತಮ್ಮನುಜರಿ ಸೆಱೆಗೆಯ್ದು ತಮ್ಮ ಕಮ್ಮವಟ್ಟೆಯಂ ತಮ್ಮ ದಾಯಿಗಂಗೆ ಕೊಟ್ಟರೆಂಬ ಮಚ್ಚರದೊಳಂ ಸಕಳ ಕಳಾಕುಶಲಂಗೆವುಟ್ಟಿಯುಮನಕ್ಷರ ಜಠರರೇವಂದೆವೆಂಬ ಕಷ್ಟತೆಯೊಳಂ ನಿರ್ಮಳಮಪ್ಪ ನಿಜಾನ್ವಯಕ್ಕೆ ಕಳಂಕಪಂಕಾದ್ಯ ನೇಕಾಪವಾದವಾದುದೆಂಬ ಮಱುಕದೊಳಂ ಮಲ್ಮಲಂ ಮಱುಗಿ ಕಾಶ್ಯಪಿಯ ಮೊಗಮಂ ನೋಡಿ

ಅಂಘಾಬಳದಿಂ ದುರ್ವ್ಯಸ
ನಂ ಘಟಿಯಿಸೆ ಸುಪೂಜಿತಾರ್ಥ ಶಾಸ್ತ್ರಗಳನು
ಲ್ಲಂಘಿಸಿ ಕಠೋರವಾಣಿಗ
ಳಿಂ ಘಾತಿಸುತಿರ್ದೆವಿನ್ನೆವರೆಗಂ ನಿಮ್ಮಂ ೩೩

ನಿಮಗೆ ಸುತರಾಗಿ ವೇದಾ
ಗಮಂಗಳಂ ಕಲ್ತು ರಾಜಸಭೆಯೊಳ್ ವಿದ್ಯೋ
ತ್ತಮರೆನಿಸಿ ಸುಖಮಿರಲ್ಪಡೆ
ಯೆಮೆಂಬುದಿದು ಪೂರ್ವಜನ್ಮಕೃತಕರ್ಮಫಳಂ ೩೪

ಅವಿವೇಕಂ ದೊರೆಕೊಂಡು ಪೋದುವಿನಿತುಂ ಕಾಲಂಗಳಂತುಂ ಪರಾ
ಭವಭಾರಂ ಪಿರಿದಂತಱೆಂ ಬಹುಕಳಾಳಾಪಂಗಳಂ ಕಲ್ತು ಬ
ರ್ಪವಮೋಘಂ ಬಿಡಿಮೆಂಬುದುಂ ಗಳಿತಬಾಷ್ಪಾಂಭಃಕಣಂ ಬೇಗಮು
ಣ್ಮುವಿನಂ ಪೊಣ್ಮುವಿನಂ ವಿಷಾದದೊದವಿಂದೆಂದಳ್ ನಿಜಾಪತ್ಯರಂ ೩೫

ಪಿತೃವಿರ್ದೋದಿಸುವಂದು ಶುದ್ದಗೆಯೊಳಾ ಸಿದ್ಧಂ ನಮೋಯೆಂಬ ವಿ
ಶ್ರುತವರ್ಣಂಗಳನಾದೊಡಂ ಬರೆದಿರಿಲ್ಲೋಂ ಭೂರ್ಭುವಸ್ವಾದಿಪ
ದ್ಧತಿಯಂ ಕಲ್ತಿರುಮಿಲ್ಲಮಾವಿಚಿತಿಯೊಳ್ ನೀಮಗ್ನಿಮೀಳೇಪುರೋ
ಹಿತಮೆಂದೋದಿದಿರಿಲ್ಲ ಶಿಕ್ಷೆಯೆಡೆಯೊಳ್ ಕೈಕೊಂಡಿರಿಲ್ಲೊಂದುಮಂ ೩೬

ಆ ದೊರೆಯ ತಂದೆ ತಾನಿ
ದೊರ್ೀದಿಸೆ ಕೈಕೊಳ್ಳದವರುಮಿನ್ನೋದುವಿರೇ
ಬಾದೇನೋ ನೀಮುಮಿನ್ನಿ
ನ್ನೋದಿದಿರೋದಿದಿರಿಮಿನ್ನು ಸುಮ್ಮನಿರೆಂದಳ್ ೩೭

ವ॥ ಎಂದು ನೊಂದು ನುಡಿದ ತಾಯ ನುಡಿಯೆ ತಮ್ಮ ಪರಾಭವಮನಱಿಯೆ ತೆಱಿಯೆ ನೆಱಿನೆತ್ತಿ ಮೂದಲಿಸಿದಂತಾಗಿ ಪಿರಿದಾದುಮ್ಮಳಿಕೆಯಿಂದಲ್ಲಿವೊಕ್ಕು ವಿದ್ಯಾಭ್ಯಾಸಂಗೆಯ್ದು ಬಂದಲ್ಲದೆ ನಿಮ್ಮ ಮೊಗಮಂ ನೋಡೆವೆಂದು ಪೊಡೆವಟ್ಟು ಪೋಪ ಮಾಣಿಗಳನಿನಿಸಾನುಂ ಮಾಣಿಮೆಂದು ಕಾಶ್ಯಪಿಯಿಂತೆಂದಳ್ ನಿಮಗಿನಿತೊಂದು ನಿರ್ವೇಗಮುಂ ವಿದ್ಯೋದ್ಯೋಗಮಪ್ಪುದೆಂಬುದೆಲ್ಲಮೆನ್ನ ಪುಣ್ಯಮಾದೊಡಂ ಪರದೇಶಕ್ಕೆ ದೇಸಿಗಮಾರ್ಗದಿಂ ಪೋಗಿ ಸೇದೆಗಿಡಲ್ವೇಡ ಮಗಧ ದೇಶದ ರಾಜಗೃಹಾಧಿಸ್ಥಾನಾಧಿಪತಿಯಪ್ಪ ಸುಬಳಮಹಾರಾಜನ ರಾಜ್ಯಲಕ್ಷ್ಮೀಸಮುದ್ಧರಣಕರಣ ಪರಿಣತಾಂತಃಕರಣನೆನಿಸಿ

ಸಕಲವ್ಯಾಕರಣಾರ್ಥನಿಶ್ಚಿತಮನಂ ಸಾಹಿತ್ಯವಿದ್ಯಾಬ್ಧಿ ವೈ
ದಿಕ ಸಂವೇದಿ ಮಹಾನುಭಾವನಖಿಳೋರ್ವೀಸ್ತುತ್ಯನಾತ್ಮಪ್ರಸಿ
ದ್ಧ ಕವೀಂದ್ರಾಗ್ರಣಿ ಚಾರು ಭಾಸುರಯಶಃ ಶ್ರೀ ಭಾಸಿ ಭೂಭೂತಭುಂ
ಭುಕವಾಗ್ಮಿಪ್ರವರಂ ವರೇಣ್ಯನವನೀದೇವಾನ್ವಯಕ್ಕುತ್ತಮಂ ೩೮

ದ್ವಿಜವಂಶಾಂಬರತಿಗ್ಮರೋಚಿ ಸುಬಳಕ್ಷ್ಮಾಪಾಲಪಾಣಿಗ್ರಹ
ಪ್ರಜಸಂರಕ್ಷಣದಕ್ಷನಾಶ್ರಿತಜನಾಧಾರಂ ಸಮಸ್ತಾಧಿಕಾ
ರಿ ಜಿತಾತ್ಮಂ ಸುಚರಿತ್ರನಪ್ರತಿಮಶುಂಭದ್ಭಾಗಧೇಯಂ ಮದ
ಗ್ರಜನುರ್ವೀಲಲನಾಲಲಾಟತಿಲಕಂ ವಿದ್ವಜ್ಜನಾಳಂಕೃತಂ ೩೯

ಅಮಿತಗುಣಾಧಾರಂ ನಿ
ಮ್ಮ ಮಾವನುದ್ದಾಮಧಾಮನನುಪಮಮಹಿಮೋ
ತ್ತಮನರಿಬಳಜೈತ್ರಂ ಸೂ
ರ್ಯಮಿತ್ರನಾತ್ಮೀಯಗೋತ್ರಪಾತ್ರಪವಿತ್ರಂ ೪೦

ಸುಖಸಂಕಥಾವಿನೋದದಿ
ನಖಿಳಸುಖೋಪಭೋಗಮಂ ಭೋಗಿಸುತಂ
ನಿಖಿಳಬಳ ಸುಬಳನೃಪತಿಗೆ
ನಖಮಾಂಸಪ್ರಿತಿಯಿಂದೊಡಂಬಡೆ ನೆಗೞ್ದಂ ೪೧

ಅಱುವತ್ತು ನಾಲ್ಕು ಕಳೆಗಳೊ
ಳಱಿಯದುದಿಲ್ಲವರನೆಯ್ದಿ ದಿಙ್ಮೂಢತೆಯಂ

ಮಱೆದು ಸಕಲಾಗಮಂಗಳ
ನಱೆದೊಳ್ಪಂ ಮೆಱೆದುಬಂದು ನಿಶ್ಚಿಂತಮಿರಿಂ ೪೨

ಅವಧರಿಸಿಂ ನಿಮ್ಮಯ್ಯಂ
ಗವರಜೆತತ್ಸೂರ್ಯಮಿತ್ರಸಹಧರ್ಮಿಣಿ ಚಾ
ರುವಿಲೋಕೆಯಾಕೆ ಪೆಸರೊಳ್
ಸುವೇದಿ ನಿಮ್ಮತ್ತೆ ವಿನಯದಿಂ ಬೆಸಕೆಯ್ಯಿಂ ೪೩

ವ॥ ಎಂದು ತನಗೆ ಪರಮ ವಿಶ್ವಾಸಮುಳ್ಳ ಲೇಖಕನಿಂ ಸೂರ್ಯಮಿತ್ರಂಗೆ ವಿನಯಪತ್ರಮಂ ಬರೆಯಿಸಿ ತದಗ್ನಿಭೂತಿಯ ಕೈಯೊಳ್ ಕೊಟ್ಟು ತದನಂತರ ಮಾತ್ಮೀಯಾತ್ಮಜರ ಮೊಗಮಂ ನೋಡಿ

ಮಱೆಯದೆ ಸೂರ್ಯಮಿತ್ರನ ಪದಾಂಬುದ ಭಕ್ತಿಯನೆಂದುಮೋಜೆಯಂ
ಮಱೆಯದೆ ಬುದ್ಧಿಯಂ ಮಱೆಯದಾಚರಣೋಕ್ತಿಯನುಕ್ತಮಾರ್ಗಮಂ
ಮಱೆಯದೆ ದಾಯಿಗಂಗೆ ವರಮಂತ್ರಿಪದಂ ನೃಪನೀಯೆ ಸಾರ್ದುದಂ
ಮಱೆಯದೆ ಸಂತತಂ ಬಸನಮಂ ಮಱೆದಿರ್ಪುದು ಬೇಡಿಕೊಂಡಪೆಂ ೪೪

ವ॥ ಎಂದು ನುಡಿಗ ಜನನಿಯ ನುಡಿಯನವಧಾರಿಸಿ ।

ಬೆಸಸಿದ ನಿಮ್ಮ ವಚೋವ
ಸ್ತುಸಾರಮಂ ಕೇಳ್ದು ಮನದೆಗೊಂಡೆವಮೋಘಂ
ಬೆಸಕೆಯ್ವೆಮೆಂಬುದುಂ ಕಾ
ರ್ಯಸಿದ್ಧಿಯಕ್ಕೆಂದು ಪರಸಿ ನಲ್ವರಕೆಗಳಿಂ ೪೫

ವ॥ ಅಂತವರಿರ್ವರುಂ ನಾನಾ ನದೀನದಾಂತರಾಳ ಸಂಪಜ್ಜನಪದಂಗಳಂ ಕಳೆದು ಕತಿಪಯಪ್ರಯಾಣಂಗಳಿಂ

ಖಚರಪ್ಲುತ ॥ ಸಲ್ಲತಾಭವನಂಗಳೊಳಂ ಜಲಂಗಳೊಳಂ ಸಹಕಾರ ಕಂ
ಕೆಲ್ಲಿ ಪಲ್ಲವರಾಜಿತ ಶೈತ್ಯಸ್ಥಾನದೊಳಂ ಶ್ರಮಮಾಱೆ ಬಂ
ದಲ್ಲಿಗಲ್ಲಿಗೆ ವಿಶ್ರಮಿಸುತ್ತುಂ ಪೋಗಿ ಧರಾಮರರೆಯ್ದಿದರ್
ಮಲ್ಲಿಕಾಕುಸುಮೋದ್ಗತಸೌರಭೋದ್ಗಮ ರಾಜಗೃಹಾಖ್ಯಮಂ ೪೬

ತ್ರಿಪದಿ ॥ ಪುರಬಹಿರ್ಭಾಗ ವಿಸ್ತರಿತ ನಂದನದೊಳಂ
ಕುರಿತ ಪಲ್ಲವಿತ ಮುಕುಳಿತ ಕುಸುಮಿತಾ
ಪರಿಮಿತ ಫಲಿತ ತರುಗಳೆ ೪೭

ವ॥ ಇಂತತಿಶಯವಿಲಾಸಕ್ಕೆ ನಿವಾಸಮುಂ ವಿಭೂತಿಗೆ ನಿಕೇತನಮುಂ ಪೆರ್ಮೆಗೆ ತವರ್ಮನೆಯುಂ ಧರ್ಮಕ್ಕಾರ್ಮಮುಮೆನಿಸಿದ ರಾಜಗೃಹ ಪುರವರ ಶ್ರೀಯನ(ಱ್ಱಿ)ವಟ್ಟು ನೋಡಿ ಮೆಚ್ಚುತಂ ಬಂದು ಸೂರ್ಯಮಿತ್ರ ಮಹತ್ತರೋ ದಾತ್ತಸೌಂದರ್ಯಭವನದ್ವಾರಮಮಂ ದ್ವಾರಪಾಲಕರ್ ಪುಗಿಸೆ ಪೊಕ್ಕು ವಿದ್ವಜ್ಜನ ಸಭಾಭಿರಾಮನಪ್ಪ ತಮ್ಮ ಮಾವನಂ ಕಂಡು ಸರ್ವಾಂಗಾಲಿಂಗಿತೋರ್ವೀತಳರಾಗಿ

ಅಭಿವಾದಮೆಂದು ನಿಂದ
ಗ್ನಿಭೂತಿಯುಂ ವಾಯುಭೂತಿಯಂ ವಿಪ್ರವರಂ
ಗಭಿಮುಖದೊಳಿರ್ಪುದುಂ ಕಂ
ಡಭಿನವರಿವರೆಂದು ಸೂರ್ಯಮಿತ್ರಂ ತನ್ನೊಳ್ ೪೮

ವ॥ ವಿಸ್ಮಯಂಬಟ್ಟು ನೀವರ್ಾಗರ್ಾವದೇಶದವರಿರಾರಮಕ್ಕಳಿರೆತ್ತವೋ ದಪ್ಪಿರೇನಿಮಿತ್ತದಿನಿಲ್ಲಿಗೆ ವಂದಿರೆಂಬುದುಂ ವತ್ಸವಿಷಯದ ಕೌಶಂಬೀನಗರಮ ನಾಳ್ವತಿಬಳಮಹಾರಾಜನ ಪುರೋಹಿತ ಪ್ರಧಾನಂ ಸೋಮಶರ್ಮನೆಂಬೊಂ ವಿಪ್ರಕುಲೋತ್ತಮನ ಪತ್ನಿ ಕಾಶ್ಯಪಿಯೆಂಬೊಳವರ ಮಕ್ಕಳಗ್ನಿಭೂತಿಯುಂ ವಾಯು ಭೂತಿಯುಮೆಂಬೆವಶೇಷ ವಿದ್ಯಾಭ್ಯಾಸ ನಿಮಿತ್ತದಿಂ ಭವದಂಪ್ರಿಸ್ಮರಣಪರಿಣತಾಂತಃ ಕರಣರಾಗಿ ಬಂದೆವೆಂದಾತ್ಮೀಯಪ್ರಪಂಚಮನಱಿಪಿ ನಿಜಭಗಿನೀದತ್ತ ವಿಜ್ಞಾಪನ ಪತ್ರಮನವಧಾರಿಸಿಮೆಂದು ಪಾದಪೀಠೋದೊಳಿಕ್ಕುವುದುಂ

ಸುತ್ತಾಱುಂ ಸುತ್ತಿಲ್ಲದೆ
ಸುತ್ತಱಿದಿರ್ದೊಂದು ವಿನಯವತ್ತಳೆಯಂ ವಿ
ಪ್ರೋತ್ತಮನದನಂತರ್ಗತ
ಚಿತ್ತದೊಳಿಂತೆಂದು ತನ್ನೊಳನುವಾಚಿಸಿದಂ ೪೯

ಸ್ವಸ್ತಿ ಸಮಸ್ತ ಧರಾಮರ
ವಿಸ್ತಾರಕನಮಳಗುಣಗಣಾಂಬುಧಿ ವಿಬುಧ
ಪ್ರಸ್ತುತಪರಂಗೆ ಕಾಶ್ಯಪಿ
ವಿಸ್ತರಮೆನಿಸಿರ್ದ (ವಿ)ನಯದಿಂ ಬಿನ್ನವಿಕುಂ ೫೦

ಜಿತಕೋಪಂ ಚಾರುರೂಪಂ ನಿರುಪಮತರಸೂತ್ರಾರ್ಥತತ್ವಪ್ರವೀಣಂ
ಕೃತಕೃತ್ಯಂ ಸೂಕ್ತಸತ್ಯಂ ಪರಹಿತಚರಿತೋದಾತ್ತಕೀರ್ತಿಪ್ರಭಾವಂ
(ಮಿತವಾ)ಕ್ಯಂ ಸದ್ಗುಣೈಕ್ಯಂ ಪ್ರಕಟಿತ ವಿಜಯ ಶ್ರೀನಿವಾಸಂ ವಿಶೇಷಾ
ರ್ಜಿತಪುಣ್ಯಂಮದ್ವರೇಣ್ಯಂ ನೆಗಟ್ದತಿಬಳಭೂಪಾಲಮಂತ್ರಿಪ್ರಧಾನಂ ೫೧

ವಿನಯಾಳಂಕರಣಂ ವಿಶಿಷ್ಟಕರಣಂ ಕುಂದೇಂದುನೀಹಾ
ರನಿಭಾನೂನಯಶಂ ಧರಾಮರಚರಿತ್ರಾಂಭೋಧಿ ವಿಶ್ವಾವನೀ

ವಿನುತಂ ಭೂರಿವಿಭೂತಿಯಂ ತಳೆದು ಕರ್ಮಾಯತ್ತದಿಂ ತನ್ನ ಮ
ಯ್ದುನನಾಭೀಳಕೃತಾಂತದಂತವಿವರೋಪಾಂತಾಂತಮಂ ಪೊರ್ದಿದಂ ೫೨

ವ|| ತದನಂತರಂ ತತ್ಪರಿಜನಂ ವಿಧುವಿರಹಿತಮಾದ ರಾತ್ರಿಯ ಕುಮುದವನದಂತೆ ಕರಂ ಕುಮುದರಾಗಿ ಕೊರಗಿ ಪರಾಗದಂತೆ ದೆಸೆದೆಸೆಗೆ ಪರೆದುಪೋಪುದುಂ ತ್ವದೀಯ ಭಾಗಿನೇಯುಂ ಮುನ್ನಮುಳ್ಳ ಭಾಗಾಂಶಮೆಲ್ಲಮಂ ತ್ಯಾಗಭೋಗೋಪಭೋಗಾದಿ ವ್ಯಸನಕ್ಕಸದ್ವ್ಯಯಂ ಮಾಡಿ ಕಿಡಿಸಿಯುಂ ಶೈಶವಭಾವದಿಂ ತಾಳ್ದಿನ್ನೆಗಂ ಸುವಿದ್ಯಾಭ್ಯಾಸ-ಭಾಗ್ಯಮುಂ ಭಾಗ್ಯಮುಮಿಲ್ಲದೆನಸುಂ ರಾಜಯೋಗ್ಯರಾಗದುದಂ ಕಂಡತಿಬಳಮಹಾರಾಜಂ ತದೀಯಾನ್ವಯಾಗತಮಂ ಪುರೋಹಿತಾಸ್ಪದಮಂ ಮಂತ್ರಿಪದಮುಮಂ ದಾಯಿಗರ್ಗೆ ಕುಡುವುದುಂ ಮತ್ಪುತ್ರರಗ್ನಿಭೂತಿಯುಂ ವಾಯುಭೂತಿಯುಂ ಸಿಗ್ಗಾಗಿ ವಿದ್ಯಾಕಾಂಕ್ಷಿತರಾಗಿರ್ಪುದಂ ಕಂಡವರಂ ತಮ್ಮಲ್ಲಿ ಗಟ್ಟಿದೆನವರಂ ತಾವು ಕೈಕೊಂಡು ಸಕಲಕಲಾಕುಶಲರಾಗಿ ಮಾಳ್ಪುದೆಂದು ಬಂದ ವಿನಯವತ್ತಳೆಯ ಪದಕಮಂ ಪರಿಭಾವಿಸಿ ನೋಡಿ ಮಯ್ದುನನ ಮರಣಕ್ಕೆ ಕಟ್ಟುವಡೆದು ಮನದೊಳೆ ಸೈರಿಸಿ ತನ್ನೊಳಿಂತೆಂಗು-ಮಾನಿವಂದಿರನಾದರಿಸಿ ಪಸರಂಗೊಟ್ಟೆನಪ್ಪೊಡೆನಗೆ ಸುಸರಮಾಗಿ ಬೆಸಕೆಯ್ಯ-ಲಱೆಯರಱೆಯದಂದದಿನುಱೆ ಸೆಱೆಗೆಯ್ದು ಪೆಱರ ಮಾರ್ಗದೊಳಿರ್ದಡಲ್ಲದೆ ತಱೆಸಂದು ನೆಗಟಿರೆಂದು ಮೇಲ್ಮಲೆಗೆಯ್ಯದೆ ಬಲ್ಮೊಗ್ಗಂ ಮಾಡಿ ತನ್ನಳಿಯಂದಿರ ಮೊಗಮಂ ನೋಡಿ

ಇದಱಿಂದಂ ಬಿಸವಂದಮಾಗಿ ಪಿರಿದುಂ ವಿಭ್ರಾಂತಿಯಂ ಮಾಡಿದ
ಪ್ಪುದು ಮುನ್ನಿಲ್ಲದ ತನ್ನ ವರ್ತನಮಿದೊಂದಾಶ್ಚರ್ಯಮಂ ತೋಱೆದ
ಪ್ಪುದು ಮಿಥ್ಯಾವಿನಯಪ್ರಪಂಚನಂ ಕೈಮಿಕ್ಕು ಠಕ್ಕಿಕ್ಕಿದ
ಪ್ಪುದು ಪತ್ರಂ ಬಹು ಚಿತ್ರಮಪ್ಪುದಿದು ಮಚ್ಚಿತ್ತಕ್ಕಿದೇಂ ಚಿತ್ರಮೋ ೫೩

ವ|| ಅದಲ್ಲದೆಯುಂ

ಅನುಜೆಯರೊಳ್ ಕಾಶ್ಯಪಿ ಮ
ಯ್ದುನರ್ಕಳೊಳ್ ಸೋಮಶರ್ಮನಳಿಯಂದಿರ ಮಾ
ತಿನೊಳಗ್ನಿವಾಯುಭೂತಿಗೆ
ಳೆನಿಸಿದರಂ ಕಥೆಯೊಳಾದೊಡಂ ಕೇಳ್ದಱಿಯೆಂ ೫೪

ಎಮಗೆ ಜಗದ್ವಿದಿತಂ ಸೂ
ರ್ಯಮಿತ್ರವೆಸರುಂಟು ಮಱಸಲಾಗದಮೋಘಂ
ನಿಮಗದಱೊಳೆಲ್ಲಮೇಂ ನಿ
ಮ್ಮ ಮಾವನೆನಿಸಿರ್ದ ಸೂರ್ಯಮಿತ್ರನೆನಲ್ಲೆಂ ೫೫

ವ|| ಎಂತುಂ ನಿಮಗೆ ವಿದ್ಯಾಭ್ಯಾಸಂಗೆಯ್ವ ತಾತ್ಪರ್ಯಮುಳ್ಳೊಡೆ ನೀಮಾರ್ಗಾದೊಡಮಕ್ಕೆ ನಿರಾಲಸ್ಯದಿಂ ನಿರ್ಬಂಧದಿಂ ನಿರ್ವಿಕಲ್ಪದಿಂ ನೀಮಿರ್ವರುಂ

ನಿಶ್ಚಯುವೋದುವೊಡಾವುಮಾ ಮಾರ್ಗದಿಂದೋದಿಸಿ ಪಂಡಿತರಾಗೆ ಮಾಟ್ಟೆವಾಹಾರಾಚ್ಛಾದನಂಗಳಂ ನಿಮ್ಮಮೆಚ್ಚಿದೆಡೆಯೊಳ್ ಎಡೆಮಾಡಿಕೊಂಡು ನೀಡಿರದೋದಿಮೆಂಬುದುಮವರೊರ್ವರ ಮೊಗಮಂ ನೋಡಿ ನಾವುಂತುಂ ವಿದ್ಯಾರ್ಥಿಗಳಾಗಿ ಗುರುಶುಶ್ರೂಷಾದಿ ವ್ಯಾಪಾರದಿಂ ಭರವಸಂಗೆಯ್ದು ಸಕಲಶಾಸ್ತ್ರಾಸವಂ ಗೆಯ್ವಮೆಂದಿರ್ಪಮಿವರ್ ನಮ್ಮನತ್ಯಾಗ್ರಹದಿಂ ಶಿಕ್ಷಿಸಿ ಸಾಕ್ಷರಿಕರಂ ಮಾಱಿಪ್ಪೊಡೆ ನಮ್ಮೊಲ್ಲದುದಾವುದೆಂದು ತಮ್ಮಿರ್ವರುಮೇಕಸ್ಥರಾಗಿ ಸೂರ್ಯಮಿತ್ರನ ನುಡಿಗೊಡಂಬಟ್ಟು ಪೊಡೆವಟ್ಟು

ಎಮಗೀ ಪೊಟಿಲೊಳ್ನಿಚ್ಚಂ
ಭ್ರಮಿಯಿಸಿ ಮಜ್ಜೀವರಕ್ಷಣಾರ್ಥಂ ಶಾಸ್ತ್ರ
ಕ್ರಮಮನಱಿವನ್ನೆಗಂ ಗ್ರಾ
ಸಮಾತ್ರಮಿಲ್ಲಾಯ್ತೆ ಸೂರ್ಯಮಿತ್ರಸ್ವಾಮಿ ೫೬

ವ॥ ಎಂಬುದುಮವರ ಮನದ ಪರಿಚ್ಛೇದಮಱಿದು ಕೆಲವು ದಿವಸಕ್ಕೆ

ವಿಲಸದ್ವಾಪರ ವಾರಯೋಗ ಗುಣಮುಂ ಸಲ್ಲಗ್ನಮುಂ ತಾರಕಾ
ಬಲಮುಂ ಕೂಡೆ ನವಗ್ರಹೋತ್ತಮಬಳಂ ಕೈಗಣ್ಮೆ ಧಾತ್ರೀಹಿತಂ
ಗಳನವ್ಯಾಕುಲಮೋಕ್ಷಸಾಧನಗಳಂ ಸಿದ್ಧಂನಮಾದ್ಯಕ್ಷರಂ
ಗಳನಿಷ್ಟಾರ್ಥಕರಂಗಳ ಸಕಲವಿದ್ಯಾಬೀಜಪುಂಜಂಗಳಂ ೫೭

ವ॥ ಮೊದಲ್ ತೊಡಗಿಸಿ ನಿರ್ಬಂಧದಿಂದಮೋದಿಸುತ್ತುಮವಂದಿರ ತಿರಿದು ತಂದ ಕೂಟಿವೇಗಣ್ಗಿಂದಾಗಿಯುಮಿನಿಸೆಣ್ಣೆಯುಮನುಪ್ಪುಮಂ ಮೊದಲಾಗಿಯು ಮೆಱೆಯಲುಮಿಕ್ಕಲುಂಬೇಡೆದು ತನ್ನ ಮನೆಯ ಬಾಣಸಿಗರ್ಗೆ ಪೇೞ್ದು ತಾನುಮಾ ಮಾರ್ಗದೊಳತಿನಿಷ್ಠುರತೆಯಿಂ ಶಿಕ್ಷೆಗೆಯ್ಯುತ್ತುಂ ಕತಿಪಯ ಸಂವತ್ಸರಂಗಳ್ ಪೋಪುದುಮಗ್ನಿಭೂತಿಯುಂ ವಾಯುಭೂತಿಯುಂ ವೇದವೇದಾಂತ ತರ್ಕ ವ್ಯಾಕರಣಾದಿ ಸಕಲವಿದ್ಯಾಪಾರಗರಾಗಿರ್ದಲ್ಲಿ ಪಿರಿಯಾತಂ ಸ್ವಭಾವದಿಂ ಋಜುಮಾರ್ಗ ವೃತ್ತಿಯಂ ತಳೆದು ವಿನಯವಿಭೂಷಣನಾದಂ ಕಿಱಿಯಾತಂ ನಿಸರ್ಗದಿಂ ವಕ್ರಗತಿ ಪರಿಣಾಮದಿನು ದ್ವೃತ್ತಚಿತ್ತದಿನುನ್ಮತ್ತನಾದನಿಂತವರಿರ್ವರುಮೊಂದು ದಿವಸಂ ಸೂರ್ಯಮಿತ್ರಂಗೆ ಲಲಾಟತಟನಿಹಿತಕರಕಮಳ ಮುಕುಳರಾಗಿ ನಿಂದಿರ್ದಗ್ನಿ ಭೂತಿ ನಿರ್ಭರಭಕ್ತಿಭರದಿಂ

ನಿಮ್ಮ ದಯೆಯಿಂದಮನುಪಮ
ಸಮ್ಮತಮಂ ಹಿತಮನಖಿಳಶಾಸ್ತ್ರಾಗಮಮಂ
ನಿಮ್ಮಿಂದಮಱಿದೆವದಱಿಂ ।
ನಿಮ್ಮುಪಕಾರಮನದೇತಱಿಂ ನೀಗುವೆಮೋ ೫೮

ಮಣಿಭೂಷಣ । ದೇಸಿಗರ್ಕಳನಖಿಲ್ಯರನೆಮ್ಮನೊಱಿಲ್ದು ವಿ
ದ್ಯಾ ಸಭಾನಿರತರಾಗಿಸಿದಿರ್ ನಿಮಗಂ ಸಮಂ

ತೀ ಸುವೇದಿಗಮುದಾತ್ತತೆಯಿಂದಮೆ ಗಡ್ಡಮುಂ
ಮೀಸೆಯುಂ ಬೆರಸು ಪುಟ್ಟಿದೆವೆಂದವಧಾರಿಸಿಂ ೫೯

ವ॥ ಎಂದು ಬೀೞ್ಕೊಳ್ವುದುಮವರ್ಗೆ ತನ್ನನಱಿಪುವುಜ್ಜುಗದಿಂ ಮಜ್ಜನಂಬುಗಿಸಿ ದಿವ್ಯವಸ್ತ್ರಾಭರಣಂಗಳನುಡಲುಂ ತುಡಲುಮಿತ್ತು ತನ್ನ ಪಂತಿಯೊಳುಣಲಿಕ್ಕಿಸಿ ಕಪ್ಪುರಂ ಬೆರಸು ತಂಬುಲವಂ ಕೊಟ್ಟು ನಡೆಗಟ್ಟೆಗಳನಿರ್ಬರ್ಗಮೇಱಲ್ ಕೊಟ್ಟು ಪಿರಿದಾಳಂ ನೆರಂ ಬೇೞ್ದು ಕಿಱಿದಂತರಂ ಕಳಿಪುತ್ತುಂ ಬಂದು ಪುರಬಹಿರುಪವನೋದ್ದೇಶದೊಳ್ ನಿಂದು

ನಿಮಗಾಂ ಪರ್ವದಿನಂಗಳೊ
ಳಮಾಗಿಯುಂ ಕಿಂಚಿದನ್ನಮಂ ಕಿಂಚಿತ್ತೈ
ಲಮನಕ್ಕಮೆಱೆಯಿಮೆಂದೆ(ಂ)
ದುಮಱೆಯೆನೇನೆಂಬೆನೆನ್ನ ನಿಷ್ಕರುಣತೆಯಂ ೬೦

ಆಂ ನಿಮಗೆ ಮಾವನೆಂ ನೀ
ಮೆನ್ನನುಜೆಯ ತನುಜರಪ್ಪಿರಿದು ನಿಶ್ಚಯಮಾಂ
ಮುನ್ನಮೊಸೆದೆನ್ನನಱಿಪಿದೊ
ಡೆನ್ನನಣಂ ಬಗೆಯಿರೆಂಬ ಬಗೆಯನೆ ಬಗೆದೆಂ ೬೧

ಕಿಱಿಯಂದು ತಂದೆ ಬಗ್ಗಿಸ
ಲಱಿಯನೆ ತಾಯ್ ಜಡಿದು ತಿಳಿಪಲಱಿಯಳಿ ವಿಷಯ
ಕ್ಕೆಱಗಿದರಂ ತಲೆಗೇಱಿಸೆ
ಕೊಱಚಾಡುವರೆಂದುಪಾಯದಿಂದೋದಿಸಿದೆಂ ೬೨

ವ॥ ಎಂದು ತನ್ನುಕೈವತನದಿನೋದಿಸಿದ ವೃತಾಂತಮನಾದ್ಯಂತಮಱಿಯೆ ಪೇೞ್ದಿನ್ನೆಮ್ಮೊಳಪ್ಪ ಬಂಧುತ್ವಮನೆಂದು ಮಱೆಯದಿರ್ಪುದೆಂದು ಬುದ್ಧಿವೇೞ್ದು ಪರಸಿ ಪೋದನಿತ್ತಲಾ ವಾಯುಭೂತಿ ಮಹಾಪ್ರಳಯಕಾಲದ ವಾಯುವಿನಂತೆ ಮಾಮಸಕಂ ಮಸಗಿ

ಅಗಣಿತಪುಣ್ಯನಬ್ಬೆಯೊಡಪುಟ್ಟಿದ ಮಾವನಶೇಷಶಾಸ್ತ್ರಪಾ
ರಗನತಿ ಧನ್ಯನೆಂದು ಪರಿಭಾವಿಸಿ ಬಂದೊಡವಜ್ಞೆಗೆಯ್ದು ನಾ
ಯ್ವುಗದೆಡೆಯೆಲ್ಲಮಂ ಪುಗಿಸಿ ಬಯ್ಕದ ಭಾಜನಮಾಗೆ ಮಾಡಿ ತೊ
ಟ್ಟಗೆ ವಿಭು ಸಾಯೆ ಪೊಯ್ದು ಕವಿಯಂ ಪಿಡಿದೂಡಲೊಡರ್ಚಿ ಬಂದನೇ ೬೩

ತಾಂ ಗಡ ನಮಗೀಗಳೇ ಮಾ
ವಂ ಗಡ ನಾಮುಂ ಗಡೀಗಳಳಿಯಂದಿರೆವಿ
ನ್ನುಂ ಗಡ ನಮಗಂ ತಮಗಂ
ಸಂಗತಸಬಂಧಬಂಧುರಂ ಬಂಧುತನಂ ೬೪

ಪಸಿದಿರ್ ನೀರಡಿಸಿದಿರಂ
ದು ಸೇದೆಯಂ ಶ್ರಮಮನಱಿವುದೆನಸುಂ ಗೆಂಟಾ
ಬಿಸಿಲೊಳ್ ನಿಂದೊಡೆ ನೆೞಲ
ತ್ತ ಸಾರಿಮೆಂದೆಂದುಮಱಿವನಲ್ಲಂ ನಮ್ಮಂ ೬೫

ವ॥ ಎಂಬುದುಮಗ್ನಿಭೂತಿ ವಾಯುಭೂತಿಯಂ ಬಿಡೆ ಜಡಿದು

ಮುನ್ನವತಿವ್ಯಸನಪರ
ರ್ಗೆನ್ನಂ ಪೇೞ್ದಿಂದು ಬಗೆಯಲಱಿಯಲೆನುತ್ತುಂ
ತನ್ನಂ ಪೇೞಿದೆ ಪೇೞ್ದಿಂ
ಸನ್ನುತ ವೇದಾದಿ ಶಾಸ್ತ್ರಮಂ ದಯೆಯಿಂದಂ ೬೬

ಮತಿಗೆಟ್ಟು ಬಾಯ್ಗೆವಂದಂ
ತೆ ತಿರಸ್ಕರಿಸುವುದು ಪುರುಷಕಾರಮೆ ಗುರುವಂ
ಶ್ರುತಹೀನರಂತೆ ಕೆಮ್ಮನೆ
ಕೃತಘ್ನರಾದಂದು ನಮಗಿಹಂ ಪರಮುಂಟೇ ೬೭

ಎಂಬುದುಂ ವಾಯುಭೂತಿ ಕಿನಿಸಿ ಕಿ-ಂಕಿ(ರಿ)ವೋಗಿ ॥

ಅವನುಪಕಾರಮನಾಂ ಪೇ
(ೞ)ವೇೞ್ವುದೆ ನಮ್ಮ ತಿರಿದು ತಂದುಣ್ಬಶನ
ಕ್ಕವ(ರ)ಣ್ಣೆ ಸೂಜಿಮೊನೆಯೆನಿ
ಸುವೆಣ್ಣೆಯುಂ ಬಂಗುಮಾದ ಕೞಿಯುಂ ಪೇೞ್ಗುಂ ೬೮

ಪದೆಪುಗೆಡ(ಲ)ಬ್ಬೆಯೊಡವು
ಟ್ಟಿದ ಮಾವನ ಮನೆಯೊಳುಂಡುಟ್ಟುಂ ನೀ
ಮೊದೆದೊಡೆಗೆಯ್ವೆಯೊ ನಾಯು
ಣ್ಣದ ದೋಣಿಯೊಳೂಡಿದೊಂಗೆ ಪದಯಿದನೆ ಕರಂ ೬೯

ವ॥ ಅಲ್ಲದೆಯುಂ ದುರಾತ್ಮನಾತ್ಮೀಯ ಭವನದೊಳ್ ಸದಾಕಾಲಂ ಮಹಾಜನಕ್ಕೆ ಸಹಸ್ರಭೋಜನಮನಿಕ್ಕುವಂ ಗ್ರಹಣ ಸಂಕ್ರಮಣ ಪುಣ್ಯತಿಥಿಗಳೊಳಂ ಮೊದಲಾಗಿಯಂ ನಮಗಕ್ಕಮಾತ್ರಾಹಾರಮಂ ಬಿಂದುಮಾತ್ರ ತೈಲಮುಮನಿಕ್ಕುವುದುಮೆಱಿವುದು (ಮಿ)ನಿಸಾನುಂ ಗೆಂಟು

ತನಗಿಕ್ಕುವೆಱಿವ ಕರುಣಂ
ಮನದೊಳಮಿನಿತಿಲ್ಲ ಪಾಪಕರ್ಮನವಂ ಮಾ

ವನೆ ನಮ್ಮ ಕರಕೆಯೊಳ್ ಕ
ಲ್ಲನಿಕ್ಕುವಂ ನಿಕ್ಕುವಂ ಪ್ರಭಾಕರಮಿತ್ರಂ ೭೦

ವ॥ ಎಂದು ನುಡಿದ ನಿಜಾನುಜನ ಪರುಷತರವಚನವ್ರಾಂತಗಳಂ ಕೇಳ್ದು ಮಱುಮಾತುಗುಡದೆ

ಎನಿತಖಿಳಕಳಾಕೋವಿದ
ನೆನಿಸಿದೊಡಂ ಪಾಪಿ ಧರ್ಮದತ್ತೆಸಗನದೆಂ
ತೆನೆ ಸಂಸ್ಕಾರ ಶತೇನಾ
ಪಿ ನಗೂಧಃ ಕುಂಕುಮಾಯತೇಯೆಂಬುದಱಿಂ ೭೧

ವ॥ ಎಂಬಿದಂ ತನ್ನಂತರ್ಗತದೊಳೆ ಬಗೆದು ಪೆಱಪೆಱದು ವಾರ್ತೆಗಳನೆ ನುಡಿಯುತ್ತುಂ ಪಯಣದ ಮೇಲೆ ಪಯಣಂ ಬಂದು ಕೆಲವು ದಿವಸಕ್ಕೆ ಕೌಶಂಬಿ ಯನೆಯ್ದೆವಂದು ಶುಭದಿನಮುಹೂರ್ತದೊಳ್ ನಿಜಾಂಬಿಕಾನಿವಾಸಕ್ಕಾಗಿ ಬರ್ಪಾಗಳ್

ತ್ರಿಪದಿ ॥ ಬಡವಂ ನಿದಾನಮಂ ಪಡೆದಂತೆ ಕುರುಡಂ ಕ
ಣ್ಬಡೆದಂತೆ ಮನದೊಳ್ ಪಿರಿದುಮುತ್ಸಾಹಮಂ
ಪಡೆದಳಾತ್ಮಜರ ಬರವಿಂದೆ ೭೨

ವ॥ ಆ ಪ್ರಸ್ತಾವದೊಳ್

ಅಪರಿಮಿತಭಕ್ತಿಯಿಂ ತ
ನ್ನ ಪದಾಂಭೋಜಕ್ಕೆ ವಿನತರಾಗಲೊಡಂ ಕಾ
ಶ್ಯಪಿ ಸಂತೊಸದಿಂ ತಟ್ಟೈ
ಸಿ ಪರಸಿದಳ್ ಪಲವು ಪರಕೆಗಳಿಂದಂ ೭೩

ವ॥ ತದನಂತರಮವರ್ ತಮ್ಮ ಪೋದ ಬಂದ ವೃತ್ತಾಂತಮೆಲ್ಲಮಂ ಸವಿಸ್ತರಂ ಪೇೞ್ದು ಪ್ರಶಸ್ತಲಗ್ನದೊಳಾತ್ಮೀಯ ಸ್ವಾಮಿಯಪ್ಪತಿಬಳಮಹಾರಾಜನನುಚಿತ ಪ್ರತಿಪತ್ತಿಗಳಿಂ ಕಂಡು

ಶ್ಲೋಕಾರ್ಥೋಪನ್ಯಾಸ
ಶ್ಲಾಘ್ಯನಿನಾದ ಮುದಮಾಗಳ್ ನವಮಾರ್ಗೀ
ಶ್ಲೇಷಂ ಮಿಗೆ ತೋಱಲುಪ
ಶ್ಲೋಕಿಸಿ(ದಿಂ) ಬೞಿಕೆ ಕೊಟ್ಟು ಶೇಷಾಕ್ಷತಮಂ ೭೪

ವ॥ ಮತ್ತಂ ಸಮಸ್ತ ಕಳಾಕಳಾಪಾಡಂಬರಮಂ ಮೆಱೆದು

ಸದಳಂಕಾರೋಕ್ತಿಯುಂ ಸೂಕ್ತಿಯುಮೆಸೆಯಲುಪನ್ಯಾಸವಿನ್ಯಾಸಮಂ ತೋ ।
ರ್ಪುದುಮಿಂತಾರ್ ಬಲ್ಲರಿಂತಾರ್ ಪರಿಣತರೆನುಂತು ತತ್ಸಭಾಮಧ್ಯದೊಳ್ ತ
ದ್ವಿದರೆಲ್ಲಂ ಕೀರ್ತಿಸುತ್ತಿರ್ಪುದುಮದನೆ ಮನಂಗೊಂಡು ಚಿತ್ತೋದಿತಾನಂ
ದದಿನಿರ್ದಂ ಪ್ರೋನ್ನತಾಂಸಂ ಪರಮಜಿನಮತಾಂಭೋಜಿನೀರಾಜಹಂಸಂ ೭೫

ಇದು ಸಮಸ್ತವಿನಯಜನವಿನುತ ಶ್ರೀವರ್ಧಮಾನಮುನೀಂದ್ರ
ವಂದ್ಯ ಪರಮಜಿನೇಂದ್ರಪಾದಪದ್ಮವರಪ್ರಸಾದೋತ್ಪನ್ನ
ಸಹಜಕವೀಶ್ವರ ಶ್ರೀಶಾಂತಿನಾಥಂಪ್ರಣೀತಮಪ್ಪ
ಸುಕುಮಾರಚರಿತದೊಳಗ್ನಿ ಭೂತಿ ವಾ
ಯುಭೂತಿವಿದ್ಯಾಭ್ಯಾಸಕಥನಂ
ದ್ವಿತೀಯಾಶ್ವಾಸಂ

೩. ತೃತೀಯಾಶ್ವಾಸಂ

ಶ್ರೀಗಧಿಪತಿ ವಿಸ್ಮಯಮನ ।
ನಾಗಿ ಬೆರಲ್ಮಿಡಿದು ವಿಪ್ರತನಯರ ವಿದ್ಯೋ॥
ದ್ಯೋಗಕ್ಕೆ ಮೆಚ್ಚಿ ತಲೆಯಂ ।
ತೂಗಿದನಾಗಳ್ ಸರಸ್ವತೀಮುಖಮುಕುರಂ ॥೧॥

ವ॥ ತದನಂತರಮವರನುಚಿತಾದರದಿನಾದರಿಸಿ ನಿಜಾನ್ವಯಾಗತ ಪುರೋಹಿತಾಸ್ಪದಮಂತ್ರಿಪದಮಂ ದಯಂಗೆಯ್ದು

ತುರಗವ್ರಾತಂಗಳಂ ವೇಸರಿಗಳನುಚಿತಾನರ್ಘ್ಯರತ್ನಂಗಳಂ ಕುಂ ।
ಜರ ಸಂಘಾತಂಗಳಂ ತಾನತಿಶಯಪರಮಾನಂದ ವಸ್ತ್ರಂಗಳಂ ಭಾ॥
ಸುರನಾನಾರಾಜ್ಯಚಿಹ್ನಂಗಳನನುಪಮಮಾದಗ್ರಹಾರಂಗಳಂ ನೀ।
ಡಿರದಾಗಳ್ ಕೊಟ್ಟನುತ್ಸಾಹದಿನತಿಬಳಭೂರಾಜನಾದಿತ್ಯತೇಜಂ ॥೨॥

ವ॥ ಆಗಳವರ್‌ಮಹಾಪ್ರಸಾದಮೆಂದು ಕೈಕೊಂಡು ಬೀಡಿಂಗೆ ವಂದು ಸಕಲಶಾಸ್ತ್ರಂಗಳಂ ಪಲಗ್ರಂ ವಕ್ಖಾಣಿಸುತ್ತುಂ ಭುವನದೊಳಂ ರಾಜಭವನದೊಳಂ ಮಾನ್ಯರುಂ ಧನ್ಯರುಮಾಗಿ ಸಕಲಸಂಸಾರಸುಖಸರ್ವಸ್ವಮಂ ವೃಥೆಯಾಗದಂತನು ಭವಿಸುತ್ತುಮಿರ್ದರಿತ್ತಲಾ ಮಗಧದೇಶದ ರಾಜಗೃಹಾಧಿರಾಜಂ ಸುಬಳಮಹಾರಾಜ ನೊಂದು ದಿವಸಂ ಸೂರ್ಯಮಿತ್ರನುಂ ನಯುಗುಪ್ತನುಂ ಇಷ್ಟಶರ್ಮನುಂ ಜಯುಂ ತನುವೆಂಬಾತ್ಮೀಯು ಪರಮವಿಶ್ವಾಸಭೂಮಿಗಳಪ್ಪನಾಲ್ವರ್ ಮಂತ್ರಿಗಳ್ವೆರಸು ಮಂತ್ರ ಮೇಳಾಪಕದೊಳಿರ್ದು ತತ್ಕಾರ್ಯಾಲೋಚನ ತಾತ್ಪರ್ಯಪರ್ಯವಸಾನದೊಳ್ ಮಜ್ಜನಂಬುಗುತ್ತುಂ

ಬೆಲೆಗೆಯ್ದವಾರವೀ ಜಗ ।
ದೊಳುಳ್ಳ ವಸ್ತುಗಳದರ್ಕೆ ನಿಶ್ಚಯಮೆಂಬು ॥
ಜ್ವಲವಿಲಸದರುಣರತ್ನಾಂ
ಗುಲೀಯಮಂ ಕಳೆದು ತನ್ನ ಬೆರಲಿಂದರಸಂ ॥೩॥

ವ॥ ಕೆಲದೊಳಿರ್ದ ಸೂರ್ಯಮಿತ್ರಮಂತ್ರಿಯ ಕಯ್ಯಲ್ಲುಡುವುದುಮಾತನುಮದಂ ತನ್ನ ಬೆರಲೊಳಿಟ್ಟುಕೊಂಡು ಮಱುದಿವಸಂ ಪ್ರಭಾತಸಮಯದೊಳ್

ಪುರಬಹಿರುಪವನೋದ್ದೇಶೋಚಿತಾಂಭೋರುಹವನಕ್ಕೆ ವಂದು ಸಂಧ್ಯಾವಂದನ ಕ್ರಿಯಾನಿಮಿತ್ತಸ್ನಾನಾನಂತರಂ

ಅರ್ಘ್ಯಮನೆತ್ತಿ ದಿನೇಶಂ ।
ಗರ್ಘಿಸಿ ಪೊಡೆವಟ್ಟು ಸೂಸಿ ನೀರಂ ಮಂತ್ರಾಂ ॥
ತರ್ಘಟನೆಯಿಂದೆ ಬಿರ್ದ್ದುದ ।
ನರ್ಘ್ಯಾತಿಶಯಾಂಗುಲೀಯಮಂಗುಲಿಯಿಂದಂ ॥೪॥

ವ॥ ಆಗಳ್ ಸೂರ್ಯಮಿತ್ರಂ ನಿರ್ವರ್ತಿತಸಂಧ್ಯಾನಿಯಮಕ್ರಿಯಾಯೋಗ ನಾಗಿ ರತ್ನಾಂಗುಲೀಯುವಂಗುಳಿಯಿಂದುರ್ಚಿ ಬಿರ್ದುದನಱಿಯದೆ ಗಂಧಾಕ್ಷತ ಕುಸುಮತಾಂಬೂಲಸ್ರಗ್ವಿಳಾಸಾಲಂಕೃತನಾಗಿ

ಇಂ ಮನೆಗೆವೋಪೆನೆಂದಾ।
ತಂ ಮಹಿಮೋಪೇತನಾಗಿ ಮೆಲ್ಲನೆ ಬರುತಂ ॥
ಕೆಮ್ಮನೆ ಬೆರಲಂ ನೋಡಿಯೆ ।
ಭಮ್ಮೆಂದೆರ್ದೆದೆಱಿದು ಮಱುಗಿ ಬಾಯಂ ಬಿಟ್ಟಂ ॥೫॥

ವ॥ ಅಂತು ತನ್ನ ಬೆರಲೊಳುಂಗುರಮಂ ಕಾಣದೆ ತನ್ನ ಪರಿಜನಮುಂ ತಾನುಮಾಕುಲವ್ಯಾಕುಲಚಿತ್ತರಾಗಿ ಪೋದ ಬಂದ ನಿಂದೆಡೆಗಳೊಳೆಲ್ಲಮಱಿಸಿ ಕಾಣದೆ ಚಿಂತಾಕ್ರಾಂತರಾಗಿ ಸುಬಳಮಹಾರಾಜನೆನ್ನಂ ಪರಮ ವಿಶ್ವಾಸ ಭೂಮಿ ತನ್ನ ಬೆರಲೊಳಿರ್ದನರ್ಘ್ಯಮಪ್ಪ ರತ್ನ ಮುದ್ರಿಕೆಯುಂ ಪಿಡಿದಿರಿಮೆಂದು ಕೊಟ್ಟ ನಿನ್ನೆನ್ನ ನಿರ್ವಾಹಮುಮರಸನದೆಸೆಯೊಳಾದ ಮೋಹಮುಮಟಿದುದೆಂದು ಮಲುಮಲ ಮಱುಗುತ್ತುಂ ಮನೆಗೆವಂದು ತನ್ನಱಿವ ನಿಮಿತ್ತಂಗಳೊಳ್ ನೋಡಿಮುಂ ನಿಟ್ಟಿಸಲಾಱದೆ

ಸುಬಳಂ ನಚ್ಚುವನಾನುಮೊಂದೆರಡು ದೃಷ್ಟಂಗಂಡೆನಸ್ಮನ್ಮನ ।
ಶ್ಯಬಳಂ ತೀರ್ವಡೆ ತೀರ್ಗುಮಾ ಪರಮಹಂಸಸ್ವಾಮಿಯಿಂದೆಂದು ವಿ।
ಕ್ಲಬದಿಂ ತಾಂ ಬರವೇಟ್ಟುದುಂ ಪರಮಹಂಸಂ ಬಂದು ಕುಳ್ಳಿರ್ದೊಡಿ ।
ತ್ತು ಬಟಿಕ್ಕರ್ಘ್ಯಮನೆಯ್ದೆ ನೀಮೆಮಗೆ ಪೇೞಿಂ ಸ್ವೇಚ್ಛೆಯಿಂ ಪೃಚ್ಛೆಯಂ ॥೬॥

ವ॥ ಎಂಬುದುಮಾ ಪಂಡಿತಂ ಕನ್ನಗಳ್ಳನಂತೆ ಬಳಪಮಂ ತೆಗೆದು ಕಬ್ಬಿಗನಂತೆ ಗೋಮೂತ್ರಕವೃತ್ತಾಳಂಕೃತನಾಗಿ ಭಂಡಾರಿಗನಂತಾಯಮಂ ಪಿಡಿದು ಜೂದುಗಾಱನಂತೆ ಕವಡಿಕೆಯುಂ ತೆಗೆದು ತುರಗಾರೋಹಕನಂತಾರೂಢಕ್ರಮುಮಱಿದು ವೈದ್ಯನಂತೆ ಪಂಚಾಂಗಶುದ್ಧಿಯುಂ ನೋಡಿ ಮಂತ್ರವಾದಿಯಂತೆ ಗ್ರಹಗತಿಯುಂ ಕಂಡು ತಥಾಗತಮತೋಪಾಸಕನಂತೆ ತಾರಾಪಥಕ್ಕೆಱಗಿ ಕೃಷಿನಿರತನಂತೆ ರಾಸಿಯಂ ನಿಲಿಸಿ ವಿಹಗದಂತೆ ಖೇಚಕ್ರಮಂ ವರ್ತಿಸಿ ಮತ್ತಮಕ್ಷರಕೇವಳಿ ದೂತ ಚೇಷ್ಟೆ ಮೊದಲಾಗಿರಲಾ ಬಿಚ್ಚುವಂ ವಿದ್ಯೆಗಳೊಳೆಲ್ಲಮೊಚ್ಚತಂ ನೋಡಿದೊಡೊಂದೊಂದರ್ಕೆ ಮಚ್ಚರಿಸಿದಂತೆ ಪಚ್ಚು ಪಸರಿಸಿ

ನಿಚ್ಚಯ್ಸಲಾಱದುಮ್ಮೂರ್ಛದೊಳಚ್ಚಿಗಂಗೊಂಡು ಮೂರ್ಛೆಯಿಂದೆರ್ಚ್ಚತ್ತಂತೆ ಬೆಚ್ಚನೆ ಸುಯ್ಯು ತುಚ್ಛನಾಗಿರ್ದೀತಂ ತನ್ನಾಳ್ದನಲ್ಲಿ ನಿಚ್ಚಂ ಮೆಚ್ಚುವಡೆವುದುಂಟು ಪೇೞಲಱಿಯದೊಡೆನ್ನನಜ್ಞಾನಿಯೆಂದು ಮನ್ನಿಸಲಱಿಯನೆಂದು ತನ್ನೊಳವಧಾರಿಸಿ

ಇದು ಚಿಂತಾನಷ್ಟಮುಷ್ಟಿತ್ರಿಯದೊಳಱಿದೆಂ ಚಿಂತೆ ತಚ್ಚಿಂತೆಯಾಗಿ ।
ರ್ದುದು ಜೀವಾಜೀವಮೂಳತ್ರಯದೊಳನುಪಮಂ ಜೀವಮಾ ಜೀವಮುಂ ತ।
ಪ್ಪದೆ ನಾನಾಭೇದಸತ್ವವ್ರಜದೊಳಿದು ಚತುಷ್ಪಾದಿ ತದ್ಭೇದದೊಳ್ ತಾ।
ನಿದು ಶುಂಡಾಳಂ ನರೇಂದ್ರಂ ನಿಮಗೆ ಕುಡುವನಾಗಿರ್ದಪಂ ನೋಡೆ ದೃಷ್ಟಂ ॥೭॥

ವ॥ ಎಂಬುದುಂ ಸೂರ್ಯಮಿತ್ರನಾತನ ಪಸರಂಬಡೆದು ಕುಸುಮಿಸಿದ ಸಿಕತೆವೆತ್ತೆಸವ (?) ಪುಸಿಯ ಮಿಸುಪಂ ಕಂಡು ಕೆಟ್ಟದಱಿಂ ಕೆಟ್ಟು ಕೆಳೆಯಿಂಗಿಡಲಾಱದಿವರಱಿಯರೆಂದು ಪಱಿಯೆ ನುಡಿವುದು ಪುರುಷಾರ್ಥಮಲ್ಲೆಂದು ಪೊಗಟ್ಟು ಪಿರಿದುಮ್ಮಳಿಕೆಯಿಂ ಮನೆಯಂ ಪೊಱಮಟ್ಟು ಪೊಱವೊೞಲೊಳಱಸುತ್ತುಂ ಬರ್ಪನ್ನೆಗಂ ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ ಆಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ವಿಹಾರಿಸುತ್ತುಂ ಪರಮಜಿನಧರ್ಮಕೀರ್ತಿಯೆ ಮೂರ್ತಿಯಾದಂತುಗ್ರೋಗ್ರತಪಶ್ಚರಣ ನಿರತರಾಗಿಯುಮತ್ಯಂತ ಶಾಂತರಸಸ್ವರೂಪಮಂ ತಾಳ್ದಿ ಪಂಥಾತಿಚಾರ ನಿಯಮದಿಂ

ತನಗನತಿದೂರದೊಳ್ ನಂ ।
ದನವನದೊಳ್ ಸ್ಫಟಿಕಮಯಶಿಲಾತಳದೊಳ್ ಯೋ
ಗನಿಯೋಗದಿಂದಮಿರ್ದರ್ ।
ಮುನೀಂದ್ರರೊರ್ವರ್ ಸುಧರ್ಮನಾಮಾಚಾರ್ಯರ್ ॥೮॥

ವ॥ ಆಗಳಾ ದಿವ್ಯಾವಧಿಜ್ಞಾನಿಗಳಂ ನಿಧಾನಮಂ ಕಾಣ್ಬಂತೆ ಭೋಂಕನೆ ಕಂಡೀ ತಪೋಧನರೇನಾನುಂ ನಿಮಿತ್ತಂಗಳನಱಿವರಕ್ಕುಮುಂತುಂ ಪುತ್ತುಂ ಬತ್ತಲೆಯುಂ ಬಱಿದಿಲ್ಲೆಂಬ ನಾಟ್ನುಡಿಯುಂಟೆಂದವರನೆಯ್ದಿವರಕ್ಕುಮುಂತುಂ ಪುತ್ತುಂ ಬತ್ತಲೆಯುಂ ಬಱಿದಿಲ್ಲೆಂಬ ನಾಟ್ನುಡಿಯುಂಟೆಂದವರನೆಯ್ದಿ ಬರ್ಪ್ಪಾಗಳಾ ಪರಮಯೋಗಿಯುಂ ಪಂಥಾತಿಚಾರ ನಿಯಮನಿರ್ವರ್ತಿತ ಯೋಗನಿಯೋಗರಾಗಿ ತಮಗಿದಿರಂ ಬರ್ಪ ಸೂರ್ಯಮಿತ್ರನಂ ಕಂಡು ತದಾಕಾರೋಪಲಕ್ಷಿತದಿಂದತ್ಯಾಸನ್ನಭವ್ಯನೆಂದು ನಿಶ್ಚಯ್ಸಿ ದಿವ್ಯಾವಧಿಯಂ ಪ್ರಯೋಗಿಸಿ ನೋಡಿ

ಧರಣೀ ಚಕ್ರಾಧಿನಾಥಂ ಸುಬಳನೃಪತಿ ವಿಶ್ವಾಸದಿಂ ತನ್ನ ಕಯ್ಯುಂ ।
ಗುರುಮಂ ವಸ್ತೂತ್ತಕರಾಳಂಕೃತಮನನುಪಮೋದಾತ್ತರತ್ನಪ್ರಭಾಭಾ।
ಸುರಮಂ ಭಾನೂಗ್ರತೇಜಂ ಕುಡೆ ಕಿಡಿಸಿ ತೊೞಲ್ದಾಕುಳವ್ಯಾಕುಲಾಂತಂಃ ।
ಕರಣಂ ತಾನಾಗಿ ತಾತ್ಪರ್ಯದಿನೆಮಗಿದಿರಂ ಬಂದಪಂ ನಿರ್ವಿಕಲ್ಪಂ ॥೯॥

ಆಕ್ರೂಣ ಪರಮಲಕ್ಷಣ ।
ಲಕ್ಷಿತನೀ ಬರ್ಪ ಪಾರ್ವನೀ ಭವದೊಳೆ ಕ
ರ್ಮಕ್ಷಯ ಭಾಗಿಯೆನಿಕ್ಕುಂ
ಸಾಕ್ಷಾಜ್ಜಿನಶಾಸನಪ್ರದೀಪಕನಕ್ಕುಂ ॥೧೦॥

ಅಭಿಭವಿಸುವ ಶುಭಕರ್ಮ।
ಪ್ರಭಾವದಿಂದೀತನಿನ್ನೆಗಂ ಮಿಥ್ಯಾತ್ವಾ
ನುಭವಿಯೆನಿಸಿರ್ದನಾಸ ।
ನ್ನ ಭವ್ಯನವ್ಯಾಕುಲಾತ್ಮಕಂ ನಿರ್ವ್ಯಾಜಂ ॥೧೧॥

ವ॥ ಎಂಬನ್ನೆಗಂ ಸೂರ್ಯಮಿತ್ರಂ ಜಗನ್ಮಿತ್ರನನೆಯ್ದೆವಂದು ನಿಂದಿರ್ಪುದುಂ

ಸುಬಳಮಹೀನಾಥನ ಕ
ಯ್ಯ ಬೆರಲ ರತ್ನಾಂಗುಳೀಯಮಂ ಮಱವೆಯೊಳ ।
ತ್ತ ಬಿಸುಟ್ಟು ನೀಮಿದೇಕಿ ।
ತ್ತ ಬಂದಿರೆನೆ ಕೇಳ್ದು ವಿಸ್ಮಯಸ್ಮಿತಚಿತ್ತಂ ॥೧೨॥

ವ॥ ಸಾಷ್ಟಾಂಗಪ್ರಣತನಾಗಿ

ವನಧಿಪ್ರಾವೃತಧಾರಿಣೀತಳದೊಳಿಂತೀಯಂದದಿಂ ಪೇೞ್ವಿನೊ।
ರ್ವನುಮಂ ಕಾಣೆನೆ ಬಂದು ನಿಂದನಿತಱೊಳ್ ನಾಮಗ್ರಹಂ ಮಾಡಿ ಮ ।
ತ್ಸ್ವನಿತಾಂತರ್ಗತ (?) ಕಾರ್ಯಮಂ ನುಡಿದೆ ನಿನ್ನಿಂ ಬಿಟ್ಟು ದೈವಜ್ಞನಾ ।
ವನುಮಿಲ್ಲಾಂ ಕೃತಕೃತ್ಯನಾದೆನದಱಿಂದೀಗಳ್ ಮುನೀಂದ್ರೋತ್ತಮಾ ॥೧೩॥

ವ॥ ಎಂಬನ್ನೆಗಂ ಸೂರ್ಯಮಿತ್ರಂ ಜಗನ್ಮಿತ್ರನನೆಯ್ದೆವಂದು ನಿಂದಿರ್ಪುದುಂ

ವ॥ ನಿಮ್ಮಡಿ ನಿಮ್ಮ ಬೆಸಸಿದುಂಗುರಮನಾನೆಲ್ಲಿ ಕಿಡಿಸಿದೆನಾರ ಕಯ್ವಿರ್ದು ದಾವತೆಱದೊಳಱಿಸಿ ಕಾಣಲಕ್ಕುಮದಂ ಸವಿಸ್ತರಂ ಬೆಸಸಿಮೆಂಬುದುಂ ಸರ್ವಾವಧಿಜ್ಞಾನಲೋಚನಂ ದಿವ್ಯಾವಧಿಯಂ ಪ್ರಯೋಗಿಸಿ ನೋಡಿ

ಸಕಲೋರ್ವೀಪತಿ ಮಜ್ಜನಂಬುಗುತುಮಿರ್ದಾವೇಷ್ಟಕಾಖ್ಯಂ ತದೀ ।
ಯ ಕರಾಂಗುಲ್ಯದೊಳಿರ್ದು ಬಿರ್ದು ಸಲಿಲಾಂತರ್ಭಾಗದೊಳ್ ಪದ್ಮಿನೀ
ಮುಕುಲಾಲಂಕೃತಮಾಗಿ ಬಾಳರವಿರೋಚಿಸ್ಪರ್ಧಿಯಾಗಿರ್ಕುಮು ।
ತ್ಪಿಕಕೇಕೀಶುಕಭೃಂಗನಿಸ್ವನವನೋದ್ದೇಶಾಬ್ಜಿನೀಷಂಡದೊಳ್ ॥೧೪॥

ವ॥ ಇಂದು ನೀಮಾ ಸರೋರುಹಾಕರದೊಳ್ ಮಿಂದಾದಿತ್ಯಂಗರ್ಘ್ಯಮನೆತ್ತು ವಾಗಳ್ ಬೆರಲಿಂ ಸಡಿಲ್ದು ಬಿೞ್ದು ತತ್ಸರೋರುಹಾಕರದೊಳಗಣ ಸರೋಜಕುಟ್ಮಲದೊಳ್ ಸಿಲ್ಕಿರ್ದುದಾ

ಮುಗುಳ್ ನಾಳೆ ನೇಸಮೂರ್ಡುವಾಗಳ್ ನೀರ ಮೇಲೆ ನಾಲ್ವೆ ರಲಂತರಂ ಮೇಲೆ ಬೆಳಗಿರ್ದಾಗಳುಂಗುರಮಂ ಕಾಣ್ಬೆರೆಂಬುದುಂ ಹರ್ಷೋತ್ಕರ್ಷಿತಾಂತರಂಗನಾಗಿ ನಮಸ್ಕಾರಂಗೆಯ್ದಂದಿನ ದಿನಮೆಲ್ಲಂ ನಂದನವನಕ್ಕಂ ಕಮಲ ವನಕ್ಕಂ ಕಾಪಂ ಪೇೞ್ದು ತಾನುಮಾ ರಾತ್ರಿಯೊಳಾ ಸರಸಿಯ ಸಮೀಪದೊಳ್ ಜಾವಮಿರ್ದು ಆದಿತ್ಯೋದಯ ದೊಳ್ ಕೊಳದ ತಡಿಯೊಳ್ ಬಂದು ನಿಂದಿರ್ಪುದುಂ

ಮಿಹಿರಪ್ರದ್ಯೋತಿಸಂಧ್ಯಾಭವನ ಸಮಯದೊಳ್ ಪದ್ಮಿನೀ ಷಂಡದೊಳ್ಪೊದ
ಳ್ದು ಹಬಿರ್ವೆರ್ದುಂಗುರಂ (?) ನೀರೊಳಗಣ ಮುಗುಳೊಳ್ ಸಿಲ್ಕಿ ನಿರ್ರಿಕ್ತ ಸತ್ಯಂ
ಸಹಕೃತ್ಯಂ ಸೂರ್ಯಮಿತ್ರಾಹ್ವಯದಿನೆನಗೆ ತಾನೆಂದು ಪೇೞ್ವಂತಿರಿರ್ದ
ತ್ತು ಹಟಸ್ನೀರೇಜನಾಳಂನಿಮಿರ್ದುದನಿದಿರೊಳ್ ಪೊತ್ತು ತೋರ್ಪಂದದಿಂದಂ ॥೧೫॥

ವ॥ ಆಗಳಾ ರತ್ನ ಮುದ್ರಿಕೆಯನತ್ಯಂತ ಸಂತುಷ್ಟಾಂತರಂಗಸಂಗತನಾಗಿ ಕಂಡು ಕಳೆದುಕೊಂಡು ಸುಬಳಮಹಾರಾಜನ ಕೈಯೊಳ್ ಕೊಟ್ಟು ಬೞಿಕ್ಕೆ ತನ್ನ ಮನೆಗೆ ವಂದು ನಿಜಾಂಗನಾಮುಖವಿಲೋಕನಂಗೆಯ್ದು

ನೋಡೆಗೆ ನಿನ್ನೆ ಮುದ್ರಿಕೆಯ ಚಿಂತೆಯಿನೊಯ್ಯನೆ ಬೀದಿವೀದಿಯೊಳ್ ।
ನೋಡುತ ಪೋಗೆವೋಗೆ ಪುರಬಾಹಿರದೊಳ್ ಮುನಿನಾಥನೊರ್ವನ
ಳ್ಳಾಡದೆ ನಿಂದೊಡುಂಗುರದ ಕೇಡಿನೊಳಾದಟಲಟ್ಟಿ ವಿದ್ಯೆಯಂ ।
ನೋಡುವೆನೀತನೊಳ್ನುಡಿವೆನೆಂದಿರದಾದ ವಿಷಾದಚಿತ್ತಂ ॥೧೬॥

ಪೋಗಿ ದಿಗಂಬರನಂ ಪರ ।
ಮಾಗಮ ಕೋವಿದನನಮಿತಗುಣವಾರಿಧಿಯಂ
ರಾಗದ್ವೇಷಂಗಳ್ತನ ।
ಗಾಗದನಂ ಕಂಡು ನಿಲ್ವುದುಂ ತನ್ಮುನಿಪಂ ॥೧೭॥

ಮುನ್ನ ಕಂಡಱಿವಂತೆ ಮೇಣ್ಕೆಯಱಿಯಂದೆ ತೊಟ್ಟೊಡನಾಡಿದಂ
ತೆನ್ನನಾಗಳೆ ಕಾಣುತುಂ ಪ್ರಿಯದಿಂದೆ ನೋಡುತುಮಿರ್ದೊಡಾಂ ॥
ತನ್ನನೆನ್ನಯ ಚಿಂತೆಯಂ ಬೆಸಗೊಳ್ವೆನೆಂಬಿನಮನ್ನೆಗಂ ।
ರನ್ನದುಂಗುರಮಿರ್ದ ತಾಣಮನಾಗಳಾ ಮುನಿ ತೋಱಿದಂ ॥೧೮॥

ಪಿರಿದುಂ ತಾತ್ಪರ್ಯದಿಂದಾ ಮುನಿಪನೆನಗೆ ಪೇೞ್ದಂದದಿಂ ತತ್ಸರೋಜಾ ।
ಕರಹೇಮಾಂಭೋಜಿನೀಕುಟ್ಮಲವಿಲಸದಳಂಕಾರಮಾಗಿರ್ದುದಂ ಭಾ॥
ಸುರತೇಜೋರೂಪಮಾಗಿರ್ದುದನಹಿಮಕರಸ್ಪರ್ಧಿಯಾಗಿರ್ದುದಂ ನಿ।
ರ್ಭರಚಿಂತಾಕ್ರಾಂತನೆಂ ಮುದ್ರಿಕೆಯನಕುಟಿಳಸ್ವಾಂತನೆಂ ನೋಡಿ ಕಂಡೆಂ ॥೧೯॥

ಪಾದಚ್ಛಾಯೆಯನಿಟ್ಟು ಜೋಯಿಸದಭಿಪ್ರಾಯಂಗಳಿಂ ಹೋರೆಯಿಂ ।
ದೋದಿಂ ಪೃಚ್ಛಕಲಗ್ನದಿಂ ಸರುತದಿಂದಾರೂಢದಿಂ ನೋಡಿದಾ ॥
ಬೋಧಂ ನಚ್ಚಿನ ನಮ್ಮ ಜೋಯಿಸಿಗನೇನಂ ಪೇಱ್ವನೇನೆಂಬೆನಾ ।
ಬೋಧಂ ಭೋಂಕನೆ ಪೇಱ್ವ ಜೋಯಿಸಮದಾರ್ಗಂ ಮರ್ತ್ಯರೊಳ್ ದುರ್ಲಭಂ ॥೨೦॥

ಶಕುನಂ ಜೋಯಿಸಮಾದಿಯಾಗಿ ಪೆಱವುಂ ವಿಜ್ಞಾನವಿದ್ಯಾವಿಶೇ ।
ಷಕಳಾಳಾಪದೊಳಾಂ ಸಮಗ್ರನೆನಿದೊಂದಾಶ್ಚರ್ಯಮಂ ನೋಡ ಕೌ॥
ತುಕಮಂ ಜ್ಞಾನವಿಶೇಷಮಂ ಸಕಳವಿದ್ಯಾರತ್ನ ಶುಂಬತ್ಕರಂ ।
ಡಕಮಂ ಕಂಡೆನಿದೊಂದಪೂರ್ವಮನಿಳಾಲೋಕೈಕಸಂಪೂಜ್ಯಮಂ ॥೨೧॥

ಆ ವಿಜ್ಞಾನವಿಶೇಷ ಕ ।
ಳಾವಳಿಗಳೊಳೆಲ್ಲ ಪರಮಹಂಸನ ದೊರೆಯಂ ॥
ದೈವಜ್ಞನಱಿಯನೆಂದೊಡೆ ।
ದೇವಂ ಪೆಱನಾವನಾತನಿರೆ ಭೂತಳದೊಳ್ ॥೨೨॥

ಆ ಮಹಾನುಭಾವಂ ಮುನ್ನಮೆನ್ನನಱಿಯದೆಯುಂ ತನ್ನಱಿತಮಂ ಪ್ರಭಾವಿಸಿದನಾ ವಿಜ್ಞಾನಮನೇನದನವಶ್ಯಂ ಕುಡುಗುಮದು ಕಾರಣದಿನಾನಾ ಮುನೀಶ್ವರ ನಲ್ಲಿಗೆವೋಗಿ ಪೋದ ಮುಹೂರ್ತಮಾತ್ರದೊಳ್ ಕಲ್ತು ಬರ್ಪೆನೆನ್ನಱಿಯದ ನಿಮಿತ್ತ ಮಾಮವುದುಮಿಲ್ಲಿಲ್ಲಿ ಯೇನಾನುಮುಪಾಧ್ಯಾಯು ರಹಸ್ಯಮಕ್ಕುಮದುವಂ ಸೂಚನಾ ಮಾತ್ರದೊಳೆ ವಿದಿತಮಕ್ಕುಮದಲ್ಲದೆಯುಂ

ಉಪದೇಶಂ ದೊರೆಕೊಂಡುದಪ್ಪೊಡೆನಗೀ ತ್ರೈಲೋಕ್ಯ ಸಾಮ್ರಾಜ್ಯರಾ ।
ಜ್ಯಪದಂ ಸಾರ್ದನಿತುಂ ಮಹಾಮಹಿಮೆ ಸಾರ್ಗ್ಗುಂ ವಿದ್ಯೆಯಂ ಕೊಂಡು ಬಂ ।
ದಪೆನಾನೀಗಳೆ ಬರ್ಪ್ಪಿನಂ ಮನೆಗೆ ನೀನಿಂ ಪಯ್ತುಮಾಗೆಂದು ಪೇ ।
ೞ್ದು ಪುರಾಭ್ಯಂತರದಿಂದಮಂದು ಪೊಱಮಟ್ಟಂ ಸೂರ್ಯಮಿತ್ರದ್ವಿಜಂ ॥೨೩॥

ವ॥ ಅಂತು ತನ್ನ ಪರಿಜನಕ್ಕಂ ಸ್ವಜನವರ್ಗಕ್ಕಮಱಿಪದೆ ತನ್ನ ರೂಪನಱಿಪದೆ ರೂಪುಗರೆದು ತಾನೊರ್ವನೆ ನಟ್ಟನಡುವಿರುಳಪ್ಪಾಗಳ್ ರಾಜಗೃಹಾಧಿಸ್ಥಾನದಿಂ ಪೊಱಮಟ್ಟು ಬಂದು ಸುಧರ್ಮಾಚಾರ್ಯರನಾವನೋದ್ದೇಶದೊಳ್ ಕಾಣದೆ ವನಪಾಲರ್ಕಳನುಚರರಿಂ ನಿವೇದಿತಮಪ್ಪ ದಿಶಾಮಾರ್ಗದಿಂ ತಗುಲ್ದು ಪೋಗಿಪೆಱತೊಂದೂರ ಪೊಱವೊಟಲೊಳಱಿಗಿ ತುಱುಗಿ ನೆಱೆ ಸೊಗಯಿಸುವುದ್ಯಾನಮಧ್ಯ ಪ್ರದೇಶದ ಶಾಲದ್ರುಮಾಧಃಸ್ಥಳನಿವಾಸಿಗಳಾಗಿರ್ದ ಸುಧರ್ಮಮನಿಮುಖ್ಯರಂ ಕಂಡು ಮೂಱುಸೂಱ್ ಬಲಗೊಂಡು ಭಕ್ತಿಭರವಿನಮಿತ ಮಸ್ತಕನ್ಯಸ್ತಹಸ್ತಪುಟನಾಗಿ ಯೋಗೀಂದ್ರವೃಂದವಂದ್ಯಪಾದಾರವಿಂದದ್ವಂದ್ವನ ಮುಖಾರವಿಂದಮಂ ನೋಡಿ

ಯಮಿವೃಷಭ ನಿಮ್ಮ ಬೆಸಸಿದ ।
ಕಮಲಾಕರದೊಳ್ ಸರೋಜಕುಟ್ಮಲದೊಳ್ ಸಂ ॥
ಕ್ರಮಿಸಿ ವಿರಾಜಿಸಿ ಬೆಳಗು ।
ತ್ತುಮಿರ್ದುದಂ ನೋಡಿ ಕಂಡೆನಾನುಂಗುರಮಂ ॥೨೪॥

ವೃ॥ ಎನಗತಿಶಯಮಾಯ್ತು ಪುಂಡರೀಕೋ ।
ದ್ಯಾನದೊಳಿರ್ದಪುದೆಂದು ಪೇೞ್ದ ದಿವ್ಯ ।
ಜ್ಞಾನಮಹಿಮಾಪ್ರಭಾವವೀರ್ಯಾ ।
ನೂನಗುಣಾ ಧಾರಣೀಸ್ತುತಂ ಮುನೀಂದ್ರಾ (?) ॥೨೫॥

ಉಮ್ಮಚ್ಚದೊಳಱಿವೆನ್ನಂ ।
ದೊಮ್ಮನದೊಳ್ ಬಗೆದ ಕಾರ್ಯಮಂ ಕ್ಷಣದಿಂದಂ ॥
ನಿಮ್ಮಡಿ ನೀಮೆನಗಱಿಪಿದ ।
ಸಮ್ಮತಮಂ ಬೆಸಸಿಮಖಿಳಧಾತ್ರೀಹಿತಮಂ ॥೨೬॥

ಎನಗೆ ಕಳತ್ರಮಿತ್ರಬಹುಪುತ್ರ ಕುಟುಂಬಮಳುಂಬಮೆನ್ನ ಮಾ ।
ತಿನಿತೆ ಮುನೀಂದ್ರ ನಿಮ್ಮಱಿವ ಜೋಯಿಸಮಂ ದಯೆಗೆಯ್ದಿರಪ್ಪೊಡೆ ॥
ನ್ನನಿತು ಕೃತಾರ್ಥರುಂ ಸುಚರಿತಾರ್ಥರುಮೆಯ್ದೆ ಸಮರ್ಥರುಂ ಮಹಾ ।
ವನಿಯೊಳಗಿಲ್ಲ ನೀವೆ ಶರಣಂ ಶರಣಾಗತಕಲ್ಪಭೂರುಹಾ ॥೨೭॥

ವ॥ ಎಂದು ನಾನಾಪ್ರಕಾರದ ಮಿಥ್ಯಾವಿನಯಂಗಳಿಂ ಸೂರ್ಯಮಿತ್ರಂ ಸುಧರ್ಮಾಚಾರ್ಯರ ಕಾಲಮೇಲೆ ಕವಿದು ಪಡುವುದುಂ

ಉತ್ತಮ ಮುನೀಶ್ವರಂ ವಿ।
ಪ್ರೋತ್ತಮನಂ ಪ್ರೀತಿಯಿಂದೆ ನುಡಿದಂ ನಾನಾ ॥
ಭಿತ್ತಿಗಳಿಂದೆತ್ತಂ ದಿ ।
ಗ್ಭಿತ್ತಿಗಳಂ ದಂತಕಾಂತಿ ಧವಳಿಸುವಿನೆಗಂ ॥೨೮॥

ವ॥ ಅವ್ಮ ನಿವ್ಮ ವುನದೊಳಱಿವ ಬಗೆಯುಳ್ಳೊಡೆ ಪೇೞ್ವೆವಿಮಾ ಜ್ಯೋತಿಜ್ಞಾನಮಪ್ಪೊಡೆಮ್ಮನ್ನರಪ್ಪ ಋಷಿರೂಪಕರ್ಗಲ್ಲದೆ ಕಲಲುಂ ಕಲಿಸಲುಂ ಬಾರದೆಂಬುದುಂ ಭಟ್ಟಂ ಬೆಕ್ಕಸಂಬಟ್ಟು ತನ್ನಂತರ್ಗತದೊಳ್

ತಲೆವಱಿದುಟ್ಟುದಂ ಬಿಸುಟು ಮಿಾಯದೆ ಮೇಕದೆ ದಂತಪಂಕ್ತಿಯಂ ।
ಸುಲಿಯದೆ ಸಂಯಮೋಪಕರಣಂಗಳನಿಂಬಿನೆ ತಾಳ್ದಿ ದೇಹದೊಳ್ ॥
ಮಲಮನನಾರತಂ ತಳೆದುಪಾಸಕವಾಸದೊಳೇಕಭುಕ್ತಮಂ ।
ಸಲಿಸುವ ಘೋರವೀರತಪಮಿಾ ತಪಮಾತಪದಿಂದಮಗ್ಗಳಂ ॥೨೯॥

ದ್ವಿಜಕುಲನೆನಿಸುವನೀ ಪ್ರ ।
ವ್ರಜಿತದೊಳೆಸಗಿದೊಡೆ ದೋಷಮುಂಟೆಂದು ಮನು ॥
ವ್ರಜವಾಕ್ಯಮುಂಟು ಲ ।
ಜ್ಜಿಸದೆ ಲಜ್ಜೆಗೆಟ್ಟಂತು ಮೆಯ್ಯನೋಡ್ಡುವೆನಿದಱೊಳ್ ॥೩೦॥

ವ॥ ಎಂದು ವಿವಕ್ಷೆಗೆಯ್ದು ಮತ್ತಂ

ಮತಿಗೆಟ್ಟಿದುವೆ ಪರತ್ರೆಗೆ ।
ಹಿತಮೆಂದೀ ಸಮಯದತ್ತಲೆಱಗಿದೊಡೆ ಕುಲ ॥
ಕ್ಷತಿಯಕ್ಕುಂ ಜೋಯಿಸಮಱ ।
ವ ತರ್ಕನೊಳ್ ತಪಸಿಯಾದೊಡಾವುದು ದೋಷಂ ॥೩೧॥

ಆನೀಗಳೀವಿದ್ಯೆಯನಾಜ್ಞೆಯಿಂದಂ ।
ಏನಾಗಿಯುಂ ಸಾಧಿಸಿಕೊಳ್ವೆನುಂತುಂ ।
ಕೇನಾಪ್ಯುಪಾಯೇನ ಫಳಂಹಿಸಾಧ್ಯಂ ॥
ತಾನೆಂಬುದುಂಟಲ್ತೆ ಪುರಾಣವಾಕ್ಯಂ ॥೩೨॥

ಮೇಲ್ಮಲೆಗೆಯ್ಯದೆ ಸವಣನ ।
ಬಲ್ಮೆಯನಱಯಲ್ಕೆ ದೀಕ್ಷೆಯಂ ಕೊಂಡಪೆನ ॥
ತ್ತಲ್ಮತ್ತಮೆನ್ನ ತಲೆಯೊಳ್
ಪುಲ್ಮೊಳೆತಪ್ಪುದೆ ಮುನೀಂದ್ರನೆಂಬುದನೆಂಬೆಂ ॥೩೩॥

ಪೆಱತೇನೊ ಪರಿಜ್ಞಾನಮ ।
ನಱವಿನಮಿವರೇನನೆಂದರೆಂದಂದದೊಳಾಂ ।
ಪೆಱಪಿಂಗದೆ ಪೆಱತೊಂದ ।
ಕೈಱಗದೆ ಕೈಕೊಂಡು ವಿನಯಮಂ ಪ್ರಕಟಿಸುವೆಂ ॥೩೪॥

ವ ॥ ಎಂದು ಮಾಯಾವಿಕೃತಿಯಿಂ ದೀಕ್ಷಾಪ್ರಸಾದಮೆಂದು

ದ್ರವ್ಯತಪದಿಂದಮಲ್ಲದೆ ।
ನಿರ್ವ್ಯಾಕುಳಭಾವತಪಮುಮಂ ತಳೆಯಂ ತಾಂ ॥
ನಿರ್ವ್ಯಾಜಮಿಾತನೆಂದಾ।
ದಿವ್ಯಾವಧಿಬೋಧರಱದು ತಪಮಂ ಕೊಟ್ಟರ್ ॥೩೫॥

ವ॥ ಅಂತು ಪರಮದೀಕ್ಷಾಮಾರ್ಗದೊಳ್ ದೀಕ್ಷೆಯಂ ದಯೆಗೆಯ್ದು ಪ್ರತಿ ಕ್ರಮಣಮಂ ಪೇಳ್ದುದುಂ ಮಾಯಾತಪಸ್ವಿ ಜೋಯಿಸಮಂ ವಕ್ಖಾಣಿಸಿಮೆಂದು ಕಯ್ಗಳಂ ಮುಗಿದು ಮುಂದೆ

ಕುಳ್ಳಿರ್ಪುದುಂ ಕ್ರಿಯಾಪೂರ್ವಕ ನಮಸ್ಕಾರಂಗಳುಮಂ ನಿಯಮಾಳೋಚನ ಕ್ರಿಯೆಗಳನಱಿದೊಡಲ್ಲದೆ ನಿಮಿತ್ತಮನಱಿಯಲ್ಬಾರದೆಂಬುದಂ ತನಗಾವಶಾಸ್ತ್ರಂಗಳಾದೊಡಮೇಕಸಂಧಿಯೊಳ್ಬರ್ಪುವಪ್ಪುದಱಿಂ ಕೆಲವು ದಿವಸದೊಳಮೆಲ್ಲಮನೋದಿ ನಿಮ್ಮಡಿ ನಿಮ್ಮ ಬೆಸಸಿದೋದುಗಳನೆಲ್ಲಮನೋದಿದೆಂ ಜೋಯಿಸಮಂ ಕಲಿಸಿಮೆಂಬುದು ಪ್ರಥಮ ಕರಣಚರಣಾನುಯೋಗಂಗಳಂ ನಿರವಶೇಷಂ ಕಲ್ತೊಡಲ್ಲದೆ ಜೋಯಿಸಮಂ ಕಲಲ್ಬಾರದೆಂಬುದುಂ

ಸಾರ್ಥಂ ಕೈಸಾರ್ಗುಮಿಂತೀಸಮಯದ ತೆಱನುಂ ವ್ಯಕ್ತಮಾಗಿರ್ಕುಮಾಜ್ಞಾ।
ನಾರ್ಥಂ ಮುನ್ನೋದಿದೋದಿಂದೆನಗಿದು ಪಿರಿದಲ್ತೆಂದು ಪೂರ್ಣೋದಿದಂ ಗ್ರಂ॥
ಥಾರ್ಥಂ ನಿರ್ನಿಕ್ತಮಾಗಲ್ ಚರಣಕರಣ ರತ್ನತ್ರಯಾರಾಧನಾ ತ।
ತ್ವಾರ್ಥಾಚಾರಾನುಯೋಗಪ್ರಭೃತಿ ಸಕಲಶಾಸ್ತ್ರಂಗಳಂ ಸೂರ್ಯಮಿತ್ರಂ ॥೩೬॥

ಅನಿತುಮನಱಿದಱಿಪುವು।
ದೆನಗೆ ನಿಮ್ಮಡಿ ನಿಮ್ಮ ವಿದ್ಯೆಯಂ ದಯೆಯಿಂದೆಂ॥
ದೊನನವಧಿಜ್ಞಾನವಿಲೋ ।
ಚನವಿಭವಂ ವಿಶ್ರುತಶ್ರುತಂ ಮುನಿ ನುಡಿಗುಂ ॥೩೭॥

ವ॥ ನೀನೀಗಳ್ ಸಮಸ್ತಾಗಮಪದಾರ್ಥತತ್ತ್ವಂಗಳಂ ಸವಿಸ್ತರಮೋದಿದಯ್ ಕಿಱಿದುಮೊಂದಧಿಕಾರದಿಂ ದ್ರವ್ಯಾನುಯೋಗಮೆಂಬುದುಂಟದು ನಿಮ್ಮನ್ನರಪ್ಪ ನಿಶಿತಮತಿಗಳ್ಗೆ ಪಂಚರಾತ್ರಿಯೊಳ್ ಪ್ರತೀತಿಯಕ್ಕುಮದಲ್ಲದೊಡಂ ಜಿನಶಾಸನಮೆಂಬ ಚೈತ್ಯನಿಕೇತನಕ್ಕೆ ಸಿದ್ಧಾಂತಮೆಂಬಧಿಕಾರಂ ಸಾರರತ್ನಮಯಕಳಶಮಿರ್ಪ್ಪಂತಿರ್ದುದದು - ಕಾರಣದಿಂದಾ ಕಳಶದಿಂ ಮೇಲೆ

ಒಂದು ಬೆಸನಿಲ್ಲದನಱಿ
ದಂದೆಮ್ಮಱಿವಱಿಕಮಱಿಯಲಕ್ಕುಂ ನಿಮಗಿ ॥
ನ್ನೆಂದಾಗಳ್ ಸಂತೊಸದಿಂ ।
ದಂದೀ ತ್ರಿಜಗಮುಮನಾಗಳಾಲ್ದಂತಾದಂ ॥೩೮॥

ವ॥ ಅಂತತ್ಯಂತಸಂತುಷ್ಟಸ್ವಾಂತನಾಗಿ ಗುರುಚರಣಕಮಲಕ್ಕೆಱಗಿ ಪೊಡೆವಟ್ಟು

ದಯೆಯಿಂ ಬೆಸಸಿಂ ದ್ರವ್ಯಾ ।
ನುಯೋಗಮಂ ಕೇಳ್ವೆನೆಂದು ಮಯಾಖುಷಿ ತಾಂ॥
ಪ್ರಿಯದಿಂದಂ ಬೆಸಗೊಳೆ ದಿ ।
ವ್ಯಯೋಗ ಶುಭದಿಂ ಮುಹೂರ್ತ ಲಗ್ನೋದಯದೊಳ್ ॥೩೯॥

ವ॥ ಸಿದ್ಧಾಂತಮಂ ಮೊದಲ್ಗೊಳಿಸುವುದುಮಲ್ಲಿನಿರ್ದೇಶ ಸ್ವಾಮಿತ್ವಸಾಧನಾಧಿಕರಣ

ಸ್ಥಿತಿವಿಧಾನದಿಂ ಸತ್ಸಂಖ್ಯಾಕ್ಷೇತ್ರಸ್ಪರ್ಶನ ಕಾಲಾಂತರ ಭಾವಾಲ್ಪ ಬಹುತ್ವ ಸ್ಥಿತಿಯಿಂ ಸಾಮಾನ್ಯ ವಿಶೇಷವ್ಯಾವೃತ್ತ ವಿರುದ್ಧಾವಿರುದ್ಧಧರ್ಮಕ್ರಮದಿಂ ಸ್ಯಾದಸ್ತಿ ಸ್ಯಾನ್ನಾಸ್ತಿ ಸ್ಯಾದಸ್ತಿನಾಸ್ತಿ ಸ್ಯಾದವಕ್ತವ್ಯಂ ಸ್ಯಾದಸ್ತ್ಯವಕ್ತವ್ಯಂ ಸ್ಯಾನ್ನಾಸ್ತ್ಯವಕ್ತವ್ಯಂ ಸ್ಯಾದಸ್ತಿನಾಸ್ತ್ಯವಕ್ತವ್ಯಂ ಎಂಬ ಸಪ್ತ ಭಂಗಿಯಿಂ ನೈಗಮಸಂಗ್ರಹ ವ್ಯವಹಾರ ಋಜುಸೂತ್ರ ಶಬ್ದಸಮಭಿರೂಢೈವಂಭೂತಾದಿ ನಯವಿಭೇದದಿಂ ನಾಮಸ್ಥಾಪನಾದ್ರವ್ಯಭಾವದಿಂ ಜೀವತತ್ತ್ವಂ ಮೋಕ್ಷತತ್ತ್ವಮೆಂಬ ಸಪ್ತತತ್ತ್ವ ರೂಪಮುಮಂ ಜೀವಪದಾರ್ಥಮಜೀವಪದಾರ್ಥಂ ಮೋಕ್ಷಪದಾರ್ಥಂ ಆಸ್ರವ ಪದಾರ್ಥಂ ಸಂವರಪದಾರ್ಥಂ ನಿರ್ಜರಪದಾರ್ಥಂ ಬಂಧಪದಾರ್ಥಂ ಮೋಕ್ಷಪದಾರ್ಥಂ ಪುಣ್ಯಪದಾರ್ಥಂ ಪಾಪಪಧಾರ್ಥಮೆಂಬ ನವಪದಾರ್ಥಮುಮಂ ಜೀವದ್ರವ್ಯ ಪುದ್ಗಲ ದ್ರವ್ಯ ಧರ್ಮದ್ರವ್ಯ ಅಧರ್ಮದ್ರವ್ಯ ಆಕಾಶದ್ರವ್ಯ ಕಾಲದ್ರವ್ಯಮೆಂಬ ಷಡ್ದ್ರವ್ಯಂಗಳ ಗುಣಪರ್ಯಾಯಮುಮಂ ಜೀವಾಸ್ತಿಕಾಯಂ ಪುದ್ಗಲಾಸ್ತಿಕಾಯಂ ಧರ್ಮಾಸ್ತಿಕಾಯಂ ಅಧರ್ಮಾಸ್ತಿಕಾಯಂ ಆಕಾಶಾಸ್ತಿಕಾಯಮೆಂಬ ಪಂಚಾಸ್ತಿಕಾಯ ನಿಕಾಯಮುಮಂ ಮತಿಜ್ಞಾನಾವರಣೀಯಂ ಶ್ರುತಜ್ಞಾನಾವರಣೀಯಂ ಅವಧಿಜ್ಞಾನಾವರಣೀಯಂ ಮನಃಪರ್ಯಯಜ್ಞಾನಾವರಣೀಯಂ ಚಕ್ಷುರ್ದರ್ಶನಾವರಣೀಯಮಚಕ್ಷುರ್ದರ್ಶನಾ ವರಣೀಯಮವಧಿದರ್ಶನಾವರಣೀಯ ಕೇವಲದರ್ಶನಾವರಣೀಯಂನ ನಿದ್ರಾ ನಿದ್ರಾನಿದ್ರಾ ಪ್ರಚಲಾ ಪ್ರಚಲಾಪ್ರಚಲಾ ಸ್ತ್ಯಾನಗೃದ್ಧಿಭೇದದಿಂ ನವ ವಿಧಭೇದಮಪ್ಪ ದರ್ಶನಾವರಣೀ ಯಮುಮಂ ಸಾತಾಸಾತಸಂವಿಭಾಗದಿನಿರ್ತೆಱನಪ್ಪ ವೇದನೀಯಮುಮಂ ದರ್ಶನ ಮೋಹದೊಳಂ ಚಾರಿತ್ರಮೋಹದೊಳಂ ಯಥಾಕ್ರಮದಿಂ ಸಮ್ಯಕ್ತ್ವ ಮಿಥ್ಯಾತ್ವ ಸಮ್ಯಕ್ ಮಿಥ್ಯಾತ್ವ ಹಾಸ್ಯ ರತ್ಯರತಿ ಶೋಕ ಭಯ ಜುಗುಪ್ಸಾ ಸ್ತ್ರೀಪುನ್ನಪುಂಸ ವೇದಮೆನಿಸಿ ಯುಮನಂತಾನುಬಂಧಿ ಅಪ್ರತ್ಯಾಖ್ಯಾನ ಪ್ರತ್ಯಾಖ್ಯಾನ ಸಂಜ್ವಲನ ಕ್ರೋಧಮಾನಮಾಯಾ ಲೋಭಕಷಾಯವೇದನೀಯಮೆನಿಸಿಯುಮಿರ್ಪ್ಪತ್ತೆಂಟು ತೆಱನಪ್ಪ ಮೋಹನೀಯಮುಮಂ ನರಕತಿರ್ಯಗ್ಮನುಷ್ಯ ದೇವಾಯುಷ್ಯಚತುಷ್ಕಮಪ್ಪಾಯುಷ್ಯಮುಮಂ ಗತಿಜಾತಿಶರೀರಾಂ ಗೋಪಾಂಗ ನಿರ್ಮಾಣಬಂಧನಸಂಘಾತಸಂಸ್ಥಾನ ಸಂಹನನ ಸ್ಪರ್ಶರಸಗಂಧ ವರ್ಣಾನುಪೂರ್ವ್ಯ ಗುರುಲಘೂಪಘಾತಪರಘಾತ ತಪೋದ್ಯೋತೋಚ್ಛ್ವಾ ಸವಿಹಾಯೋಗತಿ ತ್ರಸಸ್ಥಾವರ ಬಾದರಸೂಕ್ಷ್ಮ ಪ್ರಯಾಪ್ತಕಾಪರ್ಯಾಪ್ತಕ ಪ್ರತ್ಯೇಕಶರೀರ ಸಾಧಾರಣಶರೀರ ಸ್ಥಿರಾಸ್ಥಿರ ಶುಭಾಶುಭ ಸುಭಗದುರ್ಭಗ ಸುಸ್ವರದುಸ್ವರಾದೇಯಾನಾದೇಯ ಯಶಃಕೀರ್ತಿ ಅಯುಶಃಕೀರ್ತಿನಿರ್ಮಾಣ ತೀರ್ಥಕರತ್ವಮೆಂದಿಂತು ನಾಲ್ವತ್ತೆರಡು ಭೇದ ಮನುಳ್ಳ ನಾಮಮುಮಂ ಉಚ್ಚೈರ್ಗೋತ್ರ ನೀಚೈರ್ಗೋತ್ರಭೇದದಿಂ ದ್ವಿವಿಧಮಪ್ಪ ಗೋತ್ರಮುಮಂ ದಾನಲಾಭಭೋಗೋಪ ಭೋಗವೀರ್ಯಾಂತರಾಯ ಭೇದದಿನಯ್ದು ವಿಕಲ್ಪಮಪ್ಪಂತ ರಾಯಪ್ರಕೃತಿಯುಮಂ ಪ್ರಕೃತಿಸ್ಥಿತ್ಯನುಭಾಗಪ್ರದೇಶಮೆಂದು ಬಂಧಂ ಮಿಥ್ಯಾತ್ವಾಸಂಯಮ (ಪ್ರಮಾದ) ಕಷಾಯಯೋಗಮೆಂದು ಬಂಧಕಾರಣಮನಂತ ಜ್ಞಾನಮನಂತದರ್ಶನ ಮನಂತವೀರ್ಯಮನಂತಸುಖಮೆಂದು ಮೋಕ್ಷಂ ಸಮ್ಯಗ್ದರ್ಶನಜ್ಞಾನಚಾರಿತ್ರತಪಮೆಂದು ಮೋಕ್ಷಕಾರಣಮಿಂತು ಬಂಧಂ ಬಂಧಕಾರಣಂ ಮೋಕ್ಷಂ ಮೋಕ್ಷಕಾರಣಮೆಂಬ ಪರಮ ಚತುಷ್ಟಯಮುಮಂ ಆರ್ತ ರೌದ್ರ ಧರ್ಮ ಶುಕ್ಲಾಭಿಧಾನಧ್ಯಾನಚತುಷ್ಟಯಮುಮಂ ಕಾಲಲಬ್ಧಿ

ಕರಣಲಬ್ಧಿ ಉಪಶಮಲಬ್ಧಿ ಕ್ಷಯೋಪಶಮಲಬ್ಧಿ ಪ್ರಾಯೋಗ್ಯತಾಲಬ್ಧಿಯೆಂಬ ಲಬ್ಧಿಪಂಚಕಮುಮಂ ಸಮುಚ್ಚಯಾಕ್ಷೇಪವಚನದಿಂ ದ್ರವ್ಯೋತ್ಪತ್ತಿವ್ಯಯಾತ್ಮಕ ಸ್ವರೂಪದಿಂ ಸಂಶಯಾದಿ ನಿವೃತ್ತಿ ರತ್ರಾಹ ಸ್ವದ್ರವ್ಯಾದಿರೂಪೇಣಾಸ್ತಿ ಪರದ್ರವ್ಯಾದಿವಿರೂಪೇಣನಾಸ್ತಿ ಸ್ವರಪದ್ರವ್ಯಾದಿ ರೂಪೇಣಾಸ್ತಿನಾಸ್ತಿ ಸಹಾನುಕ್ತೇರವಾಚ್ಯಂ ಸ್ವದ್ರವ್ಯಾದಿ ಸಹಾನುಕ್ತೇರಸ್ಯವಾಚ್ಯಂ ಪರದ್ರವ್ಯಾದಿ ಸಹಾನುಕ್ತಿರ್ನಾಸ್ತ್ಯಪ್ರಮೇಯತ್ವಾಪ್ರಮೇಯತ್ವಾದಿ ಬಹುಭೇದ ವಿಭಿನ್ನ ದಿನೇಕಜೀವಾಪೇಕ್ಷೆ ನಾನಾಜೀವಾಪೇಕ್ಷೆಯಿಂ ಯೋಜಿಸಿ ನಾನಾಪ್ರಕಾರಹೇತು ದೃಷ್ಟಾಂತಂಗಳಿಂ ದ್ವಾದಶಾಂಗಚತುರ್ದಶಪೂರ್ವೋಕ್ತಕ್ರಮಮಂ ಪೂರ್ವೋಕ್ತಕ್ರಮದಿಂದಾ ಸುಧರ್ಮಾಚಾರ್ಯರಾ ಸೂರ್ಯಮಿತ್ರಮುನಿಗತಿವ್ಯಕ್ತಮುಮನತಿರಿಕ್ತ ಮುಮತಿಸ್ಫುಟಮುಮವ್ಯಾಕುಲಮುಮಪ್ಪಂತ-ತಿಮೃದುಮಧುರಗಂಭೀರೋದಾರಸಾರ ತರವಚನರಚನೆಗಳಿಂ ವ್ಯಾಖ್ಯಾನಂಗೆಯ್ಯಲೆನಿತೆನಿತಂ ಕೇಳ್ದುಮನಿತನಿತೆ ವಿಶುದ್ಧ ಪರಿಣಾಮಮನನಾಗಿ ಜಗತ್ಕಾಯಸ್ವಭಾವಂಗಳೊಳಾಸಂವೇಗವೈರಾಗ್ಯ ಪರಾಯಣನಾಗುತ್ತುಮನಿತ್ಯಾಶರಣಸಂಸಾರೈ ಕತ್ವಾನ್ಯತ್ವಾಶುಚಿತ್ವಾಸ್ರವಸಂವರನಿಜರಲೋಕ ಬೋಧಿದುರ್ಲಭಧರ್ಮಮೆಂಬೀ ದ್ವಾದಶಾನುಪ್ರೇಕ್ಷೆಗೆಯ್ಯುತ್ತುಂ ಭಗವದರ್ಹತ್ಪರ ಮೇಶ್ವರಸ್ವರೂಪಮುಮಂ ಗುಣಂಗಳುಮನಱಿದು ಮೂಱುಮೂಢದಿನಾಱನಾಯ ತನಸೇವೆಯಿನೆಂಟುಮದದಿನೆಂಟು ಮಳದಿನಿರ್ವರ್ತ್ತಯ್ದು ಮಳದಿಂ ಪಿಂಗಿದ ನಿರ್ಮಳಮಪ್ಪ ಸಮ್ಯಕ್ತ್ವರತ್ನಮಂ ಕೈಕೊಂಡು

ಇದು ಜೀವಾಜೀವಭೇದಕ್ರಮಮಿದು ಸಕಷಾಯಾಕಷಾಯೋದಯಂ ತಾ।
ನಿದು ಧರ್ಮಾಧರ್ಮತತ್ತ್ವಾಗಮಮಿದು ನಿಖಿಲಧ್ಯಾನ ಸಜ್ಞಾನಮಿಂತೆಂ।
ಬುದನಾಗಳ್ ಸೂರ್ಯಮಿತ್ರಂ ಬಗೆದು ಬಗೆದಿರ್ದೇಂ ಕರ್ಮಮೋ ಘೋರಸಂಸಾ ।
ರದುರಂತಾಭೀಳದಾವಾನಲನಳುರ್ವಿನಮಾನಿನ್ನೆಗಂ ಬರ್ದುತಿರ್ದೆಂ ॥೪೦॥

ಖಳಕರ್ಮೋದಯದಿಂದಿಮಿನ್ನವರೆಗಂ ಜನ್ಮಾಬ್ಧಿಯೊಳ್ಮುಳ್ದುತುಂ ।
ಮುಳುಗುತ್ತುಂ ನಮೆಯುತ್ತುಮಿರ್ದ್ದು ಪಲಕಾಲಂ ಪೋದುದತ್ಯಂತ ನಿ ।
ರ್ಮಳಸನ್ಮಾರ್ಗ ಬಹಿತ್ರಮಿಲ್ಲಿ ದೊರೆಕೊಂಡತ್ತೀಗಳೆನ್ನಂತು ಕೇ ।
ವಲಪುಣ್ಯಾನ್ವಿತರಾರುಮಿಲ್ಲ ಮನುಜರ್ ವಿಶ್ವಾವನೀಭಾಗದೊಳ್ ॥೪೧॥

ಆನೆತ್ತಾ ಕೊಳನೆತ್ತಲುಂಗುರದ ಕೇಡೆತ್ತೀ ಮುನೀಂದ್ರೋತ್ತಮಂ ।
ತಾನೆತ್ತಿರ್ದಡವೇಟ್ಟುದೆತ್ತನಗೆ ವಿದ್ಯಾಕಾಂಕ್ಷೆಯೆತ್ತೊಂದಿದ ॥
ಜ್ಞಾನಪ್ರಾವೃತಮಾಯೆಯಿಂದೆ ತಪಮಂ ಕೈಕೊಳ್ವುದೆತ್ತೀಗಳ ।
ಜ್ಞಾನಂ ಪಿಂಗಿ ಸುತತ್ತ್ವಮಂ ತಿಳಿವುದೆತ್ತಾರಯ್ವೊಡೇಂ ಚಿತ್ರಮೋ ॥೪೨॥

ವೇದಾಂಗಂ ಸ್ಮೃತಿವೇದಮೆಂದಿನಿತುಮಂ ಪೂರ್ಣೋದಿದೆಂ ಸತ್ಕಲಾ ।
ಭೇದಂಗಳ್ ಪದಿನೆಂಟುಮಂ ತಿಳಿದೆನಾಪ್ತೋದ್ದೇಶದಿಂ ತರ್ಕದೊಳ್ ॥
ಬಾದುಂ ಬರ್ಕುಡಿಗುಟ್ಟಿ ಪೊಟ್ಟುವಡೆದೆಂ ದುರ್ವಾದದಿಂದಿನ್ನೆಗಂ ।
ಭೇದಂಬಟ್ಟಿರ್ದೆಗೆಟ್ಟು ಕೆಟ್ಟೆನಿನಿತುಂ ಕಾಲಂಗಳೇಂ ಕರ್ಮಮೋ ॥೪೩॥

ನೆಗಳ್ದಿ ಜಿನತತ್ತ್ವಮಿರೆ ಬಗೆ ।
ಮಿಗುವಿನೆಗಂ ಪ್ರಾಣಮೊಡಲೊಳುಳ್ಳಿನೆಗಂ ನಾ ॥
ಲಗೆಯುಂ ಪಲ್ಲುಂ ತ್ರುಟವ ।
ನ್ನೆಗಮೋದಿದೊಡಂ ಕುತತ್ತ್ವದೊಳ್ ಪುರುಳುಂಟೆ ॥೪೪॥

ವ॥ ಎಂದು ಮಿಥ್ಯಾಮತಮಪ್ಪ ಕುತತ್ತ್ವಮಂ ನಿರಾಕರಿಸಿ ವಿದ್ಯಾಮೋಹದಿಂದಂ ಸಂಧಿಸಿ ನಿಂದ ಮಾಯಾತಪಮಂ ಪತ್ತುವಿಟ್ಟುತ್ತಮಕ್ಷಮಾ ಮಾರ್ದವಾರ್ಜವ ಶೌಚ ಸತ್ಯ ಸಂಯಮ ತಪಸ್ತ್ಯಾಗಾಂಕಿಚನ್ಯ ಬ್ರಹ್ಮಚರ್ಯಾಭಿಧಾನ ದಶಕುಲ ಧರ್ಮನಿರ್ಮಳರೆನಿಸಿದ ಸುಧರ್ಮಾಚಾರ್ಯರ ಪಾದಪದ್ಮಮಂ ನಿಜೋತ್ತಂಸಂಗಳಂ ಮಾಡಿ ತದೀಯ ಪಾದಪದ್ಮಂಗಳಂ ಕರಪಲ್ಲವಂಗಳಿನೊತ್ತುತ್ತುಂ ಅಪಗತಮತಿಯಿಂ

ಕಟಪಪ್ರಾಚಂಚಜಾಳಾವೃತನೆನಧಿಕ ಮೋಹಾಂಧನೆಂ ಮಾಯ್ದಮಾಯಾ
ತಪದೊಳ್ ಮಿಥ್ಯಾಪ್ರಪಂಚಪ್ರಬಳನೆನಿಸಿ ಸಂದಿರ್ದೆನಾನಿನ್ನೆಗಂ ನಿ।
ಸ್ತಪನೆಂದುಂ ಮಾರ್ಗಮಂ ಪೊರ್ದಿದೆನೆನಗೆ ಶರಣ್ ಧರ್ಮದಿಂದತ್ತ ಮತ್ತಿ ।
ಲ್ಲ ಪುನರ್ದೀಕ್ಷಾಪ್ರಸಾದಂ ಸದಮಳನಿಖಿಲಾನೂನ ಸಜ್ಞಾನಚಕ್ಷೂ ॥೪೫॥

ವ॥ ಎಂದುಂ ತನ್ನಂ ತಾನೇ ನಿಂದಿಸಿ ಗುರುಗಳಂ ಗುರುಭಕ್ತಿಪೂರ್ವಕಂ ಬಂದಿಸಿ ಪರಮದೀಕ್ಷೆಯಂ ಕೈಕೊಂಡು ಪರಮಾರ್ಥನಿಷ್ಠಿತಾರ್ಥ ತಪೋರೂಪಮಂ ತಾಳ್ದಿ

ನಿಯತಂ ಪಂಚಮಹಾಬ್ರತಂ ಸಮಿತಿಯೆಂಬಯ್ದುಂ ಷಡಾವಶ್ಯಕ ।
ಕ್ರಿಯೆ ಪಂಚೇಂದ್ರಿಯನಿಗ್ರಹಕ್ಕಿಯೆ ಸಮಂತೊಳ್ಪೊತ್ತು ನಿಂದುಣ್ಬುದಾ ।
ರಯುಮಸ್ನಾನಮಚೇಳಸಂಯುಮಮದಂತೋನ್ಮಾರ್ಜನಂ ಧಾರಿಣೀ ।
ಶಯನಂ ರೋಜೆನಿಸಿರ್ದ ಮೂಲಗುಣಮಿಪ್ಪತ್ತೆಂಟುಮಂ ತಾಳ್ದಿದಂ ॥೪೬॥

ವ॥ ಮತ್ತಂ ತ್ರಿದಂಡ ತ್ರಿಶಲ್ಯ ತ್ರಿಗಾರವಂಗಳಂ ಕ್ರಮಕ್ರಮದಿಂ ಕಟಿಲ್ಚಿ ಕಳೆಯುತ್ತುಂ ಕ್ಷುತ್ತಿಪಾಸಾಶೀತೋಷ್ಣದಂಶಮಶಕನಾಗ್ನ್ಯರತಿ ಸ್ತ್ರೀಚರ್ಯಾನಿಷದ್ಯಾ ಶಯ್ಯಾಕ್ರೋಶವಧಯಾಚನಾಲಾಭರೋಗ ತೃಣಸ್ಪರ್ಶಮಳಸತ್ಕಾರಪುರಸ್ಕಾರ ಪ್ರಜ್ಞಾಜ್ಞಾನಾದರ್ಶನಮೆಂಬ ದ್ವಾವಿಂಶತಿ ಪರೀಷಹಮುಮಂ ತನ್ನಂ ಮಿಗಲೀಯದೆ ತಳೆದು ದೇವರೊಳಂ ಗುರುಗಳೊಳಮಾಗಮದೊಳಂ ನಂಬುಗೆಯುಂ ನಲ್ಮೆಯುಂ ಭಕ್ತಿಯು ಮನೂನಮಾಗೆ ಘೋರವೀರತಪೋನಿಯಮ ನಿಷ್ಠಿತನಾಗಿ ಗುರುಗಳನಗಲದೆ ಕೆಲವು ದಿವಸಮಿರೆಯಿರೆ

ಮಾನಿತ ತತ್ತ್ವಾರ್ಥಶ್ರ ।
ದ್ಧಾನದಿನಾ ಸೂರ್ಯಮಿತ್ರಮುನಿಪತಿಗವಧಿ ॥
ಜ್ಞಾನಂ ತೊಟ್ಟನೆ ಪುಟ್ಟಿದು ।
ದೇನಂ ಪುಟ್ಟಿಸದು ತತ್ತ್ವರುಚಿ ಪುಟ್ಟಲೊಡಂ ॥೪೭॥

ವ॥ ಆ ಪ್ರಸ್ತಾವದೊಳ್

ಬುಧಸಂಘಾತಾರ್ಚಿತಾಂಘ್ರಿದ್ವಯ ಸರಸಿರುಹಂಗಪ್ರಮತ್ತಂಗೆ ಬೋಧಾಂ ।
ಬುಧಿಗಂತಾ ಸೂರ್ಯಮಿತ್ರಬ್ರತಿಪತಿಗವಧಿಜ್ಞಾನಮೊಪ್ಪಿರ್ದುದಂ ಕಂ
ಡು ಧರಿತ್ರೀಸ್ತುತ್ಯನತ್ಯುಜ್ವಲನಿರುಪಮದೇಹಪ್ರಭಾದಿವ್ಯಸರ್ವಾ ।
ವಧಿಬೋಧಂ ತುಷ್ಟನಾದಂ ಪರಮಜಿನಮತಾಂಭೋಜಿನೀರಾಜಹಂಸಂ ॥೪೮॥

ಇದು ಸಮಸ್ತ ವಿನಯಜನವಿನಮಿತ ಶ್ರೀವರ್ಧಮಾನಮುನೀಂದ್ರ
ವಂದ್ಯಪರಮಜಿನೇಂದ್ರ ಶ್ರೀಪಾದಪದ್ಮವರಪ್ರಸಾದೋತ್ಪನ್ನ
ಸಹಜಕವೀಶ್ವರ ಶ್ರೀಶಾಂತಿನಾಥಪ್ರಣೀತಮಪ್ಪ
ಸುಕುಮಾರ ಚರಿತ್ರದೊಳ್ ಸೂರ್ಯಮಿತ್ರಾ
ಚಾರ್ಯಾವಧಿಜ್ಞಾನವರ್ಣ್ನನಂ.
ತೃತೀಯಾಶ್ವಾಸಂ

೪. ಚತುರ್ಥಾಶ್ವಾಸಂ ॥

ಶ್ರೀಮತ್ಸುಧರ್ಮಮುನಿಪ ।
ಸ್ವಾಮಿ ಮಹಾಗಾಧಬೋಧಭೋಧಿತಭವ್ಯ ॥
ಸ್ತೋಮಮಂ ದರಹಸಿತದಿನಂ ।
ದಾ ಮುನಿಗೆಂದಂ ಸರಸ್ವತೀಮುಖಮುಕುರಂ ॥೧॥

ಇದು ಮುನ್ನಂ ನಿನ್ನ ಕೆಟ್ಟುಂಗುರದೆಡೆಯನದಂ ಪೇೞ್ದ ಸದ್ವಿದ್ಯೆ ತಾನಿಂ ।
ತಿದುಮುನ್ನಂ ನಿನ್ನನೆನ್ನಲ್ಲಿಗೆ ಬರಿಸಿದ ದಿವ್ಯೋಪದೇಶಂ ಸಮಂ ।
ತಿದು ಮುನ್ನಂ ನಿನ್ನ ತತ್ತ್ವಕ್ಕೆಳಸಿದ ಹಿತಮಂ ಮಾಡಿದಾ ಜೋಯಿಸಂ ಬಂ ।
ದುದು ಕೈಕೊಳ್ ನಿನ್ನ ಚಿತ್ತಂ ಬಯಸುವ ವಿಲಸನ್ನೂತ್ನಸಜ್ಞಾನರತ್ನಂ ॥೨॥

ವ॥ ಎಂಬುದಮಿಾ ದಯೆಗೆ ಮಹಾಪ್ರಸಾದಮೆಂದು ಅಭಿವಂದನಂಗೆಯ್ದು ತದೀಯ ಗುರುಪಾದಪದ್ಮಪಾದಚ್ಛಾಯಾಸನ್ನವರ್ತಿಗಳಾಗಿರ್ದು ಬೀೞ್ಕೊಂಡು ನಾನಾಜನಪದಂಗಳಂ ಯಥಾಕ್ರಮೋಕ್ತಕ್ರಮದಿಂ ವಿಹಾರಿಸುತ್ತಂ ಕತಿಪಯ ಸಂವತ್ಸ ರಂಗಳಂ ಕಳೆವುದುಮೊಂದು ದಿವಸಂ ಸುಧರ್ಮಾಚಾರ್ಯರುಜ್ಜಯಂತಪರ್ವತದೊಳಧ್ಯಾತ್ಮಧ್ಯಾನಾಧೀನಮಾನಸರಾಗಿ ಘಾತಿ ಕರ್ಮಂಗಳಂ ಘಾತಿಸಿ ಕೇವಲವಿಭೂತಿಯಂ ಪಡೆದು

ಕುಪಿತಬಹುಬಂಧಮಂ ಪಱಿ ।
ದು ಪಾಯ್ದು ಮುನಿಕುಂಜರಂ ತದೇಕಾಂತದಿನಿಂ ॥
ತಪವರ್ಗ ಮಾರ್ಗದೊಳ್ ನಡೆ ।
ದು ಪರಮಸುಖಮೆಂಬ ವನಮನೆಯ್ದಿದನಾಗಳ್ ॥೩॥

ವ॥ ಇತ್ತಲಾ ಮುನೀಂದ್ರನೇಕ ವಿಹಾರತ್ವದಿನನಶನಾದಿ ದ್ವಾದಶವಿಧ ತಪೋನುಷ್ಠಾನ ನಿಷ್ಠಿತನಾಗಿ

ಉಪವಾಸಪ್ರಚುರತೆಯಿಂ ।
ವಪು ಗಿಡಿಗಿಡಿಜಂತ್ರಮಾದುದೆಂಬನ್ನೆವರಂ ॥
ಕ್ಷಪಿಯಿಸಿ ಮುನೀಂದ್ರನನಶನ ।
ತಪದೊಳ್ ತಳೆಸಂದ ಸಲವದೊಂದಾಶ್ಚರ್ಯಂ ॥೪॥

ಪಾರಣೆಯ ದಿನಂಗಳೊಳವ ।
ಧಾರಿಸಿ ಜಠರಾಗ್ನಿ ನಂದದಂದದಿನರ್ಧಾ ॥
ಹಾರಮನಾರೋಗಿಸುವಾ ।
ಚಾರದಿನಳವಟ್ಟುದವರೊಳವಮೋದರ್ಯಂ ॥೫॥

ಆನಿನಿತು ಭೋಜ್ಯದಿಂ ಪೆಱ ।
ತೇನುಮನುಣವೊಲ್ಲೆನೆಂದೆನೆಂದುಣ್ಬೆಡೆಯೊಳ್ ॥
ತಾನಱಿದು ವೃತ್ತಿಪರಿಸಂ ।
ಖ್ಯಾನತಪೋಯುಕ್ತನಾಗಿ ಸಂಯಮಿ ನೆಗಟ್ಟಿಂ ॥೬॥

ಪರಿಹರಿಸಿದೆ ನಾಂ ವೃಷ್ಯೇ ।
ಷ್ಟರಸಂಗಳನೆಂದು ನಿರ್ಮಳಾಚಾರಪುರ ॥
ಸ್ಸರಮಾ ಮುನೀಂದ್ರನಾರ್ತಸ
ಗಿ ರಸಪರಿತ್ಯಾಗಮೆಂಬ ತಪಮಂ ತಳೆದಂ ॥೭॥

ವನಿತಾ ಪಶು ಪಂಡಕವ ।
ರ್ಜ್ಯನಿವಾಸೋದ್ದೇಶದೆಡೆಗಳೊಳ್ ಚರಿಯಿಸುತುಂ ॥
ಮುನಿಪತಿ ವಿವಿಕ್ತಶಯ್ಯಾ ।
ಸನಮೆಂಬಯ್ದನೆಯ ತಪದೊಳುಪಗತನಾದೊಂ ॥೮॥

ವ॥ ತದನಂತರಂ ಕಾಯಕ್ಲೇಶಮೆಂಬಾಱನೆಯ ತಪಮನೆತ್ತಿಕೊಂಡು

ಮೞೆ ಭೋರ್ಭೋರೆಂದಹೋರಾತ್ರಮುಮುಡುಗದೆ ಕೊಳ್ವಲ್ಲಿ ಪೋಟಲ್ಗಳಿಂದ
ವ್ವಳಿಸುತ್ತುಂ ಬಂದು ಪೆರ್ವಾವುಗಳುಗಿಬಗಿಮಾಳ್ಪಲ್ಲಿ ಮೆಯ್ಯಂ ಜಳೂಕಾ ।
ವಳಿಗಳ್ ಪೀರ್ವಲ್ಲಿ ಮರ್ವುರ್ವಿಸೆ ಸಿಡಿದು ಸಿಡಿಲ್ ಬಂದು ಪೊಯ್ವಲ್ಲಿ ಹೈಮಾ ।
ಚಳಮಿರ್ಪ್ಪಂತಾಗಳಿರ್ದಂ ಮರಮೊದಲೊಳಭೀತಾತ್ಮಕಂ ಯೋಗಿನಾಥಂ ॥೯॥

ಆಳ್ಕದೆ ಬೆಚ್ಚದೆ ಬೆದಱದೆ ।
ಬೆಳ್ಕುತ್ತಡಹಡಿಸಿ ಕುಸಿದು ಕುಂದಿರದೆ ಕೊರ ॥
ಲ್ಮುಟ್ಟಿಕ್ಕಿ ಪರಿವುದಕದೊಳ್ ಮನ ।
ಮುಟ್ಕಿದೆಯೆರ್ಜಂಬರಂ (?) ದಿಗಂಬರನಿರ್ದಂ ॥೧೦॥

ಇನನಿಂದುಜ್ಯೋತ್ಸ್ನೆಯಂ ತಾಳ್ದಿದನನಲನನವಷ್ಟಂಭಮೋಡಿತ್ತು ಮರ್ತ್ಯಾಂಗ
ನಿಕಾಯಂ ಬಿಬ್ಬಿನಂ ಬೆಕ್ಕನೆ ಬಿರಿದಪುದೇಗೆಯ್ವಮಿಾ ಲೋಕಮಂ ಹೈ ।
ಮನಗಂ ಕೈಕೊಂಡುದೆಂಬನ್ನೆಗಮೊದವಿದವಶ್ಯಾಯದೊಳ್ ನಿಂದನೇಕಾಂ ।
ತನಿವಾಸಂ ಬೆಳ್ವವಾಸಂ ನಿಶೆಯೊಳೆಸೆಯೆ ನಿರ್ವಾಣದೊಳ್ ಯೋಗಿನಾಥಂ ॥೧೧॥

ಕೈಕಾಲ್ ಸುರುಳ್ದು ನಡುಗದೆ ।
ಸ್ವೈಕಾಗ್ರಮನಸ್ಕನಾಗಿ ಭರವಸದಿಂ ಬ ॥
ಪ್ಪಯ್ಕಿಲ್ಗಳ್ಕದೆ ಪಲ್ಯಂ ।
ಕೈಕಾಸನದಿರ್ಪ್ಪ ಸಾಹಸಂ ಪೆಱಗುರ್ಂಟೇ ॥೧೨॥

ನದನದ್ಯುದ್ಭೂತವಾರಿಪ್ರಸರಮೆಸರನೀರಂದದಿಂ ಕಾಯ್ದುದಾಕಾ ।
ಶದಿಶೌಘಂ ತೀವ್ರದಾವಾಗ್ನಿವೊಲುರಿದಪುದುರ್ಬೀತಳಂ ಕಾಯ್ದಲೋಹ ।
ಕ್ಕಿದು ಮೇಲೆಂಬಂದಮಾದತ್ತಹಿಮಕಿರಣಸಂತಾಪದಿಂದೆಂಬ ವೈಶಾ ।
ಖದೊಳಾ ಯೋಗೀಶ್ವರಂ ಕಲ್ನೆಲೆ ನೆಲಸಿ ಹಿಮಾದ್ರೀಂದ್ರಮಿರ್ಪಂತಿರಿರ್ದಂ ॥೧೩॥

ಶಿರಮನಿನರಶ್ಮಿ ಪದತಳ ।
ಸರೋಜಮಂ ತಪನತಪ್ತ ಶಿಖರಾಗ್ನಿ ತನೂ ॥
ದರಮಂ ಕ್ಷುಧಾನಳಂ ಸುಡೆ ।
ಕರಿಂಕುವರಿದಗಮನಘವಿಘಾತಂ ಪೋಲ್ತಂ ॥೧೪॥

ವ ॥ ಅಂತು ಬಾಹ್ಯತಪದೊಳಸಹ್ಯಮಾನ ಸಾಹಸನಾಗಿ ಮತ್ತಮುತ್ತರ ತಪದೊಳುತ್ತರೋತ್ತರಂ ನೆಗಟ್ದು

ಪರಮಾಳೋಚನದೊಳ್ ಪ್ರತಿಕ್ರಮದೊಳ್‌ತದ್ದ್ವಿವಿನೇಕತ್ವದೊಳ್ ।
ಪರಿಹಾರಕ್ರಿಯೆಯೊಳ್ ವಿನಿರ್ಮಳತಪಸ್ಯೋಪಸ್ಥಾಪನದ್ವಂದ್ವದೊಳ್ ।
ನಿರುತಂ ಛೇದವಿಕಲ್ಪದೊಳ್ ನಿಬಿಡ ಕಾಯೋತ್ಸರ್ಗದೊಳ್ ಶುದ್ಧಿ ತ ।
ಳ್ತಿರೆ ದೋಷಪ್ರತಿಕಾರ ಸಾರತಪಮಂ ತತ್ತಾಪಸಂ ತಾಳ್ದಿದಂ ॥೧೫॥

ಸುಚರಿತದರ್ಶನಬೋಧೋ ।
ಪಚಾರಮೆಂಬಿವಱೊಳುಚಿತವಿನಯದಿನಾದಂ ।
ರಚಿಯಿಸಿ ವಿನಯಸಮನ್ವಿತ ।
ನಚಾಲ್ಯಮನನಖಿಳವಿನಯಮಂ ಪ್ರಕಟಿಸಿದಂ ॥೧೬॥

ಗುರುಶೈಕ್ಷ್ಯಗ್ಲಾನ ಸಂಘಪ್ರವಣಗಣತಪೋನಿಶ್ಚಿತಾನೀತಸಾಧೂ ।
ತ್ಕರದೊಳ್ ಮತ್ತಂ ಮನೋಜ್ಞಪ್ರತತಿಕುಳದೊಳಾದೊಂದವಸ್ಥಾವಿಚಿಂತಾಂ ।
ತರದೊಳ್ ಕೈಕೊಂಡು ಪರ್ಯಾಪ್ತಿಯನನವರತಂ ಮಾಡ್ಡಿ ಶೀಳೋತ್ಕರಂ ಕೂ ।
ಡಿರೆ ವೈಯ್ಯಾವೃತ್ಯಮೆಂಬೀ ತಪದೊಳೆಸಗಿದಂ ಸೂರ್ಯಮಿತ್ರಬ್ರತೀಂದ್ರಂ ॥೧೭॥

ಮುನಿಪತಿ ವಾಚನೆಯಿಂ ಪೃ ।
ಚ್ಛನೆಯಿನನುಪ್ರೇಕ್ಷೆಯಿಂ ತದಾಮ್ನಾಯದಿನೊ ॥

ಯ್ಯನೆ ಧರ್ಮಕಥನದಿಂದಂ ।
ವಿನುತಸ್ವಾಧ್ಯಾಯಮೆಂಬ ತಪಮಂ ತಳೆದಂ ॥೧೮॥

ದೊರೆಯಲ್ಲದ ಬಾಹ್ಯಾಭ್ಯಂ ।
ತರೋಪಧಿಯನುಜಿದನಾರತಂ ವ್ಯುತ್ಸರ್ಗೋ ॥
ತ್ತರತಪದೊಳತಿವಿಶುದ್ಧಾಂ ।
ತರಂಗನೆನಿಸಿದನಮಾನುಷಂ ಮುನಿತಿಲಕಂ ॥೧೯॥

ಖಳರೌದ್ರಾರ್ತಧ್ಯಾನಂ ।
ಗಳಂಬೆರಡುಮಂ ಬಿಸುಟು ಧರ್ಮಶುಕ್ಲಧ್ಯಾನಂ ॥
ಗಳೊಳಾಜ್ಞಾಪಾಯವಿಪಾ ।
ಕಳೋಕ ವಿಚಯಮನನಾಕುಲಂ ಮುನಿ ತಳೆದಂ ॥೨೦॥

ವ ॥ ಇಂತಭ್ಯಂತರತಪದೊಳಂತರಂಗಸಂಶುದ್ಧನಾಗಿ ಸಮಾಚರಿಸಿ ಜಿನಕಲ್ಪಿತಾಚರಣಮಾರ್ಗದಿಂ ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಸಂವಾಹಗಳೊಳ್ ವಿಹಾರಿಸುತ್ತುಂ ವಿಹರಣಕ್ರಮದಿಂ ವತ್ಸವಿಷಯದ ಕೌಶಂಬೀ ನಗರಕ್ಕೆ ವಂದದಱ ಪೂರ್ವೋತ್ತರದ ದಿಶಾಭಿರಾಮಮಪ್ಪುದಯವಾತಪರ್ವತದ ಸಿದ್ಧಕ್ಷೇತ್ರಂಗಳುಮಂ ಚೈತ್ಯನಿಕೇತನಂಗಳುಮಂ ತ್ರಿಃಪ್ರದಕ್ಷಿಣಂಗೆಯ್ದು

ಪರಮಮುನೀಶ್ವರನರ್ಹ ।
ತ್ಪರಮೇಶ್ವರಚರಣಕಮಲಯುಗಳಕ್ಕತಿ ನಿ ॥
ರ್ಭರ ಭಕ್ತಿಭರದಿನತ್ಯಾ।
ದರದಿಂ ಪರಿಣಾಮಶುದ್ಧಿಯಿಂ ವಂದಿಸಿದಂ ॥೨೧॥

ವ ॥ ಅಂತಲ್ಲಿಯ ಚೈತ್ಯಾಲಯಂಗಳಂ ವಂದಿಸಿ ತದ್ವಾಸರದೊಳ್ ತೀರ್ಥೋಪವಾಸಂಗೆಯ್ದು ಪಾರಾಣಾದಿನದೊಳ್ ಚರ್ಯಾಮಾರ್ಗದಿಂ ಕೌಶಂಬೀನಗರಾಭಿಮುಖಂ ಸತ್ವಗುಣಾಧಿಕಕ್ಲಿಶ್ಯಮಾನಾವಿನಯರೊಳ್ ಮೈತ್ರೀಪ್ರಮೋದ-ಕಾರುಣ್ಯ ಮಾಧ್ಯಸ್ಥ ವೃತ್ತಿಯಂ ಭಾಪಿಸುತ್ತುಮತಿವಿಳಂಬಿತಗತಿವ್ಯಪೇತನುಂ ಯುಗಪ್ರಮಾಣ ಮೇದಿನೀತಳ ನಿರೀಕ್ಷಣನುಮಾಗಿ ಪುಗಲ್ತಕ್ಕ ಮನೆಗಳೊಳ್ ಚಂದ್ರಗತಿಯಿಂ ಚರಿಗವುಗುತ್ತುಂ ಕಾಶ್ಯಪಿತನೂಜನಪ್ಪಗ್ನಿಭೂತಿಯ ಮನೆಯಂ ಭೂಮಿದೇವಾವಾವಾಸಮಪ್ಪುದಱಿಂ ಪುಗುವುದುಮಾಗಳವರ ಬರವನಾ ವಿಪ್ರವರಂ ಕಂಡು ಸೂರ್ಯಮಿತ್ರೋಪಾಧ್ಯಾಯರಪ್ಪರೇನುಂ ತಪ್ಪಿಲ್ಲೆಂದು ಪಿರಿದುಮನುರಾಗದಿಂ ರಾಗಿಸಿ ಪರಿತಂದು

ಇದಿರ್ಗೊಂಡುದ್ದದೊಳೇಱಲಿಕ್ಕಿ ಚರಣಪ್ರಕ್ಷಾಳನಂಗೆಯ್ದುಸ ।
ನ್ಮುದದಿಂದರ್ಚಿಸಿ ಭಕ್ತಿಯಿಂದೆ ಪೊಡೆವಟ್ಟಾಗಳ್ಮನಶ್ಶುದ್ಧಿಯಿಂ ।

ಮೃದುವಾಕ್ ಶುದ್ಧಿಯಿನನ್ನ ಶುದ್ಧಿಯಿನೊಱಲ್ದಾಹಾರಮಂ ಶುದ್ಧಮ ।
ಪ್ಪುದನಾತಂ ನವಪುಣ್ಯಮೊಂದಿರೆ ಮಹಾಪುಣ್ಯಾಸ್ಪದಂಗಿಕ್ಕಿದಂ ॥೨೨॥

ಪುದಿದಟ್ಟಿಭಕ್ತಿದಯೆಯಿಂ ।
ದುದಾತ್ತಶೀಲಂ ಕ್ಷಮಾಗುಣಂ ಶೌಚಮೆನಿ ॥
ಪ್ಪುದಿತೋದಿತಮೇಟಱೊ ।
ಳುದಾತ್ತಮತಿ ಕೂಡಿ ಮುನಿಗೆ ದಾನಮನಿತ್ತಂ ॥೨೩॥

ವ ॥ ಅಗಳಾ ಪರಮಮುನೀಶ್ವರಂ ಕಾಯಸ್ಥಿತಿಯಂ ನಿರ್ವರ್ತಿಸಿ ಪೋಪಾಗಳಗ್ನಿಭೂತಿ ಮನದೆಱಕದಿನೆಱಗಿ ಪೊಡೆವಟ್ಟು ನಿಮ್ಮ ಪ್ರಸಾದದಿನೆಮಗಿನಿತು ಮಹಾ ವಿಭೂತಿಯುಂ ಖ್ಯಾತಿಯುಮಾಯ್ತು ನಿಮ್ಮ ಕಿಱಿಯ ಗುಡ್ಡಂ ವಾಯುಭೂತಿಯಾಯಿರ್ದನೆ ಪರಸಿ ಪೋಪಿರ್ ಬಿಜಯಂಗೆಯ್ಯಿಮೆಂದು ನಿಜಾನುಜನ ಮನೆಗೊಡಗೊಂಡು ಬರ್ಪುದುಮಾತನುಮವರಂ ಕಾಣಲೊಡನಱಿದುಮವಿನಯ ಸ್ವಭಾವದಿನುಱದೆ ನಿಜ ಸಭಾಭ್ಯಂತರಲೋಹಾಸನಾರೂಢಂ ಗರ್ವಪರ್ವತಾರೂಢನಾಗಿ

ಅಸಹಿಷ್ಣು ದೆಸೆಗೆ ಬೆಬ್ಬೆಸೆ ।
ವೆಸೆದಿರ್ದೆಡೆಯಿಂದಮೇಟಲೆಸಗದವಷ್ಟಂ ।
ಭಿಸಿ ವಿಪ್ರಸಭೆಗೆ ವಕ್ಪಾ ।
ಣೆಸುತ್ತುಮುದ್ಗ್ರೀವನವರನವಮಾನಿಸಿದಂ ॥೨೪॥

ವ ॥ ನಿಜಾಗ್ರಜಂಗೆ ಮೊದಲಾಗಿಯುಮೇಱಲಿಕ್ಕದೆಯುಮಾದರಿಸದೆಯುಂ ಮೂಗಂ ಮೇಲೆತ್ತಿಕೊಂಡಿರ್ಪುದುಮಗ್ನಿಭೂತಿ ತನ್ನ ತಮ್ಮನುಱದಿರ್ದುದನಱಿದು ಕರಮೆ ಸಿಗ್ಗಾಗಿ ಮುಂದೆ ನಿಂದಿರ್ದು

ಜನನಿಯೊಡವುಟ್ಟಿದಂ ಮಾ ।
ವನುಪಾಧ್ಯಾಯಂ ಮುನೀಶ್ವರಂ ದಯೆಯಿಂ ನಿ ।
ನ್ನನೆ ಪರಸಲ್ಬಿಜಯಂಗೆಯೆ ।
ನೀನುದಾಸೀನನಾಗಿ ಕಡೆಗಣಿಸುವುದೇ ॥೨೫॥

ವ ॥ ಎಂಬುದುಂ ವಾಯುಭೂತಿ ಸೂರ್ಯಮಿತ್ರ ಭಟ್ಟಾರಕರ ಮೊಗಮಂ ನೋಡಿ

ಮನೆಯೊಳ್ಮಯ್ಗೆ ಬಾತುಕೊಂಡು ಸಿರಿಯೊಳ್ಕಣ್ಗಾಣದೊಡ್ಡಯ್ಸುವಂ ।
ದಿನ ನೀಮಾರ್ಗೆಲಗೆ ನಿಮ್ಮನಾವಱಿಯೆಮೆಂದೆಮ್ಮಂ ತೊಡಂಕಿಕ್ಕುವಂ ।
ದಿನ ಭಿಕ್ಷಾನ್ನಮನಿಕ್ಕುವಲ್ಲಿ ಸತಿಯಂ ಬೇಡೆಂದು ಕಣ್ಣೆತ್ತುವಂ ।
ದಿನ ಸೊರ್ಕ್ಕಕ್ಕಟ ಮುಕ್ಕುವೋಗಿ ಕಡೆಯೊಳ್ ಭೈಕ್ಷಕ್ಕೆ ಪಕ್ಕಾದಿರೇ ॥೨೬॥

ಎಮಗಾವುದು ತೀರದ ವ
ಸ್ತು ಮಾವನಿಂದೆಂದು ನಚ್ಚಿ ಬಂದೊಡೆ ನೀನ ।
ಶ್ರಮದೊಡ್ಡಿದ ಗೊಡ್ಡಮ ।
ನೆಮ್ಮಲೆ ನಲಿದಾಡಿ ಕಾಡಿದುದನದನಱಿವೋ ॥೨೭॥

ವ ॥ ಅಂತುಮಲ್ಲದೆಯುಂ

ನೀಂ ಬೇವಾದೊಡೆ ನಿನ್ನ ಕು ।
ಟುಂಬಿನಿಯುಂ ಕಯ್ಪೆ ಸೊರೆಯ ಕುಡಿಯೇಂ ಮಿಡಿಯೇ ।
ನೆಂಬಂತೆ ದರಸಿಯಾದಳಿ ।
ದೇಂ ಬಳ್ವಳಬಳೆದ ಬಂಧುತನಮಿನಿದಾಯ್ತೋ ॥೨೮॥

ವ ॥ ಎಂದು ಬಾಯ್ಗೆವಂದಂದದೊಳಾ ದುರಾತ್ಮನಾ ಮಹಾತ್ಮನನಪ್ರತ್ಯಾಖ್ಯಾನ-ಕ್ರೋಧಕಷಾಯೋದಯಮಾನಗರ್ವದಿನವಮಾನಿಸಿ ತಿರಸ್ಕರಿಸಿಯುಮಗ್ನಿ ಭೂತಿಯನುಭೂತಂ ಮಾಡಿ

ನಮಗೀ ಸಂಯಮಿ ಮಾವನೋದಿಸಿದುಪಾಧ್ಯಾಯಂ ಗುಣಾಧೇಯನು
ತ್ತಮನುರ್ಬೀಸುತನೆಂದು ಬಣ್ಣಿಸಿ ಕರಂ ಕಯ್ಕೊಂಡು ನೀಂ ಪೇೞವೇ ।
ಟ್ಟುಮೆ ನಾಮಿಾತನ ಕೈಯ್ಯೊಳಂದು ಪರಿಭವಂಬಟ್ಟಂದು ಮುಂ ಭಿಕ್ಷುಕ ।
ಕ್ರಮದಿಂದೇಳಿದರಾಗಿ ಬಾರದ ಭವಂ ಬಂದಂದಮೇಂ ಪೇೞದೇ ॥೨೯॥

ತಿರಿದುಂಡು ಕಚ್ಚುಟಮನು ।
ಟ್ಟು ರಚ್ಚೆಯೊಳ್ಪಟ್ಟುಮುಟ್ಟುಗೆಟ್ಟುಬ್ಬೆಗಮು ॥
ಬ್ಬರಿಸಿ ನಮೆದುದನದಂ ಮಱಿ ।
ದಿರೆ ಮಾವಂ ದೇವನಾದೊನೇ ನಮಗೀಗಳ್ ॥೩೦॥

ನೀರುಂ ನೇಣುಮನಾವಗಂ ತೊಱೆದುದಂ ಮೇಣ್ಕಾಣೆಯೋ ಬ್ರಾಹ್ಮಣಾ।
ಚಾರಪ್ರಕ್ರಿಯೆಯಿಲ್ಲದಿರ್ದಿರವನೇನಾರಯ್ಯೆಯೋ ಕಂಡುಗಂ
ಡಾರುಂ ನಾಣ್ಚುವ ಮಾರ್ಗದೊಳ್ ನಡೆಯುತುಂ ನಾಣ್ಗೆಟ್ಟದಂ ನೋಡೆಯೋ ।
ಪಾರಿಬ್ರಾಜಕಮೆಂದಭಿಷ್ಟುತೆ ಗೆಯಲ್ ನಿನ್ನೋಲ್ದುಗ್ಗಣಂ ಮಾಸದೇ ॥೩೧॥

ಪಡೆಯಲ್ ಬಾರದ ಕುಲಮಂ ।
ಪಡೆದು ಬೞಿಕ್ಕದನೆ ನೀರೊಳರ್ದಿದೆ ನೀನುಂ ॥
ಪಡೆವೈ ಪ್ರಾಯಶ್ಚಿತ್ತಮ ।
ನೆಡಂಬಡಿವರಿಂದಮಿಂದು ನಿನಗಾದುದಱಿಂ ॥೩೨॥

ವ ॥ ಅದಲ್ಲದೆಯುಂ

ಸವಣನನಾದರಿಪುದು ಕರ ।
ಮವಿರುದ್ಧಂ ಕಟ್ಟಿಯಾಗಿ ನಾಯಾಗಿ ಬಟಿ ॥
ಕ್ಕ ವರಾಹನಾಗಿ ಚಾಂಡಾ ।
ಲವಂಶದೊಳ್ ಪುಟ್ಟುವುಜ್ಜುಗಂ ನಿಮಗಾಯ್ತೇ ॥೩೩॥

ವ॥ ಎಂದು ನುಡಿವುದುಮಾ ಪಾಪಾಶ್ರಯಪರಿಣಾಮಪರಿಣತಿಯಿಂ ತನಗಾ ಕಷ್ಟಯೋನಿಚತುಷ್ಟಯದೊಳಾಯುಷ್ಯಂ ಕಟ್ಟುವುದುಮಾ ಪ್ರಸ್ತಾವದೊಳಾ ಮಹಾಮುನೀಶ್ವರನುತ್ತಮಕ್ಷಮಾಸ್ವರೂಪಮೆ ರೂಪುಗೊಂಡಂತೆ ಪರಮೋಪಶಮಚಿತ್ತನಾಗಿ

ಗಾಹೆ ॥ ಣಿಂದಂತಂ ಸಿಳಹಂತಂ ಸತ್ತುಂ ಮಿತ್ತುಂ ತಹೇವ ಸುಹದುಖ್ಖಂ
ಜೋಸಮಭಾವಣ ಪೆಚ್ಛಣ ಸೋಸಮಣೋ ಸೋಯ ಪಚ್ಛಣಯೊ ॥೩೪॥

ಕ್ಷಮೆಯ ಮೊದಲ್ ಸಮತೆಯ ಬಿ ।
ತ್ತು ಮೊದಲ್ ಸೈರಣೆಯ ಮೊತ್ತಮೊದಲೆನೆ ನೆಗಟ್ದಿ ॥
ರ್ದ ಮನುಷ್ಯನಾವನಾತನೆ ।
ಸಮಾನನಾತನೆ ಮುನೀಂದ್ರನಾತನೆ ದೇವಂ ॥೩೫॥

ಪಗೆಯಾವುದು ಕೆಳೆಯಾವುದು ।
ಬಗೆವೊಡೆ ಭಾವಿಸುವೊಡೆಂದು ನೋಡುವೊಡೆಂದುಂ ।
ಪಗೆ ಕರ್ಮಮೆ ಕೆಳೆ ಧರ್ಮಮೆ ।
ಜಗದೊಳ್ಮುನಿಪತಿಗೆ ಪರಮಜಿನಪತಿಮತದಿಂ ॥೩೬॥

ಮುನಿವವರುಂ ಕೂರ್ಪವರುಂ
ಮುನಿಸುಂ ಕೂರ್ಮೆಯುಮನುಂಟುಮಾಡುವ ಪದದೊಳ್
ಮುನಿಯದ ಕೂರದ ಮುನಿಸದ
ಮುನಿಪತಿ ಭಾವಿಪೊಡೆ ತಾನೆ ಜಿನಪತಿಯಲ್ತೆ ॥೩೭॥

ವ॥ ಎಂದು ವಿಶುದ್ಧಾಂತರಂಗದಿಂ ವಿವಕ್ಷೆಗೆಯ್ಯುತ್ತುಂ

ಒಸೆಯದೆ ಬೆಸೆಯದೆ ಪರಿಭಾ
ವಿಸುತ್ತಮಿಂತಗ್ನಿ ವಾಯು ಭೂತಿಗಳ ಗುಣ ॥
ಕ್ಕೆ ಸಮಾನಚಿತ್ತನಾಗಿಯು
ಮಸಮಾನಮನಸ್ಕನಾದನೆನಗಿದು ಚೋದ್ಯಂ ।೩೮॥

ವ॥ ತದನಂತರಂ ಸೂರ್ಯಮಿತ್ರಾಚಾರ್ಯರಲ್ಲಿಂ ಪೊಱಮಟ್ಟುದಯವಾತ

ಪರ್ವತಕ್ಕಾಗಿ ನಡೆವುದುಮಗ್ನಿಭೂತಿಯುಮವರ ಬೆಂಬೞಿಯನೆ ತಗುಳ್ದು ಪೋಗಿ ತನ್ಮಹೀಂದ್ರೋಪಕಂಟದೊಳೊಟ್ಟಿಗ್ಗೆ ಪೊಡೆವಟ್ಟು ನಿಮ್ಮಡಿ ನಿಮ್ಮನಾ ಪಂಚಮಹಾಪಾತಕನ ಮನೆಗೊಡಗೊಂಡುಯ್ದನೇಕಾಪವಾದೋಪಸರ್ಗಂಗಳಂ ಮಾಡಿದೆನಾ ದೋಷಮುಂ ಪ್ರಾಯಶ್ಚಿತ್ತದೊಳೇಗೆಯ್ದು ತೀರ್ವುದಲ್ತೆನಗೆ ನಿಮ್ಮಡಿ ದೀಕ್ಷೆಯಂ ದಯಂಗೆಯ್ಯಿಮೆಂದು ತತ್ಕಾಳಿಕಕಾಲಲಬ್ಧಿಯಿಂ ಸಂವೇಗವೈರಾಗ್ಯಪರನಾಗಿ ಪಿರಿದುಮಾಗ್ರಹದಿಂ ಕೀಱಿ ಮೀಱಿ ಬೇಡಿದೊಡಲ್ಪಾಯುಷನುಮಾಸನ್ನಭವ್ಯನಪ್ಪುದಂ ಜಲಕ್ಕನಱಿದು ಶುಭ ಲಗ್ನದೊಳ್ ಜಾತರೂಪಧರನಂ ಮಾಡಿ

ಇವು ಗುಪ್ತಿಗಳಿವು ಸಮಿತಿಗ
ಳಿವು ನೆಗಟ್ದಾವಶ್ಯಕಂಗಳಿವು ಶಿಕ್ಷೆಗಳಿಂ.
ತಿವು ಭಾವನೆಗಳ್ ಭಾವಿಪೊ।
ಡಿವು ಚಾರಿತ್ರಂಗಳೆಂದನೇಕೋಕ್ತಿಗಳಿಂ ॥೬೯॥

ವ॥ ನಿಯಮಾಚಾರ ಪ್ರಭೃತಿ ಪರಮಾಗಮಂಗಳನೋದಿಸುತ್ತುಂ ನಾನಾ ಜನಪದಸ್ಥಾನೀಯಂಗೊಳ್ ಸದ್ಧರ್ಮಪ್ರತಿಭೋದನಾರ್ಥಂ ವಿಹಾರಿಸುತ್ತುಂ ವಿನಯ ಜನಾಂತರಂಗೋಚಿತಮುಮಪ್ಪಂಗವಿಷಯಮುಮಂ ವಿಷಯಮುಮುಕ್ತಪೂರ್ಕಕ್ಕು ತನ್ಮಹೀಮಂಡಳಮಂಡನಮೆನಿಸಿದ ಚಂಪಾನಗರಮನೆಯ್ದಿದರಲ್ಲಿ

ಬೆಳಗೆಯ್ಗಳ ಕುಳಿರ್ವ ಪುೞಿ ।
ಲ್ಗಳ ತುಱುಗಿ ತಳಿರ್ತ ನಂದನಂಗಳ ಪೆಂಪಂ ॥
ತಳೆದು ಸೊಗಯಿಸುವ ಕೃತಕಾ
ಚಳತತಿಗಳ ಸಿರಿ ಕರಂ ಮನೋಹರಮದಱೊಳ್ ॥೭೦॥

ಪುದಿದ ತಮಾಲಮಿಲ್ಲದ ಲತಾಲಯಮಿಲ್ಲದ ಚಂಪಕಂಗಳಿ ।
ಲ್ಲದ ಸಹಕಾರಮಿಲ್ಲದ ಸರೋವರಮಿಲ್ಲದ ರಾಜಹಂಸಮಿ ।
ಲ್ಲದ ಶುಕರಾಜಿಯಿಲ್ಲದ ಮದಾಳಿಗಲಿಲ್ಲದ ತಣ್ಬೞಿಲ್ಗಳಿ ।
ಲ್ಲದ ಪುಳಿನಂಗಳಿಲ್ಲದೆಡೆಯಿಲ್ಲ ತದುರ್ಬಿಯೊಳೆಲ್ಲಿ ನೋಱ್ಪೊಡಂ ॥೭೧॥

ತರುನಿವಹಕ್ಕೆ ತಮ್ಮದಟೆ ತಮ್ಮ ವಿಲಾಸಮೆ ತಮ್ಮ ಚೆಲ್ವೆ ತ ।
ಮ್ಮರಸೆ ಪೊದಳ್ದಸಲ್ಗೆ ಸಲೆ ತಮ್ಮ ವಿಭೂತಿಯಪೆರ್ಚೆ ಕೋರಕಾಂ ।
ಕುರ ವರಪತ್ರ ಪುಷ್ಪ ಫಳಪಕ್ವಚಯಂಗಳಿನೆಂತು ನೋಟ್ಪೊಡಂ ।
ನಿರುಪಮಮಾಗಿ ಕಣ್ಗೆ ಕರಮೊಪ್ಪಿದವಾಮ್ರಮಹೀಜರಾಜಿಗಳ್ ॥೭೨॥

ಪ್ರವರೋದ್ಯಾನವನಂಗಳಿಂ ಪ್ರವಿಲಚಬ್ಬಾಳೀವನಕ್ಕಾಗಿ ಪಾ।
ಱುವ ಕೀರಾವಲಿ ಪುಷ್ಪವಾಟದಿನಗಲ್ಬಬ್ಜಾಕರಕ್ಕಾಗಿ ಪೊ ।

ರ್ದುವ ಮತ್ತಭ್ರಮರಾಳಿ ಪೇರ್ಗಱಿಗಳಿಂ ಪುಂಡ್ರೇಕ್ಷುವಾಟಕ್ಕೆ ಪೊ ।
ಣ್ಮುವ ಪೇರಬ್ಬಿಗಳೆತ್ತಲುಂ ಸೊಗಯಿಕುಂ ಚಂಪಾಪುರೋಪಾಂತದೊಳ್ ॥೪೩॥

ವ॥ ಅಂತಾ ಪುರೋಪಾಂತದ ನಂದನವನಪ್ರದೇಶಮನೆಯ್ದೆವರ್ಪಾಗಳ್

ಅರವಿಂದೋತ್ಪಲ ಮಲ್ಲಿಕಾಪ್ರಸವವಸೌರಭ್ಯಂಗಳಂ ಪೇಱಿ ಬ ।
ರ್ಪಲರುಂ ನಿರ್ಭರಭಕ್ತಿಯಿಂದಮಿದಿರ್ವರ್ಪ್ಪಂತಾಯ್ತು ಕಾದಂಬ ಭೃಂ ।
ಗರವಂ ಕೀರ ಚಕೋರ ಸಾರ ಸಮಯೂರಾರಾವದಿಂ ಬನ್ನಿಮಿ ।
ತ್ತಿರಿಮೆಂಬಂತೆವೊಲಾಯ್ತು ತನ್ಮುನಿಯುಗಕ್ಕಾನಂದದಿಂ ನಂದನಂ ॥೪೪॥

ವ॥ ಆ ಪ್ರಸ್ತಾವದೊಳ್

ವನಜಾತಾಕರಶೀಕರಪ್ರಕರಸಾರಾಸಾರದಿಂ ನಾಂದು ನಂ ।
ದನನಾನಾಪ್ರಸವಪ್ರಭೂತಮಕರಂದಾಮೋದಮಂ ತಂದು ನೂ ।
ತನಚೂತಾವನಿಜಾತಗುಚ್ಛನಿವಹವ್ಯಾಜಂಗಳೊಳ್ ನಿಂದು ಮೆ ।
ಲ್ಲನೆ ತಣ್ಪಂ ತನಿಗಂಪುಮಂ ಪದೆದು ತೀಡಿತ್ತೊಂದು ಮಂದಾನಿಲಂ ॥೪೫॥

ವ॥ ಅಲ್ಲಿಂ ಬಟಿಕ

ಇದು ಪುಣ್ಯಕ್ಷೇತ್ರಮಿಾ ಇರ್ದುದೆ ದುರಿತಹರಕ್ಷೇತ್ರಮಿಾ ಮೆಯ್ಯೊಳೀ ತೋ ।
ರ್ಪುದೆ ಸಿದ್ಧಕ್ಷೇತ್ರಮೆಂದಾದರದಿನಿವರ್ಗೆ ತೋರ್ಪಂತುಟಾಗಿರ್ದುದಾ ಬೇ
ಗದೊಳೆತ್ತಂ ವಂದನಾಭಕ್ತಿಯಿನನವರತಂ ಬಂದು ಬಂದಾಗಳುಂ ಕುಂ ।
ದದೆ ನಿರ್ವಾಣೋರ್ವಿಯಂ ಪೂಜಿಸುವಖಿಳವಿನೇಯೋತ್ಕರಾಶೇಷಲೋಕಂ ॥೪೬॥

ವ॥ ಅಂತಶೇಷಕರ್ಮನಿರ್ಮೂಲನಕರನುಂ ದ್ವಾದಶತೀರ್ಥಕರನುಂ ಪರಿತ್ಯಕ್ತ ಸಕಲವಸುಂಧರಾತಳಾಧಿರಾಜ್ಯನುಂತ್ರಿಜಗತ್ಪೂಜ್ಯನೆನಿಸಿದ ಶ್ರೀವಾಸುಪೂಜ್ಯಭಟ್ಟಾ ರಕರ ಪರಿನಿರ್ವಾಣ ಕ್ಷೇತ್ರಮಂ ಕಂಡು ಮೂಱುಸೂಟಿಱ್ ಬಲವಂದು ಕೈಗಳಂ ಮುಗಿದು

ಜಯಮದನಮದವಿಮರ್ದನ ।
ಜಯ ಸಕಳವಿನೇಯನಿವಹಸಖ ಜಯ ಭುವನ ॥
ತ್ರಯಶಿಖರಶಿಖರಶೇಖರ ।
ಜಯ ನತಸುರಖಚರದನುಜಮನುಜಾಧೀಶಾ ॥೪೭॥

ಜಯಜಯ ವಾಸುಪೂಜ್ಯ ಸುರಪೂಜ್ಯ ಜಿನೇಶ್ವರ ವೀತರಾಗ ನಿ।
ರ್ಭಯ ನಿರವದ್ಯ ನಿರ್ಜಿತ ನಿರಂಜನ ನಿರ್ಮಲ ನಿಷ್ಕಲಂಕ ನಿ
ರ್ನಯ ನಿರಪಾಯ ನಿರ್ಜನನ ನಿಸ್ಪೃಹ ನಿರ್ಮಮ ನಿರ್ವಿಕಲ್ಪ ನಿ।
ಷ್ಕ್ರಿಯ ನಿರಪೇಕ್ಷ ನಿನ್ನ ಚರಣಂ ಶರಣಕ್ಕೆಮಗಿಂ ಜಿನೇಶ್ವರಾ ॥೪೮॥

ಭವದೀಯ ವಿಮಳರೂಪ ।
ಸ್ತವ ವಸ್ತುಸ್ತವ ಗುಣಸ್ತವಂಗಳನಿಂತೆಂ ॥
ದವನೆಣಿಸಲಶಕ್ಯಂ ನತ ।
ದಿವಿಜೇಂದ್ರಾಹೀಂದ್ರ ವಾಸುಪೂಜ್ಯ ಜಿನೇಂದ್ರಾ ॥೪೯॥

ನುತಪುಷ್ಪಾಸಾರಮುದ್ಯದ್ದಿವಿಜ ಜಯನಿನಾದಂ ನವಾಶೋಕವೃಕ್ಷಂ ।
ಸಿತಚಂಚಚ್ಚಾಮರಂ ಬೆಳ್ಗೊಡೆ ಸೊಗಯಿಪ ಭಾಮಂಡಳಂ ದೇವತೂರ್ಯೋ ॥
ದಿತನಾದಂ ಚಾರುಸಿಂಹಾಸನಮೆನೆ ನೆಗಳ್ದೀ ಪ್ರಾತಿಹಾರ್ಯಾಷ್ಟಕಂ ವಿ।
ಶ್ರುತಮಾಗಿರ್ಕುಂ ಸುರೇಂದ್ರೋಪಕೃತಮೆನಿಸಿ ನಿಮ್ಮೊಳ್ ತ್ರಿಲೋಕೈಕಬಂಧೂ ॥

ಭುವನತ್ರಯಂಗಳೊಳಗು ।
ಳ್ಳ ವಸ್ತುಗಳ್ ದೇವ ಕರತಳಾಮಳಕ ಸಮಾ ॥
ನವೆ ನಿಶ್ಚಯಮಾದವು ನಿನ ।
ಗೆ ವಿಮಲಕೇವಲವಿಲೋಚನಾಲೋಕನದಿಂ ॥೫೧॥

ದುರಿತಾರಾತಿಯನಿಕ್ಕಿ ಗೆಲ್ವುದುಮನಂತಜ್ಞಾನಮುಂ ತಾನಿದ ।
ಚ್ಚರಿಯೆಂಬಂತಿದನಂತದರ್ಶನಮುಮವ್ಯಾಬಾಧಶೋಭಾಕರಾ ।
ಕ್ಷರ ನಿರ್ವ್ಯಾಕುಲಮಪ್ಪನಂತಸುಖಮುಂ ಮೆಯ್ವೆತ್ತು ನಿನ್ನೊಳ್ಕರಂ ।
ದೊರೆವೆತ್ತಿರ್ದುದನಂತವೀರ್ಯಮುಮನಂತಾನಂತಸೌಖ್ಯಾಸ್ಪದಂ ॥೫೨॥

ದಯೆಯಿಂದ ಭಾವಿಯಂ ಭಾ ।
ವಿಯಮೆಂದುಂ ಭಾವಿಯನ್ನಭಾವಿಯನೆಂಬೀ ॥
ನಯವಂ ಮಾಡುವುದೆಮಗ ।
ಕ್ಷಯಸೌಖ್ಯಾನಂತ ಮೋಕ್ಷಲಕ್ಷ್ಮೀಕಾಂತಾ ॥೫೩॥

ವಸುಪೂಜ್ಯಂ ತಂದೆ ಸಂದೊಪ್ಪುವ ಜಯವತಿತಾಯ್ ನೀಳಮೆಪ್ಪಿತ್ತು ಬಿಲ್ ಶೋ
ಭಿಸುವಂಗಂ ಬಾಳಭಾನುಚ್ಛವಿ ನೆಗಟ್ದಿ ಕದಂಬದ್ರುಮಂ ತಾನಶೋಕಂ ।
ಪೆಸರಿಂದಂ ಲಾಂಚನಂ ಸೈರಿಭಮನುಪಮಚಂಪಾಪುರಂ ತನ್ನ ನಿರ್ವಾ ।
ಣ ಸುಸೇವ್ಯಸ್ಥಾನಮಾಗಿರ್ದಘರಿಪು ಕುಡುಗಿಷ್ಟಾರ್ಥಮಂ ವಾಸುಪೂಜ್ಯಂ ॥೫೪॥

ವ॥ ಎಂದನೇಕ ಸ್ತುತಿಶತಸಹಸ್ರಂಗಳಿಂ ಸ್ತುತಿಯಿಸಿ ದೇಶಾವಧಿಜ್ಞಾನಿಯಪ್ಪ ಸೂರ್ಯಮಿತ್ರಮುನಿನಾಥನತಿವಿಶುದ್ಧ ಪರಿಣಾಮದಿಂ ಸರ್ವಾವಧಿಜ್ಞಾನಲೋಚನನಾಗಿ ನಿರ್ವಾಣೋರ್ವರಾಂತರ್ಭಾಗದಿಂ ಪೊಱಮಟ್ಟು

ಅಮಿತಗುಣಾಬ್ಧಿವಿಶ್ರುತಬಹುಶ್ರುತಪಾರಗನಪ್ರಮತ್ತನ
ಪ್ರಮಿತ ಸುರಾಸುರೋರಗ ವಿಯಚ್ಚರ ರಾಜ ಕಿರೀಟ ತಾಟಿತ

ಕ್ರಮಕಮಲದ್ವಯಾನತ ಮಧುಬ್ರತನೆಯ್ದಿದನಗ್ನಿಭೂತಿ ಸಂ
ಯಮಿವೆರಸಾಗಳಾ ಪರಮಸಂಯಮಿ ಸಂಬರನಾಗಠಾಣಮಂ ॥೫೫॥

ವ॥ ಅಂತು ಪುರೋಪಾಂತವನಾಂತರಾಳಸಂಸ್ಥಿತಮಪ್ಪ ಸಂಬರಕಂಬಳ ಪಾಂಡುರ ತ್ರಿತಯಾಭಿಧಾನಾಭಿರಾಮಮಪ್ಪ ನಾಗಮಂಟಪಂಗಳೊಳ್ ಸಂಬರನಾಗಡಾಣದೊಳ್ ಯೋಗನಿಯೋಗಪ್ರದೇಶದೊಳಿರ್ದಂದಿನ ದಿವಸಂ ತೀರ್ಥೋಪವಾಸಪ್ರ ತ್ಯಾಖ್ಯಾನದಿಂ ಪರಮಾರ್ಥಂಗಳಂ ಭಾವಿಸುತ್ತುಮಿರ್ದು ಮಱುದಿವಸಂ ಮಧ್ಯಾಹ್ನ ಕಾಲದೊಳಗ್ನಿ ಭೂತಿಋಷಿಯರ್ ಗುರುಗಳನುಮತದಿಂ ಚಂಪಾನಗರಕ್ಕೆ ಚರ್ಯಾಮಾರ್ಗದಿಂ ಬರುತ್ತುಮಾ ಪುರೋಪಾಂತದುಪವನಾಂತರಾಳದೊಳ್

ಮಾತಂಗಿಯನತಿಶೋಕಾ
ನ್ವಿತೆಯನಪರಿಮಿತದುಃಖಿತಾಂಧಕೆಯಂ ತೃ
ಷ್ಣಾತುರ ಗದ್ಗದ ಕಾಂತೆಯ
ನಾ ತಾಪಸನಾಗಳವಳನಿದಿರೊಳೆ ಕಂಡಂ ॥೫೬॥

ತಲೆರೋಮಂ ಜೆಡೆಗಟ್ಟಿ ಪೇನಿಱಿದು ಬಾಯೊಳ್ತೀವೆ ಮೆಯ್ ಬಾತ ಬಾ
ವಲನಾತಕ್ಕೆಣೆಯಾಗಿ ನಾಱಿ ಪಲರುಂ ಚೀಯೆಂಬಿನಂ ಸೂಸಿದೆಂ
ಜಲವುಟ್ಟಿಳನಾವಗಂ ಬೆದಕಿ ತಿಂದಾ ಬಟ್ಟೆಯೊಳ್ ಬಟ್ಟನೇ
ಱಿಲ ಚೆಂಗಾರೆಯ ಮೆಲ್ದುಗುಟ್ಟಿ ಸಹಕಾರೋಚ್ಛಿಷ್ಟಪಕ್ವಂಗಳಂ ।.೫೭।.

ತಡವಡಿಸಿ ಪುಡುಕಿಪಂಜಿನ
ನಡು ಬೀದಿಯೊಳಿರ್ದು ಮಱುಗುತಿರೆ ಕಂಡು ಕೆಲ ॥
ರ್ಬಡಿದೆಡೆಯೊಳೊಡೆದ ಪುಣ್ಗಳಿ
ನೆಡೆಯುಡುಗದೆ ರುಧಿರಮೊಱೆತು ಕಱಿಗಟ್ಟುವಿನಂ ॥೫೮॥

ಮೀಂಬೊಲಸು ನಾರ್ಪ ಮೆಯ್ಗಮ
ಳುಂಬಂ ತೂಂಬುರ್ಚಿದಂತೆ ಸುರಿವರುಣಜಳ ॥
ಕ್ಕಂ ಬಿಡದೆ ಕಾಗೆಯುಂ ಪ
ರ್ದುಂ ಬಳಸುವವೆಂದೊಡಿಂತು ಕಿಸುಗುಳೆಯೊಳರೇ ॥೫೯॥

ಕೆಲಬರ್ಕರುಣಿಸೆ ಕೆಲಬ
ರ್ಪಲತೆಱದಿಂ ಜಡಿಯೆ ಕಂಡು ಕೆಲಬರ್ತ್ತಮ್ಮಿಂ ॥
ಜಲನೂಡೆ ದುಃಖದತಿಶಯ
ಬಲೆಯೊಳ್ ಮಲುಮಲನೆ ಮಱುಗಿ ಸಿಲ್ಕಿರ್ದವಳಂ ॥೬೦॥

ವ|| ಕಂಡು ಕರುಣಸಾರ್ದ್ರಹೃದಯಂ ಮನ್ಯು [ಗ] ದ್ಗದಂಕಂಠನುಮಾಗಿ ನೀಡುಂ ಭಾವಿಸಿ ನೋಡಿ ತಲೆಯಂ ತೂಗಿದೂಗಿ

ಇದೇಂ ಬಹುವಿಚಿತ್ರಮೋ ಭವವಿಕಲ್ಪವೈಚಿತ್ರ್ಯಮಿಂ ।
ತಿದೇನಘಟಮಾನಮೋ ವಿಕೃತಘೋರಸಂಸಾರಮಿಂ ॥
ತಿದೇಂ ವೃಜಿನಬಂಧಮೋ ಕುಸೃತಿಬಂಧಸಂಬಂಧಮೆಂ ।
ದದೇಂ ತಳೆದನೋ ಮುನಿಪ್ರವರನಾಗಳುದ್ವೇಗಮಂ ॥೬೧॥

ವ|| ಅಂತು ಸಂಸಾರದ ಸ್ವರೂಪಕ್ಕೆ ಚೋದ್ಯಂಬಟ್ಟು

ಆ ದುಃಖಜೀವಿಯಂ ಕಂ ।
ಡಾದೊರೆಯ ಮುಮುಕ್ಷುಗಂ ನಿರೀಕ್ಷಿಸಲೊಡನಂ ॥
ದಾದುದು ಬಾಷ್ಪಪ್ರಸರಂ ।
ಸೋದರ್ಯವಿಮೋಹಮಾರ್ಗಮೇನಾಗಿಸದೋ ।೬೨॥

ವ|| ಅಂತು ಪರವಶದೊಳ್ ಮನ್ಯುಮಿಕ್ಕು ಸೈರಿಸಲಾಱದೆ

ಬಳೆದ ವಿಮೋಹದಿಂ ಪಿಡಿದ ಕುಂಚದ ಕಾವಿನೊಳಂದು ಪಕ್ಷಸಂ
ಕುಳಮನದೊಂದೆರಟ್ಟಿಳಿಗೆ ಪೋಪಿನಮಲ್ಲಿಯೆ ನಿಂದು ದುಃಖ ವಿ
ಹ್ವಳನೆಡೆದೋಱಿ ನೂಂಕಿ ಕುಡುತುಂ ಕರುಣಂ ಪಿರಿದಾಗಿ ಪಿಂಬಗಲ್
ಕಳೆವಿನಮಿರ್ದನಾ ಪರಮಯೋಗಿಗಮಂತುಟು ಮೋಹಮಾಗದೇ ॥೬೩॥

ವ|| ಇಂತು ಪಕ್ಷಿಪಕ್ಷಚಂಚುಚರಣಾಭಿಘಾತದೊಳಂ ಶಿಶು ಜನನಾನುಪಾತದಂಡಖಂಡಾಘಾತದೊಳುಮುದಿರ್ದು ನೆಲದೊಳ್ ಬಿರ್ದ ನೇಱಲಪಣ್ಗಳನಾ ಕೂಸಿನ ಪಕ್ಕಕ್ಕಾಗಿ ಸಾರ್ಚಿಕೊಟ್ಟು ತದನಂತರದಾ ವ್ಯತಿಕರದಿನಂತರಾಯಮಾಗಿ ಮಗುಳ್ದುಬಂದು ನಾಗಸ್ಥಾನಮಂ ಪೊಕ್ಕು

ಪರಮ ಶ್ರೀ ಜೈನಧರ್ಮಾಂಬರಖರಕರನಂ ನಿರ್ಮಲಧ್ಯಾನನೀರಾ ।
ಕರನಂ ಸಜ್ಞಾನಶೋಭಾಕರನನನುಪಮೋದಾತ್ತಚಾರಿತ್ರರತ್ನಾ ।
ಕರನಂ ಸಂದಗ್ನಿ ಭೂತಿಬ್ರತಿ ಸವಿನಯದಿಂ ಭಕ್ತಿಯಿಂ ಬಂದುಕಂಡಂ ।
ಪಿರಿದೊಂದಾನಂದದಿಂದಂ ಪರಮಜಿನಮತಾಂಭೋಜಿನೀ ರಾಜಹಂಸಂ ॥೬೪॥

ಇದು ಸಮಸ್ತ ವಿನಯಜನವಿನುತ ಶ್ರೀವರ್ಧಮಾನಮುನೀಂದ್ರವಂದ್ಯ
ಪರಮಜಿನೇಂದ್ರ ಶ್ರೀಪಾದಪದ್ಮವರಪ್ರಸಾದೋತ್ಪನ್ನ ಸಹಜ
ಕವೀಶ್ವರ ಶ್ರೀಶಾಂತಿನಾಥಪ್ರಣೀತಮಪ್ಪ ಸುಕು
ಮಾರಚರಿತದೊಳ್ ಚತುರ್ಥಾಶ್ವಾಸಂ ॥

೫. ಪಂಚಮಾಶ್ವಾಸಂ ॥

ಶ್ರೀಮನ್ಮುನೀಂದ್ರವಂದಿತ ।
ಕೋಮಲ ಕರಚರಣಭಕ್ತಿಯಿಂದಂ ಬಂದು ॥
ದ್ದಾಮಗುಣಂ ವಂದಿಸೆ ಕಂ ।
ಡಾ ಮುನಿಮುಖ್ಯಂ ಸರಸ್ವತೀಮುಖಮುಕುರುಂ ॥೧॥

ಜ್ಞಾನದಿನಱಿದೆಂದಂ ನೀ ।
ಮಿೞಾ ನಗರಕ್ಕಾಗಿ ಚರಿಗೆವೋಗುತ್ತುಂ ನಾ ॥
ನಾನೂನದುಃಖಪೀಡಿತ ।
ಮಾನಸೆಯಾಗುತ್ತುಮಿರ್ದ ಪೊಲವಾನಸೆಯಂ ॥೨॥

ಕರುಣಂ ಕೈಮಿಗೆ ಕಂಡಾ ।
ದರದಿಂದಂ ಮನ್ಯುಮಿಕ್ಕು ನಯನಜಲಂಗಳ್ ॥
ಸುರಿದಿನ್ನೆಗಮಲ್ಲಿರ್ದಂ
ತರಾಯದಿಂ ಬಂದಿರೀಗಳೆಂಬುದುಮಾಗಳ್ ॥೩॥

ವ॥ ಆಗ್ನಿಭೂತಿಮುನೀಶ್ವರನತ್ಯಾಶ್ಚರ್ಯಂಬಟ್ಟು

ಎನ್ನೊಡನೆ ಬಂದಿರೋ ಮೇ
ಣುಮ್ಮನ್ನಾ ಕೂಸಿಂಗೆ ಬುದ್ಧಿಗಲಿಸಿದಿರೋ ಪೇ ॥
ೞ್ನಿಮ್ಮಡಿಗಳ್ ನಿಶ್ಚಯದಿಂ ।
ದೆನ್ನರುಮಿೞಾ ಜಗದೊಳಿಂತು ಪೇೞ್ದಿರುಮೊಳರೇ ॥೪॥

ವ॥ ಎಂಬುದುಂ ದರಹಸಿತವದನಾರವಿಂದರಾಗಿ

ನಿನ್ನೊಡನೆ ಬಂದೆಮಿೞಾಗ ।
ಳ್ನನ್ನಾ ಕೂಸಿಂಗೆ ಬುದ್ಧಿಗಲಿಸಿದೆಮದಱಿಂ ॥
ನಿನ್ನೆಂದಮಾರ್ಗಮೆಂದು ಜ ।
ಗನ್ನುತ ಚಾತುರ್ಯವಚನರಚನೆಗಳಿಂದಂ ॥೫॥

ವ॥ ಭಟ್ಟಾರಕರ್ಬೆಸಸುವುದುಂ ತದಂತೇವಾಸಿ ವಿಸ್ಮಯೋದಾತ್ತಚಿತ್ತನಾಗಿ

ನಾನಾವಿಧದುಃಖಾನ್ವಿತೆ ।
ತಾನೆತ್ತ ವಿವಿಕ್ತಮೋಹಪಾಶನೆನಾಗಿ ॥
ರ್ದಾನೆತ್ತುಂತುಂ ಮೋಹಂ ।
ತಾನನುಬಂಧಿಸಿದುದಿದಱ ಕಾರಣಮೇನೋ ॥೬॥

ಬೆಸಸಿಮಿದನೆನ್ನ ಮನದೊಂ ।
ದು ಸಂಶಯಂ ಪತ್ತುವಿಡುವಿನಂ ವ್ಯಾಮೋಹಂ ॥
ಪ್ರಶಮಿಸುವಿನಮೆಂಬುದುಮಂ ।
ದೆಸೆದುದು ವಾಕ್ಪ್ರಸರಮಾಗಳಾ ಯತಿಪತಿಯಾ ॥೭॥

ವ॥ ನಿಮ್ಮಾವ್ರಾಸದೊಳಾಮಂದು ಚರಿಗೆನಿಂದಂದು ನೀನೆಮ್ಮಂ ನಿಮ್ಮ ತಮ್ಮನಪ್ಪ ವಾಯುಭೂತಿಯಿರ್ದಲ್ಲಿಗೊಡಗೊಂಡೊಯ್ದಾಗಳಾ ಪುರುಷನತಿಪರುಷ ವಚನಂಗಳಿಂ ತಿರಸ್ಕರಿಸಿ ನುಡಿದೊಡದುವೆ ನಿರ್ವೇಗದಿಂ ಸಂವೇಗಂ ಪುಟ್ಟ ನೀಮಿಾ ಯತಿಸ್ವರೂಪಮಂ ಕೈಕೊಂಡ ವಾರ್ತೆಯಂ ನಿಮ್ಮ ಮುನ್ನಿನ ಧರ್ಮಪತ್ನಿಯಪ್ಪ ಸೋಮದತ್ತೆ ನಿರ್ಣಯಮಾಗಿ ಕರ್ಣಪರಂಪರೆಯಿನಱಿದು ತನ್ನ ಮೈದುನನೈಶ್ವರ್ಯಗರ್ವದೊಳಂ ವಿದ್ಯಾಗರ್ವದೊಳಂ ನಿಮ್ಮ ಮಾವನಂ ನೀಂ ನಿರಾಕರಿಸಿ ನುಡಿದೊಡೆನ್ನ ಭರ್ತಾರಂ ನಿನ್ನನೇನುಮೆನಲಱಿಯದೆ ತನ್ನಂ ತಾನೆ ನಿಂದಿಸಿಕೊಂಡು ಸಿಗ್ಗಾಗಿ ಪೋಗಿ ತಪಂಬಟ್ಟನೆನ್ನ ಮಕ್ಕಳುಮಾನುಂ ದುಃಖಾಗ್ನಿಯೊಳ್ಪುಡುಪುಡನೆ ನಮೆವ ಪಾಪದ ಫಲಮಂ ನೀನಮೋಘಮುಣ್ಬೆಯೆಂದು ಮೂದಲಿಸಿ ನುಡಿವುದುಮುರ್ವರಾಮರ ಸಭಾಭ್ಯಂತರ ಲೋಹಾಸನಸ್ಥಿತಂ ತದಾಸನದಿನಿೞಿದು ಮುಳಿದು ಪಿಡಿದೆೞೆದು ನಿನ್ನಾಣ್ಮನಪ್ಪ ನಾಣಿಲಿಸವಣನನೊಡಗೊಂಡು ಬಾ ಪೋಗೆಂದು ಪೊಱಮಡೆ ನೂಂಕುವುದುಮಪ್ರತ್ಯಾಖ್ಯಾನಕ್ರೋಧಕಷಾಯೋದಯದಿಂ ಪರಿಭವಾನಳನಳವಲ್ಲದಳುರೆ ಸೋಮದತ್ತೆ ಸೈರಿಸಲಾಱದೆ ॥

ಮುಳಿದೆನ್ನನನಪರಾಧೆಯ ।
ನೞಲ್ದವಳನಿಂತನಾಥೆಯಂ ಮೋದಿದ ಕಾ ॥
ಲ್ಗಳನಾವ ಜನ್ಮಜನ್ಮಂಗ ।
ಳೊಳಗಾಗಿಯುಮಕ್ಕೆ ಮುಂದೆ ಕೇಳ್ತಿನ್ನದಿರೆಂ ॥೮॥

ವ॥ ಎನ್ನನೊದೆದ ನಿನ್ನ ಕಾಲ್ಗಳನೆನ್ನ ಮಕ್ಕಳುಮಾನುಮೊಂದಾಗಿಯು ಮೇನಾಗಿಯುಂ ಸೀಳ್ದು ಪೋೞ್ದು ತಿಂಬೆವೆಂದಾರ್ತಧ್ಯಾನದಿಂ ನಿದಾನಂಗೆಯ್ದು ಸತ್ತು ಸಂಸಾರಕಾಂತಾರಾಂತರಾಳದೊಳ್ ತಿರ್ಯಗ್ಜಾತಿಯಾಗಿ ಪುಟ್ಟಿ ತಿರಿಯುತ್ತು ಮಿರ್ದಪ್ಪೞಿತ್ತಲಾ ಸೋಮದತ್ತೆಯ ಮನೆಯೊಳುಳ್ಳ ಸರ್ವಸ್ವಮಂ ಸೂಱೆಗೊಂಡು

ತದ್ವಾಯುಭೂತಿ ವಿಭವ ಸ ।
ಮುದ್ವೃತ್ತಂ ವಚನದಂಡಪರುಷತೆಯಿಂ ಸಂ ॥
ಪದ್ವಶದಿನುರ್ಕ್ಕಿದಂ ತೃಣ ।
ವದ್ವಸುಮತಿಯೆನಿಸಿರ್ದ ವಿಶ್ವವಿಶ್ವಂಭರೆಯೊಳ್ ॥೯॥

ಪುದಿದೈಶ್ವರ್ಯದಿನಗ್ಗದಗ್ಗಳಿಕೆಯಿಂ ಚಾತುರ್ಯದಿಂ ಶೌರ್ಯದಿಂ ।
ಮುದದಿಂ ಭೋಗದಿನತ್ಯುದಾತ್ತಮಹಿಮಾವಷ್ಟಂಭದಿಂ ಸದ್ವಿಲಾ ।
ಸದಿನಾವಾಸವವಾಸುಕಿಪ್ರಭೃತಿಗಳ್ ತಾವೆಯ್ದಿದಂದೇನನೆ ।
ಯ್ದಿದರೀ ಮಾನವಲೋಕದೊಳ್ ಜನಿಯಿಸಿರ್ದನ್ನಾವನೀಪಾಳಕರ್ ॥೧೦॥.

ವ॥ ಎನಿಸಿದುದ್ಧತಿಯೊಳುದ್ದಂ ಬಂದು ದಳ್ಳೆಂದು ನಿಂದುರಿದಂದಿನೇೞನೆಯ ದಿವಸಕ್ಕೆ

ಔದುಂಬರಕುಷ್ಠಂ ನೆಗೆ ।
ದೌದಾರ್ಯಕಳೇವರಂ ಪಳಾಳಂಬಿತಮಾ ॥
ದೌದುಂಬರಮೆನಿಪಂತೆವೊ ।
ಲಾ ದೊರೆಯಂಗಾಯ್ತು ಖಳಕಳಂಕಾತಂಕಂ ॥೧೧॥

ವ॥ ಇಂತಪ್ರತ್ಯಾಖ್ಯಾನಕಷಾಯೋದಯದಿಂದೆಮ್ಮನವಮಾನಿಸಿ ನುಡಿದ ಪಾಪದ ಫಲದಿನೌದುಂಬರಕುಷ್ಠಮಾಗಿ ಸರ್ವಾಂಗೋಪಾಂಗಾವಯವಪ್ರದೇಶಂಗಳೆಲ್ಲಂ ರೂಪಱಿಯಲಾಗದಂತು ಜರ್ಜರಮಾಗಿ ಜರಿಯೆ ॥

ಅತಿಬಳನಾತ್ಮರಾಜಗೃಹಮಂ ಪುಗಲೀಯನೆ ಕಂಡರಾರುಮ ।
ನ್ವಿತರುಜನೆನ್ದು ಸಾರಲಣಮೀಯರೆ ಮುನ್ನೊಡವಟ್ಟು ತನ್ನ ಪೆಂ ।
ಡತಿ ಮೊದಲಾಗಿ ಪೂರ್ದಲಣಮೀಯಳೆ ಮಿತ್ರಜನಂಗಳೆಲ್ಲಮು ।
ದ್ಧತನಿವನೆಂದು ಮನ್ನಿಸರೆ ಪಾಪಿಯನಾರೊಳಕೊಂಡು ಮನ್ನಿಪರ್ ॥೧೨॥

ವ॥ ಅಂತು ಪೆಂಡಿರ್ಪರ್ೀಸೆಯುಂ ಕಂಡವರೇವಯ್ಸೆಯುಂ ಪಲವುದಿವಸ ಮಾಯಾಸಂಬಟ್ಟು ಬತ್ತಿದ ಬಾಯ್ಗಂ ಪೊತ್ತಿದನೆತ್ತಿಗಮಂತೇನುಮಂ ಪಡೆಯದೆ ಬಡತನಮಡಸಿ ಬಳಮೞಿದು ಪುೞಿತು ನಮೆದು ಸತ್ತುಮಾ ಕೌಶಂಬೀಪುರದೊಳ್ ಬಹುಕರ್ಮಿಯೆಂಬ ದೊಂಬನಮನೆಯೊಳ್ ಸ್ತ್ರೀವೇದದಿಂ ಬೆಳ್ಗತ್ತೆಯಾಗಿ ಪುಟ್ಟಿ

ಜನಪದವೆನಿತೊಲವನಿತಱೊ ।
ಳೆನಿತೂರೊಳವನಿತುಮಂ ಪಲರ್ಮೆಯಮದು ತಿ ॥
ಟ್ಟನೆ ತಿರಿದು ಮಾಯ್ದ ಡೊಂ ।
ಬಲ ಮನೆಯೊಳ್ ಮಲುಮಲನೆ ಮಱುಗಿ ನಮೆಯುತ್ತಿರ್ಕುಂ ॥೧೩॥

ಕಡುವಿರಿಯವು ಪೊಱೆಗಳನೆಡೆ ।
ಮಡಗದೆ ಮೇಲೊಟ್ಟಿ ಮತ್ತೆ ಮೆಲ್ಪರಮುಮನಾ ॥
ಗಡೆ ಕಟ್ಟಿ ಕುಸಿದು ಕುಸಿದಡಿ ।
ಮಿಡುಕದೆ ಸುಗಿದಗಿದು ಮುರ್ಗಿ ತರ್ಗುವ ಪದದೊಳ್

ಬಡಿವ ಬಡಿಗೆಗಳ ಕೋಳೊಳ್ ।
ತೊಡೆಯದು ಸಲೆ ಪೊಟ್ಟಗೊಡೆದು ಕಡಿವಡೆದೆತ್ತಂ ॥
ಪುಡುಪುಡನೆ ಪುರ್ಗಿ ಜೋಲ್ದೆಟಿ ।
ಲ್ವಡಗಾಗಿ ಸುರುಳ್ದು ಸುರುಳ್ದು ಬಾಯ್ವಿಟ್ಟಿರ್ಕುಂ ॥೧೫॥

ಆಱಿದಿದಾರ್ಪುದೆನ್ನದೆ ತಗುಳ್ದು ಮರಂಗಳನೊಟ್ಟಿ ಕೀಟಿನಿ ।
ಟ್ಟೇಱೆ ಬಟಲ್ವಿನಂ ಬಡಿದು ಗೋವುಗಳಿಂತಿರೆ ಪೇಱೆ ದುಃಖಮಂ ।
ಪೀಱೆ ಬಿಗುರ್ತು ಬೀಗಿ ನಡುವೆನ್ನೊಡೆದಿರ್ಬಗಿಯಾಗಿ ಪೋೞ್ದು ನೀ ।
ರೇಱಿದ ನಾಳಿಪುಣ್ಣೊಡೆದು ಸೌಳೆನೆ ಸೀೞ್ದದು ದೋಣಿವೋಪಿನಂ ॥೧೬॥

ಈ ತೆಱದಿನಾದ ಪಲವುಂ ।
ಯಾತನೆಗಳನೆಯ್ದಿ ಪುಟಿತು ಸತ್ತಾ ಪುರದೊಳ್ ।
ಪೋತಜಗರ್ಭೋದ್ಭೂತನಿ ।
ಪಾತಂ ಪೇಪಂದಿಯಾದುದಘವಶದಿಂದಂ ॥೧೭॥

ತೊಲಗದೆ ಗೋವುಗಳ್ ನೆರೆದು ನಾಯ್ಗಳನುರ್ಚುವ ಕಂಡು ಗುಂಡುಗೊಂ ।
ಡಲಸದೆ ನಿಚ್ಚಮಾರ್ದಿಡುವ ತಕ್ಕಿನ ಕರ್ಕಡೆಗೊಂಡು ಮಿಂಡು ಮಾ ।
ರ್ಮಲೆದಿದಿರಾಂತು ನಿಂದಡಸಿ ಸುತ್ತುವ ಬಾರಿಗೆ ಮೆಯ್ಯನೊಡ್ಡಿ ಕೋ ।
ಟಲೆಗೊಳಗಾಗಿ ಪಂದಿ ನಮೆವಂದಮದಾರ್ಗಮಸೇವ್ಯವರ್ಣನಂ ॥೧೮॥

ಅನಿವಿರಿದು ದುಃಖದೊಳ್ ನಮೆ ।
ದು ನಾರುಗಿದು ಪೊಗೆದು ಸತ್ತಲ್ಲಿ ನಿಷಾ ॥
ದನ ಮನೆಯೊಳ್ಪೆಣ್ನಾಯಾ ।
ಯ್ತು ನೆನೆದೊಡಾಶ್ಚರ್ಯಮಲ್ತೆ ಸಂಸೃತಿಚಕ್ರಂ ॥೧೯॥

ಮುಳಿಸಿಂ ಮಾಣದೆ ಗೋವುಗಳ್ ತಗುಳೆ ಕಾಯ್ಪಿಂದೆತ್ತಲುಂ ನಾಯ್ಗಳ ।
ವ್ವಳಿಸುತ್ತುಂ ಪರಿದೆಯ್ದೆ ಸೀೞ್ದು ತಿನೆ ನಾನಾವೇದನೋದ್ರೇಕಮಂ ।
ತಳೆದಾ ನಾಯ್ ಬಡಪಟ್ಟು ದುಃಖದೊದವಿಂ ಬಾಯ್ವಿಟ್ಟು ಗೋಳಿಟ್ಟು ಪೇ ।
ಕುಳಿಗೊಂಡಾದ ವಿಷಾದದಿಂ ಪುಟಿತು ಸತ್ತಿತ್ತಂತೆ ಕಾಲಾಂತದೊಳ್ ॥೨೦॥

ವ॥ ಮತ್ತಮಿಾ ಚಂಪಾನಗರದೊಲ್

ಅಕುಲೀನ ಪ್ರಾಪ್ತರೊಳ್ ದುಶ್ಚರಿತರೆನಿಪ ಮಾತಂಗರೊಳ್ ಪುಟ್ಟಿ ಮತ್ತಂ
ವಿಕಟಾಂಗೋಪಾಂಗೆ ಘಾತಿಪ್ರಚುರೆ ಪೆಱವಿ ದುರ್ಗಂಧೆ ದುರ್ವರ್ಣೆ ಜಾತ್ಯಂ
ಧಕಿ ಗೋಳಾಂಗೂಳಲೋಳಾನನೆಯೆನಿಸಿದ ಪಾಪಕ್ಕೆ ಪಕ್ಕಾಗಿ ದುಃಖಾ
ಧಿಕೆಯಿಂ ಸಂಸಾರಕೂಪಾರದೊಳನವರತಂ ನೀಡುಮೋಲಾಡುತಿರ್ದಳ್ ॥೨೧॥

ವ॥ ಇಂತು ನೀಳನೆಂಬ ಮಾದೆಗಂಗಂ ಕೌಶಂಬಿಯೆಂಬ ಮಾದೆಂಗಿಗಂ ಮಗಳಾಗಿ ಪೂರ್ವೋಪಾರ್ಜಿತ ಶುಭಾನುಪೂರ್ವಿನಾಮ ಕರ್ಮೋರ್ವೀರುಹ ಪರಿಪಾಕ ಫಳಮನನುಭವಿಸುತ್ತುಮೊಂದು ಪೊತ್ತಪ್ಪಡಂ ಸುಖಂಗಾಣದೆ ಹಾಹಾಭೂತಚೇತಸ್ಕೆಯಾಗಿರ್ದಳಂ ನೀಮಿಾಗಳ್ ಕಂಡಿರಾ ದುಃಖಜೀವಿ ನಿಮ್ಮ ತಮ್ಮನಪ್ಪ ವಾಯುಭೂತಿಯಪ್ಪುದಱಿನೆ ನೀಮಿಂತಱಿಯದೊಡಂ ಸೌಧರ್ಮಿಕೆ ಮಿಕ್ಕು ಬರ್ಕುಮೆಂಬಂತೆ ನಿಮಗತಿಸ್ನೇಹಮುಂ ವ್ಯಾಮೋಹಮುಂ ಕಯ್ಮಿಕ್ಕುಬಂದುದೆಂಬುದುಂ.

ಮನದೊಳ್ ಸಂವೇಗಂ ನೆ
ಟ್ಟನೆ ಪುಟ್ಟಿರೆ ವಾಯುಭೂತಿಚರನಪ್ಪಾ ಜೀ
ವನೀಗಳಭವ್ಯನೋ ಭ
ವ್ಯನೊ ಮತ್ತಂ ದೂರಭವ್ಯನೋ ಬೆಸಸಿಮಿದಂ ॥೨೨॥

ವ॥ ಎಂಬುದಮಾ ಜೀವನಭವ್ಯನಲ್ಲ ಪ್ರತ್ಯಾಸನ್ನಭವ್ಯಂ ನೀಮಿಾಗಳೆ ಪೋಗಿ ವಾಯುಭೂತಿ ಮೊದಲಾದ ಭವಪಂಚಕಂಗಳಂ ಪಂಚಾಣುವ್ರತಂಗಳಂ ಪೇೞೆ ಕೇಳ್ದು ಕೈಕೊಳ್ಗುಮದರ್ಕಾಯುರವಧಿಯುಮಿಂದಿನೊಂದೆ ದಿವಸಮದುಕಾರಣದಿಂ.

ನಿನ್ನೊಡವುಟ್ಟಿ ನಿನ್ನೊಡನೆ ಶಾಸ್ತ್ರವಿಶಾರದನಾಗಿಯುಂ ಸ್ವಮಾ ।
ನೋನ್ನತಚಿತ್ತನಾಗಿ ಋಷಿದೂಷಕನಾದುದು ಕಾಲಲಬ್ಧಿ ಸಾ ।
ರ್ವನ್ನೆವರಂ ಭವಾಟವಿಗಳೊಳ್ ದುರಿತಾನಳನಟ್ಟಿ ಬೆಂದನಂ ।
ನಿನ್ನ ವಚಸ್ಸುಧಾರಸ ಸುವರ್ಷಗದಿನಾಱಿಸು ವಾಯುಭೂತಿಯಂ ॥೨೩॥

ವ॥ ಎಂಬುದುಂ ಮಹಾಪ್ರಸಾದಮೆಂದಾ ದ್ವಿತೀಯಮುನೀಶ್ವರನಗ್ರಮುನೀಶ್ವರಾದೇಶದಿಂ ನಂದನವನೋದ್ದೇಶದೊಳಿರ್ದ ಜನ್ಮಾಂಧಕಿಯಲ್ಲಿಗ ಬಂದು ಮುಂದೆ ನಿಂದು

ನಿಯತಂ ಭಾವಿಸು ಚಿತ್ತದೊಳ್ ಬೆದಱದೊಲ್ದಾರಯ್ದು ಕೇಳಗ್ನಿಭೂ ।
ತಿಯೆ ನಾನಗ್ರಜನೆಂ ಕನೀಯನೆ ಕಳಾಸಂಪನ್ನನೈ ವಾಯುಭೂ ।
ತಿಯೆ ಯೋಗೀಂದ್ರರನಂದಕಾರಣದೆ ಬಯ್ದಾ ದೋಷದಿಂ ದುಃಖಭಾ ।
ಗಿಯೆ ನೀಂ ಮುೞುಗ್ಗಿದೆ ಘೋರಸಂಸರಣ ಪಾರಾವಾರಗಂಭೀರದೊಳ್ ॥೨೪॥

ಜನನಾಥಂ ಪಿತೃಸಾಯೆ ನಮ್ಮನಪದಸ್ಥಮರ್ಾಡಿಬೋಡಾದುದಂ ।
ಜನನೀಯಗ್ರಜನಲ್ಲಿಗೆಯ್ದಿ ಬಹುಶಾಸ್ತ್ರಾರ್ಥೋಕ್ತಿಯಂ ಕಲ್ತುದಂ ।
ಪನಿಗೊಂಡುಂಡುದನೋದಿ ಬಂದೊಡರಸಂ ಮಂತ್ರಿತ್ವಮಂ ಕೊಟ್ಟುದಂ ।
ನೆನೆವೋ ಮಾವನರೂಪುಗಂಡು ಕಡುಪಿಂ ಸೀಂ ಕಾಯ್ದುದಂ ಬಯ್ದುದಂ ॥೨೫॥

ಬೋಧನಿರಾಕೃತಿಯಿಂ ಭವ ।
ಬಾಧಾಪೀಡಿತಶರೀರಿಯಾದ್ಯೆ ಗುರುಸಂ ।
ಬೋಧನೆಯಿಂ ನಿನ್ನಂ ಪ್ರತಿ ।
ಬೋಧಿಸಲಾಂ ಬಂದೆನಗ್ನಿಭೂತಿಯನಱಿವೋ ॥೨೬॥

ಅಕ್ಕರ ॥ ಮುಳಿಸಿಂ ನೀನಂದು ಮುನಿಪರಂ ಪೞಿದೊಡೆ ಮೆಯ್ಯೊಳೌದುಂಬರ ಕುಷ್ಠಂ ಪುಟ್ಟಿ।
ಪುೞಿತು ನಾರುಗಿದು ಕೌಶಂಬಿಯೊಳ್ ಸತ್ತಲ್ಲಿ ಬೆಳ್ಗತ್ತೆಯಾಗಿಪುಟ್ಟಿ । ಕೞಿದು ಮತ್ತಮಾ
ಪುರದೊಳ್ ಪೇಪಂದಿಯಾಗಿ ಬಂದಲ್ಲಿ ನಾಯಾಗಿ ಪುಟ್ಟಿ । ಬೞಿಕೆ ನೀಳಂಗಂ ಪುಟ್ಟಿ
ಮಗಳೆ ನೀನಿಂತು ಮಾದಂಗಿಯಾದ್ಯೆ ॥ ೨೭॥

ಮುನಿಪತಿಯನಂದು ನೀಂ ಕೆ ।
ಮ್ಮನೆ ಮುಳಿಸಿನೊಳೆಯ್ದೆ ಬಯ್ದು ಪಾಪದ ಫಲದಿಂ ।
ದಿನಿವಿರಿದು ದುಃಖಮಂ ನೆ ।
ಟ್ಟನೆಯ್ದಿದ್ಯೆ ಮಾನಗರ್ವಮೇನಾಗಿಸದೋ ॥೨೮॥

ಅನಿತುಮಹಾಸ್ಪದಕ್ಕನಿತು ಸದ್ವಿಭವಕ್ಕನಿತೊಂದು ಸಂಪದ
ಕ್ಕನಿತು ವಿಲಾಸದೇೞ್ಗೆಗೆಱೆವಟ್ಟೆನಿಸಿರ್ದು ಬೞಿಕ್ಕೆ ಪಾಪದಿಂ
ದಿನಿತು ನಿಕೃಷ್ಟದುರ್ಗತಿಗಳೊಳ್ ಬಲವಂದುದನೀಗಳಾಗಿಯುಂ
ನೆನೆದು ನಿರಾಕುಳಂ ಬಗೆದು ಭಾವಿಸು ನಿನ್ನ ಭವಾಂತರಂಗಳಂ ॥೨೯॥

ಅದು ಪುಣ್ಯದ ಫಲಮಿದು ಪಾ
ಪದ ಫಲಮದು ಸೌಖ್ಯಮಿದುವೆ ದುಃಖಮದಂತ
ಭ್ಯುದಯಕರಮಿದು ಮಹಾಭ್ಯುದ
ಯದೂರಮೆಂದದುವನಿದುವನಾರಯ್ ಮನದೊಳ್ ॥೩೦॥

ಎನೆ ಎನೆ ತನ್ನ ಮುನ್ನಿನ ಭವಾಂತರದೊಳ್ ಪುದಿದಿರ್ದ ಮಾತುಗಳ್
ಕನಸಿನ ಮಾರ್ಗಮಾಗಿ ಮನದೊಳ್ ನಿಲೆ ಪುಟ್ಟಿದ ಕಾಲಲಬ್ಧಿಯಿಂ
ವಿನಯಸಮೇತೆಯಾಗಿ ಪೊಡೆವಟ್ಟು ಮನೋಮುದದಿಂದಮಿರ್ಪುದುಂ
ಮುನಿಪತಿ ಪೇೞ್ದಿನಾ ಕಿಱಿಯವಳ್ಗೆ ಹಿತೋಪದೇಶಮಂ ॥೩೧।

ನೆಲಸದ ಯೋನಿ ಮುಟ್ಟದೆಡೆ ಕಾಣದ ಕಾಲಮತತ್ವದೊಳ್ ಮನಂ
ನಿಲಿಸದ ಭಾವಮಱಿಸದ ಪುದ್ಗಳಮಿಲ್ಲೆನೆ ಕರ್ಮಬಂಧದಿಂ
ಬಲವರುತಿರ್ಪ ಜೂಟಣದ ಗುಂಡಿಗೆಯಂತಿರೆ ಮೂಡಿ ಮುಱ್ಕಿ ಕೋ
ಟಲೆಗೊಳುತುಂ ಭವಾಂಬುನಿಧಿಯೊಳ್ ತಿರಿತಪ್ಪುವು ಜೀವರಾಶಿಗಳ್ ||೩೨||

ವ|| ಇಂತು ಸಚಿತ್ತಾಚಿತ್ತ ಶೀತೋಷ್ಣ ನಿವೃತಸಂವೃತಾದಿ ಭೇದದಿಂ ಚತುರಶೀತಿಲಕ್ಷಪ್ರಮಾಣ ಯೋನಿಮುಖಂಗಳೊಳಾವರ್ತನಪರಿವರ್ತನದಿಂ ದುರಿತವರ್ತಿ ಯಾಗಿ ನಮೆವ ಸಂಸಾರಿಜೀವಕ್ಕೆ

ಅಮಿತಾಂಭೋನಿಧಿ ವಾಳುಕಪ್ರಕರಮಂ ಪುಂಜೀಕೃತಂ ಮಾಡಿ ಚೋ ।
ದ್ಯಮದಾಗಲ್ ಮಱಲೊಂದನಲ್ಲಿ ಕುಱಿಪಂ ಮಾಡಿಟ್ಟು ಚೈರಂತನ ।
ಕ್ರಮದಿಂದಾ ಮಣಲೆಲ್ಲಮಂ ಮಗುಳೆ ಪಾರಾವಾರದೊಳ್ ಪೊಯ್ದು ಮ ।
ತ್ತಮದಂ ಸೋದಿಸಿ ಕಾಣ್ಬವೊಲ್ ನೃಗತಿ ನೋಡಲ್ ನಾಡೆಯುಂ ದುರ್ಲಭಂ ||

ವ|| ಅಂತುಮಲ್ಲದೆಯುಂ

ಬೆಳೆದೆಳ್ಳಂ ಬಿರ್ಚಿ ರಾಶಿಸ್ಥಿತಿಯಿನಿರಿಸಿ ತದ್ರಾಶಿಯಂ ಮತ್ತಮೋರಂ
ತಳವಟ್ಟಿರ್ದಂದದಿಂದಾ ಕೊದಳಿಯ ಮಣೆಯೊಳ್ ತೀವುತಿರ್ಪಾಗಳುರ್ವೀ ।
ವಳಯಕ್ಕಾಶ್ಚರ್ಯಮಪ್ಪಂದದಿನನುದಿನಮೆಂದಾಗಿಯುಂ ಮುನ್ನಿನಂತಾ ।
ತಿಳಮಾ ಕಾಯೊಳ್ ಕ್ರಮಂದಪ್ಪದೆ ನೆಲಸುವವೊಲ್ ದುರ್ಲಭಂ ಮರ್ತ್ಯಜನ್ಮಂ ||

ಸಮವಾಯಂ ಮನುಜತ್ವಮಾದೊಡಮಘವ್ಯಾಪಾರದಿಂ ನೀಚಗೋ ।
ತ್ರಮುಮಾಕ್ರಂದನಮುಂ ಕ್ಷುಧಾದಿ ಬಹುದುಃಖೋದ್ರೇಕಮುಂ ಕುತ್ಸಿತ ।
ತ್ವಮುಮುದ್ವೇಗಮುಮಪ್ರಗಲ್ಭತೆಯುಮಲ್ಪಾಯುಷ್ಯಮುಂ ದುರ್ಭಗ ।
ತ್ವಮುಮಾಂತಂಕಕಳಂಕಮುಂ ಸಮನಿಕುಂ ಸಂಸಾರಿಗವ್ಯಾಕುಲಂ ||೩೫||

ವ|| ಇಂತಪಾರಾಸಾರ ಸಂಸಾರಕಾಂತಾರದೊಳುಂತು ದುರಿತೋಗ್ರದಾವಾನಳಾಟೋಪದಿಂ ಬೆದಬೆದ ಬೆಂದ ಜೀವಕ್ಕೆಂತಾನುಂ ಕ್ಷಯೋಪಶಮನಿಮಿತ್ತದಿಂ ಸದ್ಧರ್ಮಾಮೃತಲವಂ ದೊರೆಕೊಂಡುದಪ್ಪೊಡೆ

ಅನುಲೇಪಾತಿಶಯ ಪ್ರಭಾವದಿನಿತಾಂಗೋಪಾಂಗಮುತ್ಕೋಕಿಲ ।
ಸ್ವನ ಲೀಲಾಲಲಿತೋರುಚಾರುನಿನದಂ ಶ್ರೀವೃಕ್ಷಸಂಪೂರ್ಣಲಾಂ ।
ಛನವಕ್ಷಂ ಕರಮೊಪ್ಪಿ ತೋರ್ಪ ಧವಳಾಕ್ಷಂ ಶೋಭಿತಾಂಗಂ ಭುಜಾ ।
ನನಮೆಂದಿಂತಿವಗಣ್ಯಪುಣ್ಯಜನಿತಂ ಜೀವಕ್ಕೆ ನಿರ್ವ್ಯಾಕುಲಂ ||೩೬||

ಕರಿತುರಗಾದಿ ವಾಹನಮುಮುತ್ಸವ ಹೇತುಕಮಪ್ಪ ಛತ್ರ ಚಾ ।
ಮರ ಪರಿಶೋಭಿತಾತಿಶಯಮುಂ ಭುವನಸ್ತುತಮಪ್ಪ ಕೀರ್ತಿಯುಂ ।

ನಿರುಪಮ ಮೂರ್ತಿಯುಂ ಸಮುಚಿತಾಸ್ಪದಮುಂ ಮಹಿಮಾವಿಲಾಸಮುಂ
ನರರ್ಗೆ ಸಮಂತು ಪೂರ್ವಕೃತ ಪುಣ್ಯದಿನಪ್ಪುದುದಿದಾವ ವಿಸ್ಮಯಂ ॥೩೭॥

ಅದಱಿಂ ನೀನಾಪ್ತಾಗಮ ।
ಪದಾರ್ಥ ಸಮ್ಯಕ್ತ್ವ ಮಾರ್ಗಮಂ ಕೇಳ್ದು ಮನೋ ॥
ಮುದದಿಂ ಕೈಕೊಳ್ ನಿನಗದು ।
ತುದಿಯೊಳ್ ಮಾಡುಗುಮನಂತ ಮುಕ್ತಿಶ್ರೀಯಂ ॥೩೮॥

ಮಾತೇನುದ್ಘಾತ ದೋಷಪ್ರಕರರಹಿತನೆನಿಪನಾಪ್ತಂ ತದಾಪ್ತಾನನಪ್ರೋ ।
ದ್ಭೂತಂ ಸಿದ್ಧಾಂತಮಾರ್ಗಂ ತದುವಿರಚನೆ ಸದ್ಧರ್ಮಮಾ ಧರ್ಮಮುಂಹಿಂ ।
ಸಾತೀತಂ ತದ್ದಯಾಮೂಲಮುಮುಪಶಮ ಧರ್ಮಾನುರಾಗಾನುತತ್ವೋ ।
ಪೇತಂ ತತ್ಸಿದ್ಧಮಾಗಿರ್ಪುದು ನಿರುಪಮ ಸಮ್ಯಕ್ತ್ವ ಸನ್ಮಾರ್ಗ ಮಾರ್ಗಂ ॥೩೯॥

ಕೊಲ್ಲದುದು ಪುಸಿಯದುದುರು ಕಳ ।
ವಿಲ್ಲದುದುಂ ತ್ರಿಕರಣತ್ವದಿಂ ಪಾದರದೊಳ್ ॥
ಸಲ್ಲದುದು ಕಾಂಕ್ಷೆಯೊಳ್ ತಱಿ
ಸಲ್ಲದುದೆಂದಯ್ದಣುಬ್ರತಂ ಜಿನಮತದೊಳ್ ॥೪೦॥

ಮದ್ಯ ಮಧು ಮಾಂಸಮೆಂಬಿವ ।
ನಾದ್ಯಂತಂ ತೊಱೆವುದಾವತೆಱದಿಂದಂ ಸಾ ॥
ವದ್ಯಮಣಮಾಗದಿರ್ಪುದು
ಸದ್ಯೋಗದೊಳಿರ್ಪುದಿದುವೆ ಪುಣ್ಯಮಗಣ್ಯಂ ॥೪೧॥

ವ॥ ಎಂದು ಪರಮಶ್ರಾವಕ ವ್ರತಪ್ರಾಸಾದಕ್ಕಧಿಷ್ಠಾನ ಸೋಪಾನ ಪಂಕ್ತಿಗಳಾಗಿ ನೆಗಟ್ತೆವೆತ್ತ

ವಿಮಳಾಣುಬ್ರತ ಪಂಚಕ ।
ಮುಮಂತೆ ಮಧುಮದ್ಯ ವಿವಿಧ ಮಾಂಸ ಪರಿತ್ಯಾ ॥
ಗಮುಮೆಂಬ ಮೂಲಗುಣಮೆಂ ।
ಟುಮನಾ ಮುನಿಪುಂಗವಂ ಪ್ರಸಾದಂಗೆಯ್ದಂ ॥೪೨॥

ಕೊಲಿಸುವ ಕೊಲ್ವ ಶಾರ್ಠ್ಯಪರವಾಗಿಸುವಾಗುವ ಕಳ್ವ ಕಳ್ವರೊಳ್ ।
ಸಲೆ ಪುದುಗೊಳ್ವ ಪಾದರಮನಾಡಿಸುವಾಡುವ ಕಾಂಕ್ಷೆಯೊಳ್ ಮನಂ ।
ಸಲಿಸುವ ಸ್ವಲ್ಪಪಾಪಪರನುಂ ಶಠನುಂ ಖಳನುಂ ಕೃತಘ್ನನುಂ ।
ಕಲುಷಿಯಮಾಱಮುಗ್ರನರಕಾಬ್ಧಿಗಭೀರಮನೆಯ್ದುವನ್ನೆಗಂ ॥೪೪॥

ಎಂದು ಸಂಕ್ಷೇಪದಿಂ ಸನ್ಮಾರ್ಗಸ್ವರೂಪನಿರೂಪಣಂಗೆಯ್ದು ವಿಷಮ ವಿಷಧರವಿಷಘಾತದಿಂ ನಿನಗಾಯುರವಧಿಯುಮಿಂದಿನನಿತೆ, ದರ್ಶನವಿಶುದ್ಧಿಯಾಗೆಂದು ಪರಮತಪಸ್ವಿ ಪರಸಿ ಗುರುಸಮೇತಂ ಸದ್ಧರ್ಮಕ್ಷೇತ್ರಂಗಳೊಳ್ ವಿಹಾರಿಸುತ್ತಿರ್ದರಿತ್ತಲಾ ಕೂಸುಮಣುವ್ರತಧಾರಿಯಾಗಿ ಬರ್ಪ ನೆರವಿಯ ರಭಸಮಂ ಭೋಂಕನೆ ಕೇಳ್ದಿದೇನೆಂದು ಬೆಸಗೊಳೆ ತನ್ನೊಡನಾಡಿಗಳಪ್ಪ ಚಂಡಾಲಶಿಶುಗಳಾ ಪ್ರಪಂಚಮೆಲ್ಲಮನವರಂ ಬೆಸಗೊಂಡು ಬಂದೀ ಚಂಪಾಪುರವರೇಶ್ವರನಪ್ಪ ಚಂದ್ರವಾಹನನರೇಶ್ವರನ ಪುರೋಹಿತಂ ನಾಗಶರ್ಮನಾತನ ಭಾರ್ಯೆ ತ್ರಿವೇದಿಯುಮಗಣ್ಯಪುಣ್ಯಲಕ್ಷ್ಮೀ ಭಾಜನರಾಗಿಯುಂ ಸಂತಾನಮಿಲ್ಲದುಬ್ಬೆಗದಿಂ ಪುತ್ರಾರ್ಥಿಗಳಾಗಿ ನಾಗಸ್ಥಾನದ ನಾಗರ್ಗೆ ಪರಸಲ್ಪೋದರವರೆಂದು ಪೇಟಿ ಕೇಳ್ದು ಭೋಗಾಸಕ್ತೆಯಾಗಿರ್ಪಾಗಳ್

ಇದಿರೊಳ್ ಪಟ್ಟಿರೆಯಿಕ್ಕುತಿರ್ಪ ಪದದೊಳ್ ತ್ರೀಬ್ರಕ್ಷುಧಾಗ್ರಾಗ್ನಿ ತ ।
ನ್ನುದರಾವಾಸಮನುರ್ವುತಿರ್ಪ ಪದದೊಳ್ ದುರ್ಗಂಧಿ ಜಾತ್ಯಂಧೆ ಮೆ ।
ಟ್ಟಿದೊಡಾಗಳ್ಮುಳಿಸುಣ್ಮೆ ಪೊಣ್ಮೆ ಗರಳಂ ಕೈಗಣ್ಮೆ ಬಂದೆಯ್ದಿ ಕೊಂ ।
ಡುದು ಕೃಷ್ಣೋರಗನಾ ಮತಂಗಶಿಶುವಂ ಕಾಳೋರಗಂ ಕೊಳ್ವವೊಲ್ ॥೪೫॥

ವ॥ ಆಪ್ರಸ್ತಾವದೊಳ್

ಅಗಣಿತ ಭಾಗಧೇಯಕೃತಮೂಲಗುಣಂಗಳನಂದಣುಬ್ರತಾ ।
ದಿಗಳನನಾಕುಲಂ ಬೆಸಸಿದಂ ಮುನಿಪುಂಗವನಾನವಂ ಮನಂ ।
ಬುಗಿಸಿದೆನುರ್ವರಾಧಿಪಪುರೋಹಿತಭಾರ್ಯೆ ಸುತಾರ್ಥಿ ತತ್ರಿವೇ ।
ದಿಗೆ ಮಗಳಪ್ಪೆನಕ್ಕೆ ಫಲಮುಳ್ಳೊಡೆ ನೆಟ್ಟನಣುವ್ರತಂಗಳಾ ॥೪೬॥

ಸದಮಳಚರಿತರ್ಪೇಳ್ದಂ ।
ದದಿಂದೆ ಸಾವಿಂದೆ ಬಂದುದೆನುತುಂ ಭೋಗಾ ॥
ಸ್ಪದದೊಳ್ ಚಿತ್ತಂ ಬೆಚ್ಚಂ ।
ದದಿಂದೆ ಮನವಿಟ್ಟವಳ್ ನಿದಾನಂಗೆಯ್ದಳ್ ॥೪೭॥

ವಿಕಟಾಂಗೋಪಾಂಗೆ ಜಾತ್ಯಂಧಕಿಯೆನಿಸಿದ ಮಾತಂಗಿ ತಾನೆತ್ತಲಾತ್ಯಂ
ತಿಕ ಸದ್ಧರ್ಮೋಪದೇಶಂ ಸಮನಿಸುವುದೆತ್ತಂತೆ ಭೋಗೋಪಭೋಗಾ
ಧಿಕಚಿತ್ತಂ ಸಾವುದೆತ್ತಾರಯಲಣಮುಮಸಾಧಾರಣಂ ಭಾವಿಸಲ್ಕೌ
ತುಕಮೇನಂ ಮಾಡದೇನಂ ದೊರೆಕೊಲಿಸದೊ ಸಂಸಾರಿಗೇನೇನನೇನಂ ॥೪೮॥

ವ॥ ಇಂತು ವಿಗತಜೀವಿತೆಯಾಗಿ ನಿದಾನಫಲದಿಂದಾ ತ್ರಿವೇದಿಯ ಗರ್ಭದೊಳ್ ನೆಲಸುವುದುಂ

ನವಮಾಸವಿರಾಮದೊಳ ।
ಬ್ಜವದನೆ ಶುಭದಿನಮುಹೂರ್ತದೊಳ್ ಮಂಗಳ ತೂ ।
ರ್ಯನಿನಾದಮೆಸೆಯಲಿಂತಾ ।
ತ್ರಿವೇದಿ ಪಡೆದಳ್ಸುರೂಪವತಿಯಂ ಸುತೆಯಂ ॥೪೯॥

ನಾಗಸ್ಥಾನದ ಶಂಬರ ।
ನಾಗಕುಮಾರಂಗೆ ಪರಸಿ ಪಡೆದೆಂ ಪೆಱದೇಂ ।
ಪೋಗೆಂದು ನಾಗಶರ್ಮಂ
ನಾಗಶ್ರೀಯೆಂದು ನಾಮಕರಣಂ ಗೆಯ್ದಂ ॥೫೦॥

ವ॥ ಅಂತು ಜಾತಕರ್ಮ ನಾಮಕರಣಾನ್ನಪ್ರಾಶನಚೌಲೋಪನಯನಾದಿ ಸಮುಚಿತಕ್ರಿಯೆಗಳಿಂ ಕ್ರಿಯೆವಡೆದು ವಿಶುದ್ಧರತ್ನದಂತಾ ಸ್ತ್ರೀರತ್ನಂ ಕ್ರಮಕ್ರಮದಿಂ ಬಳೆಯೆವಲೆಯೆ

ರಗಳೆ ॥ ಲಲಿತೆಯ ಶ್ರೀಪದತಳಗಳಶೋಕೆಯ
ತಳಿರಂ ಪೋಲ್ತುವು ಭಾವಿಪೊಡಾಕೆಯ
ಚರಣಾಂಗುಳಿಗಳಮರ್ಕ್ಕೆಯಿನಪ್ಪಿದ
ಸುರದಂಪತಿಗಳಪೋಲ್ವೆಯನೊಪ್ಪಿದ
ವಿಳಿಲೆಯ ಪದಯುಗನಖದಾಕೃತಿಗಳ್
ಕೂರ್ಮೋನ್ನತಮೆನಿಸಿರ್ದ ಪದಂಗಳ್
ನರ್ಮಮನಾದರಿಸಿಸಿದವು ಮಡಂಗಳ್
ಪರಡು ನಿಗೂಢಂ ಲಲಿತ ಲತಾಂಗಿಯ
ವರ ಜಂಘಾಯುಗಲಂಗಳ ಭಂಗಿಯ
ನಱಿಯೆಂ ಪೊಗಟಲ್ ನೆಕ್ಕೊರವಟ್ಟೆಯ
ತೆಱನೇನಲ್ಲದೆ ಬಣ್ಣಿಪ ಬಟ್ಟೆಯ
ನಂಭೋಜಾನನೆಯೂರು ಯುಗಂಗಲ್
ರಂಭಾಸ್ತಂಭ ಯುಗ ಪ್ರತಿಮಂಗಳ್
ವನಿತೆಯ ಪುಲಿನ ನಿತಂಬೋದ್ದೇಶಂ
ಮನಸಿಜಮದಗಜ ಕುಂಭನಿಕಾಶಂ
ಲಾವಣ್ಯಾಂಬುರಸದ್ರವರೂಪಂ
ಭಾವಿಪೊಡಾಕೆಯ ನಾಭೀಕೂಪಂ
ನೋಡೆ ಕುಮಾರಿಯ ಬಳ್ಕುವ ಮಧ್ಯಂ
ನಾಡೆ ಮನೋಜ್ಞಂ ಪೊಗಟಲಸಾಧ್ಯಂ

ಕುಚಯುಗವಿಲ್ಲದೆ ಶೋಭಿಪ ವಕ್ಷಂ
....
....
ಸುಲಲಿತಮಾಗಿರೆ ತೀವಿದಕಕ್ಷಂ
ಸುದತಿಯ ತೊಳಗುವ ತೋಳಮೊದಲ್ಗಳ್
ಲಲನಾರತ್ನದ ಬಾಹುಯುಗಂಗಳ್
ಲಲಿತ ಲತಾಶಾಖಾ ಸದೃಶಂಗಳ್
ಸುರುಚಿರತರ ಮೃದುಪಲ್ಲವದಂತಿರೆ
ಕರತಳಮೊಪ್ಪುಗುಮೆಸೆದೋರಂತಿರೆ
ಕರಶಾಕೆಗಳತನುಕ್ಷುರದಂದಂ
ಕರನಖಮವು ಕೇದಗೆಯೆಸಟಿಂದಂ
ವಸುಧಾಮರವರ ಕನ್ನೆಯ ಕಂಧರ
ಸಮದೃಶಮದು ಕಂಬುಪ್ರತಿಬಂಧುರ
ಮವಳ ಪೊಳೆವ ರುಚಿರೋಷ್ಠಾಳಂಕೃತಿ
ಪವಳದ ದಳದಂತಾರಕ್ತಾಕೃತಿ
ದಂತಪಂಕ್ತಿ ದಾಡಿಮ ಬೀಜಾಕೃತಿ
ಕಾಂತ ಕಪೋಲಂ ನವಮುಕುರಾಕೃತಿ
ಮೂಗು ಸುರಭಿಕರ ಪರಿಮಳದಂದಮೆ
ನಾಗಸಂಪಗೆಯ ಬಿರಿಮುಗುಳಂದಮೆ
ಜಳಜದಳಾಕ್ಷಿಯ ಕಣ್ಮಲರಂದಂ
ಪೊಳೆಜಳ ಮೀಂಗಳ ಪೊಣರ್ಗಳ ಚಂದಂ
ಭ್ರೂಲತಿಕೆಗಳಳ್ಳಿಜ಼ವುವು ಕನ್ನೆಯ
ಅರವಿಂದಾಸ್ಯೆಯ ನೊಸಲಸಮಾನಂ
ನಿರುಪಮಮರ್ಧೇಂದು ಪ್ರತಿಮಾನಂ
ಕಿವಿಯ ಪಾಲೆ ನೀಲಾಂಬುಜನಾಳಮ
ನವಟಯ್ಸುಗುಮಂಗಜನಿಂದೋಳಮ
ನಳಿಕುಳ ಸನ್ನಿಭ ಮನಸಿಜಗೋಳಕ
ವಿಳಸದಳಂಕೃತಿ ಕುಟಿಳಚಳಾಳಕ
ಮಂಗಜ ಮಕರ ಪತಾಕಾಭಾಸಂ
ತುಂಗಕುಚೋದ್ಬಂಧನ ವಿನ್ಯಾಸಂ
ದೊರೆಗೆ ವಾರದೀಕೆಗೆ ಕನ್ಯಾತತಿ

ಕರಮೆ ಬಣ್ಣಿಸಲ್ಕಱಿಯಂ ಫಣಿಪತಿ
ವಿಭವ ವಿಲಾಸನಿವಾಸದ ಭಂಗಿಯ
ನಭಿನವಕೋಮಳಕನಕಲತಾಂಗಿಯ
ನಗಣಿತಗುಣೆಯಂ ವಿಬುಧನಿಕಾಯಂ
ಪೊಗಟಲ್ ನೆಱೆವರೆ ನಾಗಶ್ರೀಯಂ ॥೫೧॥

ಕಮಳಂ ಪಗಲೊಳ್ (ಶಶಿ) ಬಿಂ
ಬವಿರುಳೊಳೆಸೆದಿರ್ಪುವಲ್ತೆಯದಟಿಂದಿವಱೊಳ್
ಸಮನೆನಲಕ್ಕುಮೆ ಮದಗಜ
ಗಮನೆಯವಕ್ತ್ರಮನಹರ್ನಿಶಂ ತೊಳಗುವುದಂ ॥೫೨॥

ನಯನಂ ನೀಳಸರೋಜಭಾಸಿ ರದನಂ ಮುಕ್ತಾಫಳಸ್ಪರ್ಧಿ ಬಾ
ಹುಯುಗಂ ಮನ್ಮಥಪಾಶಹಾಸಿ ನಿಟಿಳಂ ರುಂದ್ರಾರ್ಧಚಂದ್ರಾಭಮಾ
ರಯೆ ದಂತಾವರಣಂ ಪ್ರವಾಲರುಚಿರಚ್ಛಾಯಾರುಣಾಕ್ಷೇಪಿ ನಿ
ರ್ಮಯಭಾವಂ ರಸಭಾವಮೇದೊರೆ ಸುರೂಪಾಶ್ಚರ್ಯಮಾ ಕನ್ನೆಯಾ ॥೫೩॥

ಮನಸಿಜನಂಬು ಮನ್ಮಥನ ಕಯ್ಪಿಡಿ ಕಾಮನ ಕೈದು ಕಂತುರಾ ।
ಜನ ಕರವಾಳ್ ಮನೋಭವನ ವಿದ್ಯೆ ಮನೋಜನಟ್ಟಮಿಕ್ಕುಚಾ ।
ಪನ ಧನು ಮೀನಕೇತನನ ಕೇತನಮಂಗಜಚಕ್ರಿಯ ಚಕ್ರಮೆಂಬುದಂ ।
ತಿನಿತತನೆನಲ್ಕೆ ಬಲ್ಲೆನಱಿಯೆಂ ಪೊಗಟಲ್ ದ್ವಿಜರಾಜ ಕನ್ನೆಯಂ ॥೫೪॥

ವಿಕಸಿತಶಾತಕುಂಭಸರಸೀರುಹವಕ್ತ್ರೆಯನುನ್ಮದಾಳಿನೀ
ಚಿಕುರೆಯನಂಗಜಾತಮದವಾರಣಯಾನ ಸಮಾನ ಯಾನೆಯಂ
ಸುಕರನಿದಾನೆಯಂ ಖಚರದಾರಕಿ ನಾಗಕುಮಾರಿ ದಿವ್ಯಕ
ನ್ಯಕೆಯೆನಲಲ್ಲದಾನಱಿಯೆನಂತೆನಲುಂತೆನಲಾ ಮೃಗಾಕ್ಷಿಯಂ ॥೫೫॥

ಬರೆವವರಿಲ್ಲ ಪೋಲ್ವೆ ಬರೆಯಲ್ ಮೃದುಕರ್ಮದೊಳೋಜೆವೆತ್ತು ಕಂ
ಡರಿಸುವ ವಿಶ್ವಕರ್ಮನೆಣೆಯಾಗಿರೆ ಕಂಡರಿಸಲ್ವಿಳಾಸದಿಂ
ಕರುವನೊಡರ್ಚೆ ಬರ್ಚಿಸುವ ಬಲ್ಮೆಗೆ ಬೀಗುವ ಚೀರಘಟ್ಟಿ ತಾಂ
ಸರಿಯೆನಿಪಂದದಿಂ ಕರುವಿಡಲ್ ನೆಱೆಯಂ ದ್ವಿಜರಾಜಕನ್ನೆಯಂ ॥೫೬॥

ವದನಶ್ರೀವಿಭ್ರಮಂ ನಿರ್ಮಳಹಿಮಕರನಾಕಾರಮಕ್ಷಿದ್ವಯಂ ಕಂ
ಜದಳಾಕಾರಂ ಲಸದ್ಭ್ರೂ ಮನಸಿಜಧನುರಾಕಾರಮತ್ಯಂತಶೋಭಾ
ಸ್ಪದಲೀಲಾಭಾಸುರಾಂಗಂ ಮೃದುಲಲಿತಲತಾಕಾರಮಾರಯ್ವೊಡೆಂದಂ
ದದಿನೇಕಾಕಾರೆಯಲ್ಲಳ್ ದ್ವಿಜಸುತೆ ಗುಣೆಯಾದಂದಂಮಾಶ್ಚರ್ಯಭೂತಂ ॥೫೭॥

ಸುರ ಗಂಧರ್ವ ಸುಪರ್ಣ ಕಿನ್ನರ ಖಗ ಸ್ತ್ರೀಸದ್ಮದೊಳುನ್ನಮಾ
ದೊರೊಳಿನ್ನಪ್ಪರೊಳೀಗಳುಳ್ಳವರೊಳಿಲ್ಲೀ ಹಾವವೀ ಭಾವಮಿಾ
ಪರಿಜೀ ವಿಭ್ರಮಮಿಾ ವಿಲಾಸಮೆಸೆವೀ ಸೌಂದರ್ಯಮೆಂಬನ್ನಮಿಾ
ಧರಣೀಚಕ್ರದೊಳೇಂ ಜಸಂಬಡೆದಳೋ ಬೇಱೊಂದು ಸೌಂದರ್ಯದಿಂ ॥೫೮॥

ಸುರಕನ್ಯಕೆ ಮನುಜಸತಿ ।
ಪರಮಾಕಾರತ್ವಮಂ ಪ್ರಯೋಗಿಸಿ ದಿವದಿಂ
ಧರೆಗವತರಿಸಿದಳೆಂದೀ
ಧರೆ ಪೊಗೞ್ವುದು ರುಚಿರಪಕ್ವಬಿಂಬಾಧರೆಯಾ ॥೫೯॥

ಒದವಿ ಬಸಂತದೊಳ್ಬಯಸಿದಂದದ ತೆಂಬೆಲರೊಂದು ತೀಟಮಿ
ಲ್ಲದ ಸಹಕಾರವಲ್ಲರಿಯ ತೋರ್ಕೆಗಮೊಪ್ಪುವ ಭೃಂಗಸಂಗಮಿ
ಲ್ಲದ ನವಪದ್ಮಿನೀಮುಕುಳದಿಕ್ಕೆಗಮೆನೆ ನೆಱೆಯಾಗಿ ಶೋಭೆವೆತ್ತುದೊ
ಪರಿಶೋಭೆವೆತ್ತಿರೆ ವಿಲಾಸದ ವಿಭ್ರಮದೇೞ್ಗೆ ಕನ್ನೆಯಾ ॥೬೦॥

ವ॥ ಒಂದು ದಿವಸಮಾ ಕನ್ನೆ ತನ್ನೊಡನಾಡಿಗಳಪ್ಪ ಕನ್ನೆಯರ್ವೆರಸು ಮಹಾವಿಭೂತಿಯಿನಾ ನಾಗಸ್ಥಾನಕ್ಕೆ ವಂದು ನಾಗರನರ್ಚಿಸುವಲ್ಲಿ

ಕಲಶಂ ಜಾಗಂ ಧ್ವಜಂ ಕನ್ನಡಿ ಗುಡಿ ಸುಮನೋಮಾಳೆ ಶುಭ್ರಾಕ್ಷತಂ ಪೊಂ ।
ಬಳೆ ತೂರ್ಯಂ ತೋರಣಂ ಬೆಳ್ಗೊಡೆ ಚಮರರುಹಂ ಚಂದನಂ ಸ್ವಸ್ತಿಕಂ ಸು ।
ಲ್ವಲಮೆಂಬೀ ಮಂಗಳದ್ರವ್ಯದ ರಚನೆಯಿನಂದೇಂ ಮನಂಗೊಂಡುದೋ ಮಂ ।
ಗಲಶೋಭಾ ಭೂಷಣಾಂಶು ಪ್ರಸರಮೆಸೆವಿನಂ ಧನ್ಯ ಕನ್ಯಾಕದಂಬಂ ॥೬೧॥

ವ॥ ಅನ್ನೆಗಮಿತ್ತಲಾ ಸೂರ್ಯಮಿತ್ರಾಚಾರ್ಯರಗ್ನಿಭೂತಿಋಷಿವೆರಸಿ ನಾನಾ ಜನಪದಂಗಳಂ ವಿಹಾರಿಸಿ ಮತ್ತಮಾ ಚಂಪಾಪುರಕ್ಕೆವಂದು

ತರದಿಂ ತಳ್ತಿರ್ದ ಧ್ವಜ ಸಮುದಯಮಂ ಚಿತ್ರಶೋಭಾಭಿರಾಮಾ ।
ಜಿರಮಂ ಪ್ರೋತ್ತುಂಗೋದಾಮುಖಮನನುಪಮಾವೇಷ್ಟಿತೋದ್ಯಾನಮಂ ಶಂ ।
ಬರನಾಗಸ್ಥಾನಮಂ ಪ್ರಕ್ಷುಭಿತ ಬಹುಜನ ಧ್ವಾನಮಂ ಪೊಕ್ಕನಾಶಾಂ ।
ಬರವಿಖ್ಯಾತಪ್ರಶಂಸಂ ಪರಮಜಿನಮತಾಂಭೋಜಿನೀರಾಜಹಂಸಂ ॥೬೨॥

ಇದು ಸಮಸ್ತವಿನೇಯ ಜನವಿನುತ ಶ್ರೀವರ್ಧಮಾನಮುನೀಂದ್ರ ವಂದ್ಯ
ಪರಮಜಿನೇಂದ್ರ ಶ್ರೀಪಾದಪದ್ಮವರಪ್ರಸಾದೋತ್ಪನ್ನ
ಸಹಜಕವೀಶ್ವರ ಶ್ರೀಶಾಂತಿನಾಥಪ್ರಣೀತಮಪ್ಪ
ಸುಕುಮಾರಚರಿತದೊಳ್ ನಾಗಶ್ರೀ
ರೂಪವರ್ಣನಂ ಪಂಚಮಾಶ್ವಾಸಂ

೬. ಷಷ್ಠಾಶ್ವಾಸಂ

ಶ್ರೀಯಂ ಪದಾಬ್ಜದೊಳ್ ವಾಕ್ ।
ಶ್ರೀಯಂ ಮುಖಕಮಲದೊಳ್ ವಿರಾಜಿತಕೀರ್ತಿ ॥
ಶ್ರೀಯಂ ದಿಕ್ತಟದೊಳ್ ತಳೆ ।
ದಾ ಯತಿವೃಷಭಂ ಸರಸ್ವತೀಮುಖಮುಕುರಂ

ವ॥ ನಿರ್ವರ್ತಿತ ಪಂಥಾತಿಚಾರನಿಯಮನಾಗಿರ್ಪುದುಂ ಕನ್ಯಾರತ್ನಸಂಸ್ತಾಯಕ್ಕೆ ನಾಯಕರತ್ನಮೆನಿಸಿದ ನಾಗಶ್ರೀಕನ್ಯಕೆ

ಗುರುಚರಣಯುಗಲಭಕ್ತಿಯ ।
ಭರದಿಂದಿರ್ದಗ್ನಿ ಭೂತಿಮುನಿಪನನತ್ಯಾ ॥
ದರದಿಂದೆ ನೋಡಿ ಜಾತಿ।
ಸ್ಮರೆಯಾದಳ್ ಪುಣ್ಯವಶದಿನಾರೇನಾಗರ್

ವ॥ ಅಂತು ಮುನ್ನಿನಭವದೊಳ್ ತನ್ನಂ ಪ್ರತಿಭೋಧಿಸಿದ ಮಹಾಪುರುಷನ ಪ್ಪುದನಱಿದು

ಅವರ ಚರಣಾಬ್ಜಯುಗಳ ।
ಕ್ಕವನತೆಯಾಗಿರ್ದ ಕನ್ನೆಯ ಮಾನ್ಯೆಯನಂ ॥
ದವಲೋಕಿಪುದುಂ ವ್ಯಾಮೋ ।
ಹವಶೀಕೃತನಾದನಗ್ನಿಭೂತಿಮುನೀಂದ್ರಂ ॥೩।

ವ॥ ಅಂತತಿ ಸ್ನೇಹಮುಂ ವ್ಯಾಮೋಹಮುಂ ಕೈಮಿಗೆ ಮನ್ನುಮಿಕ್ಕು ಭಟ್ಟಾರಕರ ಮೊಗಮಂ ನೋಡಿ

ಎಮಗೀ ಕೂಸಂ ಕಾಣಲೊ
ಡಮತಿಸ್ನೇಹಂ ಮನಕ್ಕೆ ತೀಡಿದಪುದು ಬೋ॥
ಧಮರೀಚಿಯಿನೆನ್ನ ಮನಸ್ತ ।
ಮಮಂ ಬಿಡೆ ಬೆದಱಿಸಮಳ ಸುಜ್ಞಾನನಿಧೀ ॥೪॥

ವ।। ಎಂಬುದುಮಾ ಮಹಾಮುನೀಶ್ವರನುಂ ತದೀಯ ಭವಾವಳೀ ಸಂಬಂಧಮಂ ಪೂರ್ವೋಕ್ತಕ್ರಮದಿಂ ಸವಿಸ್ತರಮಾಗೆ ತಿಳಿಯೆ ಪೇೞ್ದಾಗಳ್

ತರದಿಂದಾಲಿಸಿ ವಾಯುಭೂತಿ ಮೊದಲಾಗುತ್ತಿರ್ದ ಜನ್ಮೋತ್ಕರಾಂ ।
ತರ ವೃತ್ತಾಂತಮನೆಯ್ದೆ ಕೇಳ್ದು ಮನದೊಳ್ ತದ್ವೃತ್ತಕಂ ಶಾಸನಂ ।
ಬರೆದಿರ್ದಂತೆ ಜಲಕ್ಕನಾಗೆ ಮುದದಿಂದಾ ಕನ್ಯೆ ಕಯ್ಗಣ್ಮಿದಾ ।
ದರದಿಂ ನಿರ್ಭರಭಕ್ತಿಯಿಂದೆಱಗಿದಳ್ ಯೋಗೀಂದ್ರಪಾದಾಬ್ಜದೊಳ್ ।।೫।।

ವ।। ಅಂತೆಱಗಿ ಪೊಡೆವಟ್ಟು ನಾಗಶ್ರೀಕನ್ಯಕೆಯ ಮನದೊಳಾದುಪಶಮ ಮನುಪಲಕ್ಷಿಸಿ ಸಂಸಾರಸ್ವರೂಪಮನಿಂತೆಂದು ಬೆಸಸಿದರ್

ಪ್ರಕಟಿತ ಜಿನಪ್ರವಚನ ।
ಪ್ರಕಾರದೊಳ್ ಸಾರಘೋರ ಸಂಸಾರಂ ಕೌ।।
ತುಕರೂಪಂ ದ್ರವ್ಯ ಕ್ಷೇ ।
ತ್ರ ಕಾಲ ಭವ ಭಾವಭೇದದಿಂ ಪಂಚವಿಧಂ ।।೬।।

ವ।। ಅವಱೊಳಗೆ ಷಟ್ಪರ್ಯಾಪ್ತಿಯೋಗ್ಯಪುದ್ಗಲದ್ರವ್ಯಂಗಳನೊಂದು ಜೀವನೊಂದು ಸಮಯದೊಳ್ ಕೈಕೊಂಡು ದ್ವಿತೀಯಾದಿ ಸಮಯಂಗಳೊಳ್ ಮುನ್ನೆ ಕೊಂಡ ಪುದ್ಗಲಂಗಳಂ ಬಿಸುಟ್ಟು ಪೆಱವುಂ ಸ್ನಿಗ್ಧರೂಕ್ಷಾದಿ ವಿಕಲ್ಪಂಗಳಂ ಜನ್ಮಜನ್ಮಾಂತರಂಗಳೊಳ್ ಕೊಳುತ್ತುಮಿಂತು ಮೂಱುಂ ಲೋಕದೊಳುಳ್ಳ ರೂಪದ್ರವ್ಯಂ ಳೆಲ್ಲಮಂ ನಿರವಶೇಷಮಾಗೆ ಕೈಕೊಳ್ವುದು ದ್ರವ್ಯಪರಾವರ್ತನಮೆಂಬುದು ಜಗತ್ತ್ರಯಮಧ್ಯಪ್ರದೇಶದೊಳತೀವ ಜಘನ್ಯಶರೀರಮಂ ಕೈಕೊಂಡು ಪುಟ್ಟಿ ಮತ್ತ ಮಾಯೆಡೆಯೊಳ್ ಪಲವುಂ ಸೂೞ್ ಲಘುಜನ್ಮಾವಗಾಹದಿಂ ಪುಟ್ಟಿ ಸತ್ತು ತದನಂ ತರಮಾಯೆಡೆಗತ್ತಲೇಕೈಕಪ್ರದೇಶೋತ್ತರಮಾಗೆ ಮೂಱುಂ ಲೋಕದ ಸರ್ವಕ್ಷೇತ್ರಂಗಳ ನಿತಱೊಳಮಾ ಮಾರ್ಗದಿಂದೆಯುಡುಗದೆ ಕೂಡಿ ಪುಟ್ಟುವುದು ಕ್ಷೇತ್ರಪರಾವರ್ತನಮೆಂಬುದು ಭರತೈರಾವತಕ್ಷೇತ್ರಂಗಳೆಂದುಂ ಕುಂದದೆ ಪರಿವರ್ತಿಸುವುತ್ಸರ್ಪಿಣ್ಯವಸರ್ಪಿಣೀ ಕಾಲಂಗಳೊಳ್ ತದಾದಿಪ್ರವೇಶಸಮಯದೊಳ್ಪುಟ್ಟಿ ಕಟ್ಟಿದಾಯುಷ್ಯದ ವಿರಾಮದೊಳ್ ಸತ್ತು ನಾನಾಭ್ರಮಣದಿಂ ಬಂದು ಪೂರ್ವೋಕ್ತ ಸಮಯದ ತದ್ವಿತೀಯಾದಿ ಸಮಯದೊಳ್ ಪುಟ್ಟುತ್ತುಂ ಸಾವುತ್ತುಮೆರಡು ಕಾಲಮುಮನೀ ಮಾರ್ಗದಿಂ ಸಮಯೋತ್ತರವೃದ್ಧಿಯಿಂ ಪರಿಸಮಾಪ್ತಮಾಗೆ ನೆಱಮೆಯ್ದಿಸುವುದು ಕಾಲಪರಿವರ್ತನಮೆಂಬುದು ಚತುರ್ಗತಿಗಳೊಳಂ ಸರ್ವಜಘನ್ಯಮಪ್ಪಾಯುಷ್ಯದೊಳ್ ತೊಡಗಿ ಸಮಯಾಧಿಕಾನು-ಕ್ರಮದಿಂದನೇಕ ಭವಪರ್ಯಾಯ ಪರಿಭ್ರಮಣದಿಂ ಬಂದು ಪುಟ್ಟುತ್ತುಂ ಕಡೆಯೊಳು-ತ್ಕೃಷ್ಟಾಯುಷ್ಯಮನೆಯ್ದೆ ನೆಱೆಯಿಸುವ ನೆಱವಿಭವಪರಿವರ್ತನಮೆಂಬುದು ಮೂಲೋತ್ತರ-ಪ್ರಕೃತಿಗಳೊಳ್ ಸರ್ವಜಘನ್ಯಸ್ಥಿತಿಯುಂ ಮೊದಲ್ಕಟ್ಟಿತತ್ಸಾದೃಶ್ಯಸಂಪರಾಯು-ವ್ಯವಸ್ಥಾಯಯೋಗದಿಂ ಪ್ರಪ್ರದೇಶಾನುಭಾಗ ಬಂಧಸ್ಥಾನಂಗಳೊಳಗಲಿಸಿ ಸಮಯೋತ್ತರಾನು-ಕ್ರಮದಿನುತ್ಕೃಷ್ಟಸ್ಥಿತಿವರಂ ಪರಿವಡಿದಪ್ಪದೆ ಕಿಟ್ಟುವುದಂ ಭಾವಪರಿವರ್ತನಮೆಂಬುದು ಜೀವಂ

ಕರ್ಮಯೋಗಂಗಳಪ್ಪ ಪುದ್ಗಲಮನೊಂದು ಕ್ಷೇತ್ರಪ್ರದೇಶದೊಳೊಂದು ಕಾಲದ ಸಮಯದೊಳೊಂದು ಜಘನ್ಯಾಯುಷ್ಯದೊಳೊಂದು ಕರ್ಮದ ಸ್ಥಿತಿಯೊಳ್ ಸಮಕಟ್ಟಿಕೊಂಡು ದ್ವಿತೀಯಾದಿ ಸಮಯಾಂತರಂಗಳೊಳ್ ಮುನ್ನಮೆ ಕೈಕೊಂಡ ದ್ರವ್ಯಕ್ಷೇತ್ರಕಾಲ-ಭವಭಾವಂಗಳೊಳ್ ಮಱಿದಪ್ಪೊಡಂ ಪರಿವರ್ತಿಸದೆ ಬೇಱಿವೇಱಿ ಬಹುದುಃಖಾವರ್ತನಮೆಂಬುದಿಂತಸಾರ ಸಂಸಾರಚಕ್ರಪರಿವರ್ತನದೊಳಗೆ

ಖಳ ತಿರ್ಯಗ್ಗತಿಯೊಳ್ ಮನುಷ್ಯಭವದೊಳ್ ದೇವರ್ಕಳೊಳ್ ನಾರಕ
ರ್ಕಳೊಳೋರಂತಿರೆ ಪುಟ್ಟಿ ಚಿತ್ರವಿಧರೂಪಾಟೋಪವಿಭ್ರಾಂತಿಯಂ
ತಳೆದಲ್ಲಲ್ಲಿಗೆ ಬೇಱಿವೇಱಿ ಬಹುದುಃಖಾವರ್ತಸಂದೋಹದೊಳ್
ಸುೞಿಗುಂ ಮಾಣದೆ ಮಾಯ್ದ ಕರ್ಮವಶದಿಂ ಜೀವಂ ಭವಾಂಭೋಧಿಯೊಳ್॥೭॥

ಉಂಡ ಮೊಲೆವಾಲ ಪವಣಂ
ಕೊಂಡು ಬಿಸುಟ್ಟೊಡಲ ಪವಣನಿದು ಪವಣೆಂದಾರ್
ಕಂಡು ಮನಂಗೊಂಡು ಪವ
ಣ್ಗೊಂಡಱಿಪುವ ಜಡರನಾದಿಕಾಲಸ್ಥಿತಿಯಿಂ ॥೮॥

ವ॥ ಅಂತು ಪಂಚಪ್ರಕಾರದಿನನೇಕಪ್ರಕಾರಮಪ್ಪ ಸಂಸಾರಚಕ್ರಪರಾವರ್ತನ ಸ್ವರೂಪಮಂ ಸಂಕ್ಷೇಪಸ್ವರೂಪದಿಂ ಸವಿಸ್ತರಾರ್ಥಸ್ವರೂಪಮಾಗಿ ತಿಳಿಯಪೇೞ್ವುದುಂ ನಾಗಶ್ರೀಕನ್ಯಕೆ ಸಂವೇಗಪರಾಯಣೆಯಾಗಿ ಧರ್ಮಸ್ವರೂಪಮಂ ಸವಿಸ್ತರಂ ಬೆಸಸಿ ಮೆಂಬುದುಮಾ ಮುನೀಂದ್ರನಿಂತೆಂದು ಬೆಸಸಿದಂ ನಿನ್ನ ಬೆಸಗೊಂಡ ಸದ್ಧರ್ಮ ಸನ್ಮಾರ್ಗಂ ಸಮ್ಯಗ್ದರ್ಶನಜ್ಞಾನಚಾರಿತ್ರಮಾರ್ಗದಿಂ ತ್ರಿಭೇದಮಾಗಿರ್ಕುಮಲ್ಲಿ ಜೀವಾದಿ ಪದಾರ್ಥತತ್ವಂಗಳಂ ನಿಸರ್ಗಾಧಿಗಮದ್ವಿಪ್ರಕಾರದಿನಾವುದೊಂದು ಪ್ರಕಾರದಿನಕ್ಕೆ ಪಿರಿದುಮಚ್ಚಿಱಿೊಳ್ ನಿಶ್ಚಯಂಗೆಯ್ದು ನಂಬುವುದು ಸಮ್ಯಗ್ದರ್ಶನಮೆಂಬುದಕ್ಕುಂ ಪ್ರಮಾಣ ನಯ ನಯನಿಕ್ಷೇಪಂಗಳಿಂ ಯಥಾವಸ್ಥಿತಿ ಸಮಸ್ತವಸ್ತು ಸ್ವರೂಪಮಂ ನಿಶ್ಚಯಮಾಗಿರಲಱಿವುದು ಸಮ್ಯಜ್ಞಾನಮೆಂಬುದಕ್ಕುಂ ಹಿಂಸಾದ್ಯಶೇಷಸಾವದ್ಯ ಕ್ರಿಯಾನಿವೃತ್ತಿಗೆಯ್ದು ಕಾಯ ವಾಙ್ಮನಃಕರ್ಮ ಯೋಗತ್ರಯವಿಶುದ್ಧಿಯಿಂದೆಸಗುವೆಸಕಂ ಸಮ್ಯಕ್ಚಾರಿತ್ರಮೆಂಬುದಕ್ಕುಮಾ ಚಾರಿತ್ರಮುಂ ಸಕಲವಿರತಿಲಕ್ಷಣದಿಂದನಗಾರ ಧರ್ಮವೆಂದುಂ ಏಕದೇಶವಿರತಿಲಕ್ಷಣದಿಂ ಸಾಗಾರಧರ್ಮಮೆಂದೆರಡ್ತೆಱನಕ್ಕು ಮವಱೊಳ್ ಪಂಚಮಹಾವ್ರತ ಪಂಚಸಮಿತಿತ್ರಿಗುಪ್ತಿಗಳಿಂ ನೆಱೆದು ಯತಿಧರ್ಮಂ ತ್ರಯೋದಶಭೇದಮಕ್ಕುಮಣುಬ್ರತಗುಣಬ್ರತಜಶಿಕ್ಷಾಬ್ರತವಿಕಲ್ಪದಿಂ ಗೃಹಸ್ಥಧರ್ಮಂ ತ್ರಿಃಪ್ರಕಾರಮಕ್ಕುಮಂತವು ತಮ್ಮೊಳ್ ಪ್ರತ್ಯೇಕದಿನನುಕ್ರಮದಿಂ ಪಂಚ ತ್ರಿ ಚತುರ್ಭೇದದಿಂ ದ್ವಾದಶಭೇದಮಕ್ಕುಮಲ್ಲಿ

ಆರಯ್ಯಲ್ಜೀವಹಿಂಸಾವಿರತಿ ವಿತಥವಾಕ್ಯಂ ಪರಾರ್ಥಾಪಹಾರ
ಪ್ರಾರಂಭಾನಾದರತ್ವಂ ಪರಯುವತಿರತಾನಾಭಿಲಾಷೋದ್ಯಮಂ ಬ

ಹ್ವಾರಂಭಾಕಾಂಕ್ಷೆಯೆಂದಿಂತಿವು ಜಿನಗದಿತಾಣುಬ್ರತಂಗಳ್ ವಿನೇಯಾ
ಧಾರಂಗಳ್ ಭಾಗಧೇಯಪ್ರಕೃತಿಗಳಮೃತಾವಾಸನಿಶ್ರೇಣಿಕಂಗಳ್ ॥೯॥

ದೆಸೆಗಳ್ಗೀ ಮೇರೆಯಿಂದಂ ಪೋಱಗೆ ನಡೆಯೆನಾನೆಂದು ಕೈಕೊಳ್ವುದುಂ ಸಂ
ತೋಸದಿಂ ತಾಳ್ದಿರ್ದಶೇಷಪ್ರಮಿತನಿಯಮಮುಂ ಮಂಡಳಾಗ್ರಾದ್ಯನರ್ಥ
ಪ್ರಸರಾಸ್ತ್ರೌಘಂಗಳೊಳ್ ತತ್ಪ್ರಮಿತಮೆನಿಸಿ ಕೈಕೊಂಡುಮೊಲ್ದೀಯದಿರ್ಪೊಂ
ದಸಮತ್ವೀಭಾವಮುಂ ಭಾವಿಪೊಡತಿಶಯಂಗಳ್ಗುಣಾಖ್ಯಬ್ರತಂಗಳ್ ॥೧೦॥

ಸಮತಾ ಸದ್ಭಾವದಿಂ ಪೂಜಿಸಿ ಪರಮಜಿನಾರಾಧನಂಗೆಯ್ವುದುಂ ಸಂ
ಯಮಿಗಳ್ಗುತ್ಕೃಷ್ಟದಿಂ ದಾನಮನತಿಮುದದಾರ್ತೀವುದುಂ ಪ್ರೋಷಧ ಪ್ರ
ಕ್ರಮದಿಂ ಪರ್ವಂಗಳಂ ನೋಂಪುದುಮಭಿಮತಭೋಗೋಪಭೋಗಂಗಳಂ ತ
ತ್ಪ್ರಮಿತಂ ಮಾಡಿಟ್ಟು ಕೈಕೊಂಡೆಸಗುವುದುಮಿದಾರಯ್ಯೆ ಶಿಕ್ಷಾಬ್ರತಂಗಳ್ ॥೧೧॥

ವಿತತಮಣುಗಣಸುಶಿಕ್ಷಾ
ವ್ರತಂಗಳೊಳ್ ಕ್ರಮದೆ ನೋಡಲೊಂದೊಂದಱೊಳ
ಯ್ದತಿಚಾರಮಾಗೆ ಪೋಗು
ತ್ತೆ ತುದಿಯೊಲಾರಯ್ಯಲವೆಲ್ಲಮಱುವತ್ತಕ್ಕುಂ ॥೧೨॥

ಅತಿಭಾರಾರೋಹಣಮು
ದ್ಗತಬಂಧಚ್ಛೇದಮನ್ನಪಾನನಿರೋಧಂ
ಕೃತಪೀಡೆಯಿಂದೆ ಹಿಂಸಾ
ವ್ರತಕ್ಕೆ ಪಂಚಪ್ರಕಾರಮಿಂತತಿಚಾರಂ ॥೧೩॥

ನಾನಾಮಿಥ್ಯೋಪದೇಶಂ ಪುದಿದೊದವಿದ ಸಾಕಾರಮಂತ್ರಂ ರಹೋವ್ಯಾ
ಖ್ಯಾನ ನ್ಯಾಸಾಪಹಾರಕ್ರಮಮನುಗತಿಯಿಂ ಕೂಟಲೇಖಕ್ರಿಯಾ ವಿ
ಜ್ಞಾನಂ ಸತ್ಯವ್ರತಕ್ಕಿಂತಿವು ಪರಿವಿಡಿಯಿಂದಯ್ದತೀಚಾರಮಕ್ಕುಂ
ಜೈನೇಂದ್ರಶ್ರೀಮತಾನುಕ್ರಮವಿರಚನೆಯಿಂ ನಂಬು ನೀನಂಬುಜಾಕ್ಷೀ ॥೧೪॥

ಹೀನಾಧಿಕ ವಿನಿಮಾನ
ಸ್ತೇನಾ (ಹೃತ)ದಾನಸದೃಶಮಿಶ್ರವಿಲೋಪ
ಸ್ತೇನಪ್ರಯೋಗಮೆಂದಿವು
ತಾನಸ್ತೇಯವ್ರತಕ್ಕತಿಕ್ರಮಮಕ್ಕುಂ ॥೧೫॥

ಪರವೈವಾಹಿತ್ವರಿಕಾ
ಪರಿಹರಿತಾಗಮನಮಪರಿಹರಿತಾಗಮನಂ

ಸ್ಮರಕೇಳಿ ಮದನತೀವ್ರಾ
ತುರತೆ ಚತುರ್ಥವ್ರತಕ್ಕತಿಕ್ರಮಮಕ್ಕುಂ ॥೧೬॥

ಇರೆ ಕುಪ್ಯನಿವೇಶನ ಧನ
ವರಧಾನ್ಯ ಕ್ಷೇತ್ರಮುಖ್ಯಮೆಂಬಿವು ಪವಣಿಂ
ದಿರದೇಱಿಸುವುದು ಮತ್ತಂ
ಪರಿಮಾಣಪರಿಗ್ರಹವ್ರತಕ್ಕತಿಚಾರಂ ॥೧೭॥

ಅತಿಶಯತರಮೆನಿಪ ಗುಣ
ವ್ರತದೊಳ್ ದಿಗ್ವಿರತಿಗಕ್ಕುಮತಿಚಾರಮನಾ
ರತಮೂರ್ಧ್ವಾಧಃಸ್ತಿರ್ಯ
ಗ್ವ್ಯತಿಕ್ರಮಕ್ಷೇತ್ರವೃದ್ಧಿ ವಿಸ್ಮರಣಂಗಳ್ ॥೧೮।

ಕಪಟದೊಳೇಂ ಪ್ರೇಷಣ ಶ
ಬ್ದಪುದ್ಗಲಕ್ಷೇಪಸಮುದಿತಾನಯನಂ ತಾ
ವಪಚಾರಂಗಳ್ ರೂಪಾ
ನುಪಾತಮುಂ ಪ್ರಮಿತದೇಶನಿಯಮವ್ರತದೊಳ್ ೧೯॥

ಪುದಿದಸಮೀಕ್ಷಾದಿ ಕರಣ
ಮುದಯಿಪ ಕಂದರ್ಪಮಂತೆ ಕೌತ್ಕುಚ್ಯಂ ಪೆ
ರ್ಚಿದ ಮೌಖರ್ಯ್ಯಮನರ್ಥ
ಕ್ಯದೊಳ್ ವ್ಯತಿಕ್ರಮಮತಿಪ್ರಸಾ(ಧ)ನಸಹಿತಂ ॥೨೦॥

ಪರಿಕಿಪೊಡಸ್ಮರಣಮನಾ
ದರಂ ಮನೋವಾಕ್ಯರೀರ ದುಷ್ಪ್ರಣಿಧಾನಂ ॥
ನಿರುಪಮ ಶಿಕ್ಷಾವ್ರತದೊಳ್ ।
ನಿರುದ್ಧ ಸಾಮಾಯಿಕವ್ರತಕ್ಕತಿಚಾರಂ ॥೨೧॥

ಕ್ರಮದೆ ಪರವ್ಯಪದೇಶಂ ।
ಸಮತ್ಸರತ್ವಂ ಸಚಿತ್ತನಿಕ್ಷೇಪ ವಿಧಾ
ನಮತಿಕ್ರಮ ಕಾಲಮತಿ ।
ಕ್ರಮಮಕ್ಕುಂ ಪಾತ್ರದಾನಮಂ ಕುಡುವೆಡೆಯೊಳ್ ॥೨೨।

ನೋಡದೆ ಪ್ರತಿಲೇಪನೆಯಂ ।
ಮಾಡದೆ ಮಡಗಿಡುವ ಕೊಳ್ವ ಪಾಸುವುದುಂ ಕೊಂ ॥

ಡಾಡದುದುಂ ನೆನೆಯದುದುಂ ।
ಕೇಡಿನಿತುಂ ಪ್ರೋಷಧೋಪವಾಸವ್ರತದೊಳ್ ॥೨೩॥

ಕ್ರಮದಿಂ ಸಚಿತ್ತಸಂಬಂ ।
ಧಮಂತೆ ಸಮಿಶ್ರಮಭಿಷವಂ ದುಃಪಕ್ವಾ ।
ನ್ನಮಿವಯ್ದನ್ನಂಗಳತಿ ।
ಕ್ರಮಮಾ ಭೋಗೋಪಭೋಗಪರಿಮಿತಗತಿಯೊಳ್ ॥೨೪॥

ನುತಪಂಚಾಣುವ್ರತಂ ಮೂಱಿನಿಸುವ ಗುಣನಾಮವ್ರತಂ ನಾಲ್ಕು ಶಿಕ್ಷಾ
ಬ್ರತಮಿಂತೀ ಸುವ್ರತಂ ದ್ವಾದಶವಿದಮಿವನೋರಂತತೀಚಾರನಿಃಪೀ ।
ಡಿತಮಾಗಲ್ ತಾಳ್ದಿ ಕೈಕೊಂಡೆಸಗೆ ನಿಖಿಳಸಂಸಾರಗಂಭೀರ ಕೂಪಾ ।
ರತಟೋದ್ದೇಶಾವಲಗ್ನಸ್ಥಿತಮೆನಿಸುಗುಮವ್ಯಾಕುಳಂ ಭವ್ಯಜೀವಂ ॥೨೫॥

ವ॥ ಇಂತೀ ಸಮೀಚೀನ ಶ್ರಾವಕಾಚಾರಂಗಳಂ ನಿರತಿಚಾರಮಾಗೆ ತಾಳ್ದಿದ ದೇಶವಿರತಂಗಿಚ್ಚೆ ವಾರ್ತೆ ದತ್ತಿ ಸ್ವಾಧ್ಯಾಯ ಸಂಯಮ ತಪಮೆಂದಾರ್ಯಕರ್ಮಮಾಱು ತೆಱನಕ್ಕುಮಲ್ಲಿ ವರುಷವರುಷಾಂತರಂಗಳೊಳಾಷಾಢ ಕಾರ್ತಿಕ ಫಾಲ್ಗುಣ ಮಾಸಂಗಳ ನಂದೀಶ್ವರಪರ್ವದಿನಂಗಳೊಳಂ ತೀರ್ಥಕರಪರಮದೇವರ್ಗೆ ಪಂಚ ಮಹಾ ಕಲ್ಯಾಣ ವಿಭೂತಿಗಳೊಳಂ ಸೌಧರ್ಮೇಂದ್ರಂ ಮಾಱ್ಪ ಮಹಾಮಹಮೆಂಬ ಪೂಜೆಯಂ ಚತುರ್ನಿಕಾಯಾಮರರ್ಮಾಱ್ಪ ಸರ್ವತೋಭದ್ರಮೆಂಬ ಪೂಜೆಯಂ ಯಾಚಕ ವಾಚಕ ನರ್ತನ ಕಥಕ ಪುಣ್ಯಾಪಾಠಕ ಪ್ರಭೃತಿ ಸಮಸ್ತ ಜನಕ್ಕಂ ಬೇಡಿದುದಂ ಕೊಟ್ಟು ಚಕ್ರವರ್ತಿಗಳ್ ಮಾಱ್ಪ ಕಲ್ಪವೃಕ್ಷಮೆಂಬ ಪೂಜೆಯುಂ ಅರ್ಧ ಚಕ್ರವರ್ತಿಗಳ್ ಮಾಱ್ಪ ಚತುರ್ಮುಖಮೆಂಬ ಪೂಜೆಯುಂ ವಿದ್ಯಾಧರರ್ಮಾಱ್ಪ ರಥಾವರ್ತಮೆಂಬ ಪೂಜೆಯುಂ ಮಹಾಮಂಡಳೇಶ್ವರ ರ್ಮಾಱ್ಪ....... ಪೂಜೆಯಂಬ ಪೂಜೆಯುಂ ಅರ್ಧಮಂಡಳೇಶ್ವರರ್ಮಾಱ್ಪ ಮಹಿಮೆಯೆಂಬ ಪೂಜೆಯುಂ ನಾನಾರ್ಚನೋಪಕರಣಸಮೇತಮಾಗಿ ಜಿನೇಂದ್ರಮಹಾಭಿಷೇಕದೊಳ್ ನಾಳಿಕೇರೇಕ್ಷುರಸಾಮ್ರರಸಘೃತಕ್ಷೀರದಧಿ ಕಷಾಯೋದಕ ಚತುಷ್ಕುಂಭೋದಕ ಗಂಧೋದಕಸವನಮಂ ತಂತಮ್ಮ ಚಿತ್ತಾನುಸಾರವೃತ್ತಿಯಿಂ ಸಕಲ ವಿನೇಯ ಜನಂಗಳ್ ಮಾಱ್ಪ ಮಹಮೆಂಬ ಪೂಜೆಯುಮನುಳ್ಳುದೆಂಬುದಿಚ್ಚೆಯೆಂಬ ಮೊದಲಾರ್ಯಕರ್ಮಂ ಅಸಿಮಸಿಕೃಷಿವಾಣಿಜ್ಯಶಿಲ್ಪಪಶು ಪಾಲ್ಯಮೆಂಬ ಷಟ್ಕರ್ಮಂಗಳೊಳ್ ನ್ಯಾಯದಿನರ್ಥೋಪಾರ್ಜನಂಗೆಯ್ವುದು ವಾರ್ತೆಯೆಂಬೆರಡನೆಯಾರ್ಯಕರ್ಮಂ ಕಾರುಣ್ಯಭಾವದಿಂ ಜೀವನಿಕಾಯಮನೋವಿ ಕಾವಭಯದತ್ತಿಯುಂ ಪಾತ್ರವಿಶೇಷಕ್ಕಾಹಾರೌಷಧೋಪಕರಣಾವಾಸಂಗಳನೀವ ಪಾತ್ರ ದತ್ತಿಯುಂ ತನ್ನ ಸಮಾನಮಪ್ಪ ಕುಲಶೀಲಂಗಳ ವ್ರತಸಂಪನ್ನರ್ಗೆ ಕರಿತುರಗಮಣಿ ಭೂಷಣಹಿರಣ್ಯಭೂಮಿಕನ್ಯಾದಿ ವಸ್ತುಗಳಂ ಕುಡುವ ಸಮದತ್ತಿಯುಂ ಆತ್ಮೀಯಾನ್ವಯೋದ್ಧರಣಸಮರ್ಥನಪ್ಪ ನಿಜಾತ್ಮಜಂಗೆ ಸಮಸ್ತಗೃಹಪರಿಚ್ಛೇದಮನೊಪ್ಪಿಸುವ ಸಕಳದತ್ತಿಯುಮನುಳ್ಳದು ದತ್ತಿಯೆಂಬ

ಮೂಱನೆಯಾರ್ಯಕರ್ಮಂ ಪರಮಾಗಮಂಗಳನೋದುವೋದಿಸುವೆಡೆಯೊಳಾದೊಂದು ವ್ಯವಸಾಯ ಸ್ವಾಧ್ಯಾಯಮೆಂಬ ನಾಲ್ಕನೆಯಾರ್ಯಕರ್ಮಂ ದ್ವಾದಶವಿಧೋಪಾಸಕ ವ್ರತಂಗಳಂ ನಿರತಿಚಾರವೃತ್ತಿಯಿಂ ಕೈಕೊಂಡೆಸಗುವ ತಾತ್ಪರ್ಯಂ ಸಂಯಮಮೆಂಬ ಯ್ದನೆಯಾರ್ಯಕರ್ಮಂ ಅಣುವ್ರತ ಮಹಾವ್ರತಪರಿಕಲ್ಪಿತಮಪ್ಪನಶನಾದಿಗಳನನುಷ್ಠಿಸಿ ಶಕ್ತಿಯಂ ಮಱಸದೆ ನೆಗೞ್ವುದು ತಪವೆಂಬಾಱನೆಯಾರ್ಯ ಕರ್ಮಮಿಂತೀಯಾರ್ಯ ಕರ್ಮಂಗಳಂ ನೆಗೞ್ದ ಗೃಹಸ್ಥಾಶ್ರಮಮಪ್ರತಿಗನುಕ್ರಮದಿನನುಪಮಾನಗುಣಪ್ರವರ್ಧಮಾನಮ ಪ್ಪೇಕಾದಶಸ್ಥಾನಂಗಳಕ್ಕುಮವಾವುವೆಂದೊಡೆ

ಅಪುನರ್ಭವನಾಪ್ತಂ ತ
ಲ್ಲಪನೋದಿತಮಾಗಮಂ ತದಾಗಮದರ್ಥೋ
ಕ್ತಿ ಪದಾರ್ಥಮೆಂದು ನಿಶ್ಚಯಿ
ಪ ಪರಮದರುಶನಿಕನಂತವಂ ಪ್ರಾಥಮಿಕಂ ॥೨೬॥

ವರ ಪಂಚಾಣುವ್ರತಮಂ
ನಿರತಿಕ್ರಮಮಾಗೆ ತಾಳ್ದಿ ಪರಮದಯಾ ತ
ತ್ಪರನೆನಿಸಿದ ಶಲ್ಯತ್ರಯ
ವಿರಹಿತನೆರಡನೆಯ ನೆಲೆಯವಂ ತಾಂ ವ್ರತಿಕಂ ॥೨೭॥

ನಿಯತಂ ತ್ರಿಸಂಧ್ಯೆಯೊಳ್ ಸಮ
ತೆಯಿನರುಹತ್ಪೂಜೆಯಿಂದಮಿರ್ಪಾತಂ ನಿ
ಶ್ಚಯದಿಂ ಮೂಱನೆಯಂ ಸಾ
ಮಯಿಕ ವ್ರತಧಾರಿ ಪೆಸರೊಳಂ ಸಾಮಯಿಕಂ ॥೨೮॥

ಅನಶನ ವಿಧಿಯಿಂ ತಿಂಗಳಿ
ನ ನಾಲ್ಕು ಪರ್ವದೊಳಮಾಪ್ತಪೂಜಾವಿಧಿಯಂ
ಮನಮೊಸೆದಿರ್ಪಂ ನಾಲ್ಕನೆ
ಯ ನೆಲೆಯವಂ ಪ್ರೋಷಧೋಪವಾಸಿಯೆನಿಕ್ಕುಂ ॥೨೯॥

ಕುಸುಮ ಫಳ ಕಂದ ಮೂಲ ।
ಪ್ರಸರಂಗಳನಗ್ನಿಪಕ್ವಮಲ್ಲದುವನಪೇ ॥
ಕ್ಷಿಸಿಕೊಳ್ಳದನಯ್ದನೆಯಂ ।
ಪೆಸರಿಂದಾತಂ ಸಚಿತ್ತವಿರತನೆನಿಕ್ಕುಂ ॥೩೦॥

ದಿವದೊಳ್ ಸುರತವ್ಯಾಪಾ ।
ರವಿನೋದಮನನ್ನಪಾನಮಂ ರಾತ್ರಿಯೊಳಾ॥

ಸೆವಡುವುದುಮನುಱಿದೆಸಗು ।
ವ ವಿವೇಕಿಯಾಱನೆಯ ರಾತ್ರಿಭುಕ್ತವ್ರತಿಕಂ ॥೩೧॥

ಸಹಜಾಶುಚಿದೇಹಂ ಪ್ರಾ ।
ಣಿಹತಿ ಪ್ರಾರಂಭಮೆಂದು ವನಿತಾರತಿ ನಿ ॥
ಸ್ಪೃಹನಾಗಿ ತೊಱೆದು ನೆಗಟ್ದಂ ।
ಗೃಹಸ್ಥರೊಳ್ ಬ್ರಹ್ಮಚಾರಿಯೇೞನೆಯಾತಂ ॥೩೨॥

ಘನತರಸಾವದ್ಯಕರಂ ।
ನೆನೆವೊಡೆ ಷಟ್ಕರ್ಮಮೆಂದವಂ ತೊಱೆದವನೆಂ ॥
ಟನೆಯ ನೆಲೆಯಾತನಾರಂ ।
ಭನಿವೃತ್ತನೆನಿಕುಮನುಪಮೋದ್ದಾಮಗುಣಂ ॥೩೩।

ಧನಧಾನ್ಯಾದಿ ಪರಿಗ್ರಹ ।
ಮನಾವಗಂ ತೊಱೆದು ನೆಗೞ್ದುಪಾಸಕನೊಂಬ ॥
ತ್ತನೆಯ ಪರಿಮಿತಪರಿಗ್ರಹ ।
ವಿನಿವೃತ್ತನುದಾತ್ತಧರ್ಮನಿರ್ಮಲಚಿತ್ತಂ ॥೩೪॥

ತನಗೆಂದು ಮಾಡಿಸುತ್ತಂ ।
ತನಗೆಲ್ಲಂ ತನ್ನನಱಿಪಿ ಮಾಡಿದುದಂ ಕೊ ॥
ಳ್ಳನೆನಿಪ್ಪನಾತನನುಮೋ ।
ದನವಿರತಂ ದೇಶವಿರತರೊಳ್ಪತ್ತನೆಯಂ ॥೩೫॥

ವಿಶದಯಶೋನಿಳಯಂ ವಿಮ ।
ಳಶೀಳಸಂಪನ್ನನುಚಿತಭೈಕ್ಷಾನೀಕಂ ॥
ನಿಶಿತಮತಿಯುಕ್ತನೇಕಾ ।
ದಶಸ್ಥನುದ್ದಿಷ್ಟದೇಶವಿರತಂ ಪೆಸರಿಂ ॥೩೬॥

ವ॥ ಇಂತು ದರ್ಶನಿಕಂ ವ್ರತಿಕಂ ಸಾಮಯಿಕಂ ಪ್ರೋಷಧೋಪವಾಸಿಕಂ ಸಚಿತ್ತವಿರತಂ ರಾತ್ರಿಭುಕ್ತವ್ರತಂ ಬ್ರಹ್ಮಚಾರಿ ಆರಂಭಕಂ ಪರಿಗ್ರಹವಿರತಂ ಅನುಮತಿವಿರತಂ ಉದ್ದಿಷ್ಟವಿರತನೆಂದಿಂತು ಪನ್ನೊಂದು ವಿಕಲ್ಪಮನುಳ್ಳ

ಶ್ರಾವಕರೊಳನುಕ್ರಮದಿಂ ।
ಭಾವಿಪೊಡೆ ಜಘನ್ಯರಱುವರಲ್ಲಿಂದತ್ತ ॥
ಲ್ಲೂವರ್ಮಧ್ಯಮರತ್ತಲ್ ।
ತಾವುತ್ತಮರಿರ್ಪರಮಳ ಚಾರುಚರಿತ್ರರ್ ॥೩೭॥

ವ॥ ಇಂತು ನೆಗೞ್ತೆವೆತ್ತೇಕಾದಶಸ್ಥಾನಂಗಳೊಳಾ ನಿರತಿಚಾರವ್ರತಶೀಲ ಸಂಪನ್ನನುಂ ನಿರಸ್ತ ಮಿಥ್ಯಾತ್ವನುಂ ನಿಷ್ಕಷಾಯನುಮಾಗಿ ಸಮಾಚರಿಸಿ ಚರಮ ಕಾಲದೊಳ್

ಪರಕಾಲಂ ಪುಟ್ಟೆ ಕುತ್ತಂ ಕಡುಪುಡುಗದೆ ಬೆನ್ನಟ್ಟೆ ರೌದ್ರೋಪಸರ್ಗ ।
ಪ್ರಸರಂ ಕೈಗಣ್ಮೆ ಮುಪ್ಪಾವರಿಸಿದ ಬಳದಿಂ ಪೊಣ್ಮೆ ಕಾಲಾಂತದೊಳ್ ಭಾ।
ವಿಸಿ ತನ್ನಂ ತಾನನಿತ್ಯಾದಿಗಳನಱಿದನುಪ್ರೇಕ್ಷೆಗೆಯ್ಯುತ್ತುಮಾರ್ತ ।
ಣ್ಮೆ ಸಮತ್ವೀಭಾವದಿಂದಂ ಬಿಡುವುದೊಡಲನವ್ಯಾಕುಲಂ ಭವ್ಯಜೀವಂ ॥೩೮॥

ಕೃತಮಿತ್ರಪ್ರಣಯಂ ಜೀ ।
ವಿತಮರಣಾಶಂಸೆ ವಿಭವಸೌಖ್ಯನಿದಾನಂ ॥
ವ್ಯತಿಪಾತಮಕ್ಕುಮತ್ತೂ।
ರ್ಜಿತಮಾಗುತ್ತಿರ್ದ ಚರಮಸಲ್ಲೇಖನೆಯೊಳ್ ॥೩೯॥

ಇದು ದೈವಮಿದಾಗಮಮಿಂ ।
ತಿದು ತಪಮಿದು ಧರ್ಮಮೆಂಬ ನಿರುಪಮಸಮ್ಯ ॥
ಕ್ತ್ವದ ತೆಱನಂ ನಾಗಶ್ರೀ
ಗೆ ದಿವ್ಯಮುನಿನಾತನಱಿಯೆ ಬೆಸಸಿದನಾಗಳ್ ॥೪೦॥

ಧರ್ಮಮೆ ಪರಮಪದಕ್ಕಾ ।
ಶರ್ಮಂ ಧರ್ಮಮೆ ಸಮಸ್ತಸೌಖ್ಯಕ್ಕಾರ್ಮಂ ॥
ಧರ್ಮಮೆ ದೇಹಿಗೆ ಶರಣಂ ।
ಧರ್ಮಮೆ ಸಂಸಾರಿಗಖಿಳಸಂಸೃತಿಹರಣಂ ॥೪೧॥

ಧರ್ಮಂ ವಿಶ್ರುತಸಶ್ರುತಾತಿಶಯಮಂ ಧರ್ಮಂ ಬೃಹದ್ಭಾಗ್ಯಮಂ ।
ಧರ್ಮಂ ನಿರ್ಭರಸಾರ್ವಭೌಮಪದಮಂ ಧರ್ಮಂ ಸುರೇಂದ್ರತ್ವಮಂ ॥
ಧರ್ಮಂ ನಿರ್ಮಲಸದ್ಗುಣಪ್ರಕರಮಂ ಧರ್ಮಂ ತಪಃಖ್ಯಾತಿಯಂ ।
ಧರ್ಮಂ ಧಾರ್ಮಿಕನಪ್ಪವಂಗೆ ಕುಡುಗುಂ ನಿರ್ವಾಣ ಕಲ್ಯಾಣಮಂ ॥೪೨॥

ವ॥ ಎಂದು ಸದ್ಧರ್ಮಸ್ವರೂಪಮುಮಂ ತತ್ಫಳಪ್ರಭಾವಮುಮಂ ಸೂರ್ಯಮಿತ್ರ ಭಟ್ಟಾರಕರ್ ತಿಳಿಯೆ ಪೇೞುತ್ತುಂ ಸಮ್ಯಕ್ತ್ವಪೂರ್ವಕಮಣುವ್ರತಂಗಳನೇಱಿಸಿ

ನಿಂಬದ ಕುಸುಪುಂಗಳನೌ ।
ದುಂಬರಪಂಚಕಮನಂತೆ ನವನೀತಮನಾ ॥
ಣಂಬೆಯನನಾರತಂ ಬೆ ।
ಳ್ಗುಂಬಳಮಂ ಗಿಣ್ಣನುಣ್ಣದಿರ್ಪುದಮೋಘಂ ॥೪೩॥

ಕೃತಕಾರಿತಾನುಮೋದದಿ ।
ನತಿಸಾವದ್ಯಾದಿ ದೋಷಮಿಲ್ಲೆನಿಸಿದಣು ॥
ವ್ರತಮಂ ತಾಳ್ದಿದ ಮನುಜರ್ ।
ಕೃತಾರ್ಥರಾಗರೆ ಜಗತ್ತ್ರಯಾಭ್ಯಂತರದೊಳ್ ॥೪೪॥

ಭಯಮಖಿಲಕಾಂಕ್ಷೆ ವಿಚಿಕಿ ।
ತ್ಸೆಯನ್ಯದೃಷ್ಟಿಪ್ರಶಂಸೆ ಸಂಸ್ತವನಮೆಂಬೀ ॥
ಕ್ರಿಯೆ ಸಮ್ಯಗ್ದೃಷ್ಟಿಗೆ ನೋ ।
ಡೆ ಯಥಾಕ್ರಮದಿಂ ವ್ಯತಿಕ್ರಮಂ ತಾನಕ್ಕುಂ ॥೪೫॥

ಒಳಕೊಂಡ ಪಂಚವಿಂಶತಿ ।
ಮಳದಿಂದಂ ಪಿಂಗಿ ತತ್ತ್ವರುಚಿಯಂ ತಾಳ್ದು ॥
ಜ್ವಳಗುಣಗಣಂಗಳಿಂದಂ ।
ಬೆಳಗುಗುಮಿಾ ತೆಱದೆ ನಿನ್ನ ದರ್ಶನರತ್ನಂ ॥೪೬।

ವ॥ ಎಂದು ಸಂಬೋಧಿಸಿ ನಿಮ್ಮಯ್ಯಂ ನಾಗಶರ್ಮನೆನ್ನ ಕೊಟ್ಟ ವ್ರತಂಗಳಂ ಬಿಸುಡೆಂದು ನುಡಿಯದೆ ಮಾಣಂ ನೀನಲ್ಲಿಯೆ ಬಿಸುಡವೇಡ ಎನಗೆ ವ್ರತಂಗಳಂ ಕೊಟ್ಟ ವ್ರತಿಗಳ್ಗೆ ಮಗುಳೆ ಕುಡುವೆಮೆಂಬುದೆನೆ ನಾಗಶ್ರೀಯಂತೆ ಗೆಯ್ವೆನೆಂದು ಗುರುಗಳಂ ಗುರುಭಕ್ತಿಪೂರ್ವಕಂ ವಂದಿಸಿ ತನ್ನ ಮನೆಗೆ ಪೋಪುದುಂ ತಮ್ಮೊಡನೆಯ ಕೂಸುಗಳ್ ತನ್ನಿಂ ಮುನ್ನಮೆ ನಾಗಶರ್ಮನಿರ್ದಲ್ಲಿಗೆ ವಂದು ನಿಮ್ಮ ಮಗಳ್ ಋಷಿಯರಲ್ಲಿ ಶ್ರಾವಕವ್ರತಂಗಳಂ ಕೈಕೊಂಡು ಬಂದಳೆಂದು ಪೇೞ್ದುದುಂ ಮಗಳ ಮೊಗಮಂ ನೋಡಿ

ಧರಣೀಚಕ್ರದೊಳಾರ್ಗಮಗ್ಗಳಮಿಳಾದೇವಾನ್ವವಾಯಂ ನರೇ ।
ಶ್ವರಸಂಪೂಜ್ಯನೆ ನಾನಿದಂ ಮಗಳೆ ನೀಂ ಕಂಡಿರ್ದುಮಪ್ರೌಢರಂ ॥
ತಿರೆ ಕಾಷ್ಠಾಂಬರನಾಗಿ ಮುಟ್ಟುಗಿಡೆ ವಂಶಂಗೆಟ್ಟು ನಾಣ್ಗೆಟ್ಟ ದು ।
ಶ್ಚರಿತಂಗಾನತೆಯಾಗಿ ನಮ್ಮ ಕುಲಮಂ ನೀಂ ನೀರೊಳಿಂತರ್ದುವೋ ॥೪೭॥

ಕ್ಷಿತಿಯೊಳ್ ಪೂಜ್ಯದ್ವಿಜಸಂ ।
ತತಿಯೆಂಬುದನಱಿಯದಿಂತು ನೀನೀಗಳ್ ದು ॥
ರ್ಮತಿಯಾದ್ಯೆ ನಾಮುಂತು ।
ವ್ರತಸ್ಥರಾ ವ್ರತಮನೇಕೆ ನೀಂ ಕೈಕೊಂಡ್ಯೆ ॥೪೮॥

ಕೂಸಿನ ವಿಚಾರಬುದ್ಧಿ ।
ನ್ಯಾಸಂ ನಿನಗಿಲ್ಲ ಮಱೆದು ಕೈಕೊಂಡುದುವೇಂ ॥

ದೋಸಮದೇಂ ಬನ್ನಂ ಬಿಸು ।
ಡಾ ಸವಣನ ಪೇಲ್ದ ಜೈನಮತಮಂ ಬ್ರತಮಂ ॥೪೯॥

ವ॥ ಎಂದು ನುಡಿದ ತಂದೆಯ ನುಡಿಯಂ ಕೇಳ್ದವಧಾರಿಸಿ

ಪದಪಿಂ ಧರ್ಮಮನೊಪ್ಪಿ ನಿಂದೆನಗಘಪ್ರಧ್ವಂಸನೋಪಾಯಸಂ ।
ಪದಮಂ ತನ್ಮುನಿಪೇಲ್ದಣು ವ್ರತಮನಾನೀಗಳ್ ಬಿಸುಟ್ಟಾಗಳೇಂ ।
ತೊದಳಿಲ್ಲಂ ನುಡಿವಂದವಿಂತೆ ಕಿಱುಗೂಸೆಂಬೊಂದು ಮಾತೆನ್ನೊಳಂ ।
ತದು ತಾಂ ನಿಕ್ಕುವಮಾದೊಡಾ ನುಡಿಯನ್ನೇತಱಿಂ ನೀಗುವೆಂ ॥೫೦॥

ಎನಿತೆನ್ನನಾಗ್ರಹಂಗೆ ।
ಯ್ದು ನುಡಿದೊಡಂ ಬಿಸುಡಲೊಲ್ಲೆನೆನಗಾ ವ್ರತಮಂ ॥
ಮುನಿಪರೊಸೆದಿತ್ತರಾನವ ।
ರನೆಯ್ದಿದಂ ಬೞಿಯಮವರ್ಗೆ ಮಗುಳೊಪ್ಪಿಸುವೆಂ ॥೫೧॥

ವ॥ ಎಂಬುದುಮಂತಾದೊಡೆ ಕರಮೊಳ್ಳಿತ್ತು ನಡೆ ನಿನ್ನ ನಚ್ಚಿನ ಋಷಿಯಲ್ಲಿಗೆಂದು ಮಗಳನೊಡಗೊಂಡು ನಾಗಸ್ಥಾನಕ್ಕಾಗಿ ಮಹಾರಾಜವೀಧೀಮಾರ್ಗದಿಂ ಬರ್ಪಾಗಳ್ ತೊಟ್ಟನೆ ಕಟ್ಟಿದಿರೊಳ್

ಪಿಡಿ ಬಡಿ ಕಟ್ಟು ನೂಂಕು ತೆಗೆ ಸೂಲದೊಳಿಕ್ಕುೞಿೞೊಳಿಕ್ಕು ಕೈಗಳಂ ।
ಕಡಿ ಪಿಡಿದೊತ್ತಿ ಮೂಗನರಿ ಗಾಣದೊಲಿಕ್ಕು ಬಿಗುರ್ತು ಬೀಗಿ ಬೆ।
ನ್ನೊಡವಿನಮೊಡ್ಡೆ ಕಾಸು ಪಿಡಿ ಕೆಂಡದೆಳಿಂಡೆಯನಾಡು ಚುರ್ಚು ಮಾ।
ರ್ನುಡಿಯದೆ ಗಾಣದೊಳ್ ಪಿೞಿ ಪಿಸುರ್ದ್ದೞಿ (ಪೋ)ೞಿಸು ಪಿಂಡಿವಾಳದೊಳ್ ॥೫೨॥

ಅಪದೋಷನನೇಳಿಸಿ ಕೊಂ ।
ದ ಪಾಪಿಯಂ ಪಲವುತೆಱದ ಕೊಲೆಗಳಿನೀ ನಿ ॥
ಷ್ಕೃಪನಂ ಕೊಲ್ಲೆನುತುಂ ಬ ।
ರ್ಪ ಪುರುಜನಂಗಳ ರವಂಗಳಂ ಸತಿ ಕೇಳ್ದಳ್ ॥೫೩॥

ವ॥ ಅಂತೊರ್ವನಂ ಪೆಡಂಗೆಯ್ಯುಡಿಯಲ್ಕಟ್ಟಿ ಪೊೞಲ ಜನಂಗಳೆಲ್ಲಂ ನೆರೆದು ನುಡಿಯುತ್ತುಂ ಗೞಿವೞಿಯ ಪಾವಿನಂತೆ ಬೆಂಬೞಿಯಂ ತಗುಳ್ದು ಪರಿತರೆ ಪರೇ ತವನಕ್ಕಾಗಿ ಕೊಂಡು ಪೋಪುದಂ ನಾಗಶ್ರೀ ಕಂಡು ನಾಗಶರ್ಮಭಟ್ಟನನೆನ್ನುಮಿಾಸುಭಗ ಸುಂದರಾ ಕಾರನಪ್ಪಕುಮಾರನನೇಕೆ ಕೊಲಲಲೊಯ್ದಪರ್ಬೆಸಗೊಂಡು ಬನ್ನಿ ಮೆಂಬುದುಂ ನಾಗಶರ್ಮನಾ ಪ್ರಪಂಚಮನೆಲ್ಲಮುಂ ತಳಾಱನಂ ಬೆಸಗೊಂಡು ಬಂದು ತಿಳಿಯೆ ಪೇೞ್ಗುಮಿಾ ಪೊೞಲೊಳಾರ್ಗಮಗ್ಗಳಂ ಪದಿನಾಱುಕೋಟಿ ದ್ರವ್ಯಮನುಳ್ಳ ಸುದತ್ತನೆಂಬ ಪರದನ ಮಗನೀತಂ ನರಸೇನನೆಂಬಂ ಸಪ್ತವ್ಯವಸನವಶವರ್ತಿಯಾಗಿ ಅಕ್ಷಧೂರ್ತನೆಂಬ

ಮಾಣಿಯೊಡನಕ್ಷಕ್ರೀಡೆಯಾಡಿ ಲಕ್ಷದ್ರವ್ಯಮಂ ಸೋಲ್ತೊಡಕ್ಷಧೂರ್ತ ನಾ ದ್ರವ್ಯಮಂ ಕೊಟ್ಟಲ್ಲದೆ ಪೋಗದಿರೆಂದರಸನಾಣೆಯಿಟ್ಟೊಡಾಜ್ಞಾಲಂಘನಂ ಗೆಯ್ದು ದಲ್ಲದಾತನಂ ಕೊಂದೋಡೀತನನರಸಂ ಕೊಲಲ್ವೇಟಿದೊಡೆ ತಳಾಱಂ ಕೊಲಲುಯ್ದಪನೆಂದು ಪೇೞ್ವುದುಮಂತಾದೊಡಾನೀ ವ್ರತಮನಾವ್ರತಿಗೆ ಮಗುಳೊಪ್ಪಿಸಿದೆನಪ್ಪೊಡೇಗೆಯ್ದುಮಾಂ ಪ್ರಾಣಿಗಳಂ ಕೊಲಲ್ವೇೞ್ಕುಂ ಕೊಂದೊಡೆನ್ನುಮನೀ ಮಾರ್ಗದಿಂ ಪೆಡಂಗೆಯ್ಯುಡಿಯೆ ಕಟ್ಟಿ ಪುರಜನಮುಂ ಪರಿಜನಮುಂ ಬಂಧುಜನಮುಂ ನೆರೆದು ಬರೆ ಬಾಟಿವಾಟಿ ಕೊಲ್ಲದೆ ಮಾಣರದು ಕಾರಣದಿಂ

ಕೊಲೆಯಂ ಮಾಣ್ಕೊಲ್ವರೊಳ್ಕೂಡದಿರು ಕೊಲಿಸದಿರ್ ಜೀವಸಂಘಾತಮಂ ನಿ।
ರ್ಮಳಸದ್ಧರ್ಮಾನುರಾಗೋನ್ನತ ವಿನುತದಯಾಮೂಲಸಮ್ಯಕ್ತ್ವಮಂ ನಿ।
ಶ್ಚಳಮಿಂಬಿಂ ತಾಳ್ದು ನೀನೆಂದೆನಗಭಿನುತಮಂ ಪೇೞ್ದನಾ ಕೀರ್ತಿಲಕ್ಷ್ಮೀ ।
ನಿಳಯ ಯೋಗೀಂದ್ರಹಂಸಂ ಪರಮಜಿನಮತಾಂಭೋಜಿನೀರಾಜಹಂಸಂ ॥೫೪॥

ಇದು ಸಮಸ್ತ ವಿನೇಯಜನವಿನುತ ಶ್ರೀವರ್ಧಮಾನಮುನೀಂದ್ರವಂದ್ಯ
ಪರಮಜಿನೇಂದ್ರ ಶ್ರೀಪಾದಪದ್ಮವರಪ್ರಸಾದೋತ್ಪನ್ನ
ಸಹಜಕವೀಶ್ವರ ಶ್ರೀಶಾಂತಿನಾಥ ಪ್ರಣೀತಮಪ್ಪ
ಸುಕುಮಾರಚರಿತದೊಳ್ ನಾಗಶ್ರೀಯ
ಪಂಚಾಣುವ್ರತವರ್ಣನಂ
ಷಷ್ಠಮಾಶ್ವಾಸಂ

೭. ಸಪ್ತಮಾಶ್ವಾಸಂ

ಶ್ರೀ ದೊರೆಕೊಳ್ಗಿಂದು ವಚಃ ।
ಶ್ರೀ ದೊರೆಕೊಳ್ಗಿಂದು ಸೌಖ್ಯಸಂಪದಮುಕ್ತಿ ॥
ಶ್ರೀ ದೊರೆಕೊಳ್ಗಿಂದಾಶೀ
ರ್ವಾದಂಗೊಟ್ಟಂ ಸರಸ್ವತೀಮುಖಮುಕುರಂ ॥೧॥

ವ॥ ಎಂಬುದುಮಾ ಕೊಲ್ಲದವ್ರತಮೊಂದುಮುೞಿಯೆ ಬೞಿಯುಮುೞಿದ ವ್ರತಂಂಗಳೆಲ್ಲಮನಾ ನಾಣಿಲಿ ಸವಣಂಗೆ ಕೊಟ್ಟು ಬರ್ಪಂ ಬಾಯೆಂದು ಕಿೞಿದಂತರಂ ಬರ್ಪನ್ನೆಗಂ

ಕವಿತರ್ಪ ನೆರವಿಯಂ ಕನ ।
ಲವೋರಿಗಳ್ಕಂಡು ಬೆರ್ಚಿ ಕೆಂಗೋಲ್ಲೊಂಡೋ ॥
ಡುವುದನಿದೇನೆಂದಾ ಕೊ ।
ಡವಿ ಬೆಸಗೊಳೆ ನಾಗಶರ್ಮನದನೞಿದೆಂದಂ ॥೨॥

ಎನಗಾರ್ ಬಲ್ಲಿದರೆಂದು ವಂಗವಿಷಯಾಧೀಶಂ ಭರಂಗೆಯ್ದು ಭೋಂ ।
ಕೆನೆ ಮೇಲೆತ್ತಿ ಕಱುತ್ತು ಮಾಣದೆನಸುಂ ವಜ್ರಾಯುಧಂ ಚಂದ್ರವಾ ॥
ಹನನೊಳ್ ಕಾದಲೊಡರ್ಚಿ ಬಂದು ವಿಷಯಾಂತರ್ಭಾಗದೊಳ್ಬಿಟ್ಟು ತೊ ।
ಟ್ಟನೆ ಬೂತಟ್ಟಿದೊಡಟ್ಟಿದಂ ಬಳನನಿಂತೀ ಭೂಪನಾಕ್ಷೇಪದಿಂ ॥೩॥

ವ॥ ಅಂತು ಮೇಲೆವಂದು ಬೂತಟ್ಟಿದ ವಜ್ರಾಯುಧನ ಮೇಲೆ ಹಸ್ತ್ಯಶ್ವ ರಥ ಪದಾತಿ ಚಾತುರ್ವಳಸಹಿತಂ ಬಳನೆಂಬ ದಂಡಾದಿನಾಥನನೀತನಟ್ಟಿದೊಡಾ ಇರ್ವರ್ಗಂ ಸಮರಾಡಂಬರಮಳುಂಬಮಾಗೆಯುಭಯಬಲಂಗಳುಂ ಮಲಮಲ್ಲಾಮಲ್ಲಿಯಾಗಿ ಕಾದುವಾಗಳ್ ತಕ್ಷಕನೆಂಬಾಪ್ತಚರನಲ್ಲಿ ತಲ್ಲಣಿಸಿ ನಿಲಲಾಱದೊಲ್ಲನುಲಿದೋಡೈತಂದಲ್ಲಿಗೆ ವಂದು ಚಂದ್ರವಾಹನನರೇಂದ್ರನಂ ಕಂಡು

ಬಳನಂ ವಜ್ರಾಯುಧಾಂಕಂ ದ್ವಿರದಘಟೆಯನೊಡ್ಡೊಡ್ಡಿ ತಳ್ತಿರ್ದ ಮೇಘಾ ।
ವಲಿಯಂ ಪರ್ಬಿರ್ದರಮ್ಯಪ್ರಕರಮನಖಿಳಧ್ವಾಂತದುರ್ಕ್ಕಂ ಸ್ವಬಾಹಾ ॥

ಬಲದಿಂ ಪಂಚಾಸ್ಯನೆಂತಾ ಪ್ರಳಯದವನನೆಂತುಗ್ರದಾವಾಗ್ನಿಯೆಂತು ।
ತ್ವಳಜಾಳಾರಾತಿಯೆಂತಂತಿರೆ ಸಮರದೊಳೋರಂತೆ ಮಾಱಾಂತು ಗೆಲ್ದಂ ॥೪॥

ವ॥ ಎಂದು ಬಿನ್ನಪಂಗೆಯ್ದ ಚರನ ಬಿನ್ನಪದಿಂ ಬಿನ್ನನೆ ಮೊಗಮಂಮಾಡಿಬಿಲ್ಲುಂ ಬೆಱಗುಮಾಗಿರ್ಪುದುಮಾ ಪ್ರಸ್ತಾವದೊಳ್

ಅನುವರದೊಳ್ ವಜ್ರಾಯುಧ ।
ನನಿಕ್ಕಿ ವಿಕ್ರಾಂತದಿಂದೆ ವಿಜಯಧ್ವಜಮಂ ॥
ತನಗೆತ್ತಿಸಿದಂ ದಂಡಾ
ಧಿನಾಯಕಂ ಬಳನಜೇಯ ನಿಜಶೌರ್ಯಬಳಂ ॥೫॥

ವ॥ ಎಂದು ಲೇಖವಾಹನಂ ಚಂದ್ರವಾಹನಂಗುತ್ಸಾಹದಿಂ ವಾರ್ತೆಯಂ ಪೇೞ್ವುದುಮಂಗಚಿತ್ತಮಂ ಕೊಟ್ಟುಂ ಮುನ್ನೆ ಬಂದೀತನೆನಗೆ ಸೇನಾಭಂಗಮುಂ ಮನೋಭಂಗಮುಮಪ್ಪಂತು ಪುಸಿವಾರ್ತೆಯಂ ಪೇೞ್ದನೀ ಪುಸಿವನಂ ಕುಸಿಯೊತ್ತಿ ಬಟ್ಟೆಯೊಳ್ ಪೆಟ್ಟಮೆಟ್ಟಿದು ಬಳಸಿದ ದಸಿಯೊಳ್ತೆಗೆಯಿಮೆಂದು ಚಂದ್ರವಾಹನ ನರೇಂದ್ರಂ ಪೇೞೆ ತಳಾಱರ್ತಕ್ಷಕನಂ ಕನಲವೋರಿಗಳ್ ಪೂಡಿ ಪೆಟ್ಟಮೆಟ್ಟಿದಪರೆಂಬುದುಂ ನಾಗಶ್ರೀಕನ್ಯಕೆ ಕರುಣರಸಾರ್ದ್ರಹೃದಯೆಯಾಗಿ ಋಷಿಯಕೋರ್ಟ್ಟ ಪುಸಿಯದ ವ್ರತಮಂ ಬಿಸುಟೆನಪ್ಪೊಡೆ ಪುಸಿಯದಿರಲ್ಬಾರದು ಪುಸಿದೆನಪ್ಪೊಡೆನ್ನುಮನಸೆಯೊಳೆ ಪೂಡಿ ಪೆಟ್ಟಮೆಟ್ಟಿದು ಕೊಲ್ವರೆಂಬುದುಮಂತಾದೊಡಾ ವ್ರತಮುಮಿರ್ಕೆ ಮತ್ತಿನ ಜೊತ್ತಿಸಿ ಕೊಟ್ಟಸಿತ ವ್ರತಂಗಳನಾಜಿನಮುನಿಗೆ ಕೊಟ್ಟು ಬರ್ಪಮೆಂದು ಕಿೞಿದಂತರಂ ಬರ್ಪಾಗಳ್

ದಬ್ಬಳಮಂ ಬೆರಲ್ಗಳೊಳಡಂಗುವಿನಂ ನಡೆಪೊಯ್ದು ಮೂಳೆಯಂ ।
ದಬ್ಬುಕದಿಂದೆ ನುಗ್ಗುನುಱಿಯಪ್ಪಿನೆಗಂ ಬಿಡೆ ಬೀಸಿ ಪೊಯ್ದು ಕ ।
ಣ್ಣುಗ್ಬೆಯ ಗುಳ್ಳೆಯಂತೆ ಪೊಱಪಾಯ್ವಿನಮಟ್ಟಳೆವೊಯ್ದೊಡೊರ್ವನಂ ।
ಬೊಬ್ಬಿಱಿದಾರ್ದು ಕೊಲ್ವ ಕೊಲೆಯಂ ಹರಿಣೇಕ್ಷಣೆ ಕಂಡು ಭೀತಿಯಿಂ ॥೬॥

ತಂದೆಯನೆಂದಳ್ಪೇೞಿಮಿ ।
ವಂದಿರ್ನೆರೆದಿವನನಿಂತು ನಾನಾವಿಧದಿಂ ।
ಕೊಂದಪರಿದಾವಕಾರಣ ।
ದಿಂದಮೊ ಬೆಸಗೊಳ್ಳಿಮೆಂಬುದುಂ ವಿಪ್ರವರಂ ॥೭॥

ವ॥ ತಳಾಱರಂ ಬೆಸಗೊಂಡು ಬಂದು ಮಗಳಿಂತೆಂದು ಪೇೞಲ್ ತಗುಳ್ದಂ

ನೆಗೞ್ದ ಸುಮಿತ್ರನೆಂಬ ಪರದಂಗೆ ಮಗಳ್ವಸುಕಾಂತೆಯೆಂಬೊಳೇ ।
ಪೊಗೞ್ವುದಶೇಷ ರೂಪವತಿ ಮೆಲ್ಲಗೆ ತನ್ನಯ ಕನ್ನೆ ಮಾಡದಿಂ ।

ಮೃಗಶಿಶುನೇತ್ರೆ ತಾಂ ಪುಗುವ ಬೇಗೆದಿನೊಯ್ಯನೆ ಬಂದು ಬಾಗಿಲಂ ।
ನುಗುಳ್ವಳ ನೆತ್ತಿಯಂ ಪಿಡಿದುದಾಕ್ಷಣದೊಳ್ಮುಳಿಸಿಂ ಮಹೋರಗಂ ॥೮॥

ವ॥ ಅಗಳಾ ಸುಮಿತ್ರಂ ಮಿತ್ರಕಳತ್ರ ಸಹಿತವಾಗಳ್ಬಾಯಱಿದು ತತ್ಸತಿ ಪರಾಸುವಾದಳೆಗೆತ್ತು ಪರೇತವನಕ್ಕೆ ಕೊಂಡುಪೋಪುದುಮಲ್ಲಿಯೊರ್ವಂ ಗರುಡ ನಾಭಿಯೆಂಬ ಗಾರುಡಿಗಂ ತತ್ಕನ್ಯಕೆಯಾಯುಷ್ಯಂ ಬರ್ಪಂತೆ ಬಂದೀ ಬಿಂಬೋಷ್ಠೆಯಂ ಸರ್ಪದಷ್ಟೆಯನೆನಗೆ ಮದುವೆಮಾಳ್ಪಿರಪ್ಪೊಡೆ ನಾಳೆ ನೇಸರ್ಮೂಡದ ಮುನ್ನಮೆ ವಿಷಾಪಹಾರಂ ಮಾಡಿದಪ್ಪೆನಿಂದಿನೊಂದು ರಾತ್ರಿಯುಮಂ ಪರೇತವನಸ್ಥಾನದಿಂ ತೊಲಗಲೀಯದೆ ಕಾಪಂ ಸುವಿಧಾನಮಾಗೆ ಮಾಡಿಮೆಂಬುದುಂ ಸುಮಿತ್ರನಂತೆ ಗೆಯ್ವೆನೆಂದು ನಾಲ್ವರ್ ಸಾಹಸ ಭಟರಪ್ಪ ಸುಭಟರ್ಗೆ ನಾಲ್ಸಾಸಿರ ಪೊನ್ನಂ ನುಡಿದು ಜಾವಮಿರಿ(ಸಿ) ಸಾಸಿರದೀನಾರದ ಸಮಕಟ್ಟಿನ ನಾಲ್ಕು ಪೊಟ್ಟಳಿಗೆಯುನೊಂದೆಮಾಡಿ ನಾಲ್ವರ ನಡುವಿರಿಸಿ ಮನೆಗೆ ಪೋಪುದುಮವರೊಳೊರ್ವನಾ ಮೂವರುಮಂ ಬಂಚಿಸಿ ಬಿಟ್ಟು ನೋಡಿಯೊಂದು ಪೊಟ್ಟಣಮನಡಗಿಸಿರ್ಪುದುಂ ಮಱುದಿವಸಂ ಗರುಡನಾಭಿ ಬಂದು ಕನ್ನೆಯಂ ಸಚೇತನೆಮಾಡಿ ಮದುವೆನಿಲ್ವುದುಂ ನುಡಿದನಲ್ಲದೆ ಪೊನ್ನಂ ಮುನ್ನಮೆ ಕೊಟ್ಟೆನಿಲ್ಲ ಇವರೀಯರ್ಥಮಂ ತಮ್ಮೊಳ್ಮೋರೊರ್ವರ ವಂಚಿಸಿಯಮೆಲ್ಲಮೊಂದಾಗಿ ಛಿದ್ರಿಸಲಱಿಯರೆಂದುವಾನವರ ಮನದ ಪುಱುವಗೆಯನಱಿಯದೆ ಲೋಗರೆ ವಂಚಿಸಿದರಾಗಲೆವೇಟ್ಕುಮೆಂದರಸರ್ಗೆ ಬಿನ್ನಪಂಗೆಯ್ವುದುಮರಸಂ ತನ್ನ ತಳಾಱನಪ್ಪ ಚಂಡಕೀರ್ತಿಯಂ ಬರಿಸಿ ಮೂಱು ನಾಲ್ಕು ದಿವಸದೊಳೀ ಪೊನ್ನ ನಾವಪ್ರಕಾರದೊಳ- ಮಾಗಿಯುಮಾರಯ್ದು ತಂದು ಕುಡುವುದಂತಲ್ಲದೊಡೆ ಕಳ್ಳಂಗೆ ಮಾಳ್ಪ ನಿಗ್ರಹಮಂ ನಿನಗೆ ಮಾಳ್ಪೆನೆಂದರಸನಾಗ್ರಹಿಸಿ ನುಡಿವುದುಂ ಚಂಡಕೀರ್ತಿಯಾ ನಾಲ್ವರುಮಂ ತನ್ನ ಮನೆಗೊಡಗೊಂಡುಪೋಗಿ ಬಿನ್ನನಾಗಿರ್ಪುದುಮಾತನ ಮಗಳ್ ಸುಮತಿಯೆಂಬ ಗಣಿಕೆ ಕಂಡಿದೇನೆಂದು ಬೆಸಗೊಂಡೊಡೆ ಚಂಡಕೀರ್ತಿಯದೆಲ್ಲಮಂ ಜಲಕ್ಕನಱಿಪೆ

ಏಳಿದನಂತೆ ಬಾಯಱಿದು ಚಿಂತಿಸುವಂದಮಿದಾವುದುರ್ವರಾ।
ಪಾಳನನಿಟ್ಟ ವಾಸರಚತುಸ್ತ್ರಿಕ ಮಾತ್ರದೊಳಾವುಪಾಯದಿಂ ।
ಮೇಳಿಸಿ ತಂದುಕೊಂಡು ಕುಡುವೆಂ ನಿನಗರ್ಥಮನೆಂದು ಲೋಳನೀ ।
ಳಾಳಕಿ ಪೂಣ್ದು ತಂದೆಯ ಮನಃಕ್ಷತಮಂ ಮನದಿಂದಗಲ್ಚಿದಳ್ ॥೯॥

ವ॥ ಅಂತೇಕಾಂತದೊಳ್ ತಮ್ಮ ತಂದೆಯ ಮನೋಗ್ಲಾನಿಯಂ ಪಱಿವಡೆ ನುಡಿದು

ಮನಮೊಲ್ದು ತನ್ನ ಗುಣಣೆಯ ।
ಮನೆಯಂ ಗಜಗಮನೆ ಪೊಕ್ಕು ತದ್ಭಟರಂ ಮೆ ॥
ಲ್ಲನೆ ಬೇಱೆವೇಱೆ ಬರವೇ ।
ಱ್ದಿನಿತಾನುಂ ತೆಱದ ಲಲ್ಲೆಯಿಂ ಜೊತ್ತಿಸಿದಳ್ ॥ ೧೦॥

ಪದೆಪಂ ಕೆಯ್ತದೊಳುಂಟುಮಾಡಿ ನಯಮಂ ವಾಗ್ವೃತ್ತಿಯೊಳ್ ತೋಱಿ ನೋ।
ಟದೊಳಾದಟ್ಟಿಱಿನಪ್ಪುಕೆಯ್ದಸಕದೊಳ್ ಮೆಲ್ಪಂ ಪಳಂಚಲ್ವಿ ಕ ।
ಣ್ಬದಿರೊಳ್ ಕಾಮಿನಿ ಕಾಮರಾಗರಸಮಂ ತಟ್ಟೈಸಿ ತಳ್ವೊಯ್ದು ಮೇ ।
ಳದೊಳಂ ಪೊಕ್ಕನಸುಂ ಮನಂಗೊಳಿಸಿದೊಳ್ ನಾನಾಪ್ರಕಾರಂಗಳಿಂ ॥೧೧॥

ಎನಗೆನಗೆ ಸೋಲ್ತಳೆಂಬಂ ।
ತೆ ನೋಡಿ ನೋಟದೊಳಲಂಪನಾರ್ಜಿಸಿ ಕಾ ॥
ಮಿನಿ ಕಾಮಪಾಶದಂತೆಯಿ ।
ರೆ ನಾಲ್ವರುಂ ಭಟರ ಮನಮನುಱಿ ಸೆಱಿವಿಡಿದಳ್ ॥೧೨॥

ಅಕ್ಕರ ॥ ನೋಡದನ್ನೆಗಂ ನೋ(ವ)ಕ್ಕುಮಲ್ದೆ ನುಡಿಯದಿರ್ಪನ್ನೆಗಂ ಧೈರ್ಯಮಕ್ಕುಂ ।
ಕೂಡದನ್ನೆಗಂ ಕೂಡದಂ(ತಿ)ರಲಕ್ಕುಂ ಬಸಮಾಗದನ್ನೆಗಂ ಬಳಸಲಕ್ಕುಂ ।
ನೋಡಿ ನೋಯದೆ ನುಡಿದು ಕಾತರಿಸದೆ ಕೂಡೆ ಲಲ್ಲಯಿಸದೆ ।
ನೋಡ ಬಸಮಾಗಿ ಬಸಮಱಿದು ಬಳಸದೆ ಬಱಿಕೆಯ್ದು ಬದ್ದೆಯನೊಲಿಪನಾವಂ ॥೧೩॥

ವ॥ ಎಂಬುದುಂ ನಿತಂಬಿನಿ ನಾನಾಪ್ರಕಾರದ ತತ್ತುಪಣಂಗಲಿಂ ಜೊತ್ತಿಸಿ ವಶೀಕೃತಂ ಮಾಡಿ ಮಱುದಿವಸಂ ಆ ನಾಲ್ವರುಮನೊಂದೆಡೆಗೆ ವರಿಸಿ ಕುಳ್ಳಿರಿಸಿ

ಧನಮಂ ನೀಮೆಲ್ಲಮಿರ್ದಂತಿರೆ ಪೊಱಗಣವರ್ಬಂದು ಕೊಳ್ವಂದು ವಿಶ್ವಾ ।
ವನಿಚಕ್ರಕ್ಕಕ್ಕುಮತ್ಯದ್ಭುತತರಮಿದಱೊಳ್ ತೊಟ್ಟ ವೃತ್ತಾಂತಮಂ ನೀ ।
ಮೆನಗೀಗಳ್ಪೇಱಿಮಾರಾರ್ತೊಲಗಿದರದನಾರ್ಮುನ್ನ ಕೈಕೊಂಡಿರಾ ಕಾ ।
ಪಿನೊಳಿರ್ದರ್ವಂದು ನಿಮ್ಮೊಳ್ ನುಡಿದ ಮನಜರಾರೆಂಬುದಂ ನೀಮಮೋಘಂ ॥೧೪॥

ಅಕ್ಕರ ॥ ನುಡಿದ ಸುಮತಿಯ ನುಡಿಯನಿಂಬಿನೆ ಕೇಳ್ದು ದಷ್ಪೆಯಂ ಕಾದಿರ್ದೆ
ನೆಂದನೊರ್ವಂ ।
ನಡುವಿರುಳ್ಪೋಗಿ ವಣಿಜರನೊಟ್ಟಯ್ಸಿ ವಂಚಿಸಿ ಕುಱಿದಂದೆನೆಂದನೊರ್ವಂ ।
ಪಿಡಿದು ತಂದಿತ್ತ ಕುಱೆಯನಾಮಱಿ ಕೊಂದು ಪಿಶಿತಮಂ ಮಾಡಿದೆನೆಂದನೊರ್ವಂ ।
ನುಡಿಗೆ ಮೆಚ್ಚಿಟ್ಟು ನೋಟಕ್ಕೆ ಬಸಮಾಗಿ ಮಡದಿಯೊಡವಟ್ಟೆನೆಂದನೊರ್ವಂ ॥೧೫॥

ವ ॥ ಅಂತಾ ನಾಲ್ವರುಂ ನಾಟ್ವರ್ತನಮಿಲ್ಲದುಳ್ಳುದನುಳ್ಳಂದದೊಳಱಿಪುವುದು ಮಾಗಳಾ ಸುಮತಿ ತಾಂ ಸುಮತಿಯಪ್ಪುದಱಿನವರ ಬಗೆಯನಱಿದುಪಾಯಮನಾಗಳೆ ಚರ್ಚಿಸಿ

ಇಂದೆನಗೆ ನಿದ್ದೆ ಬಾರದು ।
ಬಂದಪುದಾಲಸ್ಯಮಸದಳಂ ನೀಮೆನಗೊಂ ।
ದೊಂದು ಕಥೆಗಳನಪೂರ್ವಮ ।
ನಂದಮಗುಂದಲಿಸೆ ಪೇೞ್ದು ಪೊತ್ತಂ ಕಳೆಯಿಂ ॥೧೬॥

ಎಂಬುದುಮಾವಾವ ಕಥೆಗಳನಱಿವೆವಲ್ಲೆವು ನೀಂ ಪೇೞ್ವೊಡೆ ಕೇಳಲ್ಬಲ್ಲೆವು ಎಮಗೆ ನೀನೆ ಪೇೞಲ್ವೇೞ್ಕುಮೆಂಬುದುಂ ಸುಮತಿ ಚಿತ್ರಕಥೆಯನಿಂತೆಂದು ಪೇೞಲ್ತಗುಳ್ದಳ್ ಪಾಟಳೀಪುತ್ರಮೆಂಬ ಪೊೞಲೊಳ್ ವಸುದತ್ತನೆಂಬ ಪರದನಾತನ ಮಗಳ್ ಸುದಾಮೆಯೆಂಬ ಕನ್ಯೆಯತ್ಯಂತರೂಪ ಲಾವಣ್ಯಭಾಗ್ಯಸೌಭಾಗ್ಯಸಂಗೆ(ಗ)ಂಗೆಯಂ ಮಿಾವಾಗಳ್ ನೆಗಳ್ ಬಂದು ಕಾಲಂ ಪಿಡಿದೊಡೆ ಬಿಡಿಸಲಱಿಯದೆ ಸಿಡಿಮಿಡಿವಂದು ತಡಿಯೊಳ್ ಮಿಾಯುತ್ತಿರ್ದ ತಮ್ಮ ಭಾವನಂ ಧನದೇವನಂ ಕರೆದೀ ನೆಗೞಿಂ ಬಿಡಿಸೆಂಬದುಮಾಕೆ ತನಗೆ ನಾದುನಿಯಪ್ಪುದಱಿಂ ನಗೆಮಾಡಿ ನಿನ್ನ ವಿವಾಹದಿವಸದ ಪ್ರಥಮ ಪ್ರಸಾಧಮನೆನಗೆ ತೋಱುವೆಯಪ್ಪೊಡೆ ಬಿಡಿಸುವೆನೆಂದೊಡಂಬಡಿಸಿ ಬಿಡಿಸಿದಿಂ ಬೞಿಯಂ ಕತಿಪಯದಿನಂಗಳ್ ಕೞಿಯೆ ಸುಧಾಮೆಗೆ ಪರಿಣಯನ ಪ್ರಾರಂಭಮಾಗೆ ವಿವಿಧ ಮಣಿಭೂಷಣಾಲಂಕರಣೆಯಾಗಿ ತನ್ನ ಪ್ರತಿಜ್ಞೆಯಂ ನೆನೆದು ಬಯ್ಗಿನ ಬೇಗಂ ಮೆಯ್ಗರೆದು ಭಾವನಿರ್ದ ಭವನಕ್ಕಾಗಿ ಬರ್ಪಾಗಳ್

ಪಸಿದೊಡೆ ಕಂದಿ ಕುಂದಿ ದೆಸೆಗವ್ವಳಿಸುತ್ತುಮಿದಿರ್ಚಿ ಸಾರ್ಚಿ ರಾ।
ಗಿಸಿ ಪಿರಿದೊಂದು ವಸ್ತು ದೊರೆಕೊಂಡುದು ಬಾಯ್ಪುರೆ ಬರ್ದನೆಂದು ರ ।
ಕ್ಕಸನಿದಿರಿರ್ದು ಕೊಲ್ವಪದದೊಳ್ ನಿಜವೃತ್ತಕಮಂ ಸಮಂತು ಸೂ।
ಚಿಸಿ ಮಗುಳ್ದಿಲ್ಲಿಗಾಂ ಬೞಿಕೆ ಬಂದಪನೀಗಳೆ ನಂಬು ನಿಶ್ಚಯಂ ॥೧೭॥

ವ॥ ಎಂಬುದಮಾ ಬ್ರಹ್ಮರಾಕ್ಷಸನಿವಳ ಮಾತಂ ನಂಬಿ ನಂಬುಗೆಯಂ ಕೊಂಡು ಬೆಂಬೞಿಯನೆ ತಗುಳ್ದು ಪೋಪೆಂ ನುಡಿದು ತಪ್ಪಿದೊಡೆ ಪಿಡಿದು ನುಂಗ ಲಱಿಯದೊನಲ್ಲೆನೆಂದು ರೂಪುಗರೆದು ಪೆಱಪೆಱಗನೆ ಬರುತಿರ್ದ(ನ)ನ್ನೆಗಂ ಮುಂದೊಂದೆಡೆಯೊಳ್

ಎನಗಿಂದಿಗಾಱುತಿಂಗಳ್ ಸಮನಿಸದಪುದಿಲ್ಲೆಲ್ಲಿಯುಂ ಬಂದಿಮಂಚಲ್ ।
ಖನನಪ್ರಾರಂಭ ಚೌರ್ಯಾದಿಗಳನಶನಮಿಾಗಳ್ ಚತುರ್ವಾಸರಂ ಭೋ । ಜನಮಾತ್ರಂ
ಬಂದೊಂಡಿಂದಾಂ ಸಕಲವಿಭವಮಂ ಪೆತ್ತನೆಂದೆಂದು ತನ್ನೊಳ್ ।
ನೆನೆಯುತ್ತುಂ ಬರ್ಪಿನಂ ತಸ್ಕರನನಧನನಂ ನೀಡಱಿಂ ನೋಡಿ ಕಂಡಳ್ ॥೧೮॥

ವ॥ ಅಂತು ಗೆಂಟಱಿೊಳ್ ನೋಡಿ ಕಂಡು ತೊಲಗಿ ಪೋಪುದುಂ ಮಿಂಚಿನ ಗೊಂಚಲನೆ ಸಂಚಳಿಸಿ ಪೊಳೆವ ರತ್ನಾಭರಣಂಗಳ ಪೊಳೆಪಂ ಕಂಡಿದೇನಾ ನುಮೊಂದಾಶ್ಚರ್ಯಮಾಗಲ್ವೇೞ್ಕುಮೀಗಳಿನ ಪೊತ್ತಪ್ಪುದು ಖೇಚರ ನಿಶಾಚರ ದ್ಯುಚರ ಸಂಚಾರಮಲ್ಲದೆ ಭೂಚರಗೋಚರಮಲ್ಲೆಂದು ಮುಟ್ಟೆವರ್ಪುದುಮಾ ಕನ್ನೆ ತನ್ನ ಪ್ರತಿಜ್ಞಾ ಪ್ರಪಂಚಮಂ ಸವಿಸ್ತರಂ ಪೇೞ್ದು

ಎಡೆಮಡಗದಿಂದೆ ನಿನ್ನಿ ।
ರ್ದೆಡೆಗೀಗಳೆ ಬರ್ಪನೆಂದು ನಂಬುಗೆಗೊಟ್ಟಾ ॥
ಎಡೆಯಿಂದೆ ತಳರ್ದು ಕಿಱಿದೆಡೆ ।
ನಡೆವುದುಮಡಹಡಿಸಿ ಮಸಗಿ ಬಿಡೆ ಜಡಿಯತ್ತುಂ ॥೧೯॥

ವ|| ಬೀದಿ ಬೀದಿಗಳೊಳ್ ಸೋದಿಸಿ ಕಾವ ತಳಾಱಂ ಕಂಡು

ಈ ಪೊತ್ತಿನೊಳೀ ಪೆಣ್ಗೊ ।
ಸೀ ಪಸದನಮೆಸೆಯೆ ಪೋಪುದೆಲ್ಲಮಿದಘಟ ॥
ವ್ಯಾಪಾರಮಿವಳ್ ಪರಪುರು ।
ಷಾಪೇಕ್ಷಣೆಯಕ್ಕುಮೆನುತುಮಂತರ್ಗತದೊಳ್ ||೨೦||

ಏನೀ ಪೊತ್ತೆತ್ತವೋಪೈ ಸಿತಗೆ ಮಗುಳೆ ಮಗುಳೆನುತ್ತೆಯ್ದೆವಂದಾಗಳೆಂದಳ್ ।
ನೀನೆನ್ನಂ ಕಾಡವೇಡಾಂ ತೊಡರ್ದವಸರದೊಳ್ ಪ್ರತ್ಯಯಂಗೆಯ್ದೆನೊರ್ವಂ ।
ಗೇನುಂ ತಳ್ವಿಲ್ಲದಾನೀಗಳೆ ಚಟುಲತೆಯಿಂ ನಿನ್ನನೆಯ್ತರ್ಪೆನೆಂ ದೇ ।
ನಾನುಂ ಸೂರುಳ್ಗಳಿಂ ನಂಬಿಸಿದೊಡನುಚರಂ ಕೇಳ್ದಿದಂ ತನ್ನೊಳೆಂಗುಂ ||೨೧||

ವ|| ಆನೀಗಳೀಕೆಯಂ ಬಿಡೆ ಜಡಿದೊಡಗೊಂಡುಯ್ದನಪ್ಪೊಡೆ ತುಡುಗೆಗಾಟಿಸಿ ಜಡಿದನೆಂಬ ಕಳಕಳದಿಂದೆನಗೆ ಕಳವು ಪೊರ್ದುಗುಮೆಂದಿವಳೆಲ್ಲಿಗೆ ವೋದಪಳೆಂಬುದಂ ಬೆನ್ನನೆ ಪೋಗಿ ನೋೞ್ಪೆನೆಂದು ಬೞಿಯನುೞಿಯದೆ ಬಂದಿಂತಾ ಮೂವರುಂ ನೋಡುತ್ತುಮಿರ್ದನ್ನೆಗಮಾ ಕನ್ಯೆ ಧನದೇವನ ಪಡುವೋವರಿಯ ಮನೆಯನೆಯ್ದಿ ಪಡಿಯಂ ಮಿಡಿದೊಡೆಚ್ಚತ್ತು ಪಡಿಯಂ ತೆಱೆದು ನೋಡಿ ಸುದಾಮೆಯಪ್ಪುದನಱಿದು

ಮಣಿಭೂಷಣಂ ॥ ಸದಮಳಮಣಿಭೂಷಿತೆ ನೀನೀ ನಟ್ಟನಡುವಿರಳ್ ।
ಕುದುಗುಳಿತನದಿನೀ ಯೆಡೆಗೆ ಪೊಲ್ಲದು ವಂದೆ ಎಂಬುದುಂ ।
ಮದುವೆಯ ದಿವಸದಂದು ಬರವೇೞ್ಪುದು ನೀನೆಂದೆನ್ನನಂದು ನೀಂ ।
ಚದುರ್ಗಿಡೆ ನುಡಿದೊಡಾಂ ನುಡಿದ ನನ್ನಿಗೆ ವಂದೆಂ ।೨||

ವ|| ನಿನ್ನ ಮೆಚ್ಚಿದು ಗೆಯ್ ಎಂದು ಪರಿಚ್ಛೇದಿಸಿ ನುಡಿವುದುಂ

ಸೋದರಮಾವನ ಮಗಳೆನೆ ।
ನಾದುನಿಯೆಂದಂದು ನಿನ್ನಾನಾಂ ಕಾಡಿದೆನಿಂ ॥
ತೀ ದೊರೆಯ ನನ್ನಿ ಸನ್ನುತ ।
ಮಾದುದನಾನಿಂತು ನನ್ನ ಮೆಯ್ಯೊಳೆ ಕಂಡೆಂ ||೨೩||

ತಳವಱ ಕಳ್ಳರ ಬಾರಿಯೊ ।
ಳೊಳಗಾಗದೆ ನಿನ್ನ ಬರ್ದುಕಿ ಬಂದಂದಮಿದಾ ॥
ರಳವೀಗಳುಂಬಮಂಬುಜ ।
ದಳಾಕ್ಷಿ ಪೋಗಬ್ಬೆ ಬೇಗಮೆಂಬುದುಮಾಗಳ್ ||೨೪||

ವ ॥ ಸುದಾಮೆ ವಿಸ್ಮಯಂಬಟ್ಟು ಧನದೇವನ ಮುನ್ನಿನ ಲಂಪಳಿಕೆಯುಮನೊಲ್ದು ಬಂದೆಡೆಯೊಳೊಲ್ಲದೆ ಮೆಚ್ಚಿ ಪೊಗೞ್ದು ಬೋಗಲ್ವೇೞ್ದುದುಮಂ ನೆನೆಯುತ್ತಂ ಬರ್ಪಾಗಳಾ

ಮೂವರುಮಾಕೆಯ ಸತ್ಯಮುಮನಾತನ ಶೌಚಮುಮಂ ಮೆಚ್ಚಿ ಪೊಗಱುತ್ತುಂ ಪೋಗಿ ಮುನ್ನಮಿರ್ಪೆಡೆಗಳೊಳಿರ್ದರನ್ನೆಗಮಾ ಸುದಾಮೆಯುಂ ತಳಾಱನಸಱಸುತ್ತಂ ಬಂದು ನನ್ನಿಯಂ ಕೊಟ್ಟುದಱಿಂ ನಿನ್ನಲ್ಲಿಗೆ ವಂದೆ ನೀನಿನ್ನೆನ್ನಂ ಮೆಚ್ಚುಕೆಯಿಮೆಂಬುದುಂ ಮುನ್ನಮಾಂ ನಿನ್ನನೆನ್ನಳೆಂದಱಿಯದೆ ಪೊಲ್ಲಮಾನಸೆಯೆಂದೆ ಬಗೆದು ಪಿಡಿದೆಂ ನಿನ್ನನ್ನರ್ಮಹಾಸತಿಯರಾರುಮಿಲ್ಲ ಬೇಗಂ ಪೋಗೆಂಬುದುಮಲ್ಲಿಂ ಬಂದು ಕಳ್ಳನಂ ಕಂಡು

ಇವು ಲಕ್ಕೆ ಕೋಟಿ ಬೆಲೆಕೆ ।
ಯ್ವ ದಿವ್ಯಾಭರಣಮಿಂತಿವಂ ನೀಂ ಕೊಳ್ಳೆಂ ॥
ದವಯವದಿಂ ನುಡಿದೊಡೆ ನೀಂ ಸ ।
ತ್ಯವಾದಿಯ್ಯೆಯೆಂದು ಪೊಗಟ್ಟು ಪೋಗಲ್ವೇಳ್ಕುಂ ॥ ೨೫॥

ವ ॥ ಅಂತಾಯೆಡೆಯಿಂ ರಕ್ಕಸನಿರ್ದೆಡೆಗೆವಂದು ನೀನೆನ್ನಂ ತಿನ್ನೆಂಬುದುಮಾ ರಕ್ಕಸಂ ಬೆಕ್ಕಸಂಬಟ್ಟು

ನೀಂ ನಿನ್ನ ನುಡಿದ ನುಡಿವಳಿ ।
ಯಂ ನೆಱಪಿದೆ ನಿನ್ನ ನನ್ನಿ ನಿನ್ನಯ ಮೆಯ್ಯೊಳ್ ॥
ಸನ್ನಿದಮಾದುದು ಪೋಗೆನೆ ।
ಕನ್ನೆಯುಮಾತ್ಮಾಲಯಕ್ಕೆ ಬೇಗಂ ಪೋದಳ್ ॥೨೬॥

ವ ॥ ಇಂತಾ ಕನ್ನೆಯಂ ಬೇಗಂ ಕಾದು ಕಱಿಪಿದ ನಾಲ್ವರೊಳಗೆ

ಧನದೇವನೊಳ್ಳಿದನೊ ಕ ।
ಳ್ಳನೊಳ್ಳಿದನೊ ತಳಱನೊಳ್ಳಿದನೊ ರಕ್ಕಸನೀ ॥
ತನೆ ಕಡೆಯಲೊಳ್ಳಿದನೊ ನಿ ।
ಮ್ಮನಿಬರುಮೊಳ್ಳಿದರನುಳ್ಳ ತೆಱದಿಂ ಪೇೞಿಂ ॥೨೭॥

ವ ॥ ಎಂಬುದುಮವರೊಳ್ ಇರುಳ್ ತೊಱಿಲ್ದೆಣೆಲ್ದೊತ್ತೆಯಿಟ್ಟು ಪಟ್ಟಾತನೇಕಾಂತದೊಳ್ ದಿನಾಂತದೊಳಗಣ್ಯಪುಣ್ಯಲಾವಣ್ಯಸಂಪನ್ನೆಯಪ್ಪ ಕನ್ನೆಯಂ ತನಗಾಟಿಸಿ ಬಂದೊಡಮೊಲ್ಲದೆ ಮೊಱಗೊಂಡು ಕಱಿಪಿದ ಧನದೇವನ ಸಮಾನ ಮಾವನುಮಿಲ್ಲೆಂದಂ ತಂದ ಕುಱಿಯನಂದಿರಳೊಳ್ಕೊಂದು ತಿಂದಾತಂ ಪಸಿದು ದೆಸೆದೆಸೆಗವ್ವಳಿಸಿ ಹಾಹಾಭೂತಚೇತಸನಾಗಿರ್ದು ಮೃದುಪಿಶಿತಾಹಾರಮಂ ಪಡೆದುಂ ಮೆಚ್ಚಿ ಕರುಣಿಸಿ ತಿನಲೊಲ್ಲದೆ ಕಾದು ಕಱಿಪಿದ ರಕ್ಕಸಂಗೆ ಮಿಕ್ಕವರುಳ್ಳೊಡೆ ಪೇೞಿಮೆಂದಂ ಸರ್ಪದಷ್ಟೆಯಂ ಕಾದುಕೊಂಡು ಜಾವೆಮಿರ್ದ್ದಾತಂ ನಿರ್ದೋಷಿಗಳ ಮೈಯೊಳಿಲ್ಲದ ದೋಷಂಗಳನಿಟ್ಟು ಕಟ್ಟಿ ಪಿಡಿದುಯ್ದರಸರಲ್ಲಿ ನಿಚ್ಚಂ ಮೆಚ್ಚುವಡೆವವನ ಮೂಲ್ಯಮಣಿಗಣಭೂಷಿತೆಯಾಗಿ ನಡುವಿರುಳ್ ಬರ್ಪ ಕೊಡಗೂಸಂ ಜಡಿದು ಪಿಡಿತಂದೊಪ್ಪಿಸದೆ ಕಱಿಪಿ ಜಸಮಂ ತಳೆದ ತಳಾಱನ ದೊರೆಗೆ ವರಲಾರುಮಾಱರೆಂದಂ ಕುಱಂಬರ ಪಳ್ಳಿಗೆವೋಗಿ ಕುಱಿಯಂ ಕಳ್ದು

ತಂದಾತನಱುದಿಂಗಳರೆಯೇಱ್ ಹಱಿದು ಪಱಿದ (?) ಪರುಣೆಯಂ ಪಡೆದೊಡಂ ಕುಱುವಡಿಯಂ ಪಡೆದೆನೆಂದಿರ್ಪ ಕಳ್ಳನಂತಪ್ಪರೀ ದಿವ್ಯವಸ್ತ್ರಾಭರಣಂಗಳಂ ಕೊಳ್ಳೆಂದು ಮುಂದಿಕ್ಕಿದೊಡವಱೊಳೊಂದುಮಂ ಕೊಳ್ಳದೆ ಪೋಗಲ್ವೇಟ್ಟಿ ಕಳ್ಳನಂತೆ ಮೂಱುಂ ಲೋಕದೊಳೊಳ್ಳಿದರಾರಾನುಮುಳ್ಳೊಡೆ ನೀಮೆ ಪೇೞ್ಮೆಂದನಿಂತಾ ನಾಲ್ವರುಂ ತಂತಮ್ಮ ಮನಕ್ಕನುಸಾರಿಯಾಗಿ ನೆಗಟ್ವ ನೆಗೞ್ತಿಗಳಂ ನುಡಿವುದುಮವಂದಿರು(ಗ)ಳಾಡಿ-ದಾಟಮುಮಂದಿನಕೂಟಮುಮಂ ಕೂಡಿ ಬಂದೊಡೆ ಸುಮತಿ ಸುಮತಿವಿಕಾಸದಿಂ ಕಳ್ಳನೊಳ್ಳಿದನೆಂದವನನೆ ಕಳ್ಳನೆಂದಱಿದು

ಅವರೆಲ್ಲರುಮಂ ಪೋಗ ।
ಲ್ಕೆವೇಟ್ಟು ಬೞಿಕ್ಕಂತೆ ಕಳ್ಳನೊಳ್ಳಿದನೆಂದಿ ॥
ರ್ದವನನಿರವೇಟ್ಟು ಪಲತೆಱ ।
ದ ವಿಮೋಹಮಮನುಂಟು ಮಾಡಿ ಕೃತ್ರಿಮದಿಂದಂ ॥೨೮॥

ವ॥ ನಿನಗಮೆನಗಮೆನಿತು ಕಾಲಮಿರ್ಪೊಡಂ ಧನಮನೂನಮುಂಟು ಪೋಪಂ ಬಾಯೆಂದು ತನ್ನ ಮನೆಯ ಕಡಾರದ ಪೊನ್ನಂ ತಂದು ಮುಂದಿೞಿಪುವುದುಂ ಭೃತಕಂ ಕೃತಕಪ್ರಣಯಮೆಂದಱಿಯದೆ ನೆಱೆ ಕೂರ್ತಳೆಗೆತ್ತು ಮೆಯ್ಯಱಿಯದೆನ್ನ ಕಯ್ಯೊಳಂ ಕಿಱಿದರ್ಥಮಿರ್ದಪುದದುವನಿಲ್ಲಿಕ್ಕೆಂದು ತನ್ನ ಕಯ್ಯೊಳಿರ್ದ ಸಾಸಿರಗದ್ಯಾಣದ ಪೊಟ್ಟಣಮಂ ಸುಮತಿಯ ಕಯ್ಯೊಳ್ ಕೊಟ್ಟಾಗಳಾಕೆಯುಮದಂ ಕಳೆದುಕೊಂಡು ಕಿಱಿದುಬೇಗಮಾತನಂ ನಿದ್ರೆಗೆಯ್ಯಲ್ವೇಡಿ ಪುಸಿನಿದ್ರೆಗೆಯ್ದಿರ್ದು ಪೋಗಿ ಚಂಡಕೀರ್ತಿಗಾ ವೃತ್ತಾಂತಮನಱಿಪಿ ದೊಡಾತನವನಂ ಪಿಡಿದು ಚಂದ್ರವಾಹನಂಗೆ ತೋಱೆ ಕಳ್ಳನಂ ಕಿಱಿದನೆ ಕುಱಿದಱಿ ದಱಿಪಲ್ವೇಱಿಳ್ದೊಡಾತನನೊಯ್ದಪರೆಂದು ಪೇಟ್ದಿ ತಂದೆಯ ಮಾತಂ ಕನ್ಯೆ ನಿರ್ಣಯಮಾಗಿ ಅರವಕರ್ಣಿಸಿ ನೀಮೆನ್ನ ಕೈಕೊಂಡ ಕಳ್ಳದ ಬ್ರತಮಂ ಬಿಸುಡಲ್ವೇಟ್ದಿರ್ ಬಿಸುಟೆನಪ್ಪೊಡೆನಗಂ ಕಳಲ್ವೇಟ್ಕುಂ ಕಳ್ದನಪ್ಪೊಡೆನ್ನುಮನೀ ಮಾರ್ಗದ ಕೊಲೆಯೊಳಲೆದು ಕೊಲ್ವರೆಂಬುದುಮಂತಾದೊಡಾ ತಪಮಿರ್ಕೆ ಮತ್ತಿನ ಬ್ರತಂಗಳನುೞಿದು ಪುೞಿಲೊಳೆ ಬರ್ಪಂ ನಡೆಯೆಂದು ಕಿಱಿದೆಡೆಯಂ ನಡೆವುದುಂ ಮುಂದೊಂದೆಡೆಯೊಳ್

ನಯಹೀನರ್ಪಿಡಿದೊತ್ತಿ ಕೆನ್ನೆವರೆಗಂ ಕರ್ಣಂಗಳಂ ಕೊಯ್ದು ನಿ ।
ರ್ದಯದಿಂ ಪೀಡಿಸಿ ಬಳ್ಕುವೋಪಿನೆಗಮೆಲ್ಲಂ ತಾಪಿನಂ ಮೇಗೆ ಮೂ ।
ಗಿಯ ಮೂಗಂ ತಲೆವಾರಕೊಯ್ದು ತಲೆಯೊಂದಂ ಕಂಠದೊಳ್ಕಟ್ಟಿ ಪಾ ।
ೞಿಯನೊಕ್ಕಾಕೆಯನಂದು ಬಂಧುಜನಮೆಲ್ಲಂ ನಿಂದು ನೋಟ್ಬಾಕೆಯಂ ॥೨೯॥

ವ ॥ ತನಗಿದಿರಾಗಿ ಬರ್ಪ ಪಾಣ್ಬೆಯುಂ ದುಂದುಱುಂಬೆಯುಂ ಕಂಡೀಕೆ ಗೆಯ್ದ ದೋಷಮಾವುದೆಂದು ಬೆಸಗೊಳ್ವಿಮೆಂಬುದುಂ ನಾಗಶರ್ಮಂ ತಳಾಱನಂ ಬೆಸಗೊಂಡು ನಾಗಶ್ರೀಗೆ ಪೇೞ್ಗುಮಿಾ ಚಂಪಾನಗರನಿಕಟೋದ್ದೇಶದೊಳ್ ಶ್ವೇತಪುರಮೆಂಬ ಪುರಮುಂಟಲ್ಲಿ

ಅನುಪಮ ಸಶ್ರೀಕಂ ಮ ।
ತ್ಸ್ಯನೆಂಬ ಪರದಂಗೆ ಜೈನೆಯೆಂಬಳ್ ಕುಲಮಾ ॥
ನಿನಿ ತದ್ಯುಗಕ್ಕೆ ಪೆಸರಿಂ ।
ದೆ ನಂದನುಂ ಭದ್ರಮುಮಿಾ ತನೂಭವರಿರ್ವರ್ ॥ ೩೦॥

ವ॥ ಜೈನೆವೊಡೆವುಟ್ಟಿದಂ ಸೂರಸೇನನೆಂಬ ಪರದನಾತನ ಭಾರ್ಯೆ ಸುಮಿತ್ರೆಯೆಂಬಳವರ್ಗೆ ಮದಾಳಿಯೆಂಬ ಮಗಳ್ಪುಟ್ಟಿ ಬಳೆಯುತ್ತಿರೆ ನಂದನೊಂದು ದಿವಸಂ ಸುವರ್ಣ್ನದ್ವೀಪಕ್ಕೆ ಪರದುವೋಗುತ್ತಂ ಪನ್ನೆರಡು ವರುಷಕ್ಕಾಂ ಬಾರದೆ ತಡೆದೆನಪ್ಪೊಡೆ ಕನ್ನೆಯನೆನ್ನ ತಮ್ಮಂ ಭದ್ರಂಗೆ ಕುಡಿಮೆಂದು ತಮ್ಮ ಮಾವನಪ್ಪ ಸೂರಸೇನಂಗಂ ಸುಮಿತ್ರೆಗಮಪ್ಪಯಿಸಿ ಪೋಪುದುಮಿತ್ತಲಾ ಮದಾಳಿಯಂ ವಿವಾಹ ಪ್ರಾಪ್ತೆಯಾಗಿ ಬಳೆಯವಳೆಯೆ

ಪನ್ನೆರಡು ವರುಷದವಧಿಯ ।
ಮಿನ್ನೆಱಿದುದು ಕೂಸು ಕಟ್ಟೆಯೆ ತಬಳೆದುದು ನಂದಂ ॥
ತನ್ನೆಂದವಧಿಗೆ ಬಾರಂ ।
ಕನ್ನೆಯನಿನ್ನಿರಿಸಲಾಗ ಭದ್ರಂಗೀವಂ ॥೩೧॥

ವ ॥ ಎಂದು ಸೂರಸೇನಂ ಮದಾಳಿಯಂ ಭದ್ರಂಗೆ ಕುಡುವೆನೆಂದು ಪಸೆಯೊಳಿರಿಸಿ

ನೆಱಿ ಸಂತೊಸದಿಂ ಕೈನೀ ।
ರೆಱಿಯಲ್ಕೆಂದಿರ್ಪ ಪದದೊಳತ್ಯಾಶ್ಚರ್ಯಂ ।
ನೆಱಿದಿರೆ ಮದಾಳಿಗಯಸಂ ।
ಪಱಿಪಡೆ ಬರ್ಪಂದದಿಂದೆ ನಂದಂ ಬಂದಂ ॥೩೨॥

ಬಂದ ನಂದನಂ ತಂದೆಯುಂ ಮಾವನುಂ ಕಂಡು ಮದಾಳಿಯೊಳ್ಮದುವೆ ನಿಲ್ಲೆಂಬುದುಂ ಭದ್ರಂಗೆ ಕುಡಲ್ವೇಡಿರ್ದ ಕೂಸನೆನಗೆ ಮದುವೆಯಾಗೆಂಬುದುಂ ಭದ್ರನುಂ ನಂದಗೆಂದು ಬಳೆದ ಕೂಸೆನಗೆ ಮೊಱಿಯಲ್ಲಳೆಂದಿರ್ವರುಮೋರೋರ್ವರ ಮೇಲೆ ನೆವಮಿಟ್ಟು ಮಾಣ್ಬುದುಂ ಮದಾಳಿಯುಂ ನಂದನ ವನದಿಂ ಸರೋಜವನದಿಂದಮಗಲ್ದ ಮದಾಳಿಯಂತೆ ಮಱುಗಿ ತನ್ನ ತವರ್ಮನೆಯಲ್ಲಿ ಪೂದುಮಲ್ಲಿಯೊರ್ವಂ ನಾಗಸೂರನೆಂಬ ಪರದನೊಳನವಂಗೆಣ್ಬರ್-ಪೆಂಡಿರೊಳರವರೊಳಂ ತಣಿಯದತಿ ವಿಷಯಕಾಂಕ್ಷೆಯಿಂ ಮದಾಳಿಗೆ ಬಸಮಾಗಿ ಮಱಿವಾಟುತ್ತಿರ್ಪುದುಂ ತಳಾಱನಱಿದು ಪಿಡಿದಾ ಪಾಣ್ಬನಂ ಕೊಂಡು ತಲೆಯನಱಿದೀಕೆಯ ಕೊರಲೊಳ್ಕಟ್ಟಿ ಕಿವಿಮೂಗನಱಿದೊಂದೆವಱಿಗುಟ್ಟುತಂ ಪೋಗುತಿರ್ದಪರೆಂಬುದುಂ

ಜಸಮಟೆವಂತಿರೀ ಬ್ರತಮನಾ ಬ್ರತಿಗೊಪ್ಪಿಸಿ ಬಂದೆನಪ್ಪೊಡಾ ।
ನಸತಿಯೆನಾಗಿ ದುಶ್ಚರಿತ ವೃತ್ತಿಯೊಳಗ್ಗಲಿಸಲ್ಕೆವೇಟ್ಟುಮಂ ।
ತೆಸಗಿದೆನಪ್ಪೊಡೋವದೆ ಖಳರ್ನ್ನೆರೆ ತಂದು ಕಱುತ್ತು ಪೂಣ್ಕವೆ ।
ತ್ತೊಸೆದೊಳಗಾಗಿ ಮೂಗನರಿದೀ ವಿಧಿಯಾಗಿರೆ ಮಾಡದಿರ್ಪ್ಪರೇ ॥೩೩॥

ಅಂತಾದೊಡೆನಗೆ ನೀವಱಲುಂ ನೀರಿಱಿಯಲುಮಣ್ಮದ ಸಾವು ಸಮನಿಸುಗುಮದು ಕಾರಣದಿಂ

ಇನಿತೊಂದು ಪರಾಭವಪದ ।
ಮನೆಯುದ್ದವರ್ಪಾರದೊಳೆಂದಾಂ ಪರದಾ ।
ರ ನಿವೃತ್ತಿಗ್ಗೆಯ್ದನೆನೆ ಪೇ ।
ಟ್ದಿ ನಾಲ್ಕುಮಮಂ ತಳೆದು ಮಗಳೆ ತೊಱೆ ನೀಂ ಪೆಱವಂ ॥೩೪॥

ಎಂದು ಮತ್ತಮಂತೆ ಬರ್ಪಾಂಗಳ್

ಕಿವಿಯಂ ಕೀಲ್ಕೊಳ್ವಿನಂ ಕರ್ಬುನದ ಸಲಗೆಯೊಳ್ ಬೆಟ್ಟ ನಿಟ್ಟೆಲ್ವುಗಳ್ ತೋ ।
ಱುವಿನಂ ಕಾಯ್ದಿರ್ಕುಱಿಂದಿರ್ಕುಱಿಸೆ ಕುರವದಿಂ ಕೂಡೆ ನೆತ್ತರ್ತೆರಳ್ದು
ಣ್ಮುವಿನಂ ಮೈಯೆಲ್ಲಮಂ ಜರ್ಜರಿಸಿ ಜವಜವಾಗಿರ್ದನಂ ಗುರ್ದಿ ಹಾಹಾ
ರವದಿಂ ಶೂಲಾಗ್ರದೊಳ್ ಬಾಯಱಿದೊಳಱುವಿನಂ ಕೊಲ್ವುದಂ ಕನ್ನೆ ಕಂಡಳ್ ॥೩೫॥

ಕಂಡೀ ಪ್ರಚಂಡತುಂಡನ ಮಾಡಿದ ದೋಷಮಾವುದಾಗಿ ನಾನಾ ವಿಧದ ವಧೆಗಳಂ ಮಾಡಿದಪರಿದಂ ಬೆಸಗೊಂಡು ಪೇಱಿಮೆಂಬುದುಂ ನಾಗಶರ್ಮನಾ ಪ್ರಪಂಚಮೆಲ್ಲಮಂ ತಳಾಱನಂ ಬೆಸಗೊಂಡು ತಿಳಿಯೆ ಪೇೞ್ದುಮಿಾ ಕೊಲೆಪಡೆವಾತಂ ಚಂದ್ರವಾಹನನ ಕೀಲಾರಿಗಂ ವೀರಪೂರ್ಣನೆಂಬನೊಂದು ದಿವಸಮಲ್ಲಿಯ ತುಱು ಪಳ್ಳಿಯ ಗೋವುಳಿಗ ರೊಳ್ತೋಟಿಗೆಯ್ದಿಱಿದಾಡುವ ಬೀಡಿನೆರ್ಮ್ಮೆಗಳಂ ಪಿಡಿತಂದರಸರ್ಗೊಪ್ಪಿ ಸುವುದುಮರಸನೀತನ ಭಕ್ತಿಗಂ ವ್ಯವಸಾಯಕ್ಕಂ ಮೆಚ್ಚಿ ತನ್ನ ತಂದೆರ್ಮ್ಮೆಗಳೊಳೊಂದುಮಂ ಕೊಳ್ಳದೆ ನೀನೇ ಕೊಳ್ಳೆಂದು ಕೊಟ್ಟೊಡಾ ದಯೆಗೆ ನಯಂಬಡೆದೆನೆಂದು ತಲೆಕೆಟಗಾಗಿ ಮೇಗುಗಾಣದೆ ಮತ್ತಂ ಪೆಱರ ಪುಲವುಂ ಜೀವಧನಂಗಳನರಸರ ಕಾಪಿನ ಪೊಲನಂ ಪೊಕ್ಕುವೆಂದುಂಡಿಗೆಯೊತ್ತಿಕೊಳು-ತ್ತುವೂಱಿಗವಾದೆಡೆಗಳೊಳ್ ಝಾಳೆಯಂಗೊಳುತ್ತು ಮನಿತಱಿಂಳಂ ತಣಿಯದೆ ಚಂದ್ರಮತೀ ಮಹಾದೇವಿಯ ಕೀಲಾರದ ಧೇನುಗಳಂ ಸೂಱೆಗೊಳ್ವಂತೆ ಕೊಂಡುಪೋದೊಡೆ ಚಂದ್ರಮತಿ ಚಂದ್ರವಾಹನನಲ್ಲಿಗೆ ವಂದು

ಆರೊಳಮೆಂದುಮಿಲ್ಲದ ಪರಾಭವಮಿಂದೆನಗಾಯ್ತು ನಿನ್ನ ಕೀ
ಲಾರಿಗ ವೀರಪೂರ್ಣ ಭಟನಳ್ಕುಱದೊಟ್ಟಜೆಯಿಂದಮೆನ್ನನಾ
ರ್ಬಾರಿಪರೆಂದು ಗೋವುಮನನಾಕುಲಮಿಟ್ಟುಳಿಗೊಂಡು ಪೋದನೇ
ಕಾರಣದಿಂದೆ ಪೇಱೆನಗೆ ನೀಂ ದಯಗೆಟ್ಟೆ ಪುರಾಧಿನಾಯಕಾ ॥೩೬॥

ಎಂದು [ಪೇಱೆ] ಕ್ರೋಧಾನಳಾರಕ್ತನೇತ್ರನಾಗಿ ವೀರಪೂರ್ಣನಂ ತನ್ನಲ್ಲಿಗೆ ವರಿಸುವುದುಂ

ಬೆದಱಿ ಪುಲಿ ಬಾವಿಯೊಳ್ ಬಿ ।
ರ್ದುದನಱಿದೊಡೆ ಗುಂಡುಗೊಂಡು ಕೊಂದಿಕ್ಕುಗುಮ ।

ಲ್ಲದೆ ಪಿಡಿದು ತೆಗೆವರಾರೆಂ ।
ಬುದನೆನಿಸಿ ಜನಂ ತಗುಳ್ದು ತನತನಗೆಂಗುಂ ॥೩೭॥

ವ ॥ ಈತನಿನಿತಱಿೊಳಗೆ ಮಾಣ್ದನಲ್ಲ ಎಮ್ಮೆಮ್ಮ ಜೀವಧನಂಗಳನಾಯಿಲಂಗೊಂಡಿರ್ದಪನೆಂಬುದುಮೆನ್ನ ಕೊಟ್ಟನಿತಱಿೊಳಂ ತಣಿಯದೆ ಮತ್ತೆ ಯತಿಕಾಂಕ್ಷೆಯಿಂ ಲೋಗರೊಡವೆಯುಂ ಝೂಳಿಯುಂಗೊಂಡನಿವನಂ ಪಲವುದಿವಸಂ ನಮೆಯಿಸಿ ಕೊಲ್ಲಿಮೆಂಬುದುಂ ತಳಾಱರೀತನನತಿದುಃಖಾಕ್ರಂದನಮುಣ್ಮೆ ಗೋಣ್ಮುರಿಗೊಂಡು ಕೊಂದು ಕೂಗಿದಪರೆಂಬುದಂ ನಾಗಶ್ರೀ ತನ್ನ ತಂದೆಯುನೆಂದಳೆಂದುವುಮಿಂತಪ್ಪ ಸಾವುಂ ನೋವುಮಾಗದಿರ್ಕೆಂದು ಗುರುಗಳಲ್ಲಿ ಕೊಲ್ಲದ ಪುಸಿಯಾದ ಕಳದ ಪರದಾರಗಮ ನಂಗೆಯ್ಯದ ಪರಿಗ್ರಹಕಾಂಕ್ಷೆಗೆಯ್ಯದಯ್ದುಮಣುವ್ರತಂಗಳಂ ಕೈಕೊಂಡೆನೀಗಳವಂ ಮಗುಳೊಪ್ಪಿಸಿದೆನಪ್ಪೊಡೆ ಇಂತೀ ಇನಿಬರುಮೆಯ್ದಿದ ದುಃಖಗಳನೆಯ್ದಿ ಮೇಗೆ ನರಕಂಬುಗುವೆನೆಂಬುದುಂ ತಾನುಮಾಸನ್ನಭವ್ಯನಪ್ಪುದುಕಾರಣಂ

ಕೊಲೆಯೆಂದಸತ್ಯಮೆಂದ ।
ಗ್ಗಲಿಸಿದ ಕಳವೆಂದುಂ ಪಾದರಮೆಂದು ಪಳಂ ॥
ಚಲೆವ ಪರಿಗ್ರಹಮೆಂದಿವ ।
ಱಿಜೂಳಾದಪೇಕ್ಷೆಯನುಪೇಕ್ಷೆಯನುಪೇಕ್ಷಿಸಬ್ಜದಳಾಕ್ಷೀ ॥೩೮॥

ವ ॥ ನೀನೀ ಬ್ರತಂಗಳಂ ನಿಶ್ಚಳಮಾಗೆ ತಾಳ್ದುವುದು ನಿನಗೆ ದರ್ಪದಿಂ ಬ್ರತಂಗಳಂ ಕೊಟ್ಟ ವ್ರತಿಯನಾದರ್ಪಿಸಿ ಬರ್ಪಂ ಬಾಯೆಂದು ನಾಗಶರ್ಮಂ ನಾಗಶ್ರೀಯನೊಡಗೊಂಡು ಬಂದು ನಾಗಸ್ಥಾನದ ಪ್ರಥಮದ್ವಾರದೊಳ್ ನಿಂದು ಸೂರ್ಯಮಿತ್ರಾಚಾರ್ಯರಂ ಕಂಡು

ಅನವದ್ಯ ॥ ಕ್ಷಿತಿಯೊಳಾನಭಿವಂದಿತನೆಂ ವಿಪ್ರೋತ್ತಮನೆಂ ಸಕಳೋರ್ವರಾ ।
ಪತಿಕಿರೀಟಾರ್ಚಿತಪಾದದ್ವಂದ್ವನೆನಪ್ರತಿಮಪ್ರಜಾ
ಪತಿಸಮಾನನೆನೆನ್ನಮಗಳ್ಗೇನಾನುಮುಪಾಯದ ಮಾಯೆಯಿಂ ।
ವ್ರತಮನಾಗ್ರಹದಿಂದಮೆ ನೀವಿಂತೀವುದಿದಾವುದು ಸಂಮದಂ ॥೩೯॥

ವ ॥ ಎಂಬುದುಮಾ ಮುನೀಂದ್ರರ್ನಾಗಶರ್ಮನ ಭವ್ಯತೆಯ ಕಾಲಲಬ್ಧಿಯು ಮನಲ್ಲಿಯ ವಿನೇಯಜನಂಗಳೆಲ್ಲಮಿಂತಲ್ಲದೆ ಸದ್ಧರ್ಮಕ್ಕೆ ಬಾರರೆಂಬ ಮಾರ್ಗಪ್ರಭಾವಮುಮಂ ದಿವ್ಯಜ್ಞಾನದಿಂದಮುಪಲಕ್ಷಿಸಿ ಕೂಸಪ್ಪೊಡೆ ಎಮ್ಮ ಕೂಸು ನಿನಗೆತ್ತಣ ಮಗಳೆಂಬುದುಮಾ ಕನ್ನೆ ತನ್ಮುನೀಂದ್ರಪಾದಾರವಿಂದದ್ವಂದ್ವದೊಳ್ ನಿರ್ದ್ವಂದ್ವಭಾವದಿಂ ವಿನೀತೋತ್ತಮಾಂಗೆ ಕೆಲದೊಳ್ ಕುಳ್ಳಿರ್ಪುದುಮವರ ಮಹಾ ತಪಃಪ್ರಭಾವದಿಂದಾಜ್ಞಾಮಾಹಾತ್ಮ್ಯ-ದಿಂದೇನುಮೆನಲಣ್ಮದೆ ಬಾಯ್‌ಬಿಟ್ಟು ಕೀಲಿಸಿದಂತಲ್ಲಿ ತಳರದಿರ್ಪುದುಂ

ಅಮಿತಾಳಾಪಂಗಳಿಂ ದೊಮ್ಮಳಿಸಿ ಕಿನಿಸಿ ಕೊಟ್ಟೊಳ್ವ ತಾತ್ಪರ್ಯಮೇನೆ ।
ಮ್ಮಮಗಳ್‌ಬಂದೆಮ್ಮ ಕೈಯೊಳ್ ಬ್ರತಮನೊಸೆದು ಕೈಕೊಂಡೊಡೇನಾಯ್ತು ಪೇಟ್‌।

ನ್ನೆಮಗೀ ಕೂಸಾರ್ಗೆ ನೀಮಾರ್ಗಿದು ಗುಣದೊಳಗಲ್ಲಿಲ್ಲಿರಲ್ವೇಡ ನಿಮ್ಮಾ ।
ಶ್ರಮದತ್ತಲ್ಪೋಗಿಮಿರ್ದಂದರಸರ ದೆಸೆಯಿಂ ನಿಕ್ಕುವಂ ಪೊಲ್ಲದಕ್ಕಂ ॥೪೦॥

ಈಯೆಡೆಯಿಂ ಪೋಗೆಲೆ ಪಾ ।
ರ್ವಾಯೆನೆ ತಲ್ಲಣಿಸಿ ಪಾರ್ವನಬ್ರಾಹ್ಮಣ್ಯಂ ॥
ಭೋಯೆಂದು ಪುಯ್ಯಲಿಡುತುಂ ।
ಬಾಯಂಬಿಡುತುಂ ನೃಪೇಂದ್ರಸಭೆಯಂ ಪೊಕ್ಕಂ ॥೪೧॥

ವ ॥ ಅಂತು ತಮ್ಮಾಳ್ದನಪ್ಪ ಚಂದ್ರವಾಹನನರೇಂದ್ರನಂ ಕಂಡು

ಎನಗಾರ್ಬಲ್ಲಿದರೆಂದು ಗಂಡುಗೆಡದೊರ್ವಂ ದೇವ ರಕ್ಕಿಕ್ಕಿ ಸಾ ।
ಧನಸಂಮೋಹದಿಂದಮೆನ್ನ ಮಗಳಂ ಬಲ್ಲಾಳ್ತನಂಗೆಯ್ದು ನಿ ।
ನ್ನ ನರಾಧೀಶ್ವರನಕ್ಕೆ ಬರ್ಕೆ ಕುಡೆನೆಂದೊಟ್ಟೈಸಿ ಕೈಕೊಂಡು ನಿಂ ।
ದನಿದಂ ನೀನವಧಾರಿಸೆಂದು ತೊವಲಂ ಮುಂದಿಕ್ಕಿದಂ ಭೂಪನಾ ॥೪೨॥

ವ ॥ ಆಗಳಾ ಮಹೀವಲ್ಲಭನತ್ಯಾಶ್ಚರ್ಯಂಬಟ್ಟು ರಿಷಿಯರಿಂತೊಟ್ಟ ಕೌತುಕಮಂ ನೋಟ್ಟಿ ಕುತೂಹಳದಿನಾತ್ಮೀಯ ಪ್ರಾಣೇಶ್ವರಿಯಪ್ಪ ಚಂದ್ರಮತಿ ಮಹಾದೇವಿವೆರಸು ಅಶೇಷಸಾಮಂತಮಹಾಸಾಮಂತಮಂಡಳೇಶ್ವರಶ್ರೇಷ್ಠಿ ಸಚಿವಪ್ರಧಾನ ಪಂಡಿತಪ್ರಕರಪ್ರಭೃತಿಪರಿಜನಾನ್ವಿತನಾಗಿ ನಾಗಸ್ಥಾನಕ್ಕೆ ವಂದು ಯತಿಪತಿಗಳಂ ಕಂಡು ವಿನಯದಿಂ ಬಂದಿಸಿ ತದಾಸನ್ನಪ್ರದೇಶದೊಳ್ಕುಳ್ಳಿರ್ದು

ಮುನಿವೃಂದಾರಕವಂದ್ಯ ಪೇಱಿಮಿನಿತೊಂದಾಕ್ರೋಶಮಿಾ ನಾಗಶ
ರ್ಮನೊಳೇ ಕಾರಣದಿಂದಮಿಂದು ದೊರೆಕೊಂಡತ್ತಾವ ತಾತ್ಪರ್ಯದಿಂ ।
ವಿನಯೋಲ್ಲಂಘನಮಂ ಪ್ರಭಾವಿಸಿದನೀ ಸಂಬಂಧದೊಂದಂದಮೆಂ
ತೆನೆ ಭೂಭೃತ್ಪತಿಗಾ ಜಗತ್ಪತಿ ಸಮಂತಿಂತೆಂಗುಮಿಾಯಂದದಿಂ ॥೪೩॥

ಜಗತೀವಲಯಮುಮಱಿವ ।
ನ್ನೆಗಮೆಮ್ಮ ಮಗಳ್ ಬ್ರತಂಗಳಂ ಕೇಳ್ದು ಮನಂ ॥
ಬುಗಿಸಿದೊಡೆಂತಬಳೆಗೆ ತಾ ।
ಳಗೊಟ್ಟೆಯೆಂದೆಮ್ಮೊಳಿಂತು ತೋಟಿಗೆ ವಂದಂ ॥೪೪॥

ಎನೆ ನಾಗಶರ್ಮನೆಂದಂ ।
ಜನಪತಿ ನೀನಾದಿಯಾಗಿ ನೆಱೆ ನೆರೆದಿರ್ದೀ ॥
ಜನಮೆಲ್ಲಮಱಿವುದಾನೀ ।
ತನುಜೆಯನೀ ಫಣಿಗೆ ಪರಸಿ ಪಡೆದ ಸ್ಥಿತಿಯಂ ॥ ೪೫॥

ವ ।। ಎಂಬುದುಮಾ ಮುನೀಂದ್ರರೀ ಕನ್ನೆ ನಿಮ್ಮ ತನುಜೆಯಪ್ಪುದನೆಲ್ಲರು ಮಱಿವರಪ್ಪೊಡೆ ನಾಲ್ಕು ವೇದಮಮನಾಱಿಂಗಮುಮಂ ಆಱು ತರ್ಕಮುಮಂ ಪದಿನೆಂಟು ಧರ್ಮಶಾಸ್ತ್ರಂಗಳಂ ವ್ಯಾಕರಣಕಾವ್ಯನಾಟಕಛಂದೋಲಂಕಾರಗ್ರಹ ಗಣಿತವೈದ್ಯಾದಿ ಶಾಸ್ತ್ರಂಗಳೊಳ್ ಪರಿಣತರ್ ನೀಮುಮಪ್ಪಿರಂತನಿತುಮನೀ ಕೂಸಿಂಗೋದಿಸಿ ಶಿಕ್ಷಿಸಿದುದಂ ತೋಱಿದಿರಪ್ಪೊಡೆ ಕೂಸು ನಿಮ್ಮ ಮಗಳಪ್ಪುದು ನಿಶ್ಚಯಮೆಂಬುದುಮದೆಲ್ಲಮಂ ನಾಗಶರ್ಮನವಧಾರಿ.

ಇನಿತುಮನಾನಾವಗಮಱಿ ।
ಪೆನಲ್ಲೆನೀ ಕನ್ನೆಯಂ ಮನೋಮುದದಿಂದಾ ।।
ನನಿತಱಿೊಳೊಂದುಮನೋದಿಸಿ ।
ದೆನಲ್ಲೆನಿಲ್ಲದುದನೆಂತು ಪುಸಿದುಂಟೆಂಬೆಂ ।।೪೬।।

ವ ।। ಎಂಬುದುಮಾ ಮುನೀಶ್ವರರಾ ಧರಾಧೀಶ್ವರನ ಮೊಗಮಂ ನೋಡಿ

ಮಾಲಿನಿ ।। ಅಸದೃಶಮೆನೆ ಮುನ್ನಂ ಶಬ್ದಶಾಸ್ತ್ರಾದಿ ವಿದ್ಯಾ ।
ವಿಸರಮನುಚಿತಾಳಾಪಂಗಳಿಂ ಪಾಂಗುವೆತ್ತೋ ।
ದಿಸಿದೆಮದಱಿನೀ ಕೂಸೆಮ್ಮ ಕೂಸೆಂಬುದುಂ ವಾ ।
ಕ್ಪ್ರಸರಮೆಸೆಯೆ ಪಾಪಾಕ್ಷೇಪನಂ ಭೂಪನೆಂಗುಂ ।।೪೭।।

ವ ।। ನಿಮ್ಮಡಿ ನೀಮಿಾ ಕನ್ನೆಯಂ ಮುನ್ನಮೋದಿಸಿದಿರಪ್ಪೊಡಿನ್ನುಮೆನ್ನ ಮುಂದೆಯೋದಿಸಿಂ ಕೇಳ್ವ ಜನದ ಮನದ ಸಂಶಯಮಂ ಬಿಡಿಸಿಮೆಂಬುದುಮಾ ಕನ್ಯಕೆಯ ಮಸ್ತಕಾಗ್ರದೊಳಾತ್ಮೀಯ ದಕ್ಷಿಣಹಸ್ತಪಲ್ಲವಮನಳಂಕರಿಸಿದಾಗಳ್

ಶ್ರೀಗಂ ವಾಕ್ಶ್ರೀಗಮಿಂತೀಕೆಯೆ ಮಿಗಿಲೆನಿಪೈಶ್ವರ್ಯ ಸಂಪನ್ನೆಯಂ ಸಂ ।
ವೇಗವ್ಯುತ್ಪನ್ನೆಯಂ ದುರ್ಧರಕುಮತನಗೋದ್ಭಿನ್ನೆಯಂ ವಿಪ್ರವಂಶ ।
ಶ್ರೀಗರ್ಭೋತ್ಪನ್ನೆಯಂ ವಿಪ್ಪಳವಿಷಯಲತಾಚ್ಛಿನ್ನೆಯಂ ಬೇಗಮೆಂದರ್ ।
ನಾಗಶ್ರೀ ಕನ್ನೆಯಂ ಚೆನ್ನೆಯನಮೃತಪದಾಸನ್ನೆಯಂ ವರ್ಣನಾಥರ್ । ।೪೮।।

ಮೊದಲೊಳ್ ನಿನ್ನಯ ವಾಯುಭೂತಿಯೆನಿಸಿರ್ದಾ ಜನ್ಮದೊಳ್ ಸನ್ಮನೋ
ಮುದದಿಂ ರಾಜಗೃಹಾಭಿಧಾನಪುರದೊಳ್ ತಾತ್ಪರ್ಯವೆಂದೋದಿದಂ
ದದೆ ಲೋಕಕ್ಕೆ ವಿಚಿತ್ರಮಾಗೆ ಮಗಳೇ ಸಂದೀ ನೃಪಾಸ್ಥಾನಮ
ಧ್ಯದೊಳಿಮ್ಮೊದಿಸಿದೋದನೋದಿ ಮೆಱೆ ನೀಂ ನಿನ್ನೊಂದು ವಾಗ್ಗುಂಫಮಂ ।।೪೯।।

ಎನಲೊಡಮಾ ಭವದೊಳ್ ತೊ।.
ಟ್ಟನಿತುಂ ವೃತ್ತಾಂತಮಂತರಂಗದೊಳಾಗಳ್ ।।
ಜನಿಯಿಸೆ ಮೃದುಮಧುರ ಗಭೀ ।
ರ ನಿನದಮೆಸೆದುದು ಮಹಾದ್ಭುತಾಂಡಂಬರದಿಂ ।।೫೦।।

ದೆಸೆದೆಸೆಗೆ ಸುಧಾಪ್ರಸರಂ ।
ಪಸರಿಸಿ ಭೋರ್ಗರೆದು ಕೂಡೆ ಕವಿದಪುದೆನಿಸಿ ॥
ತ್ತಸದಳಮಾಗಿರೆ ಕನ್ನೆಯ ।
ಮಿಸುಗುವ ಮುಖಚಂದ್ರ ಚಂದ್ರಿಕಾವಾಕ್ಪಸರಂ ॥೫೧॥

ಹೃದ್ಯವ್ಯಾಕರಣಪ್ರಸನ್ನ ತರಪೂರ್ವಾಭ್ಯಾಸವಿನ್ಯಾಸ ತ ।
ದ್ವಿದ್ಯಾಸಂಪದಮಾಗಳಾಕ್ಷಣದೊಳಾದಾಶ್ಚರ್ಯಮಪ್ಪನ್ನ ಮೇಂ ।
ಸದ್ಯಂ ಸಾರ್ದುದೊ ತತ್ಕುಮಾರಿಕೆಗೆ ಸಯ್ಪಿಂ ಸಪ್ತಭಿರ್ಜಾಯತೇ।
ವಿದ್ಯಾಯೆಂಬುದು ತಪ್ಪದಾಯ್ತೆನೆ ತದೀಯಾಸ್ಥಾನ ಭೂಮಧ್ಯದೊಳ್ ॥೫೨॥

ಪ್ರತಿಭಾಸಂಸ್ಕೃತಿಯಿಂ ಸಲಕ್ಷಣತರಂಗೋಪಾಂಗದಿಂ ವಿಶ್ವವಿ ।
ಶ್ರುತವರ್ಣಾರ್ಥದಿನರ್ಥದೃಷ್ಟಿಯಿನಳಂಕಾರೋಕ್ತಿಯಿಂ ನಿರ್ಣಯೋ ।
ಚಿತವಿನ್ಯಾಸದಿನತ್ಯುದಾತ್ತರಸದಿಂದಾ ಕನ್ಯೆ ಸಾಕ್ಷಾತ್ಸರ ।
ಸ್ವತಿ ತಾನೆಂಬಿನಮೇಂ ಪ್ರಭಾವಿಸಿದಳೋ ನಾನಾ ಕಳಾಳಾಪಮಂ ॥೫೩॥

ನೆರೆದಾ ರಾಜಸಭಾಂತರಾಳದೊಳುದಾತ್ತಾರ್ಥೋಕ್ತಿಯಿಂ ತನ್ನೊಳಾ ।
ರ್ದೋರೆಯೆಂಬನ್ನೆಗಮುದ್ಗತಪ್ರಥಿತಶಬ್ದಾರ್ಥೋಕ್ತಿಯಿಂ ವ್ಯಕ್ತಮಾ ।
ಗಿರೆ ವಕ್ಖಾಣಿಸಿ ತದ್ವಿದರ್ಪೊಗಟ್ಟು ಭಾಪ್ಪೆಂಬನ್ನೆಗಂ ತತ್ಪತಿಂ ।
ವರೆ ವೇದಾದಿ ಕಳಾಕಳಾಪಮನಶೇಷಾಳಾಪದಿಂದೋದಿದಳ್ ॥೫೪॥

ಸಕಲವ್ಯಾಕರಣಾರ್ಥಶಾಸ್ತ್ರನಿಪುಣರ್ಮಾರ್ಕೊಂಡರಿಲ್ಲುರ್ಕಿ ತಾ ।
ರ್ಕಿಕರೊಟ್ಟೈಸಿದರಿಲ್ಲ ಸತ್ಕವಿಗಳಡ್ಡಂ ಬಂದರಿಲ್ಲುಂತೆ ಭುಂ ।
ಭುಕಮೀ ಲೋಕದಳಾರೊಳಂ ಜನಿಯಿಸಿತ್ತಿಲ್ಲೆಂಬಿನಂ ವಿಪ್ರಕ ।
ನ್ಯಕೆ ವಿದ್ವಜ್ಜನದಿಂದಮಂದು ಪಡೆದಳ್ ಪಾಂಡಿತ್ಯ ಸೌಂದರ್ಯಮಂ ॥೫೫॥

ಇದು ದಲ್ ಕೌತುಕಮಿಂತಿದದ್ಭುತಮಿದೊಂದಾಶ್ವರ್ಯಮೀ ಬೋಧಮೀ ।
ಚದುರೀ ವಾಗ್ವಿಭವಪ್ರಪಂಚಮಬಳಾ ಸಂದೋಹದೊಳ್ ಮುನ್ನಮಾ ।
ಗದುದಿನ್ನೆಯ್ದುದುದೀಗಳಿಲ್ಲದುದು ಪೇಟೀ ಕನ್ಯೆ ತಾನೆಂದು ಪು ।
ಟ್ಪದಳೆಂ ದೋದಿದಳೆಂದು ಕಲ್ತಳೊ ಕಳಾಕೌತೂಹಳಾಳಾಪಮಂ ॥೫೬॥

ವ॥ ಎಂದು ಸಭಾಸದರ್ಮೆಚ್ಚಿ ಬಿಚ್ಚಳಿಸಿ ಪೊಗಟ್ವಿನಮಾ ಕನ್ನೆ ವಾಯುಭೂತಿಯಾದ ಭವದೊಳ್ ತಾಂ ಮುನ್ನೋದಿದೋದುಗಳನಿತುಮನತಿರುಚಿರಮೃದು ಮಧುರ ವಚನರಚನೆಗಳಿನೋದಿ ವಾಕ್ಪಭಾವಮಂ ಪ್ರಕಟಿಸುವುದುಂ ಚಂದ್ರವಾಹನ ನರೇಂದ್ರನಾ ಮುನೀಂದ್ರರ ಮೊಗಮಂ ನೋಡಿ

ಜಗಮಱಿಯಲೀ ದ್ವಿಜನನ್ನ ।
ಮಗಳಂತೀ ಕನ್ನೆ ಮುನ್ನಮೋದಿದ ವೇದಾ ॥
ದಿಗಳನೊಱಲ್ದೀಗಳುದಾ ।
ತ್ತ ಗೀತದಿಂದೋದಿದಂದಮಿದು ಬಿಸವಂದಂ ॥೫೭॥

ನೆನೆದೊಡೆ ವಿಸ್ಮಯಮಾದಪು ।
ದು ನಾಗಶರ್ಮಂಗೆವುಟ್ಟಿ ನಾಗಶ್ರೀ ತೊ ॥
ಟ್ಟನೆ ನಿಮ್ಮ ಮುಂದೆ ವಾಕ್ಶ್ರೀ ।
ಯೆನಿಸಿದ ತೆಱನೆನಗೆ ವಿಮಳಚಾರುಚರಿತ್ರಾ ॥೫೮॥

ಮನದೊಳ್ ಕೌತೂಹಳಂ ಪುಟ್ಟಿದಪುದಿದಱ ವೃತ್ತಾಂತದೊಂದಮಂ ನೀ ।
ಮೆನಗೀಗಳ್ ವ್ಯಕ್ತಮಾಗಲ್ ಬೆಸಸಿಮೆನೆ ಮುನೀಂದ್ರಾಭಿವಂದ್ಯಂ ಜಗದ್ವಂ ।
ದ್ಯನನಿಂದ್ಯಂ ಜ್ಞಾನಶೋಭಾಕರನಮಳಿನ ಚಾರಿತ್ರರತ್ನಾಕರಂ ಭ ।
ವ್ಯನಿಧಾನಂ ಪಾಪೀನಂ ಪರಮಜಿನಮತಾಂಭೋಜಿನೀ ರಾಜಸಂಹಂ ॥೫೯॥

ಇದು ಸಮಸ್ತವಿನೇಯಜನವಿನುತ ಶ್ರೀವರ್ಧಮಾನಮುನೀಂದ್ರವಂದ್ಯ
ಪರಮಜಿನೇಂದ್ರಶ್ರೀಪಾದಪದ್ಮವರಪ್ರಸಾದೋತ್ಪನ್ನ ಪ್ರಸನ್ನ
ಸಹಜಕವೀಶ್ವರ ಶ್ರೀ ಶಾಂತಿನಾಥಪ್ರಣೀತಮಪ್ಪ
ಶ್ರೀ ಸುಕುಮಾರಚರಿತಪುರಾಣ
ದೊಳ್ ನಾಗಸ್ರೀಯ ಭವ
ಸ್ಮರಣ ವರ್ಣ್ನನಂ
ಸಪ್ತಮಾಶ್ವಾಸಂ

೮. ಅಷ್ಟಮಾಶ್ವಾಸಂ

ಶ್ರೀಪತಿಯೆನೆ ನೆಗಟ್ದಿಂಗೆ ಮ
ಹೀಪತಿ ಬೆಸಗೊಂಡಮಾಱ್ಕೆಯಿಂ ಪೇಟ್ದಿಂ ಸಂ
ಕ್ಷೇಪದಿನನೂನವಚನಾ
ಳಾಪದಿನಾಗಳ್ ಸರಸ್ವತೀ ಮುಖ ಮುಕುರಂ ॥೧॥

ವ॥ ಈ ಕನ್ಯಾರತ್ನಮಿಾ ಭವಕ್ಕಾಱನೆಯ ಭವದೊಳೀಯಿರ್ದಗ್ನಿಭೂತಿರಿಷಿಯರಿಂ ಕಿಱಿಯಂ ವಾಯುಭೂತಿಯೆಂಬಂ ದ್ವಿಜಾತ್ಮಜನಿವರೊಡನೆಮ್ಮ ಸಮಿಾಪದೊಳ್ ಸಕಲಶಾಸ್ತ್ರಂಗಳನೋದಿದಿಂ ಬೞಿಯಮೆಮ್ಮೊಳಾದ ಮಾನಕಷಾಯದಿಂ ಬೆಳ್ಗತ್ತೆಯುಂ ಪೇಪಂದಿಯುಂ ನಾಯುಮಾಗಿ ಮತ್ತಮಿಾ ಚಂಪಾಪುರದೊಳ್ ಮಾದೆಂಗಕುಲದೊಳ್ ಜಾತ್ಯಂಧಕಿಯಾಗಿ ಪುಟ್ಟಿ ಬೆಳೆದೀ ವ್ರತಿಗಳ ಬೋಧನೆಯಿಂದಣುವ್ರತಂಗಳಂ ಕೈಕೊಂಡು ಬೞಿಕ್ಕ ಭೋಗಾಸಕ್ತೆಯಾಗಿ ನಿದಾನಂಗೆಯ್ದು ನಿಮ್ಮ ಪುರೋಹಿತನಪ್ಪ ನಾಗಶರ್ಮಂಗಂ ತ್ರಿವೇದಿಗಂ ಮಗಳಾಗಿ ಪುಟ್ಟಿದೊಡೆ ನಾಗರ್ಗೆ ಪರಸಿ ಪಡೆದೆಮೆಂದಜ್ಞಾನದಿಂ ನಾಗಶ್ರೀಯೆಂದು ಪೆಸರನಿಟ್ಟು ನಾಗರೆ ಕುಲದೈವಮಾಗೆಕೊಂಡಾಡುತ್ತುಮಿರ್ದೀಗಳೀ ನಾಗಶ್ರೀಯುಮಿಾ ಮುಮುಕ್ಷುಗಳನಿಂದಿಲ್ಲಿ ನಿರೀಕ್ಷಿಸುವುದುಂ ಕರ್ಮಕ್ಷಯೋಪಶಮದಿಂ ಜಾತಿಸ್ಮರೆಯಾಗಿ ತದ್ಭವಪ್ರತ್ಯಯದಿಂ ಭವಸ್ವರೂಪಮುಂ ಸದ್ಧರ್ಮಸ್ವರೂಪಮುಮುಂ ಸವಿಸ್ತರಮೆಮ್ಮಲ್ಲಿ ಕೇಳ್ದು ತಿಳಿದು ಸಕಲಸತ್ತ್ವಹಿತಂಗಳಪ್ಪ ಪರಮಶ್ರಾವಕವ್ರತಂಗಳಂ ಕೈಕೊಂಡು ಮನೆಗವೋಪುದುಮಿಾ ವಿಪ್ರೋತ್ತಮಂ ನಾಮಪ್ಪೊಡೆ ವರ್ಣೋತ್ತಮರ್ ನಮಗತ್ತಲಾರುಮಿಲ್ಲಾ ವ್ರತಂಗಳನಾ ವ್ರತಿಗೆ ಮಗುಳೆ ಕೊಟ್ಟುಬರ್ಪಮೆಂದು ಮಗಳನೊಡಗೊಂಡಾತ್ಮೀಯಸ್ಥಾನದಿಂ ನಾಗಸ್ಥಾನಕ್ಕಾಗಿ ಬರ್ಪಾಗಳ್ ಪಂಚಮಹಾಪಾತಕಫಲದಿಂ ಪಂಚತ್ವಮಂ ಪೊರ್ದಿದ ಮನುಷ್ಯರಂ ಕಂಡು ತಂದೆಯಂ ಬೆಸಗೊಂಡು ಪಂಚಾಣುವ್ರತಂಗಳಂ ಪೇೞುತ್ತಮೆಮ್ಮಲ್ಲಿಗೆ ವಂದು ವಂದಿಸಿ ಕುಳ್ಳಿರ್ಪುದುಮಿಾ ನಾಗಶರ್ಮಂ ಸಿಗ್ಗಾಗಿ ಪೋಗೆ ನಿಮ್ಮನೊಡಗೊಂಡು ಬಂದೊಡೀ ಕೂಸು ತಾನಾಭವದೋದಿದೋದುಗಳೀಗಳ್ ಜಲಕ್ಕನಾದುವಪ್ಪುದಱಿಂ ವೇದವೇದಾಂತಾದಿ ಸಮಸ್ತ ಶಾಸ್ತ್ರಗಳನೀಗಳಿಲ್ಲಿ ನಿರೂಪಣೆಗೆಯ್ದಳಿವರ ವೃತ್ತಾಂತಮಿಾಯಂದಮೆಂಬುದುಂ ನಿಟಿಳತಟಘಟಿತಕರಪುಟಕಮಳಮುಕುಲಯುಕ್ತನಾಗಿ

ಪರಮಜಿನೇಶ್ವರ ತತ್ವ ।
ಸ್ವರೂಪಮಂ ವಿಗತತಾಪಮಂ ಮೋಕ್ಷಸುಖಾ ॥

ಕರಮಂ ಮುನಿ ನಮಗೀಗಳ್ ।
ನಿರೂಪಣಂ ಗೆಯ್ಯಿಮೆಂದು ಬಿನ್ನವಿಸುವುದುಂ ॥೨॥

ಕಿಱಿದಱಿಕೊಳಶೇಷತತ್ವಮ ।
ನಱಿವಂತಿರೆ ಸೂಕ್ತಮಾಗೆ ಮಿಥ್ಯಾತ್ವತಮಂ ॥
ಪಱಿಪಟ್ಟು ಮುಟ್ಟುಗೆಟ್ಟ
ಳ್ಕುಱೆ ಜನಪತಿಗಱಿವ ತೆಱದಿ ಮುನಿಪತಿ ನುಡಿದಂ ॥೩॥

ತರದಿಂ ಜೀವಮಜೀವಮಾಸ್ರವಮಘವ್ಯಾಪಾರಬಂಧಂ ಸುಸಂ ।
ವರಮಾ ನಿರ್ಜರೆ ಮೋಕ್ಷಮೆಂದು ಸಲೆ ತತ್ವಂ ಸಪ್ತಭೇದಂ ಜಿನೇ ।
ಶ್ವರವಕ್ತ್ರಾಬ್ಜವಿನಿರ್ಗತಂ ಸಕಲಪಾಪಾಟೋಪತಾಪಾಪಹಂ ।
ಪರಮಾನಂತಸಖೈಕಸಂಪದಕರಂ ತಾನಕ್ಕುಮುರ್ವೀಶ್ವರಾ ॥೪॥

ವ॥ ಅಲ್ಲಿ ಪರೋಕ್ಷಜ್ಞಾನಮೆನಿಸಿ ದ್ರವ್ಯಂಗಳೊಳ್ ಕೆಲವೆ ಪರ್ಯ್ಯಾಯಂಗಳನೆ ಕೈಕೊಂಡನಿಂದ್ರಿಯೇಂದ್ರಿಯಜಮಾಗಿ ಬರ್ಪಾದ್ರವಗ್ರಹಾದಿ ವಿಭೇದದಿಂ ಮೂನೂಱ ಮೂವತ್ತಾಱು ವಿಕಲ್ಪದಿಂ ನೆಱೆದು ನಿಂದಾಭಿನಿಬೋಧಕಜ್ಞಾನಮುಮಾ ಸ್ಥಿತಿಯೊಳಂಗಾಂಗ ಬಾಹ್ಯಭಾವಿತಾನಂತ ವಿಷಯದಿಂ ದ್ವ್ಯನೇಕದ್ವಾದಶವಿಕಲ್ಪ ಮಪ್ಪ ಶ್ರುತಜ್ಞಾನಮುಂ ವಿಕಳ ಪ್ರತ್ಯಕ್ಷದಿನದೊಂದು ವಿಸ್ತೀರ್ಣಮಾಗಿ ಪುದ್ಗಲ ಮರ್ಯಾದೋಕ್ತಮೆನಿಸಿ ದೇವನಾರಕರ್ಗೆ ಭವಪ್ರತ್ಯಯವಮಾಗಿ ಮನುಷ್ಯತಿರ್ಯಗ್ಜೀವಕ್ಕೆ ಕ್ಷಯೋಪಶಮನಿಮಿತ್ತಮಾಗಿ ಹೀಯಮಾನವರ್ಧಮಾನಾವಸ್ಥಿತಾಸ್ಥಿತಾನುಗಾಮ್ಯನನುಗಾಮಿಸ್ವರೂಪದಿಂವಷಟ್ಪ್ರಕಾರಮಪ್ಪ ದೇಶಪರಮಸರ್ವಾಧಿಜ್ಞಾನಮುಂ ಪುದ್ಗಲಸಂಪ್ರಭೇದದಲು ಸರ್ವಾವಧಿಜ್ಞಾನಾಂತಿ ಮಭಾಗಮನೆ ಕೈಕೊಂಡು ನೃಕ್ಷೇತ್ರ ವಿಷಯದಿಂ ಪರಮನಃಸ್ಥಿತಾರ್ಥ ಗ್ರಹಣಧಾರಣಸಮರ್ಥ ಮನಃಪರಿ ವಿದ್ಯಾಮಂತ್ರ ಮಹಿತಗುಣದಿಂ ನೆಱೆದು ವಿಶುದ್ಧ್ಯಪ್ರತಿಪಾತಾಭ್ಯ ವಿಶೇಷದಿಂ ಋಜು ವಿಪುಲ ಮತಿವಿಕಲ್ಪದಿಂ ದ್ವಿಪ್ರಭೇಧಮಪ್ಪ ಮನಃಪರ್ಯಯಜ್ಞಾನಮುಂ ಕ್ಷಾಯಿಕಮುಮೇಕಮುಮನಂತಮುಂ ತ್ರಿಕಾಲಸರ್ವಾರ್ಥ್ಯಯುಗಪದವಭಾಸಮು ಮಜ್ಞಾನಘಟಿತ ತಮಃ ಪಟಲ ವಿಘಟನಪಟುವುಂಘಾತಿಕರ್ಮ್ಮಘಾತೋತ್ಪತ್ತಿ ಹೇತುವುಂ ಸಕಲಪ್ರತ್ಯಕ್ಷಮುಮಪ್ಪ ಸಕಲ ವಿಮಲ ಕೇವಲಜ್ಞಾನಮುಮೆಂಬೀ ಸಂಜ್ಞಾನಪಂಚಕಮುಂ ಮತ್ಯಜ್ಞಾನಂ ಶ್ರುತಜ್ಞಾನಂ ವಿಭಂಗಜ್ಞಾನಮುಮೆಂಬ ಅಜ್ಞಾನ ತ್ರಿತಯುಮುಂ ಇಂತು ಸಂಜ್ಞಾನಾಭೇದಭಿನ್ನದಿನೆಂಟುತೆಱನಪ್ಪುದು ತಾಂ ಜ್ಞಾನೋಪಯೋಗ ಮೆಂಬುದು ಚಕ್ಷುರಚಕ್ಷುರವಧಿ ಕೇವಲದರ್ಶನಮೆಂದು ಚತುರ್ವಿಕಲ್ಪಮನುಳ್ಳುದು ದರ್ಶಮನೋಪಯೋಗಮೆಂಬುದು ಇಂತೀ ಜ್ಞಾನದರ್ಶನೋಪಯೋಗ ಲಕ್ಷಣಮಾಗೆ ಸುಕೃತದುಷ್ಕೃತಕರ್ಮೋಪಾರ್ಜಿತನುಂ ತತ್ಫಳಭಾಜನನುಂ ಮೂರ್ತಾಮೂರ್ತಲಕ್ಷಣನುಂ ಸ್ವಶರೀರಮಾತ್ರನುಂ ಸಂಹರಣವಿಸರ್ಪಣ ಧರ್ಮನುಮುತ್ಪಾದ ವ್ಯಯದ್ರವ್ಯಾತ್ಮಕನುಂ ಕರ್ಮನೋಕರ್ಮಾದಿ ಸಂಬಂಧನುಂ ಸ್ವಸಂವೇದ್ಯನುಮೂರ್ಧ್ವಗತಿ ಸ್ವಭಾವನ

ಪ್ರಮಿತಗುಣನುಮಪ್ಪನಸಂಖ್ಯೇಯ ಪ್ರದೇಶನುಮನಂತಜ್ಞಾನಾದಿಗುಣನುಮನಂತಾನುಭವಭಾಗಿಯುಮನಾದ್ಯನಿಧನಸ್ವಭಾವಮಪ್ಪುದು ಜೀವನಾ ಜೀವನನಾವುಪಾಯದಿನುಪಲಕ್ಷಿಸಲ್ ಬರ್ಕುಮೆಂದೊಡೆ ಭಾವೋಪಲಕ್ಷಕಂ ಜೀವನೆಂಬುದು ಆವಾವುವೆಂದೊಡೆ ಔದಯಿಕಭಾವಂ ಔಪಶಮಿಕ ಭಾವಂ ಕ್ಷಾಯಿಕಭಾವಂ ಕ್ಷಾಯೋಪಶಮಿಕಭಾವಂ ಪಾರಿಣಾಮಿಕ ಭಾವಮೆಂದಿಂತು ಭಾವಮಯ್ದುತೆಱನಕ್ಕುಮಲ್ಲಿ

ಕ್ರಮದಿಂದಿರ್ತ್ತೆಱನಕ್ಕುಮೌಪಶಮಮೊಂಬತ್ತಕ್ಕುಮಾ ಕ್ಷಾಯಿಕ ।
ಕ್ರಮಮಷ್ಟಾದಶಮಾ ಕ್ಷಯೋಪಶಮಮಿರ್ಪತ್ತೊಂದು ಭೇದಂ ಗುಣಾ ।
ಗಮಮೌದೈಕಮೆ ಪಾರಿಣಾಮಿಕ ವಿಭೇದಂ ಮೂಱುಭೇದಂ ನೃಪೋ ।
ತ್ತಮ ನೀಂ ಭಾವಿಸು ಭಾವಿತಾತ್ಮನೆನಿಸಿರ್ದಾ ಪಂಚಭಾವಂಗಳಂ ॥೫॥

ಅಕ್ಕರ ॥ ಉಪಶಮಭಾವಂ ಸಮ್ಯಕ್ತ್ವಂ ಚಾರಿತ್ರಮೆಂದಿವು
ತಾವೌಪಾಪಶಮಕಭಾವದರ್ಧು ವಿಕಲ್ಪಂ ।
ವಿಪುಲಕ್ಷಾಯಿಕ ಸಮ್ಯಕ್ತ್ವ ಚಾರಿತ್ರ ಜ್ಞಾನ ದರ್ಶನ ಲಾಭ ಭೋಗೋಪಭೋಗ
ವೀರ್ಯಮಿಂತಿ ಭಾವಿಸಲು ಕ್ಷಾಯಿಕಭಾವವಿಕಲ್ಪಮಕ್ಕುಂ ।
ಮಾಪ್ರಿಷಿಧರ ಭಾವದಿಂ ಭಾವಿಸು ನೀನಿದಂ ಜಿನತತ್ವಸದ್ಭಾವಮಂತರದಿಂ ವೇದತ
ಸಮ್ಯತ್ತಮಂತೆ
ಸರಾಗಚಾರಿತ್ರಮುಂ ಮೇಲೆನಿಸಿ ನಿರುತಂ ಸಂಯಮಾಸಂಯಮಂ ಮತಿಶ್ರುತಾ
ವಧಿಮನಃ ಪರ್ಯ್ಯಯಮತ್ಯಜ್ಞಾನಂ ।
ಪರಿವಿಭಂಗಶ್ರುತಾಜ್ಞಾನಂ ಚಕ್ಷುರಚಕ್ಷುರವಧಿಭೇದದರ್ಶನಮುಂ ದಾನಲಾಭ
ಭೋಗೋಪಭೋಗವೀರ್ಯಮೆಂದಿವು ಮಿಶ್ರಭಾವದವಿಕಲ್ಪಂ ॥ (?)

ಗತಿಮೆಯ್ವೆತ್ತ ಕಷಾಯಲಿಂಗತತಿ ಮಿಥ್ಯಾದರ್ಶನ ಜ್ಞಾನಮ ।
ಪ್ರತಿಮಾಸಂಯತೆ ತಾನಸಿದ್ಧತೆ ನಿತಾಂತಂ ಲೇಶ್ಯೆಯೆಂದಿರ್ಪತೊಂ
ದುತೆಱಂ ಕೋವಿದರಿರ್ದು ಭಾವಿಸುವೊಡಿನ್ನೌದಯ್ಕಭಾವಂ ವಿಚಾ ।
ರತೆಯಿಂದಾರಯೆ ಪಾರಿಣಾಮಮದು ಜೀವಭವ್ಯಭವ್ಯತ್ರಯಂ ॥೬॥

ವ ॥ ಇಂತೀ ಪೇೞ್ದ ಪಂಚಭಾವಂಗಳಿನುಪಲಕ್ಷಿಸೆಪಟ್ಟ ಜೀವಂ ಸಂಸಾರಿಯುಂ ಮುಕ್ತನುಮೆಂದೆರಡು ತೆಱನಕ್ಕುಮಾ ಸಂಸಾರಿಯುಂ ಸ್ಥಾವರತ್ರಸವಿಕಲ್ಪದಿಂ ದ್ವಿವಿಧ ಮಕ್ಕುಮಲ್ಲಿ ಸ್ಪರ್ಶಮೆಂದೇಕೇಂದ್ರಿಯದಿಂ ಪೃಥಿವ್ಯಪ್ತೇಜೋವಾಯುವನಸ್ಪತಿ ಕಾಯಿಕಮೆಂದು ಸೂಕ್ಷ್ಮಬ್ರಾದರ ಸ್ವರೂಪದಿಂ ಸ್ಥಾವರಪಂಚಪ್ರಕಾರಮಕ್ಕುಂ ಸ್ಪರ್ಶನ ರಸನ ಘ್ರಾಣ ಚಕ್ಷು ಶ್ರೋತ್ರೇಂದ್ರಿಯಂಗಳೇಕೈಕವೃದ್ಧಿಯಿಂ ಕ್ರಿಮಿಪಿಪೀಲಿಕಾಭ್ರಮರ ಮನಷ್ಯಾದಿ ವಿಭೇದಮಾಗಿ ದ್ವೀಂದ್ರಿಯಾದಿ ತ್ರಸಂಗಳ್ ದ್ವೀಂದ್ರಿಯತ್ರೀಂದ್ರಿಯ ಚತುರಿಂದ್ರಿಯಂಗಳುಂ ಪಂಚೇಂದ್ರಿಯಂಗಳುಂ ವಿಕಳೇಂದ್ರಿಯಂಗಳುಂ ಸಕಳೇಂದ್ರಿಯಂಗಳಕ್ಕುಂ ಆ ಪಂಚೇಂದ್ರಿಯಮುಂ

ಸಂಜ್ಞಿಯುಸಂಜ್ಞಿಯೆಂಬ ಭೇದದಿಂದಿತ್ತೆಱನಕ್ಕುಂ ಆಹಾರಶರೀರೇಂದ್ರಿಯೋಚ್ಛ್ವಾಸ ಭಾಷಾಮನಮೆಂಬ ಷಟ್ಪರ್ಯಾಪ್ತಿಗಳ್ ಪಂಚಸ್ಥಾವರಕ್ಕಮಸಂಜ್ಞಿಗಂ ಚತುಃಪಂಚ ಮಾತ್ರಮಕ್ಕುಂ ಸಂಜ್ಞಿ ಜೀವಂ ಷಟ್ಪರ್ಯಾಪ್ತಕಮಕ್ಕುಂ ಪಂಚೇಂದ್ರಿಯಪ್ರಾಣಂ ಮನೋವಾಕ್ಕಾಯಬಲ ಪ್ರಾಣಮಾಯುಃಪ್ರಾಣಮುಮುಚ್ಛ್ವಾಸನಿಶ್ವಾಸಪ್ರಾಣಮುಮೆಂಬ ದಶಪ್ರಾಣಂಗಳೇ ಕೇಂದ್ರಿಯಾದಿಗಳ್ಗೆ ಚತುಷ್ಷಟ್ಸಪ್ತಾಷ್ಟನವದಶಪ್ರಾಣಪ್ರಮಾಣಮಕ್ಕುಮೆಂದು ನಿಶ್ಚಯಂಗೆಯ್ವುದು

ನೆಗಱ್ದಾಹಾರಂ ಭಯಮೊ ।
ಳ್ಪಗೆಟ್ಟ ಮೈಥುನಪರಿಗ್ರಹಂಗಳ್ ಸಂಸಾ ॥
ರಿಗಳೊಳ್ ಸಾಮಾನ್ಯದಿನೆ ।
ಯ್ದುಗುಂ ನಿರಂತರಮಶೇಷವಸುಧಾಧೀಶಾ ॥೭॥

ಶೀತೋಷ್ಣವಿವೃತಸಂವೃತ ।
ಚೇತಾತೇತಪ್ರಮಿಶ್ರಭೇದದೆ ನವಸಂ ॥
ಖ್ಯಾತಂ ತದ್ಯೋನಿಸಮು ।
ದ್ಭೂತಂ ಗರ್ಭೋಪಪಾದಸಮ್ಮೂರ್ಛನೆಗಳ್ ॥೮॥

ಮಾತೇಂ ಜರಾಯುಜಾಂಡಜ ।
ಪೋತಂಗಳ್ ಗರ್ಭಸಂಭವಂ ದ್ಯೌನಿರಯೋ ॥
ದ್ಭೂತಮುಪಪಾದಜಂ ವಿ ।
ಖ್ಯಾತಂ ಸಮ್ಮೂರ್ಛಿತಂಗಳುೞಿದುವಶೇಷಂ ॥೯॥

ಸಕಳೋರ್ವೀಪತಿ ನೀಂ ಬಗೆ ।
ದು ಕೇಳನುಕ್ರಮದಿನಯ್ದು ಭೇದದಿನೌದಾ ॥
ರಿಕವೈಕ್ರೀಯಕಮಾಹಾ ।
ರಕ ತೈಜಸಕಾರ್ಮಣಂಗಳಿವು ತನುವೆನಿಕುಂ ॥೧೦॥

ಮಾನವತಿರ್ಯಗ್ಜಾತಿಗೆ ।
ತಾನೌದಾರಿಕಮಮರ್ತ್ಯನಾರಕಯುಗ್ಮ ॥
ಸ್ಥಾನಕ್ಕೆ ವೈಕ್ರಿಯಾಂಕಂ ।
ತಾನಾಹಾರಂ ಪ್ರಮತ್ತಸಂಯತನೆಡೆಯೊಳ್ ॥೧೧॥

ಅನುಪಮ ತೈಜಸಕಾರ್ಮಣ ।
ತನುಗಳ್ ಜೀವನೊಳನಾದಿಸಂಬಂಧಂ ನೆ ॥
ಟ್ಟನೆ ತೈಜಸವೈಕ್ರಿಯಕಂ ।
ತನು ಋದ್ಧಿಪ್ರಾಪ್ತರೆಡೆಯೊಳಂ ಸಮನಿಸುಗುಂ ॥೧೨॥

ದೇವರೊಳಾಗಿರ್ಕುಂ ಪುಂ ।
ಸ್ತ್ರೀವೇದಂ ನಿರಯಜನಿತಸಮ್ಮೂರ್ಛಿತರೊಳ್ ॥
ಭಾವಿಸೆ ಷಂಡಕವೇದಂ ।
ತಾವುೞಿದವರೊಳ್ ತ್ರಿವೇದಮುಂ ಸಂಭವಿಕುಂ ॥೧೩॥

ಧೃತನಿರಯಜಾರ್ಯವರಚರ ।
ಮತನು ದಿವ್ಯೋದ್ಭೂತನನಪವರ್ತ್ಯಾಯುಷ್ಯ ॥
ಸ್ಥಿತರುೞಿದ ಸಕಲತತ್ವ ।
ಪ್ರತತಿಗಳುಪಸಂಹೃತಾಪವರ್ತ್ಯಾಯುಷ್ಯರ್ ॥೧೪॥

ವ ॥ ಮುಕ್ತಜೀವನಪ್ಪೊಡೇಕಪ್ರಕಾರನುಮನಾಕಾರನುಮಶರೀರಾಕಾರದಿಂ ಕಿಂಚಿದೂನನುಂ ಅನುಪಮಾನನುಮವಾಙ್ಮನ ಸಗೋಚರನುಮನಸ್ಕನುಮನಂತ ಚತುಷ್ಟಯಾಸ್ಪದನುಮಷ್ಟಾದಶದೋಷ ವರ್ಜಿತನುಮಪುನರ್ಜಾತನುಮಕ್ಷಯನು ಮಕ್ಕುಮೆಂದುಜೀವತತ್ವಮಂ ಸಮುಚ್ಚಯವಚನದಿಂ ಸವಿಸ್ತರಂ ಬೆಸಸಿ ಬೞಿಯಂ ಮೂರ್ತಸ್ವರೂಪದಿಂ ರಸಗಂಧವರ್ಣಶಬ್ದ ಬಂಧ ಸೂಕ್ಷ್ಮಸ್ಥೌಲ್ಯ ಸಂಸ್ಥಾನಭೇದ ತನುಃಚ್ಛಾಯಾತಪೋದ್ಯೋತವಂತಮಾಗಿ ಶರೀರವಾಙ್ಮನಃಪ್ರಾಣಾಪಾನ ಸುಖದುಃಖ ಜೀವಿತಮರಣೋಪಗ್ರಹಪ್ರಾಪ್ತಿಶಕ್ತಿಸಂಯುತಾಚೈತನ್ಯಮಪ್ಪುದಜೀವತತ್ವಮೆಂಬುದು

ಯೋಗತ್ರಿಯನಿಯೋಗಸ ।
ಮಾಗಮಮದಾಸ್ರವಮಶುಭಶುಭಯೋಗಸಮಾ ॥
ಯೋಗದಿನಶುಭಶುಭಾಸ್ರವ ।
ಮಾಗಿ ಜಿನಾಗಮದೊಳಿರ್ತ್ತೞಿಂ ತಾನಕ್ಕುಂ ॥೧೫॥

ಜ್ಞಾನಿಗಳೊಳ್ ತತ್ವದೊಳಭಿ ।
ಮಾನಿಗಳೊಳ್ ಗುರುಗಳೊಳ್ ಸಮಾತ್ಸರ್ಯಮಪ ॥
ಧ್ಯಾನಮಹರ್ಷಮವಿನಯಂ ।
ಜ್ಞಾನದೃಗಾವರಣದಾಸ್ರವಕ್ಕೆ ನಿಮಿತ್ತಂ ॥೧೬॥

ಕ್ಷಮೆಯುಂ ಕಾರುಣ್ಯಮುಮು ।
ತ್ತಮಮಧ್ಯಮಪಾತ್ರದಾನಮುಂ ನಿರುಪಮ ಶೌ ॥
ಚಮುಮಖಿಳಸಂಯಾಮಾಸಂ ।
ಯಮಮುಂ ಸದ್ವೇದ್ಯದಾಸ್ರವಂ ತಾನಕ್ಕುಂ ॥೧೭॥

ತಾಪಾಕ್ರಂದನ ಶೋಕಮ ।
ಹಾಪರಿದೇವನ ವಿಷಾದಮನಮಿವನನ್ಯಾ ॥

ತ್ತೋಪಗತವೆನಿಸಿ ಪಾಪಾ ।
ಟೋಪಾಶುಭವೇದನೀಯದಾಸ್ರವಮಕ್ಕುಂ ॥೧೮॥

ಪರಮಾತ್ಮಂ ಪರಮಾಗಮಂ ಪರಮಚಾತುರ್ವರ್ಣ್ಯಮಾರ್ಹಂತ್ಯಮು ।
ದ್ಧುರ ಸದ್ಧರ್ಮಮಿವಂ ತಿರಸ್ಕರಿಸೆ ಸಾರ್ಗುಂ ದೃಷ್ಟಿಮೋಹಾಸ್ರವಂ ।
ಖರಕೋಪಾದಿಕಷಾಯದುಬ್ಬರಿಕೆಯಿಂ ಚಾರಿತ್ರಮೋಹಾಸ್ರವಂ ।
ದೊರೆಕೊಳ್ಗುಂ ಸಮಸಂದ ಸತ್ವನಿಕುರುಂಬಕ್ಕೆಂಬುದಂ ನಂಬು ನೀಂ ॥೧೯॥

ಅತಿಸಾವದ್ಯಪರಿಗ್ರಹಪ್ರಚಯದಿಂ ಶ್ವಭ್ರಾಸ್ರವಂ ಸಾರ್ಗುಮ ।
ನ್ವಿತಮಾಯಾವಿಕೃತಿಪ್ರಪಂಚದೊದವಿಂ ತಿರ್ಯಗ್ಭವಾಯುಷ್ಯಮು ।
ದ್ಧೃತಮಕ್ಕುಂ ಲಘುಮೂರ್ಛೆಯಿಂ ಮೃದುಪರೀಣಾಮಸ್ವಾಭಾವೋದಿತೋ ।
ರ್ಜಿತಪಲ್ಲುಗ್ರತ್ವದಿನಕ್ಕುಮನ್ವಿತಮನುಷ್ಯಾಯುಷ್ಯದೊಂದಾಸ್ರವಂ ॥೨೦॥

ತರದಿಂದ ಕಾಮನಿರ್ಜರೆ ।
ಸರಾಗಸಂಯಮಗುಣಂ ಸ್ವಭಾವಮೃದುತ್ವಂ ॥
ಪರಿವರ್ತಿಪ ಬಾಳತಪ ।
ಶ್ಚರಿತ್ರಮಿವು ದಿವಿಜರಾಯುಗಾಸ್ರವಮಕ್ಕುಂ ॥೨೧॥

ಯೋಗದ ಕುಟಿಲತೆ ತಾನಶು ।
ಭಾಗಮುಮಪ್ಪಶುಭನಾಮಮಂ ಯೋಗಸಮಾ ॥
ಯೋಗರುಜುತ್ವಂ ಶುಭನಾ ।
ಮಾಗಮಮುಂ ಜಿನಮತೋಕ್ತಿಯಿಂ ಜನಿಯಿಸುಗುಂ ॥೨೨॥

ಅಕ್ಕರ ॥ ಪರಮದರ್ಶನವಿಶುದ್ಧಿ ಸದ್ವಿನಯಸಂಪನ್ನತೆ ಸಂಶುದ್ಧಶೀಲವ್ರತಂ ।
ವರತಪೋಮಾರ್ಗಂ ತ್ಯಾಗಂ ಸಾಧುಸಮಾಚಾರಂ ಚಾತುರ್ವರ್ಣಂಗಳೊಳ್ ವೈಯ್ಯಾಪೃತ್ಯಂ।
ಮರುಹದಾಚಾರ್ಯಶ್ರುತ ಬಹುಶ್ರುತಭಕ್ತಿಸಂವೇಗ ಸಂಜ್ಞಾನಮಾವಶ್ಯಕಂ
ಸ್ಥಿರಧರ್ಮವಾತ್ಸಲ್ಯಂ ಧರ್ಮಪ್ರಭಾವನೆ ತೀರ್ಥಕೃನ್ನಾಮಕಾಸ್ರವಕಾರಣಂ ॥೨೩॥

ತನಗಿಲ್ಲದಂತುಟಂ ತಾ ।
ನೆ ನೆಗಟ್ಟುವ ಪೆರಗುಣಂಗಳಂ ಮುಚ್ಚುವ ತ ॥
ನ್ನ ನೆ ಪೊಗಟ್ಟಿ ಲೋಗರಂ ಪಟಿ ।
ವ ನೀಚನೊಳ್ ನೀಚಗೋತ್ರದಾಸ್ರವಮಕ್ಕುಂ ॥೨೪॥

ಸ್ವಗುಣಪ್ರಚ್ಛಾದನಮ ।
ನ್ಯಗುಣಾವಿಷ್ಕರಣಮಾತ್ಮದೂಷಣಮನ್ಯೋ ॥

ಪಗಮ ಪುರಸ್ಕಾರಮಪಾ ।
ರಗುಣಗಣಂಗುಚ್ಚಗೋತ್ರದಾಸ್ರವಮಕ್ಕುಂ ॥೨೫॥

ಪಲತೆಱದಿಂ ಲೋಗರ್ದಾ ।
ನಲಾಭಭೋಗೋಪಭೋಗವೀರ್ಯಾದಿಗಳಂ ॥
ಸಲಿಸುವೆಡೆಗೆಡೆಗೆವಾಯ್ದುಂ ।
ಬಟಿಸಂದೊಂಗಂತರಾಯಮನುಬಂಧಿಸುಗುಂ ॥೨೬॥

ವ ॥ ಎಂದಾಸ್ರವತತ್ವಮಂ ಸ್ವರೂಪದಿಂ ಪೇೞೆ ಕೇಳ್ದು

ಕ್ರಮದಿಂ ಮಿಥ್ಯಾತ್ವಮಸಂ ।
ಯಮಂ ಪ್ರಮಾದಂ ಕಷಾಯಯೋಗಂಗಳ್ ॥
ಕ್ರಮಹೇತುವಾಗಿ ಜೀವನೊ ।
ಳಮರ್ಗುಂ ಬಂಧಂ ತಮಂಧದುರಿತಸ್ಕಂದಂ ॥೨೭॥

ವ ॥ ಅಂತು ಜೀವನೊಳ್ ಕ್ಷೀರನೀರನ್ಯಾಯಮಾಗಿ ಕರ್ಮಯೋಗ್ಯಂಗಳಪ್ಪ ಪುದ್ಗಲಂಗಳೊಳ್ ಪರಸ್ಪರಪ್ರದೇಶೋಪಸ್ಪೃಷ್ಟಿಯಂ ಸಮಸಂದು ಪರಿಣಮಿಸುವ ಬಂಧಂ ಪ್ರಕೃತಿಸ್ಥಿತ್ಯನುಭಾಗಪ್ರದೇಶಪ್ರವಿಭಾಗದಿಂ ಚತುರ್ವಿಧಮಕ್ಕುಮಲ್ಲಿ ಮೂಲ ಪ್ರಕೃತಿಗಳೆಂಟುಮಮಂ ಬಾದರಸ್ವರೂಪದಿಂ ನೂಱನಾಲ್ವತ್ತೆಂಟು ವಿಕಲ್ಪಮಾದುತ್ತರ ಪ್ರಕೃತಿಗಳುಮನೊಳಕೊಂಡನುಬಂಧಿಸುವ ಬಂಧಂ ಪ್ರಕೃತಿಬಂಧಮೆಂಬುದಕ್ಕುಂ

ಅಕ್ಕರ ॥ ಜ್ಞಾನದರ್ಶನಾವರಣವೇದ್ಯಾಂತರಾಯಂಗಳೊಳಾಮೂವತ್ತು ಕೋಟಾಕೋಟಿ ।
ತಾನೆರ್ಪ್ಪತ್ತುಕೋಟಿಕೋಟಿಸ್ಥಿತಿ ಮೋಹನೀಯದೊಳೊಂದಿ ಸಂಬಂಧಿಸುಗಂ।
ಜೈನಮತದೊಳಿರ್ಪ್ಪತ್ತುಕೋಟಿಕೋಟಿ ನಾಮಗೋತ್ರಂಗಳೊಳ್ ಸಾಗರೋಪಮಂ ।
ನೀನಿಂದು ನಂಬು ಮೂವತ್ತಮೂಱಾಯುಷ್ಕರ್ಮದೊಳುತ್ಕೃಷ್ಟಸ್ಥಿತಿಯೆನಿಕ್ಕುಂ ॥

ಮಿಕ್ಕಿರ್ದ ವೇದನೀಯದೊ ।
ಳಕ್ಕುಂ ಪನ್ನೆರಟುಮ್ಹೂರ್ತಮೆಂಟುಮುಹೂರ್ತ ॥
ಲೆಕ್ಕಕ್ಕೆ ನಾಮಗೋತ್ರದೊ ।
ಳಕ್ಕುಂ ಪೆಱವಱೊಳನುತ್ತರಾಂತಮುಹೂರ್ತಂ ॥೨೮॥

ಪುದಿದ ಶಿಥಿಲಪರಿಣಾಮದೊ ।
ಳೊದವಿದ ದುರಿತಾನುಗತಮದನುಭಾಗಮೆನಿ ॥
ಪ್ಪುದು ಶರ್ಕರಾದಿಕಿಂಪಾ ।
ಕದುರ್ವಿಪಾಕಪ್ರಭಾವಶಕ್ತಿಪ್ರತಿಮಂ ॥೩೦॥

ಕ್ಷಿತಿರಸಮಂ ರವಿದ್ಯುತಿ ನಿಜದ್ಯುತಿಯಿಂ ತೆಗೆವಂತೆ ನೋಟಿಪ್ಪೊಡ ।
ನ್ವಿತಮೆನೆ ಕಾಯ್ದುಗುಂಡು ಜಲಮಂ ಸ್ಥಲದಿಂ ತೆಗೆವಂತೆ ಜೀವನ ।
ಪ್ರತಿಹತಕರ್ಮಯೋಗ್ಯಬಹುಪುದ್ಗಲಮಂ ಸಕಲಪ್ರದೇಶಸಂ ।
ಗತಿಯಿನನಾರತಂ ತೆಗೆಯುತಿರ್ಪನೆಗಟ್ಟಿ ಚತುರ್ಥಬಂಧನಂ ॥೩೧॥

ವ॥ ಎಂದು ಬಂಧತತ್ವಮಂ ಸಂಬಂಧಿಸಿ

ಜಿನಪತಿಮತದಿಂದಂ ಯೋ ।
ಗನಿರೋಧಂ ತನ್ನೊಳೆಸೆಯೆ ಕರ್ಮಾಸ್ರವಮಂ ॥
ಜನಿಯಿಸಲೀಸದೆ ಸದ್ಗುಣ ।
ದಿನಂತವಂ ತಗೆವುದದುವೆ ಸಂವರಮಕ್ಕುಂ ॥೩೨॥

ಕೃಪೆಯಿಂ ಚಾರುಚರಿತ್ರದಿಂ ಸಮಿತಿಯಿಂ ಸದ್ಧರ್ಮದಿಂ ಗುಪ್ತಿಯಿಂ ।
ತಪದಿಂ ನಿರ್ಜರೆಯಕ್ಕುಮೌಪಶಮಿಕಂ ಸನ್ಮಿಶ್ರಮೌದಯ್ಯಕವೆಂ ।
ಬ ಪೃಥಗ್ಭಾವದ ಮಿಕ್ಕಭವ್ಯತೆಯ ಕೇಡಿಂದಕ್ಕುಮಕ್ಷೂಣ ಮೋ ।
ಕ್ಷಪದಂ ಮುಕ್ತಿಪದಂ ನಿರಾಮಯಪದಂ ನಿರ್ವಾಣಸೌಖ್ಯಾಸ್ಪದಂ ॥೩೩॥

ಇದು ಸಿದ್ಧಾಂತೋರುನೀರಾಕರಜನಿತಮಿದಾಭೀಳದುಸ್ಸಾರಸಂಸಾ ।
ರದುರಂಕ್ಷಿತ್ಯುಗ್ರದಾವಪ್ರಶಮನಕರಣಂ ಪ್ರೀಣಿತಪ್ರಾಣಿ ತಾನೆಂ ।
ಬುದನಾಗಳ್ ಯೋಗಿನಾಥಾನನಕಮಲವಿನಿರ್ಮುಕ್ತಮಂ ಶ್ರೋತ್ರಸತ್ಪಾ ।
ತ್ರದೆ ಪೀರ್ದಂ ತತ್ವಪೀಯೂಷಮನುದಿತಮಹೋತ್ಸಾಹದಿಂ ಚಂದ್ರವಾಹಂ ॥೩೪॥

ಆಗಳ್ ತತ್ವಾರ್ಥಸದ್ಭಾವಮನನುನಯದಿಂ ಕೇಳ್ದು ಕೈಕೊಳ್ವುದುಂ ಸಂ ।
ವೇಗಂ ಕೈಗಣ್ಮೆ ಸಮ್ಯಗ್ನಯನವಿಭವಮಂ ತಾಳ್ದಿ ತದ್ವೇಗದೊಳ್ ನಿ ।
ರ್ವೇಗಂ ತನ್ನಂತರಂಗಕ್ಕೊಡರಿಸೆ ಸಮತಾಭಾವದಿಂ ಸರ್ವಸಂಗ ।
ತ್ಯಾಗಕ್ಕುದ್ಯುಕ್ತನಾದಂ ಮುದಮೊದವೆ ಮಹೋದಾರಗಂಭೀರನಾದಂ ॥೩೫॥

ಮುನಿಚರಣಕಮಲದೊಳ್ ನಿಜ ।
ವಿನತಶಿರಃಪದ್ಮವಿನುತಲೀಲಾಳಕಭೃಂ ॥
ಗನಿಕಾಯಮೆಱಗಿ ತುಱುಗಿರೆ ।
ವಿನಯಾನ್ವಿತನಾಗಿ ತನ್ನೃಪಂ ತತ್ಕ್ಷಣದಿಂ ॥೩೬॥

ವಿಷಮವಿಷಸದೃಶವಿಷಯಾ ।
ಮಿಷಕಾಂಕ್ಷೆಯೆ ತಿಣ್ಣಮಾಗೆ ಮತಿಗೆಟ್ಟು ಮಳೀ ॥

ಮಸನಾದೆನಿನ್ನೆಗಂ ನಿ ।
ರ್ವಿಷನಾಗಿಪುದೆನ್ನನುರುತಪಃಪ್ರತಿವಿಷದಿಂ ॥೩೭॥

ಎಂದು ನಿಜಾತ್ಮಜಂಗೆ ಜಿತಶತ್ರುಗೆ ರಾಜ್ಯಮನಿತ್ತು ಚಂದ್ರಿಕಾ ।
ನಂದನನಾಗಳಂತೆ ತಱಿಸಂದು ಮನೋವಚನಾಂಗಶುದ್ಧಿಯಿಂ ।
ಸಂದಿಸಿ ಶಲ್ಯದಂಡಮನಡಂಗಿಸಿ ಗೌರವಮಂ ಕಟಿಲ್ಚಿ ಜೀ ।
ಯೆಂದು ಸಭಾಸದರ್ಪೊಗಟೆ ಕೊಂಡನಖಂಡಿತ ಜೈನದೀಕ್ಷೆಯಂ ॥೩೮॥

ಪುರಜನಮುಂ ಪರಿಜನಮುಂ ।
ನೆರೆದು ಮನಂಗೊಂಡು ಕೂರ್ತು ಕೀರ್ತಿಸೆ ಧರಣೀ ॥
ಶ್ವರರಯ್ನೂರ್ವರ್ಚೆಂಪಾ ।
ಪುರವರನೊಡನಂದು ದೀಕ್ಷೆಯಂ ಕೈಕೊಂಡರ್ ॥೩೯॥

ಮುನ್ನಿನ ತನ್ನ ಜನ್ಮನಿವಹಂ ತದುಮಾಡೆ ಪದಾರ್ಥನಿಶ್ಚಯಂ ।
ತನ್ನ ಮನಕ್ಕೆ ತೀಡೆ ಖಳಸಂಸರಣಕ್ಕೆ ವಿರಕ್ತೆಯಾಗಿ ವಿ ।
ದ್ವನ್ನಿಕರಂ ಮನದೆಗೊಳ್ವಿನಮೊಂದಿದಘಂ ಸುರುಳ್ವಿನಂ ।
ಕನ್ನೆಯುಮಾ ಮುನೀಶ್ವರರ ಪಕ್ಕದೆ ತಾಳ್ದಿದಳಂದು ದೀಕ್ಷೆಯಂ ॥೪೦॥

ನಾಗಶ್ರೀ ಜಿನದೀಕ್ಷಿತೆ ।
ಯಾಗಲೊಡಂ ನಾಗಶರ್ಮನುಂ ಪರಮತಪಃ ॥
ಶ್ರೀಗೆ ಬಸಮಾದನಾರ ।
ಯ್ವಾಗಳವಾಙ್ಮಾನಸಗೋಚರಂ ಪರಿಣಾಮಂ ॥೪೧॥

ವಂಶಸ್ಥ ॥ ವಿವಿಕ್ತಪಾಣಿಗ್ರಹಣಾಧೀಶನೊಳ್ ।
ಭವಾಬ್ಧಿಯಂ ದಾಂಟುವೆ ಮತ್ತನೂಜೆಯೊಳ್ ।
ಕವಲ್ತ ಮೋಹಂ ತದುಮಾಡೆ ಚಿತ್ತಮಂ ।
ತ್ರಿವೇದಿಯುಂ ತಾಳ್ದಿದಳಂದು ದೀಕ್ಷೆಯಂ ॥೪೨॥

ವ ॥ ಮತ್ತಮಲ್ಲಿ ಕೆಲರ್ಮಿಥ್ಯಾತ್ವಮಂ ಪತ್ತುವಿಟ್ಟು ಸಮ್ಯಕ್ತ್ವಪೂರ್ವಕ ಮಣುವ್ರತಂಗಳಂ ಕೈಕೊಂಡು ದೃಢವ್ರತರಾದರಿಂತೀ ಮುನೀಶ್ವರರಲ್ಲಿ ಧರ್ಮಪ್ರಭಾವನೆಯಂ ಮಾಡಿ ಮುನಿನಿಕಾಯಂ ಬೆರಸು ಮತ್ತಮಾ ವಾಸುಪೂಜ್ಯ ಭಟ್ಟಾರಕರ ಪರಿನಿರ್ವಾಣಕ್ಷೇತ್ರಮನೆಯ್ದೆವಂದು

ಪರಮಾನಂತಗುಣಪ್ರಣೂತಪರಿನಿರ್ವಾಣೋರ್ವಿಯಂ ಘೋರಸಂ ।
ಸರಣಾಂಬೋಧಿಪರಾಯಣಪ್ರಥಿತಕಲ್ಯಾಣೋರ್ವಿಯಂ ಮುಕ್ತಿಸಂ ।

ಭರಮಂ ಭಕ್ತಿಯಿನಂದು ವಂದಿಸಲೊಡಂ ಶ್ರೀಸೂರ್ಯಮಿತ್ರವ್ರತೀ ।
ಶ್ವರನೊಳ್ ಪುಟ್ಟಿದುದಾಗಳಪ್ರತಿಹತಜ್ಞಾನಂ ಮನಃಪರ್ಯಯಂ ॥೪೩॥

ಅಭಿವಿನುತಮನಃಪರ್ಯಯ ।
ವಿಭೂತಿ ದೊರೆಕೊಂಡುದೆಂಬುದಾವುದು ಚೋದ್ಯಂ ॥
ಶುಭಭಾವನೆಯಿಂ ಕೇವಲ ।
ವಿಭೂತಿ ದೊರೆಕೊಳ್ಗುಮೆಂದೊಡಿದು ಪಿರಿದಾಯ್ತೆ ॥೪೪॥

ಸತತಂ ನಿಶ್ಚಳಶುದ್ಧಭಾವನೆಗಳಂ ಭಾವಾತ್ಮಕಂ ತಾಳ್ದೆ ಬು ।
ದ್ಧಿತಪೋವಿಕ್ರಿಯಮೌಷಧಂ ರಸಬಳಾಕ್ಷೀಣಾಭಿಧಾನೋರ್ಜಿತೋ ।
ರ್ಜಿತಸಪ್ತರ್ಧಿಗಳುಂ ಕ್ರಮಕ್ರಮದಿನಾ ವರ್ಣೀಶ್ವರಂಗಾದುವ ।
ನ್ವಿತಸದ್ಧ್ಯಾನಮದೇನನಾಗಿಸದೊ ಸನ್ಮಾರ್ಗಪ್ರಭಾವೋದಯಂ ॥೪೫॥

ಆ ಕ್ಷಣದೊಳಗ್ನಿಭೂತಿ ಮು ।
ಮುಕ್ಷುಗೆ ಮೂಱನೆಯ ದಿವ್ಯಸರ್ವಾವಧಿ ಪು ॥
ಣ್ಯಕ್ಷೇತ್ರ ಶುಭಸ್ಥಾನ ಸ ।
ಮಕ್ಷದೊಳಾದುದು ವಿಶುದ್ಧಿಯಿಂದಾಗದುದೇಂ ॥೪೬॥

ವ ॥ ಅಂತು ಸಮ್ಯಜ್ಞಾನಲಬ್ಧಿಯಿನಲ್ಲಿಂ ತಳರ್ದು ಧರ್ಮೋಪದೇಶಾರ್ಥದಿಂ ಧರ್ಮಕ್ಷೇತ್ರಂಗಳಂ ಸಮುದಾಯಸಹಿತಂ ವಿಹಾರಿಸುತ್ತುಂ ಬಂದು ಮಗಧದೇಶದ ರಾಜಗೃಹಪುರದ ಬಹಿರ್ಭಾಗದ ಮನೋಹರೋದ್ಯಾನದೊಳಾ ಮುನಿಕುಂಜರಂ ಮುನಿಯೂಥಪರಿವೃತನಾಗಿರ್ಪುದುಮಾಪ್ರಸ್ತಾವದೊಳ್ ತದಾಗಮನಕಾರ್ಯಮಂ ತದುದ್ಯಾನಪಾಲಕನಪ್ಪ ರಿಷಿನಿವೇದಕಂ ತತ್ಪುರಾಧೀಶ್ವರನಪ್ಪ ಸುಬಳಮಹಾರಾಜಂಗೆ ಬಿನ್ನಪಂಗೆಯ್ವುದುಮಾ ಧರಿತ್ರೀನಾಥನತ್ಯಂತಹರುಷಾಂತರಂಗನಾಗಿ ಸಿಂಹಾಸನದಿಂದಿೞಿದು ಮುಂದನೇೞಡಿಯಂ ನಡೆದು

ಅವರಿರ್ದದೆಸೆಗೆ ಪೊಡೆವ ।
ಟ್ಟು ವಿವಿಧಮಣಿಭೂಷಣೋತ್ಕರಂಗಳನೊಸೆದಿಂ ॥
ತವಯವದಿಂದಾಗಳ್ ಋಷಿ ।
ನಿವೇದಕಂಗಿತ್ತನಂಗಚಿತ್ತಮನರಸಂ ॥೪೭॥

ವ ॥ ಅಂತು ಋಷಿನಿವೇದಕಂಗಂಗಚಿತ್ತಮಂ ತುಷ್ಟಿದಾನಮನಿತ್ತು ಬೞಿಯ ಮಾನಂದದಿನಾನಂದಭೇರಿಯಂ ಪೊಯ್ಸಿದಾಗಳ್

ಅವನೀಶಂ ಭಕ್ತಿಯಿಂ ಶ್ರೀಮುನಿಚರಣಸರೋಜಾತಮಂ ಕಾಣಲತ್ಯು ।
ತ್ಸವದಿಂ ಪೋದಪ್ಪನೀಂ ಬರ್ಪುದು ತಡೆದಿರವೇಡೆಂದು ನಿರ್ವ್ಯಾಜದಿಂ ಸಾ ।

ಖುವವೊಲ್ ಭೋರೆಂಬಿನಂ ಪೊಣ್ಮಿದುದಖಿಲದಿಶಾರಂಧ್ರಸಂದೋಹಮಮಂ ತೀ ।
ವುವಿನಂ ಸಾನಂದಮಮಂ ಪುಟ್ಟಿಸೆ ಪುರದೊಳಗಾನಂದಭೇರೀನಿನಾದಂ ॥೪೮॥

ವ ॥ ಆಗಳ್ ಸುಬಳಧರಾಧೀಶ್ವರಂ ಮಂಗಳಪ್ರಸಾಧನಂ ಗೆಯ್ದು ನಾನಾವಿಧ ಪೂಜಾಪುರಸ್ಸರಂ ಸುಪ್ರಭಾದೇವಿವೆರಸು ಸಮಸ್ತಸೇನಾಸಮೇತನಾಗಿ ಮುನ್ನೆ ಪೇೞ್ದ ವತ್ಸವಿಷಯಾಧಿಪತಿಯುಪ್ಪತಿಬಳನಾತ್ಮೀಯುಬಂಧುತ್ವ ಸಂಬಂಧದಿಂ ತನ್ನಲ್ಲಿಗೆ ವಂದಿರ್ದೊಡಾತನುಮನೊಡಗೊಂಡು ರಾಜಗೃಹಮಂ ಪೊಱಮಟ್ಟು ಪಟ್ಟಮಾರ್ಗಂ ಬಿಡಿದು ಪಾದಮಾರ್ಗದಿಂ ಸನ್ಮಾರ್ಗಮಾರ್ಗಿಗಳನೆಯ್ದೆವಂದು ದೀಪ್ತತಪಃ ಪ್ರಭಾವ ದಿನಾತ್ಯಂತಿಕರೂಪಪರಾವರ್ತನೋಪಲಬ್ಧಿಯಿಂ ವಿಶುದ್ಧಸ್ಫಟಿಕಮಣಿಮಯ ಧರಾವರಾಂತ ರ್ಗತಸಹಸ್ರಕಿರಣದೇದೀಪ್ಯಮಾನಪ್ರಭಾಭಾಸುರಗಾತ್ರಂ ಚತುರ್ಜ್ಞಾನನೇತ್ರರಂ ಭೋಂಕನೆ ಕಂಡು ರಹರಹಪರಿಣಾಮಪರಿಣತನಾಗಿ ಸಮುದಾಯಮಂ ಬಂದಿಸಿ ಸಮುಚಿತೋದ್ದೇಶ ದಾಸನದೊಳ್ ಕುಳ್ಳಿರ್ದುಮುಕುಳೀಕೃತಕರಕಮಲಯುಗಲನಾಗಿ

ಮುನಿಪತಿ ನಿಜಚಕಣಾಲೋ ।
ಕನಮಾತ್ರದೆ ಮನದೊಳಾದಮಾನುಂ ಸ್ನೇಹಂ ॥
ಜನಿಯಿಸಿದಪುದೇಕಾರಣ ।
ಮೆನಗಿದನಱಿಪುವುದುಗಾಧಬೋಧಪಯೋಧೀ ॥೪೯॥

ಎನೆ ಮುನಿಪತಿ ನೀನೆನಗರ ।
ಸನೆಯಾದುದಱಿಂದೆನಗತಿಸ್ನೇಹಭರಂ ॥
ಮನದೊಳ್ ಪುಟ್ಟಿದುದೆನೆ ಕೇ ।
ಳ್ದು ನೃಪತಿ ಬೆಱಗಾಗಿ ವಿಸ್ಮಯಾಕುಳಚಿತ್ತಂ ॥೫೦॥

ಶ್ರೀಮದಭಿವಿನುತ ಭವ್ಯ ।
ಸ್ವಾಮಿಯೆ ನೀಂ ಬಗೆದು ನೋಡೆ ಕುತ್ಸಿತಮರ್ತ್ಯ ॥
ಸ್ವಾಮಿಯೆ ನಾಂ ನಿಮಗೆ ಕುಲ ।
ಸ್ವಾಮಿಯೆನಾದಂದಮೇನು ಭುವನಸ್ವಾಮಿ ॥೫೧॥

ವ ॥ ಎಂಬುದುಮಾ ಮುನಿನಾಯಕಂ ಮಗಧನಾಯಕನ ಮೊಗಮಂ ನೋಡಿ

ಕ್ಷಿತಿಪತಿ ಸೂರ್ಯಮಿತ್ರನೆನಿಳಾಮರನೆಂಬ ಭವದೀಯ ಮಂತ್ರಿಯೆಂ ।
ವಿತತಮರೀಚಿಮೇಚಕಿತನೂತ್ನ ವಿರಾಜಿತ ರತ್ನ ಮುದ್ರಿಕಾ ।
ವ್ಯತಿಕರದಿಂ ತಪಕ್ಕೆ ತಱಿಸಂದೆನನಾರತಮೆಂದು ಪೂರ್ವಸೂ ।
ಚಿತನಯಮಾರ್ಗದಿಂ ತಿಳಿಪಿದಂ ಮುನಿನಾಥನಿಳಾಧಿನಾಥನಂ ॥೫೨॥

ವ ॥ ಆಗಳದುವೆ ನಿರ್ವೇಗಕಾರಣಮಾಗೆ ರಾಜ್ಯಶ್ರೀಗೆ ವಿರಕ್ತನುಂ ಮುಕ್ತಿಶ್ರೀಗನುರಕ್ತನುಮಾಗಿ ತನ್ನ ಮಗಂ ಮಘವಂಗೆ ರಾಜ್ಯಪಟ್ಟಮಂ ಕಟ್ಟಿ ಸರ್ವಸಂಗ ಪರಿತ್ಯಾಗಂಗೆಯ್ದು

ತೊಡರ್ದಿರ್ದ ಮೋಹಪಾಶದ ।
ತೊಡರಂ ಪಱಿಪಡಿಸಿ ಬಿಡಿಸಿ ಮಗಧಾಧಿಪನಾ ॥
ಗಡೆ ಪರಮಜೈನದೀಕ್ಷೆಗೆ ।
ತಡೆಯದೆ ಮೆಯ್ದಂದನೇಕೆ ತಡೆಗುಮೊ ಭವ್ಯಂ ॥೫೩॥

ನಯಗುಪ್ತನಿಷ್ಪಶರ್ಮಂ ।
ಜಯಂತನೆನೆ ನೆಗಟ್ದಿಮೂವರುಂ ಮಂತ್ರಿಗಳುಂ ॥
ಪ್ರಿಯಲಲನೆ ಸುಪ್ರಭಾದೇ ।
ವಿಯುಮಾಂತರ್ ಜೈನದೀಕ್ಷೆಯಂ ತಕ್ಷಣದೊಳ್ ॥೫೪॥

ಎಮಗಿರ್ಪುದು ಸೂಟಿಲ್ತೆಂ ।
ದು ಮಕ್ಕಳಂ ನಿಱಿಸಿ ನೆಲೆಗಳೊಳ್ ಸ್ವಾಮಿಯ ಚಂ ॥
ದಮೆ ಚಂದಮೆಂಬುದಂ ನಿರ್ಣ ।
ಯಮಾಡಿ ಕೆಲರಲ್ಲಿ ಸುಬಳನಾದುದನಾದರ್ ॥೫೫॥

ವ ॥ ಆಗಳಾವ್ಯತಿಕರದೊಳತಿಬಳಮಹಾರಾಜನುಮತಿನಿರ್ವೇಗಪರಾಯಣನಾಗಿ

ಶಠವಿರಹಿತಾಂತರಂಗಂ ।
ಕಠೋರಸಂಸಾರಭೋಗವೈರಾಗ್ಯಪರಂ ॥
ಕಠಿನಬಲಕರ್ಮಭೂರುಹ ।
ಕುಠಾರಸನ್ನಿಧಿಯೊಳಮಳದೀಕ್ಷೆಯನಾಂತಂ ॥೫೬॥

ನೂರ್ವರ್ ನಿಜಸುತರಂ ಸಾ ।
ಸಿರ್ವರ್ ನೃಪಸುತರುಮಾಗಳೊದವಿದ ಪಿರಿದುಂ ॥
ನಿರ್ವೇಗದಿಂದಮಂದು ತ ।
ದುರ್ವೀಶ್ವರನೊಡನೆ ದೀಕ್ಷೆಯಂ ಕೈಕೊಂಡರ್ ॥೫೭॥

ಶ್ರೀಯಂ ಜವ್ವನಮುಂ ಮನೋಜಸುಖಮುಂ ಸೌಂದರ್ಯಮುಂ ಶೌರ್ಯಮುಂ
ಮಾಯಂ ಭಾವಿಸುವಂದಪಾಯಮೆನುತುಂ ನಿರ್ವಾಣನಿಶ್ರೇಯಸ ।
ಶ್ರೀಯೊಳ್ ಶಾಶ್ವತದೊಳ್ ಸುಖಾಸ್ಪದದೊಳಿರ್ಪುದ್ಯೋಗದಿಂದಂ ತಪಃ ।
ಶ್ರೀಯೊಳ್ ಕೂಡಿದುದೊಂದು ಪೆಂಪತಿಬಳಂಗಗಕ್ಕುಂ ಪೆಱರ್ಗಕ್ಕುಮೇ ॥೫೮॥

ವ ॥ ಅಂತಲ್ಲಿಂ ತಳರ್ದು ವಿಹರಣಕ್ರಮದಿಂ ವಾರಣಾಸೀಪುರದದೂರಾಂತರಾವಾಸನೊಳಶೋಕವನಕ್ಕೆವಂದು ಋಷಿಸಮುದಾಯಂ ಸ್ವಾಧ್ಯಾಯೋಪಾಧ್ಯಾಯಪದನಿಶ್ಚಿತಾರ್ಥನುಂ ಸಮಸ್ತಾಗಮಪದಾರ್ಥಾವಧಾರಣ ಗುಣಸಮೇತನುಮಪ್ಪಗ್ನಿಭೂತಿ ಸಂಯತಂಗೆ ಸಮರ್ಪಣಂಗೆಯ್ದು ಸೂರ್ಯಮಿತ್ರ ಭಟ್ಟಾರಕರಾವನಾಂತರಾಳದೊಳ್ ವಿಶಾಲಮಪ್ಪುದೊಂದಶೋಕಾನೋಕಹದ ಮೊದಲೊಳ್ ನಿರ್ಜಂತುಕ ಪ್ರದೇಶದೊಳಿರ್ದ ಶಿಳಾಪಟ್ಟಕದ ಮೇಲೆ ಪೂರ್ವಾಭಿಮುಖನಾಗಿ

ಎರಡುಂ ಮಡಂಗಳೆಡೆ ನಾ ।
ಲ್ವೆರಳುಂಗುಷ್ಠಂಗಳೆರಡಱಿಡೆಯೊರ್ಗೇಣಾ ॥
ಗಿರೆ ತನ್ಮುನೀಂದ್ರನನುಪಮ ।
ಸುರರಾಜಾದ್ರೀಂದ್ರದಂದದಿಂದಂ ನಿಂದಂ ॥೫೯॥

ಯೋಗಸ್ಥಿತಿಯಿಂ ಪ್ರತಿಮಾ ।
ಯೋಗದೊಳತ್ಯಂತ ಬಾಹ್ಯಸಾಮಗ್ರಿಯೊಳಾ ॥
ಯೋಗೀಶ್ವರನಿಂ ಪೊಣ್ಮಿದು ।
ದಾಗಳೆ ಶಾಂತರಸಮಾವನಾಂತದೊಳೆತ್ತಂ ॥೬೦॥

ಉರಗಂಗಳ್ ಗಿಡಿಗಂಗಳಿರ್ದೆಡೆಗಳೊಳ್ ಬಂದಿರ್ದ್ದುವಾನಂದದಿಂ ।
ಹರಿಣಂಗಳ್ ನಲಿದಾಡುತಿರ್ದವು ಕರಂ ವ್ಯಾಘ್ರಂಗಳಂ ಪೊರ್ದಿಕೇ ।
ಸರಿಗಳ್ ಮತ್ತಗಜೇಂದ್ರದತ್ತ ಜಳಮಂ ಕೊಂಡುಂಡುವಾರಯ್ವೊಡ ।
ಚ್ಚರಿಯುಂ ಪಾವನಮಾಯ್ತು ತನ್ಮುನಿತಪೋಮಾಹಾತ್ಮ್ಯದಿಂದಾ ವನಂ ॥೬೧॥

ಚರಿಯಿಪ ಖಗಮೃಗಕುಳಮಾ ।
ಪರಮಮುನೀಶ್ವರತಪಃಪ್ರಭಾವದಿನತ್ಯಾ ॥
ದರಮಂ ತಾಳ್ದಿ ಪರಸ್ಪರ ।
ವಿರೋಧಮಂ ಬಿಸುಟವೇಂ ಮಹಾತ್ಮನೊ ಮುನಿಪಂ ॥೬೨॥

ವ ॥ ಆಗಳಾ ಮುಮುಕ್ಷುಪತಿಯುಂ ಮೋಕ್ಷಪದದೊಳ್ ಮನಮಿಟ್ಟಧ್ಯಾತ್ಮಧ್ಯಾನಾಧೀನನನಿತ್ಯಾದಿ ದ್ವಾದಶಾನುಪ್ರೇಕ್ಷೆಗಳೊಳನುಪ್ರೇಕ್ಷೆಗೆಯ್ಯುತ್ತುಮಾಜ್ಞಾಪಾಯವಿಪಾಕಸಂಸ್ಥಾನವಿಚಯಮೆಂಬ ನಾಲ್ಕುಂ ತೆಱದ ಧರ್ಮಧ್ಯಾನಮಂ ಧ್ಯಾನಿಸುತ್ತುಮತಿವಿಶುದ್ಧ ಲೇಶ್ಯಾತ್ಮಕತನಧಃಪ್ರವೃತ್ತಾ ಪೂರ್ವನಿವೃತ್ತಿಪರಿಣಾಮತ್ರಿತಯದಿನನಂತಾನುಬಂಧಿ ಕ್ರೋಧಮಾನಮಾಯಾಲೋಭ ಕಷಾಯಚತುಷ್ಕಂ ಮಿಥ್ಯಾತ್ವಸಮ್ಯಗ್‌ಮಿಥ್ಯಾತ್ವಸಮ್ಯಕ್ತ್ವಪ್ರಕೃತಿಯೆಂಬ ದರ್ಶನಮೋಹನೀಯತ್ರಯಮುಮಂ ಬೇಱಿವೇಱಿ ಪರಿವಿಡಿಯಿಂ ಪಡಲ್ವಡಿಸಿ ತದೀಯ ಸಪ್ತಪ್ರಕೃತಿಕ್ಷಯದಿಂ ಕ್ಷಾಯಿಕಸಮ್ಯಕ್ತ್ವಮಂ ಪಡೆದು ತದನಂತರಮಂತರ್ಮುಹೂರ್ತ ಕಾಲಂಪ್ರಮತ್ತಾಪ್ರಮತ್ತಗುಣಸ್ಥಾನ-

ಪರಾವರ್ಧನಶತಸಹಸ್ರದಿಂ ಕ್ಷಪಕಶ್ರೇಣ್ಯಾರೋಹಣಾ ಭಿಮುಖಂ ತಥಾಪ್ರಯೋಗಸಮಯ ಪ್ರತಿ ಸಮಯಂಗಳನಂತಗುಣಹಾನಿ ರೂಪನಿರ್ಜರಾವಿಧಿಯಿನಾಯುಃ ಕರ್ಮಮುೞಿಯಲುೞಿದ ಕರ್ಮಂಗಳ ಪ್ರಕೃತಿಸ್ಥಿತ್ಯನು ಭಾಗಂಗಳಂ ಕೞಿಲ್ಚಿ ಕಳೆಯುತ್ತುಂ ಅನಂತಗುಣಶಕ್ತಿಕಚೈತ್ಯೇಕಪರಿಣಾಮ ಪೂರ್ವಕಕರಣಗುಸ್ಥಾನನಿಷ್ಕ್ರಾಂತಂ ತತ್ಸಮಯದೊಳನಿವೃತ್ತಿಬಾದರಸಾಂ ಪರಾಯಕ್ಷಪಕಗುಣಸ್ಥಾನಸ್ಥಿತನಾಗಿ ಬೞಿಮಯಮಂತರ್ಮುಹೂರ್ತಾಂತರದೊಳ್ ನಿದ್ರಾನಿದ್ರಾದಿ ಷೋಡಶಪ್ರಕೃತಿಗಳುಮನ- ಪ್ರತ್ಯಾಖ್ಯಾನ ಕ್ರೋಧಮಾನಮಾಯಾ ಲೋಭಮೆಂಬೆಂಟುಂ ಕಷಾಯಮುಮಂ ನವನೋಕಷಾಯಮುಮಂ ಸಂಜ್ವಲನ ಕ್ರೋಧಮಾನಮಾಯಾತ್ರಯಮುಮ- ನೆಡೆಯುಡುಗದೆ ಕಿಡಿಸಿ ಸಾಮಾಯಿ ಕಚ್ಛೇದೋಪಸ್ಥಾಪನಾಪರಿಹಾರವಿಶುದ್ಧಿಚಾರಿತ್ರಾನುಗತಾನಿವೃತ್ತಿಬಾದರ ಸಾಂಪರಾಯಗುಣಸ್ಥಾನ ನಿವೃತ್ತನಾಗಿ ಕಿಱಿದು ಬೇಗದಂ ಸೂಕ್ಷ್ಮಸಾಂಪರಾಯಚಾರಿತ್ರ ಸಂಪನ್ನಂ ಸೂಕ್ಷ್ಮಸಾಂಪರಾಯಗುಣಸ್ಥಾನಕ್ಷಪಕಂ ತಥೋಕ್ತಪರಿಣಾಮದಿಂ ಸೂಕ್ಷ್ಮಲೋಭಮಂ ನೆಱೆಯೆ ಪಱಿಪಡಿಸಿ ಯಥಾಖ್ಯಾತಚಾರಿತ್ರಸಂಪನ್ನನಾಗಿ ಪೃಥಕ್ತ್ವವಿತರ್ಕವೀಚಾರಮೆಂಬ ಪ್ರಥಮಶುಕ್ಲಧ್ಯಾನಪರಿಣತಿಯಿಂ ಕ್ಷೀಣಕಷಾಯ ವೀತರಾಗಛದ್ಮಸ್ಥಗುಣಸ್ಥಾನವ್ಯವಸ್ಥಿತನಾಗಿ ಬೞಿಯುಮಂತರ್ಮುಹೂರ್ತದಿನೇಕತ್ವ ವಿತರ್ಕವೀಚಾರದ್ವಿತೀಯಶುಕ್ಲಧ್ಯಾನದಿಂ ಬಹುತರಾಸ್ರವಸಂವರಕರ್ಮನಿರ್ಜರನಾಗಿ ತದುಪಾಂತ್ಯ ಚರಮಸಮಯದೊಳ್ ಜ್ಞಾನಾವರಣಪಂಚಕಮುಮಂ ದರ್ಶನಾವ ರಣಚತುಷ್ಕಮುಮಂತರಾಯಪಂಚಕಮುಮಂ ನಿರ್ಮೂಲಮಪ್ಪಂತೊರ್ಮೊದಲೊಳೆ ಕಿಡಿಸಿದಾಗಳ್

ಖ್ಯಾತಿ ಧರಿತ್ರಿಗಾಗೆ ಕುಮತಾರ್ಕ್ಷಗಣಂಗಳಡಂಗಿ ಪಿಂಗೆ ತ ।
ದ್ಧಾತಿತಮಸ್ತಮಂ ಬೆದಱಿ ಪೋಗೆ ವಿನೇಯಜನಾಂಬುಜಾಕರ ।
ವ್ರಾತಮಲಂಪಿನಿಂದಲರೆ ಕೇವಲಬೋಧದಿನೇಶಬಿಂಬಮು ।
ದ್ಯೋತಿಸಿತಾಗಳಾಕ್ಷಣದೊಳಾ ಮುನಿನಾಥಮಹೋದಯಾದ್ರಿಯೊಳ್ ॥೬೨॥

ವ ॥ ಆ ಪ್ರಸ್ತಾವದೊಳ್

ಪ್ರೀತಿಮಿಗೆ ಶಂಖಪಟಹವಿ ।
ನೂತೋದ್ಧುರಸಿಂಹಘಂಟಕಾನಿಸ್ವನಸಂ ॥
ಕೇತದೆ ಭಾವನಭೌಮ ।
ಜ್ಯೋತಿಷವೈಮಾನಿಕಾಮರರ್ನೆರೆತಂದರ್ ॥೬೩॥

ರೋದೋಂತರ್ಭಾಗಮೆಲ್ಲಂ ಮಣಿಮಯರುಚಿಯಿಂ ಚಿತ್ರಸಂಕಾಶಮಾದ ।
ತ್ತಾದಂ ದಿಗ್ಭಾಗಮೆಲ್ಲಂ ಪಟಹರವದಿನೆತ್ತೆತ್ತಮಾವಿದ್ಧಮಾದ ।
ತ್ತಾದಿವ್ಯಸ್ತ್ರೀನಟೀನರ್ತನದೊಳೆ ಗಗನಾಭೋಗಮೆಲ್ಲಂ ಕರಂ ಚೆ ।
ಲ್ವಾದತ್ತೆಂಬಂದದೇಂ ಬಂದುದೊ ಚಟುಲತೆಯಿಂ ದೇವದೇವೀನಿಕಾಯಂ ॥೬೪॥

ಅಂಚಿರಮಲ್ಲದೆ ಬೆಳಗುವ ।
ಚಂಚದ್ಭೂಷಣಮಣಿಪ್ರಭಾವಪ್ರಚುರತೆಯಿಂ ॥
ಸಂಚಳಿಸಿ ಪೊಳೆವ ಮಿಂಚಿನ ।
ಗೊಂಚಲ್ ಬರ್ಪಂತೆ ಬಂದರಮರಾಂಗನೆಯರ್ ॥೬೫॥

ವ ॥ ಇಂತಸುರನಾಗವಿದ್ಯುತ್‌ಸುಪರ್ಣಾಗ್ನಿ ವಾತಸ್ತನಿತೋದಧಿದ್ವೀಪದಿಕ್ಕುಮಾರಭೇದದಿಂ ದಶಭೇದಮಪ್ಪ ಭವನವಾಸಿಗರುಂ ಕಿನ್ನರಕಿಂಪುರುಷಮಹೋದರಗ ಗಂಧರ್ವಯಕ್ಷರಾಕ್ಷಸಭೂತಪಿಶಾಚಾಭಿಧಾನದಿನಷ್ಟವಿಧರಪ್ಪ ವಾನಬ್ಯಂತರರುಂ ಚಂದ್ರಾದಿತ್ಯರೆಂಬಿರ್ಬರ್ಜ್ಯೋತಿಷ್ಕರುಂ ಸೌಧರ್ಮೇಶಾನಸನತ್ಕುಮಾರಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರಲಾಂತವಕಾಪಿಷ್ಠ ಶುಕ್ರಮಹಾಶುಕ್ರಶತಾರಸಹಸ್ರಾರಾನತಪ್ರಾಣ ತಾರಣಾಚ್ಯುತವಿಕಲ್ಪದಿಂ ದ್ವಾದಶವಿಕಲ್ಪಮಪ್ಪ ಕಲ್ಪವಾಸಿಕಾಮರೇಂದ್ರರುಮಂತು ಮೂವತ್ತಿರ್ವರುಂ ಚತುರ್ನಿಕಾಯ ದೇವನಾಯಕರುಮೆಲ್ಲಮೊಂದಾಗಿ ಹಸ್ತ್ಯಶ್ವರಥಪದಾತಿ ವೃಷಭಗಂಧರ್ವನರ್ತಕಪ್ರಭೃತಿ ಸಪ್ತಾನೀಕಸಮೇತರಾಗಿ ಗಗನತಳಮನಲಂಕರಿಸಿ ಬಂದು ದೂರೋತ್ಸಾರಿತವಾಹನರಾಗಿ ಸೂರ್ಯಮಿತ್ರಜಿನೇಂದ್ರನಂ ತ್ರಿಃಪ್ರದಕ್ಷಿಣಂ ಗೆಯ್ದು ಭಕ್ತಿಭರವಿನಮಿತ್ತೋತ್ತಮಾಂಗನಿಬಿಡನಿಬದ್ಧಾಂಜಳಿಗಳಾಗಿ

ಪದ್ಧಳಿ ॥ ಜಯಜಯ ಭುವನತ್ರಯಪರಮದೇವ ।
ದೇವೇಂದ್ರಾಭ್ಯರ್ಚಿತಚರಣಕಮಲ ॥
ಕಮಲವಿರಹಿತನಿರುಪಮದೇಹ ।
ದೇಹಾಶ್ರಿತಶುಭಲಕ್ಷಣವಿನೂತ ॥
ನೂತನಸಂಗತಕೈವಲ್ಯಬೋಧ ।
ಬೋಧಪ್ರಕಾಶವಸ್ತುಸ್ವರೂಪ ॥
ರೂಪಾತಿಶಯಾನ್ವಿತವಿತತವಿಭವ ।
ಭವನಿವಹಪಟಳನಿರ್ಮುಕ್ತಜೀವ ॥
ಜೀವಾಜೀವಾದಿಪದಾರ್ಥನಿಳಯ ।
ಲಯವರ್ಜಿತಗುಣಮಣಿಗಣವಿಭೂಷ ॥
ಭೂಷಾದಿರಹಿತಸೌಂದರ್ಯಸಹಿತ ।
ವಿನಿಹಿತವಿಶ್ರುತಪರಮಸಮಯ ॥
ಮಯಜನ್ಮಜರಾಮಯ ಭಯವಿನಾಶ ।
ನಾಶೀಕೃತವಿಷಯಕಷಾಯನಿಕರ ॥
ಕರಣಾಪಗಮಧ್ಯಾನೋಪಯೋಗ ।
ಯೋಗೀಶ್ವರವಂದಿತಪಾದಪೀಠ ।
ಪೀಠಪ್ರವಿರಾಜಿತ ಗಗನಗಮನ ।

ಮನಸಿಜಘನದರ್ಪೋದ್ಧುರವಿದೂರ ॥
ದೂರಸ್ಥಿತದುಷ್ಕರದೋಷಸರ್ವ ।
ಸರ್ವಸರ್ವಜಿನೇಶ್ವರವೀತರಾಗ ॥
ರಾಗಾನುಗತಾನತಭವ್ಯಲೋಕ ।
ಲೋಕಾಂತ ವ್ಯಾಪ್ತಯಶಃ ಪ್ರಸಿದ್ಧ ॥
ಸಿದ್ಧಾರ್ಥೈಶ್ವರ್ಯವಿಶುದ್ಧ ಬುದ್ಧ ।
ಬದ್ಧ್ಯಾದಿಗತಪ್ರಾವೀಣ್ಯಪರಮ ॥
ರಮಣೀಯಮೋಕ್ಷಲಕ್ಷ್ಮೀನಿವಾಸ ।
ವಾಸವಕೃತಕವಿದ್ಯಾತಿಶಯವಿಸರ ॥
ಶರಣಾಗೆಮಗುಗ್ರಕೃತಾಂತವಿಜಯ ॥೬೬॥

ಕಿವಿಗಳ್ ನಿನ್ನ ಮೃದೂಕ್ತಿಯಂ ಬಯಸಿ ಕೇಳುತ್ತಿರ್ಕೆ ಕಣ್ಗಳ್ ಮಹೋ
ತ್ಸವದಿಂ ನಿನ್ನನೆ ನೋಡುತಿರ್ಕೆ ಸಲೆ ಕೈಗಳ್ ನಿನ್ನ ಪಾದಾರವಿಂ
ದಮನೋತರ್ಚಿಸುತಿರ್ಕೆ ಸಂದ ಮನವೆಂದುಂ ನಿನ್ನ ದಿವ್ಯಸ್ವರೂ
ಪಮನಾರಾಧಿಸುತಿರ್ಕೆ ವಿಶ್ರುತವಿನೇಯಸ್ವಾರ್ಥಚಿಂತಾಮಣೀ ॥೬೭॥

ವ ॥ ಎಂದನೇಕಸ್ತುತಿಗಳಿಂ ಜಗತ್ರಯಸ್ವಾಮಿಯಂ ಸ್ತುತಿಯಿಸಿ ದಿವ್ಯದ್ರವ್ಯಾರ್ಚನೆಗಳಿನರ್ಚಿಸಿದಾಗಳ್

ವಿಬುಧಪತಿನಿವಹವಂದಿತ
ನಿಬಿಡಪದಾಂಬುರುಹನಂ ಸಮುತ್ತೀರ್ಣಭವ
ಪ್ರಬಲಾರ್ಣವನಂ ಕೈವ
ಲ್ಯಬೋಧಬೋಧಿತವಿನೇಯಜನನಂ ಜಿನನಂ ॥೬೮॥

ಅಭಿವಿನುತಭಕ್ತಿಯಿಂದ
ಗ್ನಿಭೂತಿಮೊದಲಾದ ಮುನಿಪರುಂ ನಾಗಶ್ರೀ
ಪ್ರಭೃತಿ ಸಮಸ್ತಾರ್ಜಿಕೆಯರು
ಮಭೀಕ್ಷಪರಿಣಾಮಶುದ್ಧಿಯಿಂ ವಂದಿಸಿದರ್ ॥೬೯॥

ವ ॥ ತದನಂತರಮಾ ಜಿನೇಶ್ವರನನಂತಚತುಷ್ಟಯೈಶ್ವರ್ಯಸಮೇತನುಂ ಸಮಪ್ರಸಿದ್ಧನಖಕೇಶತ್ವವಿರಾಜಮಾನನುಂ ಚತುರಾಸ್ಯನುಮಚ್ಛಾಯನುಮಕ್ಷಿಸ್ಪಂ ದವ್ಯಪೇತನುಂ ಭುಕ್ತ್ಯುಪಸರ್ಗಾದಿ ದೋಷವಿರಹಿತನುಂ ದೇವಮಾನವಸಭಾಪರಿವೃತನುಂ ಸುರಕುಮಾರಕರತಳಕಳಿತನವಸುಧಾಧವಳೈಕಾತಪತ್ರಚಾರುಚಾಮರಚತುಷ್ಟಯಭ್ರಾಜಿತನುಂ ದಿವಿಜಪಟುಪಟಹವಿವಿಧವಾದ್ಯ ನಿನದಬಧಿರಿತ ನಿಜಸಭಾಂತರಾಳನುಂ

ನಿಳಿಂಪನಿವಹಸ್ತುತಜಯಜಯಧ್ವನಿಸ್ತನಿತ ಸಕಳದಿಗಂತರಾಳನುಂ ಕುಸುಮಾ
ಸಾರತಾರಕಿತಗಗನತಳವಿಲಸಿತನುಂ ಸಿಂಹಾಸನಾಸೀನನುಂ ಗಗನಗಮನಮಾಗಿ

ಜಸಮಂ ತಾಳ್ದಿರ್ದ ಕರ್ನಾಟಕ ಖಸ ಕರಹಾಟಾಂಗ ಕಾಶ್ಮೀರ ಸೌರಾ
ಷ್ಟ್ರ ಸುರಾಷ್ಟ್ರಾವಂತಿ ವಂಗ ದ್ರವಿಡ ಮಗಧ ಪಾಂಚಾಳ ಬಾಹ್ಲೀಕ ನೇಪಾ
ಳ ಸಂವತ್ಸಾಭೀರ ಕಚ್ಛಪ್ರಭೃತಿ ವಿವಿಧ ದೇಶಂಗಳೊಳ್ ಕೂಡೆ ವಿಭ್ರಾ
ಜಿಸಿದಂ ಸನ್ಮಾರ್ಗಸಾರಂ ಪರಮಜಿನಮತಾಂಭೋಜಿನೀರಾಜಹಂಸಂ ॥ (?)

ಇದು ಸಮಸ್ತವಿನೇಯಜನವಿನುತ ಶ್ರೀವರ್ಧಮಾನಮುನೀಂದ್ರ
ವಂದ್ಯ ಪರಮಜಿನೇಂದ್ರ ಶ್ರೀಪಾದಪದ್ಮವರಪ್ರಸಾದೋ
ತ್ಪನ್ನ ಸಹಜಕವೀಶ್ವರ ಶ್ರೀಶಾಂತಿನಾಥ ಪ್ರ
ಣೀತಮಪ್ಪ ಶ್ರೀಸುಕುಮಾರಸ್ವಾಮಿ
ಚರಿತ ಪುರಾಣದೊಳ್
ಸೂರ್ಯಮಿತ್ರಾಚಾರ್ಯ
ಕೇವಲಜ್ಞಾನಪ್ರಭಾವ
ವರ್ಣನಂ
ಅಷ್ಟಮಾಶ್ವಾಸಂ ॥

೯. ನವಮಾಶ್ವಾಸಂ

ಶ್ರೀಧರ್ಮಾಮೃತವರ್ಷಮ
ನೀ ಧಾತ್ರೀತಳದ ಭವ್ಯಸಸ್ಯಕಮವ್ಯಾ
ಬಾಧಂ ಕಱಿದಂ ಕೇವಲ
ಬೋಧನಿಧಾನಂ ಸರಸ್ವತೀಮುಖಮುಕುರಂ ॥೧॥

ವ ॥ ಇಂತು ಸಕಲವಿನೇಯಜನಸಮಾರ್ಚಿತೋರ್ಜಿತಾಗಣ್ಯ ಪುಣ್ಯ ಸಂಚಾರ ಪ್ರೇರಣೆಯಿಂ ಧರ್ಮಕ್ಷೇತ್ರಂಗಳೊಳ್ ಸುಕೃತಜನಾಶಯ ಕುಶೇಶಯಂಗಳಂ ದಿವ್ಯವಚನ ದಿನಲರ್ಚುತ್ತುಮುದಗ್ರಮಂದಿರಶಿಖರಿಶಿಖರದೊಳ್ ಪ್ರತಿಮಾಯೋಗಂ ನಿಂದು ಸೂಕ್ಷ್ಮ ಕಾಯಯೋಗಂ ಸೂಕ್ಷ್ಮಕ್ರಿಯಾಪ್ರತಿಪಾತಿಯೆಂಬ ಚರಮಶುಕ್ಲಧ್ಯಾನದಿಂ ಯಥಾ ವಸ್ಥಿತವಿಶುದ್ಧಧ್ಯಾನಪರಿಣತಿಯಿಂ ದಂಡಕವಾಟಪ್ರಕರಲೋಕಪೂರಣ ಕ್ರಿಯೆಗಳಂ ಸಮಯಪ್ರತಿಸಮಯಂಗಳಿಂ ಮಾಡಿ ಸರ್ವಬಂಧಾಸ್ರವನಿರೋಧದಿನಯೋಗಿಸ್ಥಾನಮಂ ಪೊರ್ದಿ ಸಮುಚ್ಛಿನ್ನಕ್ರಿಯಾನಿವೃತ್ತಿಧ್ಯಾನಪರಿಣತೆಯಿನಘಾತಿ ಚತುಷ್ಕಶುಷ್ಕೇಂಧನ ಪಾವಕನಾಗಲೊಡಂ

ರಿಪುನೃಪಕುಲಸಂಹರನ
ಪ್ಪಪುರುಷನಂ ವಿಜಯಲಕ್ಷ್ಮಿ ಕೈಕೊಳ್ವವೊಲಂ
ದಪಗತದುರಿತಾರಾತಿ
ಪ್ರಪಂಚನಂ ಮೋಕ್ಷಲಕ್ಷ್ಮಿ ತಾಂ ಕೈಕೊಂಡಳ್ ॥೨॥

ಆಗಳ್ ಸೌಧರ್ಮಕಲ್ಪೇಶ್ವರನನುಪಮನಿರ್ವಾಣಕಲ್ಯಾಣಕಾರ್ಯೋ
ದ್ಯೋಗಕ್ಕಾನಂದದಿಂದಂ ದಿವಿಜಪರಿವೃತಂ ಬಂದು ಸದ್ಭಕ್ತಿಯಿಂದಂ
ರಾಗಂ ಕೈಗಣ್ಮಿಪೊಣ್ಮುತ್ತಿರೆ ಸುರಸುಮನೋದೀಪಧೂಪಂಗಳಿಂದಂ
ಬೇಗಂ ಕೈಗಯ್ಯೊಳೊಲ್ದರ್ಚಿಸಿ ಬೞಿಕೆ ನಿಜಾವಾಸದತ್ತಣ್ಗೆವೋದಂ ॥೩॥

ವ ॥ ಆ ಪ್ರಸ್ತಾವದೊಳ್

ಆನಮ್ರಾಮರನಗ್ನಿ ಭೂತಿಮುನಿರಾಜೇಂದ್ರ ತದುರ್ವೀಧರ
ಸ್ಥಾನಪ್ರಸ್ಥಿತನಪ್ರಮತ್ತಗುಣಸಂಸ್ಥಾನಸ್ಥಿತಂ ನಿರ್ಮಲ

ಧ್ಯಾನಂ ಘಾತಿಗಳಂ ಕಟಿಲ್ಚಿ ನಯದಿಂದಂ ಪೊರ್ದಿದಂ ಕೇವಲ
ಜ್ಞಾನಾಧಿಷ್ಠಿತನಾಗಿ ಮುಕ್ತಿವನಿತಾಪೀನಸ್ತನಸ್ಥಾನಮಂ ॥೪॥

ವ॥ ಇತ್ತಲಾ ನಾಗಶ್ರೀಯುಂ ತನ್ನಿರೂಪಿತ ಪರಮತಪಃ ಶ್ರೀಯಂ ತಾಳ್ದು

ವರಬಾಹ್ಯಾಭ್ಯಂತರಮೆಂ
ಬೆರಡುಂ ತೆಱನಪ್ಪ ತಪಮನಟ್ಟಱಿಕೊಳಮಳ್ವೆ
ತ್ತರವೋಲೊಡನೆ ನಡಪಿದಳ್
ಧರಾತಳಂ ಕೂರ್ತು ಕೀರ್ತಿಸುತ್ತಿರ್ಪಿನೆಗಂ ॥೫॥

ಶುಭಲಕ್ಷಣೆ ರತ್ನತ್ರಯ
ವಿಭೂಷಣಾಲಂಕೃತಾಂಗಿಯಾಗಿ ನಭೂತೋ
ನಭವಿಷ್ಯತಿಯೆನಿಪ ತಪಃ
ಪ್ರಭಾವದಿಂ ನೆಗಲ್ದಳಂತು ನೆಗಟಲ್ವೇಡಾ ॥೬॥

ತನುಲತೆಯಂಪುತ್ತಡರ್ದ
ತ್ತೆನೆ ಮಲೆವಿಡಿದಡರೆಗೊಂಡು ತೀವಿರ್ದುದಱಿಂ
ವಿನಯಾನ್ವಿತೆ ತಪ್ಪದೆ ಮಣ
ಕಿನ ಲೆಪ್ಪದ ಪೆಣ್ಣ ಚೋಹಮೆಂಬಂತಿರ್ದಳ್ ॥೭॥

ತಳೆದನಶನಾದಿ ತಪದಿಂ
ಕಳೇವರಂ ಬಡಬಡಾಗಿ ಗಿಡಿಗಿಡಿಜಂತ್ರಂ
ಮಿಳಿಮಿಳಿಗಣ್ಗಳೆನಲ್ ನೋಂ
ತಳಂತು ನೋನದೆ ಸುಖಕ್ಕೆ ಬಯಸಿದೊಡುಂಡೇ ॥೮॥

ಸಮಿತಿಬ್ರಾತಮನಪ್ಪುಕೆಯ್ದು ದೊರೆವೆತ್ತಾವಶ್ಯಕಾನೀಕದೊಳ್
ಸಮಸಂದಿಂದ್ರಿಯದರ್ಪಮಂ ಕಿಡಿಸಿ ತೀವ್ರಕ್ಷುತ್ಪಿಪಾಸಾಪ್ರಪಂ
ಚಮನೊಟ್ಟೈಸಿ ಮಹಾವ್ರತಪ್ರಕರದೊಳ್ ತಳ್ತೊಪ್ಪುವತ್ಯುದ್ಧ ಸಂ
ಯಮ ಸದ್ಭಾವ ತಪಃಪ್ರಭಾವ ಮಹಿಮಾವಿರ್ಭಾವಮಂ ತಾಳ್ದಿದಳ್ ॥೯॥

ರಾಗದ್ವೇಷಾದಿದೋಷಾಂತರಮನುಪಮರತ್ನತ್ರಯ ಶ್ರೀನಿಧಾನಂ
ಯೋಗೋದ್ಯೋಗಪ್ರಯೋಗಾಲಯಮಘಹರಣೋಪಾಯಮತ್ಯಂತಮುರ್ವೀ
ಭಾಗಪ್ರಸ್ತುತ್ಯಮೆಂದಲ್ಲದೆ ಬಹುವಚನಾಲಾಪದೊಂದಂದದಿಂದಾ
ನಾಗಶ್ರೀನಾಮಧೇಯಾರ್ಜಿಕೆಯ ತಪಮನೇವಣ್ಣಿಪಂ ಬಣ್ಣಿಪಾತಂ ॥೧೦॥

ವ ॥ ಇಂತುಗ್ರೋಗ್ರತಪಶ್ಚರಣನಿರತೆಯಾಗಿ ಮೂಲೋತ್ತರಗುಣಂಗಳೊಳು ತ್ತರೋತ್ತರಂ ನೆಗಟುತ್ತಂ ಜಿನಗುಣಸಂಪತ್ತಿ ಮೊದಲಾದ ನೋಂಪಿಗಳಂ ನೋನುತ್ತುಂ ನಿಜಾಯುರವಧಿ

ಪದಿನಾಲ್ಕುವರಿಸಮುಮೇೞುತಿಂಗಳುಮಯ್ದು ದಿವಸಮುಂಟೆನಲ್ ಆಷಾಢಬಹುಳಪಾಡಿವದೊಳಾಚಾಮ್ಲವರ್ಧನಮೆಂಬ ನೋಂಪಿಯಿಂ ನೋನಲುದ್ಯಕ್ತೆಯಾದಳೆಂತೆನೆ

ಮನವೊಲ್ದಿರ್ಪುಪವಾಸವೊಂದು ದೊರೆವೆತ್ತಾಚಾಮ್ಲದೊಳ್ ಪಾರಣಾ
ದಿನಮೊಂದಂತುಪವಾಸಮೊಂದಶನದಿಂದೊಂದಗ್ಗಳಂ ಪೆರ್ಚೆ ನೆ
ಟ್ಟನೆ ಪತ್ತೊಂಬತುನೂಱತೊಂಬತುದಿನಂಗಳ್ಪೋದೊಡಾಚಾಮ್ಲವ
ರ್ಧನಮೊಂದಕ್ಕುಮವಿಪ್ಪತಯ್ದು ನೆಱೆದಂದಕ್ಕುಂ ತದುದ್ಯಾಪನಂ ॥೧೧॥

ನೆಗೞುತ್ತಿರ್ದುಪವಾಸವಾಸರಮನೆಲ್ಲಂ ನೋಡೆ ಬಾಣಾದ್ರಿವಾ
ರ್ಧಿಗಳಾಗಿರ್ಕುಮವರ್ಕೆ ಪತ್ತುಮಡಿಯಕ್ಕುಂ ಪಾರಣಾವಾಸರಾ
ಳಿಗಳಿಂತಿರ್ತೆಱನಪ್ಪ ಪುಣ್ಯದಿನಮಂ ಸಮ್ಮಿಶ್ರಮಂ ಮಾಡೆ ಸಂ
ಖ್ಯೆಗಳಿಂ ಸಾರ್ಧಚತುರ್ದಶಾಬ್ದಯುತ ಪಂಚಾಹಃಪ್ರಭಂ ಭಾವಿಸಲ್ ॥೧೨॥

ಭುವನಜನಸ್ತುತ್ಯಂ ದಿವಿ
ಜವಂದನೀಯಂ ಮುನೀಂದ್ರಸೇವ್ಯಂ ಭವ್ಯ
ಸ್ತವನೀಯಮೆನಿಸಿದಾಚಾ
ಮ್ಲವರ್ಧನಂ ಪುಣ್ಯವರ್ಧನಂ ಕೇವಲಮೇ ॥೧೩॥

ವಿನುತಾನಂತಸುಖಾಭಿವರ್ಧನಮನವ್ಯಾಬಾಧಸೌಖ್ಯಾಭಿವ
ರ್ಧನಮಂ ವಿಶ್ವಯಶಃಪ್ರವರ್ಧನಮನುದ್ಯದ್ಭಾಗ್ಯಸೌಭಾಗ್ಯವ
ರ್ಧನಮಂ ರೂಪವಿಲಾಸವರ್ಧನಮನಾರ್ಯಪ್ರಸ್ತುತಾಚಾಮ್ಲವ
ರ್ಧನಮಂ ನೋಂತಳಚಿಂತ್ಯಮಾಗೆ ಪೆಱರಿಂತಾರ್ ನೋಂತರೆಂಬನ್ನೆಗಂ ॥೧೪॥

ವ ॥ ಅಂತು ಪದಿನಾಲ್ಕುವರಿಸಮಾಱುತಿಂಗಳುಮಯ್ದು ದಿವಸಕ್ಕೆ ಪರಿಸಮಾಪ್ತಿಗೆ ಸಲ್ವಾಚಾಮ್ಲವರ್ಧನಮೆಂಬ ತಪವನಾಚರಿಸಿ ತನಗೆ ಪರಮಾಯುಷ್ಯಮಂದಿಂಗೊಂದು ತಿಂಗಳಪ್ಪುದಂ ಮುನ್ನಱಿವಳಪ್ಪುದಱಿಂ ಸಲ್ಲೇಖನೆಯಂ ಪೂಣ್ದು ಚತುರ್ವಿಧಾಹಾರ ಶರೀರವ್ಯಾಪಾರನಿವೃತ್ತಿಯಿಂ ಸನ್ಯಸನವಿಧಿಯಿಂ

ಪೃಥ್ವಿ ॥ ಅರಲ್ದ ಮುಖಪದ್ಮಮುಂ ನಿಬಿಡಬದ್ಧಪರ್ಯಂಕದೊಳ್
ಮರಲ್ದ ಕರಪಲ್ಲವದ್ವಿತಯಮುಂ ಬೆಡಂಗಪ್ಪಿನಂ ನಿರಂ
ತರವಿಶೋಧಿ ಕೂಡಿರೆ ಚತುರ್ವಿಧಾರಾಧನಾ
ಪುರಸ್ಸರತೆಯಿಂ ಸಮಾಧಿವಿಧಿಗೇಂ ಮನಂದಂದಳೋ ॥೧೫॥

ಅರೆಮುಗಿದಿರ್ದು ಜಾನಿಸುವ ಕಣ್ಮಲರಾಪ್ತಪದಾರ್ಥತತ್ವಮಂ
ಸ್ಮರಿಯಿಪ ಚಿತ್ತಮೊಳ್ಪುಗಿಡದೋದುವ ನಾಲಗೆ ಮುನ್ನಮಿರ್ದ ಬಿ

ತ್ತರದಿನದೆತ್ತಲುಂ ತಳರದಾಸನಮಿಂದ್ರ ನರೇಂದ್ರವಂದ್ಯನಂ
ಪರಮಜಿನೇಂದ್ರನಂ ಬಗೆವ ಭಾವಮಚಾಲ್ಯಮಶಲ್ಯಭಾವೆಯಾ ॥೧೬॥

ಪದುಳಿಕೆಗುಂದದಿರ್ದ ಪಳಿತಂಕದ ಚಿಲ್ವು ಸಡಿಲ್ದುದಿಲ್ಲ ಕ
ರ್ಮದ ಬಿಗಿಪೊಯ್ಯನೊಯ್ಯನೆ ಸಡಿಲ್ದುದು ನಿಶ್ಚಳ ಯೋಗಭಾವಮುಂ
ಬೆದಱಿದುದಿಲ್ಲ ಶಲ್ಯಮದಗಾರವದಂಡಕಷಾಯ ಸಂಕುಲಂ
ಬೆದಱಿದುದಿಂತು ಕೂಡಿದ ಸಮಾಧಿಯೊಳಲ್ಲದೆ ಸಯ್ಪು ಸಾರ್ಗುಮೇ ॥೧೭॥

ವ ॥ ಅಂತೇಕಮಾಸಪರ್ಯವಸಾನಂಬರಮೇಕಸ್ಥಿತಿಯಿಂ ಸಮತಾಸಂಭಾವ ನೆಯಿಂ ಭುಕ್ತಪ್ರತ್ಯಾಖ್ಯಾನವಿಧಿಯಿಂ ರತ್ನತ್ರಯಮನಾರಾಧಿಸಿ ಚರಮಸಮಯದೊಳಾತ್ಮೀಯ ಶರೀರಭಾರಪರಿಚ್ಯುತೆಯಾಗಿ ಸ್ತ್ರೀತ್ವಮಂ ಪತ್ತುವಿಟ್ಟು ಪರಿನಾಱನೆಯಚ್ಯುತಕಲ್ಪದೊಳ್ ಇಂದ್ರನೀಲಮಣಿಕುಟ್ಟಿಮತಳವಿರಾಜಮಾನದೊಳುತ್ತುಂಗ ಮಣಿಮ ಯಸ್ತಂಭಸಂಭೃತದೊಳತಿಸುರಚಿರಪ್ರವಾಳಜಾಳಾಂತರ ವಿರಾಜಮಾನತಳದೊಳನೂ ನಮರಕತರತ್ನಭಿತ್ತಿವಿಭ್ರಾಜದೊಳಾಲಂಬಮಾನಮುಕ್ತಾದಾಮ ಲಂಬೂಷಭೂಷಿತದೊಳ ನುಪಮುಪಮಾನಮಶಲುಳಿಕೇತುಮಾಳಾಸಮುಲ್ಲಾಸಿತದೊಳತ್ಯಂತಸುರಭಿಗಂ ಧಬಂಧುರನಮೇರುಮಂದಾರಪಾರಿಜಾತಪ್ರಸೂನಪ್ರಸರಪರಿರಂಜಿತಪ್ರಾಂಗಣದೊಳಭಿ ನವಾನೂನಕಾಳಾಗರುಧೂಪಧೂಮೋದ್ದಾಮಾಕೃತ್ರಿಮಸ್ವಭಾವ ರಮಣೀಯಪದ್ಮಗುಲ್ಮ ವಿಮಾನದುಪಪಾತಭವನದೊಳಪ್ರತಿಹಂತಪಂಚರತ್ನಪ್ರಭಾವಿಭ್ರಮಭ್ರಾಜಿಯಪ್ಪ ದಿವ್ಯತಲ್ಪತಳದ ಪೊರೆಯೊಳ್ ರಾಗರಸಮಯದೊಳ್ ಪೊರೆದು

ಮಣಿಮಯಚಿತ್ರಭಿತ್ತಿಗಳ ದೀಪ್ತಿಗಳೊಳ್ ನಿಜದೇಹದೀಪ್ತಿಗಳ್
ಸೆಣಸಿ ಪಳಂಚಿ ಸಂಚಳಿಸೆ ಕಣ್ಗೆಸೆಯುತ್ತಿರೆ ದಿವ್ಯವಸ್ತ್ರಭೂ
ಷಣಮಣಿಮಾಲೆಗಳ್ನೆಱೆದು ತನ್ನೊಡವುಟ್ಟಿರೆ ಬೇಗವೇಗಮಾ
ಕ್ಷಣದೊಳೆ ಜವ್ವನಂ ನೆಱೆಯೆ ನೆಟ್ಟನೆ ತೊಟ್ಟನೆ ಬಂದು ಪುಟ್ಟಿದಂ ॥೧೮॥

ತೆಱೆಯದೆ ಮುಚ್ಚಿದ ಪಡಿಗಳ್
ತೆಱೆದುವು ನೆಱೆ ಮೋಕ್ಷಗೃಹದ ಸೌಖ್ಯದ ಪಡಿಗಳ್
ತೆಱೆದವೆನೆ ದಿವದ ಪಡಿಗಳ್
ತೆಱೆದುವದೇನರಿದೆ ಜೈನಪದಸೇವನೆಯಿಂ ॥೧೯॥

ಸುರಕುಸುಮಾಸಾರದ ಬೆ
ಳ್ಸರಿ ಸುರಿದುದು ಸುರಸಮಸ್ತವಂದಿರವಂ ಬೋ
ರ್ಗರೆದುದು ಸುರದುಂದುಭಿಗಳ್
ಮೊರೆದುವು ಸುರಭವನದೊಳಗೆ ಸುರನುದಯಿಪುದುಂ ॥೨೦॥

ಮಿಸುಗುವ ರತ್ನ ತೋರಣಗಣಂಗಳನೂನವಿಮಾನದೊಳ್ತಗು
ಳ್ದಸೆದವು ಜೀಯನಂದಜಯಮಂಗಳವರ್ಧನನಾದಮಾದಮಂ
ದೆಸೆದುದು ಸುತ್ತಲುಂ ಗುಡಿಯ ದಾಂಗುಡಿಗಳ್ ಮಿಳಿರ್ದಾಡುವಂತೆ ಕ
ಣ್ಗೆಸೆದವು ತತ್ಸುರೋತ್ತಮನ ಪುಣ್ಯಮನೊಯ್ಯನೆ ಸೂಚಿಪಂತೆವೋಲ್ ॥೨೧॥

ಕೂಡಿದುದಂದು ಬಂದು ಪರಿವಾರನಿಳಿಂಪನಿಕಾಯಮಟ್ಟೆಯಿಂ
ದಾಡಿದುದಂದು ಬಂದು ವಿವಿಧಾಮರಸಂಕುಲಮೋಜೆಗೊಳ್ವಿನಂ
ಪಾಡಿದುದಂದು ಬಂದು ಸುರವೃಂದಮೊಡಂಬಡೆ ಮಂದಮಂದದಿಂ
ತೀಡಿದುದಂದು ಬಂದು ಸತತೋತ್ಸವಕಾರಣದಿಂ ಸಮೀರಣಂ ॥೨೨॥

ವ ॥ ಇಂತಾ ದಿವಿಜಲೋಕದ ವಿವಿಧವಾದ್ಯಲಯಂಗಳೊಳಿಱಿಗಿ ತುಱುಗಿ ಬಂದಾಡುವ ದೇವಾಂಗನೆಯರುಮಂ ಪರಮ ಜಿನರಾಜ ರಾಜಿತಾತಿಸ್ತವಂಗಳಂ ಪ್ರಸ್ತುತಂಗೆಯ್ದು ಬರ್ಪ್ಪವರುಮನಮೃತಧಾರಾಸಾರಮೃದುಮಧುರಲಲಿತನಾದದೊಡಂ ಬಟ್ಟು ಸುರಜನಂಗಳನುಱಿ ಸೆಱಿವಿಡಿಮ ಪಾಡುವ ಗಂಧರ್ವಗೀರ್ವಾಣರುಮಂ ಅನೇಕ ಭಂಗಿಸಂಗತಭೃಂಗಾರಕನಕಕಳಶಮಣಿದರ್ಪಣ ಚಾರುಚಾಮರಾತಪತ್ರ ಪ್ರಭೃತಿ ಮಂಗಳೋಪಕರಣಂಗಳಂ ಮುಂದಿಟ್ಟು ಸೇಸಿಕ್ಕಲೆಂದು ನಿಂದ ಬೃಂದಾರಕಸುಂದರೀ ಬೃಂದಮುಮನತಿಪ್ರಮೋದದಿಂ ನೆರೆದೋಲಗಿಸಲೆಂದು ಬಂದ ಪರಿವಾರದೇವಿಯರುಮಂ ಕಾಮರಾಗರಸಸಾಮ್ರಾಜ್ಯಸ್ವಭೂತೆಯರಾಗಿ ಬಂದಿರ್ದಚ್ಚರಸಿಯರರುಮಂ ಭೋಂಕನೆ ಕಂಡು

ಆನೆತ್ತೀ ಲೋಕಮೆತ್ತೀ ಪಟುಪಟಹಜಯಾರಾವಮೆತ್ತೀ ವಿಮಾನಂ
ತಾನೆತ್ತೀ ನೂತ್ನ ರತ್ನಾಭರಣನಿವಹಮೆತ್ತೀ ಲಸನ್ಮಂದಗೀತಾ
ನೂನಪ್ರಧ್ವಾನಮೆತ್ತೀ ಯುವತಿನಿಚಯಮೆತ್ತೆಂಬಿನಂ ಬಂದು ಪುಟ್ಟಿ
ತ್ತಾ ನಾಕೇಂದ್ರಂಗೆ ನಿರ್ವ್ಯಾಕುಲಮಮಳಭವಪ್ರತ್ಯಯಜ್ಞಾನಮಾಗಳ್ ॥೨೩॥

ವ ॥ ಅಂತು ಪುಟ್ಟಿದ ಭವಪ್ರತ್ಯಯಜ್ಞಾನದಿನತೀತಭವವೃತ್ತಾಂತಮೆಲ್ಲಮಂ ವಿಸ್ತರಮಱಿದು

ಇದು ದಿವ್ಯಾಮರಲೋಕಮೆನ್ನ ನಿಳಯಂ ತಾನೀ ವಿಮಾನಂ ಸಮಂ
ತಿದು ಬೃಂದಾರಕಬೃಂದಮಂಗಜಪತಾಕಾನೀಕದಂತೊಪ್ಪಿ ತೋ
ರ್ಪುದು ದೇವೀನಿಕುರುಂಬಮಿಂತಿದು ಸುರಶ್ರೀಸುಂದರಂ ತಪ್ಪದ
ಪ್ಪುದಿದೆಲ್ಲಂ ಪೆಱತೇಂ ಮದೀಯ ಕೃತಪುಣ್ಯಪ್ರಾಪ್ತಮವ್ಯಾಕುಲಂ ॥೨೪॥

ವ ॥ ಎಂದು ತನ್ನೊಳೆ ಬಗೆವನ್ನೆಗಂ ವಿವಿಧಮಣಿಮಯಪಟಳಿಕಾನೇಕ ಪರಿಪೂರ್ಣ್ನವಿಚಿತ್ರವಸ್ತ್ರಾಭರಣಾನುಲೇಪನಮಾಲ್ಯಾದಿ ಮಾಂಗಲ್ಯದ್ರವ್ಯಂಗಳುಮಂ ಮಹತ್ತರದೇವಿಯರ್ ಕೊಂಡುಬಂದು ಮುಂದಿಟ್ಟು ಪೊಡೆವಟ್ಟು

ದಿವಿಜಪ್ರಸ್ತುತಮಪ್ಪ ಕಲ್ಪಮಿದೆ ದಲ್ತಾನಚ್ಯುತಂ ಪದ್ಮಗು
ಲ್ಮವಿಮಾನಂ ನೆಗೞ್ದೀವಿಮಾನಮಮರೀಸಂದೋಹಮಿೀ ವ್ಯೋಮಮಿಂ
ತಿವರೆಲ್ಲಂ ಪರಿವಾರದೇವರೊಳಪೊಕ್ಕೀ ತೋರ್ಪವರ್ ದೇವ ಬ
ರ್ಪವರೀ ರೂಪವಿಲಾಸವಿಭ್ರಮಸಮೇತರ್ ನಿನ್ನ ಮಾದೇವಿಯರ್ ॥೨೫॥

ಈ ನೆಗೞ್ದ ಪದ್ಮಗುಲ್ಮವಿ
ಮಾನಕ್ಕಧಿನಾಥನಯ್ ಸುರೇಶ್ವರಸಮಸಾಮಾ
ನಿಕನಯ್ ಪೆಸರಿಂದಂ ನೀ
ನನುಪಮತೇಜನಪ್ಪ ಪದ್ಮಪ್ರಭನಯ್ ॥೨೬॥

ಇದೆ ಸಾರಂ ಸ್ವರ್ಗಸೌಖ್ಯಕ್ಕಿದೆ ದಿವಿಜಸುಖಕ್ಕಾಗರಂ ಭಾವಿಸಲ್ಕಿಂ
ತಿದೆ ದಿವ್ಯಶ್ರೀವಿಲಾಸಾಲಯವಿದೆ ಸುರಭೋಗೋಪಭೋಗಾಸ್ಪದಂ ಮ
ತ್ತಿದಱಿಂ ಮೇಗಿಲ್ಲ ಕಲ್ಪಂ ಬಗೆವೊಡಿದು ಭವದ್ಭಾಗ್ಯದಿಂ ಸಾರ್ಚಬಂದಿ
ರ್ದುದು ಕೈಕೊಂಡಿಂತಿದಂ ಪಾಲಿಸುವುದು ಪೆಱತೇನಟ್ಟಿಯಿಂ ಪಣ್ಯಮೂರ್ತೀ ॥೨೭॥

ವ ॥ ಎಂದು ಬಿನ್ನಪಂಗೆಯ್ವುದುಮಾ ದೇವಂ ದೇವಲೋಕಪ್ರಾಪ್ತಿಯೊಳ
ನಂತಸಂತೋಷಾಮೃತಾಬ್ಧಿ ವಿಳಾಸ ಸಮುಚ್ಚಳಿತೋದಾರ ಪೂರ ಸವನ ಪಾವನ ಮಾನಸನಾಗಿ

ಜಿನರ ಪದಸೇವೆಯಿಂದಂ
ಮುನೀಂದ್ರರುಪದೇಶದಿಂದಮಿಂತೀ ವಿಭವಂ
ಜನಿಯಿಸಿದುದೀಗಳಲ್ಲದೊ
ಡನುಪಮಸುರವಿಭವಮೆನಗೆ ವಿಷಯವೊ ಪೊಲನೋ ॥೨೮॥

ವ ॥ ಎಂದಾ ದೇವಂ ದೇವನಿಕಾಯಂ ಬೆರಸು

ಅಮರಾವಾಸದೊಳುಳ್ಳ ದಿವ್ಯಮಣಿಸಂಘಾತಂಗಳಂ ದಿವ್ಯವ
ಸ್ತ್ರಮನೋರಂತಿರೆ ಕೊಂಡು ಪೋಗಿ ಜಿನಚೈತ್ಯವ್ರಾತಮಂ ಸುಪ್ರಭೂ
ತಮನತ್ಯಂತವಿನೂತಮಂ ತ್ರಿಭುವನಪ್ರಖ್ಯಾತಮಂ ಲೋಕಪೂಜ್ಯ
ಮನಾನಂದದಿನಾಗಳರ್ಚಿಸಿದನಾ ಪದ್ಮಪ್ರಭಂ ಸುಪ್ರಭಂ ॥೨೯॥

ಅಮರವ್ರಾತಸಮೇತನಂತೆ ಬೞಿಯಂ ಶ್ರೀ ಸೂರ್ಯಮಿತ್ರಾಗ್ನಿ ಭೂ
ತಿಮುನೀಂದ್ರೋಪಕೃತಂಗಳಂ ನೆನೆದು ತನ್ನಿರ್ವಾಣಭೂಮಿಪ್ರದೇ
ಶಮನಾನಮ್ರಸುರಾಸುರೋರಗಪವಿತ್ರೋದ್ದೇಶಮಂ ಭಕ್ತಿಯಿಂ
ದಮೊಱಲ್ದರ್ಚಿಸಿದಂ ಮಹಾತ್ಮನಮಳಂ ದ್ರವ್ಯಾರ್ಚನಾನೀಕದಿಂ ॥೩೦॥

ಅಂತು ಮುನೀಶ್ವರೋಪಕೃತಮಂ ಮನದೊಳ್ ನೆನೆದಗ್ರಮಂದಿರೋ
ಪಾಂತುಮನೆಯ್ದೆವಂದು ಪರಿನಿರ್ವೃತಿಭೂಮಿಯನಾ ಸುರೋತ್ತಮಂ
ಸಂತಸದಿಂದೆ ಭಕ್ತಿವೆರಸಾಗಳೆ ಪೂಜಿಸಿ ಲೇಸುಗೆಯ್ದನಿ
ನ್ನಂತುಟೆ ತನ್ಮುನೀಂದ್ರಕೃತಮಮಂ ಮಱೆದಂದು ಕೃತಘ್ನನಾಗನೇ ॥೩೧॥

ವ ॥ ಅಂತಪರಿಮಿತಭಕ್ತಿಯಿನನೇಕಾರ್ಚನೆಗಳಿನರ್ಚಿಸಿ ದೇವಲೋಕಕ್ಕೆ ವಂದು ಚತುಸ್ಸಹಸ್ರಸಾಮಾನಿಕಸಮೇತನುಂ ತತ್ಸಮಾಣಾಂಗರಕ್ಷತ್ರಿದಶಾನೀಕನುಂ ತ್ರಯಸ್ತ್ರಿಂಶತ್ಪರಿಮಿತದಿವಿಜಗಣಪರಿವೃತನುಂ ಚತುಷ್ಟಯಾಭಿಷ್ಟುತಪ್ರಧಾನಲೋಕಪಾಳಾಭಿರಾಮನುಂ ನಾನಾಪ್ರಕಾರಪಾರಿಷದಪ್ರಕೀರ್ಣ್ನಕಾಭಿಯೋಗ್ಯ ಕಿಲ್ಬಿಷಿಕಾನಿ ಕವ್ಯಾಕೀರ್ಣ್ನನುಮಂತರ್ಮಧ್ಯಬಾಹ್ಯತ್ರೀಃಪ್ರಕಾರಪರಿಷತ್ಪ್ರಕಾಶಕರನಾಗಿ ಪರಮೈಶ್ವರ್ಯಸಂಪನ್ನನಾದನದಲ್ಲದೆಯುಂ

ಪ್ರಿಯದಿವಿಜಾಂಗನೆಯರ್ ನಿಃ
ಕ್ರಿಯಸಂಭವೆಯಪ್ಪವರ್ಗೆ ಎಣ್ಬರ್ಮಾದೇ
ವಿಯರೆಣ್ಬರ್ನಚ್ಚಿನ ದೇ
ವಿಯರಾ ಪದ್ಮಪ್ರಭಂಗೆ ಮೂವತ್ತಿರ್ವರ್ ॥೩೨॥

ಅಮರನ ದೇಹೋಚ್ಛ್ರಿತಿ ಮೂ
ಱು ಮೊಱಂ ಪರಮಾಯುವಿರ್ಪ್ಪತ್ತೆರಡು ಸಮುದ್ರೋ
ಪಮಮನಿತೆ ಸಹಸ್ರಾಬ್ದ
ಕ್ಕಮೃತಾಹಾರಮನೆ ನೆನೆದು ತಣಿವಂ ಮನದೊಳ್ ॥೩೩॥

ಸುರಭಿಪರಿಮಳಸುಗಂಧೋ
ತ್ಕರಮಂ ಪನ್ನೊಂದುತಿಂಗಳಿಂಗೊರ್ಮೆ ಮನೋ
ಹರಮಾಗಿರೆ ನಸು ಸುಯ್ವಂ
ನಿರುಪಮಮಹಿಮಾಪ್ರಭಾವನಂತಾ ದೇವಂ ॥೩೪॥

ವ ॥ ಮತ್ತಮಣಿಮಾದ್ಯಷ್ಟಗುಣಸ್ವಭಾವಸಹಿತನುಂ ಶೋಕಾತಂಕಸಂಕ್ಲೇಶಭಯಜರಾಲಸ್ಯಾಕ್ಷೇಪಸ್ಪಂದನನಿದ್ರಾದಿದೋಷವಿರಹಿತನುಂ ವ್ಯಪೇತತನೂರುಹಶ್ಮಶ್ರುಕೇಶರೋಮನಖನುಂ ಮನಃಪ್ರವೀಚಾರಸಾರೋದಾರಸುಖನುಂ ಸಹಜಸುರಭಿಪರಿಮಳಾಮೋದಗಂಧಬಂಧುರತಾಸಮುತ್ಪನ್ನನುಂ ನಿರವಶೇಷನಿರಸ್ತಧಾತುಮಳಕಳಂಕ-ಕಳೇವರನುಂ ಸುರಾಂಗನಾ ಪಾಂಗನೀಳನೀರೇರುಹವಿಕಸನಶಶಾಂಕನುಮಾಗಿ

ದಿವಿಜಸ್ತ್ರೀಜಘನಾಭಿರಾಮರಶನಂ ದೇವಾಂಗನಾಪಾಂಗಕೈ
ರವಚಂದ್ರಂ ಸುರಕಾಮಿನೀಸ್ತನತಟಾಳಂಕಾರಹಾರಂ ನಿಳಿಂ

ಪವಧೂವಕ್ತ್ರಸರೋಜಮಿತ್ರನೆನೆ ಚಿತ್ತೋದ್ಯತ್ಪ್ರವೀಚಾರಸಾ
ರವಿನೋದಂಗಳಿನಂದದೇಂ ನಲಿದನೋ ಕಲ್ಪಾಮರಂ ಕಲ್ಪದೊಳ್ ॥೩೫॥

ಚಾರುಸುರಾಂಗನಾರತಿಸುಖಮೃತಸೇಚನೆಗೆಂದು ಕಾಯಮಂ
ಪೋರಿಸಿ ನೋಟದೊಳ್ತೊಡರ್ದು ಶಬ್ದಮನಾಲಿಸಿ ಬೇವ ಬೇವಸಂ
ಪೋ ರುಚಿಯಲ್ಲಮೆಂದದನಧಃಕರಿಪಂದದಿನೇಂ ಮನಃಪ್ರವೀ
ಚಾರಸುಖಾಂಬುನಿಧಿಯೊಳ್ ನಲಿದಾಡಿದನಾ ಸುರೋತ್ತಮಂ ॥೩೬॥

ಹರಿವೆಸಗೆಯ್ವರಚ್ಚರಸೆಯಬ್ರಗೆದಾಗಳೆ ಕೂರ್ತು ಬರ್ಪರ
ಚ್ಚರಸೆಯರಿಚ್ಛೆಯಂ ಸಲಿಸಿ ಮೆಚ್ಚಜಿ'ದೋಲಗಿಸುತ್ತುಮಿರ್ಪರ
ಚ್ಚರಸೆಯರಿಂಬುಕೆಯ್ದೊಲಿಸಿ ಚಿತ್ತದೊಳಗ್ಗಲಿಸುತ್ತುಮಿರ್ಪರ
ಚ್ಚರಸೆಯರೆಂದೊಡೇವೊಗಟ್ಟಿದೊ ದಿವಿಜೇಂದ್ರನ ದಿವ್ಯಲೀಲೆಯಂ ॥೩೭॥

ತ್ರೈಲೋಕ್ಯನಾಥನೋಲಗ
ಸಾಲೆಯೊಳಮರೇಂದ್ರನೊಡನೆ ರಾಗೋದಯದಿಂ
ತೋಳು ತೊಡೆ ಸೋಂಕಿ ಕುಳ್ಳಿ
ರ್ದೋಲಗಿಸುತ್ತಿರ್ಪನಚ್ಯುತಿಯಿಂ ಜಿನಪತಿಯಂ ॥೩೮॥

ಓರೊರ್ಮೆ ರತ್ನ ಮುದ್ರಿಕೆ
ಯಾರಯೆ ಕೇಯೂರದೊಳ್ ಪಳಂಚಲೆಯೆ ಮಹೋ
ದಾರತೆಯಿನಚ್ಯುತೇಂದ್ರನೊ
ಳೋರಾಸನಮಿರ್ದನಮರನಾಸ್ಥಾಯಿಕೆಯೊಳ್ ॥೩೯॥

ಕನಕಾದ್ರೀಂದ್ರನಿಕುಂಜರಂಜಿತವನಕ್ಕೊರೋರ್ಮೆ ಗೋತ್ರಾಚಲಾ
ಭಿನುತಾನೂನಮಹಾಸರೋರುಹವನಕ್ಕೊರೋರ್ಮೆ ನೀಹಾರತಾ
ರನಗೋಪತ್ಯಕ ಕಲ್ಪಭೂರುಹವನಕ್ಕೊರೋರ್ಮೆ ಲೀಲಾವಿಲೋ
ಕನದಿಂ ಮಾಣದೆ ಪೋಗಿ ಪೊಟ್ಟುಗಳೆವಂ ನಿಚ್ಚಂ ನಿಳಿಂಪೋತ್ತಮಂ ॥೪೦॥

ಹಿಮವತ್ಕುತ್ತೀಳದೊಳ್ ಮಂದರಮಹಿಧರದೊಳ್ ಶಾಲ್ಮಲೀಚೈತ್ಯಜಂಬೂ
ದ್ರುಮದೊಳ್ ವಕ್ಷಾರದೊಳ್ ಕುಂಡಳಗಿರಿವರದೊಳ್ ಮಾನುಷಾದ್ರೀಂದ್ರದೊಳ್ ತಾ
ರಮಹೀಧ್ರೋಪಾಂತ್ಯದೊಳ್ಸಂತತಮಮರನಿಕಾಯಾನ್ವಿತಂ ವಿಶ್ರುತಾಕ್ಯ
ತ್ರಿಮಚೈತ್ಯಾವಾಸಪೂಜೋತ್ಸವದಿನಗಲನಲ್ಲಿಂದಮೆಂದುಂ ಸುರೇಂದ್ರಂ ॥೪೧॥

ಸಲೆ ದೇವಾಗಮಮೆತ್ತಲತ್ತಲೆ ಸುಧರ್ಮಕ್ಷೇತ್ರದೊಳ್ಪೆತ್ತಲ
ತ್ತಲೆ ಯೋಗೀಶ್ವರರೆತ್ತಲತ್ತಲೆ ಪದಾರ್ಥಾಳಂಬದಿಂದೆತ್ತಲ

ತ್ತಲೆ ತೀರ್ಥಾವಳಿಯೆತ್ತಲತ್ತಲೆ ಜಿನಶ್ರೀಗೇಹಮಂತೆತ್ತಲ
ತ್ತಲೆ ಜೈನೋತ್ಸವದಿಂದೆ ಪೋದುದೆ ವಿನೋದಂ ತತ್ಸುರಂಗೆತ್ತಲುಂ ॥೪೨॥

ಮುದದಿಂ ನಾನಾವಿನೋದಂಗಳಿನೊದವಿದ ಸಂಪ್ರೀತಿಯಿಂ ಮೂಡಿಮುಟ್ಟಾ
ಡಿದನೆತ್ತಂ ನೀಡುಮೋಲಾಡಿದನವಗಹನಂ ಮಾಡಿದಂ ರಾಗದಿಂದೀಂ
ಟಿದನೋರಂತೀಸಿದಂ ದೊಮ್ಮಳಿಸಿ ತುಳುಕುನೀರಾಡಿದಂ ದೋಣಿಯಿಂದೇ
ಱಿದನೆಂಬಂತಾ ಸುರೇಂದ್ರಂ ದಿವಿಜಸುಖಸುಧಾಂಬೋಧಿಯೊಳ್ ಪದ್ಮತೇಜಂ ॥೪೩॥

ಅನುಪಮ ದಿವ್ಯ ಸೇವ್ಯ ವಿಭವಂ ದೊರೆವೆತ್ತ ವಿನೋದವೃತ್ತಿಯಿಂ
ಜನಿಯಿಸೆ ಚೆಲ್ವುವೆತ್ತೆಸೆವ ಗಾಡಿ ಮನೋಹರಮಾಗಿ ಸಂತತಂ
ಮನಸಿಜರಾಗಮಂ ಸಲಿಸೆ ಕುಂದದ ನಿಪ್ಪೊಸತಪ್ಪ ಜವ್ವನಂ
ತನಗೆ ವಿಲಾಸಮಂ ಪಡೆಯೆ ಭೋಗಿಸಿದಂ ಸುರಲೋಕ ಭೋಗಮಂ ॥೪೪॥

ವ ॥ ಅನ್ನೆಗಮಿತ್ತಲೀ ಭರತಕ್ಷೇತ್ರದವಂತೀವಿಷಯದ ಮಧ್ಯಪ್ರದೇಶಮ ನಳಂಕರಿಸಿ

ಮಾನವಲೋಕದೊಳ್ ಪುರಮಿದರ್ಕಣೆಯಾವುದೆನಿಪ್ಪ ಕೀರ್ತಿಯಂ
ತಾನೊಳಕೊಂಡು ನೋೞ್ಪರ ಮನಂಗಳನಿಟ್ಟುಳಿಗೊಂಡು ಚೆಲ್ವಿನು
ದ್ದಾನಿಯನಾಂತು ಕಣ್ಗೆ ಕರಮೊಪ್ಪುಗುಮೂರ್ಜಿತರಾಜಧಾನಿಯು
ಜ್ಜೇನಿ ಧರಾಂಗನಾವದನಮಂಗಳದರ್ಪಣಮಿಂತಿದೆಂಬಿನಂ ॥೪೫॥

ಆ ಪುರದ ಪೊಱವೊೞಲನೀ)
ಕ್ಷಿಪ ವಸಂತಾಗಮನಕ್ಕೆ ತಾನಾಗಮ
ಮೇಂ ಪರಿಭಾವಿಸೆ ಕಾಮಂ
ಕಾಪೆನೆ ಕರಮೊಪ್ಪಿ ತೋರ್ಪುದುದ್ಯಾನವನಂ ॥೪೬॥

ತುಱುಗಿ ತಳಿರ್ತಶೋಕೆ ಪೊಸಗೊಂಚಲೊಳಂಚಿರಮಲ್ಲದೆಯ್ದೆ ಕಿ
ಕ್ಕಿಱಿಗಿಱಿದಿರ್ದ ಮಾವು ಫಳಭಾರದಿನುರ್ವಿಗಗುರ್ವು ಪರ್ವೆ ತ
ಳ್ತೆಱಗಿದ ಬಾೞೆ ಪಣ್ಗೊನೆಗಳಿಂ ಗೊನೆಗೊಂಡ ಕವುಂಗು ಕಾಯ್ಗಳಿಂ
ತುಱುಗಿದ ತೆಂಗು ಶೋಭಿಪುದನಂಗನ ಮಂಗಳಗೇಹಮೆಂಬಿನಂ ॥೪೭॥

ಅಸುಕೆಯ ಕೆಂಪು ಪಾದರಿಯ ಕಂಪು ಪಯೋಜಲಸತ್ಸರೋವರ
ಪ್ರಸರದ ತಣ್ಪು ಸಂಪಗೆಯ ನುಣ್ಪು ಲತಾಗೃಹದೊಳ್ಪು ಮಲ್ಲಿಕಾ
ಕುಸುಮದ ಬೆಳ್ಪು ಮಾವಿನ ಪಸುರ್ಪು ಮದಾಳಿಯ ಕರ್ಪು ಕೂಡೆ ಕ
ಣ್ಗೆಸೆವೆಲೆವಳ್ಳಿಯಾಗರದಗುರ್ವು ತಮಾಳದ ಸುರ್ವು ಸುತ್ತಲುಂ ॥೪೮॥

ಮೊರೆವ ಮದಾಳಿ ಸಂಭ್ರಮದೆ ಕೂಗುವ ಕೋಗಿಲೆಯಲ್ಲಿ ಬಿಚ್ಚತಂ
ಬಳಸುವ ಜಕ್ಕವಕ್ಕಿ ನಯದಿಂ ನಲಿದಾಡುವ ರಾಜಹಂಸೆ ಸು
ಸ್ವರದಿನನಾರತಂ ಬೆದಱದೋದುವ ಕೀರನಿಕಾಯಮಾವನಾಂ
ತರದೊಳಗೊರ್ಮೆಯುಂ ಮಱೆದು ಮಾಣವು ಮನ್ಮಥನಾಜ್ಞೆಯೆಂಬಿನಂ ॥೪೯॥

ಪೃಥ್ವಿ ॥ ಅಮೇಯ ಕನಕಾಬ್ಜಪಿಂಜರಪರಾಗಮಂ ಗಾತ್ರದೊಳ್
ತೆವಟ್ಟಿ ಕೊಳದಿಂ ಕೊಳಕ್ಕೆಱಗುತಿರ್ಪ ವಿಭ್ರಾಜಿತ
ಭ್ರಮದ್ಭ್ರಮರಸಂಕುಳಂ ಬನದೊಳಟ್ಟಿಯಿಂದಾಡುತಿ
ರ್ಪ ಮನ್ಮಥನ ಪೊನ್ನ ಪಟ್ಟುಗಳ ಪೋಲ್ವೆಯಂ ಪುಟ್ಟಿಕುಂ ॥೫೦॥

ಪಿರಿಯ ಪರಿವುಗಳ ಸುತ್ತಿದ
ಪರಿಕಾಲ್ಗಳ ತುಱುಗಿದಣ್ಣಗಳ ತೀವಿದ ಪೊ
ಕ್ಕರಣೆಗಳ ನೆಱೆದ ಕೆಱೆಗಳ
ಸರೋವರಂಗಳ ಬೆಡಂಗಗುಂದಲೆ ಪುರದೊಳ್ ॥೫೧॥

ಪ್ರಬಳಫಲಭಾರದಿಂ ಕೂ
ಡಿ ಬಳ್ಕಿ ತೆನೆ ನೆಲನನಲೆಯ ಪವನನ ಹತಿಯಿಂ
ದೆ ಬೆಡಂಗುವೆತ್ತು ನೆಱೆ ಬೀ
ಗಿ ಬೆಳೆದುವು ಮಗಮಗಿಪ ಗಂಧಶಾಲಿವನಂಗಳ್ ॥೫೨॥

ಕಳಮೆವನಕ್ಕಾಗಿ ತೆಱಂ
ಬೊಳೆವ ಬಕಂ ಸುಱಿವ ಸೋಗೆ ಜಡಿವರಗಿಳಿಗಳ್
ವಿಳಸಿತ ರವದಿಂ ಪಾಂಥ ಪ್ರ
ಬಲಮನೋರಥವಿಘಾತಮಂ ಮಾಡುತ್ತುಂ ॥೫೩॥

ವನಜಾತಾಸ್ಯೆ ರಥಾಂಗಯುಗ್ಮಕುಚೆ ನೀರೇಜಾಕ್ಷಿ ಸದ್ಹಂಸಗಾ
ಮಿನಿ ರಾಜತ್ಕಳಕಂಠನಿಸ್ವನೆ ಕಳಾಪಿ ಪ್ರಾಂಶುಧಮ್ಮಿಲ್ಲೆಯಂ
ಬ ನಿಜಾಕಾರವನುಂಟುಮಾಡಿ ಮುದದಿಂ ಕೆಯ್ಗಾವ ಪಾಮರಿಯಾ
ವನಪಂ ನೋಳ್ಪಜನಕ್ಕೆ ಮಿಕ್ಕವನಲಕ್ಷ್ಮೀಭ್ರಾಂತಿಯಂ ಮಾಡುವಳ್ ॥೫೪॥

ಮನಸಿಜನಾಯುಧ ನಿಲಯಂ
ಮನಸಿಜನ ಸಮಗ್ರರಾಜ್ಯಲಕ್ಷ್ಮೀಸದನಂ
ಮನಸಿಜನ ಜಯನ ಸಾಲೆಯು
ಮೆನೆ ಸೊಗಯಿಸುವುವು ಮನೋಹರೇಕ್ಷುವನಂಗಳ್ ॥೫೫॥

ತರತರದಿಂ ತೆರಳೆ ರಸಂ
ನಿರಂತರೋಧ್ಯತ್ಪ್ರಸನ್ನಮತಿಯಿಂದಂ ಗಾ
ಣರತಂಡದಂಡದಿಂದಂ
ಮೊರೆವುವು ಗಾಣಂಗಳಿಕ್ಷುವಾಟಾಂತರದೊಳ್ ॥೫೬॥

ನಗರಂ ವಿಶ್ವಾವನೀಚಕ್ರದೊಳನುಪಮಗಾಂಭೀರ್ಯದಿಂ ನೂತ್ನರತ್ನಾ
ಳಿಗಳಿಂದಂ ಪೆರ್ಮೆಯಿಂ ನೋಡುವೊಡೆನಗೆ.... ಗದಂ ತಾ(ಂ)ಮಿಗಿಲ್ ತಾಂ
ಮಿಗಿಲೆಂಬಾಕ್ಷೇಪದಿಂ ಮೂವಳಸು ವಳಸಿ ಸುತ್ತಿರ್ದುದಂಬೋಧಿಯೆಂಬಂ
ತೆ ಗಭೀರಾರಾವದಿಂ ಪಲ್ ಮೊರೆವವೊಲೆಸೆಗುಂ ಸುತ್ತಿ ಪಾನೀಯಖೇಯಂ ॥೫೭॥

ಸಾರಮೆನಲ್ ತರಂ ತರದಿನೊಪ್ಪುವ ಪೊಂಗಳಸಂಗಳಿಂದಳಂ
ಕಾರ ಸಹಸ್ರಕೂಟನಿಕುರುಂಬದಿನಪ್ರತಿಮಂಗಳಪ್ಪ ರೂ
ವಾರದಿನಾರುಮಂ ಬಗೆಗೊಳಲ್ ಪರಿಶೋಭಿಪ ಮಂಟಪಂಗಳಿಂ
ನೇರಿದವಾದ ಗರ್ಭಗೃಹದಿಂ ಜಿನರಾಜಗೃಹಂಗಳೊಪ್ಪುಗುಂ ॥೫೮॥

ಜಿನಪೂಜಾತಿಶಯಕ್ರಿಯಾಘಟಿತ ಘಂಟಾರಾವದಿಂ ನರ್ತಕೀ
ಜನವೈಚಿತ್ರ್ಯಲಯಕ್ಕೆ ಲಕ್ಕ ತೆಱದಿಂದಂ ಪೊಯ್ವ ನಾನಾನಕ
ಧ್ವನಿಯಿಂ ಮಂಗಳವಂದಿಮಾಗಧಜಯಪ್ರಧ್ವಾನದಿಂ ಶಂಖನಿ
ಸ್ವನದಿಂದತ್ತಲುಮಿತ್ತಲುಂ ಸೊಗಯಿಕುಂ ತಾನೆತ್ತಲುಂ ಸುತ್ತಲುಂ ॥೫೯॥

ಪವಣಱಿಯಲ್ ಬಾರದು ಲ
ಕ್ಕೆ ವಳಿಯಿಕೆಯ ಕೋಟಿವಳಯಿಗೆಯ ಪರದರ ಲೆ
ಕ್ಕವನೆಂದೊಡುಟಿದ ಪರದರ
ಪವಣಂ ಮೇರೆಯುಮನಱಿವರಾರಾ ಪುರದೊಳ್ ॥೬೦॥

ಸಾರವಣೆ ಮಳಯಜಂ ಕ
ರ್ಪೂರರಜಂ ರಂಗವಲ್ಲಿ ಸಲೆಪೊಂದಳಿರ್ಗಳ್
ತೋರಣಮೆನೆ ಕರಮೆಸೆವುವು
ವಾರಾಂಗನೆಯರ ನಿವಾಸದೊಳಗುಂ ಪೊಱಗುಂ ॥೬೧॥

ಸುತ್ತುಂಗುರುಳಂತರದೊ
ತ್ತುತ್ತುಂ ದೆಸೆದೆಸೆಯೊಳಲೆವ ಕಣ್ಮಲರ್ಗಳಿನು
ನ್ಮತ್ತಗಜಗಮನೆಯರ್ ಬಂ
ದೊತ್ತಗೆ ನಿಲ್ವರ್ ಶಾಲದೊಂದಂಗಣದೊಳ್ ॥೬೨॥

ಸರಳಾಳಾಪಂಗಳಿಂ ಜತ್ತಿ ಸುವ ಬಗೆಗೆಲಲ್ಕೆಂದು ಕೂರ್ತಿಚ್ಚೆ ಬೆಚ್ಚಂ
ತಿರೆ ಮಚ್ಚಂ ಮೆಚ್ಚಿದಂದದೊಳೆ ಸಲಿಪ ನಾನಾವಿನೋದಂಗಳಂ ಚಿ
ತ್ರರತಕ್ರೀಡಾವಿನೋದಂಗಳೊಳೆ ಮೆಱೆವ ಕೂಟಂಗಳಿಂ ಕೂಡಿ ಲಾವ
ಣ್ಯರಸಂ ತಳ್ಳಂಕುಗುಟ್ಟುತ್ತಿರೆ ಕರಮೆಸೆಗುಂ ವಾರನಾರೀಕದಂಬಂ ॥೬೩॥

ಮಳಿಗೆಯ ಮಾಳಿಗೆಯ ಮನಂ
ಗೊಳಿಸುವ ನಾನಾಪ್ರಕಾರದಂಗಡಿಯುಂ ಬೆಡಂ
ಗೊಳಕೊಂಡ ಸೂಳೆಗೇರಿಯ
ವಿಳಾಸದಿಂದೆಂತು ನೋಟ್ಪಡಂ ರಮಣೀಯಂ ॥೬೪॥

ವರರತ್ನ ಕನಕಮಯ ವಿ
ಸ್ಫುರಿತಪ್ರೋತ್ತುಂಗತೋರಣಪ್ರಾಕಾರಂ
ನರನಾಥಭವನಮನುಪಮ
ಪುರಾಂಗನಾವದನತಿಳಕಮೆಂಬಂತಿರ್ಕ್ಕುಂ ॥೬೫॥

ಸೊಗಯಿಪ ಭೋಗಾವತಿಗಂ
ಮಿಗಿಲಮರಾವತಿಗಮಿದುವೆ ಮೇಲೆನಿಸುವುದೀ
ಜಗದೊಳ್ ನಿರಂತರಂ ಭೋ
ಗಿಗಳಿಂದಂ ವಿಬುಧರಿಂದಮುಜ್ಜೇನಿಪುರಂ ॥೬೬॥

ನಿರುಪಮಮತರ್ಕ್ಯಮದ್ಭುತ
ಕರಮತಿಶಯಮೆಂದು ಮಾಣದೊಲ್ಲದೆ ಪೋಗೆನೆ
ನರನಾವಂ ಬಣ್ಣಿಪನಾ
ಪುರಮಂ ಬಣ್ಣಿಸುವೊಡುರಗಪತಿಯುಂ ನೆಱೆಯಂ ॥೬೭॥

ಆದನಾಳ್ವನಧಿಕರಿಪುನೃಪ
ಮದವನ್ಮಾತಂಗಕುಂಭದಳಮಥನಂ ದು
ರ್ಮದವಿಜಯನಿಶಿತನಿಸ್ತ್ರಿಂ
ಶದಕ್ಷಗಜವೈರಿವಿಶ್ರುತಂ ವೃಷಭಾಂಕಂ ॥೬೮॥

ಸದಮಳಚರಿತದಿನುದ್ಧೂ
ತದೋಷದಿಂದತ್ಯುದಾತ್ತನಿತ್ಯೋದಯಸಂ
ಪದದಿನೆಳೆಗಿರ್ವರೆನಲೆಂ
ಬುದನೆನಿಸಿ ನೆಗಟ್ತೆವೆತ್ತನಾ ಧರಣೀಶಂ ॥೬೯॥

ಸಕಳಾಳಾಪಂ ಕುವಳಯ
ವಿಕಸನಕರನಖಿಳಸತ್ವಸೌಮ್ಯಂ ಭಾಸ್ವ
ತ್ಪ್ರಕಟಯಶನಿಳಿಸಿದಂ ವಿಶ
ದಕಾಂತಿಯಿಂದಂ ಶಶಾಂಕನಂ ವೃಷಭಾಂಕಂ ॥೨೦॥

ಲಾಟ ಕಳಿಂಗ ವಂಗ ಕರಹಾಟ ತುರುಷ್ಕ ವರಾಳ ಚೋಳ ಕ
ರ್ನಾಟ ಸುರಾಷ್ಟ್ರ ವತ್ಸ ಭರುವತ್ಸ ಸುಕೋಶಲಮಾದಿಯಾದ ದೇ
ಶಾಟವಿಕಾಧಿಪರ್ಮಲೆದು ನಿಲ್ಲದೆ ಕಪ್ಪಮನಿತ್ತು ನಿರ್ಮಿತಾ
ಘಾಟಧರಿತ್ರಿಯೊಳ್ ನೆಲಸುವರ್ ವೃಷಭಾಂಕನಿದೇಂ ಪ್ರತಾಪಿಯೋ ॥೨೧॥

ಮಲೆವ ಮಲೆಪರ್ಕಳಕ್ಕೆಮ
ಬಲಿದ ಬಳಾನ್ವಿತ ಮಹೀಪರಕ್ಕೆಮ ಚಲಮಂ
ತೊಲಗಿಸಿ ವೃಷಭಾಂಕಂ ಕಾ
ಲೊಳಾಂತುದಂ ತಲೆಯೊಳಾಂತು ಬೆಸಕೆಯ್ಯದರಾರ್ ॥೨೨॥

ಪೆಸರಂ ಕೇಳ್ದಳ್ಕಿ ಬೆಳ್ಕುತ್ತುದು ಪರಧರಣೀಮಂಡಲಂ ಗಂಡುಗೆಟ್ಟಾ
ಳ್ವೆಸನಂ ಪೂಣ್ದತ್ತು ಶೌರ್ಯೋನ್ನತಿಗಗಿದಸುಹೃನ್ಮಂಡಳಂ ಮೆಲ್ಪನಾವ
ರ್ಜಿಸಿದೊಂದಾಜ್ಞಾವಿಶೇಷಕ್ಕೆಳಸಿದುದು ಸುಹೃನ್ಮಂಡಳಂ ಸಂತಮಿಂತಾ
ದೆಸಕಂ ಕಯ್ಗಣ್ಮೆ ತದ್ಭೂಪತಿಗಖಿಳಧರಾಚಕ್ರಮಾಯ್ತೇಕಚಕ್ರಂ ॥೨೩॥

ಆ ಜವ್ವೃಷಭಾಂಕವಲ್ಲಭನ ವಲ್ಲಭೆ ಸಲ್ಲಲಿತಪ್ರವಾಳದಂ
ತಾವರಣಾನುರಂಜಿತೆ ಚಕೋರಚಳೇಕ್ಷಣರಾಮೆ ಪಂಕಜ
ಶ್ರೀವದನೋಪಶೋಭಿತ ಲತಾಲಲಿತಾಂಗವಿಲಾಸೆ ಲಕ್ಷ್ಮಣಾ
ದೇವಿ ಮನೋಜರಾಜವನದೇವಿಯೆನಿಪ್ಪಿನಮೊಪ್ಪಿ ತೋಱುವಳ್ ॥೨೪॥

ತನಿಗಂಪಂ ಚಂಪಕಂ ವಿಸ್ಫುರಿತವದನಮಂ ಪಂಕಜಂ ತುಂಗವೃತ್ತ
ಸ್ತನಮಂ ಚಕ್ರಾಹ್ವಯುಗ್ಮಂ ತರಳನಯನಮಂ ಪದ್ಮಪತ್ರಂ ಸಮುದ್ಯ
ತ್ತನುವಂ ಭಾಸ್ವಲ್ಲತಾವಲ್ಲರಿ ತದನುಗತಾಕಾರಮಪ್ಪಂತಿರಾರಾ
ಧನೆಗೆಯ್ವಾ ಪೋಲ್ವೆಯಂ ತಾಳ್ದಿದುವೆನಿಸಿದ ಸಂಪತ್ತಿಯಂ ಕಾಂತೆ ಪೆತ್ತಳ್ ॥೨೫॥

ವ ॥ ಮತ್ತಮಾ ನರೇಂದ್ರನಪರಿಮಿತಪರಿಜನನುಮನುಪಮತುರಂಗಸಂಘಾತ ಸಮೇತನುಂ ಅಕ್ಷೂಣಲಕ್ಷಣೋಪೇತಭದ್ರಗಜರಾಜಿವಿರಾಜಿತನುಂ ಅನೂನಲಕ್ಷ್ಮೀ ವಿಲಾಸನುಂ ಅರಾತಿಮಂಡಲಪ್ರಾಂತಪ್ರಳಯಾನಳನುಮಚಿಂತ್ಯ ಸಾಹಸನುಮರ್ಥಿಸಂಘಾತಚಾತಕಪ್ರೀತಿಕರಣಾಗ್ರಿಮಬಳಾಹಕನುಮಸದೃಶವಿಶೇಷಭಾಸುರಜಿನೇಂದ್ರಶಾಸನೋದ್ಭಾಸಿಯುಮೆನಿಸಿ ಮಹಾಮಕುಟಬದ್ಧಪದವಿಪ್ರತಿಬದ್ಧ ಸಕಲಸಾಮ್ರಾಜ್ಯವಿಭೂತಿಯನಳಂಕರಿಸಿ

ದ್ವಿಷದುರ್ವೀಪಾಲಸೈನ್ಯಾಂಬುಧಿವಿದಹನಕರೌರ್ವಾನಲೋಗ್ರಪ್ರತಾಪಂ
ಧಿಷಣಪ್ರಾರಬ್ಧಸಂಗೀತಕನನುಪಮಸಂಪ್ರಾಪ್ತ ಸಾಮ್ರಾಜ್ಯರಾಜ್ಯಾ
ಭಿಷವಂ ಸಂಸೇವಿರಾಜನ್ಯಕಮಕುಟಮಣಿಪ್ರಜ್ವಲವ್ಯೋಮಚಕ್ರಂ
ವೃಷಭಾಂಕಂ ಶಾಂತನುಜ್ಜೇನಿಯೊಳರಸುಗೆಯುತ್ತಿರ್ದನುತ್ಸಾಹದಿಂದಂ ||೭೬||

ವ || ಆ ವಿಶ್ವವಿಶ್ವಂಭರಾಧೀಶ್ವರಂಗೆ ಪರಮವಿಶ್ವಾಸಿ ಪ್ರಧಾನಶ್ರೇಷ್ಠಿ ಪದ ವಿಭೂತಿಯಂ ತಳೆದು

ಎರಡಿಭಮನೇಱೆ ಕಾರ್ತ
ಸ್ವರದೆರಡುಂ ಕೆಲದೊಳಿರೆ ನಿಷಾದಿಗಲೋರೊ
ರ್ವರ ರೂಪುಗಾಣದಿರ್ಪ
ರ್ದಿರಾಸಿಗಧಿನಾಥಣೆನಿಸಿ ದಿವ್ಯಾನ್ವಯದೊಳ್ ||೭೭||

ವ || ಮಹಾಪ್ರಸಿದ್ಧ ವೈಶ್ಯಾನ್ವಯೋದಾತ್ತನಪ್ಪಿಂದ್ರದತ್ತನೆಂಬ ಪ್ರಧಾನಶ್ರೇಷ್ಠಿಗ ಮಾತನ ಮನೋರಮೆ ಶೀಲವತಿಯೆನಿಸಿದ ಗುಣವತಿಗಂ

ವಿಗಳಿತಕಳಂಕ ಜಿನಪದ
ಯುಗಸರಸಿಜಮಧುಕರಂ ವಿನೇಯ ನಿಧಾನಂ
ಸುಗುಣಾಂಳಂಕೃತಗಾತ್ರಂ
ನೆಗೞ್ತೆವೆತ್ತಿರ್ದ ಸೂರದತ್ತಂ ಪುತ್ರಂ ||೭೮||

ವಿಬುಧಜನಾಧಾರಂ ವಂ
ದಿಬೃಂದಕಲ್ಪದ್ರುಮಂ ಮಹೋದಾರಗುಣ
ಸ್ತಬಕನೆನಿಸಿರ್ದು ಧನದೊಳ್
ಕುಬೇರನೆನೆ ನೆಗೞ್ದನಾ ವಣಿಕ್ಕುಲತಿಲಕಂ ||೭೯||

ಪರಮದಯಾಮೂರ್ತಿ ಮನೋ
ಹರಮೂರ್ತಿ ಸುಧರ್ಮಮೂರ್ತಿಯೆಂದಿವು ತನ್ನೊಳ್
ನೆರೆದೇಕಮೂರ್ತಿಯಾದಂ
ತಿರೆಸೆದನಾ ಪುತ್ರಮೂರ್ತಿ ಧಾತ್ರೀತಳದೊಳ್ ||೮೦||

ಕ್ಷಯಮದಗುಣನಾಗಿಯುಮ
ಕ್ಷಯದಾನಾನೂನವಿಭವನಿಭ್ಯಾನ್ವಯನಾ
ಗಿಯುಮತ್ಯುದಾತ್ತವಂಶ
ಪ್ರಿಯನಂತಾ ಸೂರದತ್ತನಸದೃಶಚಿತ್ತಂ ||೮೧||

ಕ್ಷಿತಿತಳದಂತೆ ರಸಾಶ್ರಯ
ನತರ್ಕ್ಯಸುಕವೀಂದ್ರಬೃಂದದಂತೆ ವಿಶೇಷಾ
ನ್ವಿತನಂಬರದಂತೆ ಸದಾ
ವ್ರತನಂಬುಧಿಯಂತೆ ಪರಮಗಂಭೀರಗುಣಂ ॥೮೨॥

ವಿಧೃತಕಳಾಕಳಾಪನಿಧಿಯಾಗಿ ಶಶಾಂಕನವೊಲ್ ಕಳಂಕಮಿ
ಲ್ಲದೆ ಸತತಂ ಬುಧಾವಸಥನಾಗಿ ದಿನಾಧಿಪನಂತೆ ತೀವ್ರನ
ಲ್ಲದೆ ಬಹುರತ್ನ ರಾಶಿಪರಿಶೋಭಿತಸಂಪದನಾಗಿ ವಾರ್ಧಿಯಂ
ದದೆ ಕಲುಷಾಶಯಪ್ರಕೃತಿಯಲ್ಲದೆ ಸಂದನಿಳಾತಳಾಗ್ರದೊಳ್ ॥೮೩॥

ಎನಿತೊಳವು ಸಾರವಸ್ತುಗ
ಳೆನಿತೊಳವುನ್ಮದಗಜಂಗಳೆನಿತೊಳವು ತುರುಂ
ಗನಿಕಾಯಮೆಂದು ಪವಣಿಸು
ವನಮಾವನಾ ವೈಶ್ಯಕುಲನ ಧನಸಂಕುಲಮಂ ॥೮೪॥

ಅನಿವಿರಿದವಂತಿ ಮಾಳವ
ಮನಾಳ್ವ ವೃಷಭಾಂಕನೃಪನ ಬಾಟ್ಕಿಯ ಸಿರಿಯಾ
ತನ ದಿವಿಸದ ಭೋಗದನಿತಿ
ಲ್ಲೆನೆ ಪರದನ ಪಿರಿಯ ಸಿರಯನಱಿಯೆಂ ಪೊಗಟಲ್ ॥೮೫॥

ವ ॥ ಮತ್ತಮಾ ಪುರದೊಳ್ ತದೀಯ ಕುಳಶೀಳ ಲಕ್ಷ್ಮೀಸಮಾನಸಂಪನ್ನನಪ್ಪ ರಾಜಪ್ರಧಾನಶ್ರೇಷ್ಠಿ ಸುಭದ್ರಂಗಂ ಸರ್ವಯುಶೆಗಂ ಪುಟ್ಟಿದ ಯಶೋಭದ್ರ ಕುಮಾರನಿಂ ನೇರ್ಗಿಱಿಯಳ್

ತನಗೆ ಕುಲಲಲನೆ ರೂಪವ
ತಿ ನೆಗಟ್ದ ಲಾವಣ್ಯವತಿ ವಿಲಾಸವತಿ ಯಶೋ
ವನಿತೆಗೆ ಸವತಿದಲೆಂಬುದ
ನೆನಿಸಿ ಯಶೋಭದ್ರೆ ಮನಮನುಱಿ ಸೆಱಿವಿಡಿದಳ್ ॥೮೬॥

ವಿನುತಕಪೋಳಂ ದರ್ಪಣ
ಮೆನೆ ಮೊಲೆಗಳ್ ಕನಕಕಳಶಮೆನೆ ಪೊಳೆವಲರ್ಗ
ಣ್ಣನುಪಮ ಚಮರಜಮೆನೆ ಮದ
ನನ ಮಂಗಳರಾಜ್ಯಲಕ್ಷ್ಮಿಯೆನೆ ಸೊಗಯಿಸುವಳ್ ॥೮೭॥

ಲಳಿತೆಯ ಮುಖೇಂದುಬಿಂಬದ
ಬೆಳಗಿನೊಳಿರದಗಿದು ಪೆಱತೆಗೆದು ತಮೋ

ಬಳಮಿರ್ದುದೆಂಬಿನಂ ಕ
ಣ್ಗೊಳಿಸುಗುಮಾಕೆಯ ವಿನೀಳಕಬರೀಭಾರಂ ॥೮೮॥

ಅಗಲದೆ ರೇಖಾತ್ರಯದಿಂ
ದಗಲದ ಪೊಗರ್ವಟ್ಟಬಂಧುರಚ್ಛವಿಯಿಂ ಕಂ
ಬುಗಳಂ ನಗುವಂತಿರೆ ಕಂ
ಬುಗಳಂ ಕರಮೆಸೆಗುಮಾ ವಣಿಕ್ಪತಿಸತಿಯಾ ॥೮೯॥

ಮೊಗಮಂ ತಾವರೆಗೆತ್ತು ಕಣ್ಮಲರ್ಗಳಂ ನೀಲೋತ್ಪಲಂಗೆತ್ತು ಸ
ಳ್ಳುಗುರಂ ಕೇದಗೆಗೆತ್ತು ಹಸ್ತತಳಮಂ ಸತ್ಪಲ್ಲವಂಗೆತ್ತು ತ
ನ್ಮೃಗಶಾಬಾಕ್ಷಿಯನಿಂತು ಮನ್ಮಥವನಶ್ರೀಗೆತ್ತು ಭೃಂಗಂಗಳೋ
ಲಗಿಸುತ್ತಿರ್ದಪುವೆಂಬಿನಂ ಸೊಗಯಿಕುಂ ನೀಳಾಳಕಂ ಕಾಂತೆಯಾ ॥೯೦॥

ಶತಪತ್ರಬ್ರಾತದುರ್ಕೊಡೆದುದು ಜಯಮಾಯ್ತಂಗಜನ್ಮಂಗೆ ನೇತ್ರಾ
ಸಿತನೀರೇಜಾತಮಾನಂದದೊಳಲರ್ದಪುವೀ ಬಾಳಿಕಾ ವಕ್ತ್ರ ಚಂದ್ರ
ದ್ಯುತಿಯಿಂದಂತಾಗಿ ಮತ್ತಂ ಪಗಲುಮೆಸೆವುದಿನ್ನೇವೆನೆಂದೆಂದು ಶೀತ
ದ್ಯುತಿ ನಿಚ್ಚಂ ಕಂದುತುಂ ಕುಂದುತುಮುದಯಿಪನೆಂಬುಕ್ತಿಗಾ ಕಾಂತೆ ಪೋಲ್ತಳ್ ॥೯೧॥

ಪ್ರಿಯೆಯ ಮುಖಚಂದ್ರಬಿಂಬಂ
ದಯಿತಾವಿಲೋಚನವಿನೀಳನೀರೇಜಮನಲ
ರ್ಚಿಯುಮೇನೊ ತತ್ಪ್ರಿಯಾನನ
ಪಯೋಜನಮಂ ಕುಟ್ಮಳೀಕೃತಂ ಮಾಡಿದುದೇ ॥೯೨॥

ಕಾಮಾಬ್ಧಿವೇಳೆ ಕಾಮಿನಿ
ಕಾಮಲತಾಲಲಿತಕುಸುಮಮಂಜರಿಪೆಱದೇಂ
ಕಾಮಗಜರಾಜಮದಲೇ
ಖಾಮಂಡಲಲಕ್ಷ್ಮಿಯೆನಿಸಿ ಕಾಮಿನಿ ನೆಗಟ್ದಳ್ ॥೯೩॥

ಅಳಕಾನೀಕಮನಿಂದ್ರನೀಳಮುಗುರಂ ವಜ್ರಂ ಲಸದ್ದಂತಮಂ
ವಿಲಸನ್ಮೌಕ್ತಿಕಮೋಷ್ಠಮಂ ಪವಳಮಂಗಚ್ಛಾಯೆಯಂ ಪಚ್ಚೆ ನಿ
ಶ್ಚಳಮಾರಾಧಿಸಿ ಪೋಲ್ತುವೆಂದಿರದೆ ಪೇೞ್ ನೀಳಾದಿ ಪಾಷಾಣ ಸಂ
ಕುಲದೊಳ್ ದುರ್ವಿದರಂತು ಪೋಲಿಸುವೆನೇ ರೂಪಂ ಯಶೋಭದ್ರೆಯಾ ॥೯೪॥

ಇದು ಪುರುಷರತ್ನಮನುಪಮ
ಮಿದು ವನಿತಾನೂತ್ನ ರತ್ನಮಿಂತೀ ಎರಡುಂ

ಸದೃಶಾರ್ಥಮಾದುವೆಂಬಿನ
ಮುದಿತೋದಿತಮಾದುದವರೊಳನುರಾಗಗುಣಂ ॥೯೫॥

ಜನಿತಾನುರಾಗ ನಾನಾ
ವಿನೋದಕೇಳೀವಿಲಾಸಲೀಲೋತ್ಸವದಿಂ
ಮನಸಿಜ ಸುಖಾಮೃತಾಸ್ವಾ
ದನದೊಳ್ ಮನಮೊಸೆದು ಕೂಡಿ ತಣ್ಣನೆ ತಣಿದರ್ ॥೯೬॥

ವ ॥ ಅಂತನ್ಯೋನ್ಯಪ್ರಣಯ ಸಂಜಾತಸಂಪತ್ಪರಂಪರಾ ಪರಿಗಣವಾಗಿ ನಿಳಿಂಪದಂಪತಿಯನೆ ಪೋಲ್ವ ತದ್ದಂಪತಿಗಳಗ್ಗಪಾರಸಂಸಾರಸುಖಾನುಭವವಿಭವಂಗಳಿಂ ಕೆಲವು ಕಾಲಂ ಸಲ್ವುದುಮೊದುದಿವಸಂ

ನೆಱೆಯೆ ಬಸಮೞಿದು ಚಿಂತಿಸಿ
ಮಱುಗಿ ಯಶೋಭದ್ರೆ ಮಕ್ಕಳಿಲ್ಲದ ನೋವಿಂ
ಪಱಿದು ಬಿಸುಟ್ಟೆಳಲತೆವೋಲ್
ಕಱಂಗಿ ಕಡುಗಂದಿಕುಂದಿ ತೆರಮರದಿರ್ದಳ್ ॥೯೭॥

ಸಲೆ ವಂಧ್ಯಾಲಯದಂತಿರೆ
ಪಲಕಾಲಂ ಪುಷ್ಪವತಿಯೆನಾದಪೆನೆಂದುಂ
ಫಲವತಿಯಾದಪೆನಿಲ್ಲೆಂ
ದು ಲತಾಲಲಿತಾಂಗಿ ಬಾಡಿ ಪಾಡೞಿದೆಂಗುಂ ॥೯೮॥

ಕಿಱುನಗೆ ಲೋಳೆವಾಯ್ ತೊದಳದೊಂದಿದ ನಾಲಗೆ ಚಿನ್ನ ಪೂಗಳೊಳ್
ತುಱುಗಿದ ಚಿನ್ನ ಕೆಂಜೆಡೆ ತಳರ್ನಡೆ ಮುದ್ದು ಮೊಗಂ ಪೊರಳ್ವ ಮುಂ
ಜೆಱಗು ಕಿವುಚ್ಚಿಪೀರ್ವ ಮೊಲೆ ದಟ್ಟಡಿಯೊಳ್ಪರಿದೋಡುವಂಗಣಂ
ನೆಱೆ ತನಗೊಪ್ಪುವರ್ಭಕನನೊರ್ವನನಾಂ ಪಡೆವಂದಮಾವುದೋ ॥೯೯॥

ಆಡುವ ನಲಿದಾಡುವ ನಡೆ
ನೋಡುವ ಕೊರಲಪ್ಪಿಕೊಳ್ವ ಭಕ್ಷ್ಯಾದಿಗಳಂ
ಬೇಡುವ ಮಕ್ಕಳ ಬಾಳ
ಕ್ರೀಡೆಗಳಂ ನೋಡುತೀರ್ಪುದೊಂದಿರವಲ್ತೇ ॥೧೦೦॥

ಎನಿತೊಳವು ಬಾಲಕೇಳಿಗ
ಳನಿತಱೊಳಂ ಮುದ್ದುವಡೆದು ಮನೆಯಂಗಣದೊಳ್
ಮನಮೊಸೆದಾಡುವ ಮಕ್ಕಳ
ವಿನೋದಮಂ ಕಾಣ್ಬ ದಿವಸಮೆಂದಾದಪುದೋ ॥೧೦೧॥

ಶುಕಪಿಕಸಾರಿಕಾದಿ ವಿಹಗಂಗಳನಾಂ ಸೆಱೆಗೆಯ್ದನೋ ಶಿಶು
ಪ್ರಕರಮನೇನಗಲ್ಚಿದೆನೊ ಧರ್ಮಮನೇಂ ಪೞೆಕೆಯ್ದನೋ ಗುಣಾ
ಧಿಕರನವಜ್ಞೆಗೆಯ್ದೆನೊ ಜಿನೇಶ್ವರಪೂಜೆಗೆ ವಿಘ್ನಮಾದೆನೋ
ಸುಕೃತಿಗೆ ನೋಣನೋ ತನಯರಿಲ್ಲದದಾವುದೊ ಕರ್ಮಬಂಧನಂ ॥೧೦೨॥

ತನುಜಾತೋದಯಮಪ್ಪ ಪುಣ್ಯದಿನಮಂ ಮೆಯ್ವೆರ್ಚಿ ಕಾಣಲ್ಕೆ ನೋ
ನೆನೊ ಗೇಹಾಂಗಣದೊಳ್ ತಳರ್ನಡೆವುದಂ ಕಣ್ಣಾರೆ ನೋಡಲ್ಕೆ ನೋ
ನೆನೊ ಸಯ್ಪಿಂ ತೊದಳೊಳ್ಪುದಳ್ದ ನುಡಿಯಂ ಪಾರ್ರೈಸಿ ಕೇಳಲ್ಕೆ ನೋ
ನೆನೊ ವಂಧ್ಯಾಸತಿಯಾಗಿ(ಯೆಯ್ದೆ)ಪಿರಿದುಂ ದುಃಖಿಕ್ಕಿದೇಂ ನೋಂತೆನೋ ॥೧೦೩॥

ಸಮಸಂದ ತನ್ನ ಸಂತತಿ
ಗೆ ಮಕ್ಕಳುಳ್ಳವಳೆ ಬೞ್ದು ಬಾೞ್ವಳ ಕ್ಷಿ ತಿಯೊಳ್
ಸಮಸಂದೆಸೆಗಮೆ ಸಂತತಿ
ಗೆ ಮಕ್ಕಳಿಲ್ಲದಳ ಬರ್ದುದೇಂ ಬಾೞಿದುದೇಂ ॥೧೦೪॥

ವ ॥ ಎಂದು ಪಿರಿದುಮಾಕುಲವ್ಯಾಕುಲೆಯಾಗಿ ಚಿಂತಿಸುತ್ತಿರ್ಪುದುಮಾ ಪ್ರಸ್ತಾವದೊಳ್

ಆ ನಗರದೊಳೊರ್ಮೊದಲೊ
ಳನೂನಂ ಮಾಂಗಲ್ಯನಿನದಮೊಡನೆಸೆವಿನಮಾ
ಮಾನಿನಿಯ ಕಿವಿಗೆ ತೀಡಿದು
ದಾನಂದಗಭೀರಭೂರಿಭೇರೀ ನಿನದಂ ॥೧೦೫॥

ವ ॥ ಆಗಳದೇನೆಂದು ಬೆಸಗೊಳ್ವುದುಂ ಕೆಲದೊಳಿರ್ದ ಪರಿಚಾರಕಿ ಪೇೞ್ಗುಮಿಂದು ನಮ್ಮ ಪುರದ ಪೊಱವೊೞಲ ನಂದನವನದೊಳಭಿನಂದನಮುನೀಂದ್ರರೆಂಬ ದಿವ್ಯಜ್ಞಾನಿಗಳ್ ಬಂದಿರ್ದೊಡೆ ವೃಷಭಾಂಕನಾನಂದಭೇರಿಯಂ ಪೊಯ್ಸಿ ನಾನಾ ವಿಧಾರ್ಚನೆವೆರಸು

ಜನಪನುಮರಸಿಯರುಂ
ಪರಿಜನಮುಂ ಪುರಜನಮುಮಾ ಮುನೀಶ್ವರರಂ ಕಾ
ಣ್ಬ ನಿಮಿತ್ತದಿಂದೆ ಪೋದಪ
ರೆನೆ ಸಂತೊಸದಂತನೆಯ್ದಿ ರಾಗದಿನಾಗಳ್ ॥೧೦೬॥

ದಂದುಗಮನುೞಿದು ಪರಮಾ
ನಂದದಿನಭ್ಯರ್ಚನಾ ಪುರಸ್ಸರಮಂದೆಯ್
ತಂದಳ್ ಲತಾಂಗಿಯಂದಭಿ
ನಂದನಮುನಿನಾಥನಿರ್ದ ನಂದನವನಮಂ ॥೧೦೭॥

ವ ॥ ಆಗಳಾ ಸ್ಮರಶರಾಸನೋಪಮಾನವಿಭ್ರಮಭ್ರೂಲತಿಕೆ ಲಲಿತ ಪುನ್ನಾಗಲತಿಕೆಗಳುಮನಪೂರ್ವ ಮಲಯಜವಿಲಸಿತಲಲಾಟಪಟ್ಟೆ ಲಲಿತತಿಲಕಾನೋಕಹಕುಸು ಮಂಗಳಂ ನಾಗಚಂಪಕಕುಟ್ಮಲಾನುಕಾರಿ ನಾಸಾಪುಟ ವಿಕಸಿತಮುಕುಲಶೋಭಿತಚಂ ಪಕಂಗಳಂ ಅಭಿನವ ಮನಸಹಕಾರಸ್ತಬಕನಿಬಿಡಪೀನಪೀವರಸ್ತನಯುಗಳವಿರಾಜಿತೆ ಪಲ್ಲವಿತ ಕುಸುಮಿತ ಮುಕುಲಿತ ಫಲಿತ ಮಂಜರೀರಂಜಿತಚೂತಭೂಜಾತಂಗಳಂ ಸಮುಲ್ಲಸಿತವಲ್ಲರೀಶಾಖಾಸದೃಶಬಾಹುಲತಿಕೆ ಸಲ್ಲಲಿತಲತಾಭವನಂಗಳಂ ಅಭಿನೂತ ಕೇತಕೀಕಿಸಲಯಾಪಹಸಿತಕರತಲಪಲ್ಲವೆ ರಕ್ತಕಂಕೆಲ್ಲೀ ಮಹೀರುಹಂಗಳುಮಂ ಶಾತಕುಂಭರಂಭಾಸ್ತಂಭಭಾಸುರವಿಲಾಸವೃತ್ತೋರುವಿರಾಜಿತೆ ಕನಕಕದಲೀವನಂಗಳಂ ನವಮಾಲಿಕಾಕುಸುಮಸುಕುಮಾರಕೋಮಲೆ- ವಿಚಿತ್ರನವಮಾಲಿಕಾಲತೆಗಳುಮ ನತಿರುಚಿರಮಲ್ಲಿಕಾಪ್ರಸವಸುರಭಿಪರಿಮಲಾಲಿಂಗಿತಸುಗಂಧಿ ಬಂಧುರೋತ್ಫುಲ್ಲಮಲ್ಲಿ ಕಾವಲ್ಲರಿಗಳುಮನಲ್ಲಲ್ಲಿಗೆ ನಿಂದು ಮೆಲ್ಲಮೆಲ್ಲನೆ ನೋಡುತ್ತಂ

ಯುವತೀರೂಪಮನಂಗಜಂಗಮಲತಾಶ್ರೀರೂಪಮೆಂಬಂತು ಕಂ
ತುವಿನೋದಾರ್ಥವಿಚಿತ್ರಚಿತ್ರಿತಪತಾಕಾಭಾಸಮೆಂಬಂತು ಸಂ
ದ ವಸಂತಾಗಮಲಕ್ಷ್ಮಿ ತಾನೆ ಪೆಱದೇನೆಂಬಂತು ಬಂದಳ್ ಮನೋ
ಭವಮತ್ತದ್ವಿರದಂ ವನಕ್ಕೆ ಪುಗುತರ್ಪಂತಾ ವನೋದ್ದೇಶದೊಳ್ ॥೧೦೮॥

ವ ॥ ಅಂತು ಬಂದು ಪರಮತಪಸ್ತಪನೋದಯಾಚಳಾಯಮಾನರನುಭಯ ನಯಸಮಾನರಂ ವಿಜಿತಾಶೇಷಾಪರೀಷಹಾರಾತಿಬಳರಂ ವಿನಷ್ಟಾಷ್ಟಮಳರಂ ಉಪಗತಾನಂತಾರ್ಥವ್ಯಂಜನಪರ್ಯಾಯಕೋಪಯುಕ್ತಜೀವಾದಿಪದಾರ್ಥ- ಸಾರ್ಥಸದ್ಭಾವರಂವಿಶುದ್ಧ ಸ್ವಭಾವರನಕೃತ್ರಿಮಾಶೇಷದಜಿನಭವನಸ್ತವನನಿರತರಂ ಸರ್ವಸಂಗವಿರತರಂ ಪರಮಾವಧಿ ಬೋಧರಂ ಸರ್ವಸಂಗನಿರವಶೇಷನಿರಸ್ತಮಾನಮಳ- ಮಾಯಾಕ್ರೋಧರಂ ತಾರಹಾರಶಂಖಶಶಾಂಕಶಾರದಾಭ್ರವಿಭ್ರಮಭ್ರಾಜಿತತ್ರಿಭುವನಾಂತ- ರಾಳಪ್ರವರ್ತಿತ ಕೀರ್ತಿಗಳನುಪಶಮೈಕಮೂರ್ತಿಗಳನತಿ ವಿಶಾಲಶಾಲವೃಕ್ಷಮೂಲ- ಸ್ಥಿತನಿಸರ್ಗನಿರ್ಜಂತುಕ ನಿರಾಕುಳಶಿಲಾತಳದೊಳಧ್ಯಾತ್ಮವಿದ್ಯಾಧ್ಯಯನಸಂವರ್ಧಿತಸನ್ಮತಿ- ಗಳಾಗಿರ್ದಭಿನಂದ ನಮುನಿಪತಿಗಳಂ ಕಂಡು ಮಹೀತಳಾಲಿಂಗಿತಾಂಗಿಯಾಗಿ ಭಕ್ತಿಭರದಿನೆಱಗಿ ಪೊಡೆವಟ್ಟು ಧರ್ಮಶ್ರವಣಾನಂತರಂ ಸಮಸ್ತವಿನೇಯಜನಂಗಳೆಲ್ಲಂ ವಂದಿಸಿ ಪೋದಿಂ ಬೞಿಕ್ಕೆ ಸುಪ್ರಸ್ತಾವದೊಳ್ ವಿನಯವಿನಮಿತೋತ್ತಮಾಂಗೆಯಭಿಮುಖಿ- ಯಾಗಿಯಭಿ ನಂದನಮುನಿಪತಿಯಭಿಮುಖದೊಳ್ ನಿಟಿಳತಟಘಟಿತಕರಪುಟಿಯಾಗಿ

ಎನಗೀಜನ್ಮಮಿದಿಂತೆ ಬಂಜೆತನದಿಂದಂ ಪೋಕುಮೋ ಪುತ್ರಸಂ
ಜನನಂ ಮೇಣ್ದೊರೆಕೊಳ್ಳುಗುಮೋ ಮುನಿಪತೀ ಪುತ್ರಾಂತರಾಯಂ ಪುರಾ
ತನದುಷ್ಕರ್ಮವಿಪಾಕಮೋ ಬೆಸಸಿಮಿಾಗಳ್ಗೆಯ್ದ ದುಷ್ಪಾಪದು
ರ್ವಿನಿಮಾ ದುರ್ಧರದುಃಖಮೆನ್ನನಲೆವಂತುಂ ಮುನ್ನಮೇಗೆಯ್ದೆನೋ ॥೧೦೯॥

ವ ॥ ಎಂಬುದುಮಾ ಮುನೀಶ್ವರಂ ನಿಜಾವಧಿಬೋಧಮಂ ಪ್ರಯೋಗಿಸಿ ನೋಡಿ

ನಿಮಗೆ ವಂಧ್ಯಾಸಂಬಂಧಮಪ್ಪ ದಂದುಗಮೊಂದುಮಿಲ್ಲ ನಿಮಗಿಂದಿಗಯ್ದು ತಿಂಗಳಂದಿಗ ದಿವದಿನವತರಿಸಿ

ಅನತಿಶಯಗರ್ಭಸುಖಿ ಸುಜ
ನನಿಧಾನಂ ಬಾಳದಿನಕರಪ್ರತಿಮಾನಂ
ಜಿನಧರ್ಮನಿರತನೋರ್ವಂ
ತನೂಭವಂ ನಿನಗೆ ಪುಟ್ಟುಗುಂ ಪುಟ್ಟಲೊಡಂ ||೧೧೦||

ಪುತ್ರಮುಖಾಬ್ಜಾಲೋಕನ
ಮಾತ್ರದೊಳಂ ಪಿತೃ ತಪಕ್ಕೆ ಪೋಕುಂ ಚಿತ್ರಂ
ಪುತ್ರಂ ಮುಮುಕ್ಷುದರ್ಶನ
ಮಾತ್ರದೆ ಜಿನದೀಕ್ಷೆಯಂ ದಿಟಂ ಕೈಕೊಳ್ಗುಂ ||೧೧೧||

ವ|| ಎಂದು ಬೆಸಸುವುದುಂ

ಯತಿಪತಿಮುಖಾರವಿಂದೋ
ದ್ಗತ ಋತವಚನಂ ಸ್ವಕೀಯ ಹೃದ್ಗೋಚರಮಾ
ಗೆ ತನೂದರಿಗಾ ಬೇಗದೊ
ಳತಿಹರ್ಷವಿಷಾದಮಾದಮೇನೊದವಿದುವೋ ||೧೧೨||

ಇಂತಾ ಕಾಂತೆಯ ಮನದೊಳ್
ಸಂತಸಮುಂ ನೋವುಮೊಡಗೊಂಡಿರೆ ಕ
ರ್ಮಾಂತಕರಂ ಬೀೞ್ಕೊಂಡ
ಲ್ಲಿಂ ತಳರ್ದು ನಿಜಾಲಯಕ್ಕೆ ಬಂದತಿಮುದದಿಂ ||೧೧೩||

ವ || ನಾನಾವಿನೋದಂಗಳಿಂ ಕತಿಪಯದಿನಂಗಳ್ಪೋಗೆ ಪಂಚಮಾಸಾವಸಾನದ ಪುಣ್ಯದಿನದೊಳ್ ಪುಣ್ಯವತಿವಸಂತಸಮಯದ ಸಹಕಾರಲತೆಯಂತೆ ಪುಷ್ಪವತಿಯಾಗಿ ತೀರ್ಥೋದಕಂಗಳಿಂ ಪವಿತ್ರೀಕೃತಗಾತ್ರೆಯಾಗಿ

ಮಿಸುಗುವ ತೋರಮಲ್ಲಿಗೆಯ ಜೋಲ್ದ ಬಟಿಲ್ಮುಡಿ ತೊಟ್ಟ ಮೌಕ್ತಿಕ
ಪ್ರಸರವಿಭೂಷಣಾಳಿ ಪರಿಚಂದನದಣ್ಪು ಪೊದಳ್ದ ಕಾಂತಿಯುಂ
ಪಸರಿಸೆ ಮಿಂಚುವೆತ್ತ ಸುಲಿಪಲ್ಗಳವಟ್ಟದುಗೂಲಮೊಪ್ಪೆ ಬೆ
ಳ್ಪಸದನಮಂತದೇನೆಸೆದುದೋ ಪರಿಪೂರ್ಣ್ನಸುಧಾಂಶುವಕ್ತ್ರೆಯಾ ||೧೧೪||

ವ|| ಆತಸ ಕೀರ್ತಿಲಕ್ಷ್ಮಿಯೆ ಮೂರ್ತಿಮತಿಯಾದುತಾತ್ಮೀಯ ಪ್ರಾಣೇಶ್ವರನ ಮನಕ್ಕೆವರೆ ಸೂಳ್ಗೆವಂದು ಸುಪ್ತೆಯಾಗೆ ಯಾಮಿನೀವಿರಾಮಯಾಮದೊಳ್

ಉದಯಂಗೆಯ್ವರ್ಕನಂ ಪಜ್ಜಳಿಸಿ ಪೊಳೆವ ಶೀತಾಂಶುವಂ ಶುಭ್ರಶುಂಭ
ನ್ಮದವನ್ಮಾತ್ತಂಗಮಂ ಘೂರ್ಣ್ಣಿಸುವ ಜಲಧಿಯಂ ಸಾರಕಾಸರಮಂ ಭಾ
ಸದ ರತ್ನವ್ರಾತಮಂ ನಿರ್ಮಳಧವಳವೃಷಾಧೀಶನಂ ಸನ್ಮನೋರಾ ।
ಗದಿನತ್ಯಾಶ್ಚರ್ಯಶೌರ್ಯಾನ್ವಿತಮೃಗಪತಿಯಂ ಸ್ವಪ್ನದೊಳ್ಕಾಂತೆ ಕಂಡಳ್ ॥೧೧೫॥

ವ ॥ ಆ ನಿಶಾವಸಾನಸಮಯದೊಳನೇಕ ವಿಧವಾದ್ಯಮಾನತೂರ್ಯಶಂಖಕಾಹಳಾಪ್ರಘೋಷದೊಳಂ ನಿತ್ಯನಿಯೋಗದಿಂ ಬಂದು ಪ್ರಬೋಧಿಸುವ ಮಾಗಧಜನಸಮುಚ್ಚರಿತಮಾಂಗಲ್ಯಗೀತಧ್ವನಿಗಳೊಳಮೊಯ್ಯನೊಯ್ಯನೆ ಮನಮಂ ಪಳಂಚಲೆವ ಸೀಯನಪ್ಪ ಗೇಯು ನಿನಾದಾಕರ್ಣನದೊಳುದಯಗಿರಿಶಿಖರಿಸೇಖರನಾದ ತಿಗ್ಮರುಚಿಮರೀಚಿನಿಕುರುಂಬಚುಂಬಿತಾಂಭೋಜವನಲಕ್ಷ್ಮಿಯೊಡನೆ ಲಬ್ಧಪ್ರಬೋಧೆಯಾಗೆ ಜಿನಪೂಜಾಪ್ರಧಾನಪ್ರಭಾತಸಮಯನಿತ್ಯನಿಯಮಂಗಳಂ ನಿರ್ವರ್ತಿಸಿ ಪರಿ.......ಮಂಗಳಪ್ರಸಾಧನಾಲಂಕೃತೆಯುಂ ಪರಿವಾರನಾರೀಜನಪರಿವೃತೆಯುಮಾಗಿ ನಿಜಮನೋವಲ್ಲಭ.......

ಮದನಮದರದನಿಯಂತಿರೆ
ಮದಮಧುಕರಮಧುರಮಂಜುರಂಜಿತ ಗುಂಜ
ನ್ಮೃಗು..............ಯೆ ಎಂಬುದು
ಮದನನ ತಿರುವಿಂ ಬರ್ದುಂಕಿದರಲಂಬಿನವೋಲ್ ॥ ॥೧೧೬॥

ವ ॥ ಅಂತು ಬಂದು ನಿಜಜೀವಿತೇಶನರ್ಧಾಸನಮನಳಂಕರಿಸಿ ಕುಳ್ಳಿರ್ದು ತನ್ನ ಕಂಡ ಕನಸುಗಳನನುಕ್ರಮಂದಪ್ಪದೆ ಸೂಚಿಸುವುದುಂ

ತಪಿಯಿಂ ನಿರ್ಧೂತದೋಷಂ ವಿಶದಶಶಿಯಿನತ್ಯಂತಕಾಂತಂ ಸದಾನ
ದ್ವಿಪದಿಂ ಭದ್ರಾನ್ವಯಂ ವಾರ್ಧಿಯಿನನುಪಮನಂಭೋಜನೀಷಂಡದಿಂದ
ಗ್ಲಪಿತಾತ್ಮಂ ರತ್ನದಿಂ ನಿರ್ಮಳಗುಣನಿಳಯಂ ಶಕ್ವರಾಧೀಶನಿಂ ಸೌ
ಖ್ಯಪದಂ ಪಂಚಾಸ್ಯನಿಂದಂ ಪರಮಜಿನಮತಾಂಭೋಜನೀರಾಜಹಂಸಂ ॥೧೧೭॥

ಇದು ಸಮಸ್ತ ವಿನೇಯಜನವಿನುತ ಶ್ರೀವರ್ಧಮಾನಮುನೀಂದ್ರವಂದ್ಯ
ಪರಮಜಿನೇಂದ್ರಶ್ರೀಪಾದಪದ್ಮವರಪ್ರಸಾದೋತ್ಪನ್ನ
ಸಹಜಕವಿ ಶ್ರೀಶಾಂತಿನಾಥಪ್ರಣೀತಮಪ್ಪ
ಸುಕುಮಾರಗರ್ಭಾವತರಣವರ್ಣನಂ
ನವಮಾಶ್ವಾಸಂ

೧೦. ದಶಮಾಶ್ವಾಸಂ

ಶ್ರೀನಾರೀರಮಣಂ ವಾಕ್
ಶ್ರೀನಾರೀರಮಣನೂರ್ಜಿತೋಜ್ವಲಕೀರ್ತಿ
ಶ್ರೀನಾರೀರಮಣಂ ಭ
ವ್ಯಾನಂದಕರಂ ಸರಸ್ವತೀಮುಖಮುಕುರಂ ॥೧॥

ಅನವರತ ಪರಮಸುಖಸಾ
ಧನಚರಿತಂ ಜಿನಕುಮಾರಸದೃಶಂ ಭವ್ಯಂ
ನಿನಗೆ ಮಗಂ ಪುಟ್ಟುಗುಮೆನೆ
ತನೂದರೀವದನವನಜಮಲರ್ದತ್ತಾಗಳ್

ಲಲಿತೆ ಪತಿ ವಚನಮಲಯ್ವಾ
ನಿಳವಶದಿಂ ವಿಪುಳಪುಳಕಸಂಚಯದಿಂ ತೆಂ
ಬೆಲರಲೆಪದಿಂ ವಸಂತದೊ
ಳಲರ್ದೊಪ್ಪಿದದೊಂದಶೋಕಲತೆಗೆಣೆಯಾದಳ್ ॥೩॥

ವನಜದಳಾಯತಾಕ್ಷಿ ಮನದೊಲ್ ಗುಡಿಗಟ್ಟಿ ಪೊದಳ್ದ ಸಂತೊಸಂ
ತನಗೆ ವಿಲಾಸಮಂ ಪಡೆಯೆ ಮಂಡಳಮಂಡನನಪ್ಪ ಪುಣ್ಯ ಭಾ
ಜನನನಪೂರ್ವಮನ್ಮಥನ ನಿಭ್ಯಕುಲಾಂಬರತಿಗ್ಮರೋಚಿಯಂ
ತನಯನನಂದೆ ಪೆತ್ತವೊಲದೇನನುರಾಗಮನಪ್ಪುಕೆಯ್ದಳೊ ॥೪॥

ವ ॥ ಅನ್ನೆಗಮಿತ್ತಲಾ ಪೂರ್ವೋಕ್ತ ಪದ್ಮಗುಲ್ಮವಿಮಾನಾಧೀಶ್ವರನಪ್ಪ ಪದ್ಮಪ್ರಭಾಮರನಮರಲೋಕಸುಖಸುಧಾರಸಾನುಭವದಿಂ ತಣ್ಣನೆ ತಣಿದಾತ್ಮೀಯ ಪಣ್ಯೋಪಾರ್ಜಿತ ದಿವ್ಯಭೋಗಮುನನಿಪ್ಪತ್ತೆರಡು ಸಾಗರೋಪಮಪ್ರಮಿತನಿಜಾಯುರವಸಾನಕಾಲಮಱುದಿಂಗಳುಂಟೆನೆ

ಮಿಸುಗುವ ಬಣ್ಣವಾಸಿಗದೆಸಟ್ ನಸುವಾಡೆ ವಿಭೂಷಣಾಂಶುಗಳ್
ಮಸುಳೆ ಪೊದಳ್ದ ದೇಹರುಚಿ ಕಂದಿ ಕಱಂಗೆ ಮನಕ್ಕೆ ವಿಸ್ಮಯಂ

ಪಸರಿಸೆ ಪೊಣ್ಮುವಾಗುಳಿಗಳಾಗಳುಮಾಗೆ ನಿತಾಂತಮಿಂತು ಸೂ
ಚಿಸಿದವಗುರ್ವು ಪರ್ವುವಿನಮಾ ದಿವಿಜಂಗೆ ವಿರಾಮಕಾಲಮಂ ॥೫॥

ಅಂತು ತಮಗೆ ತಾಮೆ ಪುಟ್ಟುವದ್ಭುತಸೂಚನೆಗಳಂ ಕಂಡಚ್ಯುತಂ ನಿಜಚ್ಯುತಿಯನಱಿದು

ಅಂದಿಂಗಱುದಿಂಗಳ್ವರ
ಮೆಂದುಂ ಪೆಱಪೆಱವು ಚಿಂತೆಯೊಳ್ ತೊಡರದೆ ಚಿ
ಲ್ವೊಂದಿರೆ ಜಿನ ಪದಸೇವೆಯ
ದಂದುಗದೊಳ್ ತೊಡರ್ದನೇಂ ಮಹಾತ್ಮನೊ ದಿವಿಜಂ ॥೬॥

ಇಂತು ನಿರಂತರಂ ದಿವಿಜಲೋಕದ ಚೈತ್ಯಗೃಹಂಗಳೆಲ್ಲಮಂ
ಸಂತೊಸದಿಂದೆ ವಂದಿಸುತಮರ್ಚಿಸುತುಂ ತನಗೆಯ್ದುವಂದ ಕಾ
ಲಾಂತತದೊಳಾಗಳಚ್ಯುತಸುರಂ ಚ್ಯುತನಾದನದಂತೆ ಸರ್ವಕ
ರ್ಮಾಂತಕನಲ್ಲದಂತಕನನಾವನುಮೇಂ ಗೆಲಲೆಂತುಮಾರ್ಕುಮೇ ॥೭॥

ಅತಿಶಯತರ ದಿವ್ಯಸುಖಾ
ಮೃತದಿಂ ತಣಿದಚ್ಯುತಾಂಕನಿಂದಚ್ಯುತದೊಳ್
ಚ್ಯುತನಾದನೆಂದೊಡೀ ಸಂ
ಸೃತಿಯನದೇನೆಂದು ನಚ್ಚುವರ್ ಜಡಮತಿಗಳ್ ॥೮॥

ವ ॥ ಅಂತು ನೋಡೆ ನೋಡೆ ಗಾಳಿತೀಡಿದ ದೀಪರೂಪದಂದದಿಂ ಶಾರದ ನೀರದಾಕಾರಹಂದದಿಂದದೃಶ್ಯಾಕಾರನಾಗಿ

ಯುವತೀ ಗರ್ಭದೊಳಚ್ಯುತ
ದಿವಿಜಂ ದಿವದಿಂದೆ ಬಂದು……
…………………………………
………………… ಸಂಕ್ರಮಿಸುವ ವೋಲ್ ॥೯॥

ವ ॥ ಇಂತಾ ಯಶೋಭದ್ರಾಂಬಿಕೆಯ ಗರ್ಭಸರೋರುಹಾಕರಾಚ್ಛಾಂಬುವಿನೊಳ್ ಸಂಪೂರ್ಣೇಂದುಬಿಂಬದಂತೆ ಸಂಕ್ರಮಿಸುವುದುವಾ ಗರ್ಭಸ್ಥಿತಾರ್ಭಕನ ಮುಖಚಂದ್ರವಿನಿರ್ಗತಾಚ್ಛಚಂದ್ರಿಕಾಪ್ರಸರಮೆ ಪರ್ವಿ ಬಳೆದಂತಾ ಮಹಾನುಭಾವೆಯ ಗರ್ಭಮನುದಿನಪ್ರವರ್ಧಮಾನಮಾಗಿ ಬಳೆಯೆವಳೆಯೆ

ಉದರದೊಳಿರ್ದ ತನೂಜನ
ಪೊದಳ್ದ ಮಹಿಮಾವಿಲಾಸಮಂ ಸೂಚಿಸುವಂ

ದದಿನುಚಿತಕ್ರಮದಿನದೇಂ
ಪೊದಳ್ದು ತೋಱಿದುದೋ ಸೂಕ್ಷ್ಮಮಧ್ಯೆಯ ಮಧ್ಯಂ ॥೧೦॥

ಘನಕುಚಭಾರಾಲಸಗಾ
ಮಿನಿ ಗರ್ಭಂ ಬಳೆಯೆವಳೆಯೆ ನಸುಜೋಲ್ದು ಬೞ
ಲ್ದಿನಿಸಿನಿಸನಲಸಿದಂದೆ
ಮನೋಜಗಜಗಮನೆ ಮೆಲ್ಲಮೆಲ್ಲನೆ ನಡೆಗುಂ ॥೧೧॥

ವಿಲಸನ್ಮೃದುಗತಿಯಿಂ ಪದ
ದಲಕ್ತಕಚ್ಛವಿ ಪೊದಳ್ದು ರಂಜಿಸುತಿರೆ ನಿ
ರ್ಮಳಮಣಿಕುಟ್ಟಿಮದೊಳ್ ಕೋ
ಮಳಾಂಗಿ ಕಳಹಂಸಲೀಲೆಯಿಂದಡಿಯಿಡುವಳ್ ॥೧೨॥

ತಿಂಗಳ ಬಳವಿಯಿನುಚ್ಛ್ರಿತ
ರಂಗಾಂಬುಧಿ ಬಳೆವ ತೆಱದಿನುದಿನದಿಂದಂ
ತಿಂಗಳ ಬಳವಿಯಿನಂತಾ
ಶೃಂಗಾರಾಂಬುಧಿಗೆ ಗರ್ಭವೇಂ ಬಳೆದತ್ತೋ ॥೧೩॥

ಸುದತಿಯ ತೆಳ್ವಸಿಱ್ ನೆಱೆ ಪೊದಳ್ದುದು ವಕ್ತ್ರಸರೋರುಹಂ ಬೆಳ
ರ್ತುದು ಕುಚಚೂಚುಕಂ ಕಱಿಯೆ ಕರ್ಗಿದವೊಯ್ಯನೆ ಬಾಸೆ ದೇಸೆವೆ
ತ್ತುದು ವಳಿರೇಖೆಗಳ್ ಮಸುಳ್ದು ತೋಱಿದುವಾಕೆಯ ಗರ್ಭದರ್ಭಕಾ
ಭ್ಯುದಯಮಹಾವಿಲಾಸಮಹಿಮಾಸ್ಪದಮಂ ನೆಱೆ ತೋಱುವಂದದಿಂ ॥೧೪॥

ಯುವತಿಯ ಮುಖಾಬ್ಜಮಂ ಮುಸು
ಱುವ ಕುಂತಳಮಧುಕರಂಗಳಂ ಕರತಳ ಪ
ಲ್ಲವದಿಂದೋಸರಿಸುವ ಪು
ಣ್ಯವನಿತೆ ಸಹಕಾರಲತೆಯನೇ ಮಱಿಸಿದಳೋ ॥೧೫॥

ಸುದತಿಗೆ ಪೊಱಿತೊರ್ವಳ್ ಹೇ
ಮದಾಮ ಕಮನೀಯಚಂಚಲಚ್ಚಾಮರಮಂ
ಮುದದಿಂದಮಿಕ್ಕಿದಳ್ ಪೆರ್ಚಿ
ಸಿದೊಸಗೆಗವಯವದೆ ಮುಡಿಗೆಯಿಕ್ಕುವ ತೆಱದಿಂ ॥೧೬॥

ಸತತೋತ್ಸವದಿಂ ಜಂಗಮ
ಲತೆಯೆಂಬಿನಮೊಡನೆ ಮೆಲ್ಲಮೆಲ್ಲನೆ ನಡೆದಾ

ಶತಪತ್ರನೇತ್ರೆಗೊರ್ವಳ್
ಲತಾಂಗಿ ತಳಮಾರೆ ನೀಡುಗುಂ ತಂಬುಲಮಂ ॥೧೭॥

ಬಹುವಿಧದಿಂದಂ ನಿಱಿವಿಡಿ
ದಹಿಕಂಬುಕಸದೃಶಮಂ ದುಕೂಲಮನೊರ್ವಳ್
ಮಹಿಳೆಗುಡಲೆಂದು ನೀಡುವ
ಸಹಚರಿ ವಸನಾಂಗಭೂರುಹಕ್ಕೆಣೆಯಾದಳ್ ॥೧೮॥

ಮಣಿಮಯವಿಚಿತ್ರ ಭೂಷಣ
ಗಣಂಗಳಂ ಬಗೆದ ಪೊಟ್ಟಱೊಳ್ ಕಾಂತೆಗೆ ತತ್
ಕ್ಷಣದಿಂ ನೀಡುವವಳ್ ಭೂ
ಷಣಾಂಗಕಲ್ಪಾವನೀಜಮಂ ಮಸುಳಿಸಿದಳ್ ॥೧೯॥

ಅಕುಟಿಳಸರಸ್ವತೀಮುಖ
ಮುಕುರನನಾಲೋಕಿಪನ್ನೆಗಂ ನೀಂ ನೋಡೀ
ಮುಕುರಮನೆನುತುಂ ಮಣಿಮಯ
ಮುಕುರಮನೋರ್ವಳ್ ವಿಲಾಸದಿಂ ಪಿಡಿದಿರ್ದಳ್ ॥೨೦॥

ವನಿತೆಗೆ ವಶ್ಯಮಿದೆಂದಂ
ಜನಮಂ ಕಾಂಚನಶಲಾಕೆಯಿಂ ನೀಡಲದೇ
ನನುಕರಿಸಿರ್ದುದೊ ಮನ್ಮಥ
ನ ನನೆಯ ಮೊನೆಯಂಬಿದೆಂಬ ಮಾತಮರ್ವಿನೆಗಂ ॥೨೧॥

ಪೊಚ್ಚಪೊಸದೇಸೆ ಮಾರ್ಗದೊ
ಳಚ್ಚಱಿದಚ್ಚರಿಯನುಂಟುಮಾಳ್ಪಿನಮಾರುಂ
ಮೆಚ್ಚಿ ಪೊಗಳ್ವಿನೆಗಮೊರ್ವಳ್
ನಚ್ಚಣಿ ನರ್ತಿಸಿದಳಿಚ್ಚೆಯಱಿದಚ್ಚರೆವೋಲ್ ॥೨೨॥

ರಸದ ತೊಱೆ ಪರಿದುದಮರ್ದಿನ
ಪೊಸಸೋನೆಯೆ ಸುರಿದುದೆಂಬಿನಂ ಪೆಱಿಱೊರ್ವಳ್
ಮಿಸುಪೆಸೆಯೆ ಪಾಡಿದಳ್ ಪುದಿ ।
ದ ಸೀಯನಪ್ಪೊಂದು ಗೇಯರಸಮೊಸರ್ವಿನೆಗಂ ॥೨೩॥

ಕಬರೀಭಾರಾಲಸೆ ತೊಳ
ಪ ಬೆಳಂತಿಗೆಯೆನಿಸಿದಚ್ಚವೆಳ್ದಿಂಗಳೊಳಿ

ರ್ದಬಲೆಯ ಸನ್ನಿಧಿಯೊಳ್ಕೊರ
ಲ ಬೆರಲ ರಸಮೆಸೆಯೆ ಬೀಣೆಯುಂ ಬಾಜಿಸಿದಳ್ ॥೨೪॥

ಮುಕುರಮನಟ್ಟಿಯಿಂ ಪಿಡಿವ ಚಾಮರಮಿಕ್ಕುವ ವಸ್ತ್ರಭೂಷಣ
ಪ್ರಕರಮನೀವಳಂಕರಿಸುವಾಡುವ ಪಾಡುವ ಕಾಂತೆಯರ್ ಜಿನಾಂ
ಬಿಕೆಗೆ ಸಪರ್ಯೆಗೆಯ್ವ ಸುರಕಾಂತೆಯರೊಂದು ವಿಲಾಸದೇಟ್ಗೆಯಿಂ
ಪ್ರಕಟಿಸೆ ತದ್ಗುಣಾಂಬಿಕೆ ಜನಾಂಬಿಕೆಯೆಂಬಿನಮೊಪ್ಪಿ ತೋಱಿದಳ್ ॥೨೫॥

ವ॥ ಇಂತು ನಾನಾವಿಧವಿನೋದಂಗಳಿನಂತರ್ವರ್ತಿಗೆ ನವಮಾಸಂಗಳಂತ ರ್ಮುಹೂರ್ತಂಗಳಾಗಿ ಪೋಗೆ ಪರಿಪೂರ್ಣಪ್ರಸವಸಮಯದೊಳ್

ದಿನನಾಥಂ ಮೇಷದೊಳ್ ಶೀತರುಚಿ ವೃಷಭದೊಳ್ ಭಾರ್ಗವಂ ಮೀನದೊಳ್ಭೌ
ಮನುದಗ್ರಗ್ರಾಹದೊಳ್ಸಾರಸಸಖತನಯಂ ದಂಡದೊಳ್ ರೋಹಿಣೀನಂ
ದನನನಂತಾ ದ್ವಂದ್ವದೊಳ್ವಿಶ್ರುತುಮೆನೆ ಧಿಷಣಂ ಕರ್ಕಿಯೊಳ್ಸಂತಮಿಂತಿ
ರ್ಪಿನಮತ್ಯುತ್ಸಾಹದಿಂದಂ ಗುರುವಿನುದಯದೊಳ್ ಪುತ್ರನಂ ಪೆತ್ತಳಾಗಳ್ ॥೨೬॥

ವ॥ ಆ ಪ್ರಸ್ತಾವದೊಳ್

ಪಸರಿಸೆ ಸುತ್ತಲುಂ ಗುಡಿಯ ದಾಂಗುಡಿ ಮುತ್ತಿನ ರಂಗವಲ್ಲಿ ನಾ
ಲ್ದೆಸೆಯೊಲಮರ್ಕ್ಕೆವೆತ್ತ ಪಟಹಧ್ವನಿ ಪೊಣ್ಮುವ ಶಂಖನಿಸ್ವನಂ
ಮಿಸುಗುವ ರತ್ನ ಮಾಲೆಗಳ ವಂದನಮಾಲೆ ಮನಕ್ಕೆವಂದದೇ
ನೆಸೆದುದೊ ಬೀದಿವೀದಿಗಳೊಳರ್ಭಕಸಂಜನಿತೋತ್ಸವಾನಕಂ ॥೨೭॥

ವ॥ ಅನ್ನೆಗಂ ಸೂರದತ್ತನಾತ್ಮೀಯಾತ್ಮಜನ ಜನ್ಮೋತ್ಸವಾಕರ್ಣನದೊಳತ್ಯಂತ ಹರ್ಷೋತ್ಕರ್ಷಾಂತರಂಗನಾಗಿ ರಾಗಿಸಿ

ಆ ಸ್ಮರರೂಪಾರ್ಭಕನ ನು
ತಸ್ಮೇರಾನನಮನಟ್ಟಿಯಿಂ ನೋಡಲೊಡಂ
ವಿಸ್ಮಯಮೊದವುವಿನಂ ಜಾ
ತಿಸ್ಮರನಾದಂ ಕ್ಷಯೋಪಶಮುವಶದಿಂದಂ ॥೨೮ ॥

ವ॥ ಆ ಪ್ರಸ್ತಾವದೊಳ್

ಪುತ್ರಂಬಡೆದೆನೆ ಪರಮ ಪ
ವಿತ್ರೀಕೃತ ಭವಸುಖಾಮೃತಕ್ಕಾನೀಗಳ್
ಪಾತ್ರಂಬಡೆದೆಂ ನಿಕಿಲ ಧ
ರಿತ್ರಿಯೊಳೆರಡುಂ ಭವಕ್ಕಮೊಳ್ಪಂ ಪಡೆದೆಂ ॥೨೯॥

ಪರಮಜಿನೇಂದ್ರಧರ್ಮಪರಿಪಾಲನಶೀಲಸಮರ್ಥನನ್ವಯೋ
ದ್ಧರಣಸಮರ್ಥನಪ್ಪ ಮಗನಂ ಪಡೆವನ್ನೆಗಮಿನ್ನೆಗಂ ಗುಣೋ
ತ್ಕರನೆನಿಸಿರ್ದನೆನ್ನ ಬಗೆಕೂಡಿದುದಿನ್ನಿರೆನೆಂದು ಘೋರ ಸಂ
ಸರಣಪಯೋಧಿಯಂ ಪೊಱಮಡಲ್ಬಗೆದಂ ವಣಿಗನ್ವಯೋತ್ತಮಂ ॥೩೦॥

ಪೃಥ್ವಿ ॥ ದುರಿಂದ್ರಿಯಸುಖಕ್ಕೆ ಕೊಕ್ಕರಿಕೆ ಪುಟ್ಟೆ ನಿರ್ವೇಗದಿಂ
ನಿರಿಂದ್ರಿಯಸುಖಕ್ಕೆ ನಾಡೆ ಮನವಿಟ್ಟು ಸರ್ವಸ್ವಮಂ
ಜರತ್ತೃಣಸಮಾನಮಾಗೆ ಬಗೆದಾ ಮಹಾತ್ಮಂ ಸುಷೇ
ಣರೆಂಬ ಮುನಿಮುಖ್ಯರಲ್ಲಿ ಜಿನದೀಕ್ಷೆಯಂ ತಾಳ್ದಿದಂ ॥೩೧॥

ವ॥ ಅಗಳಾ ಸುಭದ್ರೆ ವಿಸ್ಮಯಾಕುಲಿತಮಾನಸೆಯಾಗಿ

ಇನಿಯನಗಲ್ದು ಪೋದ ಪೆಱಗಿರ್ಪುದು ಸೂೞಿನಗಲ್ತು ಪೋಪೊಡಂ
ತನಯವಿಮೋಹಮೆಂಬ ನಿಗಳಂ ತೊಡರ್ದಿರ್ದಪುದೇವೆನೆಂದು ಕಾ
ಮಿನಿ ನಿಜಜೀವಿತೇಶ್ವರನಗಲ್ಕೆಯೊಳಂ ತನುಜನ್ಮಮೋಹ ಬಂ
ಧನದೊಳೆ ಸಿಲ್ಕಿ ನಿಂದಳೆನೆ ಪುತ್ರವಿಮೋಹಮನಾರೋ ಮೀಱುವರ್ ॥೩೨॥

ವ॥ ತದನಂತರ ಸಮಯದೊಳ್

ಅಮೃತಾಂಭೋನಿಧಿ ಮೇರೆದಪ್ಪಿದುದೋ ಮೇಣಾಕಾಶಗಂಗಾ ಪ್ರವಾ
ಹಮೆ ಬೆಳ್ಳಂಗೆಡೆದತ್ತೊ ಮೇಣೆನಿಸಿ ದುಗ್ಧಸ್ನಿಗ್ಧಧಾರಾ ಪ್ರವಾ
ಹಮುಗುರ್ವಾಗಿರೆ ಸುತ್ತಲುಂ ಪರಿವಿನಂ ಚೆಲ್ವಾಗೆ ಜೈನಾಭಿಷೇ
ಕಮನಾನಂದದೆ ಮಾಡಿದೊಂದಳವನಾನೇವೇೞ್ವೆನಾ ಕಾಂತೆಯಾ ॥೩೩॥

ಜಿನಗಂಧೋದಕದಿಂ ಬಾ
ಳನನಾಗಳ್ಮಿಸಿಸಿ ಬಾಳವಂದಂಗಳನೊ
ಯ್ಯನೆ ತುಡಿಸಿದಾಗಳಾ ಶಿಶು
ಜಿನಶಿಶುವೆಂಬಿನೆಗಮೇಂ ಮನಂಗೊಳಿಸಿದನೋ ॥೩೪॥

ಅಂಗಂಗಳೊಳಗಣೇೞಿನೆ
ಯಂಗದೊಳುದಯಿಸಿದುಪಾಸಕಕ್ರಿಯೆಯಿಂದು
ತ್ತುಂಗಕುಚಯುಗ್ಮೆ ನಿಜತನು
ಜಂಗಾಗಳ್ ಜಾತಕರ್ಮಮಂ ನಿರ್ಮಿಸಿದಳ್ ॥೩೫॥

ಪ್ರಕಟೀಕೃತ ನಿರ್ಮಲ ವಿನು
ತ ಕೀರ್ತಿಯಂ ಪುಣ್ಯಮೂರ್ತಿಯಂ ಬಾಲಕನಂ

ಸುಕುಮಾರನೆಂದು ಪೆಸರಿ
ಟ್ಟು ಕಾಂತೆ ತನಯಂಗೆ ನಾಮಕರಣಂಗೆಯ್ದಳ್ ॥೩೬॥

ವ॥ ಅಂತು ಜಾತಕರ್ಮ ನಾಮಕರಣಂಗಳಂ ಮಾಡಿ ಕೊಂಡಾಡಿ ನಡಪುತ್ತಿರೆ

ದರಹಸಿತ ಮುಖಾಬ್ಜದೊಳ್
ಪರಕಲಿಸಿರ್ದಂಜನಂ ಮನೋರಂಜನಮಾ
ಗಿರೆ ಮುದ್ದುಭಾವದಿಂದೇಂ
ಕರಮೆಸೆದನೊ ಬಾಲಭಾವದೊಳ್ ಸುಕುಮಾರಂ ॥೩೭॥

ಕಂಜದಳೋಪಶೋಭಿತ ವಿಲೋಚನದೊಳ್ ನಿಟಿಲಾಗ್ರದೊಳ್ ಪೊದ
ಳ್ದಂಜನರೇಖೆ ಕಣ್ಗೆಸೆಯೆ ಕಂಕಣಮೊಪ್ಪಮನೀಯೆ ಕೈಗಳೊಳ್
ಕೆಂಜೆಡೆಯೊಳ್ತುಗುಳ್ದ ಪಲವಂದದ ಚಂದದ ಚಿನ್ನಪೂಗಳಿ
ತ್ತಂ ಜಗತೀತಲೈಕತಿಲಕಂಗೆಸೆದಿರ್ದುವು ಬಾಲಕಾಲದೊಳ್ ॥೩೮॥

ತೊಳಪ ಹರಿನ್ಮಣಿಕುಟ್ಟಿಮ
ತಳದೊಳ್ ತಳಮಾರೆ ತಳಮನೂಱಿ ಬೆಡಂಗಂ
ಕಳೆದು ತಳರ್ನಡೆನೆಡೆವೆಡೆ
ಯೊಳದೇಂ ಜನನಿಗೆ ವಿನೋದಮಂ ಮಾಡಿದನೋ ॥೩೯॥

ದರಹಾಸಾಮೃತಮುಣ್ಮೆ ಪೊಣ್ಮೆ ಬಪುಮುಗ್ಧಾಳಾಪ ವಾಕ್ಯಂಗಳಾ
ವರಿಸುತ್ತುಂ ಪೊಸದೇಸೆವೆತ್ತೆಸೆಯೆ ಬಾಲಕ್ರೀಡೆ ನೋಡಲ್ಕನೋ
ಹರಮಾಗುತ್ತಿರೆ ವೈಶ್ಯವಂಶತಿಲಕಂ ನಿತ್ಯೋತ್ಸವಾನಂದದಿಂ
ಕರಮೊಪ್ಪಿರ್ದನನೂನಪಿಂಗಲಜಟಾಲಂಬಾಲಕಂ ಬಾಲಕಂ ॥೪೦॥

ರುಚಿರವಚೋಮೃತದಿಂ ವಿಶ
ದ ಚಾರು ಸಿತ ಕೀರ್ತಿಮೂರ್ತಿಯಿಂ ಸಹಜ ಕಲಾ
ಪ್ರಚುರತೆಯಿನೇೞ್ಗೆ ವಾಡಿವ
ದ ಚಂದ್ರನಂತುತ್ತರೋತ್ತರಂ ಶಿಶು ಬಳೆದಂ ॥೪೧॥

ವ॥ ಅಂತಾ ಬಾಲಕಂ ಪ್ರತಿದಿನ ಪ್ರವರ್ಧಮಾನಮುತ್ತರೋತ್ತರ ಪ್ರವೃದ್ಧಿಯಿಂ ಬಳೆವುದುಂ ಯಶೋಭದ್ರಾಂಬಿಕೆ

ನೆಱಿ ಮುನ್ನಂ ಸಮಣೋ ಅಮೋಘವಯಣೋ ಯೆಂಬುಕ್ತಿಯಿಂ ವ್ಯಕ್ತಮಾ
ಗಱಿದಿರ್ದೆಂ ಮಱಿದಿರ್ದೆನಿಲ್ಲೆನನಿತಂ ಕಂಡಿರ್ದುಮುಂಡಿರ್ದುಮ

ಳ್ಕುಱಿದಾಂ ಮೆಯ್‌ಮಱೆದಿರ್ದನಪ್ಪೊಡಿವನುಂ ತಮ್ಮಯ್ಯನಂ ಪೋಲ್ತು ಬ
ಲ್ಸೆಱೆಯಿಂ ಪಿಂಗಿದುದೊಂದು ಗಂಧಗಜದಂತಾದಾಗಳೇಗೆಯ್ವೆನೋ ||೪೨||

ಅದಱಿಂದೀತನನಾವುಪಾಯದೊಳಮಾರುಂ ಕಾಣದಂತಾಗಿ ಯ
ತ್ನದಿನಿರ್ಪಂತಿರೆ ಮಾಟ್ಪೆನೆಂದು ಪಿರಿದೊಂದೌತ್ಸುಕ್ಯದಿಂದಾಗಳಾ
ವಿದಲತ್ ಪಂಕಜನೇತ್ರೆ ಮಾಡಿಸಿದಳುದ್ಯತ್ಕೇತನಾನೀಕ ಭಾ
ಸ್ವದ ರತ್ನೋಜ್ವಲ ಚಿತ್ರಭಿತ್ತಿಪರಿಶೋಭಾನೀಡಮಂ ಮಾಡಮಂ ||೪೩||

ಅದಱೊಳೊಂದೊಂದೆಡೆ ಚಂದ್ರಕಾಂತ ಮಣಿಭಿತ್ತಿಭ್ರಾಜಿತಾಶಾವಿಭಾ
ಗದಿನೊಂದೊಂದೆಡೆ ಸೂರ್ಯಕಾಂತ ಬಹುಕೂಟಾಟೋಪಶೋಭಾಭಿರಾ
ಮದಿನೊಂದೊಂದೆಡೆ ಪದ್ಮರಾಗವಿಲಸತ್ಪ್ರಾಸಾದ ಮಾಲಾಂಶು ಜಾ
ಳದಿನೊಂದೊಂದೆಡೆಯಲ್ಲದೆಲ್ಲೆಡೆಯೊಳಂ ಕಣ್ಗೊಪ್ಪುಗುಂ ಮಂಡಪಂ ||೪೪||

ಪವಳದ ಕಂಬಂ ಪಳಕಿನೆ
ಸೆವ ತೊಲೆ ವಜ್ರದ ಮತ್ತವಾರಣಂ ಮುತ್ತಿನ ಮಂ
ಡವಿಗೆ ಕಿಸುಗಲ್ಲ ಬೋದಿಗೆ
ನವಮರಕತ ರತ್ನ ತೋರಣಂ ಪ್ರಾಕಾರಂ ||೪೫||

ಅನುಪಮಮಣಿಕನಕಮಯಂ
ವಿನಿಹಿತಸೌಮನಸಭದ್ರಶಾಲಜ್ಯೋತಿ
ರ್ವಿನುತಂ ಕರುಮಾಡಂ ಮೇ
ರುನಗಮಿದೊಂದೆಂಬ ಪೋಲ್ವೆಯಂ ಪುಟ್ಟಿಸುಗುಂ ||೪೬||

ವಿಲಸದ್ರತ್ನವಿಚಿತ್ರ ಭಿತ್ತಿಗಳಿನೆತ್ತಂ ಭಿತ್ತಿವೆತ್ತೂರ್ಜಿತೋ
ಜ್ವಲಶೋಭಾತಿಶಯಾದ್ಯಮನ್ವಿತಗವಾಕ್ಷೋದಗ್ರಭಾಗಂಗಳಿಂ
ನೆಲೆಯಿಂದಂ ನೆಲೆಗಳ್ ವಿರಾಜಿಸೆ ನವಗ್ರೈವೇಯಕಂಗಳ್ ಮಹೀ
ತಳದೊಳ್ ಸಂಧಿಸಿ ಬಂದು ನಿಂದ ತೆಱದಿಂದಂ ಕಣ್ಗೆವಂದೊಪ್ಪುಗುಂ ||೪೭||

ರಜತಮಣಿ ಕನಕನೀಳಾಂ
ಶುಜಾಳ ವಿಲುಳಿತ ವಿರಾಜಿತ ಪ್ರೋತ್ತುಂಗ
ಧ್ವಜಮಾಳಾ ಪರಿವೃತದಿಂ
ವಿಜಿತಾಮರನೀಡಮೆನಿಸುಗುಂ ಕರುಮಾಡಂ ||೪೮||

ದಿವಿಜೇಂದ್ರಭವನಮೆಂಬೀ
ನಿವಾಸದಿಂದತ್ತ ಮತ್ತೆ ಮೇಲಿರ್ದಪುದೆಂ

ದವಗಯಿಪವೊಲಲ್ಲಿಯ ವಾ
ತ ವಿಧೂತ ವಿನೂತ ಕೇತುಗಳ್ ದಳ್ಳಿಸುಗುಂ ||೪೯||

ಉದಯಗಿರಿ ಶಿಖರಧೃತ ಬಾ
ಳ ದಿವಾಕರಬಿಂಬದೊಳ್ಪಳಂಚಲೆವವೊಲ
ಭ್ಯುದಯಕರಮೆನಿಪ ಕರುಮಾ
ಡದ ಶಿಖರದೊಳೊಪ್ಪಿ ತೋಱುಗುಂ ಪೊಂಗಳಸಂ ||೫೦||

ವ|| ಮತ್ತಮತಿ ಲಲಿತಮತಿ ವಳಭಿಚ್ಛಂದಂಗಳಿಂ ಛಂಧೋವಿದ್ಯೆಯುಮಂ ಸರ್ವತೋಭದ್ರಾಹ್ವಯವಿಶೇಷದಿಂ ನೋಂಪಿಯ ವಿಶೇಷಮಂ ನಂದ್ಯಾವರ್ತ ರಮಣೀಯತೆಯಿಂ ನಂದನವನಾಂತರಾಳವುಂ ಸ್ವಸ್ತಿಕ ವಿಸ್ತಾರದಿಂ ವಿವಾಹವುಮನನು ಕರಿಸಿ ಶೋಭಿಸುವುದಂತುಮಲ್ಲದೆಯುಂ

ಗಣಿದದೊಳೇಂ ಕರಮಾಡಂ
ಪೊಣರ್ಚುವೊಡೆ ನೆಗಟ್ದದಿವಿಜರಾಜವಿಮಾನ
ಕ್ಕೆಣೆ ಪೋಲ್ವೆ ಸಮಂ ಸದೃಶಂ
ತೊಣೆ ತೋಡನುಸಾರಿ ಸಾಟಿ ಪಾಸಟಿಯೆನಿಕುಂ ||೫೧||

ಒಗೆದಭ್ರಾಟ್ಟಾಲಕಾಲಂಕರಣ ರಚನೆಯಿಂ ಸುತ್ತಲುಂ ಸುತ್ತುಗೊಂಡುಂ
ಬಗೆಗೊಂಡುಂ ದೇವಸೆತ್ತಾಳ್ವೆರಿಯ ತುಱುಗಲಿಂ ಚೆಲ್ವುವೆತ್ತಿರ್ದ ನಾಲ್ಕುಂ
ಮಿಗಿಲಾಗುತ್ತಿರ್ದ ಗೋಪಾಲಮುಖವಿಲಸನದಿಂ ತಾನೆ ಮೇಲಾದ ಪೆಂಪಿಂ
ಮುಗಿಲಂ ಮುಟ್ಟಿರ್ದುದೆಂಬಂತಿರೆ ಕರಮೆಸೆಗುಂ ವಿಶ್ರುತೋತ್ತುಂಗ ವಪ್ರಂ ||೫೨||

ಶುಕ ಕಾರಂಡ ಚಕೋರ ಸಾರಸ ಮಯೂರಾಕಾರದಿಂ ವ್ಯಾಘ್ರ ಸಿಂ
ಹ ಕುರಂಗಾಂಬುಜ ಚಕ್ರ ಮತ್ಸ್ಯ ಮಕರೇಭಾಕಾರದಿಂ ಚೆಲ್ವುವೆ
ತ್ತು ಕರಂ ಶೋಭೆಯನಾಂತು ಮೇಘಪಥದೊಳ್ ತಳ್ತಿರ್ಕುಮುದ್ಯದ್ಧ್ವಜ
ಪ್ರಕರಂ ಸ್ಥೂಲ ವಿಶಾಲ ಸಾಲರಚಿತೋಗ್ರಾಟ್ಟಾಲಕಾನೀಕದೊಳ್ ||೫೩||

ಅಂಗಜ ಚಕ್ರವರ್ತಿಯ ಗೃಹಾಂಗಣದಂತೆ ಮನೋಜರಾಜಗೇ
ಹಾಂಗಣದಂತೆ ಪೆಂಪಿನ ನೆಗಟ್ತೆಯ ಮನ್ಮಥನಾಥವಾಸಗೇ
ಹಾಂಗಣದಂತೆ ರೂಪಿನ ವಿಲಾಸದ ಚೆಲ್ವಿನ ವೈಶ್ಯರಾಜಗೇ
ಹಾಂಗಣಮೊಪ್ಪುಗುಂ ಕರಿಮದೋತ್ಕಟ ಕರ್ದಮ ದುರ್ದಿನಾಂಗಣಂ ||೫೪||

ವ|| ಮತ್ತಮಾ ಮಾಡದ ಬಳಸಿಯುಂ ಮೂವತ್ತೆರಡು ಬಳ್ಳಿಮಾಡಂಗಳು ಮಣಿಮಯ ವಿತಾನಂಗಳಂ ಮಾಡಿಸಿ ಬಜಿಕೆ

ಎಸೆವ ನಿಜಾಲಯಾಪರ ವಿಭಾಗದೊಳುನ್ನತ ಭೂಮಿಭಾಗದೊಳ್
ವಸುಧೆಗೆ ಸಿತ್ಯಮಂಡಿತ ಜಿನಾಲಯಮಂ ಪಡಿಚಂದಮಾಗೆ ಕ
ಣ್ಗೆಸೆದಿರೆ ನೂತ್ನರತ್ನಮಯಮಾಗಿರೆ ಮಾಡಿಸಿ ನಂದನಂಗೆ ಮಾ
ಡಿಸಿದಳದೊಂದು ನಂದನಮನಿಂದ್ರನ ನಂದನದಂದಮೆಂಬಿನಂ ॥೫೫॥

॥ ಆದ್ಯಂತ ಪ್ರಾಸದ ರಗಳೆ ॥

ಆ ನಿರುಪಮಗೃಹಬಹಿರುದ್ಯಾನಂ
ತಾನೆಸೆದೊಪ್ಪುಗುಮಪ್ರತಿಮಾನಂ
ನಾಗಲತಾ ವಿಸ್ತೀರ್ಣಮದಪ್ಪುದು
ಪೂಗದ್ರುಮ ಸಂಕೀರ್ಣಮೆನಿಪ್ಪುದು
ಮಾತುಳಂಗ ಸಂಘಾತಮದೆತ್ತಲು
ಮಾತತ ಪರಿಖಾವಲಯಂ ಸುತ್ತಲು
ಮನುಪಮಬದರಾಶೋಕ ಮಹೀಜಂ
ವಿನಮಿತ ಚೂತ ಕುಜಾತ ಸಮಾಜಂ
ಶಾಳ ತಾಳ ಹಿಂತಾಳ ಶಿರೀಷಂ
ಸ್ಥೂಲಕ್ರಾಳಕರೀರಾಶೇಷಂ
ಕದಳೀ ಸಪ್ತಚ್ಛದ ಪುನ್ನಾಗಂ
ವಿದಳಿತ ಚಂಪಕ ಲವಲೀ ನಾಗಂ
ವಕುಳ ಪಾಟಳಾಶ್ವತ್ಥಬ್ರಾತಂ
ಲಿಕುಚ ನಾಳಿಕೇರದ್ರುಮಜಾತಂ
ಆದಿಯಾಗೆ ಪಲವುಂ ಪೆಱವಂದದ
ಪಾದಪಂಗಳಿಂದೊಪ್ಪುವ ಚಂದದ
ಬನದೊಳೆತ್ತಲುಂ ಸುಳಿವರಗಿಳಿಗಳ
ಜಿನುಗಿ ರಾಗದಿಂದಂ ಮೊರೆವಳಿಗಳ
ಪೋ ಪುಗಿಲ್ಪುಗಿಲ್ಪುಗಿಲೆನುತೆ ಕರಂ
ಕಾಪುಗೊಂಡು ಜಡಿವುದು ಪಿಕನಿಕರಂ
ನೀರಜಾಕರಂ ಸುತ್ತಿಱಿದಲ್ಲಿಯೆ
ಕೈರವಾಸಿತಾಂಭೋರುಹವಲ್ಲಿಯೆ
ನಲಿವ ಸಾರಿಕಾಹಂಸಧ್ವಾನದಿ
ನಲೆವ ಬಕಶುಕ ಚಕೋರಧ್ವಾನದಿ
ಅಲ್ಲಿಗಲ್ಲಿಗೆಡೆಯಾಡುವ ಕೊಂಚೆಯಿ
ನೆಲ್ಲಾ ದೆಸೆಯೊಳ್ ಕುರ್ವಿದ ಬೆಂಚೆಯಿ

ನಂಗಜನ್ಮನರಮನೆಯೆಂಬಂತಿರೆ
ಭಂಗಿವೆತ್ತು ನೆಱೆ ಸೊಗಯಿಪುದಂತಿರೆ
ಮನಸಿಜಾತ ಗಂಧದ್ವಿಪದಿಕ್ಕಗೆ
ವಿನಯ ಭೂಮಿಯಾಗಿರ್ಪುದು ತೋರ್ಕೆಗೆ
ಸನ್ಮನೋಜಮಾಧವ ಸಮಯಕ್ಕಿದೆ
ಜನ್ಮಭೂಮಿ ತಾನೆನಿಸಲು ತಕ್ಕುದೆ
ನೆರೆದು ಮಧುಕರಾವಳಿ ಝುಂಝುಮ್ಮನೆ
ಒರೆದು ಮದಮನೀಂಟಿಕೊಳುತುಂ ಕಮ್ಮನೆ
ಪುದಿದ ತಣ್ಪನಾಲಿಂಗಿಸಿ ತಣ್ಣನೆ
ಪದೆದು ಮಂದಗತಿಯಿಂದಂ ಪಣ್ಣನೆ
ಬಳಸಿ ಮಲ್ಲಿಕಾ ಸತಿಯಂ ಚುಂಬಿಸಿ
ನಳಿನಕಾಂತೆಯೊಳ್ ಬಿಡದೆ ವಿಳಂಬಿಸಿ
ಚೂತವಲ್ಲರೀವಧುವಂ ಸೋಂಕುತು
ಮೋತು ಜಾತಿಕಾಮಿನಿಯಂ ಕೂಂಕುತು
ಮಿಂಬುವೆತ್ತ ಪುಗಿಲಿಂದಂ ಮಾರುತ
ನೆಂಬ ಕಾಮುಕಂ ಸುಳಿಗುಮನಾರತ
ಮಿಂತು ನಾಡೆಯಂ ತತ್ಕೇಳಿವನಂ
ಎಂತು ನೋಡೆಯಂ ಕರಮತಿಪಾವನಂ ॥೫೬॥

ಪೊಸತಲರ್ದಸುಕೆಯ ಮಾವಿನ
ಕೊಸಗಿನಲಂಪಿಂದಲಂಪು ಪಿಂಗದೆ ಮತ್ತಂ
ಕಸಮಸಗಿ ಮಿಸುಗಿ ಭೃಂಗ
ಪ್ರಸರಂ ಪಸರಿಸುವುವೆಸೆವ ವಿಸರುಹವನದೊಳ್ ॥೫೭॥

ವ॥ ಮತ್ತಮದಱೊಳತಿ ಮಸೃಣಕುಸುಮಪ್ರವಾಳದ ಪೊಳೆವ ಗೊಂಚಲಂ ಸಂಚಳಿಸಿ ಪೊಳೆವ ಮಿಂಚಿನ ಗೊಂಚಲೆಂದುಮಲ್ಲಿಗಲ್ಲಿಗಲ್ಲೊಕ್ಕ ಬಂಧುರ ಬಂಧೂಕ ಕುಟ್ಮಳಂಗಳನತಿಮನೋಹರಾರುಣಚ್ಛಾಯಕಾಯಂಗಳಪ್ಪಿಂದ್ರಗೋಪಪ್ರಕರಮೆಂದುಂ ಕರ್ಪೂರಭೂರುಹಂಗಳಿಂ ಧರಾತಳಕ್ಕೆ ಪೂವಲಿಗೆದಱಿದಂತೆ ಕೆದಱಿದ ಕರ್ಪೂರವಳಿ ಕುಗಳಂ ಮುಂಚೆ ಬಂದ ಜಳದಾಗಮಪ್ರಸೂಚಕಂಗಳಪ್ಪಾಲಿವರಲ್ಗವರಲ್ಗಳೆಂದುಂ ಸರೋಜವನದಿಂ ಶಾಳಿವನಕ್ಕೆ ಪರಿವ ಪರಿಕಾಲ್ಗಳ್ಗಂ ನೆರೆದು ಮುರಿದು ಕಿಱುಗೊಂಕು ಕೊಂಕಿ ಪೊನಲ್ವೊನಲನಟ್ಟಿ ಪರಿವ ಬಳ್ಳಿವೊನಲ್ಗಳೆಂದುಂ ಜಂಬುಜಂಬೀರ ಸಹಕಾರ ನಾರಂಗ ನಾಳಿಕೇರಾದ್ಯನೇಕಾನೋಕಹ ಫಲಪಕ್ವದ್ರವೀಭೂತರಸಾಸಾರದಿಂ

ನೂರ್ಮಡಿಯಾಗೆ ಸೋರ್ವ ಸೋನೆಯಂ ಸರಿಯೆಂದು ಮದಾಳಿಮಾಳೆಯಂ
ಕಾರ್ಮುಗಿಲೆಂದು ನೀರವಿಹಗಂಗಳನಾದಮನಭ್ರನಾದಮೆಂ
ದೊರ್ಮೆಯುಮಾ ವನಾಂತರದೊಳಚ್ಚರಿಯಾಗೆ ಮಯೂರಕೋಟಿಗಳ್
ಕಾರ್ಮುಕಮೆಂದು ನರ್ತಿಸುವುವೆಂಬಭಿಶಂಕೆಯನುಂಟುಮಾಡುಗುಂ ॥೫೮॥

ಉಪವನದೊಳ್ ಬಿರಯಿಗೆ ಮೊರೆ
ವ ಪಾಂಗಿನೊಳ್ ಮೊರೆಯುತಿರ್ಪ ಮಱಿದುಂಬಿ ವಿರಾ
ಜಿಪ ಮಾವಿನ ಕೆಂದಳಿರೊಳ
ಗೆ ಪರಭೃತಂ ಮಗುಳ್ವಿಪರಭೃತಂ ಕರಮೆಸೆಗುಂ ॥೫೯॥

ಗಳಗಳಿಕೆಯಿನೆಳದಳಿರ್ಗಳಿ
ನೆಳಮಿಡಿಯಿಂ ನೆಱೆಯೆ ತುಱುಗಿದೆಳಮಾವುಗಳೊಳ್
ಗಿಳಿಕೋಗಿಲೆಮಗುಳ್ವಿರಗಿಳಿ
ಗಳ ರವದಿಂದೆಂತು ನೋಱ್ಪೊಡಂ ರಮಣೀಯಂ ॥೬೦॥

ಎಳೆಯೊಳ್ ಶೀತಳಮಪ್ಪ ತೆಂಗಿನೆಳೆನೀರೊಳ್ಚಂದ್ರಕಾಂತೋಪಳಂ
ಗಳಿನೆತ್ತಂಬಿರಿವಿಟ್ಟು ಬರ್ಪ್ಪ ಜಲದಿಂ ಪುಂಡ್ರೇಕ್ಷು ಪಾನೀಯದೊಳ್
ಬೆಳೆದೋರಂತೊಱಗಿರ್ದು ತೋರ್ಪ ವಿಲಸತ್ಕರ್ಪೂರಶಾಳೀವನಾ
ವಳಿಯಿಂದಂ ಕರಮೊಪ್ಪಿ ತೋರ್ಪುದು ಬನಂ ಲಕ್ಷ್ಮೀಕರಾಲಂಬನಂ ॥೬೧॥

ವ॥ ಇಂತು ಮದನರಾಜಂಗೆ ಮಂಗಳಭೂಮಿಯುಂ ವಸಂತರಾಜಂಗೆ ಜನ್ಮಭೂಮಿಯುಮೆಂಬ ಪೊಗಟ್ಟೆಗಂ ನೆಗಟ್ಟೆಗಂ ನಿಲಯುಮುಂ ನಿವಾಸಮುಮಾದ ಮಣಿಮಾಡಮುಮಂ ನಂದನವನಮುಮಂ ಮಾಡಿಸಿ ಶೀತಾತಪಾದಿ ಬಾಧಾವ್ಯಪೇತಮಪ್ಪಂತು ನಿಜಾರ್ಭಕನಂ ಗರ್ಭಗೃಹದೊಳಿರಿಸುವಂತೆ ಮಣಿಮಯ ಗರ್ಭದೊಳಗಗಲದಂತು ನಿಶ್ಚಿಂತಮಿರಿಸಿ ಯತಿರೂಪಕಮೆಂಬ ಪೆಸರುಂ ಚಿತ್ರರೂಪು ಮೊದಲಾಗಿಯುಂ ಕಾಣಲೀಯದಂತು ಕಾಪಂ ಕರಮೆ ಸುವಿಧಾನಂ ಮಾಡಿ ರಕ್ಷಿಸುತ್ತಿರ್ಪುದುಮನ್ನೆಗಮಾ ಕುಮಾರನುಮಧರೀಕೃತ ಸುಕುಮಾರನುಮೆನಿಸಿ ಬಳೆದು ಷೋಡಶವರ್ಷದ ದೇಸಿಯನಾನಲೊಡಂ

ಕಳಿಕೆಗಳಿಂ ಪೂದುಱುಗಲಿ
ನಳಂಕೆವೆತ್ತಿರೆ ಬಸಂತದೊಳ್ ಶೋಭಿಸುವೊಂ
ದೆಳಮಾವಿನ ತೆಱದಿನದೇಂ
ವಿಲಾಸ ಯೌವನ ವಿಭೂತಿಯಂ ತಾಳ್ದಿದನೋ ॥೬೨॥

ಸ್ಫುರಿತಮರೀಚಿಯಿಂ ಪುದಿದು ಪಜ್ಜಳಿಪಿಂದುವಿನಂತೆ ಕೇಸರೋ
ತ್ಕರದೊಳನಾರತಂ ನೆರೆದ ಕೇಸರಿಯಂತೆ ಸದಾನಲಕ್ಷ್ಮಿಯೊಲ್

ನೆರೆದ ಮನೋಜರಾಜಗಜದಂತೆ ವಿಲಾಸವತೀಕಟಾಕ್ಷ ಸುಂ
ದರ ನವಯೌವನಂ ನೆಱೆಯೆ ಕಣ್ಗೆಸೆದಂ ಸುಕುಮಾರವಲ್ಲಭಂ ।।೬೩।।

ಉದಿತಾರ್ಕದ್ಯೋತಿಮಾಳಾರುಣರುಚಿರತನುಚ್ಛಾಯನತ್ಯಂತಕಾಂತ್ಯಾ
ಸ್ಪದವಕ್ತ್ರಂ ನೀಳನೀರೇರುಹದಳನಯನಂ ವಿದ್ರುಮಾರಕ್ತದಂತ
ಚ್ಛದನುತ್ತುಂಗೋಚಿತೋರಸ್ಥಳನನುಪಮ ಬಾಹುದ್ವಯಂ ಕಂಬುಕಂಠಂ
ಕದಳೀಸ್ತಂಭೋರುಯುಗ್ಮಂ ಲಲಿತಮನಸಿಜಾಕಾರನಾದಂ ಕುಮಾರಂ ।।೬೪।।

ವ।। ಮತ್ತಮಾ ಕುಮಾರಂ ಸಮಚತುರಸಂಸ್ಥಾನವಜ್ರವೃಷಭನಾರಾಚಸಂಹನನನುಂ ಹಳಕುಳಿಶಕಳಶಚಮರಜಛತ್ರಶಂಖಾಂಕುಶಾಂಕಿತಕರತಳವಿಳಸಿತನುಂ ಸುರೂಪ ಸುರಭಿನಂದ್ಯಾವರ್ತಶ್ರೀವತ್ಸಸ್ವಸ್ತಿಕಪ್ರಭೃತಿಪ್ರಶಸ್ತಲಕ್ಷಣಲಕ್ಷಿತಾಕ್ಷೂಣೇಕ್ಷಣೈಕಸುಭಗಮೂರ್ತಿಪ್ರಭಾವಪರಮೈಶ್ವರ್ಯಸಂಪನ್ನನುಂ ದುಂದುಭಿಗಭೀರಮೃದುಮಧುರ ನಿನದೋಪಶೋಭಿತನುಮಾಗಿ ಮತ್ತಗಜಗಮನೆಯರ ಚಿತ್ತಕ್ಕೆ ವಶ್ಯಯಂತ್ರಮೆನಿಸಿದ ಸೌಭಾಗ್ಯಮುಮಂ ವಿದಗ್ಧವಾರನಾರಿಯರ ಹೃದಯಕ್ಕೆ ಸಿದ್ಧೌಷಧಿತಿಲಕಮೆನಿಸಿದ ಪುಣ್ಯಮುಮಂ ಮುಗ್ಧವಿಲಾಸಿನಿಯರ ಬಗೆಗಾಲೇಪನಪತ್ರಮೆನಿಸಿದ ಲಾವಣ್ಯಮುಮಂ ಪುಣ್ಯಮುಮನಪ್ಪುಕೆಯ್ದುದನಾ ಪುಣ್ಯದಿನದೊಳಾ ಯಶೋಭದ್ರಾಂಬಿಕೆ ತತ್ಪುತ್ರನ ಯೌವನೋದಯಮುಮಂ ನೋಡಿ ರೂಪವಿದ್ಯಾಧರನುಂ ರೂಪಕಂದರ್ಪನುಂ ಅಭಿನವಮದನನುಂ ಅಪೂರ್ವಪುರಂದರನುಂ ಸೇವ್ಯಭವ್ಯಚಿಂತಾಮಣಿಯುಂ ಭವ್ಯವರಪುಂಡರೀಕನುಮೆಂಬ ಪೆಸರ್ಗಳನಭಿಧಾನಂಗಳ್ಮಾಡಿ ವಿವಾಹಪ್ರಾಪ್ತನಾದುದನಱಿದು ತದ್ಗೃಹಮಹತ್ತರವಯೋವೃದ್ಧಬುದ್ಧಿವೃದ್ಧ ಪ್ರಮುಖಪ್ರಧಾನವರ್ಗದೊಳಾಳೋಚಿಸಿ ನಿಜಾಪತ್ಯಂಗೆ ವೈವಾಹಿಕಕ್ಕೆ ಸಮಾನಾಭಿಜಾತ್ಯಮುಮನ್ವಯಾದಿಪತ್ಯಮುಮುಳ್ಳೆಡೆಗಳೊಳ್

ಚತುರಿಕೆ ಚಿತ್ರೆ ಚಿತ್ರಲತೆ ಪದ್ಮಿನಿ ಪದ್ಮೆ ಸುಶೀಲೆ ಶೀಲೆ ರೇ
ವತಿ ಮಣಿಮಾಲೆ ಚಂದ್ರಿಕೆ ಶಶಿಪ್ರಭೆ ಲಕ್ಷ್ಮಿ ಸುರೂಪೆ ಲಕ್ಷ್ಮಣಾ
ವತಿ ಜಿನದತ್ತೆ ರೋಹಿಣಿ ಸುಲೋಚನೆ ಸುನಂದೆ ಸುಭದ್ರೆ ಭಾ
ರತಿ ರತಿ ರಂಬೆ ರತ್ನವತಿ ಗೋಮಿನಿ ಸುಂದರಿ ಹೇಮಮಾಲೆಯುಂ ।।೬೫।।

ಸನ್ನುತೆ ವಿಜಯೆ ಜಯಾವತಿ
ರನ್ನೆ ಮನೋಹರಿ ಸುದಾಮೆಯೆಂಬಿವರಂ ಶೀ
ಲೋನ್ನತೆ ಮೂವತ್ತಿರ್ವ
ರ್ಕನ್ನೆಯರಂ ರೂಪವಿಭವಸಂಪನ್ನೆಯರಂ

ವ।। ಶ್ರೀಹ್ರೀಧೃತಿಕೀರ್ತಿಯೆಂಬ ಶ್ರೀದೇವತೆಯರೊಳೋರನ್ನೆಯರಂ ಭವಿಷ್ಯನ್ಮಂಗಳಪ್ರತ್ಯಾಸನ್ನೆಯರಂ ಶುಭಮುಹೂರ್ತದೊಳ್ನೋಡಿ ಮುದ್ರಿಕಾಪ್ರದಾನಂ ಮಾಡಿ

ಮಹಾಪ್ರಸಿದ್ಧಜಿನಾಲಯಂಗಳೊಳಷ್ಟಾಹ್ನಿಕಮಹಾಮಹಿಮೆಯಂ ಮಾಡಿ ರಾಜಧಾನಿಯೊಳಷ್ಟಶೋಭೆಯಂ ಮಾಡಿ

ದಿವಿಜವಿನಿರ್ಮಿತಮೆನೆ ಧನ
ದವಿನಿರ್ಮಿತಮನೆ ವಸಂತನಿರ್ಮಿತಮೆನೆ ಭೂ
ಭುವನಕ್ಕತಿ ಕೌತುಕಮಂ
ವಿವಾಹಮಂಡಪಮನಟ್ಟಿಯಿಂ ನಿರ್ಮಿಸಿದಳ್ ॥೬೬॥

ರಗಳೆ ॥
ಚಂಚನ್ಮಣಿಗಣಪರಿಖಚಿತಭೂಮಿ
ಸಂದಿರ್ದಧರೀಕೃತ ಭೋಗಭೂಮಿ
ಮರಕತಭಿತ್ತಿಗಳಿಂ ಭಿತ್ತಿವೆತ್ತು
ವಜ್ರದ ಕಂಭಂಗಳ ಕಾಂತಿ ಮಿಂಚಿ
ಪರಭಾಗಂ ಬಡೆದವಱೊಳ್ಪಳಂಚಿ
ವೈಡೂರ್ಯದ ಗಡಗೆಗಳೆಸೆಯೆ ಬೇಱೆ
ಶಶಿಕಾಂತದ ಜಂತೆಗಳೊಪ್ಪಿ ತೋಱೆ
ನೀಲದ ಬೋದಿಗೆಗಳಮರ್ಕೆವಡೆಯೆ
ಪವಳದ ಲೋವೆಗಳ್ಕಡುಚೆಲ್ವುವಡೆಯೆ
ಪೊಂಗಳಸಂಗಳ್ತಳತಳನೆ ತೊಳಗೆ
ಕಪ್ಪುರದ ಸೊಡರ್ಗಳೋರಂತೆ ಬೆಳಗೆ
ಪೊಂದಳಿರ್ಗಳ ತೋರಣದೊಳಗೆ ಪೊಱಗೆ
ಕೆಂದಳಿರ್ಗಳ ಮಾಲೆಗಳೆಱಗಿ ತುಱುಗೆ
ಜಾಗದ ನೆಲವಡಲಗೆಗಳ ವಿಲಾಸ
....
ಕಾಲಾಗರು ಧೂಪೋದ್ಗಾರಿ ಧೂಪ
....
ಕಪಿಲಚ್ಛಾಯಾವ್ಯೋಮಾಭಿರಾಮ
....
ವಿದಶಾಚತುರ್ನಿಹಿತ ಶಾತಕುಂಭ
ಮಯ ಜಿನಗಂಧೋದಕಪೂರ್ಣ್ಣಕುಂಭ
ಮುಜ್ವಲ ಬಹುಮಣಿ ಘಂಟಾವಿತಾನ
ಮಲ್ಲಲ್ಲಿಶೋಭಿಸುವ ಮಣಿಕುಂಭಸಂತಾನ

ಮಾವೃತಸಿತಸೂತ್ರತ್ರಿತಯಮಾಗಿ
ವೇದೀವಿಲಾಸಮತ್ಯಂತಮಾಗಿ
ಕಟ್ಟಿದ ಪೂಮಾಲೆಗಳೆಸೆಯೆ ಮುಂದೆ

ನಾನಾವಿಧ ಫಲನಿಚಯಂಗಳಿಂದೆ
ವೈಚಿತ್ರ್ಯರುಚಿರದೇವಾಂಗವಟ್ಟೆ
ಕಿಕ್ಕಿಱಿಗಿಱಿದವಱಿಳ್ ಕೂಡೆ ಕಟ್ಟೆ
ಕೆದಱಿದ ಕರ್ಪೂರವಳಿಕು ಮೇಗೆ
ಕತ್ತುರಿಯ ಕಂಪುಮದನೂನಮಾಗೆ
ಚಂದನರಸದಿಂದಂ ಪೂಸಿದಲ್ಲಿ
ಸಾಂದಿನ ರಸದಿಂ ಸಾರವಿಸಿದಲ್ಲಿ
ಬಿಡುಮುತ್ತುಗಳಿಂದಿಕ್ಕಿದ ರಂಗವಲ್ಲಿ
ಆದಂ ಕರಮೊಪ್ಪಿರೆ ರಂಗವಲ್ಲಿ
ಚಿಂಬೊನ್ನ ಪಟ್ಟವಣೆ ದುಗುಲದಿಂದ
ಮಳವಟ್ಟಿರೆ ಪಾಸಿರೆ ಚೆಲುವಿನಿಂದ
ಮುಪಶೋಭಿತ ವಿಸ್ತೃತ ಸರ್ವಧಾನ್ಯ
ಮಧ್ಯಪ್ರದೇಶ ಸಂಸ್ಥಾಪ್ಯಮಾನ
ಮೆನೆ ಸಿರಿಗನ್ನಡಿ ಮೊಸರೆಣ್ಣೆ ವೆರಸಿ
ದೆಳದಳಿರ್ಗಳಸಂಗಳ ಲೀಲೆವೆರಸಿ
ದಂಪತಿಯಂ ಪೋ ಬರವೇೞೆಂಬ
ತೆಱದಿಂ ಸೊಗಯಿಸಿದುದು ಕಣ್ಗಳುಂಬ
ಮೋರಂತೆಡೆಯಾಡುವ ಯುವತಿ ಜನದ
ಮಂಜೀರಕ ಗುಂಜನ್ಮಂಜು ನಿನದ
ಮೆಸೆದಿರೆ ಮಂಗಳವಱಿ ಕೂಡೆ ಮೊೞಗೆ
ಜಯಜಯ ವರ್ಧಸ್ವ ನಿನಾದದೊಳಗೆ
ಕಳರವದಿಂ ವಂದಿ ವ್ರಾತಮುಲಿಯೆ
ಪರಿವಾರ ನಾರಿಯರ್ ಪಿರಿದು ನಲಿಯೆ
ಭಾವಿಸುವಂದದು ಪುಣ್ಯವತಾರ
ಮಾರಯ್ವಂದದು ಸಂಸಾರ ಸಾರ
ಮದು ಕಾಮನ ಸಾಮ್ರಾಜ್ಯಸದನ
ಮದು ಮದನ ಸಾರ ಸರ್ವಸ್ವಭವನ

ಮದು ನಾಗರಾಜ ನಿಲಯೋಪಮಾನ
ಮದು ದಿವಿಜಪತಿ ವಿಮಾನೋಪಮಾನ
ಮಿಾಲೋಕದೊಳದಱಿಂತಪ್ಪುವಿಲ್ಲ
ಬಣ್ಣಿಸಲದನಾವನುಮಱಿದನಿಲ್ಲ ॥೮೯॥

ವ॥ ಅಂತು ಕಾಮರಾಜರಾಜ್ಯಕ್ಕೆ ಕಲ್ಯಾಣಗೇಹಮುಂ ವಸಂತರಾಜ್ಯೋತ್ಸವಕ್ಕೆ ಜನ್ಮಗೇಹಮುಂ ಗಾಯಕನಿಕಾಯಕ್ಕೆ ಗಂಧರ್ವಗೇಹಮುಂ ವಂದಿವೃಂದಕ್ಕೆ ಚಿಂತಾಮಣಿ ಗೇಹಮುಮೆಂಬಂತಿರ್ದ ವಿವಾಹಗೇಹಮಂ ಯಶೋಭದ್ರೆ ಕಂಡು ಮನಂಗೊಂಡು ಮಂಡಲಿಕ ಮಹಾಸಾಮಂತ ಮಂತ್ರಿಪ್ರಧಾನ ಶ್ರೇಷ್ಠಿ ಸಚಿವಾಂತಃಪುರಾಂಗನಾಜನಕ್ಕೆ ಲೆಕ್ಕಮಿಲ್ಲದೆ ಪಂಚರತ್ನಮಯಭಾಜನಂಗಳೊಳ್ ತೆಕ್ಕನೆ ತೀವಿದ ಬಿಡುಮುತ್ತಿನ ಪಚ್ಚೆಸಾರದ ಕಾಶ್ಮೀರದ ಯಕ್ಷಕರ್ದಮಪಿಂಡದ ಕತ್ತುರಿಯ ಕೊಳತದ ಕರ್ಪುರವಳಿಕಿನ ಬಾಯಿನಂಗಳನೆ ಬೀಱಿ

ಬೊಂಗದ ನಾರಂಗದ ದೇ
ವಾಂಗದ ಪಲತೆಱದ ಸಕಲ ವಟ್ಟೆಗಳಂ ಗೇ
ಹಾಂಗಣದೊಳ್ ಮೆಟ್ಟುವ ತಾ
ಣಂಗಳೊಳೋರಂತೆ ಪಾಸಿ ತದನಂತರದೊಳ್ ॥೯೦॥

ಬಿಡುಮುತ್ತಿನ ಪೇಱುಗಳಂ
ತಡೆಯದೆ ಕರ್ಪುರದ ಪಿರಿಯ ಮಳವೆಗಳಂ ತಂ
ದಿಡು ಮಾಣಿಕ ಭಂಡಾರದ
ಪುಡಿಕೆಗಳಂ ಮಂಗಳಕ್ಕೆ ತಕ್ಕುಡುಕೆಗಳಂ ॥೯೧॥

ವ॥ ಎಂದು ಕಾಲೋಹಣದ ಸಾಹಿಯಾಣದ ಚೀನದ ಮಹಾಚೀನದ ಪಟಿಯ ಚಿತ್ರಾವಟಿಯ ಪಟ್ಟಾವಟಿಯ ಪಟ್ಟಸೂತ್ರದ ಚಿತ್ರಸೂತ್ರದ ನೇತ್ರವಟ್ಟಣೆಗೆಯ ಪುಟ್ಟೆಗೆಗಳನೊಟ್ಟಿ ಬೆಟ್ಟಾಗಿ ಪುಂಜಿಸಿ

ಆಡುವ ಬೇಡುವ ಪಾಡುವ
ನೋಡುವ ಜನಕೆಲ್ಲಮಿಾವ ಸೂಸುವ ಕುಡುವೀ
ಡಾಡುವ ವಸ್ತುಗಳಿಂದೆಡ
ಱೋಡುವಿನಂ ಪಿರಿದನಿತ್ತು ಬಿಯಮಂ ಮೆಱೆದಳ್ ॥೯೨॥

ಇದಿರೊಳ್ ಜಂಗಮದಿವ್ಯಕಲ್ಪಲತೆ ಸತ್ಪುಣ್ಯಾರ್ಥದಿಂ ಬಂದುನಿಂದುದೊ
ಮೇಣ್ ದಿವ್ಯ ಮಹಾನಿಧಾನಮಿದಿರೊಳ್ ಕೋಳ್ಪೋದುದೋ ಪೇಟಿಮೆಂ
ಬುದನೆಂಬನ್ನೆಗಮರ್ಥಿಗರ್ಥಚಯಮಂ ಬೇಟ್ಟಿ......................
ಕ್ಕದೆ ಕೊಟ್ಟಳ್ಗಡಮೆಂದೊಡಾ ಸತಿಯನಿನ್ನೇವಣ್ಣಿಪೊಂ ಬಣ್ಣಿಪೊಂ ॥೯೩॥

ಒಲಿದಂತಿರೆ ಕೊಟ್ಟಳ್ ಕ
ಲ್ಪಲತಿಕೆ ತನ್ನಿಚ್ಛೆಯಿಂದ ಕುಡದುದಱಿಂದೀ
ಲಲನಾಸದ್ರೂಪದ ಕ
ಲ್ಪಲತೆಗಮಾ ಕಲ್ಪಲತೆಗಮೇನಂತರಮೋ ॥೯೪॥

ವ॥ ಆ ಪ್ರಸ್ತಾವದೊಳ್ ವಿವಿಧರತ್ನಗರ್ಭ ನಾನಾವಿಧೌಷಧಿಸಂದರ್ಭ ಹಾಟಕ ಘಟಪರಿಪೂರ್ಣ ಪರಮಜಿನಗಂಧೋದಕಂಗಳಿಂ ಮಿಂದು

ಮುದದಿಂ ನನೆಗಣೆಯುಂ ಪಿಡಿ
ಯದೆ ಕಬ್ಬಿನ ಬಿಲ್ಲನೊಲ್ಲದವಯವದಿಂದಂ
ಮದನನೆ ಬರ್ಪಂತಭಿನವ
ಮದನನಳಂಕಾರಭವನಮಂ ಪುಗುತಂದಂ ॥೯೫॥

ವ॥ ಅಂತಳಂಕಾರಮಂದಿರಕ್ಕೆ ವಂದು ಚತುರವಿಬುಧಜನಸಂವಿಧಾನದೊಳ್ ನೆಱಿಯೆ ಕಯ್ಗೆಯ್ದು

ಕನಕಮಣಿಕಟಕಲಲಿತಂ
ಜಿನಗಂಧೋದಕಪವಿತ್ರಗಾತ್ರಂ ಯದುಗೋ
ತ್ರನಿಕಾಯನಾಯಕಂ ವಿಬು
ಧನುತಂ ಮಂದರಮಹೀಧರಕ್ಕೆಣೆಯಾದಂ ॥೯೬॥

ತರತರದಿನೆಸೆವ ಕರೆಗಳ್
ವೆರಸಿದ ಪೊಸದುಗುಲದುಡೆಯಿನಮರ್ದೊಪ್ಪುವ ಪೊಂ
ಜುರಿಗೆಯುಮುಜ್ವಲ ನಾನಾ
ಭರಣಂಗಳುಮೇಂ ವಿಲಾಸಮಂ ಮಾಡಿದುವೋ ॥೯೭॥

ಪೊಸಮುತ್ತಿನ ಸುತ್ತಿನ ಭ
ರ್ಮಸೂತ್ರಮುಂ ನುಣ್ಪುವೆತ್ತ ಮಳಯಜದಣ್ಪುಂ
ಪೊಸಮದುವೆಯ ಪೊಸಪಸದನ
ಮೆಸೆದೊಪ್ಪಿರೆ ಜನಮನೇಂ ಮನಂಗೊಳಿಸಿದುದೋ ॥೯೮॥

ಅಮರಿಸಿ ಮಿಂಚಂ ಮುಕ್ಕುಳಿ
ಸಿ ಮಾನಸರಮೆಗೆ ಸೂಸಿದಪನಿವನೆಂಬಂ
ತಮರ್ದಿರೆ ಮಿಂಚುವ ಸುಲಿಪ
ಲ್ಲ ಮಿಂಚು ಸಂಚಳಿಸೆ ವಿಮಲ ಮಣಿಭಿತ್ತಿಗಳೊಳ್ ॥೯೯॥

ವ॥ ಅನ್ನೆಗ[ಂ] ಮೂವತ್ತಿರ್ವರ್ಕನ್ನೆಯರುಮನೇಕ ಮಂಗಳಪ್ರಸಾಧನ ಪ್ರವೀಣೆಯರಪ್ಪತಿವಿದಗ್ಧವಾರವನಿತಾಜನಪರೀತೆಯರಾಗಿ

ಕುಸುಮಾಸ್ತ್ರನ ನನೆಗಣೆಗಳ್
ಮಸೆದು ತೆಱಿಂಬೊಳೆದು ಪೊಳೆಯುತಿರ್ಪಂದದಿನೇ
ನೆಸೆದಿರ್ದರೊ ಕನ್ಯಕೆಯ
ಪ್ರಸಾಧನಂ ತಮಗೆ ಕಾಮಸಾಧನಮಾಗಲ್ ॥೧೦೦॥

ವ॥ ಅಂತು ನೆಱಿಯೆ ಕಯ್ಗೆಯ್ದ ವಧೂವರರಂ ಮೌಹೂರ್ತಿಕ ನಿರೂಪಿತ ಶುಭಮುಹೂರ್ತದೊಳ್ ಮಂದ್ರ ಮಧುರ ಮನೋಹರ ಮಂಗಳಪಟಹ ಗೀತಾಶೀರ್ವಾದಕೋಳಾಹಳರವಂಗಳೆಸೆಯೆ ಮುಂದಿಟ್ಟು ತಂದು ಪರಿಣಯನಮಂಟಪದ ಮಧ್ಯ ಪ್ರದೇಶಮನಳಂಕರಿಸಿದ ಪಂಚರತ್ನಮಯ ವೇದಿಕೆಯ ನಡುವಣ ಪೀಠದ ಮೇಲೆ ಪಾಸಿದ ದಳಿಂಬದ ಪಸೆಯೊಳಿರಿಸಿ ಕಯ್ನೀರೆಱಿದು ಪಾಣಿಗ್ರಹಣಂಗೆಯ್ಸಿದಾಗಳ್

ಕಡುಚೆಲ್ವುವಡೆದು ಬಳಸಿಯು
ಮೆಡೆಯುಡುಗದೆ ಕಾಂತೆಯರ್ ನಯಂಬಿಡದಿರೆ ದಾಂ
ಗುಡಿವಡೆವ ಕಲ್ಪಲತೆಗಳ
ನಡುವಣ ಕಲ್ಪಾವನೀಜಮಿರ್ಪಂತಿರ್ದಂ ॥೧೦೧॥

ವ॥ ಆಗಳಾ ಯಶೋಭದ್ರೆ ಮುನ್ನೆ ತನ್ನ ಮಾಡಿಸಿದ ಮೂವತ್ತೆರಡು ಬಳ್ಳಿ ಮಾಡಂಗಳೊಳ್ ಮೂವತ್ತಿರ್ವರ್ಸೊಸೆವಿರುಮಂ ಮಹಾವಿಭೂತಿಯನಿರಿಸುವುದುಂ ಪ್ರತಿದಿನಮಾ ಶೃಂಗಾರವಾರಿಧಿತರತ್ತರಂಗೆಯರಾ ಲಾವಣ್ಯಾರ್ಣವನ ಮನೋರಂಗದೊಳ್ ನಾಟಕಂ ನಲಿದು ನರ್ತಿಸಿಯುಮಾ ನಕಕುಳಿಶವಿರಾಜಿತಪಾದಪಲ್ಲವೆಯರಾ ನಖಾಂಶುಮಾಳಸ್ತಬಕಪರಿಚುಂಬಿತ ಪಾದಪಲ್ಲವಂಗಳೊಳ್ ಪದೆಪಂ ಮಾಡಿ ಮೇಳಿಸಿಯುಮಾ ವಿಲಾಸಜಂಘಾಯುಗಳೆಯರಾ ವಿನೂತಜಂಘಾಯುಗಳನಿ ಗಳದಿನುಲ್ಲಂಘಿಸದಂತು ಮಾಡಿಯುಮಾ ಕರಭೋರುಸ್ತಂಭೆಯರಾ ರಂಭಾಸ್ತಂಭಾ ಯಮಾನೋರುಸ್ತಂಭವಂ ತಂದು ವೃತ್ತೋರುಸ್ತಂಭಂಗಳಿನೇಳಿಸಿಯುಮಾ ಮನೋಜರಾಜ ಕ್ರೀಡಾಚಳೋನ್ನತಕಟಿತಟೆಯರಾ ಘನಜಘನನಂ ತಮ್ಮ ಸಹಜಘನಜಾಳಕ್ಕೊಳ ಗುಮಾಡಿಯುಮಾ ಮದನರಾಗರಸಕೂಪೋಪಮಾನ ನಿಮ್ನನಾಭಿಕೂಪೆಯರಾ ದಕ್ಷಿಣಾವರ್ತ ಗಂಭೀರ ನಾಭಿಕೂಪನಂ ತಮ್ಮ ಗಂಭೀರನಾಭಿಕೂಪದೊಳ್ ಬಲವರಿಸಿಯುಮಾಮುಷ್ಟಿ ಸಮಾನ[ನ]ಮಧ್ಯೆಯರಾ ಸಿಂಹಮಧ್ಯನಂ ತಮ್ಮ ಸೂಕ್ಷ್ಮಕ್ಷಾಮಮಧ್ಯದೊಳ್ ಸೋಂಕಿಯುಂ ಮದನಮದಕುಂಭಿಕುಂಭೋಪಶೋಭ- ಕುಚಕುಂಭೆಯರಾ ಸಕಲ ಲಕ್ಷ್ಮೀನಿವಾಸ ವಿಶಾಲವಕ್ಷಃಸ್ಥಲನಂ ತಮ್ಮನಿಬಿಡನಿಬದ್ಧಪೀವರಸ್ತನಂಗಳಿಂ ಕೂಂಕಿಯುಮಾ ನಿಕಾಮಕಾಮಪಾಶೋಪಹಾಸಿ ಕೋಮಳಬಾಹುಯುಗಳೆಯರಾ ದಿಕ್ಕರಿಕ

ರಾನುಕಾರಿಕರಯುಗಳನಂ ತಮ್ಮಬಾಹುಪಾಶಂಗಳೊಳ್ ತೊಡರ್ಚಿಯುಮಾ ಕಂಬುಕಮನೀಯಕಂಧರೆಯರಾ ಮದಾಂಧ ಸಿಂಧುರಸ್ಕಂಧಬಂಧುರಕಂಧರನಂ ತಮ್ಮ ಗಳರೇಖೆಗಳೊಳಾಗಿಸಿಯುಮಾ ವಿದ್ರುಮಾಧರೆಯರಾ ಸುರಭಿಸುಪಕ್ವಬಿಂಬಾಧರನಂ ತಮ್ಮ ಬಿಂಬಾಧರಾಮೃತರಸದಿಂ ತಣಿಪಿಯುಮಾ ಮುಕ್ತಾಫಳಪ್ರವಿರಾಜಿತ ದಶನೆಯರಾ ಸ್ಫುರತ್ಸುಧಾಂಶುಮಯೂಖದಶನನಂ ತಮ್ಮ ದಶನಮರೀಚಿಗಳಿಂ ಮರುಳ್ಚಿಯುಮಾ ಮೃಣಾಳನಾಳಕೋಮಳಾನುಕಾರಿಮಣಿಕುಂಡಲಮಂಡಿತಕರ್ಣೆಯರಾ ನೂತ್ನರತ್ನಮಯ ಚಂಪಕಕರ್ಣಪೂರಾಳಂಕೃತಕರ್ಣನಂ ತಮ್ಮ ಶ್ರೋತ್ರಯುಗಳಂಗಳಿಂ ಸೂತ್ರಿಸಿದಂತೊಳಗುಮಾಡಿಯುಮಾ ಮೃಗಮದರಾಜಿವಿರಾಜಿತ ಕಪೋಳತಳೆಯರಾ ಕಂದರ್ಪದರ್ಪಣಕಪೋಳತಳನಂ ತಮ್ಮ ಲಲಿತಕಪೋಲಂಗಳಿಂ ಮನಂಗೊಳಿಸಿಯುಮಾ ಚಂಪಕಕುಟ್ಮಳನಾಸಾವಂಶೆಯರಾ ಪರಿಮಳಶ್ವಾಸ ನಾಸಾಪುಟನಂ ತಮ್ಮನಾಸಾವಂಶ ಸೌರಭಕೆ ವಶಗತನಂ ಮಾಡಿಯುಮಾ ಪುಂಡರೀಕದಳಧವಳವಿಲೋಳಲೋಚನೆಯರಾ ನೀಳನೀರೇರುಹದಳವಿಲೋಚನನಂ ತಮ್ಮ ನಿಡಿಯ ಬಿಳಿಯ ತುಱುಗೆಮೆಗಣ್ಗಳಿಂ ಕಣ್ಬೇಟಂಗೊಳಿಸಿಯು[ಮಾ] ಮನೋಜ ಚೈತ್ರಪತಾಕಾಪ್ರತಿಮಭ್ರೂವಿಭ್ರಮೆಯರಾ ಸ್ಮರಶರಾಸನಭ್ರೂವಿಭ್ರಮನಂ ತಮ್ಮ ಭ್ರೂವಲ್ಲಿಗಳೊಳ್ ತಡಮಿಕ್ಕಿಯುಮಾ ಪರಾರ್ಧ್ಯಾರ್ಧೇಂದುಲಲಾಟೆಯರಾ ಪೂರ್ಣ ಲಲಾಟನಂ ತಮ್ಮ ಲಲಾಟತಟರಂಜನೆಯಿಂ ವಿಟತತ್ವಾಭಿಮುಖಂಮಾಡಿ ರಂಜಿಸಿಯುಮಾ ನೀಳಾಳಕಿಯರಾ ಚಟುಳಕುಟಿಳಕುಂತಳನಂ ತಮ್ಮ ಸುತ್ತುಂಗುರುಳೊಳೆ ಸುತ್ತಿ ಜತ್ತಿಸಿಯುಮಾ ನವಮಾಳಿಕಾಕುಸುಮಸುಕುಮಾರಕೋಮಳೆಯರಾ ಸುಕುಮಾರಸ್ವಾಮಿಯನೊಲಿಸಿಯುಂ ವಿವಿಧವಿನೋದಂಗಳಂ ಸಲಿಸಿಯುಂ ಕೂರ್ಮೆಯುಮಂ ಪೆರ್ಮೆಯುಮಂ ಪಡೆದರಿಂತು

ಪ್ರಿಯಸತಿಯರೊಳಲ್ಲದೆ ಕೂ
ಡಿಯಱಿಯನತ್ಯಂತರುಚಿರಮಣಿಕುಟ್ಟಿಮ ಭೂ
ಮಿಯನಲ್ಲದೆ ನೆಲನಂ ಮೆ
ಟ್ಟಿಯಱಿಯನೇಂ ಗರ್ಭಸುಖಿಯೊ ತತ್ಸುಕುಮಾರಂ ||೧೦೨|

ಜನನಿಯೊಳಂ ಪರಿಚಾರಕ
ಜನದೊಳಮಾತ್ಮೀಯ ಯುವತಿ ಜನದೊಳಮೆಂದುಂ
ಮನಮೊಸೆದು ನುಡಿವನಲ್ಲದೆ
ಮನುಜರೊಲಿಂತೆಂಬರಾರೊಳಂ ನುಡಿದಱಿಯಂ ||೧೦೩|.

ವಿಲಸಿತದುಕೂಲ ವಸ್ತ್ರಂ
ಗಳನಲ್ಲದೆ ಪೆಱವು ಸೀರೆಗಳನುಟ್ಟಱಿಯಂ
ತೊಳಗುವ ರತ್ನಾಭರಣಂ
ಗಳನಲ್ಲದೆ ಪೆಱವು ತುಡುಗೆಯಂ ತೊಟ್ಟಱಿಯಂ ||೧೦೪||

ಕಲ್ಪೇಂದ್ರನ ನಾಗೇಂದ್ರನ
ತಳ್ಪದೊಳೆರಡೆರಡೆವರ್ಷ ಸಂಕಲ್ಪಮೆನಲ್
ನಿಪ್ಪೊಸತೆನೆ ಸೊಗಯಿಪ ಮೃದು
ತಳ್ಪದೊಳಾತಂ ವಿಲಾಸದಿಂ ಪವಡಿಸುವಂ ॥೧೦೫॥

ಬೆಳಗುವ ಮಣಿಮಯ ಲಲಿತೋ
ಜ್ವಲದೀಪಾವಳಿಯ ಬೆಳಗನಲ್ಲದೆ ಮನೆಯೊಳ್
ಬೆಳಗುವ ತೊಳಗುವ ಸೊಡರ್ಗಳ
ಬೆಳಗಂ ಕನಸಿನೊಳಮಾಗಿಯುಂ ಕಂಡಱಿಯಂ ॥೧೦೬॥

ಮಾಸರಮೊಕ್ಕ ಕತ್ತುರಿಯ ಪಂಕಮನಲ್ಲದೆ ಪಂಕಮಂ ಕರಂ
ಬೀಸುವ ಚಾರುಚಾಮರದ ಗಾಳಿಯನಲ್ಲದೆ ಗಾಳಿಯಂ ಮನೋ
ಭಾಸುರಮಪ್ಪ ಕಪ್ಪುರದ ಧೂಳಿಯನಲ್ಲದೆ ಧೂಳಿಯಂ ನಿಜಾ
ವಾಸದೊಳೆಂತುಟೆಂದಱಿಯನಿಂತುಟು ಪುಣ್ಯಮಗಣ್ಯಮಾತನಾ ॥೧೦೭॥

ನೆಟ್ಟನೆ ಪುಷ್ಪವಾಸನೆಯ ಕಪ್ಪುರಶಾಲಿಯ ತಂಡುಲಂಗಳಂ
ನಿಟ್ಟೆಸರಿಟ್ಟು ಬಾಗಿ ಮೃದುವಾದ ಮನೋಹರವಾದ ಕಂಪಿನೊಳ್
ಸುಟ್ಟರೆ ನಿಟ್ಟುದೋಯೆನಿಸಿದನ್ನಮನಲ್ಲದೆ ಮತ್ತಿನನ್ನಮಂ
ಮುಟ್ಟುವನಲ್ಲನೀ ಜಗದೊಳೇಂ ಸುಖಿಯೋ ಸುಕುಮಾರವಲ್ಲಭಂ ॥೧೦೮॥

ಅಕ್ಕರ ॥ ಮಾಗಿ ಬೇಸಗೆ ಮಱೆಗಾಲಂ ಪಗಲಿರುಳೆಂಬಿವನೊರ್ಮೆಯುಂ
ಕಂಡಱಿಯಂ
ರೋಗಭಯಚಿಂತಾಸಂತಾಪಮೆಂಬಿವನಿಂತೆಂದು ತಾನೆಂದುಮಱಿವನಲ್ಲಂ
ಭೋಗಭೂಮಿಯ ಮನುಜರ ಮಾರ್ಗದಿ ಭೋಗೋಪಭೋಗಮಂ ಭೋಗಿಸುತಂ
ರಾಗರಸದೊಳೆ ತಳ್ಳಂಕುಗುಟ್ಟುತುಂ ಲಾವಣ್ಯರಸದೊಳೋಲಾಡುತಿರ್ದಂ ॥೧೦೯॥

ಆತನೆ ಪುಣ್ಯಮೂರ್ತಿ ಪರಿವರ್ತಿತನಿರ್ಮಳಕೀರ್ತಿ ಚಾರುಭೋ
ಗಾತಿಶಯಪ್ರಭಾವಮಹಿಮಾಸ್ಪದನನ್ವಿತಸೌಖ್ಯನೆಂದೊಡಿ
ನ್ನಾತನ ಪೆಂಪನಾತನ ವಿಭೂತಿಯನಾತನಭೋಗಮಂ ತಗು
ಳ್ದಾತನ ದಿವ್ಯಸೇವ್ಯಸುಖಮಂ ನೆಱೆ ಬಣ್ಣಿಪನೆಂತು ಬಣ್ಣಿಪಂ ॥೧೧೦॥

ಅಖಿಳವನಜ್ಯೋತಿರ್ಭವ
ನಖೇಚರದ್ಯುಚರಭೂಚರರ್ಕಳೊಳಾರುಂ
ನಿಖಿಳವಿಭೂತಿಗೆ ನಿರುಪಮ
ಸುಖಕ್ಕೆ ಸುಕುಮಾರನಂತು ನೋಂತರುಮೊಳರೇ ॥೧೧೧॥

ಅನಿಮಿಷನಿಳಯದಿನಗಲದ
ವಿನೂತಸುಖನಿಲಯರೆನಿಸಿದಹಮಿಂದ್ರರನೇ
ನನುಕರಿಸುತ್ತೆ ಕುಮಾರಕ
ನನುಪಮ ದಿವಿಜೇಂದ್ರಲೀಲೆಯಂ ತಾಳ್ದಿದನೋ ॥೧೧೨॥

ಪ್ರಕಟೀಕೃತಸುಕೃತಸುಖಾ
ಧಿಕನಾಮಯ ದಂಶಮಸಕಶೀತೋಷ್ಣಕದಂ
ಬಕಬಾಧಾರಹಿತನೆನಿಸಿ
ಸುಕುಮಾರಂ ಸುರಕುಮಾರರಂ ಮಸುಳಿಸಿದಂ ॥೧೧೩॥

ವಿದಿತಾನೂನವಿಲಾಸವೈಭವಪದಂ ಬೇಱೊಂದು ಸದ್ರೂಪಮೆ
ನ್ನದೆ ಮತ್ತಂ ಲಲಿತೋರುಜಾರುವಿಭವಂ ಬೇಱೊಂದು ಸೌಂದರ್ಯಮೆ
ನ್ನದೆ ನಾನಾವಿಲಸನ್ಮನೋಹರಸುಖಂ ಬೇಱೊಂದು ಲಾವಣ್ಯಮೆ
ನ್ನದೆ ಬೇಱೊಂದು ಪಲಾಲಮಂ ಗಟಿಪಿ ಚಾತುರ್ಯಕ್ಕೆ ಮುಯ್ಯಾಂಪುದೇ ।೧೧೪॥

ವ॥ ಇಂತಾ ಸುಕುಮಾರಂ ದೇವೇಂದ್ರಲೀಲೆಯಿಂ ಭೋಗೋಪಭೋಗಂಗಳಂ ಸೇವಿಸುತ್ತುಂ ಸುಖಸಂಕಥಾವಿನೋದಂಗಳಿನಿಪ್ಪುದುಮನ್ನೆಗವೊಂದು ದೆವಸಮಾ ಪುರಕ್ಕೊರ್ವಂ ಝುಂಝಾವೇಗನಮೂಲ್ಯಮಪ್ಪ ರತ್ನಗಂಬಳಿಯಂ ಕೊಂಡುಬಂದು ವೃಷಭಾಂಕನಂ ಕಂಡು ಪೊಡೆವಟ್ಟು ದೇವರ್ಗೊಂದಪೂರ್ವವಸ್ತುವಂ ತಂದೆನವಧಾರಿಸಿಮೆಂದು

ನವಲಾಕ್ಷಾಮುದ್ರೆಯನೊಡೆ
ದವಧರಿಪುದುಮಾಗಳರ್ಕನುದಯಂಗೆಯ್ದಂ
ತೆವೊಲಾಯ್ತು ತನ್ನೃಪೇಶ್ವರ ।
ಭವನದೊಳಾಶ್ಚರ್ಯಮಾದಮಪ್ಪನ್ನೆವರಂ ॥೧೧೫॥

ವ॥ ಅಂತಾ ಸಭಾಂತರಾಳಗಗನದಿಗವನಿಭಾಗದೊಳ್ ತನ್ನ ಬೆಳಗೆ ಬೆಳಗಾಗಿರ್ದ ರತ್ನಕಂಬಲಮನಾ ಧರಿತ್ರೀವಲ್ಲಭಂ ಮುಹುರ್ಮುಹುರಾಲೋಕನಕುತೂಹಳ ಚಿತ್ತನಾಗಿ ವಿಸ್ಮಯಂಬಟ್ಟು

ಇದು ದೇವಲೋಕದಿಂ ಬಂ
ದುದೊ ಮೇಣ್ನಾಗೇಂದ್ರಲೋಕದಿಂ ಬಂದುದೊ ಪೇ
ೞೆದು ವಿಸ್ಮಯಮೆನುತುಂ ತೂ
ಗಿದೂಗಿ ಮಸ್ತಕಮನಾ ನೃಪೇಂದ್ರಂ ನುಡಿದಂ ॥೧೧೬॥

ವ॥ ಎಮ್ಮಂದಿಗರೀ ಮಹಾವಸ್ತುವಂ ನೋಡಿಯುಮೇಂ ಕೊಳಲ್ನೆಱೆಯರ್ ಪೆಱರೀವಸ್ತುವಂ ಕಂಡೊಡೇಂ ಮನವಂ ತೆಗೆದುಕೊಳ್ವರಲ್ಲದೆ ಧನವಂ

ತೆಗೆದುಕುಡಲಾರ್ಪರಾರುಮಿಲ್ಲೆಂದು ತಂಬುಲಮಂ ಕೊಟ್ಟು ಝುಂಝಾವೇಗನಂ ವಿಸರ್ಜಿಸುವುದುಮಾತನುಮರಮನೆಯಂ ಪೊಱಮಟ್ಟು ಬಂದು

ಧರೆಯೊಳಗಿಂತೀ ನಗರದ
ಪರದರೆ ಸಂಪನ್ನರೆಂದು ದುಂದುಮೆಗೇಳ್ದಿಂ
ಪರದರೊಳೀ ನಗರದ ಪರ
ದರ ಸೈಪಿನ ಪಿರಿಯ ಸಿರಿಯ ಪವಣಂ ನೋೞ್ಪೆಂ ॥೧೧೭॥

ವ॥ ಎಂದು ಪಿರಿಯಂಗಡಿಯ ಸಿರಿಯಂ ನೋಡಿ ನಾಡೆಯುಂ ಮೆಚ್ಚುತ್ತುಂ ಬಂದು ಪೇೞ್ಮಿಾ ಪೊೞಲೊಳ್ ಮಹಾವಸ್ತುವರ್ಗಂಗಳಂ ಬಿಲಲ್ ನೆಱೆವನ್ನರಪ್ಪ ಮಹೋದಾರಗುಣಸಮರ್ಥರುಮಪ್ಪ ಪರದರಾರೆಂದು ಬೆಸಗೊಳ್ವುದುಮಿರ್ದರಿರ್ದಲ್ಲಿಯೆ ಸುಕುಮಾರಸ್ವಾಮಿಯಿಂ ಪಿರಿಯರಾರೆಂದು ಗುಣಸ್ತುತಿಗೊಳ್ವುದುಮಾ ಕುಮಾರನ ಲಕ್ಷ್ಮೀಮಂದಿರಕ್ಕೆ ವಂದು ವಂಕದಾರದೊಳ್ ನಿಂದು ನಿಮ್ಮಾಳ್ದಂಗೆ ಪೂರ್ವವಸ್ತುವಂ ಕೊಂಡುಬಂದೆನೆಂದು ಕಾಪಿನವರ್ಗೆ ಪೇೞ್ವುದುಮವರ್ ಪರಿದು ಯಶೋಭದ್ರೆಗಾತನ ಬಂದ ವೃತ್ತಾಂತಮಂ ಬಿನ್ನವಿಸೆ ಬರವೇೞ್ಕೆಂಬುದುಂ ದ್ವಾರಪಾಲಕಗೃಹೀತಕರನಾಗಿ ಭುವನಜನಾಂಬಿಕೆಯೆನಿಸಿದ ಯಶೋಭದ್ರಾಂಬಿಕೆಯಂ ಕಂಡು ರತ್ನಕಂಬಲಮಂ ನಿಮಿರ್ಚಿ ತೋರ್ಪುದುಮಪೂರ್ವವಸ್ತುವಪ್ಪುದನಱಿದು ವಸ್ತುಪುರುಷರಿಂ ಬೆಲೆಯಿಡಿಸಿ

ಪೊಗೞೆ ಜನಂ ಝುಂಝೂವೇ
ಗಗೆ ತಾನಂತೊಂದು ಕೋಟದೀನಾರಮನಾ
ಮೃಗನಯನೆ ಕೊಟ್ಟುಕೊಂಡಳ್
ನೆಗೞ್ತೆವೆತ್ತಿರ್ದ ರತ್ನಮಯಕಂಬಳಮಂ ॥೧೧೮॥

ವ॥ ಇಂತೊಂದು ಕೋಟಿಪೊನ್ನನೊಂದು ಕವಡಿಕೆಯುಂ ಕುಡುವಂತೇನುಮವ್ಯಾಮೋಹಮಿಲ್ಲದೆ ಕೊಟ್ಟು ಬೞಿಯುಂ ರತ್ನಕಂಬಳಿಯುಂ ಮಣಿಮಾಡದ ನೆಲೆಯೊಳಿರ್ದಾತ್ಮೀಯಾತ್ಮಜಂಗೆ ಕೆಲದೊಳಿರ್ದ ಪರಿಚಾರಕಿಯರ ಕಯ್ಯಲಟ್ಟಿದಾಗಳಾಕೆ-ಯಮದಂ ಸುಕುಮಾರಸ್ವಾಮಿಯ ಕಯ್ಯಲ್ ಕುಡುವುದುಂ

ಇದು ನವದಿವ್ಯರತ್ನಮಯಮಾಗಿಯುಮೇನೆನಗಾಗದಾನಿದಂ
ಪೊದೆದೊಡೆ ಘರ್ಮಮಕ್ಕುಮದುಕಾರಣದಿಂದಿದನಿಂದೆ ತಮ್ಮ ಮೆ
ಚ್ಚಿದ ಸೊಸೆಯಾವಳಾಕೆಗೆ ಮನೋಮುದದಿಂ ಕುಡುಗೆಂದು ಕೊಟ್ಟೊಡಾ
ಸುದತಿಯುಮಾ ತಳೋದರಿಗೆ ಮೆಲ್ಲನೆ ಪೇೞ್ವುದುಮಾಗಳಾಕೆಯುಂ ॥೧೧೯॥

ಒಲಿದಿದನೊರ್ವಳ್ಗಿತ್ತಂ
ದೊಲವರಮಾಗಿರ್ಕುಮೆಂದು ಸೊಸೆವಿರ್ಗೆಲ್ಲಂ

ಸಲೆ ಚಮ್ಮಾವುಗೆಯನಾ
ಲಲನೆ ಮಹೋತ್ಸಾಹದಿಂದೆ ಮಾಡಿಸಿ ಕೊಟ್ಟಳ್ ॥೧೨೦॥

ವ॥ ಅನ್ನೆಗಮಿತ್ತಲಾ ವೃಷಭಾಂಕಂ ನಿಜಾಸ್ಥಾಯಿಕೆಯೊಳಿರ್ದ ವಸ್ತುಪುರುಷರುಂ ವಸ್ತುವಿಚಾರಗೋಷ್ಠಿಯಿಂ ಮಾತುಮಾತಾಗೆ ಝುಂಝಾವೇಗನಿಂದು ತಂದಿರ್ದ ದಿವ್ಯವಸ್ತುವನೀ ಲೋಕದೊಳ್ ಕೊಳ್ಳಲ್ ನೆಱೆವರಾರೆಂಬುದುಮವರೆಂದರ್ ನಮ್ಮ ಪರದ ಸುಕುಮಾರನಂಬಿಕೆಯಪ್ಪ ಯಶೋಭದ್ರಾಂಬಿಕೆಯಿಾಗಳೊಂದು ಕೋಟಿಪೊನ್ನಂ ಕೊಟ್ಟು ಕೊಂಡುದುಮಲ್ಲದೆಯದನರಿಯಿಸಿ

ಎಸೆದಿರೆ ತನ್ನೆಸೆವಂತೀ
ವಸುಧೆಗೆ ಪಡಿಚಂದಮಾಗೆ ಸೊಸೆವಿರ್ಗೆಲ್ಲಂ
ಸುಸಮಾನಚಿತ್ತದಿಂದಿಂ
ದು ಸಮ್ಮಾವುಗೆಯನಲ್ತೆ ಮಾಡಿಸಿಕೊಟ್ಟಳ್ ॥೧೨೧॥

ವ॥ ಎಂಬುದುಮಾಗಳರಸನತ್ಯಾಶ್ಚರ್ಯಂಬಟ್ಟು

ಆಂ ಬಿಲಲಾಱದ ವಸ್ತುಗ
ಳಂ ಬಿಲಲಾರ್ಪನ್ನರೆನ್ನ ಪೊಟಲೊಳ್ ಮಹಿಮಾ
ಡಂಬರದಿನಿರ್ಪೊಡಿನ್ನೆ
ನ್ನಿಂ ಬಿಟ್ಟು ಕೃತಾರ್ಥರಾರೊ ಈ ಮಹಿತಳದೊಳ್ ॥೧೨೨॥

ವ॥ ಅದಲ್ಲದೆಯುಮಾ ಸುಕುಮಾರನ ವಿಭೂತಿಯಂ ಖ್ಯಾತಿಯಂ ಕೇಳ್ದಱಿವೆನಲ್ಲದೆ ಕಂಡಱಿಯೆನಿಂತಪ್ಪ ಗರ್ಭಸುಖಿಯಂ ನೋಡಲ್ಪಡೆದೆನಪ್ಪೊಡೆ ಕಣ್ಬಡೆದ ಫಲಮಂ ಪೆತ್ತೆನೆಂದು ಸಮಸ್ತಪರಿಜನಸಮೇತನಾಗಿ ತನ್ನಿವಾಸಕ್ಕೆ ಬರ್ಪುದುಂ ಯಶೋಭದ್ರೆ ಬೇಗಮಿದಿರ್ವಂದು ಪೊಡೆವಟ್ಟು ದೇವರಿತ್ತ ಬಿಜಯಂಗೆಯಿಮೆಂದು ಮಣಿಮಾಡದ ಮುಂದಣ ಪಚ್ಚೆಯ ಮೊಗಸಾಲೆಯ ಲೋವೆಯೊಳ್ ಪಂಚರತ್ನದಿಂದಿಕ್ಕಿದ ರಂಗವಲ್ಲಿಯ ನಡುವಣ ಮಣಿಮಯಸಿಂಹಾಸನದ ಮೇಲೆ ವಿಸ್ತರಿಸಿದ ದೇವಾಂಗವಿಸ್ತರಿಗೆವೋಲ್ ಮಹಾವಿಸ್ತರದಿನಿರಿಸಿ ಸಾಮಂತಮಹಾಸಾಮಂತಮಂತ್ರಿಮಹತ್ತರ ಪ್ರಭೃತಿಜನಂಗಳವರವರ ಪಡೆದ ಮನ್ನಣೆಗಳನೆಡೆಯಱಿದಿರಿಸಿದಾಗಳರಸನೆಮ್ಮ ತಮ್ಮನೆಲ್ಲಿದನಾತನಂ ನೋಡಲೆಂದು ಬಂದೆನೆಂಬುದುಂ

ಮುದದಿಂ ತತ್ಪರಿಚಾರರ
ವದನಮನಾ ಕಾಂತೆ ನೋಡೆ ಬೇಗಂ ಮಣಿಮಾ
ಡದ ನೆಲೆಯೊಳಿರ್ದ ಸುಕುಮಾ
ರದೇವನಂ ತನ್ನಿಮರಸನಂ ಕಾಣಿಸುವಂ ॥೧೨೩॥

ವ॥ ಎಂಬುದುಮಾ ಪರಿಚಾರಕರ್ಪರಿತಂದು ಪೇೞ್ವುದುಂ ಮಾಡದಿಟ್ಟುದುದಯ ಶಿಖರಿಜಶಿಖರಾನೂನೋದಯಮಾನ ಭಾನೂದಯಮಾನನಂ ನಿಸರ್ಗಮಣಿ ಗಣಾಭರಣ ಕಿರಣಮಾಲಾಭರಿತದಿಂಗಂಗನಾಮುಖನುಮತಿಚಲಲ್ಲುಲಿತವಿದ್ಯುತ್ಪ್ರಭಾಪ್ರಸರಪ್ರಕೀರ್ಣ ಚಂಚಚ್ಚಾರುಚಾಮರವಿಲಾಸನುಮುದಾರಕಾಶ್ಮೀರಸಾರಾಪಹಾಸಿ ಕರ್ಪೂರ ಪಾಳಿಸಮ್ಮಿಶ್ರಿತತಾಂಬೂಲರಾಗಪರಿಚುಂಬಿತ ಬಿಂಬಾಧರರಾಗ ವದನನುಮಭಿನವಯೌವನಾ ವಷ್ಟಂಭವಿಜೃಂಭಿತತ್ರಿಭುವನಾಂತರಾಳನುಂ ಮೃಗಮದಪತ್ರವಿಲಿಖಿತ ವಿಚಿತ್ರ ಭುಜಯುಗಳನುಂ ಕತಿಪಯಪರಿಚಾರಕಜನಪರಿವೃತನುಮಧರೀಕೃತನಾಗ ಕುಮಾರ ವಿಭವನುಂ ದೂರೀಕೃತಸು[ರ]ಕುಮಾರಸೌಂದರ್ಯನುಮೆನಿಸಿ

ಮೃಗಮದದ ಯಕ್ಷಕರ್ದಮ
ದಗರುವ ಕಪ್ಪುರದ ಕಂಪು ಸುಟ್ಟುರೆವಿಡುತುಂ
ಮಗಮಗಿಸೆ ಕುಮಾರಂ ದಿ
ವ್ಯಗಂಧಮಯನಾಗಿ ಲೀಲೆಯಿಂ ಬರ್ಪಾಗಳ್ ॥೧೨೪॥

ದಿನನಾಥಂ ವ್ಯೋಮದಿಂದಂ ಧರೆಗಿೞಿದಿರದೀ ಬಂದನೀಬಂದನೀಬಂ
ದನೆ ದೇವೇಂದ್ರಂ ವಿಲಾಸಂಬೆರಸು ನಯದಿನೀ ಬಂದನೀ ಬಂದನೀ ಬಂ
ದನೆ ಸಂತಂ ಕಂತುರಾಜಂ ಜಗಮನಲೆಯಲೀ ಬಂದನೀ ಬಂದನೀ ಬಂ
ದನೆ ತಾನೆಂಬಂತು ಬಂದಂ ಪರಮಜಿನಮತಾಂಭೋಜಿನೀರಾಜಹಂಸಂ ॥೧೨೫॥

ಇದು ಸಮಸ್ತವಿನೇಯಜನವಿನುತ ಶ್ರೀವರ್ಧಮಾನಮುನೀಂದ್ರವಂದ್ಯ
ಪರಮಜಿನೇಂದ್ರಶ್ರೀಪಾದಪದ್ಮವರಪ್ರಸಾದೋತ್ಪನ್ನಪ್ರಸನ್ನ
ಸಹಜಕವೀಶ್ವರ ಶ್ರೀಶಾಂತಿನಾಥಪ್ರಣೀತಮಪ್ಪ
ಸುಕುಮಾರಸ್ವಾಮಿಚರಿತಪುರಾಣದೊಳ್
ವೃಷಭಾಂಕಂ ಸುಕುಮಾರಸ್ವಾಮಿ
ದರ್ಶನಂ ದಶಮಾಶ್ವಾಸಂ

೧೧. ಏಕಾದಶಾಶ್ವಾಸಂ

ಶ್ರೀಸುಕುಮಾರನಾದಾರಂ
ವಾಸವಮಹಿಮಾವಿಲಾಸನನುಪಮಸೌಖ್ಯಾ
ವಾಸಂ ರೂಪಮನೋಜಂ
ಭಾಸುರತೇಜಂ ಸರಸ್ವತೀಮುಖಮುಕುರಂ ॥೧॥

ಜಗತೀನಾಥನನಾ ಕುಮಾರನೊಸೆದಾಕರ್ಣಾಂತವಿಶ್ರಾಂತ ದೃ
ಷ್ಟಿಗಳಿಂ ನೋಡುತುಮೆಯ್ದೆ ವರ್ಪುದುಮಪೂರ್ವಾಲೋಕದಿಂದಾಗಳಾ
ಮೃಗರಾಜಾಸನದಿಂದಮೆರ್ದು ಮುದದಿಂದಂ ದ್ರಾಘಿಮಶ್ಲಾಘಿಬಾ
ಹುಗಳಿಂದಂ ತೆಗೆದಪ್ಪಿಕೊಂಡನರಸಂ ಶ್ರೀರೂಪಕಂದರ್ಪನಂ ॥೨॥

ವ॥ ಆಗಳಾ ಯಶೋಭದ್ರಾಂಬಿಕೆ ನಿಜನಂದನನ ಮುಖಾರವಿಂದಮನಾನಂದಂ ಬೆರಸು ನೋಡಿ

ಪುದಿದಟ್ಟೆಯಿಂದೆ ಪೊಡೆಮಡು
ವುದು ದಯೆಗೆಯ್ ಮಹಾಪ್ರಸಾದಮೆಂಬುದು ಜೀಯೆಂ
ಬುದು ದೇವೆಂಬುದು ಮಹಿಮಾ
ಸ್ಪದ ಬೆಸನೇನೆಂಬುದೀಗಳೀಯವಸರದೊಳ್ ॥೩॥

ನಮ್ಮಾಳ್ದಂ ಸ್ವಾಮಿ ನರೇಂ
ದ್ರಂ ಮಗನೆ ಕೂರ್ಮೆಯಿಂದೆ ನಿನ್ನಂ ನೋಡಲ್
ತಾಮ್ಮನೆಗೆ ಬಂದನದಱಿಂ
ನೀಮ್ಮೆಱೆವುದು ನಿನ್ನ ಭಕ್ತಿಯಂ ಶಕ್ತಿಯುಮಂ

ವ॥ ಎಂಬುದುಮರಸನೀಗಳಿದಱೊಳೆಲ್ಲಮೇನುಸಿರದಿರಿಮೆಂದು ಕುಮಾರನಂ ತನ್ನೇಱಿದ ಮಣಿಮಯಸುಖಾಸನದೊಳರ್ಧಾಸನಮಿರಿಸುವುದುಂ

ಸಾರತರರತ್ನಮಯಕೇ
ಯೂರಂ ಕರ್ಣಾಂತದೊಳ್ಪಳಂಚಲೆಯೆ ಮಹೋ

ದಾರಗುಣಂ ವೃಷಾಭಾಂಕನೊ
ಳೋರಾಸನಮಿರ್ದನಾಗಳಾಸ್ಥಾಯಿಕೆಯೊಳ್ ॥೫॥

ವ॥ ಆ ಪ್ರಪ್ರಸ್ತಾವದೊಳ್

ಅತಿಸಿತಸರ್ಷಪಶೇಷಾ
ಕ್ಷತಂಗಳಂ ಮಂಗಳಾರ್ಥದಿಂ ಪೆರ್ವೆಂಡಿರ್
ಸತತೋತ್ಸವದಿಂದಂ ಪರ
ಸಿ ತಳಿದರಾನಂದಪಟಹಮೊಡನೆಸೆವಿನೆಗಂ ॥೬॥

ಮೊಳಗುವ ಬದ್ದವಣಂ
ಗಳ ಬೆಳಗುವ ಸೊಡರ್ಗಳ ತಗುಳ್ದು ದೆಸೆದೆಸೆಗೆತ್ತಂ
ಮಿಳಿರ್ವ ದುಕೂಲದ ಗುಡಿಗಳ
ವಿಳಾಸಮೊಪ್ಪಿದುದು ತನ್ನಿವಾಸಾಂತರದೊಳ್ ॥೭॥

ವ॥ ಆಗಳಾಳೋಕನಕುತೂಹಳದಿಂ ಮನೋಜರಾಜಾವೇಶಮಂತ್ರದಿಂ ಸ್ತೋಭಂಗೊಂಡಂತೆ ಪುರಕ್ಷೋಭಮಾಗೆ ಪೌರವಾರವಿಲಾಸಿನಿಯರಾತ್ಮೀಯಭವನ ವ್ಯಾಪಾರ ಚಿಂತಾಂತರಾಳಾಪಂಗಳಂ ಮಱೆದು ಸುಕುಮಾರಗೃಹದ್ವಾರ ಗೋಪುರಾಟ್ಟಾಳಕಪ್ರಾಸಾದಕೂಟಕೋಟಿಗಳನೇಱೆ ನೋಟ್ಪಲ್ಲಿ

ಮುಡಿವ ನೆವದಿಂದೆ ತನ್ನಯ
ಮುಡಿಯಂ ಮೇಲ್ಕೊಳ್ವ ನೆವದೆ ಮೊಲೆಯಂ ಪೆಱರೊಳ್
ನುಡಿವ ನೆವದಿಂದೆ ಪಲ್ಗಳ
ಬೆಡಂಗನೊರ್ವಳ್ ವಿಲಾಸದಿಂದಂ ಮೆಱೆದಳ್ ॥೮॥

ವ॥ ಮತ್ತಮೊರ್ವಳ್

ಧವಳಾಕ್ಷಿ ಸುಧಾಧವಳಿತ
ಗವಾಕ್ಷಜಾಳಾಂತರಂಗಳೊಳ್ ವದನಮನಿ
ಟ್ಟವಳೋಕಿಸುವವಳಿಂದಂ
ಧವಳಿಸಿದುವೊ ಕಣ್ಣವೆಳ್ಪು ದಿಗುಭಿತ್ತಿಗಳಂ ॥೯॥

ಅಮಿತಗುಣಾಧಾರನನಾ
ಕುಮಾರನಂ ದೂರದಿಂದೆ ಕಾಣಲೊಡಂ ತ
ನ್ನುಮನೇನೆಂದೆಱೆಯದೆ ವಿ
ದ್ರುಮೆಯೋಷ್ಠೋಷ್ಠೆಮು......... ॥೧೦॥

ವ॥ ಮತ್ತಮೊರ್ವಳ್ ವಿದಗ್ಧವಿಲಾಸಿನಿ

ನೆಲೆಮೊಲೆಗಳ್ ಕದಕ್ಕದಿಸೆ ಮೆಲ್ಲಡಿಗಳ್ ತಡಮಾಗಿ ತೋಱೆ ಬೆ
ಬ್ಬಳ ನಡುಬಳ್ಕೆ ವೃತ್ತಕಟಿ ಕೆತ್ತೆ ಬಟಿಲ್ದುಡಿ ಜೋಲ್ದು ನೇಲೆ ಸಂ
ಚಳದಳಕಾಳಿಗಳ್ ಮಿಳಿರ್ದು ನರ್ತಿಸೆ ನರ್ತಕಿವೋಲ್ ನಿಕಾಮಕೋ
ಮಳೆ ಪರಿತಂದು ದಂಗದೊಳೆ ನಿಂದು ಕುಮಾರನನಂದು ನೋಡಿದಳ್ ॥೧೧॥

ತಳದಂದಂ ಕೆಂದಳಿರೆನೆ
ಪೊಳೆವಲರ್ಗಣ್ ಬಾಸಿಗಂಗಳೆನೆ ಕುಚಕಲಶಂ
ಕಳಶಮೆನೆ ನೋಡಿದಳ್ ಮಂ
ಗಳಲಕ್ಷ್ಮೀಲೀಲೆಯಿಂ ಕುಮಾರನನೊರ್ವಳ್ ॥೧೨॥

ಅಳುಕುವ ನಡು ಘನಕುಚಯುಗ
ನೊಳು ನಸುಸೆಳೆಯುತ್ತಮಿರ್ಪಿನಂ ರಾಗದಿನಾ
ಗಳು ನೀಡುಂ ಪರಿತಂದೊ
ರ್ವಳು ನೋಡಿದಳೊಲ್ದು ರೂಪವಿದ್ಯಾಧರನಂ ॥೧೩॥

ತಳ್ಪೊಯ್ದು ತರಳನಯನದ
ಬೆಳ್ಪು ತಳತ್ತಳಿಸಿ ಮಿಳಿರ್ದು ಪೊಳೆಯೆ ಗವಾಕ್ಷಂ
ಗಳ್ಪಜ್ವಳಿಪಿನಮಂದೊ
ರ್ವಳ್ಪರಿಕಿಸಿ ತೋರ್ದಳಭಿನವಾಂಗೋದ್ಭವನಂ ॥೧೪॥

ಪೆಱಳೊರ್ವಳ್ ನೋಟ್ಟಿಡೆಯೊಳ್
ಪೆಱಳೊರ್ವಳ್ ನಿಲೆ ಕುಮಾರನಂ ನೆಱೆ ನೋಡಲ್
ಪೆಱದೆಸೆವ ಮೀನಲೋಚನೆ
ಮಱುಗಿದಳಱುನೀರ ಮೀನ ತೆಱದಿಂದಾಗಲ್ ॥೧೫॥

ವ॥ ಮತ್ತೊರ್ವಳಭಿನವಯೌವ್ವನಮದಾವಷ್ಟಂಭೆಯುಂ ಕುಚಯುಗಕುಂಭಸಂಭೃತಕುಂಕುಮಪಂಕಾಂಕಿತೆಯುಂ ನಿರತಿಶಯರೂಪವಿಲಾಸನಿರಂಕುಶೆಯುಂ ಕರ್ಪೂರ-ಧೂಲೀಧೂಸರಿತಶರೀರೆಯುಂ ಕಾಮಿಜನಸೇನಾಮನೋಮರ್ದನಪರಿಣತೆ ಯುಮೆನಿಸಿ

ವಿನುತ ಜಘನಾಶ್ರಯಂ ಜೋ
ಲ್ದು ನಿಲೆ ಕಿಱುದೊಡೆಗೆ ನಿಗಳಮಿಕ್ಕಿದ ಗಜಮೆಂ
ಬಿನೆಗಂ ಗಜಗಾಮಿನಿ ಬಂ
ದು ನೋಡಿದಳ್ ಭವ್ಯಸೇವ್ಯಚಿಂತಾಮಣಿಯಂ ॥೧೬॥

ವ॥ ಮತ್ತೊರ್ವಳತಿಗರ್ವಪರ್ವತಾರೂಢೆ

ಮನಸಿಜನಂ ಮರುಳ್ಚುವೆನನಂಗನನಂಜಿಸುವೆಂ ಮನೋಜನಂ
ಮನೆವೆಸಕೆಯ್ಸುವೆಂ ಮದನನಂ ಮದಗರ್ವದಿನಾಳ್ವೆನೆಂಬ ತ
ಕ್ಕಿನ ಸೊಬಗಿಂಗಿಮಿಕ್ಕೆನೆಲೆಯಾದ ವಿಲಾಸಿನಿ ಬಂದು ನಿಂದು ಭೋಂ
ಕೆನೆ ನೆಱೆ ಸೋಲ್ತು ಮೆಯ್ಮಱೆದು ಮೆಲ್ಲನೆ ನೋಡಿದಳಾ ಕುಮಾರನಂ ॥೧೭॥

ವ॥ ಮತ್ತಮೊರ್ವಳ್ ಕಂದರ್ಪವಿಜಯಕದಲಿಕಾವಿಲಾಸಮಂ ತಾಳ್ದಿ

ನುತಕಾಂಚೀದಾಮಮಂ ಕೋಮಲ ಕರಯುಗಳಂ ಕೆನ್ನೆಯಂ ವಿಭ್ರಮಭ್ರೂ
ಲತೆ ಬೆನ್ನಂ ಕೇಶಪಾಶಂ ನೊಸಲನೆಸೆವ ನೀಲಾಲಕಂ ಮೇಲುದಂ ವಿ
ಶ್ರುತಲಕ್ಷ್ಮೀಪೂರ್ಣ್ಣಕುಂಭೋಪಮಕುಚಮಲೆಯುತ್ತಿರ್ಪಿನಂ ವೈಶ್ಯವಂಶೋ
ರ್ಜಿತನಂ ಶ್ರೀರೂಪಕಂದರ್ಪನನನುನಯದಿಂ ನೋಡಲೆಯ್ತಂದಳೊರ್ವಳ್ ॥೧೮॥

ವ॥ ಮತ್ತಮೊರ್ವಳ್ ವಿಮುಗ್ಧೆ ರೂಪವಿದ್ಯಾಧರನ ರೂಪಾತಿಶಯವಿಲೋಕನಮಾತ್ರದಿಂ ನೇತ್ರಾಂಬುಜಪತ್ರಂಗಳಂ ಕರತಳಪಲ್ಲವಂಗಳಿಂ ಮುಚ್ಚಿ ಮನಃಸಂಕಲ್ಪಸಂಪರ್ಕಸಂಭೋಗಸುಖಾಸಕ್ತೆಯಾಗಿರ್ಪುದುಮಾಕೆಯ ಕೆಳದಿ ಕಂಡು ವಿಸ್ಮಯಾಪನ್ನಮಾನಸೆಯಾಗಿ

ಸುದತೀ ಕಣ್ಗಳನೇಕೆ ಕೈಯತಳದಿಂ ಮುಚ್ಚಿರ್ಪೆಯೆಂದಾಗಳೀ
ಮದನಂ ಪೊಕ್ಕು ಮದೀಯ ನೇತ್ರಯುಗಳ ದ್ವಾರಂಗಳಿಂ ಚಿತ್ತಗೇ
ಹದೊಳೋತಿರ್ದವನೆನ್ನ ಕಣ್ದೆಱೆಯೆ ತದ್ವಾರಂಗಳಿಂ ಪೋಕುಮೆಂ
ಬುದನೆನ್ನೊಳ್ ಬಗೆದೀಗಳಕ್ಷಿಯುಗಮಂ ಮುಚ್ಚಿರ್ದೆನುಂತಿರ್ಪೆನೇ ॥೧೯॥

ವ॥ ಎಂದು ತನ್ನ ವಿಮುಗ್ಧಸ್ವಭಾವಮಂ ನಲ್ಮೆಯಳಿಪಿನಲಂಪಲಿಕೆಯುಮಂ ತೋಱೆ ನುಡಿವುದುಂ ಮತ್ತೊರ್ವಳ್

ಮಣಿಮಯಭಿತ್ತಿಯೊಳ್ಪೊಳೆದು ತೋರ್ಪ ಕುಮಾರನ ರೂಪನಾಗಳಾ
ಕ್ಷಣದೊಳೆ ನೋಡಿ ಪೊರ್ದಿದೊಡೆ ತನ್ನಯ ರೂಪಿದಿರಾಗಿ ಭಿತ್ತಿಯೊ
ಳ್ಮಣೆಯದೆ ಭಿತ್ತಿವೆತ್ತಸೆದು ತೋರ್ಪುದುಮೆನ್ನಸಮಾನಮಪ್ಪವಳ್
ಸೆಣಸಿದೊಳೆನ್ನೊಳೆಂಬ ಭಯದಿಂದಮೆ ಪೊರ್ದಳೆ ರತ್ನಭಿತ್ತಿಯಂ ॥೨೦॥

ಕೆಲ್ಲಯಿಸಿ ಕೆಲಕೆ ತೊಲಗುತು
ಮಲ್ಲಲ್ಲಿಗೆ ನಿಂದು ತತ್ಕುಮಾರಕನಂ ನೋ
ಟ್ಪಲ್ಲಿ ಮನೋಜನ ದೀವದ
ಪುಲ್ಲೆಗಳೆನಿಸಿದವು ನೆರೆದ ಪೆಂಡಿರ ತಂಡಂ ॥೨೧॥

ಮಱುಗಿ ಕುಸುಮಾಸ್ತ್ರನಿಚಯಂ
ನೆಱೆಗೊಳೆ ನೆಱೆ ಸೋಲ್ತು ಕಾಮಪರಿತಾಪಂ ಕ
ಣ್ದೆಱೆದಂತಾಗೆ ಕುಮಾರನ
ನೊಱಲ್ದು ನೋಡಿದರನಂಗನೆಂದಂಗನೆಯರ್ ॥೨೨॥

ವ॥ ಇಂತು ನಗರನಾರೀಜನಂ ಕೌವ್ವರೆಗೊಂಡು ನೆರದು ನೋಡುತ್ತಿರ್ಪುದುಮನ್ನೆಗಂ ಯಶೋಭದ್ರಾಂಬಿಕೆ ರಾಜಾಧಿರಾಜಂಗೆ ವಿನಯವಿನಮಿತೋತ್ತಮಾಂಗೆಯಾಗಿ ಕೈಗಳಂ ಮುಗಿದು ನಿಂದಿರ್ದು ದೇವರಿಂದು ನಿಮ್ಮ ತಮ್ಮನಗೋಷ್ಠಿಯೊಳಾ ರೋಗಿಸಲ್ವೆಜಯಂಗೆಯ್ಯೆ-ಮೆಂದೊಡಂಬಡಿಸಿದಾಗಳ್

ನರಪತಿ ಬಿರ್ದಿನನೆಂದಾ
ದರದಂ ಗೃಹಲಕ್ಷ್ಮೀ ಬೋನಮೆತ್ತಿದುದೆಂಬಂ
ತಿರೆ ಚೋದ್ಯಮಪ್ಪಿನಂ ಬಿ ।
ತ್ತರದೆತ್ತಿದ ಬೋನದಿರವು ಚೆಲ್ವಾಯ್ತಾಗಳ್ ॥೨೩॥

ಅನತಿಶಯಭೋಜನಾಂಗಾ
ವನಿಜದ ವಿರಚನೆಯಿನೆಸೆದ ತೆಱದಿಂದೆ ಕನ
ತ್ಕನಕಮಿರಜತಮಯಭಾ
ಜನಂಗಳೆಸೆದವು ವಿಚಿತ್ರತರಮಪ್ಪಿನೆಗಂ ॥೨೪॥

ಪರಿವ ಕರೆವೆರೆವ ಸೂಱಾ
ಯ್ತರ ಸೂಳುಗಳ್ತುಱುಂಗಿದಚ್ಚುಳಾ
ಯ್ತರ ಕಳಕಳರವದಿಂ ಭೋ
ರ್ಗರೆದುಲಿವಂಬುಧಿಯನಂತದೇಂ ಮಸುಳಿಸಿತೋ ॥೨೫॥

ಎಡೆವಟ್ಟಲ್ಗಡ್ಡಣಿಗೆಗೆ
ಪಡಿಗಕ್ಕೆ ತಗುಳ್ದ ಪಟ್ಟೆಯ ಬಿತ್ತರಿಗೆಗೆ ತ
ಕ್ಕೆಡೆಯಱೆದು ಪಂತಿಕಾಱರ
ನೆಡೆಯಱೆದು ವಿಲಾಸದಿಂದಮಿರಿಸಿದರಾಗಳ್ ॥೨೬॥

ತರತರದಿಂ ತುಱುಗಿದ ವಿವಿ
ಧರತ್ನಮಯಮಪ್ಪ ಪೊನ್ನ ಕುಳಿವಟ್ಟುಗಳಿಂ
ನಿರುಪಮ ಕನಕ ಸರೋಜಾ
ಕರಮಲರ್ದಂತಿರ್ದುದನ್ನವಾಸವಿಲಾಸಂ ॥೨೭॥

ಕನಕಲತಾ ಕೋಮಲೆಯರ್
ಕನಕದ ಬಟ್ಟಲ್ಗಳೊಳಗೆ ತಂದೆಱೆದಲ್ ತೊ
ಟ್ಟನೆ ಪೊಂಗೆ ಕಂಪು ಪುಟ್ಟಿ
ತ್ತೆನೆ ಸುರಭೀಕೃತಮಲಮಲ ಸುರಭೀಘೃತಮಂ ॥೨೮॥

ಅಪರಿಮಿತಮೆನಿಸೆ ಚಿಂಬೊ
ನ್ನ ಪರಿಯಣದ ಬಳಸಿ ಬಣ್ಣವಣ್ಣಿಗೆಗಳೊಳಾ
ದುಪದಂಶಂಗಳ್ ತುಱುಗಿದ
ವು ಪತ್ರ ಶಾಕಂಗಳಿಷ್ಟತುಷ್ಟಿಕರಂಗಳ್

ವ॥ ಅಂತು ಪೊನ್ನಡ್ಡಣಿಗೆಗಳ ಮೇಲಳಂಕರಿಸಿದ ಚಿಂಬೊನ್ನ ಪಿರಿಯ ಪರ್ಯಣಂಗಳಿಂ ಪೊಂದಾವರೆಗೊಳನಲರ್ದಂತೆ ವಿರಾಜಿಸುತಿರ್ದ ಭೋಜನಲಕ್ಷ್ಮೀವಿಳಾಸ ಭವನಕ್ಕಾ ರಾಜಹಂಸನುಂ ಪರಮಜಿನಮತಾಂಭೋಜಿನೀ- ರಾಜಹಂಸನುಂ ರಾಜಹಂಸ ಲೀಲೆಯಿಂ ಬಿಜಯಂಗೆಯ್ದು ಮಣಿಕುಟ್ಟಿಮತಳ- ದೆಡೆಯಱೆದಿರಿಸಿದ ಕನಕ ಭಾಜನಂಗಳ ಪೊರೆಯೊಳಾ ಸೌಖ್ಯಭಾಜನಂಗಳ ಪಟ್ಟೆಯಿಲ್ಲದ ಪಟ್ಟೆಯ ಬಿತ್ತರಿಗೆಗಳ ಮೇಲೆ ಕುಳ್ಳಿರ್ಪುದುಂ ಬಾಣಸಿಗೆಯರ್ ಪಿಂಡುಗಂಕಣಂಗಲಂ ನೂಂಕಿ ನೂಲ ತೊಂಗಲನೆತ್ತಿ ಪೊನ್ನಸಟ್ಟುಗಮಂ ಮುತ್ತಿನ ಪಡಲಿಗೆಗಳುಮಂ ಪಿಡಿದಮೃತರಸ ಪೂರಂಗಳೆನಿಸುವ ಘೃತಪೂರಂ ಗಳುಮನಮರ್ದಿನುಂಡಿಗೆಗಳೆನಿಸುವ ಪಾಲುಂಡೆಗಳುಮನತಿಮೃದುಲಲಿತ- ಕೋಮಲತಲ ಸಂಗಮಾತ್ರದ್ರಾವಣಿಯಪ್ಪ ಶಾಕವರ್ತಿಗೆಗಳುಮಂ ಪಾಲ್ಗಡಲನೊರೆಯ ಪೊರೆಯ ತೆರೆಯುನನುಕರಿಸಿ- ಯುಮಲ್ಪದಶನದಂಶ ಮಾತ್ರಖಂಡನೀಯಕರಂಗಳೆನಿಸಿದ ಮಂಡಕಂಗಳುಮಂ ತವರಾಜಬಂಧದೊಳಂದಂಬೆತ್ತ ಲಡ್ಡುಗೆಗಳುಮಂ ಸುಗಂಧಿಪರಿಮಳಾನೂನಮಪ್ಪ ಹಯ್ಯಂಗವೀನಮುಮನರಸಂಗಂ ಪಂಕ್ತಿಯೊಳುಣ್ಬ ಪರಿಜನಕ್ಕೆಲ್ಲಂ ಬಡ್ಡಿಸಿದಾಗಳ್

ಎಳಮಾವಿನ ಮಿಡಿ ಮಾಗುಳಿ
ಮೆಱಸಿನ ಕರೆಬೆತ್ತಲಟ್ಟೆಯೀಳೆಯಗೊಲೆಯಿಂ
ದಳವಟ್ಟಿರೆ ಲಾವಣಕಂ
ಗಳನಿಕ್ಕಿದರಾಗಳಟ್ಟುಯಿಂದಂಗನೆಯರ್ ॥೩೦॥

ಇದು ಬಾಱಿಸ್ಕೊಸರಿದು ಕಱಲಿಂ
ತಿದು ರುಚಿವೆತ್ತಿರ್ದ ಪಾನಮಿದು ಮಜ್ಜಿಗೆ ತಾ
ನಿದು ಶಿಖರಿಣಿಯೆನುತುಂ ತಿಂ
ಬಿದಿಂಬಿ ತಂದೆಱೆದರಬಲೆಯರ್ ಸಿರ್ಪುಂಗಳಿಂ ॥೩೧॥

ವಿಲಸತ್ಪ್ರತಿಭಾತೇಜೋ
ಬಲಾಯುರಾರೋಗ್ಯ ಪುಷ್ಟಿಬಹುತುಷ್ಟಿಕರಂ
ಗಳನಮೃತಸಮಾನಾನ್ನಂ
ಗಳನಟ್ಟಿಯೊಳಾಗಳರಸನಾರೋಗಿಸಿದಂ ॥೩೨॥

ವ॥ ಅಂತು ನಾನಾವಿಧಭಕ್ಷ್ಯೋಪದಂಶಾನ್ನದಾನಂಗಳನಮೃತೋಪಮಾನಂಗಳನಾರೋಗಿಸಿದಿಂ ಬೞಿಕ್ಕೆ ಕರಗವಳನೆಱಿದ ಚಂದ್ರಕಾಂತದ ಕರಗದ ಹಿಮಶಿಶಿರಸುರಭಿವಾರಿಯಿಂ ಕರತಲಪ್ರಕ್ಷಾಲನಂಗೆಯ್ದು ಸುಗಂಧಭಂಡಾರಿಗರ್ ವಿರಚಿಸಿ ತಂದು ಮುಂದಿಟ್ಟ ಘನಸಾರ ಗೋಶೀರ್ಷ ಚಂದನಸಾರ ಕಾಶ್ಮೀರ ಕಾಲಾಗರು ಕಸ್ತೂರಿ ಕಾಸಾರ ವಿವಿಧವಿಲೇಪನಂಗಳಿಂ ಮೆಯ್ಯಂ ತಿಮಿರ್ದ್ದು ಯಕ್ಷಕರ್ದಮದ ಕೈಘಟ್ಟ ಯೊಳಂಗಯ್ಯಂ ತಿಮಿರ್ದು ಮಾಲೆಗಾಱರ್ ತಂದವಟ್ಟೈಸಿದ ಸುರಭಿಪರಿಮಳಾಸವಾಸಕ್ತ ಭ್ರಮದ್ಭ್ರಮರಮಾಲಾವಿರಾಜಿತ ಸುಮನೋಹರಸುಮನೋಮಾಲೆಗಳಂ ತುಱುಂಬಿಕೊಂಡು ಅಡಪವಳ್ಳಂ ನೀಡಿದಾರ್ದ್ರಪೂಗೀಫಲಂಗಳುಮಂ ಮೃಗಮದಮಿಲಿತ ಖದಿರ ಗುಲಿಕಾಬಹುಲಕರ್ಪೂರಪರೀತ ಮುಖವಾಸಂಗಳುಮಂ ಕರ್ಪೂರ ನಾಗವಲ್ಲೀ ಧವಲ ಲಲಿತಂಗಳುಂಮಂ ದಿಕ್ಕರಿಕರಾನುಕಾರಿ ಕಮನೀಯುಂಗಳುಮಂ ವೀರಲಕ್ಷ್ಮೀನಿವಾಸ ತೋರಣಸ್ತಂಭಾಯಮಾನಂಗಳುಮಪ್ಪ ಸುಕೃತಿಜನಸುಕರಕರಂಗಳುಮಂ ಸೂೞಿ ಸೂೞಿದೆ ನೀಡೆ ತಂಬುಲಂಗೊಂಡು ತಾಂಬೂಲರಾಗದ್ವಿಗುಣಿತವದನಾರವಿಂದಾಮೋದರಾಗಿ ಪಕ್ಕದುಂಡ ಪರಿಜನಕ್ಕೆಲ್ಲಂ ಕರ್ಪೂರದ ತಂಬುಲಂಗುಡಲ್ವೇೞ್ದು ಕಂತುಕೈಗೆಯ್ವಂತೆ ನೆಱಿ ಕೈಗೆಯ್ದು ಮದನಮೂರ್ತಿ ಕತಿಪಯಪದಂಗಳಿಂ ವಿಹರಿಸಿ ದೂಕೂಲ ಪ್ರಚ್ಛದಾಚ್ಛಾದಿತಸುಖಾಸನಾಸೀನಂ ಮಣಿಮಯಾಸನಮನವಷ್ಟಂಭಿಸಿ ಸಮುಚಿತ ಪ್ರದೇಶದೊಳ್ ಕುಳ್ಳಿರ್ದು ಯಶೋಭದ್ರಾಂಬಿಕೆಯ ಮೊಗಮಂ ನೋಡಿ

ಎಮ್ಮನುಜನ ದಿವ್ಯಾಕೃತಿ
ಯುಮ್ಮಹಿಮೆಯುಮಖಿಲಸೌಖ್ಯಮುಂ ಭೋಗಮುಮೆಂ
ದುಮ್ಮನುಜರಳವಿಯಲ್ತೆಂ
ತುಮಲ್ತೆಂಬುಂತುಟಾದುದಿದು ಚಿಂತೆವೊಲಂ ॥೩೩॥

ವ॥ ಸಂಪೂರ್ಣಚಂದ್ರಂಗೆ ಕಳಂಕಮಾದಂತೆ ನಿಜಕುಲಗಗನಶರಚ್ಚಂದ್ರಂ ಗಾತಂಕಕಲಂಕ ಮಾದತ್ತದೆಂತೆನೆ

ಪದುಳಂ ಪೀಠಾಗ್ರದೊಳ್ಕುಳ್ಳಿರಲಱಿಯದುದುಂ ಕಣ್ಣನೀರಾಗಳುಂ ಸೋ
ರ್ವುದುಮಂತುಂಬಾಗಳೊಂದೊಂದಗುೞಿನುಗುೞುತುಂ ನುಂಗುತುಂ ಕ್ಲೇಶದಿಂದು
ಣ್ಬುದುಮುಂತುಂ ಬೆರ್ಚಿದೊಂದಂದದೊಳಿರಸದುದುಂ ವ್ಯಾಧಿಯಾದಂದಮಾಗಿ
ರ್ದುದಿದಂ ಸದ್ವೈದ್ಯರಿಂ ನೋಡಿಸಿ ಪಱಿಪಡಿಸಿಂ ನಿಶ್ಚಯಂ ಬೇಗಮಾಗಳ್ ॥೩೪॥

ಎಳವೆಯೊಳೆ ತನ್ನ ವೈರಿಯ
ಮೊಳೆಯುಮನೊಗೆತಪ್ಪ ರುಜೆಯ ಮೊಳೆಯುಮನೊಗೆದಾ
ಗಳೆ ಕಳೆಗೆ ಗೆಡ್ಡೆಗಟ್ಟಿದ
ಬೞಿಕ್ಕೆ ಕಳೆಯಲ್ಕೆ ಬಾರದೆಂಬುದುಮಾಗಳ್ ॥೩೫॥

ವ॥ ಯಶೋಭದ್ರೆ ದರಹಸಿತವದನಸರಸಿರುಹೆಯಾಗಿ ದೇವ ನಿಮ್ಮ ತಮ್ಮನಂದಮಂ ಬಿನ್ನಪಂಗೆಯ್ವೆನವಧಾರಿಸಿಮೆಂತೆಂದೊಡೀತಂ ಪುಟ್ಟಿದಂದು ಮೊದಲಾಗಿಂದು- ವರಂ ಸ್ವಾಮಿಭೃತ್ಯಸಂಬಂಧದಂದಮುಮನೊಡೆಯರ್ ಬಡವರೆಂಬ ದೇಶ ಭಾಷೆಯುಮಂ ಪಗಲಿರುಳೆಂಬ ಭೇದಮುಮನಾಶಬ್ದಮೆಂಬುದುಮಂ ದುಃಖಶೋಕಮೆಂಬ ಪಂಬಲುಮಂ ಮನೆಮನೆವಾರ್ತೆಯೆಂಬ ಚಿಂತೆಯುಮಂ ಚಾಮರದ ಗಾಳಿಯಲ್ಲದೆ ಗಾಳಿಯುಮನೇನೆಂದು ಮಱಿಯದ ಪರಮ ಗರ್ಭಸುಖಿ ಸುಖಸಂಕಥಾ ವಿನೋದಂಗಳಿಂ ಮಣಿಮಾಡದ ನೆಲೆಯನಿೞಿಯದೆ ನಿಶ್ಚಿಂತಮಿರ್ಪನಿಂದು ನೀಮಿಲ್ಲಿವರಂ ಬಂದೊಡೆ ತಾನಿಲ್ಲಿವರಂ ಬಂದನಿಂತು ನಿಮ್ಮಾಬಂದಟ್ಟೆಯೊಳಟ್ಟಿಯಿಂ ಮಂಗಳಾರ್ಥಮೆಂದು ಸಿದ್ಧಾರ್ಥದ ಸೇಸೆಗಳ- ನಿಕ್ಕಿದೊಡೆತ್ತಾನುಮುದಿರ್ದು ಬಿರ್ದ ಸಿತಸರ್ಷಪಸ್ಪರ್ಶನಿಘರ್ಷಣದಿಂ ಪದುಳಮಿರಲಱಿಯದೆ ಚಲಾಸನನಾಗಿರ್ಕ್ಕುಂ ದೀಪ್ಯಮಾನಾನೂನಶೋಣಮಾಣಿಕ್ಯದೀಪಂ- ಗಳ ಬೆಳಗನಲ್ಲದೆ ದೀಪಂಗಳ ಬೆಳಗಿನ ರೂಪಂ ಕಂಡಱಿಯದನಿಂದು ದೇವರ್ ಬಂದೊಸಗೆಯೊಳ್ ಮಂಗಳಾರತಿಗಳಂ ಬೆಳಗಿದೊಡವಱ ಬೆಂಕೆಗೆ ಕಣ್ಣನೀರ್ ಸುರಿಯುತ್ತಿರ್ಕ್ಕುಂ ಚಂದ್ರಕಾಂತ ಪಾಷಾಣ ನಾಲಿಕೇರಸಹಕಾರೇಕ್ಷುರಸಪ್ರವಾಹದಿಂ ಬೆಳೆದು ಮುಗಮುಗಿಪ ಕರ್ಪೂರಗಂಧಶಾಲ್ಯಕ್ಷತಂಗಳಂ ಮುನ್ನಿನ ದಿವಸಮೆಮ್ಮ ಗೃಹೋದ್ಯಾನವನದ ಕನಕ ಸರೋರುಹಂಗಳೆಸಟ್ಗಳೊಳಗೆ ತೀವಿ ಪೊಯ್ದು ಸೂತ್ರಾವೇಷ್ಟಿತ ಮಾತ್ರಂಗಳಾಗಿ ಮಾಡಿ ಮಱುದಿವಸಂ ಪುಷ್ಪವಾಸನೆಯ ಮೆಲ್ಪಿನ ತಣ್ಪಿನ ಕಂಪಿನಲ್ ಪೊಂಪುೞಿವೋಗು- ತ್ತಿರ್ದ ತಂಡುಲಂಗಳಂ ಕಳೆದುಕೊಂಡು ಬಾಗಿದೋಗರಮನಾರೊಗಿಸುವಂ ನೀಮಿಂದು ಬಂದೊಡವು ನೆಱಿಯವಾಗಿ ಮುತ್ತಿನೋಗರದಕ್ಕಿಯಂ ಬೆರಸಿ ಬಾಗಿದ ಕಾರಣದಿಂ ಪೂರ್ವವಾಸನಾಗುಣದಿಂ ಪುಷ್ಪವಾಸನೆಯಕ್ಕಿಯಕೂಟನುಣ್ಗುಮುೞಿದಕ್ಕಿಯ ಕೂಟನುಗುೞುತ್ತಿರ್ಕ್ಕುಂ ತನ್ನ ಪರಿಚಾರಕಜನದ ವಧೂಜನದ ಪ್ರಸಂಗಮನಲ್ಲದುೞಿದ ಜನದ ಸೋಂಕುಮಂ ಪ್ರಸಂಗಮುಮಂ ಎಂತುಟೆಂದಱಿದವನಲ್ಲಂ ದೇವರಿಂದಿಲ್ಲಿಗೆ ಬಿಜಯಂಗೆಯ್ದೊಡೆ ಜನಸಂಕೀರ್ಣ್ಣಪ್ರಸಂಗವಾಗಿರ್ದುದಱಿಂದಿನಿಸಾನುಂ ಬೆರ್ಚಿದಂತೆ ರಸದಂತಾಗಿರ್ಕ್ಕುಮಿಂತಾವತೆಱದೊಳಂ ಕಲ್ಯಾಣಶರೀರಿಯೆಂಬುದು ಮರಸನಾತನ ವಿಭೂತಿಗಾಶ್ಚರ್ಯಂಬಟ್ಟು

ಸುಕುಮಾರನೆಂಬ ಪೆಸರೀ
ಸುಕುಮಾರಂಗೀಸಮಸ್ತಧಾರಿಣಿಯೊಳ್ ಸಾ
ರ್ಥಕಮಾದುದೆಂದು ನಾನಾ
ಪ್ರಕಾರದಿಂದಂ ಪ್ರಶಂಸೆಗೆಯ್ದಂ ಭೂಪಂ ॥೩೬॥

ವ॥ ಆ ಪ್ರಸ್ತಾವದೊಳ್ ಯಶೋಭದ್ರಾಂಬಿಕೆ ದಿವ್ಯಮಣಿಗಣಾಭರಣಂಗಳಂ ದಿವ್ಯವಸ್ತ್ರಂಗಳುಮಂ ತಂದು ಮುಂದಿಟ್ಟು ನಿಂದು ನಿಮ್ಮ ತಮ್ಮನ ಭಕ್ತಿಯನವಧಾರಿಸಿಮೆಂಬುದುಮರಸನವರ ಶಕ್ತಿಗಂ ಭಕ್ತಿಗಂ ಮೆಚ್ಚಿ ತನ್ನರಮನೆಯೊಳಗನೇಕವಸ್ತುವಾಹನಂಗಳನಾಗಳೆ ತರಿಸಿಕೊಟ್ಟು ಸುಕುಮಾರಂಗೆ ತಾನವಂತೀಶ್ವರನಪ್ಪುದಱಿನವಂತಿಸುಕುಮಾರನೆಂದು ಪೆಸರನಿಟ್ಟು ಪೂಜಿಸಿ ಪಿರಿದುಬೇಗಮಿದೋಡೆ ತಮ್ಮಂ ಗುಮ್ಮಳಿಕೆಯಕ್ಕುಮೊಳಗಣ್ಗೆ ಪೋಗವೇಟಿಮೆಂದು ತಾನಾತ್ಮೀಯರಾಜಭವನಕ್ಕೆ ಪೋದನಿಂತು

ದಿವಿಜೇಂದ್ರಂಗೆತ್ತಲುಂ ವೈಭವದೊಳತನುವಿಂಗೆತ್ತಲುಂ ರೂಪಿನೊಳ್ ಕೈ
ರವಮಿತ್ರಂಗೆತ್ತಲುಂ ಕಾಂತಿಯೊಳುರಗವರಂಗೆತ್ತಲುಂ ಭೋಗದೊಳ್ ವೈ
ಶ್ರವಣಂಗೆತ್ತೆತ್ತಲುಂ ವಿತ್ತದೊಳಧಿಕನೆನುತ್ತಿರ್ಪಿನಂ ಸಂದನಿಂತೀ
ಲವಣಾಂಭೋರಾಶಿವೇಳಾವಲಯಿತಧರಣೀಚಕ್ರದೊಳ್ ತತ್ಕುಮಾರಂ ॥೩೭॥

ವ॥ ಇಂತು ಪಲವುಕಾಲಮಿಷ್ಟವಿಷಯಮಕಾಭೋಗಂಗಳನನವರತಮನುಭ- ವಿಸುತ್ತುಂ ಸುಖಮಿರ್ಪುದುಮಿತ್ತಲೊಂದುದಿವಸಮಾಷಾಢಮಾಸದ ಶುಕ್ಲಪಕ್ಷದ ಚತುರ್ದಶಿಯೊಳಪರಾಹ್ಣವೇಳೆಯೊಳ್ ಸುಕುಮಾರಸ್ವಾಮಿಗೆ ಮಾವಂದಿರಪ್ಪ ವಿಶದಯಶೋ ಭದ್ರರೆನಿಸಿದ ಯಶೋಭದ್ರಾಸ್ವಾಮಿಗಳೆಂಬ ಪರಮಾವಧಿಜ್ಞಾನಿಗಳಾ ಭವ್ಯವರಪುಂಡರೀಕನ ಭವ್ಯತೆಯ ಕಾಲಮನಱಿದಾತನ ಪೂರ್ವೋಪಾರ್ಜಿತ ಪುಣ್ಯ ಸಂಪದವೆ ಸಾರ್ಚಿದಂತೆ ಯೋಗಸಾರ್ಚಿತಬಂದು [?] ತತ್‌ಗೃಹೋದ್ಯಾನವನಮಧ್ಯ ಪ್ರದೇಶದೊಳ್ ನಿತ್ಯಪೂಜಾಖಂಡಿತಮಪ್ಪಪ ನಿತ್ಯಮಂಡಿತಜಿನಾಲಯಮಂ ಕಂಡು ಬಲಗೊಂಡು ದರ್ಶನಸ್ತುತಿಗೆಯ್ದು ಯೋಗಂಗೊಂಡಿರ್ಪುದುಂ ತದಾಗಮನವೃತ್ತಾಂತಮಂ ತದ್ವನಪಾಲಕರಱಿಪೆ ಕೇಳ್ದು ಯಶೋಭದ್ರೆ ನಾನಾವಿಧಾರ್ಚನೆಗಳ್ವೆರಸು ಬಂದು ದೇವರನರ್ಚಿಸಿ ಭಟ್ಟಾರಕರಂ ಬಂದಿಸಿ ಮುನ್ನೆ ತನಗೆ ತನಯೋತ್ಪತ್ತಿಯನಱಿಪಿದಭಿನಂದನ ಮುನೀಶ್ವರರಾದೇಶಮನಱಿವಳಪ್ಪುದಱಿಂ ಋಷಿರೂಪಕಮಾ ಪ್ರವೇಶದಳಿರ್ಪ್ಪಿರವನಿಚ್ಚೆಯ್ಸದೆ ಭಟ್ಟಾರಕರೆ ನೀಮಿಲ್ಲಿರಲ್ವೇಡ ಮತ್ತೊಂದೆಡೆಗೆ ಬಿಜಯಂಗೆಯ್ಯಿಮೆಂಬುದುಮಾ ಮಹಾಮುನೀಶ್ವರರ್

ಯೋಗಿನ ದಿವಸಂ ಸಾರ್ಚಿದು
ದಾಗಿ ಜಿನೇಂದ್ರಾಗಮೋಕ್ತಿಯಿಂದಾಮಿಾಗಳ್
ಬೇಗಂ ಚಾತುರ್ಮಾಸದ
ಯೋಗಂ ಕೈಕೊಂಡೆಮೆಂತು ಪೊಪೆಮೊ ಪೇಟಿಂ ॥೩೮॥

ವ॥ ಎಂಬುದುಮಾ ಕಾಂತೆ ಚಿಂತಾಕ್ರಾಂತೆಯಾಗಿ ತಾನಧಿಗಮಸಮ್ಯಗ್ದೃಷ್ಟಿಯಪ್ಪುದಱಿನದರ್ಕೇನುಮೆನಲಱಿಯದೆ ನಿಮ್ಮಡಿ ನೀಮಿಾ ಚಾತುರ್ಮಾಸಮಿಲ್ಲಿರ್ಪನ್ನೆಗಂ ಸ್ವಾಧ್ಯಾಯಾಧ್ಯಯನಾನುಷ್ಠಾನನಿಯಮದಿಂ ಮೋನಂಗೊಂಡಿರ್ಪುದಿದಂ ನಿಮ್ಮನಾಂ ಕಯ್ಯನೊಡ್ಡಿ ಬೇಡಿದೆನೆಂಬುದುಂ ಮುನೀಶ್ವರರೇಗೊಂಬುದುಂ ಯಶೋಭದ್ರೆಯುಂ ನಿಶ್ಚಿಂತಾಂತರಂಗೆಯಾಗಿ ಸಂತೊಸದಿಂ ನಿಜಾವಾಸಕ್ಕೆವೋದಳಿತ್ತಲಾ ಮುನಿಜನವನಕೋಕಿಳನಾ ಗೃಹೋದ್ಯಾನವನದೊಳ್

ಮೇಘಾಗಮ ಕೋಕಿಲಮೆಂತಂತಾ ಮೇಘಾಗಮದೊಳ್ ಮೌನವ್ರತದೊಳಿರ್ದು ಕಾರ್ತಿಕ ಮಾಸದ ಪೌರ್ಣಮಿಾದಿನದೊಳ್ ಸುಕುಮಾರನ ಮೋಹಬಂಧದ ಬಳ್ವಳ್ಳಿಯ ತೊಡರ್ಪಂ ಪಱಿಪಡೆ ಬಿಡಿಸುವಂತೆ ಯೋಗವಿಡಿಸಿ ತಜ್ಜಿನೇಂದ್ರಗೇಹದೊಳರ್ಧ ರಾತ್ರದೊಳ್ ಸ್ವಾಧ್ಯಾಯಂಗೊಂಡು ತ್ರಿಲೋಕ ಪ್ರಜ್ಞಪ್ತಿಯಂ ಪರಿವಡಿಗೆಯ್ವಾಗಳ್

ಅಂಬುದನಿನದಾಡಂಬರ
ಮಂಬರದೊಳಳುಂಬಮಾಗಳೆಸೆದಪುದೆನೆ ಬೇ
ಗಂ ಬಳ್ವಳನೆಸೆದುದು ಭೋ
ರೆಂಬಿನಮಾ ಮುನಿಮುಖಾಭ್ರವಿಭ್ರಮನಿನದಂ ॥೩೯॥

ಎಸೆದಿರೆ ಲೋಕವಿಭಾಗ
ಪ್ರಸರಪ್ರವಿಭಾಗಮಂ ಸವಿಸ್ತರಮಭಿವ
ರ್ಣಿಸಲಸದಳಮಿನಿಸಂ ಸೂ
ಚಿಸುವೆಂ ಕರಣಾನುಯೋಗಸಾಗರಲವಮಂ ॥೪೦॥

ನುತವೇತ್ರಾಸನಝಲ್ಲರೀಮೃದಂಗಾಭಂ ತ್ರಿವಾತಾಭಿವೇ
ಷ್ಟಿತಮುತ್ಪತ್ತಿಲಯೇತರಂ ಸಕಲಜೀವೋತ್ಪತ್ತಿಸಂಸ್ಥಾನಮೂ
ರ್ಜಿತಮತ್ಯಾಯಮಪ್ರಮೇಯಕಮಧೋಮಧ್ಯೋರ್ಧ್ವಭೇದಂ ಜಗ
ತ್ರಿತಯಂ ನಿಂದುದು ತಾನನಾದ್ಯನಿಧನಂ ಸ್ವಾಭಾವಿಕ ನ್ಯಾಯದಿಂ ॥೪೧॥

ವ॥ ಇಂತಕೃತ್ರಿಮಮುಂ ಷಡ್ದ್ರವ್ಯಸಂಕೀರ್ಣಮುಂ ಚತುರ್ದಶರಜ್ಜೂತ್ಸೇಧ ಮುಮಪ್ಪುದದಱಿೊಳಧೋಲೋಕಮೆಂಬುದು ಚಿತ್ತೆಯೆಂಬ ಧಾತ್ರಿಮೊದಲ್ಗೊಂಡು ಕೆಳಗತೀತಸಹಸ್ರೋತ್ತರಲಕ್ಷ ಯೋಜನಬಾಹುಲ್ಯಮನಾಂತು ರತ್ನಪ್ರಭೆಯೆಂಬ ಪೃಥ್ವಿಯಿರ್ಕ್ಕುಮಾ ಪೃಥ್ವಿ ವಜ್ರಖರ ಪಂಕ ಜಲಬಹುಳಭಾಗದಿಂ ತ್ರಿವಿಧಮಕ್ಕುಮಲ್ಲಿ ಖರಭಾಗಂ ಪದಿನಾಱುಸಾಸಿರಯೋಜನಂ ಪಂಕಭಾಗಮೆಣ್ಬತ್ತನಾಲ್ಕು ಸಾಸಿರಯೋಜ ನಂ ಜಲಬಹುಲಭಾಗಮೆಣ್ಬತ್ತುಸಾಸಿರಯೋಜನಮಕ್ಕುಮವಱಿೊಳ್ ಖರಭಾಗ ಪಂಕಭಾಗದೊಳಗೆ ಭವನಾಮರಲೋಕಮಿರ್ಕ್ಕುಮಲ್ಲಿಯ ಸುರನಾಗವಿದ್ಯುತ್ಸುಪರ್ಣಾಗ್ನಿ ವಾತಸ್ತನಿತೋದಧಿದ್ವೀಪದಿಕ್ಕುಮಾರರೆಂದು ಭವ ನಾಮರರ್ದಶವಿಕಲ್ಪಮಪ್ಪರ್ ಅವರ್ಗೆೞುಕೋಟಿಯುಮೆಪ್ಪತ್ತೆರಡುಲಕ್ಕೆಭವನಂಗಳುಮಕ್ಕುಮಲ್ಲಿ ಖರಭಾಗದೊಳ್ ನಾಗಕುಮಾರರ್ಗೆ ಮೂಱುಪಳಿತೋಪಮಮುಂ ಸುಪರ್ಣ ಕುಮಾರರ್ಗೆರ ಡುವರೆಪಳಿತೋಪಮಮುಂ ದ್ವೀಪದಿಕ್ಕುಮಾರರ್ಗೆರಡು ಪಳಿತೋಪಮ ಮುಮುೞಿದವರ್ಗೆಲ್ಲಮೊಂದುವರೆ ಪಳಿತೋಪಮಮುತ್ಕೃಷ್ಟಸ್ಥಿತಿಯಿನಾಯು ಷ್ಯಪ್ರಮಾಣಮವರ್ಗೆಲ್ಲಂ ದಶಧನೂತ್ಸೇಧಂಗಳಕ್ಕುಂ. ದ್ವಿತೀಯಭಾಗದೊಸುರಕುಮಾರರ್ಗೆ ಅಱುವತ್ತುನಾಲ್ಕುಲಕ್ಕೆ ಭವನಂಗಳಕ್ಕುಂ. ಪಂಚವಿಂಶತಿಚಾಪೋತ್ಸೇಧಮು

ಮೇಕಸಾಗರೋಪಮಾಯುಷ್ಯಮಕ್ಕುಮಲ್ಲಿಂ ಕೆಟಗೆಣ್ಬತ್ತು ಸಾಸಿರಯೋಜನಾಂತರದೊಳ್ ಜಲಬಹುಳಭಾಗದೊಳ್ ಮೊದಲ ನರಕಮಲ್ಲಿಂ ಕೆಟಗೇಕರಜ್ವಂತರದೊಳ್ ಮೂವತ್ತಿರ್ಚ್ಛಾಸಿರಯೋಜನಬಾಹಲ್ಯದಿಂ ಶರ್ಕರಾಪ್ರಭೆಯೆಂಬೆರಡನೆಯ ನರಕಮಲ್ಲಿಂ ಕೆಟಗೇಕರಜ್ವಂತರದೊಳಷ್ಟ ವಿಂಶತಿಸಹಸ್ರಯೋಜನಬಾಹಲ್ಯದಿಂ ವಾಳುಕಾಪ್ರಭೆಯೆಂಬ ಮೂಱನೆಯ ನರಕಮಲ್ಲಿಂದತ್ತಲೇಕರಜ್ವಂತರದೊಳಿರ್ಪತ್ತು ನಾಲ್ಕು ಸಾಸಿರಯೋಜನಬಾಹಲ್ಯದಿಂ ಪಂಕಪ್ರಭೆಯೆಂಬ ನಾಲ್ಕನೆಯನರಕಮಲ್ಲಿಂದತ್ತಲೇಕರಜ್ವಂತರ ದೊಲಿರ್ಪತ್ತುಸಾಸಿರ ಯೋಜನಬಾಹಲ್ಯದಿಂ ಧೂಮಪ್ರಭೆಯೆಂಬಯ್ದನೆಯನರಕ ಮಲ್ಲಿಂದತ್ತಲೇಕರಜ್ವಂತರದೊಳ್ ಪದಿನಾಱುಸಾಸಿರಯೋಜನಬಾಹಲ್ಯದಿಂ ತಮಃಪ್ರಭೆಯೆಂಬಾಱನೆಯನರಕಮಲ್ಲಿಂದತ್ತಲೇಕರ-ಜ್ವಂತರದೊಳಷ್ಟಸಹಸ್ರಯೋ ಜನಬಾಹುಲ್ಯದಿಂ ಮಹಾತಮಃಪ್ರಭೆಯೆಂಬೇೞನೆಯ-ನರಕಮಿರ್ಕ್ಕುಮಲ್ಲಿ ಮೇಗಣ ನಾಲ್ಕುವರೆನರಕಂಗಳತ್ಯುಷ್ಣಂಗಳ್ ಕೆಟಗೆರಡುವರೆನರಕಂಗಳತಿ-ಶೀತಲಂಗಳಕ್ಕುಮವಱೊಳೆ ಯಥಾಕ್ರಮದಿಂ ತ್ರಿಂಶಲ್ಲಕ್ಷಮುಂ ಪಂಚವಿಂಶತಿಲಕ್ಷಮುಂ ಪಂಚದಶಲಕ್ಷಮುಂ ದಶಲಕ್ಷಮುಂ ತ್ರಿಲಕ್ಷಮುಂ ಪಂಚೋನೈಕಲಕ್ಷಮುಂ ಪಂಚಲಕ್ಷಮುಂ ಬಿಲಂಗಳಕ್ಕುಮಾ ನರಕಬಿಲಂಗಳೆಲ್ಲಮೆಣ್ಬತ್ತುನಾಲ್ಕುಲಕ್ಷ ಪರಿಪ್ರಮಾಣಮಾಗಿಯುಮಿಂದ್ರಕ ಶ್ರೇಣಿಬದ್ಧ ಪ್ರಕೀರ್ಣಕಂಗಳೆಂದು ಮೂಱು ತೆಱನಕ್ಕುಮವಱ ಮೇಗಳಟ್ಟುಗಳೊಲಿಟ್ಟ ಜೇನಪುಟ್ಟಿಗಳುಮಂ ಕಾಕೋಳೂಕಸೃಗಾಲಶಾರ್ದೂಲೋಷ್ಟ್ರಖರಮುಖಂಗಳನನುಕರಿಸುವ ಮಹಾಭೀಭತ್ಸು ಕುತ್ಸಿತೋತ್ಪತ್ತಿಸ್ಥಾನಂಗಳೊಳುತ್ಕೃಷ್ಟ ಕೃಷ್ಣನೀಲಕಪೋತಲೇಸ್ಯಾನುಬಂಧ ರೌದ್ರ ಪರಿಣಾಮಪರಿಣತರುಂ ಬಹ್ವಾರಂಭಪರಿಗ್ರಹಗ್ರಸ್ತರುಮನಂತಾನುಬಂಧಿಕ್ರೋಧ ಮಾನಮಾಯಾಲೋಭಾಭಿಭೂತರುಮಪ್ಪ ಮಹಾಪಾಪಿಜೀವಂಗಳ್ ಕಾಲು ಮೇಲಾಗಿ ನೆಲಸಿದಂತರ್ಮುಹೂರ್ತಮಾತ್ರದೊಳಗೆ ಷಟ್ಪರ್ಯಾಪ್ತಿಗಳ್ನೆಱೆದು ವಿವಿಧನಿಶಿತ ನಿಸ್ತ್ರಿಂಶಂಗಳ ಮೇಗೆ ಪಱಿವಱಿಯಾಗಿ ಬಿರ್ದು ಸೇದೆವಟ್ಟ ನವನಾರಕರಂ ಪುರಾಣ ನಾರಕರ್ಕಂಡು

ಇಱಿಇಱಿ ಕಡಿಕಡಿ ಸುಡುಸುಡು
ಕೊಱಿ ಕೊಱಿ ಸೀಳ್ಸೀಳೆನುತ್ತೆ ನಾರಕರೈತಂ
ದಿಱಿವರ್ಕಡಿವರ್ಸುಡುವ
ಕೊರ್ಱಿವರ್ಸೀಱಿಳ್ವರ್ತಗುಳ್ದು ನವನಾರಕರಂ ॥೪೧॥

ವ॥ ಅಂತತಿ ಕಠೋರನಿಷ್ಠುರವನಂಗಳಿಂ ಗಜಱಿ ಗರ್ಜಿಸುತ್ತುಂ ಸುತ್ತಿಮುತ್ತಿಪತ್ತಿದಾಗಳ್ ದೆಸೆಗಳೆ ನುಂಗುವಂತಾಗೆ ಆಗಸಮೆ ಮೇಲೆ ಕೆಡೆವಂತೆ ನೆಲಂ ಪೆಡಂಮಗುಟ್ಟು ಕವಿದಿಕ್ಕಿದಂತೆ ತೊಟ್ಟನೆ ಪುಟ್ಟಿದತಿಭಯದಿಂ ವಿಭಂಗಮನರಾಗಿ ಪೂರ್ವಭವಪ್ರತ್ಯಯದಿಂ ಪುಟ್ಟಿದ ವಿಭಂಗಜ್ಞಾನದಿಂದವಗತನರಕ ಲೋಕವೃತ್ತಾಂತರಾದಿಂಬೞಿಯುಮೊರ್ರೊರ್ವರ ನೆಱಿಂಗಳುಮನನ್ಯೋನ್ಯ ಬದ್ಧವೈರಕಾರಣಂ ಗಳುಮಂ ಮೂದಲಿಸುತ್ತುಂ

ಅಡಗಿನ ಕಡುವೆಸನಿಗ ತಿ
ನ್ನಡಗಂ ನಿನ್ನಡಗನೆಂದು ಪೇಸೇೞ್ವನೆಗಂ

ಸಿಡಿಖಂಡಂಗೊಂಡುಗಿಬಗಿ
ದಿಡಿದಿಡಿದೆಡೆವಿಡದ ಕೂಱುಗೊಳ್ವರ್ ಬಾಯೊಳ್ ||೪೨||

ಅಪ್ಪಲೆ ನೀಂ ಪರವೆಣ್ಗಳ
ನಪ್ಪುವುದನೆ ಬಯಸುತಿರ್ಪೆಯಪ್ಪೆಂದು ಕರಂ
ಚಪ್ಪರಿಸಿ ನಾರಕರ್ ತಂ
ದಪ್ಪಿಸುವರ್ ಕಾಯ್ದಲೋಹಮಯಪುತ್ರಿಕೆಯಂ ||೪೩||

ಚುಟ್ಟಿದ ತೆಱದಿಂ ಪುಸಿಗಳ
ನುಟ್ಟುವನಿವನೆಂದು ಕಾಯ್ದ ಕರ್ಬುನದಿಂದಂ
ಚುಟ್ಟಿ ಪೆಡತಲೆಯ ತೂಂತಿಂ
ದುಟ್ಟುವರಿಕ್ಕುೞಿಸಿ ನಾರಕರ್ ನಾಲಗೆಯಂ ||೪೪||

ಮಧುಮದ್ಯದ ಬಸನಿಗ ಕುಡಿ
ಮಧುಮದ್ಯಮನೆಂದು ಸಪ್ತಧಾತುದ್ರವಮಂ
ವಿಧಿಯಿಂ ತಂದೆಱಿವರ್ ಸ
ಪ್ತಧಾತುಗಳ್ ಕರಗುವಿನೆಗ ವಿಕ್ರೆಯೆಯಿಂದಂ ||೪೫||

ಮೇಳಿಸಿ ಜೀವಾವಳಿಗಳ
ತಾಳಿಸುವರನಚ್ಚಗೆಂಡದೊಳ್ ಕಾವಲಿಯೊಲ್
ತಾಳಿಸುವರ್ ಸಲೆ ಕಳ್ಳಂ
ಗಾಳಿಸುವರ ನೆಣದ ನೆತ್ತರಂ ಗಾಳಿಸುವರ್ ||೪೬||

ಪೆಱರಂ ಛಿದ್ರಿಸುವವರಂ
ಕೊಱಿಕೊಱಿದರ್ದೆಗಬ್ಬಲಪ್ಪಿನಂ ಛಿದ್ರಿಸುವರ್
ಮಱುಗುವ ತೃಷ್ಣಾತುರರಂ
ಮಱುಗಿಸುವರ್ ನೆಱಿಯೆ ಮಱುಗಿ ಕುದಿವೆಣ್ಣೆಗಳೊಳ್ ||೪೭||

ಮ|| ಮತ್ತಮತಿವಿಕಟಶಾಲ್ಮಲಿವಿಟಪಿಯೊಳಿದಿರುಂ ಬೞಿಯುಮುರ್ಚುವುದುಂ ಕೊಳ್ಳಿಯೊಳ್ ಪಿರಿದುಂ ಚುಚ್ಚುವುದುಂ ಕಾಯ್ದೋಡಿನೊಳ್ಪುರಿವುದುಂ ಮೊರ್ಮರಾಗಿ ಕರಿವುದುಂ ಚಿಮಿಚಿಮಿಸೆ ತಾಳಿಸುವುದುಂ ಇಕ್ಷುಯಂತ್ರಂಗಳಿಂ ಪಿೞಿವುದುಂ ಬಸಿದ ದಸಿಯೊಳ್ ತೆಗೆವುದುಂ ಕಬ್ಬುವನದ ದಬ್ಬಣಂಗಳಂ ದಬ್ಬುಕದ ಡಂಗೆಗಳಿಂ ಬೆರಲ್ಗಳೊಳಡಂಗೆ ಬೆಟ್ಟುವುದುಂ ಪಲ್ಗಳಂ ನುರ್ಗ್ಗುಗುಟ್ಟುವುದುಂ ಕೈಗಳಂ ಗೊಟ್ಟಂಗೊಱಿವುದುಂ ಬಾಯಂ ಬಳ್ಳಂಗೊಱಿವುದುಂ ಕಯ್ಯಾಣದೊಳಿಕ್ಕಿ ಗಾಣವಾಡುವುದುಂ ಕರುಳಂ ತೋಡುವುದುಂ ಸುಱ್ಱಸುಱ್ಱನೆ ಬಡಿತಂ ಗಾಸುವುದುಂ ಕರ್ಕಶ ಕ್ಷಾರವಾರಿಯಂ ತಂದು ಸಱ್ಱಸಱ್ಱನೆ ಪೂಸುವುದುಂ ಮಿಡುಕೆಮಿಡುಕೆ

ಪುಟಪಾಕದಿಂ ಸುಡುವುದುಂ ಮುಂಬರಂಬರಂಗುಂಗಮಿಡುವುದುಂ ತಳ್ತಳಗುದಿದೆಣ್ಣೆಯೊಳ್ ಬಱಲೆತೆಗೆವುದುಂ ಕೈದುಗಳೊಳುಱ ನೆಗಪುವುದುಂ ಸಂಧಿಸಂಧಿಗಳಂ ಗಂಟುಗಡಿವುದುಂ ತಡಂಗಡಿವುದುಂ ಅಸಿಪತ್ರವನದೊಳೊಳಿಕ್ಕಿ ಗುರ್ದುವುದುಂ ಪರಿವ ವೈಕರಣಿಯ ಮಡುಗಳೊಳ್ ಪುಡುಕುನೀರರ್ದುವುದುಂ ಮಗುಟ್ದುಪೂಱುವುದುಂ ಸೌಳನೆ ಸೀಳ್ವುದುಂ ಕುಕ್ಕುಟಗುದಿವ ವಜ್ರದ ಮೂಷೆಯೊಳಿಕ್ಕಿ ಕರಗಿಸುವುದುಂ ನಟ್ಟು ಪರಗುವುದುಂ ಕೊಂದು ಕೂಗುವುದುಂ ತಿಂದುತೇಗುವುದುಂ ಎಂದಿವು ಮೊದಲಾದ ಪಲವುಂ ತೆಱದ ದಾರುಣೋದಗ್ರನಿಗ್ರಹವಿಗ್ರಹಕ್ಕೆ ತಮ್ಮ ವಿಗ್ರಹಂಗಳನೊಡ್ಡಿ ಶಾರೀರಂ ಮಾನಸಂ ಕ್ಷೇತ್ರಜಂ ಪರಸ್ಪರೋದೀರಿತಂ ಸಂಕ್ಲಿಷ್ಟಾಸುರೋದೀರಿತಂಗಳೆಂಬಪಂಚಪ್ರಕಾರ ದುಃಖಂ ಗಳನನೇಕ ಪ್ರಕಾರದಿನನುಭವಿಸುತ್ತಮರ್ಧ ನಿಮಿಷಮಾತ್ರಮಪ್ಪೊಡಮುಸಿರ್ಪ [ತ್ತಂ] ಬಡೆಯದೆ ವಮುನ್ನೆ ತಮ್ಮ ನೆರಪಿದಾಯುಃಷ್ಯಾಂತಂಬರಂ ಸಣ್ಣಗೆಯೊಳ್ ಸಣ್ಣ ಮಾಗರದೆಯು ಸಣ್ಣಿಸಿದೊಡಮವಂದಿರ ವೈಕ್ರಿಯಕಶರೀರಂಗಳ್ ಪಾದರಸದ ಮಾರ್ಗದಿಂ ಪತ್ತು ತ್ತುಮಿರ್ಕುಂ ಮೊದಲನಾರಕರ ದೇಹೋತ್ಸೇಧಮೇೞುಬಿಲ್ಲು ಮೂಱುಮೊೞನು ಮಾಱಂಗಲುಲಮುಮಕ್ಕುಮಲ್ಲಿಂದತ್ತಲ್

ಕ್ರಮದಿಂ ತದ್ವಿಗುಣದ್ವಿಗು
ಣಮವರ ದೇಹಪ್ರಮಾಣದುತ್ಸೇದಂ ದುಃ
ಖಮನಂತಗುಣಂ ಕೇಳ
ಲ್ಕಮಾನುಷಂ ನೆಱಯೆ ಪೇೞಲದನಾನಱಯೆಂ ॥೪೮॥

ವ॥ ಮತ್ತಮಾ ನಾರಕರೆಲ್ಲರಂ ಹುಂಡಮಂಡಸಂಸ್ಥಾನರುಮತಿ ವಿರೂಕ್ಷಕೃಷ್ಣವರ್ಣ ರುಮತಿದುರ್ಗಂಧರುಂ ನಪುಂಸಕರುಂ ಜಘನ್ಯದಿಂ ದಶಸಹಸ್ರವರುಷಾಯುಷ್ಯಮು ಮುತ್ತರಾನುಕ್ರಮೋತ್ಕೃಷ್ಟದಿಂ

ಕ್ರಮದಿಂದೇೞುಂ ನರಕದೊ
ಳಮೊಂದು ಮೂಱೇೞುಪತ್ತು ಪದಿನೇೞುನಿತಾಂ
ತಮಿದಿರ್ಪ್ಪತ್ತೆರಡು ಮೂವ
ತ್ತಮೂಱು ಸಂಖ್ಯಂಗಳಾಯುರಂಭೋನಿಧಿಯೊಳ್ ॥೪೯॥

ತರದಿಂದಮಸಂಜ್ಞಿಯುಮಾ
ಸರೀಸೃಪಮುಂ ವಿಹಗಮುಂ ಭುಜಂಗಮಮುಂ ಕೇ
ಸರಿಯುಂ ಸ್ತ್ರೀಯುಂ ಮಿನುಂ
ಪುರುಷನುಮುದಯಿಸುಗುಮೇೞು ನರಕಂಗಳೊಳಂ ॥೫೦॥

ವ॥ ಆ ನರಕಭೂಮಿಗಳೇೞಱಂ ಕೆೞಗೇಕ ರಜ್ಜುತಂರದೊಳನೇಕದುಃಖನಿ ಗೋದಮಪ್ಪ ನಿತ್ಯನಿಗೋದಂ ತಮೋಮಯಮಾಗಿರ್ಕುಮಲ್ಲಿ ಸೂಕ್ಷ್ಮ ಬಾದರ ಪರ್ಯಾಪ್ತಕಾಪರ್ಯಾಪ್ತಕ-

ಭೇದದಿಂ ಸೂಕ್ಷ್ಮವನಸ್ಪತಿಕಾಯಂಗಳಂತರ್ಮುಹೂರ್ತ ದೊಱುವತ್ತಸು ಸಾಸಿರದ ಮೂನೂಱಮೂವತ್ತಾಱುಸೂಟಿಲ್ಲಿಯೆ ಪುಟ್ಟುತ್ತುಂ ಸಾವುತ್ತು ಮಿರ್ಕ್ಕುಮವಱಿಳೇಕೇಂದ್ರಿಯಂ-ಗಳಲ್ಲದೆ ವಿಕಳೇಂದ್ರಿಯಂಗಳುಂ ಸಕಳೇಂದ್ರಿಯಂಗಳುಂ ಪುಟ್ಟುವದಲ್ಲವು ಮತ್ತಮೀ ಮಧ್ಯಮಲೋಕದ ಮಧ್ಯಮಭಾಗದೊಳ್ ಜಂಬೂದ್ವೀಪ ಮಿರ್ಕುಮದೊಂದು ಲಕ್ಷಯೋಜನವಿಸ್ತಾರಮದಱ ನಡುವೆ ಮೂಱುಲೋಕಕ್ಕಂ ನಾಭಿಯಾಗಿರ್ದ ಮೇರುಪರ್ವತಂ ಚೆಲ್ವಿಂಗೆ ತಾನೆ ನಾಭಿಯಂತಿರ್ದುದದು ಸಹಸ್ರಯೋಜನಬಾಹುಲ್ಯಮಂ ತಾಳ್ದಿದ ಚಿತ್ರಾವನಿಯನುರ್ಚ್ಚಿಪೋಗಿ ವಜ್ರೆಯೆಂಬ ಪೃಧ್ವಿಯತಳದೊಳ್ ಕಾಳಸೆಗೊಂಡು ನವನವತಿಸಹಸ್ರಯೋಜನ ಬಾಹಲ್ಯನೋತ್ಸೇಧಂ ಮೇಗೆ ನೀಳ್ದು ಸರ್ವರತ್ನಮಯ ಮೇಖಳೋಪವನಜಿನಭವನ ನಿತ್ಯಪೂಜಾಮರಜನ ಮನೋಹರವಾಗಿರ್ಕುಂ ಗಜದಂತಾದ್ರಿಗಳುಮವಱಿಡೆ ಯೊಡೆಯೊಳ್ ವ್ಯಂತರಾವಾಸಂಗಳುಂ ಭೋಗ ಭೂಮಿಗಳುಂ ವಿದೇಹಂಗಳುಂ ವಿಜಯಾರ್ಧ ಪರ್ವತಂಗಳುಂ ನಿರಂತರಮವರಂತರಾಂತರಂ-ಗಳೊಲೆಡೆವೆಚ್ಚುತ್ತೋರ್ಕುಂ ಭರತಕ್ಷೇತ್ರದ ವಿಷ್ಕಂಭಂ ಜಂಬೂದ್ವೀಪದ ನವತಿಶತಭಾಗ-ಪ್ರಮಾಣಮಕ್ಕುಮಿಂತು ವರುಷಧರವಿದೇಹಂ ಗಂಗಾ ಸಿಂಧು ಪ್ರಭೃತಿ ಕುಲನದಿಪರಿಭ್ರಾಜಿತಮಪ್ಪ ಜಂಬೂದ್ವೀಪಮನೆರಡುಲಕ್ಷ ಯೋಜನದಗಲದಿಂ ಪರಿವೇಷ್ಠಿಸಿರ್ದುದು ಲವಣಸಮುದ್ರಮದಂ ನಾಲ್ಕುಲಕ್ಷ ಯೋಜನದಗಲದಿಂ ಸುತ್ತಿರ್ದುದು ಕಾಳೋದಕಸಮುದ್ರಮದಂ ಪದಿನಾಱುಲಕ್ಷಯೋಜನ ಮಗಲದಿಂ ಪರಿವೃತಮಾಗಿರ್ದುದು ಪುಷ್ಕರವರದ್ವೀಪಮಾ ದ್ವೀಪಾರ್ಧದೊಳ್ ಮನುಷ್ಯಕ್ಷೇತ್ರಕ್ಕೆ ಮೇರೆಯಾಗಿ ಮಾನುಷೋತ್ತರಮಹೀಧರಮಿರ್ಕ್ಕುಮಾದ್ವೀಪಮಂ ಮೂವತ್ತೆರಡು ಲಕ್ಷಯೋಜನಮಗಲದಿಂ ಸುತ್ತಿರ್ದುದು ಪುಷ್ಕರ ವರಸಮುದ್ರಮನಱುವತ್ತು ನಾಲ್ಕು ಲಕ್ಷ ಯೋಜನಮಗಲದಿಂ ಸುತ್ತಿರ್ದುದು ವಾರುಣೀವರದ್ವೀಪಮದನೊಂದು ಕೋಟಿಯುಮಿರ್ಪ್ಪತ್ತೆಂಟುಲಕ್ಷ ಯೋಜನಮಗಲದಿಂ ಬಳಸಿರ್ದುದು ವಾರುಣಾರ್ಣ ವಮದನೆರಡು ಕೋಟಿಯು-ಮೈವತ್ತಾಱುಲಕ್ಷ ಯೋಜನಮಗಲದಿಂ ಸುತ್ತಿರ್ದುದು ಕ್ಷೀರವರದ್ವೀಪಮದನೈದುಕೋಟಿಯುಂ ಪನ್ನೆರಡು ಲಕ್ಷ ಯೋಜನಮಗಲದಿಂ ಸುತ್ತಿರ್ದುದು ಘೃತವರದ್ವಿಪಮದನಿರ್ಪ್ಪತ್ತುಕೋಟಿಯುಂ ನಾಲ್ವತ್ತೆಂಟುಲಕ್ಷ ಯೋಜನಮಗಲದಿಂ ಬಳಸಿರ್ದುದು ಘೃತವರಮಹಾರ್ಣವಮದಂ ನಾಲ್ವತ್ತುಕೋಟಿಯು ತೊಂಭತ್ತಾಱು ಲಕ್ಷಯೋಜನಮಗಲದಿಂ ಬಳಸಿರ್ದುದಿಕ್ಷುವರ-ದ್ವೀಪಮದನೆಣ್ಬತ್ತೊಂದು ಕೋಟಿಯುಂ ತೊಂಭತ್ತೆರಡು ಲಕ್ಷಯೋಜನಮಗಲದಿಂ ಸುತ್ತಿರ್ದುದಿಕ್ಷುವರಮಕರಾಕರಮದಂ ನೂಱಱುವತ್ತಮೂಱುಕೋಟಿಯುಮೆಣ್ಬತ್ತನಾಲ್ಕು ಲಕ್ಷಯೋಜನಮಗಲದಿಂ ಸುತ್ತಿರ್ದುದು ಸುಂದರ ಸುರೇಂದ್ರವೃಂದವಂದಿತ ನಂದೀಶ್ವರವರ-ದ್ವೀಪಮದಱನಾಲ್ಕುಂ ದೆಶೆಯೊಳ್ ನಾಲ್ಕಂಜನಪರ್ವತಂಗಲುವಮಱ ನಾಲ್ಕುಂ ದೆಶೆಯೊಳ್ ಸಮಚತುರಸ್ರಂಗಳಪ್ಪ ದಿವ್ಯಸರೋವರಂಗಳ್ಪದಿನಾಱಪ್ಪುವವಱ ನಡುವೆ ದಧಿಮುಖಶಿಖರಿಗಲುಮಾ ಸರೋಜಾಕರದ ಪೊಱಗಣಕೋಣೆಯೊಳಗೆರಡೆರಡು ರತಿಕರಂಗಳಾಗಿ ನಾಲ್ಕುಂ ದಿಶಾಭಾಗದೊಳ್ಕೂಡಿ ಮೂವತ್ತೆರಡು ರತಿಕರಂಗಳಾಗುತ್ತಿರಲಿಂತ-ವೆಲ್ಲಂ ನಾಲ್ಕಂ ಜನಾದ್ರಿಗಳುಂ ಪದಿನಾಲ್ಕು ದಧಿಮುಖಂಗಳುಂ ಮೂವತ್ತೆರಡು ರತಿಕರಂಗಳೊಳ ಮೋರೊಂದಱೊಳೊಂದುಗೆಯಾಗಿ

ಧರಣೀಧರಂಗಳೈವತ್ತೆರ
ಡಱೊಳಂ ಚೆಲ್ವುವೆತ್ತ ಜಿನಗೃಹಮೈವ
ತ್ತೆರಡೊಂದೊಂದಱೊಳಕ್ಕುಂ
ವರಜಿನಬಿಂಬಂಗಳಷ್ಟ ಸಹಿತಶತಂಗಳ್ ॥೫೧॥

ಬರಿಸಕ್ಕೆ ಮೂಱು ನಂದೀ
ಶ್ವರಯಾತ್ರೋತ್ಸಾಹದಿಂದಮಷ್ಟಾಹ್ನಿಕಮಂ
ಸುರರಾಜಂ ಸುರವೃಂದಂ
ಬೆರಸು ಮಹಾಮಹಮನಂತದೇಂ ಮಾಡುವನೋ ॥೫೨॥

ದೆಸೆಗಳನ್ನಾನಾವಿಮಾನಂಗಳ ಬೆಳಗುಗಳಿಂ ತೀವೆ ಗೋತ್ರಾಚಲಂಗಳ್
ರಸವತ್ಸಂಗೀತನಾನಾಪಟುಪಟಹನಿನಾದಂಗಳಿಂ ತೀವೆ ಚೈತ್ಯಾ
ವಸಥಂಗಳ್ಕೂಡೆ ನಾನಾವಿಧಪರಿಕರದಿವ್ಯಾರ್ಚನಾನೀಕದಿಂ ತೀ
ವೆ ಸುರೇಂದ್ರಂ ಸಂದ ನಂದೀಶ್ವರಮಹಿಮೆಯನಾನಂದದಿಂ ಮಾಡುತಿರ್ಪಂ ॥೫೩॥

ಜಿನಪಾದಾಂಬುಜಯುಗ್ಮಭಕ್ತಿಭರದಿಂದಂ ಕಾರ್ತಿಕಾಷಾಢಫಾ
ಲ್ಗುನಮಾಸಂಗಳ ಜೊನ್ನದಷ್ಟಮಿಗಳೊಳ್ಕೈಕೊಂಡು ತತ್ಪೌರ್ಣಮಿ
ದಿನಮಂತಾರ್ಪಿನೆಗಂ ಮಹಾಮಹಮನೆಂದುಂ ಮಾಳ್ಪನಿಂದ್ರಂ ಸುರೇಂ
ದ್ರನಿಕಾಯಂ ಬೆರಸೆಂದೊಡಿನ್ನದಱ ಪೆಂಪಂ ಬಣ್ಣಿಸಲ್ಬರ್ಕುಮೇ ॥೫೪॥

ವ॥ ಆ ನಂದೀಶ್ವರದ್ವೀಪಮಂ ತದ್ವಿಗುಣಯೋಜನವಿಸ್ತಾರದಿಂ ಸುತ್ತಿರ್ದುದು ನಂದೀಶ್ವರಸಮುದ್ರಮಿಂತು ದ್ವಿಗುಣದ್ವಿಗುಣವಿಸ್ತಾರದಿಂ ಪಂಚವಿಂಶತಿಕೋಟಿ ಕೋಟ್ಯುದ್ಧಾರ ಪಲ್ಯೋಪಮರೇಣುಸಂಖ್ಯಂಗಳಾಗಿ ಶುಭನಾಮಾಭಿರಾಮದ್ವೀಪಸಾ ಗರಂಗಳಸಂಖ್ಯಾತಂ ಪೋಗೆ ಕಟ್ಟಕಡೆಯಲ್ ಸ್ವಯಂಭೂರಮಣದ್ವೀಪಮಿರ್ಕುಮಾ ದ್ವೀಪಮಧ್ಯಪ್ರದೇಶದೊಳ್ ಸ್ವಯಂಪ್ರಭಾಚಲಮಿರ್ಕುಮಿಂತಾ ಮಾನುಷೋತ್ತರ ಪರ್ವತಂ ಮೊದಲಾಗಿ ಸ್ವಯಂಪ್ರಭಾಚಲಂಬರಮೆಡೆಯೆಡೆಯೊಳಿರ್ಪ ದ್ವೀಪ ಸಮುದ್ರಂಗಳ ಕಲ್ಪವೃಕ್ಷವನಾಕೀರ್ಣಂ-ಗಳಾಗಿ ಪುಟ್ಟಿ ಜಘನ್ಯಭೋಗಭೂಮಿಪ್ರಭಾ ಗಂಗಳಾಗಿರ್ಕುಂ ಮತ್ತಮಲ್ಲಿ ಸರ್ವರತ್ನಮಯ ಪ್ರಾಸಾದಂಗಳಿನಸಂಖ್ಯಾತಯೋಜನ ವಿಸ್ತೀರ್ಣಂಗಳಾಗಿ ವ್ಯಂತರದೇವಪುರಂಗಳಿರ್ಕುಮಲ್ಲಿ ಶಸ್ತ್ರಘಾತಪಾಶಬಂಧನಮಿಷ ಭಕ್ಷಣಾಗ್ನಿಪ್ರವೇಶಾನ್ಯ ಸಮಾಧಿಯಿಂ ಸತ್ತಮನುಷ್ಯರುಂ ವ್ಯಂತರರಾಗಿ ಪುಟ್ಟಿ ಪದ್ಮಾದಿಸರೋವರಂಗಳೊಳಂ ಶಾಲ್ಮಲ್ಯಾದಿ ವೃಕ್ಷಂಗಳೊಳಂ ಹಿಮವದಾದಿ ಪರ್ವತಂಗಳೊಳಂ ಕ್ರೀಡಿಸುತ್ತಿರ್ಪರ್ ಮತ್ತಮಲ್ಲಿ ನಿಃಶೀಲವ್ರತಮನುಷ್ಯತಿರ್ಯಗ್ಜೀವಂಗಳ್ ದಾನಾನುಮೋದನದಿಂ ಪರಸ್ಪರ ವಿರೋಧವಿರಹಿತಪಂಚೇಂದ್ರಿಯತಿರ್ಯಗ್ಜಾತಿಗಳಾಗಿ ಪುಟ್ಟಿ ಪಲ್ಯೋಪಮಾಯುಷ್ಯಂಗ ಳಾಗಿರ್ಕುಮಾ ಸ್ವಯಂಭೂರಮಣದ್ವೀಪಮಂ ಬಳಸಿ ಮಹಾಸ್ವಯಂಭೂರಮಣಾಂ ಭೋರಾಶಿಯಿರ್ಕುಂ

ಅದಱಿೊಳಗಿರ್ಪ ಮಹಾಮ
ತ್ಸ್ಯದಗಲಮೈನೂಱುಯೋಜನಂ ನೀಳ ಮ
ತ್ತದಱ್ಮ್ಮಡಿಯೋಜನಮಿ
ನ್ನದಱರ್ಧಾರ್ಧಪ್ರಮಾಣಮದಱುತ್ಸೇದಂ ॥೫೫॥

ಅದಱಿೊಳ್ ದ್ವಾದಶಯೋಜನಂ ವಿಕಸಿತಾಂಭೋಜಾತಷಂಡಂಗಳಂ
ತದಟಿೊಳ್ನೋಡೆ ಸಹಸ್ರಯೋಜನಮೆನಿಕ್ಕುಂ ಪದ್ಮನಾಳಂಗಳಂ
ತದಱಿೊಳ್ ತುಂಬಿಗಳೊಂದುಯೋಜನಮದಿರ್ಕುಂ ಭಾವಿಪಂಗೆಂದೊಡಿ
ನ್ನದಱಿೊಂದಂಮನಂತುಟಿಂತುಟೆನಲೆಂತುಂ ಮಾನವರ್ಬಲ್ಲರೇ ॥೫೬॥

ಅಕ್ಕರ ॥ ಲವಣಕಾಳೋದಕಸ್ವಯಂಭೂರಮಣಂಗಳೊಳ್ಜಲಚರಂಗಳ್ ಪುಟ್ಟುಗುಂ
ಲವಣವಾರುಣಕ್ಷೀರಘೃತಾಂಭೋಧಿಜಲಮೆಲ್ಲಂ ತಂತಮ್ಮ ಸವಿಗಳಕ್ಕುಂ
ಪ್ರವರಪುಷ್ಕರಕಾಳೋದಕ ಸ್ವಯಂಭೂರಮಣಂಗಳಚ್ಚಜಲಂ
ವಿವಿಧಭೇದಪಾರಾವಾರಂಗಳ ನೀರೆಲ್ಲಮಿಕ್ಷುರಸೋಪಮಾನಂ ॥೫೭॥

ಸಮವೃತ್ತಮಾ ಸ್ವಯಂಭೂ
ರಮಣಮಹಾಂಭೋಧಿವರೆಗಮೆಸೆದಿರ್ದೀ ಮ
ಧ್ಯಮಲೋಕಮೇಕರಜ್ಜು
ಪ್ರಮಾಣಮಕ್ಕುಂ ಪ್ರಣೂತಜಿನಪತಿಮತದಿಂ ॥೫೮॥

ಅತ್ತಲಲೋಕಾಕಾಶಂ
ಸುತ್ತಿರ್ದುದನಂತಮಲ್ಲಿ ಲೋಕದೊಳೊಂದುಂ
ಸುತ್ತಿಲ್ಲ ಭಾವಿಪಾಗಳ್
ಮತ್ತೇನುಂ ತಮ್ಮೊಳಿಲ್ಲ ತನ್ಮಯರೂಪಂ ॥೫೯॥

ವ॥ ಮತ್ತಮಿಾ ಮಧ್ಯಮಲೋಕದ ಪ್ರತಿಬದ್ಧಮಾಗಿ ಚಿತ್ತೆಯೆಂಬ ನೆಲದಿಂ ಮೇಗೇೞ್ನೂಱುತೊಂಬತ್ತುಯೋಜನಾಂತರದೊಳ್ ನೂಱುಪತ್ತುಯೋಜನಬಾಹುಲ್ಯ ವಿಸ್ತಾರದಿಂ ಮಂದರಮಹೀಧರದ ನಂದನಮೆಂಬ ಮೇಖಳೆಯಿಂ ಸಾಸಿರದ ನೂಱ್ಪತ್ತೊಂದುಯೋಜನಮಗಲದಿಂತಾರಾಗಣವಿಮಾನಂಗಳಿರ್ಕುಮಲ್ಲಿಂ ಮೇಲೆ ದಶಯೋಜನಾಂತರದೊಳ್ ಕಿಂಚಿನ್ನ್ಯೂನಯೋಜನವಳಯದಿಂ ಸೂರ್ಯಕಾಂತ ಮಣಿಮಯವಾಗಿ ಸೂರ್ಯವಿಮಾನಮುಮಲ್ಲಿಂ ಮೇಗಶೀತಿಯೋಜನಾಂತರದೊಳ ದಱ್ನಿನಿಸಗ್ಗಳಂ ಚಂದ್ರಕಾಂತಮಣಿಮಯಮಪ್ಪಚಂದ್ರವಿಮಾನಮುಮಲ್ಲಿಂ ಮೇಗೆ ನೆಗೆ ದತ್ತ ನಾಲ್ಕುಯೋಜನಾಂತರದೊಳ್ ಅಶ್ವಿನ್ಯಾದಿ ನಕ್ಷತ್ರಂಗಳಲ್ಲಿಂ ಮೇಗೆಯುನಿತೆ ಯೋಜನಾಂತರದೊಳ್ ಬುಧನ ವಿಮಾನಮಲ್ಲಿಂದತ್ತಲ್ ಯೋಜನತ್ರಿತಯಾಂತರದೊಳ್

ಶುಕ್ರ ವಿಮಾನಮುಮಲ್ಲಿಂ ಮೇಲೆ ಯೋಜನತ್ರಯಾಂತರದೊಳ್ ಬೃಹಸ್ಪತಿಯ ವಿಮಾನಮುಮಲ್ಲಿಂದತಲೇ ಮೂಱುಯೋಜನಂದಂತರದೊಳ್ ಮಂಗಳನ ವಿಮಾನಮಲ್ಲಿಂ ಮೇಗನಿತೆ ಯೋಜನಾಂತರದೊಳ್ ಶನಿಯ ವಿಮಾನಮಿರ್ಕ್ಕುಂ ಚಂದ್ರಂಗೆ ಲಕ್ಷಸಂವತ್ಸರಾದಿಕಪಲ್ಯೋಪಮಮುಮಾಧಿತ್ಯಂಗೆ ಸಹಸ್ರಸಂವತ್ಸರಾಧಿಕ ಪಲ್ಯೋಪಮಮುಂ ಶುಕ್ರಂಗೆ ಸಂವತ್ಸರಾಧಿಕಪಲ್ಯೋಪಮಮುಂ ಬೃಹಸ್ಪತಿಗೆ ಪಲ್ಯೋಪಮಮುೞಿದ ಗ್ರಹಂಗಳ್ಗೆಲ್ಲಂ ಪಲ್ಯೋಪಮಾರ್ಧಂ ನಕ್ಷತ್ರತಾರಾಗಣಕ್ಕೆ ಯುತ್ಕೃಷ್ಟದಿಂ ಪಲ್ಯೋಪಮಚತುರ್ಥಾಂಶಂ ಜಘನ್ಯದಿಂ ಪಲ್ಯೋಪಮಪಾಷ್ಟಮ ಭಾಗಮಕ್ಕುಮಂತಾ ಜ್ಯೋತಿರ್ಲೋಕಜನಿತರೆಲ್ಲರು-ಮಯೋನಿಜನಿತರುಂ ಸಪ್ತಚಾಪೋತ್ಸೇಧರುಮಣಿ ಮಾದಿಗುಣಗಣಾನ್ವಿತರುಮಪ್ಪರ್ ಚಂದ್ರಾದಿತ್ಯವಿಮಾನಂಗಳ್ ತಮ್ಮಿರ್ದಲ್ಲಿಂ ಕೆೞಗೆ ಸಾಸಿರದೆಂಟುನೂಱು ಯೋಜನಂಬರಂ ಕೆಲದೊಳೈವತ್ತು ಸಾಸಿರ ಯೋಜನಂಬರಂ ಮೇಲೆ ನೂಱುಯೋಜನಂಬರಂ ಆತ್ಮೀಯಸಹಸ್ರಕರಾಳಂಬನ ದಿನಂಬರಾಂತರದೊಳಿರ್ದ ಳುಂಬವಾಗೆ ಬೆಳಗುತ್ತಿರ್ಕ್ಕುಮಲ್ಲದೆಯುಂ

ದಿನಕರಹಿಮಕರನಕ್ಷ
ತ್ರನಿಖಿಲತಾರಾಗ್ರಹಂಗಳತ್ಯಾಗ್ರಹದಿಂ
ಕನಕಮಹೀಧರಮಂ ನಿ
ಚ್ಚನಿಚ್ಚಮೋರಂತೆ ಸಂತತಂ ಬಲವರ್ಕುಂ ॥೬೦॥

ವ॥ ಮತ್ತಮಾ ಮಹೀಧರದ ಚೂಲಿಕಾಗ್ರದಿಂ ವಾಲಾಗ್ರಮಾತ್ರಾಂತರಿತಮಾಗಿ ಸಾರ್ಧರಜ್ವಭ್ಯಂತರದೊಳ್ ಸೌಧರ್ಮೇಂದ್ರನ ಋತುವಿಮಾನಂ ನಡುವಾಗೆ ಸಂಖ್ಯಾತಾ ಸಂಖ್ಯಾತಯೋಜನ ವಿಸ್ತೀರ್ಣಂಗಳ್ ವಿಚಿತ್ರ ಮಣಿಮಯಮರೀಚಿಮಂಜರೀರಂಜಿತಾ ನೂನವಿಮಾನಂಗಳ್ ಕಿಕ್ಕಿಱಿಗಿಱಿದಿರೆ

ಮಾಧುರ್ಯಗೀತನಿನದಾ
ಗಾಧಂಗಳ್ ಕಲ್ಪವಲ್ಲರೀಲಲಿತಾವ್ಯಾ
ಬಾಧಂಗಳ್ ಕರಮೆಸೆವುವು
ಸೌಧರ್ಮೇಶಾನಮೆಂಬ ಕಲ್ಪಯುಗಂಗಳ್ ॥೬೧॥

ವ॥ ಆ ಕಲ್ಪಂಗಳೆರಡಕ್ಕಂ ಸೌಧರ್ಮೇಂದ್ರನುಮೀಶಾನೇಂದ್ರನುಮೆಂದಿರ್ವ ರಿಂದ್ರರಪ್ಪರವೆರಡಱೊಳಂ ಯಥಾಕ್ರಮದಿಂ ಮೂವತ್ತೆರಡುಲಕ್ಕೆಯುಮಿರ್ಪತ್ತೆಂಟ ಲಕ್ಕೆಯುಂ ವಿಮಾನಂಗಳಕ್ಕುಮಲ್ಲಿಯ ವೈಮಾನಿಕರೆಲ್ಲಂ ಸಪ್ತಹಸ್ತೋತ್ಸೇಧಶರೀರರುಮುತ್ಕೃಷ್ಟದಿಂ ದ್ವಿಸಾಗರೋಪಮಾಯುಷ್ಯರುಂ ಕಾಯಪ್ರವೀಚಾರರುಮಪ್ಪರಲ್ಲಿಂ ಮೇಲೆ ಸಾರ್ಧರಜ್ವಂತರಾಭ್ಯಂತರದೊಳ್

ಸುಮನೋಹರಮೆನಿಪ ಸನ
ತ್ಕುಮಾರಮಾಹೇಂದ್ರಕಲ್ಪರುದ್ರಕಲ್ಪಂಗಳ್ ಸಂ

ದಮರಪಟುಪಟಹನಿನದದಿ
ನಮರೀಜನಗೀತವಾದ್ಯದಿಂ ಕರಮೆಸೆಗುಂ ॥೬೨॥

ವ॥ ಆ ಕಲ್ಪಂಗಳೆರಡಕ್ಕಂ ಸನತ್ಕುಮಾರೇಂದ್ರನುಂ ಮಾಹೇಂದ್ರನುಮೆಂದಿರ್ವರಿಂದ್ರರಪ್ಪಂತಾಯೆರಡಱೊಳಮನುಕ್ರಮದಿಂ ಪನ್ನೆರಡುಲಕ್ಕೆಯುಮೆಂಟುಲಕ್ಕೆಯುಂ ವಿಮಾನಮಕ್ಕುಮಲ್ಲಿಯನಿಳಿಂಪರೆಲ್ಲಂ ಷಡ್ರತ್ನಿಪ್ರಮಾಣದೇಹರುಂ ಸಪ್ತಸಮುದ್ರೋಪಮಾಯುಷ್ಯರುಂ ಸ್ಪರ್ಶಪ್ರವೀಚಾರರುಮಪ್ಪರಲ್ಲಿಂ ಮೇಲೆಯರ್ಧರಜ್ಜ್ವಭ್ಯಂತರದೊಳ್

ಸುತ್ತಲುಮೆಸೆವ ಪತಾಕೆಗೆ
ಳೆತ್ತಂ ಮಿಳಿರ್ದೆಸೆಯೆ ಮಣಿವಿಮಾನಾವಳಿಯೊಳ್
ಪ್ರೋತ್ತುಂಗಬ್ರಹ್ಮಬ್ರ
ಹ್ಮೋತ್ತರಕಲ್ಪಂಗಳಿರ್ಕುಮತಿನಿಬಿಡಂಗಳ್ ॥೬೩॥

ವ॥ ಆ ಕಲ್ಪಂಗಳೆರಡಕ್ಕುಂ ಬ್ರಹ್ಮೇಂದ್ರನಿಂದ್ರನಕ್ಕುಮಂತವೆರಡಱೊಳಂ ನಾಲ್ಕುಲಕ್ಕೆ ವಿಮಾನಮಕ್ಕುಮಲ್ಲಿಯ ದಿವಿಜರೆಲ್ಲಂ ಪಂಚರತ್ನಿಪ್ರಮಾಣರುಂ ದಶಪಾರಾವಾರೋಪಮಾಯುಷ್ಯರುಂ ರೂಪಪ್ರವೀಚಾರರಪ್ಪರಾ ಬ್ರಹ್ಮಕಲ್ಪದಲ್ಲಿ ಸಾರಸ್ವತಾದಿತ್ಯವಹ್ನ್ಯರುಣಗರ್ದತೋಯತುಷಿತಾವ್ಯಾಬಾಧಾರಿಷ್ಟರೆಂಬೆಣ್ಬರುಂಲೋಕಾಂತಿಕದೇವರ್ ವಸಿಯಿಸುವರೆಲ್ಲರುಮಷ್ಟಸಾಗರೋಪಮಾಯುಷ್ಯರುಂ ವಿಶುದ್ಧಲೇಶ್ಯಾ ಪರಿಣಾಮರುಮಪ್ಪರಲ್ಲಿಂದತ್ತಲರ್ಧರಜ್ಜ್ವಭ್ಯಂತರದೊಳ್

ಅವಿರಳಮಣಿಮಯಭಾಸುರ
ದಿವಿಜವಿಮಾನಪ್ರತಾನಲಲಿತಂಗಳ್ ಲಾಂ
ತವಕಾಪಿಷ್ಠಂಗಳ್ ಕ
ಲ್ಪವಿಶ್ರುತಂಗಳ್ ಸುರೇಂದ್ರಸುಖನಿಲಯಂಗಳ್ ॥೬೪॥

ವ॥ ಆ ಕಲ್ಪಗಳೆರಡಕ್ಕಂ ಲಾಂತವೇಂದ್ರನಿಂದ್ರನಕ್ಕುಮುವೆರಡಱೊಳಂ ಲಕ್ಷಾರ್ಧವಿಮಾನಮಕ್ಕುಮಲ್ಲಿಯ ದಿವಿಜರೆಲ್ಲಂ ಪಂಚರತ್ನಿಪ್ರಮಾಣರುಂ ಚತುರ್ದಶ ಸಮುದ್ರೋಪಮಾಯುಷ್ಯರುಂ ರೂಪಪ್ರವೀಚಾರರುಮಪ್ಪರಲ್ಲಿಂದತ್ತಲರ್ಧರಜ್ಜ್ವಭ್ಯಂ ತರದೊಳ್

ಮಂಗಳಸುರಲಕ್ಷ್ಮೀಸದ
ನಂಗಳ್ ಮದನಪ್ರಸಾಧನೋಚಿತಸಂಸ್ಥಾ
ನಂಗಳ್ ಶುಕ್ರಮಹಾಶು
ಕ್ರಂಗಳ್ ಕಲ್ಪಂಗಳಿರ್ಕುಮವಿಕಲ್ಪಂಗಳ್ ॥೬೫॥

ವ॥ ಆ ಕಲ್ಪಂಗಳೆರಡಕ್ಕಂ ಶುಕ್ರೇಂದ್ರನಿಂದ್ರನಕ್ಕುಮಂತಾ ಎರಡಱೊಳಮಾಗಿ ನಾಲ್ವತ್ತುಸಾಸಿರವಿಮಾನಮಕ್ಕುಮಲ್ಲಿಯು ದಿವಿಜರೆಲ್ಲಂ ಪಂಚರತ್ನಿಪ್ರಮಾಣರುಂ

ಚತುರ್ದಶ ಸಮುದ್ರೋಪಮಾಯುಷ್ಯರುಂ ರೂಪಪ್ರವೀಚಾರುರಮಪ್ಪರಲ್ಲಿಂದತ್ತಲರ್ಧರಜ್ಜುಭ್ಯಂತರದೊಳ್

ಮಂಗಳಸುರಲಕ್ಷ್ಮೀಸದ
ನಂಗಳ್ ಮದನಪ್ರಸಾಧನೋಚಿತಸಂಸ್ಥಾ
ನಂಗಳ್ ಶುಕ್ರಮಹಾಶು
ಕ್ರಂಗಲ್ ಕಲ್ಪಂಗಳಿರ್ಕುಮವಿಕಲ್ಪಂಗಳ್ ॥೬೫॥

ವ॥ ಆ ಕಲ್ಪಂಗಳೆರಡಕ್ಕಂ ಶುಕ್ರೇಂದ್ರನಿಂದ್ರನಕ್ಕುಮಂತಾ ಎರಡಱೊಳಮಾಗಿ ನಾಲ್ವತ್ತುಸಾಸಿರವಿಮಾನಮಕ್ಕುಮಲ್ಲಿಯ ದಿವಿಜರೆಲ್ಲಂ ಹಸ್ತಚತುಷ್ಟಯೋತ್ಸೇಧ ದೇಹರುಂ ಷೋಡಶಸಮುದ್ರೋಪಮಾಯುಷ್ಯರುಂ ಶಬ್ದಪ್ರವೀಚಾರರುಮಪ್ಪರಲ್ಲಿಂದತ್ತಲರ್ಧರಜ್ಜುಭ್ಯಂತರದೊಳ್

ಓರಂತೆ ತೊಳಗಿ ಪೊಳೆವ ಶ
ತಾರಸಹಸ್ರಾರಕಲ್ಪಯುಗಳಂಗಳ್ ಶೋ
ಭಾರಮಣೀಯಂಗಳ್ ಸುರ
ನಾರೀಕೇಳೀವಿಲಾಸವಿಸ್ಫುರಿತಂಗಳ್ ॥೬೬॥

ವ॥ ಆ ಕಲ್ಪಂಗಲೆರಡಕ್ಕಂ ಶತಾರೇಂದ್ರನಿಂದ್ರನಕ್ಕುಮಂತವೆರಡಱೊಳಮಱು ಸಾಸಿರವಿಮಾನಂಗಳಕ್ಕುಮಲ್ಲಿಯ ವೃಂದಾರಕರೆಲ್ಲಂ ಹಸ್ತಚತುಷ್ಟಯೋತ್ಸೇಧರುಂ ಅಷ್ಟಾದಶರತ್ನಾಕರೋಪಮಾಯುಷ್ಯರುಂ ಶಬ್ದಪ್ರವೀಚಾರರುಮಪ್ಪರಲ್ಲಿಂ ಮೇಗರ್ಧರಜ್ಜುಭ್ಯಂತರದೊಳ್

ಅತಿವಿಶ್ರುತಾನತಪ್ರಾ
ಣತಾಭಿಧಾನಾಭಿರಾಮಮೆನಿಸಿದ ಕಲ್ಪ
ದ್ವಿತಯಂಗಳ್ ಸುರಜನಕರ
ಹತದುಂದುಭಿಮೃದುರವಂಗಳಿಂ ರಂಜಿಸುಗುಂ ॥೬೭॥

ವ॥ ಆ ಕಲ್ಪಂಗಲೆರಡಕ್ಕಂ ಯಥಾಕ್ರಮದಿಂದಾನತೇಂದ್ರನುಂ ಪ್ರಾಣತೇಂದ್ರನುಮೆಂದಿರ್ವರಿಂದ್ರರಪ್ಪರಲ್ಲಿಯ ಸುರರೆಲ್ಲಂ ಸಾರ್ಧತ್ರಿತಯ ಹಸ್ತೋತ್ಸೇಧರುಂ ವಿಂಶತಿ ಸಾಗರೋಪಮಾಯುಷ್ಯರುಂ ಮನಃಪ್ರವೀಚಾರರುಮಪ್ಪರಲ್ಲಿಂದತ್ತಲರ್ಧರಜ್ಜುಭ್ಯಂ ತರದೊಳ್

ತಳ್ಪತಲಶೋಭಿತಂಗಳ
ನಲ್ಪಸುಖೈಕಾಸ್ಪದಂಗಳತಿಲೀಲಾಸಂ
ಕಲ್ಪಂಗಳಾರಣಾಚ್ಯುತ
ಕಲ್ಪದ್ವಿತಯಂಗಳಿರ್ಕುಮಮರನುತಂಗಳ್ ॥೬೮॥

ವ|| ಆ ಕಲ್ಪಂಗಳೆರಡಕ್ಕಮನುಕ್ರಮದಿಂದಾರಣೇಂದ್ರನುಮಚ್ಯುತೇಂದ್ರನು ಮೆಂದಿರ್ವರಿಂದ್ರರಪ್ಪರಂತಾ ನಾಲ್ಕುಂ ಸ್ವರ್ಗಂಗಳೊಳಮೇೞುನೂಱುವಿಮಾನಮಕ್ಕುಮಾ ಕಲ್ಪದ್ವಯದ ಕಲ್ಪವಾಸಿಗರೆಲ್ಲಂ ತ್ರಿಹಸ್ತೋತ್ಸೇಧರುಂ ದ್ವಾವಿಂಶತಿಸಾಗರೋಪಮಾಯುಷ್ಯರುಂ ಮನಃಪ್ರವೀಚಾರದಿವ್ಯಸುಖರುಮಪ್ಪರಲ್ಲಿಂ ಮೇಗೇಕರಜ್ಜುಭ್ಯಂ ತರದೊಳ್

ಎತ್ತಂ ಗ್ರೈವೇಯಕಮೊಂ
ಬತ್ತುಂ ರಮಣೀಯಮೆನಿಸಿದನುದ್ದಿಶೆಗಳುಮೊಂ
ಬತ್ತುಮಣೂತ್ತರೆಯಯ್ದುಂ
ಪ್ರೋತ್ತುಂಗ ವಿಮಾನರಾಜಿಯಿಂ ರಂಜಿಸುಗುಂ ||೬೯||

ವ|| ಅಂತಾ ನವಗ್ರೈವೇಯಕಂಗಳ ಪೂರ್ವತ್ರಯಂಗಳೊಳಪೂರ್ವಮಣಿ ವಿಮಾನಂಗಳ್ ನೂಱುಪನ್ನೊಂದಕ್ಕುಮಲ್ಲಿಯಹಮಿಂದ್ರರೆಲ್ಲಂ ಸಾರ್ಧದ್ವಿಹಸ್ತೋ ತ್ಸೇಧರುಂ ಯಥಾಕ್ರಮದಿನೇಕೈಕ ನೀರಾಕರೋಪಮಪ್ರವೃದ್ಧಿಯಿಂ ತ್ರಿಚತುಃ ಪಂಚೋತ್ತರ ವಿಂಶತಿಸಾಗರೋಪಮಾಯುಷ್ಯರುಂ ನಿಷ್ಪ್ರವೀಚಾರಸುಖರುಮಪ್ಪರ್ ಮಧ್ಯತ್ರಯದೊಳ್ ಸುರೇಂದ್ರಲಕ್ಷ್ಮೀಮಧ್ಯವಿರಾಜಮಾನಂಗಳ್ ನೂಱೇೞಕ್ಕುಮಲ್ಲಿಯಹಮಿಂದ್ರರೆಲ್ಲಂ ದ್ವಿಹಸ್ತೋತ್ಸೇಧರುಂ ಯಥಾಕ್ರಮದಿಂ ಷಟ್ಸಪ್ತಾಷ್ಟೋತ್ತರ ವಿಂಶತಿಸಮುದ್ರೋಪಮಾ- ಯುಷ್ಯರುಂ ನಿಷ್ಪ್ರವೀಚಾರರುಮಪ್ಪರುತ್ತರೋತ್ತರಾನೂನ ವಿಮಾನಂಗಳ್ ತೊಂಬತ್ತೊಂದಕ್ಕುಮಲ್ಲಿಮಯಹಮಿಂದ್ರರೆಲ್ಲರಂ ಸಾರ್ಧಹಸ್ತೋತ್ಸೇಧರುಂ ಯಥಾಕ್ರಮದಿನೇಕೋನತ್ರಿಂಶತ್ ತ್ರಿಂಶದೇಕತ್ರಿಂಶತ್ಸಾಗರೋಪಮಾಯುಷ್ಯರುಂ ನಿಷ್ಪ್ರವೀಚಾರರುಮಪ್ಪರಲ್ಲಿಂದತ್ತ ಚಂಚತ್ಪಂಚರತ್ನಮಯಮಪ್ಪ ಪಂಚಾಣೂತ್ತರೆಗಳೊಳ್ ವಿಜಯವೈಜಯಂತ ಜಯಂತಾಪರಾಜಿತಸರ್ವಾರ್ಥಸಿದ್ಧಿ ಶೋಭಾಭಿಧಾನ ವಿಮಾನಂಗಳೈದಕ್ಕುಮಲ್ಲಿಯ ಹಮಿಂದ್ರರೆಲ್ಲಂ ಏಕಹಸ್ತೋತ್ಸೇಧರುಂ ತ್ರಯಸ್ತ್ರಿಂಶತ್ಸಾಗ- ರೋಪಮಾಯುಷ್ಯರುಂ ನಿಷ್ಪ್ರವೀಚಾರರುಂ ನಿರತಿಶಯಸುಖ ರುಮಪ್ಪರಲ್ಲದೆಯುಂ

ಎನಿತು ಸಮುದ್ರೋಪಮಮಂ
ತನಿತೆ ಸಹಸ್ರಾಬ್ದಸಂಖ್ಯೆಗಮೃತಾನ್ನಮನೊ
ಯ್ಯನೆ ದಿವಿಜರೆಲ್ಲರೆಂದುಂ
ಮನದೊಳ್ ಮನಮೊಸೆದು ನೆನೆದು ತಣ್ಣನೆ ತಣಿವರ್ ||೭೦||

ಪರಮಾಯುಃಪರಿಮಿತಸಾ
ಗರೋಪಮಾರ್ಧಪ್ರಮಾಣಮಾಸಾವಧಿಯಿಂ
ಸುರರೆಲ್ಲಂ ನಸುಸುಯ್ವ
ರ್ಸುರಭಿಶ್ವಾಸಪ್ರಕಾಶನಾಸಾಪುಟದಿಂ ||೭೧||

ವ|| ಅಂತಾ ಸ್ವರ್ಗಸಂಭವರೆಲ್ಲಮಯೋನಿಸಂಭವರುಂ ನಿದ್ರಾಲಸ್ಯಾದಿ ಬಾಧಾವಿದೂರರುಂ ನಿತ್ಯಯೌವನರುಂ ನಿರತಿಶಯಸುಭಗಮೂರ್ತಿಗಳುಂ ಸಹಜ

ಮಣಿಭೂಷಣಾಂಬರರುಂ ಸಹಜಸುರಭಿಗಂಧರುಮಪ್ಪರಲ್ಲಿ ಸೌಧರ್ಮೇಂದ್ರನುಂ ಆತನ ಪಟ್ಟಮಹಾದೇವಿಯುಂ ಆತನ ಭೋಗಲೋಕಪಾಲಕರುಂ ದಕ್ಷಿಣೇಂಧ್ರರುಂ ಲೋಕಾಂತಿಕ ದೇವರುಂ ವಿಜಯಾದ್ಯಹಮಿಂದ್ರರುಂ ದ್ವಿಚರಮರಪ್ಪರಿಂದ್ರಪ್ರತೀಂದ್ರ ಸಾಮಾನಿಕ ಪ್ರಭೃತಿ ಮಹರ್ಧಕಸ್ಥಾನಂಗಳೊಳಂ ನವಾಣೂತ್ತರೆ ಪಂಚಾಣೂತ್ತರೆಗಳೊಳಂ ಸಮ್ಯಗ್ದೃಷ್ಟಿಗಳಲ್ಲದೆ ಪುಟ್ಟುವರಲ್ಲರ್ ಜಿನವಚನಮಂ ಕೈಕೊಂಡನಶನಾದಿ ಕ್ರಿಯೆಗಳಿನಿಂದ್ರಿಯ ವಿಷಯ ನಿಗ್ರಹದಿನಭವ್ಯಜೀವಮುತ್ಕೃಷ್ಟದಿನುಪರಿಮಗ್ರೈವೇಯಕಂಬರಂ ಸಲ್ಗುಂ ಸ್ತ್ರೀಜನ ಮುಮೇಕಾದಶವಿಧೋಪಾಸಕಜನಮುಮಚ್ಯುತ ಕಲ್ಪಂಬರಂ ಸಲ್ವರ್ ಗತಿಶರೀರ ಪರಿಗ್ರಹಾಭಿಮಾನಂಗಳ್ ಪೋಗೆವೋಗೆ ಹೀನಂಗಳ........ ಸ್ಥಿತಿಪ್ರಭಾವಸುಖದ್ಯುತಿ ಲೇಶ್ಯಾವಿಶುದ್ಧೇಂದ್ರಿಯಾವಧಿವಿಷಯಂಗಳ್ ಕ್ರಮಕ[ಮದಿ]..... ನಧಿಕಂಗಳಕ್ಕು ಮಲ್ಲದಲ್ಲದೆಯುಂ

ಸುರನಾರಿಯರೆಲ್ಲರಂ ಮೊದ
ಲೆರಡುಂ ಕಲ್ಪದೊ..... ತಾ
ವರಷೋಡಶಕಲ್ಪದೊಳಂ
ಚರಿಯಿಸುವರ್ತಂಮತಂಮ ಮಚ್ಚರಿಯಾಗಲ್ ॥೭೨॥

ಸುರ........... ರಮುಂ
ಪರಿವಾರಮುಮಾ ವಿಹಾರಮುಂ ಕಲ್ಪಜರೊಳ್
ದೊರೆಕೊಳ್ಗುಂ ಕಲ್ಪಾತೀತರೊ
ಳೆ........ ಮೊಂದುಮಣವಿಲ್ಲೆಂದುಂ ॥೭೩॥

ವ॥ ಮತ್ತಮಾ ಸಮಸ್ತಕಲ್ಪೋತ್ಪನ್ನತ ಕಲ್ಪಾತೀತಂಗಳ ವಿಮಾನ....... ದ್ರಕಶ್ರೇಣೀಬದ್ಧಪ್ರಕೀರ್ಣಕ ವಿಕಲ್ಪಮಾಳ್ಗಿಯುಂ ಗಣನಾಪ್ರಮಾಣದಿಂದಮೆಣ್ಬತ್ತ..... ಲಕ್ಕೆಯೆಂಬತ್ತೇಱುಸಾಸಿರದಿರ್ಪ್ಪತ್ತು ಮೂಱು ವಿಮಾನಮಕ್ಕುಮಿಂತು

ಓರೊಂದು ಸುರವಿಮಾನದೊ
ಳೋರೋಂದೆಸೆದಿರ್ಪುದಿಂತಕೃತ್ರಿಮಚೈತ್ಯಾ
ಗಾರಂಗಳ್ ಭವ್ಯಜನಾ
ಧಾರಂಗಳ್ ಸಕಲ ದುರಿತನಿವಹ ಹರಂಗಳ್ ॥೭೪॥

ಅತಿಭಾಸುರಂಗಳತಿ ವಿ
ಶ್ರುತಂಗಳತಿ ಸುಂದರಂಗಳತಿಲಲಿತಂಗ
ಳುತವಹನಯನಾಂಬರಪ
ಕ್ಷತ ಈಷತ್ಪ್ರಾಗ್ಭಾರಮೆಂಬ ಭೂಮಿಯ ಮಧ್ಯದಲ್ಲಿ ॥೭೫॥

ವ।। ತ್ರಿಭುವನಭವನಕಲಶಾಯಮಾನಮುಂ ಯೋಜನದ್ವಿತಯಾಂತ್ಯ ಬಾಹಲ್ಯಮುಮಷ್ಟಯೋಜನ ಮಧ್ಯಬಾಹಲ್ಯಮುಂ ನಾಲ್ವತ್ತೈದುಲಕ್ಕೆಯೋಜನ ಸಮವೃತ್ತಪ್ರಕಾರಮುಂ ಶ್ವೇತಾತಪತ್ರಾಕಾರಮುಮಸೀತಾವನಿಯೆಂಬ ಶಿಸ್ಫಾಟಿಕಶಿಲಾತಲ ದ ಮೇಗರ್ಧಯೋಜನಬಾಹಲ್ಯದಿಂ ಘನೋದದಿಯಿರ್ಕುಮದಱರ್ಧಬಾಹಲ್ಯದಿಂ ಘನಾನಿಲಮಿರ್ಕುಮಲ್ಲಿಂದತ್ತಲ್ ನಾಲ್ನೂಱಿರ್ಪ್ಪತ್ತೈದುಬಿಲ್ಗುಂದಿದೊಂದು ಕ್ರೋಶ ಬಾಹಲ್ಯಮಾಗಿರ್ದ ತನುವಾತದ ಮೇಗಳ ಭಾಗದೊಳಷ್ಟಕರ್ಮನಿರ್ಮೂಲಕರ ರುಮಪ್ಪ...... ಲಯರುಮಪ್ಪ ಸಿದ್ಧಪರಮೇಷ್ಠಿಗಳಿಮ್ ಸಿದ್ಧಕ್ಷೇತ್ರಮದಕ್ಷಯಮ ನಂತಮವ್ಯಾ [ಭಾಧಮಪು] ನರ್ಜಾತಮಕ್ಕುಂ

ನಿರುಪಾಯಂ ನಿರ್ವಿಕಲ್ಪಂ ನಿರುಪಮವಿಭವಂ ನಿಶ್ಚಲಂ ನಿ.........
ನಿರಪೇಕ್ಷಂ ನಿರ್ಮಮತ್ವಂ ನಿರವಧಿವಿಷಯಂ ನಿಷ್ಕಲಂಕಂ ....
....................ತಶ್ರೀ ನಿರಘನಿಖಿಲನಿರ್ವಾಣನಿರ್ವ್ಯಾಕುಲಶ್ರೀ
ನಿರುತಶ್ರೀ ನಿವೃತಿಶ್ರೀ ನಿರತಿಶಯನಿರಾ........ಶ್ರೀ ।।೭೬।।

ಜಿನಪೂಜಾವಿಧಿಯಿಂದಮಾಚರಿತದಿಂ ಸದ್ಧ್ಯಾನದಿಂ ತತ್ವಭಾವ
.........................ತ್ತಮದಾನಪಲದಿಂ ಸಮ್ಯಗ್ವ್ರತವ್ರಾತದಿಂ
ತನುವಂ ದಂಡಿಸಿ ನೋಂತು ದಿವ್ಯತಪದಿಂ ಸ್ವರ್ಗಂಗಳೊಳ್ಪುಟ್ಟಿಭ
ವ್ಯನಿಕಾಯಂ ಕ್ರಮದಿಂದನಂತಸುಖಮುಕ್ತಿಸ್ಥಾನಮಂ ಪೊರ್ದುವರ್ ।।೭೭

ವ।। [ಎಂದಿಂ]ತಾ ತ್ರಿಲೋಕೈಕವಂದ್ಯಂ ತ್ರಿಲೋಕಪ್ರಜ್ಞಪ್ತಿಯಂ ಪರಿವಡಿ ದಪ್ಪದೆ ಪರಿವಡಿಗೆಯ್ವುದುಮಿತ್ತಲನ್ನೆಗಂ ಮಣಿಮಾಡದ ನೆಲೆಯೊಳಮಲಮಳ ಯಜಚ್ಚಟಾಲಿಪ್ತಂ ಪದ್ಮರಾಗಮಣಿಕುಟ್ಟಿಮಪ್ರಕೀರ್ಣಮಾದ ಚಂಚಚ್ಚಂಚರೀಕ ನಿಕುರುಂಬ ಶಬಲವಿಚಕಿಲ ಕುಟ್ಮಲದೊಳವಿರಳಾಲಂಬಮಾನಮುಕ್ತಾದಾಮಸಂತಾನರಮಣೀಯಾವದಾತ ವಿತಾನದೊಳುದಾತ್ತ ಭಿತ್ತಿ ರಶ್ಮಿಜಾಲಜಟಿಲತಬಹಲಮಣಿ [ದೀ] ಪ್ರದೀಪ್ತಿಕಾಪ್ರಸರಪ್ರಭಾಭಾಸುರದೊಳಖಿಲಸುರಭಿಪರಿಮಲಾಮೋದಕಾಲಾಗರುಧೂಪಿ ತಧೂಮೋದ್ಗಾರಿ ಮರಕತಗವಾಕ್ಷಜಾಲಪರಿಶೋಭಿತದೊಳತ್ಯಂತ ಚಂದ್ರಕಾಂತ ಮಣಿಪೀಠಿಕಾಧಿಷ್ಠಿತಪರ್ಯಂಕದೊಳ್ ಪಯಃಪಯೋಧಿಡಿಂಡೀರಪಿಂಡಪಾಂಡುರೋ ಪಹಾಸಿಧವಳದುಕೂಲಾಚ್ಛದಾಚ್ಛಾದಿತ ಮೃದುತಲ್ಪದೊಳ್ ಸೂಟಿಸ್ಗೆವಂದ ನಿಜಮನೋವಲ್ಲಭೆಯೊಡನನ್ಯೋನ್ಯಾಂಗಸ್ಪರ್ಶನಾಲಿಂಗನಸುಖೋನ್ಮೀಲಿತಲೋಚನನಾಗಿ ಪರಮೋತ್ಸವದಿಂ ಪವಡಿಸಿ ಸುಖನಿದ್ರನಾದ ಸುಕುಮಾರಂ ತನ್ನಿಚ್ಛೆಯಿಂ ಮುನ್ನಮುನ್ನಿದ್ರಿತನಾಗಿ ತದೀಯ ಮುನೀಶ್ವರಮುಖಕಮಲ ವಿಗಲಿತ ಮೃದುಮಧುರ ಗಂಭೀರಧ್ವನಿಯನಾಲಿಸಿ ಕೇಳುತ್ತಮಚ್ಯುತಕಲ್ಪದೊಳ್ ಮುನ್ನೆ ತನ್ನಪುಟ್ಟಿ ಬ[ಂದಪದ್ಮಗು]ಲ್ಮ ವಿಮಾನ ವ್ಯಾವರ್ಣನಾಕರ್ಣನದಿಂ ಜಾತಿಸ್ಮರನಾಗಿ ಲೋಕತ್ರಯಸ್ಥಿತಿವಿನಿ..... ತ್ರೀಯಾಂತ ರಂಗದೊಳ್ ಸಮ್ಯಗ್ನಿಶ್ಚಯಸ್ವರೂಪದಿಂ ಭಾವಿಸಿ ನೋಡಿನೋಡಿ

ದಿಟ..................ರಟಮಿಾ ಸಂಸಾರಿಜೀವಂಗಳು
ತ್ಕುಟನಾನಾಪರಿಣಾಮದಿಂ ಭ್ರಮಿಯಿಸುತ್ತಿರ್ಪ .... ಡಂ
ತುಟಮುಂನಿಂತುಟನಿಂತುಟೆಂದಱಿಯದೀ ದುರ್ಮೋಹದೊಳ್ ಸಿಲ್ಕಿನಿ
ಸ್ಫುಟ.......ಮಱಿದಿರ್ದೆನೆನ್ನ ತನುವಾರ್ಗ್ಗಾನಾರ್ಗೆ ಪೇೞಿಕ್ಕಿಕ್ಕುವಂ ॥ ॥೭೮॥

ಪೃಥ್ವಿ ॥ ಕ್ಷಯಪ್ರತಥಿಯಿಂದನಾದ್ಯನಿದ ....ವಾತ್ಮಿಕ
ತ್ರಮಿಾಭುವನಮಧ್ಯದೊಳ್ ಚತುರಶೀತಿಲಕ್ಷಪ್ರಮಾ
ಣಯೋನಿಮುಖದೊಳ್ಪಲೋ...... ಯಮನಂತಕಾಲಂ ನಿರಾ
ಶ್ರಯಂ ತೊೞಲುತಿರ್ದೆನಿನ್ನೆವರೆಗಂ ಭವಾರಣ್ಯದೊಳ್ ॥೭೯॥

ಅನುಪಮದಿವಿಜಸುಖಾಮೃತ
ವನನಿಧಿಯಂ ಪೀರ್ದು ತೃಷ್ಣೆ ಪೋಗದೆ ಮಾಯ್ದಾ
ಮನುಜಸುಖಮೆಂಬ ಮಂಜಿನ
ಪನಿಪುಲ್ಲಂ ನಕ್ಕೆ ತೃಷ್ಣೆ ತಾಂ ಪೋದಪುದೇ ॥೮೦॥

ಕಡೆಯಿಲ್ಲದ ಸಂಸಾರದ
ಕಡೆಯಂ ಕಡೆಯೆಯ್ದೆ ಕಟ್ಟಿ ತಡೆಮಾಟ್ಟಿ ಗುಣಂ
ಕಡೆಗೋಡಿವರಿಯೆ ಮೋಕ್ಷದ
ಕಡೆಯಿಲ್ಲದ ಪರಮಸುಖಮನೀಗಳೆ ಪಡೆವೆಂ ॥೮೧॥

ಪುಟ್ಟಿದ ಲೋಕಮಿಲ್ಲ ನಸುಪೊಂದದ ತಾಣಮದೊಂದುಮಿಲ್ಲ ಮೆ
ಟ್ಟಿಟ್ಟಗಪಟ್ಟುಕೂಡೆ ಮತಿಗೆಟ್ಟಿರ್ದೆಗೆಟ್ಟು ಬೞಲ್ದುೞಲ್ದು ಬಾ
ಯ್ವಿಟ್ಟು ಕುಯೋನಿಯೊಳ್ತಿರಿದು ಪೋದುವು ಕಾಲಮನಂತಮಂತಱಿಂ
ಪುಟ್ಟದೆ ಪೋದದಿರ್ಪ ಬಗೆಯಂ ಬಗೆದಂದು ಕೃತಾರ್ಥನಾಗೆನೇ ॥೮೨॥

ವ॥ ಎಂದು ಪರಮವೈರಾಗ್ಯಭಾವನೆಗಳಂ ಭಾವಿಸುವಾಗಳ್

ಪರಮಾಯು ಮೂಱುದಿವಸಂ
ಚರಿತಂ ಚರಿತಾರ್ಥನಾಗು ನೀ ನೆಂಬವೊಲಾ
ಪುರದೊಳಗೆ ಮೂಱುಜಾವಂ
ಪರಿವಡಿಸಿತ್ತೋತು ತನಗೆ ಪೇಟ್ವಿಂತಾಗಳ್ ॥೮೩॥

ವ॥ ತದನಂತರಮಾ ಮಹಾತ್ಮಂ ಸಕಳದುರಿತಹರಣಕರಣಕಾರಣತಪಶ್ಚರಣ ಪರಿಣತಾಂತರಂಗನಾಗಿ ತದ್ಗೃಹಾಂತರಾಳದಿಂ ಪೊಱಮಟ್ಟು ಪೋದೊಡೆ ರಕ್ಷ ಪಾಳಾನುಚರರಿ.............. ಯಮಕ್ಕುಮೆಂದು ಮೋಹನೀಯ ಬಂಧದ ತೊಡರ್ಪಂ

ಪತ್ತುವಿಡಿಸುವಂದದಿಂ ...... ತೊಡರ್ಪಂ ಪತ್ತುವಿಡಿಸಿ ರತ್ನತ್ರಯದ ಭಂಡಾರಮಂ ತೆಱೆವಂತೆ ಪಟ್ಟಸಭಂಡಾರ .... ಸಮ್ಯಗ್ವ್ರತಂಗಳುಮಂ ತೆಗೆದುಕೊಳ್ವಂತೆ ವಿಚಿತ್ರವಸ್ತ್ರಂಗಳಂ ತೆಗೆದುಕೊಂಡು ತನ್ನ..... ಇಕ್ಕುವಂತೊಂದನೊಂದಱೊಳ್ ಗಂಟಿಕ್ಕಿ ವಿಷಮವಿಷಯಮದೇಭಮನಾಳಿಸಿ ಕಟ್ಟುವಂತೆ ಮೆ...... ಂದಾಕಂಬದೊಳ್ ಬಲ್ಲಿತ್ತುಗಟ್ಟಿ ಬಱೆಯಮದನಾ ಮಾಡದ ಪೆಱಗಣ್ಗೆಟ್ಟಿಯಲಿಕ್ಕಿ ಪರೀಷಹ [ಭ]ಟರಂ ಬಂಚಿಸುವಂತೆ ಕಾಪಿನ ಬಂಟರಂ ಬಂಚಿಸಿ ಪರಾರ್ಧ್ಯಗುಣಮಾಲೆಯಂ ಪಿಡಿವಂತಾ ವಸ್ತ್ರಮಾಲೆಯಂ ಪಿಡಿದು ಸಂಸಾರ ಮಹಾಪರ್ವತದಿನಿೞಿವಂತೆ ಕರುಮಾಡದಿನಿೞಿದು ತಪೋವನಮಂ ಪುಗುವಂತಾ ಬನಮಂ ಪೊಕ್ಕು

ಮಣಿಕೂಟಾಟೋಪದಿಂದಂ ಮಣಿಮುಕುರವಿಲಾಸಗಳಿಂದಂ ಸಮುದ್ಯ
ನ್ಮಣಿಘಂಟಾಮಾಲೆಯಿಂದಂ ಮಣಿಕನಕಸಮೂಹಂಗಳಿಂದಂ ಬೆಡಂಗಿಂ
ಗೆಣೆಯಿಲ್ಲೆಂಬಂದದಿಂ ಕರಮೆಸೆವ ಜಿನಾಗಾರಮಂ ಭವ್ಯಚಿಂತಾ
ಮಣಿಗೇಹಂ ಬಂದು ಕಂಡಂ ಪರಮಜಿನಮತಾಂಭೋಜಿನೀರಾಜಹಂಸಂ ॥೮೪

ಇದು ಸಮಸ್ತವಿನೇಯಜನವಿನಮಿತ ಶ್ರೀವರ್ಧಮಾನಮುನೀಶ್ವರವಂದ್ಯ
ಪರಮಜಿನೇಂದ್ರಶ್ರೀಪಾದಪದ್ಮವರಪ್ರಸಾದೋತ್ಪನ್ನ ಪ್ರಸನ್ನ ಸಹಜಕವೀಶ್ವರ
ಶ್ರೀ ಶಾಂತಿನಾಥಪ್ರಣೀತಮಪ್ಪ ಸುಕುಮಾರಚರಿತದೊಳ್
ಸುಕುಮಾರಸ್ವಾಮಿಯ ಜಿನಭವನದರ್ಶನಂ
ಏಕಾದಶಾಶ್ವಾಸಂ

೧೨. ದ್ವಾದಶಾಶ್ವಾಸಂ

ಶ್ರೀಮಜ್ಜಿನನಿಳಯಮನು
ದ್ದಾಮಗುಣಂ ತ್ರಿಃಪ್ರದಕ್ಷಿಣಂ ಗೆಯ್ದು ಜಿನ
ಶ್ರೀಮುಖಮಂ ಕಂಡಂ ಲ
ಕ್ಷ್ಮೀಮುಖಮುಕುರಂ ಸರಸ್ವತೀ ಮುಖಮುಕುರಂ ||೧||

ವ|| ಅಂ..........ವಿನತಮಸ್ತಕನ್ಯಸ್ತಹಸ್ತಯುಗನಾಗಿ ವಿಶುದ್ಧಪರಿಣಾಮದಿಂ ಭಗವದರ್ಹತ್ಪರಮೇಶ್ವರಶ್ರೀಮುಖಕ್ಕಭಿಮುಖನಾಗಿ

ಜಯಕರ್ಮಾರಾತಿನಿರ್ಮೂಲನಕರ ಜಯದೇವಾದಿಸಂಸ್ತುತ್ಯಪಾದ
ದ್ವಯಲೋಕಾಲೋಕವಸ್ತುಪ್ರಕಟನಕರ ಮಾಂಗಲ್ಯಕೈವಲ್ಯಬೋಧೋ
ದಯ ಮುಕ್ತಿಶ್ರೀವಧೂವಲ್ಲಭ ಜಯಜಯ ಸರ್ವಸಮ್ಯಕ್ತ್ವಸಂಶು
ದ್ಧಿಯನೀಗಳ್ ಶಾಶ್ವತಂಮಾಡೆನಗೆ ಕರುಣದಿಂದಂ ತ್ರಿಲೋಕಾಧಿನಾಥಾ ||೨||

ಭ್ರಮೆಯಿಂ ದುರ್ಮಾರ್ಗಬಂಧಪ್ರಕೃತಿಯ ವಶದಿಂದಿನ್ನೆಗಂ ಘೋರಸಂಸಾ
ರಮಹೋಗ್ರಾರಣ್ಯದೊಳ್ ತಿಟ್ಟನೆ ತಿರಿದು ಕರಂ ಸೇದೆಗೆಟ್ಟಿರ್ದುಸನ್ಮಾ
ರ್ಗಮನಾನೆಂತಾಗಿಯುಂ ಪೊರ್ದಿದೆನಭವ ಶರಣ್ ನೀನೆ ನಿರ್ವ್ಯಾಕುಲಂ ಬೋ
ಧಮನವ್ಯಾಬಾಧಮಂ ಮಾಡೆನಗೆ ಕರುಣದಿಂದಂ ತ್ರಿಲೋಕಾಧಿನಾಥಾ ||೩|

ಮುನ್ನೆಂದುಂ ನಿನ್ನನೇನೆಂದಱಿಯದೆ ಮತಿಗೆಟ್ಟಿರ್ದು ದಿಙ್ಮೂಢನಾದೆಂ
ನಿನ್ನಂ ಕಂಡೀಗಳೀಗಳ್ ತಿಳಿದು ತಿಳಿವನಾಂ ಕಂಡು ಕೈಕೊಂಡೆನೆನ್ನಂ
ನಿನ್ನನ್ನಂ ಮಾಡುವನ್ನಂ ಪರಮಜಿನಪತೀ ಚಾರುಚಾರಿತ್ರಮಂ ನಿ
ಚ್ಚನ್ನಿಚ್ಚಂ ನಿಶ್ಚಲಂ ಮಾಡೆನಗೆ ಕರುಣದಿಂದಂ ತ್ರಿಲೋಕಾಧಿನಾಥಾ ||೪||

ವ|| ಎಂದಿಂತನೇಕಸ್ತುತಿಗಳಿಂ ತ್ರಿಲೋಕಸ್ತುತನಂ ಸ್ತುತಿಯಿಸಿ ಪರಮತಪಃ ಶ್ರೀಪದಕ್ಕೆ-ಱಗುವುದನನುಕರಿಸುವಂತೆ ತನುಮ್ನೀಶ್ವರನ ಶ್ರೀಪಾದಪದ್ಮಕ್ಕೆ ಸಾಷ್ಟಾಂಗಮೆಱಗಿ ಪೊಡೆವಟ್ಟು

ಶುಭಭಾವನೆಯಿಂ ಸಂಸಾ
ರಭೋಗನಿರ್ವೇಗವಾದ ದೆಸೆಯಿಂದಂತಃ

ಪ್ರಭೆ ಬೆಳಗೆ ದೀಕ್ಷೆಯಿಬ್ಬಾ
ಮಿ ಭಟಾರಾಯೆಂದು ತತ್ಕುಮಾರಂ ನುಡಿದಂ ॥೫॥

ಆದಿರಿದೆ ಪೆಱತೆಗೆಯದೆ ಬೆ
ಚ್ಚದೆ ಬೆದಱದೆ ಸುಗಿಯದಗಿಯದೆಡೆಯಿಂ ಕೋಲೊ
ಡ್ಡಿದ ಬಿರುದಿನಂಕದಂದದಿ
ನದೇಂ ಪರಿಚ್ಛೇದಮಾತನೊಳ್ ಕೂಡಿದುದೋ ॥೬॥

ಅವನತನಾಗಲೊಂಡಂ ಧ
ರ್ಮವೃದ್ಧಿಯಕ್ಕೆಂದು ಪರಸಿ ಪರಮಾಶೀರ್ವಾ
ದವಿಶೇಷವಚನದಿಂ ತ್ರೈ
ಭುವನಸ್ತುತಚರಣನಳಿನನತಿನಿರ್ಮಳನಂ ॥೭॥

ಮುನಿನಾಥನವಧಿಯಿಂ ಬಗೆ
ದು ನೋಡಿ ನಿನಗಾಯುರವಧಿ ಮೂಱುದಿನಂ ನೀ
ನನುನಯದಿ ನೋಡೊಳ್ಳಿತ್ತಂ
ವಿನಯದೆ ಬಗೆದುದನೆ ಬಗೆಗೆ ಭವ್ಯಸಮೂಹಂ ॥೮॥

ವ॥ ಎಂದು ಸುಕುಮಾರಸ್ವಾಮಿಯ ಪರಿಚ್ಛೇದಕ್ಕೆ ಯಶೋಭದ್ರಸ್ವಾಮಿಗಳ್ ಮೆಚ್ಚಿ ಬಿಚ್ಚಳಿಸಿ [ದೀಕ್ಷಾ] ಪ್ರಸಾದಂಗೆಯ್ವುದುಂ

ಅಪರಿಮಿತಶ್ರೀಯಂ ಕೊಳೆ
ದ ಪುಲ್ಲನೀಡಾಡುವಂತೀರಾಡಿ ಮಹಾ
ತಪಮಂ ಕೈಕೊಂಡಂ ಪು
ಣ್ಯಪದವಿಯಂ ನೆಱೆಯೆ ಸೂಱೆಗೊಳ್ವಂತಾಗಳ್ ॥೯॥

ವ॥ ಅಂತು ಬಾಹ್ಯಾಭ್ಯಂತರಪರಿಗ್ರಹಪರಿತ್ಯಾಗಂಗೆಯ್ದು ರೂಪವಿದ್ಯಾಧರಂ ಸಂಜಾತಕಾಲಲಬ್ಧಿಯಿಂ ಜಾತರೂಪಧರನಾಗಿ ಗುರುಗಳಂ ಗುರುಭಕ್ತಿಪೂರ್ವಕಂ ವಂದಿಸಿ ದೀಕ್ಷಾಕಾಲಮೆ ತನಗಾ[ತ್ಮ] ಸಂಸ್ಕಾರಕಾಲಮಾಗಿರ್ದುದಱಿಂ ತಪಂ ಗೆಯ್ಯಲ್ ಕಾಲಮಿಲ್ಲೆಂದು ತ್ರಿಕರಣಶುದ್ಧಿಯಿಂ ಸಂನ್ಯಸನಮಂ ದಯಂಗೆಯ್ಯಿಮೆಂಬುದುಂ ತ್ರಿಸಾಕ್ಷಿಯಿಂ ಚತುರ್ವಿಧಾಹಾರಶರೀರನಿವೃತ್ತಿಶಾಸನಮಪ್ಪ ಸಂನ್ಯಸನಪ್ರತ್ಯಾಖ್ಯಾನಮಂ ದಯಂಗೆಯ್ದು

ಪ್ರಾಯೋಪಗಮನಮಂ ಗೆ
ಯ್ದಾ ಯತಿಪತಿ ನೀಂ ಸಪರ್ಯೆಗೆಯ್ಯಲ್ವೇಡೆಂ
ದಾ ಯತಿಪತಿ ತನ್ನೊಳ್ಬಗೆ
ದಾ ಯತಿಗಾಯತಿಯನುಂಟುಮಾಡಲ್ ನುಡಿದಂ ॥೧೦॥

ನಿನ್ನಂ ಪ್ರತಿಭೋಧಿಸಲೆಂ
ದಿನ್ನೆಗಮಿಲ್ಲಿರ್ದೆಮಿದುವೆ ತಾತ್ಪರ್ಯದಿನೀ
ನಿನ್ನ ಬಗೆ ಕೂಡಿದುದುೞಿಂ
ನಿನ್ನನೆ ನೀಂ ಬಗೆವುದಿನಿತೆ ಬಗೆ ಬಗೆವಾಗಳ್ ॥೧೧॥

ಮುನ್ನಾದ ಮುನೀಶ್ವರರುಂ
ನಿನ್ನನೆ ನೆನೆಯುತ್ತಮಿರ್ದರಿನ್ನಪ್ಪವರುಂ
ನಿನ್ನನೆ ನೆನೆವರ್ ನೀನುಂ
ನಿನ್ನನೆ ನೆನೆ ಜಿನಪದಂಗಳಂ ನೆರೆಯುತ್ತಂ ॥೧೨॥

ಉಪಸರ್ಗಂಗಳ್ ಪುಟ್ಟಿದೊ
ಡೆ ಪರೀಷಹವಿಜಯಿಯಾಗಿ ನಿಶ್ಚಿಂತಂ ಸ್ಮ
ರಿಪುದಿನಿತೆ ಬೞಿಕೆ ನಿಶ್ಚಿತಂ
ತ ಪರಮಸೌಖ್ಯಾಸ್ಪದಕ್ಕೆ ಭಾಜನನಪ್ಪೈ ॥೧೩॥

ವ॥ ಎಂದು ಪರಿ...... ಮಪಥ್ಯಮುಂ ತಥ್ಯಮುಮಾಗೆ ನುಡಿದು ಸಂಬೋಧಿಸಿದ ಗುರುಗಳ ವಚೋವಿಸ್ತರಮಂ ಸುಕುಮಾರಮುನೀಶ್ವರನವದಾರಿಸಿ

ಮುನಿಪತಿ ನಿಮ್ಮಿಂ ಪ್ರತಿಬೋ
ಧನಿಮಿಂದಾದತ್ತು ನಿ ಮ್ಮ ದಯೆಯಿಂದೆ ಕೃತ
ರ್ಥನೆನಾನ ದಲ್ಲದಿರ್ದಂ
ದೆನಗೆ ಜಿನೇಶ್ವರ ತಪಃಪ್ರಭಾವವಭಾವಂ ॥೧೪॥

ಅವಿವೇಕಾತ್ಮತೆಯಿಂದೆ ಮೆಯ್ಯಱಿಯದಾಂ ದಿಙ್ಮೂಢನಾಗಿರ್ದೆನಿ
ನ್ನವೆರಂ ನಿಮ್ಮಡಿ ನಿಮ್ಮನುಗ್ರಹದಿನೀಗಳ್ ನಿಶ್ಚಯಂ ನಿಮ್ಮ ನ
ವ್ಯವಚೋವೃತ್ತಿಯನೀ ನಿವೃತ್ತಿ ದೊರೆಕೊಂಡತ್ತಲ್ಲದಿರ್ದಾಗಳೀ
ಭವವಾರಾಶಿಯೊಳರ್ದೊಡೆತ್ತು ವವರಾರೆನ್ನಂ ಮುನೀಂದ್ರೋತ್ತಮಾ ॥೧೫॥

ವ॥ ಎಂದು ನುಡಿಯುತ್ತುಮಿರೆಯಿರೆ

ಪುದಿದೊಂದಿರ್ದಂಧಕಾರಂ ಬೆದಱಿ ಪರೆಯೆ ನೀರ್ವಕ್ಕಿಗಳ್ ಕೂಡಿ ತೋಡಾ
ಗೆ ದಿಗಂತಗಳ್ ನಿತಾಂತಂ ತೊಳಗಿ ಬೆಳಗೆ ಪಂಕೇಜಷಂಡಂಗಳೆಲ್ಲಂ
ಮುದದಿಂದೆತ್ತೆತ್ತಲೋರಂತಲರ್ದೆಸೆದಿರೆ ಪೂರ್ವಾಚಳೇಂದ್ರಾಗ್ರದೊಳ್ ಬಂ
ದುದಯಂಗೆಯ್ದತ್ತು ಶೋಭಾರುಣಕಿರಣಗಣಾಳಂಬಮಾದಿತ್ಯಬಿಂಬಂ ॥೧೬॥

ವ॥ ಅಂತು ಮಾರ್ತಾಂಡೋದಯಮಪ್ಪುದುಂ ಭವ್ಯವರಪುಂಡರೀಕ ಮಾರ್ತಡಂ ನಿತ್ಯಮಂಡಿತಜಿನಾಲಯಮುವಂ ತ್ರಿಃಪ್ರದಕ್ಷಿಣಂಗೆಯ್ದು ದಕ್ಷಿಣಾಭಿಮುಖವಾಗಿ ತತ್ಪುರಬಹಿರುಪವನಮಧ್ಯಪ್ರದೇಶದೊಳ್ ಮುಕ್ತಿಶ್ರೀಕಾಮಿನೀತಿಲಕಮೆಂಬಂತಿರ್ದ ತ್ರಿಭುವನತಿಲಕವೆಂಬ ಚೈತ್ಯಾಲಯಕ್ಕೆ ವಂದಿರ್ದರಿತ್ತಲಾ ಮುನೀಶ್ವರನಾ ವನಾಂತರಾಳದಿಂ ಪೊಱಮಟ್ಟುತ್ತರೋತ್ತರಸುಖಾಭಿಮುಖನಪ್ಪುದನಭಿನಯಿಸುವಂತುತ್ತರದಿಶಾಭಿಮುಖನಾಗಿ

ಈರ್ಯಾಶುದ್ಧಿ ತಪೋಗುಣ
ಪರ್ಯಾಯವಿಶುದ್ಧಿಯೆಂಬುವಂ ಬಗೆವೀ ತಾ
ತ್ಪರ್ಯದಿನೇನುಂ ಬಗೆಯದೆ
ಶೌರ್ಯಸ್ಥಿತನಾಗಿ ಬಟ್ಟೆಯೊಳ್ ಮುನಿ ನಡೆದಂ ॥೧೭॥

ಕಡಕುಂ ಪರಲ್ಗಳುಂ ಮೆ
ಲ್ಲಡಿಗಳನೆಡೆಯುಡುಗದೊತ್ತಿದೆಡೆಯಿಂ ನೆತ್ತರ್
ಬಿಡದೆಚ್ಚು ಪಾಯೆ ಸಂಯಮಿ
ನಡೆದು ಮಹಾಕಾಳದೊಳಗನಾಗಳ್ ಪೊಕ್ಕಂ ॥೧೮॥

ವ॥ ಅಂತಾ ಮಹಾನುಭಾವನಾ ಮಹಾಕಾಳದೊಳ್ ಸುಪ್ರಾಸುಕ ಪ್ರದೇಶಮಂ ಕಂಡು ಯೋಗಯೋಗ್ಯಪ್ರದೇಶಮಪ್ಪುದಂದೇಕಾಗ್ರಚಿತ್ತದೊಳೇಕ ಪಾರ್ಶ್ವದೊಳ್ ಮೆಯ್ಯನಿಕ್ಕಿ ನಿಟಿಳತಟಘಟಿತಕರಪುಟಯುಗಲನುಂ ಧರ್ಮಧ್ಯಾನೋಪಯೋಗನುಮಾಗೆ ವೀರಪ್ರಯೋಗಮನವಿಧಿಯಿಂ ವಿರಸ್ತಯ್ಯಾತಳಗತನಾಗಿರ್ದನನ್ನೆಗಮಿತ್ತಲಾ ಮಣಿಮಾಡದ ನೆಲೆಯೊಳ್ ಸುಕುಮಾರಸ್ವಾಮಿಯೊಡನೆ ಪವಡಿಸಿದ ಮನೋಹರಿಯೆಂಬ ನಯನಮನೋಹರಿ ಬೆಳಗಾದಾಗಲೆಚ್ಚತ್ತುರ್ ನಿಜಮನೋವಲ್ಲಭನಂ ಕಾಣದೆ ಕೆಟ್ಟೆ [ನೆಂದು] ಬಾಯ್ವಿಟ್ಟು ಪರಿಚಾರಕಿಯರಂ ಕರೆದು ಮಾಡದೋವರಿಗಳೊಳೆಲ್ಲಮಱಸಿ ಕಾಣದೆ ಗದ್ಗದ ಕಂಠೆಯಾಗಿ ಯಶೋಭದ್ರೆಗಱಿಪಿದಾಗಳ್

ತನಗಾಕಸ್ಮಿಕ ಶಂಕೆ ತನ್ನ ಮನದೊಳ್ ಮುಂಪುಟ್ಟೆ ತತ್ಕಾಂತೆಯಂ
ದಿನಿರುಳ್ ಚಿಂತಿಸಿ ನಿದ್ದೆಗೆಟ್ಟು ಮತಿಗೆಟ್ಟಿರ್ದಂತಿದಂ ಕೇಳ್ದು ತ
ಟ್ಟನೆ ಮೂರ್ಛಾಗತೆಯಾಗೆ ಬಂಧುಜನಮೆಲ್ಲಂ ಬಂದು ಶೀತಾಂಬುವಂ
ಘನಮಾಗಲ್ತಳಿದಾಗಳೆಚ್ಚಱಿಸಲಂತೆಚ್ಚತ್ತು ವಿಶ್ರಾಂತಿಯಿಂ ॥೧೯॥

ವ॥ ಸೊಸೆವಿರೆಲ್ಲರುಮನೊಡಗೊಂಡು ಬಳ್ಳಿಮಾಡಂಗಳೊಳೆಲ್ಲಮಱಸಿ ಕರುಮಾಡಮನೇಱಿ ನೋಡುವಾಗಳಾತ್ಮೀಯ ವೈಶ್ಯವಂಶಧ್ವಜಂ ದುರಿತಾ ರಾತಿವಿಜಯದಿಂದೆತ್ತಿಸಿದ ವಿಜಯಧ್ವಜದಂತೆ ಮಿಳಿರ್ದು ಪೊಳೆವ ದುಕೂಲದ ವಿಚಿತ್ರವಸ್ತ್ರಮಾಲೆಯಂ ಭೋಂಕನೆ ಕಂಡು

ಇಱಿದಿಲ್ಲಿಂದಮೆ ಪೋದನೆಂದು ಮನದೊಳ್ನಿಶ್ಚಯಿಸಿ ತಾಂ ಮಾಡದಿಂ
ದಿೞಿದಾತ್ಮೀಯ ಸಹಾಯವರ್ಗಸಹಿತಂ ತನ್ನಂದನೋದ್ದೇಶದೊಳ್
ತೊೞಲುತ್ತುಂ ತರುಗುಲ್ಮರಾಜಿಗಲೊಳೆಲ್ಲಂ ನೋಡಿ ಶೋಕಾಕುಲಾ
ವಿಳೆಯಾದಲ್ ಪ್ರಿಯಪುತ್ರಮೋಹವಶದಿಂದೇನಾಗರೇಗೆಯ್ಯರೋ ॥೨೦॥

ವ॥ ಅಗಳಾ ಮೂವತ್ತಿರ್ವರ್ಕಾಂತೆಯರುಮಾತ್ಮೀಯ ಪತಿವಿಯೋಗೊದ್ವೇಗದಿಂ ಶೋಖಾಕ್ರಾಂತೆಯರಾಗಿ ಮೆಯ್ಯಱಿಯದೆ

ಎಳೆಮಾವೇ ಲತೆಯೇ ತಮಾಳಚಯಮೇ ಪೆಣ್ಣಂಚೆಯೇ ಕೊಂಚೆಯೇ
ವಿಲಸಚ್ಚಂಪಕಮೇ ಲಸತ್ಪುಳಿನಮೇ ಪುನ್ನಾಗಮೇ ಪೂಗಮೇ
ಕೊಳನೇ ಪಂಕಜಮೇ ನಮೇರುಕುಜಮೇ ಬಾಱಿಝೊಂಪಮೇ ಕೋಗಿಲೇ
ಗಿಳಿಯೇ ಕಂಡಿರೆ ಪೇೞಿಮೆಮ್ಮಪತಿಯಂ ಶ್ರೀರೂಪಕಂದರ್ಪನಂ ॥೨೧॥

ವ॥ ಎಂದು ವನತರುಲತಾವನಚರಂಗಳಂ ಕಂಡತಿಪ್ರಲಾಪಂಗೆಯ್ವಾಗಳ್ ಬಂಧುಜನಮುಂ ಪರಿಜನಮುಂ ನೆರೆದು ಬಂದು ಬನ್ನಿಮಿನ್ನುಮಱಿಸುವಮೆಂದು ಪುರಪ್ರ[ಕ್ಷೋ]ಭಮಾಗೆ ಪುರದೊಳಗೆ ತೊೞಲ್ದಱಿಸುತ್ತುಂ

ಸುರರಾಜವಿಭವನಂ ಕಂ ।
ಡಿರೆ ರೂಪಮನೋರಾಜನಂ ಕಂಡಿರೆ ಭಾ
ಸ್ಕರತೇಜನನೀಗಳ್ಕಂ
ಡಿರೆ ಗುಣಿಯಂ ಭವ್ಯಸೇವ್ಯಚಿಂತಾಮಣಿಯಂ ॥೨೨॥

ವರಪುಣ್ಯಾಧಾರನಂ ಕಂಡಿರೆ ಗುಣಧರನಂ ಕಂಡಿರೇ ಭೋಗಿಯಂ ಕಂ
ಡಿರೆ ಲಕ್ಷ್ಮೀಕಾಂತನಂ ಕಂಡಿರೆ ವಿಶದಯಶೋರಾಶಿಂ ಕಂಡಿರೇ ಸೌಂ
ದರದಿವ್ಯಾಕಾರನಂ ಕಂಡಿರೆ ಸುಖಮಯನಂ ಕಂಡಿರೇ ರೂಪವಿದ್ಯಾ
ಧರನಂ ನೀಮಾರುಮೇಂ ಕಂಡಿರೆ ಮನಸಿಜನಂ ಕಂಡಿರೇ ಪೇೞಿಮಿಗಳ್ ॥

ವ॥ ಎಂದು ಪುರಜನಂಗಳಂ ಬೆಸಗೊಳುತ್ತುಮಾತ್ಮೀಯಾವಾಸಕ್ಕೆ ಮಗುೞಿವರ್ಪಾಗಳ್

ಉದಿತಶಶಾಂಕನಿಲ್ಲದಿರುಳಂತೆ ವಿನೂನವಸಂತರಾಜನಿ
ಲ್ಲದ ವನಲಕ್ಷಿಯಂತೆ ದಿವಿಜೇಶ್ವರನಿಲ್ಲದ ಸಗ್ಗದಂತೆ ಚೆ
ಲ್ವೊದವಿದ ಪದ್ಮಮಿಲ್ಲದ ಸರೋವರದಂತೆ ಜನಕ್ಕೆ ಬಿನ್ನನಿ
ರ್ದುದು ಸುಕುಮಾರನಿಲ್ಲದೆ ಪಲರ್ನೆರೆದಿರ್ದೊಡಮಾಗಳಾ ಗೃಹಂ ॥೨೪॥

ವ॥ ಅಂತು ಬಿನ್ನನಿರ್ದ ಕುರುಮಾಡಮಂ ಕಂಡು ಮಗನಂ ಕಾಣದಾ ಬಾಳೆ ಕಾದ ಪುಡಿಯೊಳ್ ಬಿರ್ದೆಳವಾಳೆಯಂತೆ ಬಂಬಳ ಬಾಡಿ ತಿಱಿದಿಕ್ಕಿದ ತಳಿರಂತೆ ಕೊಗ್ಗನೆ ಕರಗಿ

ಶೋಕಾವೇಗತತ್ಪರೆಯಾಗಿರ್ಪುದುಂ ಸ್ವಜನಪರಿಜನಂಗಳೆಲ್ಲಂ ಪಸಿವುಂ ನಿದ್ರೆಯುಮೆಂಬ ಚಿಂತೆಯುನೇನೆಂದಱಿಯದೆ ಚಿಂತಿಸುತ್ತಂ ಪೊಟಿಲೊಳಂ ಕೆಲದೂರ್ಗಳೊಳೆಲ್ಲ ಮಱಿಸುತ್ತಿರ್ದರಿತ್ತಲನ್ನೆಗಮಾ ಸುಕುಮಾರಸ್ವಾಮಿ ಮುನ್ನೆ ವಾಯುಭೂತಿಯಾದಂದಿನ ಭವದತ್ತಿಗೆಯಪ್ಪ ಸೋಮದತ್ತೆ ಸಂಸಾರಕಾಂತಾರದೊಳ್ ತಿಟ್ಟನೆ ತಿರಿದು ನಿದಾನಕಾರಣಮಾಗೆ ಪೆಣ್ನರಿಯಾಗಿ ಮುನ್ನಿನ ತನ್ನೆರಡು ಮಕ್ಕಳುಮಾ ಭವದೊಳ್ ತನಗೆರಡು ಮಱಿಗಳಾಗಿ ಪುಟ್ಟುವುದುಂ ಮಱಿಗಳ್ವೆರಸು ತಿರಿತರುತ್ತುಮಾ ಮಹಾಯೋಗೀಶ್ವರನ ನಡೆದ ಸಜ್ಜೆಯೊಳ್ ಮೃದುಪದತಳಂಗಲೊಡೆದುಚ್ಚಳಿಸಿ ಸೂಸಿದ ನೆತ್ತರ ಧಾರೆಯೊಳ್ ನಾದು ನನೆದಡಿವಜ್ಜೆಯನು ನಾತಂಬಿಡಿದು ಬಂದು ಮಹಾಕಾಳಶ್ಮಶಾನದೊಳಗೆ ಯೋಗ ನಿಯೋಗ ಧ್ಯಾನೋಪಯೋಗದಿಂ ನಿರುದ್ಧಕರಣ ನಿಸ್ಪಂದಶರೀರನಾಗಿ ಮೆಲ್ಲನಡಕಂ ಬೆರಸು ಪಟ್ಟಿರ್ದ ಋಷಿರೂಪಕಮಂ ಕಂಡು ಶಬಮೆಂದೆ ಸಾರ್ದು ತಾನೊಂದುಕಾಲಂ ತನ್ನೆರಡು ಮಱಿಗಳೊಂದು ಕಾಲಂ ಕೂಡೆ ತೋಡಿ ಸೀಳ್ದು ತಿಂಬಾಗಳ್

ನೆಱೆಯೆ ಚತುರ್ದಶಪೂರ್ವಮ
ನಱಿವಱಿತನ ತನಗೆ ನೆಱೆದು ನಿಲೆ ತನ್ನಂ ತಾ
ನಱಿದಿರ್ದುದಱಿಂದಂ ಮೆ
ಯ್ಯಱಿದಿರ್ದುಂ ನೋವನಱಿಯದಿರ್ದಂ ಮುನಿಪಂ ॥೨೫॥

ಕಂ ॥ ಜೀವಂ ಬೇಱೆ ಶರೀರಂ
ಭಾವಿಸೆ ಬೇಱೆಂಬ ಪರಮತತ್ವಾರ್ಥವ ಸ
ದ್ಭಾವವಿಚಾರಮನರಿವಾ
ಭಾವಾತ್ಮಂ ಮೆಯ್ಯನೋವನೇನರಿದಪನೇ ॥೨೬॥

....
....
....
ದಿರ್ದೆಡೆ ಯಿನಿರ್ದಧೈರ್ಯದೊಂದಳವದಚ್ಚರಿದಲಾ ಮುನೀಂದ್ರನಾ ॥೨೭॥

ವ॥ ಮತ್ತಮಾ ಮಹಾತ್ಮನಧ್ಯಾತ್ಮಮುಂ ಮನದೊಳವಲಂಬಿಸುತ್ತುಮ ಧ್ರುವಮಶರಣಮೇಕತ್ವಮನ್ಯತ್ವಸಂಸಾರಲೋಕಮಶುಚಿತ್ವಮಾಸ್ರವಸಂವರೆ ನಿರ್ಜರೆ ಧರ್ಮಬೋಧಿಯೆಂಬ ದ್ವಾದಶಾನುಪ್ರೇಕ್ಷೆಗಳಂ ಯಥಾಕ್ರಮದಿಂ ತನುಪ್ರೇಕ್ಷೆಗೆಯ್ದುಂ

ದಿಟವಭ್ರಾಕೃತಿಯೆಂತಂ ।
ತುಟಿ ತೊಟ್ಟನೆ ಬಂದ ಬೆಟ್ಟುತೋಱೆ ತಾನೆಂತಂ॥
ತುಟಿ ದಿವಿಜಚಾಪಮೆಂತಂ ।
ತುಟಿ ಭವವಿಭವಾಭಿಜಾತ್ಯಮೆಂತುಮನಿತ್ಯಂ ॥೨೮॥

ಭುವನತ್ರಯಂಗಳೊಳಮಿಾ ।
ಭವಕಾನನದೊಳಗೆ ಸುಳಿವ ಜೀವಂಗಳನಾ ॥
ಜವನೆಟಿದುಯ್ವಾಗಳ್ ಕಾ ।
ವವರಾರ್ ಶರಣಾರ್ ಜಿನೇಂದ್ರಧರ್ಮಮೆ ಶರಣಂ ॥೨೮॥

ಅನುಭವಪರ್ಯಾಯದೊಳೊ ।
ರ್ವನೆ ಭವಪರ್ಯಾಯಗತಿನಿಕಾಯಂಗಳೊಳೊ ॥
ರ್ವನೆ ಗುಣಪರ್ಯಾಯದೊಳೊ।
ರ್ವನೆ ಭಾವಿಸುವಾಗಳೆಂದುಮೊರ್ವನೆ ಜೀವಂ ॥೨೯॥

ಎನೆಗಾನೆ ನೆಱವು ವಸ್ತುಗ
ಳನೇಕಮೆನ್ನೊಡನೆ ನಿಂದುಮೇನವು ಪೇಲ್ದ
ರ್ಶನಸುಖವೀರ್ಯಜ್ಞಾನಾ ।
ತ್ಮನೆ ನಾನೆಂಬಿದುವೆ ತಾನೆ ನೆಗಲ್ದನ್ಯತ್ವಂ ॥೩೦॥

ನಾನಾವಿಧ ದುರ್ಗಂಧ ।
ಸ್ಥಾನಂ ಸಪ್ತವಿಧಧಾತುಗೆಂದುಂ ಜನ್ಮ ॥
ಸ್ಥಾನಂ ಕೃತಾಂತಗೇಹಮಿ ।
ದೇನಶುಚಿಯೊ ಮಾಯ್ದು ದೇಹಮಾರಯ್ವಾಗಳ್ ॥೩೧॥

ಪ್ರಕಟೇತರದ್ರವ್ಯಕ್ಷೇ ।
ತ್ರಕಾಲಭವಭಾವ ಭೇದದಿಂದೆ ವಿಚಿತ್ರಾ ॥
ತ್ಮಕಮೆನೆ ಸಂದೀ ಪಂಚ ।
ಪ್ರಕಾರ ಸಂಸಾರಮೇನಸಾರಮೊ ನೆನೆಯಲ್ ॥೩೨॥

ಅವಯುವದಿನಧೋಮಧ್ಯೋ ।
ರ್ಧ್ವ ವಿಭೇದವಿಭಿನ್ನಮಾಗಿ ಸಹಜಸ್ಥಿತಿಯಿಂ ॥
ಪವನತ್ರಯಸಂವೇಷ್ಟಿತ ।
ಭುವನತ್ರಯಮಿರ್ದ ಮಾರ್ಗಮೇನತಿಶಯಮೋ ॥೩೩॥

ಅಭಿಯೋಗಕರ್ಮಮಾಸ್ರವ ।
ವಿಭೇದಮದು ಪುಣ್ಯಪಾಪಕೃತದಿಂದೆ ಶುಭಾ॥
ಶುಭಕರ್ಮಾಸ್ರವಮೆಂಬೆರ ।
ಡು ಭೇದಮದುವೆ ಪಂಚಭೇದಮುಮಕ್ಕುಂ ॥೩೪॥

ನಿರವದ್ಯಮಹಾವ್ರತದಿಂ ।
ವರಸಮಿತಿಗಳಿಂ ತ್ರಿಗುಪ್ತಿಯಿಂದಾಸ್ರವಮಂ ॥
ದುರಿತಾರಾತಿಗಳಂ ನಿ ।
ರ್ಜರಿಸುವ ತಾತ್ಪರ್ಯಮದುವೆ ನಿರ್ಜರೆಯೆನಿಕುಂ ॥೩೬॥

ಅಭಿವಿನುತ ಧರ್ಮರತಿಯುಂ ।
ಸ್ವಭಾವವೈರಾಗ್ಯಭಾವಮುಂ ಸರ್ವಭವಾ ॥
ನುಭವವಿರಕ್ತತೆಯುಂ ದು ।
ರ್ಲಭಮದು ಭವ್ಯಪ್ರಬೋಧಬೋಧಿಯೆನಿಕ್ಕುಂ ॥೩೭॥

ಅಕ್ಷೂಣಗುಣಮಹಿಂಸಾ ।
ಲಕ್ಷಣಮಕ್ಷಯಮನಂತಮನುಪಮಮಮಲಂ ॥
ಮೋಕ್ಷಸುಖಹೇತುಭೂತಂ ।
ಸಾಕ್ಷಾತ್ಸದ್ಧರ್ಮಮಾರ್ಮಮಕ್ಕೆಮಗೆಂದುಂ ॥೩೮॥

ಎಂದಿಂತು ದ್ವಾದಶಾನುಪ್ರೇಕ್ಷಾಸ್ಮರಣಪರಿಣತಾಂತಃಕರಣನನುಸ್ಮರಣಂಗೆಯ್ವುತ್ತುಮಕ್ಷುಭಿತಮಹಾವಾರಿನಿದಿಯಿರ್ಪಂತಿರ್ದಾ ಮಹಾತಪೋನಿಧಿಗೆ

ತರದಿಂ ಮೂಱುದಿನಂಬರಂ ಭರದಿನೋರಂತಲ್ಲಿಯುಂ ಮಾಣದಾ
ನರಿಗಳ್ ಸೀಳ್ದು ಸಿಱುಂಬಳಾಡಿ ತಿನೆ ಮತ್ತಾ ಧೈರ್ಯಮಾ ಶೌರ್ಯಮಾ ।
ಇರವಾ ಯೋಗನಿಯೋಗಮಾ ಪರಮಧರ್ಮಧ್ಯಾನಮಾ ಜ್ಞಾನಮಾ ।
ವರಲೇಶ್ಯಾಗುಣಮಾ ಮಹಾಗುಣಗಣಂಗಕ್ಕುಂ ಪೆಱಂಗಕ್ಕುಮೇ ॥೩೯॥

ಭುಗುಭುಗನುರ್ಚಿ ಪಾಯ್ದು ಸಲೆ ದೇಹರಸಂ ಬಿಡುತೋಡಿತೆಲ್ಲಿಯುಂ ।
ಮೊಗರಸಮೋಡಿತಿಲ್ಲ ದಿನಪಾಂಶುಗಳಟ್ಟೆ ಶರೀರಯಷ್ಟಿ ತೊ
ಟ್ಟಗೆ ಕಡುಗಂದಿ ಕುಂದೆ ಬಡವಾದುದು ಯೋಗನಿಯೋಗಭಾವದೊಳ್
ಬಗೆ ಬಡವಾದುದಿಲ್ಲ ನೆಗಟ್ದಾ ಸುಕುಮಾರಮಹಾಮುನೀಂದ್ರನಾ ॥೪೦॥

ವ॥ ಇಂತಾ ಮಹಾನುಭಾವನಾ ಮಹೋಪಸರ್ಗಮನಶ್ರಮದಿಂ ಸೈರಿಸಿ ಸಮ್ಯಗ್ದರ್ಶನಜ್ಞಾನಚಾರಿತ್ರ ತಪಸಾಂ ಸ್ವೀಕರಣಮಾರಾಧನಾನಾಮಮೆಂಬ ಚತುರ್ವಿಧಾರಾಧನೆಗಳನಾರಾಧಿಸಿ ಪಂಡಿತ ಮುನಿಜನಸ್ತುತ ಚಾರುಚರಣಂ ಪಂಡಿತ ಮರಣದೊಳ್ ವೀರಪ್ರಾಯೋಪಗಮನ ಸಂನ್ಯಸನಸಮಾಧಿಯಿಂ ಧರ್ಮಧ್ಯಾನಸಾಮಗ್ರಿದೊಳ್ ವೀರಪ್ರಾಯೋಪಗಮನ ಸಂನ್ಯಸನಸಮಾಧಿಯಿಂ ಧರ್ಮಧ್ಯಾನಸಾಮಗ್ರಿಯೊಳ್ ಮುನ್ನಮೆ ನೆಱೆದು ಪರಮಪದಮನೆ ಮನದೊಳ್ ನಿಱಿಸಿ ಪರಮಸಮ್ಯಕ್ತ್ವಾನಂತವೀರ್ಯಜ್ಞಾನ- ದರ್ಶನ ಸೂಕ್ಷ್ಮತ್ವಾ ಗುರುಲಘುತ್ವಾವಗಾಹತ್ವಾವ್ಯಾಬಾಧಂಗಳೆಂಬ ಸಿದ್ಧಪರಮೇಷ್ಠಿಗಳಷ್ಟ

ಗುಣಂಗಳಂ ನೆನೆಯುತ್ತುಂ ಜ್ಞಾನಾದಿ ಶುಭಪರಿಣಾಮಂಗಳೊಳ್ ನಿರತಿಶಯಶುಕ್ಲಲೇಶ್ಯಾವಿಶುದ್ಧಿಯಿಂ ಮೋಹನೀಯಕರ್ಮೋಪಶಮದಿಂ ವಿಶುದ್ಧ್ಯತಿಶಯ ವಿಶೇಷದಿಂದುಪಶಮಶ್ರೇಣಿಯನೇಱಿ ಸಾಮಾಯಿಕಶುದ್ಧಿಸಂಯಮಸಂಪನ್ನನಾಗಿ ಮತ್ತಂ ತಿಱಿತಿಱಿದು ಬೇಗದೊಳಂತರ್ಮುಹೂರ್ತದಿಂ ಪೂರ್ವಾಪರವಿಷಯ ವಿವಿಕ್ತಾರ್ಥವ್ಯಂಜನಯೋಗ ಸಂಕ್ರಮಣಗುಣಲಕ್ಷಣೈಕಲಕ್ಷಿತಮಪ್ಪ ಪೃಥಕ್ತ್ವವಿತರ್ಕವೀಚಾರಾಭಿದಾನಪ್ರಥಮ ಶುಕ್ಲಧ್ಯಾನಾಧೀನಮಾನಸಂ ಸಮಾಹಿತ ಸಮುಪಶಾಂತಗುಣಸ್ಥಾನಸಂಸ್ಥಿತನಾಗಿರ್ಪುದುಮಾ ಸಮಯದೊಳ್ ನಿಜಾಯುಷ್ಯಾಂತಮೆಯ್ದೆವರ್ಪುದುಂ

ಪೆಱಗಣಭವಂಗಳೊಳ್ ಮೆ
ಯ್ಯಱಿಯದೆ ಮೆಯ್ಯಿಂದೆ ಕೇಡನೆಯ್ದಿದೆನೆಂಬೀ ॥
ಯಱಿವಿಂ ಮೆಯ್ಯ ಮಮತ್ವಂ ।
ಪಱಿಪಡೆ ಪಱಿಪಟ್ಟು ಪೋದುದಸು ಮೆಯ್ಯಿಂದಂ ॥೪೨॥

ವ॥ ಅಂತು ಪರಿತ್ಯಕ್ತದೇಹನಾಗಿ ಜಂಬೂದ್ವೀಪೋಪಮಾನಪರಿಮಾಣ ವಿಸ್ತಾರಮಾಗಿರ್ದ ಸರ್ವಾರ್ಥಸಿದ್ಧಿಯೊಳನೇಕ ರತ್ನಮರೀಚಿಮಾಳಾಳಂಕೃತ ಪ್ರಸರವಿರಚಿತ ಸುರಶರಾಸನೋಪಮಾನ ನಾನಾನೂನ ಕಲ್ಪವಲ್ಲೀ ವೇಲ್ಲಿತನಮೇರುಮಂದಾರ ಪಾರಿಜಾತ ಸಂತಾನಕ ಹರಿಚಂದನ ವನಪರಿವೃತ ಪರಿಣಚಿತ ವಿಶಾಳಹರಿನೀಳರುಚಿ ರುಚಿರವಿರಚಿತ ನೀಳಾಭ್ರವಿಭ್ರಮಕುಟ್ಟಿಮದೊಳಮಳ ಹರಿನ್ಮಣಿಯಮಯೂಖರೇಖಾ ಜಟಿಳತೋದಾತ್ತ ಚಿತ್ತಭಿತ್ತಿವಿಭ್ರಾಜಿತ ಪದ್ಮರಾಗ ಗವಾಕ್ಷಜಾಳಾಂಶುಜಾಳಮಂಜರೀರಂಜಿತದೊಳತ್ಯಂತಕಾಂತ ಚಂದ್ರಕಾಂತ ಮಣಿಶಿಳಾಕಳಾಪ್ರಭಾದೀಪಸಪ್ತಕಕ್ಷಾಂತರಾಳದೊಳವಿರಳಾಲಂಬಮಾನ ಪ್ರವಾಳಚ್ಛಾಯಾಚ್ಛಾದಿತ ಸಕಲದಿಗಂತರಾಳ ಮನೋಹರದೊಳನಲ್ಪರತ್ನ ರಚನಾ ವಿಚಿತ್ರೋಪಪಾತತಲ್ಪದೊಳಂತರ್ಮುಹೂರ್ತದೊಳ್ ಷಟ್ಪರ್ಯಾಯಂ ಕೈಕೊಂಡು

ಅನವರತಂ ಮೋಕ್ಷದ ನೆರೆ
ಮನೆಯೆನಿಸಿರ್ದಾ ವಿಮಾನದೊಳ್ ನಿಜಶುಭಭಾ
ವನೆಯಿಂ ಸುಕುಮಾರಮಹಾ
ಮುನೀಂದ್ರನಹಮಿಂದ್ರಪದವಿಯಂ ಕೈಕೊಂಡಂ ॥೪೩॥

ಸಹಜಾತಮಣಿವಿಭೂಷಣ
ಬಹುವಿಧನವಕುಸುಮದಾಮ ದಿವ್ಯಾಂಬರ ಸ
ನ್ಮಹಿಮಾ ಮಹಾವಿಭೂತಿಗ
ಳಹಮಿಂದ್ರಂಗೇಂ ವಿಭೂತಿಯಂ ತಾಳ್ದಿದುವೋ ॥೪೪॥

ನಿರತಿಶಯಶುಕ್ಲಲೇಶ್ಯಾ
ಪರಿಣಾಮಮೆ ಮೂರ್ತಿಗೊಂಡು ಪರಿಣಮಿಸಿದವೋಲ್

ಪರಿಪೂರ್ಣಸುದಾಕರನಿಭ
ಪರಿಕರ ಧವಲಪ್ರಭಾಕರಂ ಕರಮೆಸೆದಂ ॥೪೫॥

ಪೊಳೆವ ನವಚಂದ್ರಕಾಂತೋ
ಪಳಮಂ ಕಂಡರಿಸಿ ಕಡೆದು ಮಾಡಿದವೋಲ್ ಕ
ಣ್ಗೊಳಿಪ ಬಗೆಗೊಳಿಪ ಗಾಡಿಯ
ವಿಳಾಸದಿಂದೇಂ ವಿಲಾಸಮಂ ತಾಳ್ದಿದನೋ ॥೪೬॥

ಅನತಿಶಯನಿತ್ಯನವಯೌ
ವನಶೋಭೆಯುಮೊಂದು ಮೊಟಿದ ದೇಹಮುಮಹಮಿಂ
ದ್ರನೊಲಾದುವು ನಿರ್ಮಲ ಭಾ
ವನೆಯಂ ಭಾವಿಸಿದೊಡಪ್ಪುದಾವುದು ಚೋದ್ಯಂ ॥೪೭॥

ಎಸಗುವ ವಾಮ ಸುಖಂಗಳ
ದೆಸೆಗೆಸಗದೆ ಮಸಗದೆಸಗದಿರ್ದೆಡೆಯಿಂದಿ
ರ್ದಸದೃಶದಿವಿಜಸುಖಾಮೃತ
ರಸದಿಂ ತನ್ನಿಂದೆ ತಾನೆ ತಣ್ಣನೆ ತಣಿದಂ ॥೪೮॥

ಪುದಿದಿರ್ದಷ್ಟಗುಣಾಕ್ಕಾ
ಸ್ಪದರಾಗಿಯುಮಿಂದ್ರವಂದ್ಯಪರಜಿನಕಲ್ಯಾ
ಣದ ಮಹಿಮೆಗೆಂದುಮಹಿಮಿಂ
ದ್ರದೇವರಲ್ಲಿಂದೆ ಭಕ್ತಿಯಿಂ ಸ್ತುತಿಯಿಸುವರ್ ॥೪೯।

ಅಸದೃಶಮೋಕ್ಷಗೃಹಕ್ಕಿದು
ಪೊಸಬಾಗಿಲ್ವಾಡಮೆಂಬ ಮಹಿಮಾಸ್ಪದದಿಂ
ಜಸಮಂ ತಳೆದುದು ಸರ್ವಾ
ರ್ಥಸಿದ್ಧಿ ಭಾಪ್ಪೆನದನ್ನುಟೇಂ ಕೇವಲಮೇ ॥೫೦॥

ಷಟ್ಪದ ॥ ಅದು ಪರಮಾಸ್ಪದ
ಮದು ಪುಣ್ಯಸಂಪದ
ಮದು ಮಹಾಭ್ಯುದಯವಿಲಾಸಾವಾಸಂ ॥
ಅದು ದಿಬ್ಯಮದು ಸೇಬ್ಯ
ಮದು ಸೌಮ್ಯಮದು ರಮ್ಯ
ಮದು ಸುಖಾಧಾರ ಸಂಸಾರಸಾರಂ ॥೫೧॥

ಅಮರರ ಸುಖಮೆಲ್ಲಮನೊಂ
ದು ಮಾಡಿ ಕೂಡಿದೊಡಮೆಂದುಮಹಮಿಂದ್ರರಸೌ
ಖ್ಯಮನೆಯ್ದೆವಾರವೆನೆ ಮ
ತ್ತೆ ಮನುಜರೇನೆಂದು ಪೊಗಟ್ವರಲ್ಲಿಯ ಸುಖಮಂ ||೫೨||

ತ್ರಿದಶೇಂದ್ರರಸುಖದಳವ
ಲ್ಲದು ನಿರುಪಮಮದು ನಿರಾಕುಳಂ ಮೋಕ್ಷಸುಖ
ಕ್ಕದು ಭಾವಿಸು..................................
.... ||೫೩||

ಮತ್ತಮಿಾ ಪುರದೊಳ್ ಸುಭದ್ರಂಗಂ ಸರ್ವಯಶೆಗಮಾ ಚಂದ್ರವಾಹನಚರ ಸಾಮಾನಿಕಂ ಜ್ಯೇಷ್ಠನಂದನನಾಗಿ ಪುಟ್ಟಿ ಕುಮಾರಕಾಲದೊಳ್‌ತಪಃಶ್ರೀಯಂ ಕೈಕೊಂಡಾಮೀಗಳ್ ಯಶೋಭದ್ರಾಚಾರ್ಯರಾದೆವಾ ತ್ರಿವೇದಿಚರಾತ್ಮರಕ್ಷ ಗೀರ್ವಾಣಂ ಪೂರ್ವಭವ ನಿದಾನಕಾರಣದಿನೆಮಗೆ ತಂಗೆವಿರಾಗಿ ಪುಟ್ಟ ಸೂರದತ್ತಂಗೆ ಕುಲಾಂಗನೆಯಾಗಿ ನೀಮಾಗಳ್ ಯಶೋಭದ್ರಾಂಬಿಕೆಯಾದೆ ನಿಮಗಂ ಸೂರದತ್ತಂಗಂ ನಾಗಶ್ರೀಚರ ಸಾಮಾನಿಕಾಮರಂ ಬಂದು ಸುಕುಮಾರನಾಗಿ ಪುಟ್ಟುವುದುಂ ನಿಜನಂದನನ ವದನಾರವಿಂದ ವಿಲೋಕನಮಾತ್ರದಿಂ ಜಾತಿಸ್ಮರನಾಗಿ ಸೂರದತ್ತಂ ಶ್ರೀಷೇಣ ಸಂಯಮಿ ಸನ್ನಿಧಾನದೊಳ್ ಜಾತನಾದೊಂ ಸುಕುಮಾರಸ್ವಾಮಿಯುಂ ಲೋಕವಿಭಾಗವ್ಯಾವ.......ನದಿನೆಮ್ಮ ಸಮಕ್ಷದೊಳ್ ದೀಕ್ಷೆಯಂ ಕೈಕೊಂಡು ತಿರ್ಯಗುಪಸರ್ಗಮಂ ನೆಗಟ್ದು ಪಂಚಾಣುತ್ತರಗಳ ನಡುವಣ ಸರ್ವಾರ್ಥ ಸಿದ್ಧಿಯೊಳಹಮಿಂದ್ರ ದೇವನಾದೊನದು ಕಾರಣದಿ........ಂಮಮಾರ್ಪ ಜನ್ಮನಿದಾನದ ಫಲದಿಂದೆ ನಿಮಗೆ ಪುತ್ರ ವಿಮೋಹಂ ತಾನನುಬಂಧಿಸಿ ನಿಲೆ ನೀವಿಾ ನೆಪದಿಂದಿರ್ದಿರಲ್ಲದಂದೇಕಿರ್ಪಿರಿ

ಮತಿಗೆಟ್ಟೀ ಸಂಸಾರ
ಸ್ಥಿತಿಯಂ ನಿಮಗಿಂ............ರರಿಂ
ನತಿ ದುಃಖಿತರಾಗಲಾಗದಾತಂ
ತಾರ್ಥನಾಗಿರ್ದನಕ್ಕೆ ನೀಮಟಲದಿರಿಂ ||

ಪ... ವಿಸಿ ಶೋಕಂಗೆಯ್ವುದು
ಕ...ವರೊಸೆ.......................
....
.....(ನಪರಣಮೇಟಿರೇಕೆ ಶೋಕಂಗೆಯ್ದರ್ ||

ನಡೆದಪ... ನೋಡುದಪ್ಪ
....

....

....

ಅಮರೇಂದ್ರ ಸುಖಾಂಬುಧಿಗಳ್ ಸಮೇತಂದಪುವೆಂದೊಡೀಗಳೀ ಕಿಂಚನ್ಮಾತ್ರ ಮನುಷ್ಯ.............ಲವುದ್ಗಮಮಿರ್ಕುಮೆಲಚ್ಚಲಾ.................. ತಿಯಾರ್ಗೆ ನೆರೆದು ಬಂದಿರ್ದ ಜನಂ ತಾಮಾರ್ಗೆ ಬುದ್ಧಿಯಂ ಪೇೞ್ವಾಮಾರ್ಗಾರ್ಗೇಕೆ ನೋೞ್ಪಿಡೀ ಸಂಸೃತಿಯೊಳ್

ಜನಕಂ ಕಂಯು.....................ಜೆ ಮುತ್ತನನುಜಂ ಮುತ್ತಬ್ಬೆ ಚಿ ....ನೆಗಟ್ಟಿ ಜನಂ....ಣ್ಣನಲಿಯುಂ ಮಾನಂ ಬಲಿಕ್ಕತ್ತೆ ಮ ಯ್ದುನನಕ್ಕುಂ ಸೊಸೆಯತ್ತೆಯತ್ತಿಗೆ ಮಗಂ ಮೊಮ್ಮಂ ಕರಂ ಕೂರ್ಮೆಯುಂ ಗನೆಯೆಂದಿಂತಿವರಾರು ಮಾರ್ಗ ಬಗೆವರ್.......ವೀರದೊಳ್

ಪಡೆಯದೆ ಮನುಷ್ಯಗತಿಯಂ
ಪಡೆದುಂ ರತ್ನತ್ರಯಂಗಳಂ ಪಡೆಯದೊಡೇ
ಪಡೆಮಾತೊ ಬೇಗ ಮರ್ದುಂ
ಬಡೆದುಂ ಕಲಂಬಡೆಯದಂತೆ ನಿಷ್ಫಲಮಲ್ತೇ ॥

....
.... ತಪೋಗುಣದಿಂ ಶರೀರಮಟೌಡನೋಂ
ತೊಡಂ ಜನಕೆಲ್ಲಂ ಪಿರಿದರ್ಥಮನಿ
ತ್ತೊಡಮೇಂ ನಿರರ್ಥಕಂ ದರ್ಶನವ್ಯಪೇತಂಗೆಂದುಂ ॥

ಎಂದಿಂತು ಸಕಲಸತ್ವ ಹಿತೋಪದೇಶಮಪ್ಪ ಸದ್ಧರ್ಮೋಪದೇಶಮಂ ...... ಸೂಚನಾಮಾತ್ರಮಾಗೆ ಸೂಚಿಸುವುದುಂ ಯಶೋಭದ್ರೆ ನಿರ್ವೇಗಪರಾಯಣೆಯಾಗಿ ಮೂವತ್ತಿರ್ವರ್ ಸೊಸೆವಿರೊಳಗೆ ಗರ್ಭಿಣಿಯಪ್ಪೆಣ್ಬರ್ ಸೊಸೆವಿರ್ಗೆ ಸಮಸ್ತ ಗೃಹಪರಿಚ್ಛೇದಮೆಲ್ಲಮನೊಪ್ಪಿಸಿ ಮತ್ತಿನಿರ್ಪತ್ತುನಾಲ್ವರ್ ಸೊಸೆವಿರುಂ ಮತ್ತಂ ಪಲಂಬರ್ ಪರಿಜನಂಬೆರಸು ಜಿನದೀಕ್ಷೆಯಂ ಕೈಕೊಳ್ವುದುಮಾಕ್ಷಣದೊಳ್ ವೃಷಭಾಂಕ ಮಹಾರಾಜಂ ವೈರಾಗ್ಯಪರನಾಗಿ ನಿಜವಂಶಧ್ವಜನೆನಿಸಿದ ಕನಕಧ್ವಜನ ಮೊಗಮಂ ನೋಡಿ

ವನನಿಧಿ ಪರಿವೃತ ಧಾರಿಣಿ
ಯನೊಪ್ಪುಗೊಳ್ ಮಗನೆ ದೀಕ್ಷೆಯಂ ಕೊಂಡಪೆನಾ
ನೆನೆ ರಾಜ್ಯಮನಾನೊಲ್ಲೆಂ
ಜನಪತಿ ನೀಮಿಾಗಳಜ಼ಿಯಿರಾದುದನಪ್ಪೆಂ ॥

ಎಂಬುದು ಮತ್ತಮಾಗ್ರಹಂಗೆಯ್ದು

ಸುತ ಕೆಲವುಕಾಲಮಿಳೆಯುಂ
ಪ್ರತಿಪಾಲಿಸಿ ರಾಜ್ಯಲಕ್ಷ್ಮಿಯಂ ತಳೆವುದು ಸಂ
ತತಿಗೆ ಮಗಂ ಬಡೆದಿಂಬಱಿ
ಕ್ಕೆ ತಪಶ್ರೀ ನಿನಗೆ ಕಡೆಯೊಳಿರ್ದಪುದಲ್ತೇ ॥

ಎನೆ ಮುನ್ನಿನ ಭವದೊಳ್ ಮಿ
ತ್ರನೆನಾಗಿರ್ದೊಡನೆ ದೀಕ್ಷೆಗೊಂಡೀಗಳ್ ಪು
ತ್ರನೆನಾಗಿ ಸೆಡೆದು ಬಂದೊಡೆ
ಕನಕಧ್ವಜನೆಂಬ ನಾಮಮೆನಗಮರ್ದಪುದೇ ॥

ಎಂದು ಸೆರಗುಬೆರಗುವುಂ ಬಗೆಯದೆ ಪರಿಚ್ಛೇದಂಗೆಯ್ದು ಕನಕಧ್ವಜನನೆಂತುಮೊಡಂಬಡಿಸಲಾಱದೆ ವೃಷಭಧ್ವಜನೆಂಬ ಕಿಱಿಯುಮಗಂಗೆ ಪಟ್ಟಂಗಟ್ಟಿ ಕೀರ್ತಿಧ್ವಜನನಿಸಿದ ಕನಕಧ್ವಜನಂ ಬುದ್ಧಿಸಾಗರ ಪ್ರಭೃತಿ ಮಂತ್ರಿಜನಮುಂ ಪಲರುಮರಸುಮಕ್ಕಳ್ವೆರಸು ಭಟ್ಟಾರಕರ್ಗೆ ಸಾಷ್ಟಾಂಗಮೆಱಗಿ ಪೊಡೆವಟ್ಟು

.........ಧಿಚಕ್ರ ಭ್ರಮಣದಿನಿನಿತುಂ ಕಾಲಮಾಮಿನ್ನೆಗಂ ದು
[ದಿಂ]
ರ್ಮನಾದಿ ದುರ್ಮಾರ್ಗದಿಂ ದುಷ್ಕೃತದಿನಖಿಲ ಸಂಸಾರವಾರಾ
ಸಿ..... ಮಗೆ ಶರಣ್ ನೀಮೆ ನಿರ್ವ್ಯಾಜಮೆಂದಾ
ಮುನಿನಾಥಶ್ರೀಪದಾಂಭೋರುಹ ನಿಕಟದೊ[ಳ್..] ದೀಕ್ಷೆಗೊಂಡಂ ॥

........ನದೊಳು ಸಮಾಧಿವಿಧಿಯಿಂ ಮುಡಿಪಿ ಸೌಧರ್ಮೇಶಾನಕಲ್ಪಂಗಳೊಳ್ ಪುಟ್ಟಿ ಪರಮಸುರಲೋಕ ಮಂದಿರ ಮಣಿಪ್ರದೀಪಾಯಮಾನ .... ಘೋರವೀರ ತಪಶ್ಚರಣ ಪರಾಯಣರಾಗಿ ಕೈಲಾಸಾಚಲದೊಳ್ ಅಚಲಿತ ಪ್ರತಿಮಾಯೋಗದೊಳಿರ್ದು ಸಕಲ ಕರ್ಮ ನಿರ್ಮೂಲನಂಗೆಯ್ದಾಗಳ್

ವನಿತೆ ಸ್ವಯಂವರ ದೊಳ್ ಪು ರು
ಷನನಱಿಸಿಕೊಳ್ವತೆದಿಂ ಮುಕ್ತ್ಯಂ....
ಗನೆ ಕೈಕೊಂಡಳ್ ತನ್ಮುನಿ
ಪನನಮರಾನಕ ನಿನಾದಮೊಡನೆಸಗುವಿನಂ ॥

ಲೋಕಾಲೋಕಾವಲೋಕ ಪ್ರಕಟನಕರ ಮಾಂಗಲ್ಯ ಕೈವಲ್ಯ ಬೋಧಂ...
ಲೋಕಪ್ರಸಿದ್ಧಂ ಪರಮಪದನಜಾತಂ ತ್ರಿಲೋಕಾಧಿನಾಥಂ
ಲೋಕಾಗ್ರಶ್ರೀನಿವಾಸಂ ನಿರುಪನಜರಂ ತ್ರಿಲೋಕಾಧಿ ಮುಕ್ತಿ
ಶ್ರೀ ಕಾಂತಾಕಾಂತನಾದಂ ಪರಮಜಿನಮತಾಂಭೋಜಿನೀ ರಾಜಹಂಸಂ ॥

ಮಿಗೆಮೂಲಸಂಘದೊಳ್ ದೇ
ಶಿಗಣದೊಳ್ ಸಂದ ಕೊಂಡಕುಂದಾನ್ವಯಮಂ
ಜಗತೀ ತಳದೊಳ್ ನೆಗಟಿಲ್
ನೆಗಟ್ದಿರ್ದರ್ ನೆಗಟ್ದಿವರ್ಧಮಾನಮುನೀಂದ್ರರ್

ಶರದಭ್ರಕ್ಕೆ ದಿಶಾಗಜಕ್ಕೆ ಹಿಮವತ್ಕುತ್ಕೀಲಕೂಟಕ್ಕೆ ಭಾ
ಸುರ ಕೈಲಾಸನಗಕ್ಕೆ ಸಂದ ದುಗ್ಧಾಂಭೋರಾಶಿ ಶುಂಭತ್ ಸುಧಾ
ಕರ ಬಿಂಬಕ್ಕೆಣೆಯಾದ ಸುಂದರತೆಯಿಂದಂ ವರ್ಧಮಾನ.....

(ಅಸಮಗ್ರ)

ಆಂಡಯ್ಯ ವಿರಚಿತ

ಕಬ್ಬಿಗರ ಕಾವಂ

ಕಬ್ಬಿಗರ ಕಾವಂ

ಆವನ ಗಾಡಿ ನೋಡಿದವರಂ ಸಲೆ ಸೋಲಿಸುತಿರ್ಪುದುರ್ಕಿನಿಂ
ದಾವನ ಪೂವಿನಂಬದಟರಂ ತಲೆವಾಗಿಸುತಿರ್ಪುದೇೞ್ಗೆಯಿಂ
ದಾವನ ಪಜ್ಜಳಿಪ್ಪ ಜಸಮೆಣ್ದೆಸೆಯೊಳ್ ನೆಲಸಿರ್ಪುದಾತನೀ
ಗಾವಗಮೆನ್ನ ಜಾಣ್ನುಡಿಗೆ ಮೆಯ್ಸಿರಿಯಂ ನನೆವಿಲ್ಲ ಬಲ್ಲಹಂ ೧

ಸಿರಿಯೆಱಿಯಂ ಮಾದೇವಂ
ಸರಸತಿಯೆಱಿಯರ್ಕಳಡಿಗಳೆಂಬೀ ಕೆಂದಾ
ವರೆಗಳ್ ಪೊರೆಗೆಮ್ಮಂ ಪೊಸ
ಸಿರಿಗಂಪಿಂ ಪಱಮೆವಱಿಯನೆಂತಂತೊಲವಿಂ ೨

ಗುರುವಿಕೆಗಿಂಬು ಗಾಡಿಗೆ ತವರ್ಮನೆ ಮೈಮೆಗೆ ಮೇರೆ ನನ್ನಿಗಾ
ಗರಮಱಿತಕ್ಕೆ ಗೊತ್ತು ಪೆಸರ್ವೆತ್ತ ನೆಗೞ್ತೆಗೆ ತಾಣಮಾಗಿ ಬ
ಲ್ಲರ ಬಗೆಯಲ್ಲಿ ಕೂಡಿ ನೆಲಸಿರ್ದು ಪೊಗೞ್ತೆಯನಾಂತಳಾವಳಾ
ಸರಸತಿ ಕೂರ್ಮೆಯಿಂದೊಸೆದು ಮಾಡುಗೆ ಕಬ್ಬದ ಬರ್ದಿನೇೞ್ಗೆಯಂ ೩

ಎನ್ನೀ ಕಬ್ಬದೊಳೆಂದುಂ
ಸನ್ನಿದಮಾಗಿರ್ಕೆಕಣ್ಣಮಯ್ಯನ ಕಡುಜಾಣ್
ರನ್ನನ ಮೆಯ್ಸಿರಿ ಗಜಗನ
ಬಿನ್ನಣಮಗ್ಗಳನ ಕಾಣ್ಕೆ ಜನ್ನಿಗನ ಜಸಂ ೪

ಒಪ್ಪಂಬೂಸಿದವೋಲ್ ತೆಱಂಬೊಳೆವ ಕೊಂಕುಂ ಪಾಲೊಳೊಂದಿರ್ಪವೋ
ಲೊಪ್ಪಂಬೆತ್ತಿನಿದಾದ ಬರ್ದುನುಡಿಯಂ ತಳ್ತೋಜೆಯುಂ ನಿಲ್ವಿನಂ
ತಪ್ಪೊಂದುಂ ತಲೆದೋಱದಂತೆ ಪಲರೆಲ್ಲರ್ ತಿರ್ದಿದೀ ಕಬ್ಬಮೆಂ
ತಪ್ಪಂಗಂ ಪೊಸಮುತ್ತಿನೆಕ್ಕಸರದಂತೆಂದುಂ ಕೊರಲ್ಗೊಳ್ಗದೇ ೫

ಪುರುಳುಂ ಲಕ್ಕಣಮುಂ ಮೆ
ಯ್ಸಿರಿಯುಂ ತಳ್ತಿಸೆಯೆ ಪೇೞ್ದ ಕಬ್ಬಮದೆಂತುಂ
ಪುರಳುಂ ಲಕ್ಕಣಮುಂ ಮೆ
ಯ್ಸಿರಿಯುಂ ತಳ್ತಿಸೆವ ರನ್ನದಂತೆರ್ದೆವುಗದೇ ೭

ಕನ್ನಡದೊಳ್ಪಿನ ನುಡಿಯಂ
ಮುನ್ನಿದಱೊಳೆ ನೋಡಿ ತಿಳಿದುಕೊಳ್ವುದು ಚದುರಂ
ರನ್ನದ ಕನ್ನಡಿಯಂ ನಲ
ವಿನ್ನೋಡಿದವಂಗೆ ಕುಂದದೇನಾದಪುದೇ

ಸೊಗಯಿಸುವ ಕಬ್ಬಮಂ ಕ
ಬ್ಬಿಗರಲ್ಲದೆ ಮೆಚ್ಚರುೞಿದರೇನಱಿವರೆ ತುಂ
ಬಿಗಳಲ್ಲದೆ ಪೊವೊಳ್ ಮಗ
ಮಗಿಸುವ ಕಂಪಂ ಕಡಂದುಱೇನಱಿದಪುದೇ ೮

ಎಱಗುವನರುಹಂ ಗುೞಿದ
ರ್ಗೆಱಗಂ ಕನಸಿನೊಳಮೋದನಲ್ಲದೆ ಮೆಚ್ಚಂ
ಮಱಿದುಂ ಪೆಱವೆಣ್ಣೊಳ್ ನೆರೆ
ದಱಿಯಂ ಲೆಕ್ಕಿಗರ ಪಿರಿಯನೆನಿಪಾಂಡಯ್ಯಂ ೯

ದಿಮ್ಮಿದ್ದರಕ್ಕರಕ್ಕಱಿವರೊಳ್ ನುಡಿಯೊಳ್ ಕಡುಜ್ಞಾಣರಂದದೊಳ್
ಪೊಮ್ಮಿದ್ದರೊಂದಿ ನಿಂದ ಸಿರಿಯೊಳ್ ಪಿರಿಯರ್ಗೆಡೆಗೊಟ್ಟು ಬಾೞ್ವರೆಂ
ದುಮ್ಮಳಿಪರ್ಗೆ ಕೇಳ್ ಮುಳಿಯರಾತನ ಮಕ್ಕಳೆನಿಪ್ಪ ಸಾಂತನುಂ
ಗುಮ್ಮಟನುಂ ಜಸಂಬಡೆದ ವೈಜಣನುಂ ನೆಱೆ ಮೆಚ್ಚೆ ಮಾನಿಸರ್ ೧೦

ಅವಱೊಳ್ ನೋೞ್ಪೊಡೆ ಮೊದಲಿಗ
ನಿವನೆನೆ ಗರುವಿಕೆಯನಾಂತ ಸಾವಂತಂಗಂ ಚಿ
ಲ್ವುವರಿವ ಬಲ್ಲವ್ವೆಗಮೊ
ಪ್ಪುವ ಲೆಕ್ಕಿಗರರಸನೊಗೆದನೆಸೆವಾಂಡಯ್ಯಂ ೧೧

ಎಳೆವೆಂಡಿರುಟ್ಟ ದುಗುಲಮೆ
ತಳೆವುದು ಕಡೆಗಣ್ಣ ಬೆಳಗು ಪೊಸಮೆಯ್ದೊಡವು
ಜ್ಜಳಿಪ ಮೊಗಂ ಕನ್ನಡಿಯೆನೆ
ಬಳೆದನಿದೇನೆಂಬ ಸೊಬಗಿನೇೞ್ಗೆರವವನಾ ೧೨

ಅರುಹಂತನ ಮೆಲ್ಲಡಿದಾ
ವರೆಗಳ್ ಬಗೆಯಲ್ಲಿ ನಿಂದುವೆಂದೊಡೆ ನಲವಿಂ
ಸಿರಿವೆಣ್ಣವನೊಳ್ ನಿಚ್ಚಂ
ಬೆರಸಿರ್ದಪಳೆಂಬುದಿಂತಿದೇನಚ್ಚರಿಯೇ ೧೩

ಎಳಗಿಳಿವಿಂಡಿನಂತೆ ಮಿಳಿರ್ದಾಡುವ ತುಂಬಿಯ ಬಂಬಲಂತೆ ಕೆಂ
ದಳಿರ್ಗಳ ತೊಂಗಲಂತೆ ನಡೆನೋಡುವ ಪೆಂಡಿರ ನೋಟದಂತೆ ಪೂ
ಗಳ ಪೊಸಗಂಪಿನೊಳ್ ಪೊರೆದು ತೀಡುವ ತೆಂಬೆಲರಂತೆ ತೋರ್ಪ ತಿಂ
ಗಳ ಸಿರಿಯಂತೆ ಸೋಲಿಸದೆ ಕಾವನ ಕಬ್ಬಮದಾರನಾದೊಡಂ ೧೪

ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳೆ ಪೇಟಲಾಜರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ
ಬ್ಬಿಗರ್‌ದು ಮಾತನಾಡಿದವೊಲಂದವನಾಳ್ದಿರೆ ಬಲ್ಪು ನೆ
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ ೧೫

ಎಂದು ತಮತಮಗೆ ಬಲ್ಲವ
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ
ನ್ನೆಂದಚ್ಚಗನ್ನಡಂ ಬಿಗಿ
ವೊಂದಿರೆ ಕಬ್ಬಿಗರ ಕಾವನೊಲವಿಂದೊರೆದೆಂ ೧೬

ಸಿಂಗರಮೇಟ್ಗೆಯಂ ಪಡೆಯೆ ದೇಸೆ ಪೊದಟ್ದಿರೆ ಕೊಂಕು ತೀವೆ ಬ
ರ್ದಿಂಗಳೊಳಗಾದ ಮಾತಮರೆ ಬಲ್ಲವರ್ ಎನೆ ಚೆಂದಮೊಂದಿ ಡಾ
ಳಂಗೆಡೆಗೊಂಡು ತೋಜೆ ನನೆವಿಲ್ಲನ ಬೀರಮನೊಲ್ದು ಪೇಟ್ವೆನಾಂ
ತಿಂಗಳ ಸೊಂಪು ಗುಂಪುವಡೆದೆಣ್ದೆಸೆಗಂ ಪರಿಗೊಂಡುದೆಂಬಿನಂ ೧೭

ಅದೆಂತೆಂದೊಡೆ; ಒರೊಂದೆಡೆಯ ಬೆಂಚೆಗಳೊಳರೆವಿರಿದ ನೀರ್ವೂಗಳ ಕಂಪಿಂಗೆ ಮಾಣದೆ ಮುಸುಜೆ ಮೊರೆವ ಪೆಣ್ದುಂಬಿಗಳ, ತುಂಬಿಗಳ ಬಟೆವಿಡಿದು ಬನದೊಳೆಡೆಯಾಡುವ ಸಬರಿಯರ ನಡೆಯನೇಡಿಸುವಂತೆ ಮೆಲ್ಲಡಿಯಿಡುವ ಪೆಣ್ಣಂಚೆಗಳ ಬಳಗಂಗಳ, ಗಳಗಳನೆ ಪಸರಿಸಿ ಪರಿದ ಬಯಲೊಳ್ ಬೆಳೆದ ಬಿಳಿಯ ಕರ್ಬಿನ ಕೋಲ್ಗೆ ಕೊರಲುದ್ದಮಾದೆಳನೀರ ಪೊನಲ, ನಲವಿಂ ಬೆಳಗೆಯ್ಗೆಜುಗುವ ಪಕ್ಕಿಗಳನಲೆದು ಸೋವ ನಾಡ ಗಾಡಿಕಾರ್ತಿಯರ, ಗಾಡಿಕಾರ್ತಿಯರ ಗಾಡಿಗೆ ಸೋಲ್ತು ನಿಲ್ವ ಬಟ್ಟೆಗರ, ಗರಗರಿಕೆವಡೆದೆಳವೆಂಡಿರ ತಂಡದಿಂ ನೆಗಟ್ತೆವಡೆದು ಮೇಲೂರ್ಗಳ ಮುಂಡಾಡುವಂತಾಗಸಕೆ ನೆಗೆದ ನೆಲೆವಾಡಂಗಳ, ಗಟಿಪ್ರವರಗಿಳಿಯ ಬಳಗಕ್ಕೆ ತವರ್ಮನೆಯಾದ ಮಾಮರದ ಕೊಂಬು ಕೊಂಬಿನೊಳ್ ಬಿಡದೆ ಬಗ್ಗಿಪ ಕೋಗಿಲೆಗಳ ಚೆಲ್ವನೊಳಕೊಂಡಿರ್ಪುದುಮಂತು ಮಲ್ಲದೆಯುಂ

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾಱನಾ
ನೆಲನಂ ಮತ್ತಿನ ಮಾನಿಸರ್ ಪೊಗೞಲೇನಂ ಬಲ್ಲರೆಂಬೊಂದು ಬ
ಲ್ಲಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತ ಕೊಳಂಗಳಿಂ ಕೆಱೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ ೧೮

ಇವು ಪಳ್ಳಿಗಳಿವು ಪಟ್ಟಣ
ಮಿವು ಕೆಱೆಗಳಿವೆಱಗಿ ನಿಂದ ಮುಗಿಲೋಳಿಗಳಿಂ
ತಿವು ಕಾಡಿವು ಪೆಸರ್ವಡೆದೊ
ಪ್ಪುವ ಬನಮೆಂದಱಿದು ಪೇೞ್ವುದರಿದಾ ನಾಡೊಳ್ ೧೯

ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದೆಂ
ಗಲ್ಲದೆ ಮಾವಲ್ಲದೆ ಕೌಂ
ಗಲ್ಲದೆ ಗಿಡುಮರಗಳೆಂಬುವಿಲ್ಲಾ ನಾಡೊಳ್ ೨೦

ಅಡರ್ದೇಱೆ ಕೋಡಗಂಗಳ್
ಕಡುಪಿಂದೀಡಾಡೆ ಫೞಿಲನೊಡೆದೆಳಗಾಯಿಂ
ದೆಡೆವಿಡಿದೊಸರ್ವೆಳನೀರ್ಗಳ್
ಮಡುಗೊಂಡೋವುತ್ತುಮಿರ್ಪುವಲ್ಲಿಯ ಬನಮಂ ೨೧

ಉಱೆ ಕಾಯ್ವ ಬಿಸಿಲೊಳೆಮ್ಮಂ
ಮಱೆದುಂ ಕೊರಗಿಸದೆ ಪೊರೆದುದೆಂದೊಲವಿಂ ಬಂ
ದೆಱಗುವವೋಲ್ ತೆನೆಯಂ ಕಾ
ಲ್ಗೆಱಗುವ ಕೞವೆಗಳವೆಲ್ಲಿಯುಂ ಸೊಗಯಿಸುಗುಂ ೨೨

ನೆಯ್ದಿಲ್ಗೊಳಂಗಳೆಡೆಯೊಳ್
ಕಾಯ್ದೋವದೆ ಪೋರ್ವ ಪಲವು ನೀರ್ವಕ್ಕಿಗಳಿಂ
ದೆಯ್ದುಣ್ಬುವ ಸೀರ್ಪನಿಯೊಳ್
ತೊಯ್ದೊಯ್ಯನೆ ಗಾಳಿ ಕೂಡೆ ತೀಡುತ್ತಿರ್ಕುಂ ೨೩

ಮತ್ತಮಾ ನಾಡೊಳ್ ಕೀೞೆಂಬುದು ಕುದುರೆಯ ಬಾಯ ಕಬ್ಬಿಣದೊಳ್, ಕವರೆಂಬುದು ಚಪ್ಪರದೊಳ್, ಬಂದಿಯೆಂಬುದು ತೊಡವಿನೊಳ್, ಏಱೆಂಬುದು ನೆಲೆವಾಡದೊಳ್, ಮಡಿಯೆಂಬುದು ಮರುಗದ ತಾಣದೊಳ್, ಮೊಱೆಯೆಂಬುದು ನಂಟರೊಳ್, ಪೊಡೆಯೆಂಬುದು ಬೆಳೆಗೆಯ್ಯೊಳ್, ಕೞೆಯೆಂಬುದು ತುಱುಗಾರ್ತಿಯರೊಳ್, ಪಿಡಿಯೆಂಬುದು ಪೆಣ್ಣಾನೆಯೊಳಲ್ಲದಿಲ್ಲಂತುಮಲ್ಲದೆಯುಂ -

ಪುದಿದೆಳವಳ್ಳಿಯಿಲ್ಲದ ಮರಂ ಕೊಳನಿಲ್ಲದ ತೋಂಟಮಾವಲಿ
ಲ್ಲದ ಕೆಱೆ ಗಂಡುಗೋಗಿಲೆಗಳಿಲ್ಲದ ಬಂದೆಳಮಾವು ಕಾಲ್ಗಳಿ
ಲ್ಲದ ತೊಱೆ ತುಂಬಿಯಿಲ್ಲದಲರಂಬೆಗಳಿಲ್ಲದ ಬೆಂಬೆ ಬೇಟಮಿ
ಲ್ಲದ ಬೆಲೆವೆಣ್ಗಳಿಲ್ಲ ಪೆಸರಿಲ್ಲದ ಮಾನಿಸರಿಲ್ಲದೆಲ್ಲಿಯುಂ ೨೪

ತಾವರೆಯ ಮಲ್ಲಿಗೆಯ ಪೊಸ
ಸೇವಂತಿಯ ಬಿರಿದ ಸಂಪಗೆಯ ತನಿಗಂಪಿಂ
ತೀವಿರ್ಪುದಱಿಂದೆಂದುಂ
ಪೂವಿನ ಪೊಟಿಲೆಂಬುದೊಂದು ಪೆಸರೆಸೆದಿರ್ಕುಂ ೨೫

ತೊಳಗುವ ಕರುಮಾಡಂ ನೊರೆ
ಬಳಸಿದ ಪೊಂಗೋಂಟೆ ಮೇರೆ ನೆಲೆವನೆ ಸೊಗಯಿ
ಪ್ಪೊಳಗಣ ಬೆಟ್ಟುಗಳೆನೆ ಬಗೆ
ಗೊಳಿಪುದು ಮುನ್ನೀರ ತೆಱದಿನಾ ಪೊಟಿಲೆಂದುಂ ೨೬

ಬಳಸಿದ ಬಳ್ಳಿಯ ಜೊಂಪಂ
ಗಳ ಮಿಸುವೆಳದಳಿರ ಕಾವಣಂಗಳ ಪೊಸವೂ
ಗಳನಾಂತ ಮಲ್ಲಿಗೆಯ ಮನೆ
ಗಳ ಚೆಲ್ವಿಂ ಚೆಲ್ವನಾಂತುದಾ ಪೊಟಿಲ ಬನಂ ೨೭

ಮತ್ತಮಾ ಬನಂ ಮುಗಿಲೆಡೆಯೊಳೆವಿಡದೆಡೆಯಾಡಿ ಬಟಿಲ್ದ ಬಿಜ್ಜೋದರಿಯರ್ಕಳ ಅವಟ್ಟಿಗೆದಾಣವೆಂಬಂತೆಸೆವೆಳನೀರ್ಗಳಂ ಪೊತ್ತಾಗಸದೆಡೆಗಡರ್ವ ಚೆಂದೆಂಗಿನ ಮರಂಗಳೊಳಂ, ಎಸಗುವೆಲರಿನೊಡೆದೊಸರ್ವ ಪೊಸವಣ್ಣ ಪಸರದಿನೆಸೆವಸಿಯ ಕೊಂಬನಿಂಬುಮಾಡಿ ಸುಟಿದು ಗಟಿಪುವೆಳಗಿಳಿಯ ಬಳಗಕ್ಕೆ ತಮರ್ಮನೆಯಾದಿಮ್ಮಾವಿನ ಪೊದಱೊಳಂ, ಒಱಲ್ದೆಱಗುವ ಪಱಿಮೆವಱಿಗಳಂ ತುಱುಸೆಱೆವಿಡಿವ ನಱುಗಂಪಿನ ಸೊಂಪುಗಳ್ಗಿಂಬಾದ ಪೊಂಬಾಟೆಗಳಿಂ ಬಳ್ಕುವಡಕೆಯ ಸಾಲ್ಗಳೊಳಂ, ಒಯ್ಯನೊಯ್ಯನೆ ರಯ್ಯಮಾಗಿ ಮೆಯ್ಯಱಿಯದುಯ್ಯಲಾಡುವ ಸೊಂದಿಗೋಡಗಂಗಳಿಂದೋರೊರ್ಮೆ ನೆಲಕ್ಕೆ ಜೋಲ್ವ ತಿಂತಿಣಿವಣ್ಣನಾಂತ ಸಣ್ಣಗೊಂಬಿಂದಿಂಬುವಡೆದ ದಾಳಿಂಬಂಗಳೊಳಂ, ಬಂದು ಬಂದು ನಟ್ಟ ನಡುವಗಲೊಳೋಕುಡಿಯಾಡುವೆಳವೆಂಡಿರ ಮೆಯ್ಯ ಕುಂಕುವದಿಂದೊಂದಿದ, ಕೆಂದಾವರೆವೂಗಳಂ ತಳೆದು ಸೊಂಪನೊಳಕೊಂಡ ತಾವರೆಗೊಳಂಗಳೊಳಂ ಬಸಂತಂಗೆ ನೆಲೆವೀಡಾಗಿರ್ದುದಂತುಮಲ್ಲದೆಯುಂ -

ಮೊರೆವೆಳದುಂಬಿಯ ನಲವಿಂ
ನೆರೆವಂಚೆಯ ನುಡಿವ ಗಿಳಿಯ ಕಿವಿಗಿನಿದಪ್ಪಂ

ತಿರೆ ಕರೆವ ಕೋಗಿಲೆಯ ನು
ಣ್ಣುರದಿಂದಂ ಬಿರಯಿಗಳ್ಗೆ ಮಾಡುವುದಬಿಲಂ ೨೮

ಕನರ್ಗೊನರೆಲ್ಲಿಯಲ್ಲಿ ಮಿಳಿರ್ದಾಡುವ ನುಣ್ದಳಿರೆಲ್ಲಿಯಲ್ಲಿ ಬ
ಲ್ಲನೆಗಳವೆಲ್ಲಿಯಲ್ಲಿ ಪೊರೆದೋಱುವ ಮೊಗ್ಗೆಗಳೆಲ್ಲಿಯಲ್ಲಿ ಚೆ
ಲ್ವೆನಿಪಲರೆಲ್ಲಿಯಲ್ಲಿ ಪಸುರೇಱಿದ ಕಾಯ್ಗಳವೆಲ್ಲಿಯಲ್ಲಿ ಪ
ಣ್ಣೊಗ್ಗೆಗಳವೆಲ್ಲಿಯಲ್ಲಿಯೆನೆ ಸೋಲಿಸುಗಂ ಬಿಡದಾವನಂ ಬನಂ ೨೯

ತಿಳಿದಕೊಳಂಗೊಳ್ ಸುೞಿದು ಸೀರ್ಪನಿಯಂ ಬಿಡದೆತ್ತಿಕೊಂಡು ಪೂ
ಗಳ ಪೊಸಗಂಪಿನೊಳ್ ಪೊರೆದು ತುಂಬಿಗಳಿಂಚರದಲ್ಲಿ ತಳ್ತು ಕೆಂ
ದಳಿರ್ಗಳ ತೊಂಗಲೊಳ್ ತೊಡರ್ದು ಕೂಡುವ ನಲ್ಲರ ನೀಳ್ದಸೇದೆಯಂ
ಸೆಳೆದೆಲರಲ್ಲಿ ತೀಡುವುದು ಮೆಲ್ಲನೆ ಮೆಲ್ಲನೆ ರಯ್ಯಮೆಂಬಿನಂ ೩೦

ಅಂತು ನೋಟ್ಟರ ಬಗೆಯಂ ಬಲ್ಸೆಱೆವಿಡಿವ ಬನಮಂ ಬಳಸಿ ವಿಳಸಮಾದಂ ಪೊಂಗೋಂಟೆಯಿಂದೊಳಗೆ -

ಕಣ್ಗಿಂಬಾದುದು ರಾಯಬೀದಿ ಮುಡಿಯಿಂದಂ ಬೀೞ್ವ ಪೂಮಾಲೆಯಿಂ
ತಣ್ಗಿಂಪಂ ಸವಿದಲ್ಲಿವಂಗಡದೆ ಪಾಡುತ್ತಿರ್ಪ ಪೆಣ್ದುಂಬಿಯಿಂ
ನುಣ್ಗಾಲುಂಗುರವೀಯೆ ಮೆಲ್ಲುಲಿಯನೆತ್ತಂ ಬರ್ಪಬಲ್ವೆಂಡಿರಿಂ
ಜಾಣ್ಗಿಂಬಾದರವೆಂಡಿರಿಂ ಪೊಗಟ್ವರೋದಂ ಕೇಳ್ವ ಕೂರಾಳ್ಗಳಿಂ ೩೧

ಮುತ್ತುಂ ಪಚ್ಚೆವರಲ್ಗಳುಂ ಕುಳಿಸಮುಂ ಮುಂತಾಗಿ ಕುಂದಿಲ್ಲದೊಂ
ಬತ್ತುಂ ರನ್ನದ ನುಣ್ಗದಿರ್ ನೆಗೆದು ನೀಳ್ದೊಂದೊಂದಱೊಳ್ ಕೂಡಿಮೆ
ಯ್ವೆತ್ತಿರ್ದಿಂದಿರವಿಲ್ಲ ಪಾಂಗನೆನಸು ಬಾಂಬಟ್ಟೆಯೊಳ್ ಬೀಱೆ ಕ
ಣ್ಗೆತ್ತಂ ಸೋಲಮನೀವ ರನ್ನವಸರಂ ಚೆಲ್ವಾದುದಾ ಬೀದಿಯೊಳ್ ೩೨

ತೊಳಗುವ ಪೂಗಳನೆಂದುಂ
ತಳೆದಿರ್ಪ ಕೊಳಂಗಳೆಂಬ ಸಂಕೆಯನೆನಸುಂ
ಬಳೆಯಿಸುತಿರ್ಪುದು ಬೀದಿಗ
ಳೊಳಗೆಲ್ಲಂ ನೆಗಟ್ದಿ ಕಂಚುಗಾಱಿರ ಪಸರಂ ೩೩

ಮಿಗೆ ಬೆಲೆಯೇಱಿದ ಪೂಲಿಯ
ಮಗರಿಯ ದೋರಿಯದ ಪಟೆಯ ತಳಿರ್ವಟ್ಟೆಯ ಕಾ
ಡಿಗೆ ನೀರಿನ ಬಟ್ಟೆಯ ಮಱೆ
ಗೆಗಳಿಂ ಸೋಲಿಪುವು ಸೀರೆವರದರ ಪಸರಂ ೩೪

ಅಲ್ಲಿಂ ಬೞಿಯಮುಣ್ಕೆ ಪೊಣ್ಮುವ ನಱುಗಂಪಿನ ಪರಸರದಂತೆ ಪಸರಿಸಿದ ತಂತಮ್ಮ ಕಾವಣಂಗಳ ಮುಂದೆ -

ಮಗಮಗಿಸುತ್ತಮಿರ್ಪ ನಱುಸುಯ್ ಪೊಸವೂಗಳ ಕಂಪನೆತ್ತೆನು
ಣ್ಗೊಗ್ರಮಿರದಚ್ಚದಾವರೆಯ ಮೆಯ್ಸಿರಿಯಂ ಪಿಡಿದೆತ್ತೆ ನೀಳ್ದ ಸೆ
ಳ್ಳುಗುರ್ಗಳ ಬೆಳ್ಪು ಕೇದಗೆಯ ಕುತ್ತೆಸಳೋಳಿಯನೆತ್ತೆ ಸುತ್ತಲುಂ
ಸೊಗಯಿಸುತಿರ್ಪ ಬಾಸಿಗಮನೆತ್ತುವರಗ್ಗದ ಮಾಲೆಗಾರ್ತಿಯರ್ ೩೫

ಅಂತು ಸೊಬಗಿಂಗೊಳಗಾಗಿ ಪುಲ್ಲವಡಿಗಿತಿಯರ ಪಸರದಿನಂದುಬಡೆದ ಸೂಳೆಗೇಱಿಯ ಕೆಲದಲಿ -

ಗುರುವರ ಗೊಟ್ಟಿಗಾಱರ ನೆಗೞ್ತೆಯ ಮಿಂಡರ ಮೇಳಗಾಱರ
ಕ್ಕರಿಗರ ಸಂದ ಕಬ್ಬಿಗರಜೋಡೆಯ ಬಂಡರ ಸಾರ್ದ ನೆತ್ತಗಾ
ಱರ ಚದುರಂಗಕಾಱರರೊರೆಗಾಱರ ಬಾಜಿಪ ಬೀಣೆಗಾಱರಾ
ಗರಮೆನೆ ಪೆಂಪು ಸೊಂಪನೊಳಕೊಂಡೆಸೆದಿರ್ಪುವು ಸೂಳೆಗೇಱಿಗಳ್ ೩೬

ಕಡಲೊಡೆಯನಿತ್ತ ರನ್ನದ
ತೊಡವಂ ತುಡು ಸೌರಿಯಿತ್ತ ಪೊಂಬಟ್ಟೆಯನಿಂ
ದುಡು ಸಸಿಯಟ್ಟಿದ ಪೂವಂ
ಮುಡಿಯೆಂಬೀ ನುಡಿಯೆ ಸೂಳೆಗೇಱಿಯೊಳೆಲ್ಲಂ ೩೭

ಮತ್ತಮಾ ಪಟ್ಟಣಮಿಟ್ಟಣಂಬಡೆದು ಮೆಱೆವ ಪೊಂಬೆಸೆದುಪ್ಪರಿಗೆಯ ಬಿಸವಂದಮಾದ ಚುಂಚು ಲೋವೆಗಳೊಳಗೆ ಬಳಸಿ ನಲಿದುಲಿವ ಪಾರಿವಂಗಳ ಕೊರಲುಲಿಯೊಳಂ, ಪುಲ್ಲವಡಿಗಿತಿಯರೆತ್ತಿ ಪಿಡಿದ ಮಾಲೆವೂವಿನ ನಱುಗಂಪಿಂಗೆ ಕವ್ವರೆಗೊಂಡು ಮುತ್ತಿ ಮುಸುಱಿ ಮೊರೆವ ಮಱಿದುಂಬಿಗಳಿಂಚರದೊಳಂ, ಜೂದಿನ ದಿಣ್ಣೆಯೊಳ್ ಜೂದಾಡಿ ಗೆಲ್ದು ಕೈಕೊಂಡ ಪೊನ್ನರಾಸಿಗಳ ವಾರುವಂಗಳ ಪೇರಾನೆಗಳ ತೇರ್ಗಳ ವಗಡಮಂ ತಂಡತಂಡದಿಂ ಬೀಯಂಗೆಯ್ವರಸುಮಕ್ಕಳ ಮುಂದೋದಿ ಮೆಚ್ಚಂ ಕೊಳ್ವಕ್ಕರಿಗರಬ್ಬರದೊಳಂ, ಓಲಗದವಸರಮನಱಿದರ ಮನೆಗೆ ಪೋಪ ಬರ್ಪ ಮನ್ನೆಯರ ಮಾ ಸಾವಂತರ ಪಸಾಯ್ತರ ಬೞಿಸಲ್ವ ತುೞಿಲಾಳ್ಗಳಡ್ಡಣದೊಳೆಡ್ಡಮಾಗೆ ಕೀಲಿಸಿದ ಕಿಱುಗೆಜ್ಜೆಯ ದನಿಗೊಳೊಳಂ, ನೀರುಣಲೆಂದು ಪೊಱಮಟ್ಟು ಕೆಂದೂಳಿಯ ನೊಟ್ಟಿಕೊಳಲೆಂದು ನಿಂದು ನಿಂದು ನೆಲದ ಸೊವಡನಾರಯ್ದು ಮಸಗಿ ದೆಸೆದೆಸೆಗೆ ವಿಸಟಂಬರಿದು ಮನ್ನಣೆಯ ಮಾವಂತರುಮನಾರೆ ಕಾಱಿರುಮಂ ಮೀಱಿ ಗೆಂಟಱಿೊಳ್ ನಿಂದು ನೋಡುವ ನುಡಿಗೆ ಗಿಱ್ರನೆಯ್ದುವ ಸೊರ್ಕಾನೆಗಳ ಕಾಲ ಸಂಕಲೆಯು ಗೋಸದೊಳಂ ಇಂದಿರನ ಪೋೞಲ ಸಿರಿಯ ಸಡಗರವಂ ಪಿಡಿಯುತಿರ್ಪುದು ಮಂತುಮಲ್ಲದೆಯಂ - .

ನಲವಿಂದಿರುಳುಂ ಪಗಲುಂ
ನೆಲನೆಲ್ಲಂ ಬಾೞ್ವುದೀತನಾದ ಬೞಿಕ್ಕಂ
ದುಲಿಯೆ ಸಲಪುತ್ತುಮಿರ್ಪಂ
ತೊಲಗದೆ ನನೆಯಂಬನೆಂಬನಂತಾ ಪೊೞಲಂ ೩೮

ಜಸಮಳೆಯೆಲ್ಲಮಂ ಬಳಸೆ ಬಲ್ಲು ನೆಗೞ್ತೆಯ ಬೀರರಂ ಝಳ
ಪಿಸೆ ಕಡುನನ್ನಿ ಬಂದು ಸರಣೆಂದವರಂ ತಲೆಗಾಯೆ ಚಾಗದೊಂ
ದೆಸಕವಲಂಪಿನಿಂ ಬಡವರಂ ತಣಿಪುತ್ತಿರೆ ತಕ್ಕರೊಲ್ದು ಬ
ಣ್ಣಿಸೆ ನನೆಯಂಬನೆಯ್ದೆ ನೆಲನಂ ಬಲದೋಳ್ದಲೆಯಲ್ಲಿ ತಾಳ್ದಿದಂ ೩೯

ನುಡಿ ಸಲೆ ನನ್ನಿಗಿರ್ಕೆವನೆಯಾದುದು ಜೌವನದೇೞ್ಗೆ ಕಯ್ಗೆ ಕ
ನ್ನಡಿಯೆನಿಸಿತ್ತು ಪೆಂಪು ಪಿರಿಯರ್ಗೆಡೆಗೊಟ್ಟುದು ಗಾಡಿ ರೂಡಿಯಂ
ಪಡೆದುದು ಬೀರಮುಗ್ಗಡದ ಸೈರಣೆಗಾಗರಮಾಯ್ತು ನೋೞ್ಪೊಡೆಂ
ದಡಿಗಡಿಗೊಲ್ದು ಬಣ್ಣಿಸುವುದಾ ನನೆಯಂಬನ ಪೆರ್ಮೆಯಂ ನೆಲಂ ೪೦

ಪಗೆಗಳುಮಂ ಪೆಂಡಿರುಮಂ
ಮಿಗೆ ಸೋಲಿಪುವವನ ಬೀರಮುಂ ಗಾಡಿಯುಮಾ
ವಗಮಡಿಸಿ ತಾಗೆ ಕಣೆಯುಂ
ಮುಗುಳ್ಗಣೆಯುಂ ಮೊನೆಯೊಳಂ ಪೊೞಲ್ವೀದಿಯೊಳಂ ೪೧

ಪಡಿಮೊಗಮಾಗಲೊಡಂ ಕ
ನ್ನಡಿಯಂ ನೋಡುವರ ತೆಱದೆ ಮೆಯ್ಗುಂದುವರು
ಗ್ಗಡದರಸುಮಕ್ಕಳೆನೆ ಬಾ
ಳ್ವಿಡಿದಾರ್ ಬಾೞ್ದಪ್ಪರಾತನಿದಿರೊಳ್ ಪಗೆವರ್ ೪೨

ಕಡುಗಲಿ ನನೆಯಂಬನ ಬೆ
ಳ್ಗೊಡೆಯೆತ್ತಿದ ಬೞಿಯಮುೞಿದ ರಾಯರ ಕೊಡೆಗಳ್
ಗಡಣದೊಳೆ ತಲೆದಣಂಬೆಯ
ಕೊಡೆವೋಲ್ ಬೆಳ್ಗೊಡೆಗಳಾದುವದನೇವೊಗೞ್ವೆಂ ೪೩

ಮತ್ತಮಾತಂ ತಾವರೆಯಂತೆ ಸಿರಿಯೊಳೊಂದಿಯುಂ ಪೊಡೆಯಲರನೆನಿಸಂ; ಸಿಡಿಲಂತೆ ಕಾಯ್ಪನಾಂತುಂ ಬಿಸುಗದಿರನೆನಿಸಂ; ಬಿಲ್ಗಾಱನ ಕೈಯಂತೆ ಮಿಸುಪ ಸರದಿನಳವಟ್ಟುಂ ಮಾಲೆಗಾಱನೆನಿಸಿಂ; ಪಾರ್ವರ ಕೇಱಿಯಂತೆ ಚಿಂದಂಬಡೆದ ಮಡದಿ ನೆಸೆದುಂ ತೇರೇನಿಸಂ; ಬಾನಂತೆ ಮಿಾನ್ಗಳಂ ತಳೆದುಂ ಮುನ್ನೀರೆನಿಸಂ; ಮಾವಿನಂತೆ

ಕೋಡುಗೈಯೊಂದಿಯುಂ ಸೊರ್ಕಾನೆಯೆನಿಸಂ; ಎಂಬ ನೆಗಟ್ತೆಯಂ ಪೆತ್ತು ಪಲವುಂ ಪಗಲರಸುಗೆಯ್ಯುತ್ತುಮಿರ್ಪನ್ನೆಗಂ -

ಒಲವಿಂದೋಲಗಿಸುವೆ ನೀ
ನೆಲದೆಱಿಯನನೆಂದು ಬರ್ಪವೋಲ್ ಬಗ್ಗಿಪ ಕೋ
ಗಿಲೆಯ ತೊದಳ್ನುಡಿ ಬಿರಿಯಿಯ
ನಲೆಯುತ್ತಿರೆ ಬಿಡದೆ ಬಂದುದಂದು ಬಸಂತಂ ೪೪

ಬಿರಯಿಗಳಂಜಿ ತಾಱಿ ಪಗಲಾಣ್ಮನ ಮೆಯ್ ಬಿಸುಪೇಱಿ ಮಾಗೆಚಿ
ಚ್ಚರದೊಳೆ ಪಾಱಿ ನೀರ್ದೆಗೆದು ಬೆಂಚೆಗಳೊಳ್ ಕೆಸಱಾಱಿ ತುಂಬಿಗಳ್
ಮೊರೆದಲರತ್ತ ಜಾಱಿ ನನೆಯಂ ತರದಿಂದಮರ್ಚುತ್ತೆ ಪೇಱಿತಾ
ವರೆ ತಲೆದೋಱಿ ತೀಡಿದುದು ತೆಂಕಣ ಗಾಳಿ ಬಸಂತದೇೞ್ಗೆಯೊಳ್ ೪೫

ಮತ್ತಂ ಕೆಲಬಲದ ಕಿಱುವೆಟ್ಟಿನೊಳ್ ಪುಟ್ಟಿದ ಬೇವು ಬೊಬ್ಬುಲಿಗಳಂ ತನ್ನಂತೆ ಮಾಟ್ಪಿ ಸಿರಿಕಂಡವೆಟ್ಟಿನೊಳ್ ಪುಟ್ಟಿಯುಂ, ಸೊಂದಿಗೋಡಗಂಗಳ ಕಾಲಾಟದಿನಲ್ಲೊಕ್ಕಲರಿನುದಿರ್ದ ದೂಳಿಗಳನಮರ್ಚಿಯುಂ, ಕಿಬ್ಬರಿಗಳೊಳ್ ಬೆಳೆದಸುಗೆಯ ಬನಮನಿರ್ಕೆಮಾಡಿ ಬಿಡದೊಳ್ವ ಪೆಣ್ಗೋಗಿಲೆಯ ಸರಂಗಳಿಂ ದೊದಳ್ನುಡಿಯಂ ಬೀರಿಯುಂ, ಎಡೆವಿಡದೆ ಕಡಲ ತಡಿಗಳೊಳ್ ಪೆಂಬಾಟೆಯ ಕಂಪು ಪೊಂಪುೞೆವೋಗೆ ನೆಗೆದ ಕೌಂಗಿನ ಸಾಲ ಸಂದಣಿಯೊಳ್ ನಿಱಿಗಱಿಗಂಪನಾಡಿಯುಂ, ಪಟ್ಟಣಂಗಳ ಪೊಱವೊೞಲ ತೋಂಟಂಗಳೊಳ್ ಬೇಱೂರ್ಗೆ ಪೋದ ನಲ್ಲರ ನೆನೆದು ದೂಱಿಸುವ ನೀಱೆಯರ ನಿಡುಸುಯ್ಯ ಗಡಣದಿಂ ಜೌವನವೇಱಿಯುಂ, ಸೊಬಗುವಂ ಗಾಡಿಯುಮನೊಳಕೊಂಡು ತಿರುಗುವೆಳವೆಂಡಿರ ಬಟ್ಟಮೊಲೆಯಿಟ್ಟೆಡೆಯೊಳವೊಕ್ಕು ತೋರಮುತ್ತಿನಾರಮನಲ್ಲಾಡಿಯುಂ, ಕಟಿವೆಯ ಮಡಿಗಳ ಬೞಿವಿಡಿದು ಬೆಳೆದ ಬೆಂಗಣೆಗಿಲೆಯ ಕಂಪಿನೊಳ್ ಪೊರೆದು ಪರಿವ ತೊಱೆಗಾಲ್ಗಳ ಸೀರ್ಪನಿಗಳನೀಂಟಿಯುಂ ಇಂತು ಪಾಱುಬೊಜಂಗನ ಗೆಯ್ತ ಮನೊಳಕೊಂಡು ತೀಡೆ -

ಕಡು ಸೊರ್ಕಿಂದಲರಂಬನಾನೆಯೆನಿಪೀ ತೆಂಗಾಳಿ ತನ್ನಿಚ್ಚೆಯಿಂ
ನಡೆತಂದಪ್ಪುದು ಬೇಗದಿಂ ಬಿರಯಿಂ ನೀಂ ಪೋ ಪೋಗು ಪೋಗೆಂದು ಮುಂ
ಲಗಡೆಯೊಳ್ ಸಾಱುವ ಡೌಡೆಯೆಂಬ ತೆಱದಿಂದಂ ಬಗ್ಗಿಸುತ್ತಿರ್ದುವು
ಗ್ಗಡದಿಂ ಕೋಗಿಲೆ ಮೊಗ್ಗೆಯಿಂ ಮಿಡಿಗಳಿಂ ಸೊಂಪೇಱಿದಿಮ್ಮಾವಿನೊಳ್ ೪೬

ಅಲರ್ಗಳನಾಂತ ಪಾದರಿಗಳೊಳ್ ತರದಿಂದೆಱಗಿರ್ದ ತುಂಬಿಗಳ್
ಪಲವು ಬಸಂತನೊಲ್ದೊಲಿಸಿ ಕಾಡುವ ರೂಡಿಯ ಬರ್ದುವೆಂಡಿರಂ
ನಿಲೆ ಸೆಱೆಗೆಯ್ವೆನೆಂದು ಪಲವಾಗಿರೆ ಮಾಡಿದ ತನ್ನ ಬಳ್ಳಿ ಸಂ
ಕಲೆಗಳಿವೆಂಬಿನಂ ಬಗೆಯನಿರ್ಕುಳಿಗೊಂಡುವದೊಂದು ತಾಣದೊಳ್ ೪೭

ಇವಱ ತನಿಗಂಪನಾಂ ಸವಿ
ವೆವೆನುತ್ತೆಸೆವಲರ್ಗೆ ಕಾಪನಿತ್ತುಱ್ ಕೈಕೊಂ
ಡವೊಲೆಱಗಿ ಪಱಿಮೆವಱ್ವಿಂ
ಡವಿದತ್ತದಿರ್ಮುತ್ತೆಯಲ್ಲಿ ಸಂದಣಿಗೊಳುತುಂ ೪೮

ಬಗೆಯದೆ ನಡೆವಳಿಗರಸಂ
ಪಗೆಯರ ಮನೆಗೆಯ್ದಿ ಬೞ್ಕ ಜಾಱುವವೊಲ್ ಸಂ
ಪಗೆಯ ನನೆಗೆಯ್ದಿ ಬೞ್ಕೊ
ಯ್ಯಗೆ ಜಾಱುವ ತುಂಬಿ ನಗಿಸಿದುದು ಮಲ್ಲಿಗೆಯಂ ೪೯

ಕಡು ನಿಮಿರ್ದಕೊಂಬು ಕೊಂಬಿನೊ
ಳೆಡೆವಿಡದಲರ್ದಲರ ತೊಂಗಲಿಂ ಪುದಿದುಮಣಂ
ಗಡಣದಿನೆಯ್ತಂದೆಱಪಾ
ಱಡಿಗಾರಡಿದಾಣಮಾಯ್ತು ಸಂಪಗೆ ಪಲವುಂ ೫೦

ಕಾಲ್ಸಮನಿಸೆ ಪೊಸಬಂಡಿನ
ಮೆಲ್ಸರಿಯಂ ಸುರಿಯುತಿರ್ಪ ಸಂಪಗೆವೂಗಳ್
ಬಲ್ಸೆಱೆವಿಡಿವಂತಿರ್ದುವು
ಮೆಲ್ಸರದಿಂ ಪಾಡುತಿರ್ಪ ಪೆಣ್ದುಂಬಿಗಳಂ ೫೧

ಕನರ್ಗೊನರಂ ಕರ್ದುಂಕಿ ದನಿದೋಱುವ ಕೋಗಿಲೆ ಮೇಳದಾಳ್ಗಳೆಂ
ದೆನೆ ಗಿಳಿವಿಂಡು ಬಂದೆಱೆಯೆ ಬರ್ಪವರೆಂದೆನೆ ಪೊಣ್ಮುತಿರ್ಪ ಪೂ
ವಿನ ಪೊಸಗಂಪು ಕತ್ತುರಿಯ ಕಂಪೆನೆ ಪಾಡುವ ತುಂಬಿ ಗಾಣರೆಂ
ದೆನೆ ನನೆಯಂಬನೋಲಗದ ಸಾಲೆವೊಲಿರ್ದುವು ಬಂದ ಮಾವುಗಳ್ ೫೨

ನನೆಯುಂ ಪೇಱಿದ ತೋರಗೊಂಬು ನನೆಯುಂ ಪೂಗೊಂಚಲಂ ಪೊತ್ತು ನೆ
ಟ್ಟನೆ ಬಿಣ್ಪೇಱಿದ ಬಳ್ಳಿಗೊಂಬು ನನೆಯಂ ಪೂಗೊಂಚಲಂ ಕಾಯನಂ
ತೆನಸುಂ ತಾಳ್ದಿದ ಗುಜ್ಜುಗೊಂಬು ನನೆಯಂ ಪೂಗೊಂಚಲಂ ಕಾಯ್ಗಳಂ
ತನಿವಣ್ಣಂ ತಳೆದಳ್ಳೆಗೊಂಬು ತರದಿಂ ಚೆಲ್ವಾದುದಿಮ್ಮಾವಿನೊಳ್ ೫೩

ಮಲ್ಲಿಗೆಯಲ್ಲಿ ತುಂಬಿ ಮೊರೆಯುತ್ತಿದೆ ಕಂಪಿನೊಳೊಂದಿ ತೆಂಕಣಂ
ಮೆಲ್ಲನೆ ಗಾಳಿ ತೀಡುತ್ತಿದೆ ಕೋಗಿಲೆಗಳ್ ಪೊಸಮಾಮರಂಗಳೊಳ್
ಬಲ್ಲುಲಿಯಿಂದೆ ಬಗ್ಗಿಸುತುಮಿಂತಿದೆ ಬಂದುದು ಸುಗ್ಗಿ ತಳ್ವಿದಂ
ನಲ್ಲನೆಸುತ್ತದೊರ್ವಳೆಳವೆಣ್ ಸುರಿದಳ್ ಮಿಗೆ ಕಣ್ಣ ನೀರ್ಗಳಂ ೫೪

ಮತ್ತೋರ್ವ ಚೆನ್ನೆ ಪೊನ್ನ ಕುರುಮಾಡಮಂ ಬಳಸಿ ಬೆಳೆದ ಪೂದೋಟಮಂ ಪೊಕ್ಕು ಮೆಯ್ಗರೆದ ನಲ್ಲನಂ ನೆವದಿನಿಂತೆಂದಳದೆಂತೆನೆ -

ಎಲೆ ತಣ್ಗಾಳಿಯೇ ನೀನೇ
ಕಲೆದಪೆ ಮಱಿದುಂಬಿಯೇಕೆ ಪಲ್ಮೊರೆದಪೆ ಕೋ
ಗಿಲೆಯೇಕೆ ಕಿನಿಸಿದಪೆ ಕಾ
ದಲನಿಲ್ಲದ ಪೆಱಗೆ ನೋಯಿಪರೆ ನೀವೆನ್ನಂ ೫೫

ಎಂಬ ಮಾತಂ ಕೇಳ್ದು ತಲ್ಲಣದಿನವಳ ನಲ್ಲನಲ್ಲಿಗೆ ಪೋಗಿ ಮೇಳದ ಕೆಳದಿ ಮೆಲ್ಲನಿಂತೆಂದಳ್ -

ಕೂಡೆ ಮುಗುಲ್ತ ಮಲ್ಲಿಗೆಗೆ ತೀಡುವ ಗಾಳಿಗೆ ತಂಡತಂಡದಿಂ
ಪಾಡುವ ತುಂಬಿಗಳ್ಗೆ ಸುೞಿವಂಚೆಗೆ ಕೋಡುವ ಪೂಗೂಳಕ್ಕೆ ಮಾ
ತಾಡುವ ಪಕ್ಕಿಗಳ್ಗೆ ದನಿದೋಱುವ ಕೊಂಚೆಗೆ ಸಣ್ಣಗಾಯ್ಗಳಿಂ
ಮೂಡುವ ಮಾಮರಕ್ಕಗಿವಳಾಕೆಯೊಳೀ ಮುನಿಸೇಕೆ ಸಾಲದೇ ೫೬

ಮತ್ತಮೊಂದೆಡೆಯೊಳ್ -

ತರದಿಂದುಣ್ಮುವ ಕಣ್ಣ ನೀರ್ವನಿಗಳಂ ಕೈಕೊಂಡು ನುಣ್ಮುತ್ತಿನೊ
ರ್ಚರಮಂ ಪೆರ್ಮೊಲೆ ಚುನ್ನವಾಡೆ ಸೆಳೆಮಾವಂ ನೆಮ್ಮಿಪೂಗಂಪಿನೊಳ್
ಪೊರೆದಲ್ಲಾಡುವ ತುಂಬಿವಾಡನೊಲವಿಂ ಕೇಳ್ವಂದದಿಂ ನಿಂದು ಪಾ
ದರಿಗಂ ನಿಲ್ಲದೆ ಪೋದುದರ್ಕೆ ಬಗೆಗೆಟ್ಟಿರ್ದಾಕೆ ಕಣ್ಗೊಪ್ಪಿದಳ್ ೫೭

ಅದಲ್ಲದೆಯುಂ ಮತ್ತಮೊರ್ವ ಗಾಡಿಕಾರ್ತಿ ಸಂದಣಿಸಿ ಚೆಂದಂಬಡೆದ ಕೆಂದಳಿರ ಪಂದರಮಂ ಮೆಯ್ವೆಂಕೆಗಂಜಿ ಪತ್ತೆ ಸಾರ್ದಿಂತೆಂದಳ್ -

ಎಲೆ ತೀಡುವ ತೆಂಗಾಳಿಯೆ
ನಲವಿಂ ಕಾಲ್ವಿಡಿದು ತಿಳಿಪಿ ತಳ್ವಿಲ್ಲದೆ ಕಾ
ದಲನಂ ತಂದೊಡೆ ನಱುಸು
ಯ್ಯಲರಿಂದಂ ನಿನ್ನನಾಗಳುಂ ನೆಱೆ ಪೊರೆವೆಂ ೫೮

ಅಂತು ಬಂದ ಬಸಂತದೊಳೊರ್ಮೆ ನನೆಯಂಬಂ ತನ್ನ ಮೇಳದ ಕೆಳೆಯನಪ್ಪ ನಗೆಗಾಱನಂ ಬೞಿಯಟ್ಟ ಬರಿಸಿ ಪಸಾಯ್ತರೆಲ್ಲರುಂ ಬಗೆಯಱಿದಿಟ್ಟೆಡೆಯಂ ತೊಲಗಿ ಪೋಗೆ, ಕೆಲಕ್ಕೆ ಕರೆದು ಕನಸಂ ಕೇಳ್ವುದೆಂದಿಂತೆಂದಂ -

ತಳತಳಿಸಿ ಬೆಳಪ ತಿಂಗಳ
ಬೆಳಗಂ ಕವರ್ವಂತೆ ಮೆಱೆವ ಮೆಯ್ವೆಳಗಿಂ ಕ

ಣ್ಗೊಳಿಪೊರ್ವಳನಾನಿಂದಿನ
ಬೆಳಗಪ್ಪೊಂದೆರಡು ಗಱಿಗೆಯಾಗಲ್ ಕಂಡೆಂ ೫೯

ಮಿನುಗುವ ನಿಟ್ಟೆಸಳೊಳ್ ನೀ
ರ್ವನಿಗಳನೊಳಕೊಂಡು ತೋರ್ಪ ಕೆಂದಾವರೆಯಂ
ನೆನೆಯಿಸಿದುದು ಕಾಲುಗುರ್ಗಳಿ
ನೆನಸುಂ ಕಣ್ಗೊಳಿಪ ನಿಡಿಯ ಮೆಲ್ಲಡಿಯವಳಾ ೬೦

ನೇರಿತೆಳವಾಟಿಗಂಬಮ
ನೋರಂತಿರೆ ನುಣ್ಪುವೆತ್ತು ಸೋಲಿಪ ಚೆಲ್ವಿಂ
ಬಾರಿಸಿ ಸೊಬಗಿಂಗೆತ್ತಿದ
ತೋರಣಗಂಬಂಬೊಲಿರ್ದುವಾಕೆಯ ತೊಡೆಗಳ್ ೬೧

ಮಿಱುಪ ಸುಱಿವಡೆದ ಸಿಂಗರ
ದೊಱೆಯೊಳ್ ತಲೆದೋರ್ಪ ತೆರೆಗಳೆಂದೆಂಬಿನಮೇಂ
ಮೆಱೆದುವೊ ಪೊರ್ಕುೞಿ ಗಾಡಿಯೊ
ಳೞಿಪುವ ತೆಳ್ವಸಿಱೊಳೆಸೆವ ತಿವಳಿಗಳವಳಾ ೬೨

ಮಿಳಿರ್ದಾಡುವ ಮಱಿದುಂಬಿಯ
ನೊಳಕೊಂಡೆಸೆದಿರ್ಪ ತಾವರೆಯವೊಲ್ ಪೊಳೆಪಂ
ತಳೆದು ಕುರುಳೋಳಿಯಿಂ ಬಗೆ
ಗೊಳಿಸಿದುದೋರಂತೆ ಮಿಸುಪ ನಗೆಮೊಗಮವಳಾ ೬೩

ಮತ್ತಮವಳ ಮೆಲ್ಲಡಿ ಮೊದಲ್ಗೊಂಡು ಮೆಲ್ಲಮೆಲ್ಲನೆ ಮೇಗಡರ್ದ ನೀಳ್ದ ಕಣ್ಗಳುಂ ಸೆಳೆನಡುವಿನಲ್ಲಾಟಮಂ ಕಂಡು ಪೊಱಮಾಱಿಂದೇಱಲಾರ್ತುವಿಲ್ಲ; ಅವಳ ಕಡುಗುಣ್ಪನಾಳ್ದ ಪೊರ್ಕುೞಿಯೊಳಗಟ್ಟಿ ಬಗೆ ಎನ್ನಂ ತೆಗೆಯಿಮೆಂದೆತ್ತಿದ ಕೈಯಂತಿರ್ದ ಬಾಸೆಯೊಳಂಟುಗೊಂಡ ಕಣ್ ತಿವಳಿಯೊಳಂ ಸಿಲ್ಕಿ ಪೋಗಲಾರ್ತುವಿಲ್ಲ; ಅವಳ ಬೆಟ್ಟಿತಪ್ಪ ಬಟ್ಟಮೊಲೆಯಿಟ್ಟೆಡೆಯೊಳ್ ತೊಟ್ಟನೆ ಸಿಲ್ಕಿದ ಕಣ್ ಕಪ್ಪಿನೊಳ್ ಕೆಡೆದ ಮಱಿವುಲ್ಲೆಯಂತೆ ಮಿಡುಕಲಾರ್ತುವಿಲ್ಲ; ಅವಳ ನಗೆಮೊಗದೊಳೊಯ್ಯ ನೊಯ್ಯನೆಱಗಿದ ಕಣ್ ಎಸೆವಪೊಸದಾವರೆಗೆಱಕದಿಂದೆಱಗಿದ ಮಱಿದುಂಬಿಯಂತೆ ಪೆಱಪಿಂಗಲಾರ್ತುವಿಲ್ಲ ; ಅವಳ ಪೆಱೆನೊಸಲನಲೆವ ಬಳ್ಳಿಗುರುಳೊಳ್ ತೊಡಂಕಿದ ಕಣ್ ಕಣ್ಣಿವಲೆಯೊಳ್ ಕೆಡೆದೆರಲೆಯಂತಡಿಯಿಡಲಾರ್ತುವಿಲ್ಲ ; ಅಂತುಮಲ್ಲದೆಯುಂ -

ತೊಳಗುವ ಮುತ್ತಿನೋಲೆಗಳ ಬೆಳ್ವೆಳಗಿಂ ಸುಲಿಪಲ್ಲ ಮಿಂಚಿನಿಂ
ಪೊಳೆವಲರ್ಗಣ್ಣ ನುಣ್ಗದಿರ್ಗಳಿಂ ತಿಸರಂಗಳ ನೀಳ್ದ ಡಾಳದಿಂ

ಬಳೆದೆಸೆದಿರ್ದ ಸೆಳ್ಳುಗುರ ಮೆಯ್ವೊಳೆಪಿಂ ಮಿಗೆ ಪೆರ್ಮೆವೆತ್ತು ಕ
ಣ್ಗೊಳಿಸಿದಳಾಕೆ ಪಾಲ್ಗಡಲ ಪೆರ್ದೆರೆಯೊಳ್ ಸಿರಿ ನಿಂದಳೆಂಬಿನಂ ೬೪

ತೊಳಗುವ ಮುತ್ತಿನೋಲೆಗಳ ಬೆಳ್ವೆಳಗಿಂ ಮಿಗೆ ಪೆರ್ಮೆವೆತ್ತು ಕ
ಣ್ಗೊಳಿಸಿದಳಾಕೆ ಪಾಲ್ಗಡಲ ಪೆರ್ದೆರೆಯುಂತಿರೆ ಜೊನ್ನದೊಂದು ಪು
ತ್ತಟಿಯವೊಲೊಪ್ಪವೆತ್ತ ಬಿದುಗಲ್ಲಿನ ಬೊಂಬೆಯ ಪಾಂಗಿನಂತೆ ಸೊಂ
ಪಳವಡೆ ಬಂದುದಂ ಕನಸಿನೊಳ್ ನೆಱೆ ನೋಡಿದೆನೆಂದು ಪೂಸರಂ ೬೫

ಇಂತು ಕೇಳೆ ಪೇೞ್ವುದುಂ ಮೆಲ್ಲನೆ ನಗೆಗಾಱನಿಂತೆಂದಂ -

ಕನಸಿದು ನನ್ನಿ ಕೇಳ್ ನಿನಗೆ ಬೇಗದೆ ಸಾರ್ವಳದೊರ್ವ ಚೆನ್ನೆಯೆಂ
ದೆನೆ ನನೆಯಂಬನುಟ್ಟ ತಳಿರ್ವಟ್ಟೆಯನಾಗಳೆ ಮೆಚ್ಚುಗೊಟ್ಟು ಮೆ
ಲ್ಲನೆ ನಡೆತಂದು ಪೊನ್ನ ಕರುಮಾಡದ ಮೇಲ್ನೆಲೆಯಲ್ಲಿ ಗಾಡಿಯಿಂ
ಬೆನೆ ನೆರೆದೋಲಗಂ ನಲವು ಕೈಮಿಗೆ ತನ್ನನೆ ನೋಡುತಿರ್ಪಿನಂ ೬೬

ಅಂತೋಲಗಂಗೊಟ್ಟು ಕುಳ್ಳಿರ್ದ ಬಿತ್ತಿಯೊಳಂದಂಬಡೆವಂತು ಬಚ್ಚಿಸಿದ ಬಣ್ಣಂಗಳಂ ಬೇಱೆವೇಱೆ ನೋಡಿ ಮೆಚ್ಚುತಿರ್ಪಾಗಳ್ ನಗೆಗಾಱಂ ಬಿನ್ನಪಮೆಂದಿಂತೆಂದಂ -

ಬರೆದ ಬನಮಿರ್ಕೆ ನೋಡೀ
ಕರುಮಾಡದೆ ಕಲದೆ ಬೆಳೆದ ಪೂದೋಂಟಮನಿಂ
ಚರದಿಂ ಬಗೆಗೊಳಿಪಂಚೆಯ
ನೆರವಿಗಳಂ ನೋಡು ತಳೆದು ಬೇಟಂಗಳುಮಂ ೬೭

ಮಾವಿನ ಜೊಂಪಮಂ ಮಿಸುಪ ಸಂಪಗೆಯಂ ಬಗೆಗೊಳ್ವ ಜಾದಿಯಂ
ಪೂವಿನ ಗೊಂಚಲಿಂ ಪುದಿದ ಪಾದರಿಯಂ ಪರಿತರ್ಪ ತುಂಬಿಯಂ
ತಾವರೆಗಿರ್ಕೆಯಾದ ಕೊಳನಂ ನೆರೆದಾಡುವ ಜಕ್ಕವಕ್ಕಿಯಂ
ತೀವಿದ ಬಂಡು ಬಂದು ನೆರೆಯುತ್ತಿರೆ ಮೆಲ್ಲನೆ ಬರ್ಪ ಕಾಲ್ಗಳಂ ೬೮

ಎಂದು ಬಿನ್ನವಿಸುತ್ತಿರೆ-

ಬನದೆಡೆಯಂ ನೋಡುವುದೆಂ
ದೆನಸುಂ'ತುಂಬಿಗಳ ದನಿಗಳಿಂ ಕರೆವವೊಲೊ
ಯ್ಯನೆ ಬಂದು ಬಂದು ನಾಡೆಱೆ
ಯನ ಕೆಲದೊಳ್ ತೀಡಿದತ್ತು ತೆಂಬೆಲರಾಗಳ್ ೬೯

ಅಂತು ಬಂದ ತೆಂಗಾಳಿಗೆ ಪಿಡಿದ ಕೆಂದಾವರೆಯ ಮುಡಿದ ಮಲ್ಲಿಗೆಯ ಪೂಸಿದ ಸಿರಿಕಂಡದ ಕಪ್ಪುರದ ತಂಬುಲದ ನೊಸಲ ಕತ್ತುರಿಯ ಕಂಪಂ ಮೆಚ್ಚುಗುಡುವಂತೆ ಮೆಲ್ಲನೆ

ಮೆಯ್ವಾರ್ಚಿ ಬೞಿಯಂ ಬನಮಂ ನೋಡಲ್ವೇೞ್ಕುಮೆಂದು ನನೆಯಂಬಂ ಬಗೆಯೊಳ್ ನೆನೆಯುತ್ತಿರ್ಪನ್ನೆಗಂ -

ತೊಂಗಲ್ಗೊಂಡಿರ್ದು ಕೆಂಪಾದಸುಗೆಯ ತಳಿರಂ ಕಂಪುದೀವಿರ್ದ ಪೂವಂ
ಮಾಂಗಾಯಂ ಪೊಚ್ಚ ಪೊಂಬಾೞೆಯ ಮರುಗಮಸಿಂಬಾದ ನಲ್ವಾೞೆವಣ್ಣಂ
ಪೊಂಗಿರ್ದಾ ನೈದಿಲೊಳ್ತಾವರೆಯ ಮುಗುಳ್ಗಳಂ ಸೊಂಪಿನಿಂ ಬೆಳ್ಪುವೆತ್ತಿ
ರ್ದಿಂಗೋಲಂ ಪಣ್ತ ದಾಳಿಂಬಗಳನೊಲವಿನಿಂ ತೋಂಟಿಗಂ ಕೊಟ್ಟನೊರ್ವಂ ೨೦

ಅಂತು ಕಾಣ್ಕೆಗೊಟ್ಟವದರಿಪುದೆಂದಿಂತೆಂದಂ: ಪೆಱನಾಡೆಱೆಯಂ ನಿನ್ನ ಕೈಯೊಳ್ ಬನ್ನಂಬಡೆದು ಕಿನ್ನನಾಗೆಯವನ ಮೆಯ್ಗುಂದಿದ ಚಿನ್ನ ಪಾಂಗಿನಂತೆ ಪೊಡರ್ಪುಡುಗಿದ ಜಾದಿಯಂ ನಗುವಂದದಿನರಲ್ದ ಸುರಹೊನ್ನೆಗಳೊಳಂ, ಚಲದಿಂ ಮಲೆವ ಮಱುವರಸರ ಪೊಸನೆತ್ತರೊಳ್ ಪೊರೆದ ನಿನ್ನ ಬಾಳಂತೆ ಒಳ್ಪುವಡೆದ ಕೆಂದಳಿರ್ಗಳಿಂ ಮಿಸುಗುವ ಅಸುಗೆಗಳೊಳಂ, ನಿನ್ನ ಮುಳಿಸಿನ ಬೆಂಕಿಯಿಂ ಪೊತ್ತಿ ಪೊಗೆದುರಿವ ಪಗೆವರ ಬೀಡಿನಂತೆ ಸುತ್ತಲುಂ ಪೂತ ಮುಳ್ಮುತ್ತುಗದ ಮರಂಗಳೊಳಂ, ನಿನ್ನಡಿಯಂ ನೆರವಿಲ್ಲದೆ ನಂಬಿದೆವೆಂಬರಸರ ಚಿನ್ನ ಪೊನ್ನ ನೆಲೆವಾಡದಂತೆ ಪೂಸರಂಬಡೆದ ಕೊಸಗಿನ ಮರಂಗಳೊಳಂ, ನಿನ್ನ ಗಾಡಿಯಂ ನೋಡಿ ಕೂಡಲ್ಪಡೆಯದ ಮಡದಿಯರ ಕದಂಪಿನಂತೆ ತುಱುಗಿದಲರಿಂ ಬೆಳ್ಪೇಱಿದ ಬಕುಳಂಗಳೊಳಂ, ಬಿನದಕ್ಕೆ ಪಕ್ಕಾದ ಬನಮಂ ನೋಡಲ್ವೇೞ್ಪುದೇಱೆಂಬುದುಮಾತಂಗೆ ಮೆಚ್ಚುಗೊಟ್ಟು -

ಜಡಿವ ಪಡಿಯಱರ ಸೊಗಯಿಪ
ನುಡಿಕಾಱರ ಮೇಳದರಸುಗಳ ಮೆಲ್ಲನೆ ಕೈ
ಗುಡುವ ಸೊಬಗೆಯರ ನೆರವಿಗ
ಳೊಡನೆೞ್ದಂ ಬನಮನೊಸೆದು ನೋೞ್ಪುಜ್ಜುಗದಿಂ ೨೧

ಬೀಸುವ ಚಿನ್ನ ಸೀಗುರಿಗಳಿರ್ಕೆಲದೊಳ್ ಮಿಳಿರ್ದಾಡೆ ನಾಡೆಯುಂ
ಗೋಸಣೆವೆತ್ತ ರಾಯರಿದಿರೇೞ್ತರೆ ತುಂಬಿಗಳಚ್ಚವೂಗಳಿಂ
ದೂಸರಮಾದ ಚೊಲ್ಲೆಯದ ಕಂಪಿನೊಳೋಕುೞಿಯಾಡೆ ಸಿಂಗರಂ
ದೇಸೆಯೊಳೊಂದಿ ತೋಱೆ ತಳರ್ದಂ ನನೆಯಂಬನದೊಂದು ಚೆಲ್ವಿನಿಂ ೨೨

ನಡೆಗಳೊಳಂಚೆ ನುಣ್ಗುರುಲೊಳಾಱಿಡಿ ತೋಳ್ಗಳೊಳಳ್ಳಿಗೊಂಬು ಸೋ
ರ್ಮುಡಿಗಳೊಳೈದೆ ಸೋಗೆ ಮಿಗೆ ಪೆರ್ಮೊಲೆಯೊಳ್ ಪೊಣರ್ವಕ್ಕಿ ನಿಚ್ಚಮುಂ
ಕಡು ಮುಳಿಯುತ್ತುಮಿರ್ಪುವಿದಱೊಳ್ ದೊರೆಕೊಂಡುವೆನುತ್ತೆ ಕಾಯ್ದು ದಾ
ೞಿಡುವವೊಲಾ ಬನಕ್ಕೆ ನಡೆತಂದುದು ಪೆಂಡಿರ ತಂಡಮೇೞ್ಗೆಯಿಂ ೨೩

ಕಡೆಗಣ್ಗಳ್ ಕುಡಿಮಿಂಚನೀಯೆ ಸುಲಿಪಲ್ ಬೆಳ್ದಿಂಗಳಂ ಬೀಱೆ ಕೇ
ಸಡಿ ಕೆಂದಾವರೆವೂಗಳಂ ಕೆದಱೆ ಪುರ್ಬಿಂಗೋಲವಿಲ್ಗಂದಮಂ

ಕುಡೆ ತೋಳ್ ನೀಳ್ದೆಳಗೊಂಬಿನೊಳ್ ತೊಡರೆ ಗಲ್ಲಂ ನುಣ್ಪು ಕೈಮಿಕ್ಕ ಕ
ನ್ನಡಿಯಂ ಪೋಲ್ತಿರೆ ಬಂದರಲ್ಲಿ ಪಲಬರ್ ಚಿಲ್ವಪ್ಪಿನಂ ಚಿನ್ನೆಯರ್ ೭೪

ತಿಸರಂ ತೊಳಗುವ ಮುತ್ತಿನ
ಪಸರಂ ಮೊಲೆವೆಟ್ಟು ತಿವಳಿ ತೆರೆಯೆಂದೆನೆ ಸಂ
ತಸದ ಕಡಲಂತೆ ಮೆಲ್ಲನೆ
ಪೊಸವೆಂಡಿರ್ ಗಡಣಮೆಸೆವಿನಂ ತಡೆತಂದರ್ ೭೫

ಎಡೆಗಿಱಿವ ಮೊಲೆಯ ಪೊಱೆಯಿಂ
ಬಡನಡು ನಡೆ ನೋಡುವವರ ಬಗೆ ನಡುಗುವವೊಲ್
ನಡುಗೆ ನಲವಿಂದಮೊಡನೊಡ
ನಡಿಯಿಟ್ಟರ್ ನೆರೆದು ಬಿಂಕಗಾರ್ತಿಯರರೆಬರ್ ೭೬

ಇಸಲೊಡರಿಸುವಿಂಗೋಲನ
ಮಿಸುಗುವ ಪೊಸವಿಲ್ಲ ಜೇವೊಡೆಯ ದನಿಯವೊಲೆ
ಣ್ದೆಸೆಯೊಳ್ ನೇವುರದುಲಿ ಪಸ
ರಿಸೆ ಮೆಲ್ಲನೆ ಚೆಲ್ಲಗಾರ್ತಿಯರ್ ನಡೆತಂದರ್ ೭೭

ಅಂತು ಪರಿಪರಿಯ ಸಿಂಗರದಿನಂದಂಬಡೆದು ನಡೆವ ಮಡದಿಯರ ಮುಡಿಯೊಳ್ ತೊಡರ್ದು ಪೊಸವೂಗಳ ಕಂಪಿಂಗೆಳಸಿ ಮೇಲೆ ಬಳಸಿದ ಮಱಿದುಂಬಿಯ ಬಂಬಲ್ ಎತ್ತಿ ಪಿಡಿದ ಪೀಲಿದಟೆಯಾಗೆ ಬಂದು ಬನದ ಬಾಗಿಲಂ ಪುಗುವಲ್ಲಿ -

ತಳಿರಂ ಮೆಲ್ಲನೆ ನೂಂಕಿ ಮಾಮಿಡಿಗಳಂ ಸೆಂಡಾಡುತಂ ಕೂಡೆಪೂ
ಗಳ ದೂಳಿಂ ಪೊಱೆಯೇಱುತುಂ ಸೊನೆಗಳೊಳ್ ನೀರಾಟಮಂ ಮಾಡುತುಂ
ಬಟೆಯಂ ಕೈಮಿಗೆ ಬರ್ಪ ತುಂಬಿಯುಲಿಯಿಂದಂ ಡಂಗುರುಂ ಬೊಯ್ಯುತುಂ
ತಳರ್ದೇಂ ಬಂದುದೊ ಕಾವನಾನೆಯವೊಲಾ ತಣ್ಗಾಳಿ ತನ್ನಿಚ್ಚೆಯಿಂ ೭೮

ಆ ಗಾಳಿಯ ಮೆಲ್ನೂಂಕಿಂ
ದಾಗಳೆ ಬೆಮರೊಡನೆ ಬೆಳೆದ ಸೇದೆಯದೆತ್ತಂ
ಪೋಗೆ ನಲವಿಂದೆ ಪೊಕ್ಕಂ
ಬೇಗದೆ ಪಡಿಯಱಿರ ಜಡಿಪಮೆಡೆಗೊಳೆ ಬನಮಂ ೭೯

ಅಂತು ಪೊಕ್ಕು ಪಚ್ಚೆಯ ಪಡ್ಡಳಿಯ ಪಾದರಿಯ ಪಲಸಿನ ತೆಂಗಿನ ಕೌಂಗಿನ ದಾಳಿಂಬದದವನದ ಮರುಗದ ಮಲ್ಲಿಗೆಯ ಮಾವಿನ ಮಾದಲದ ಸುರಗಿಯ ಸುರಹೊನ್ನೆಯ

ಇರವಂತಿಯ ಕಂಪುಮಿಗುವ ಸಂಪಗೆಯ ಸಸಿಯ ಸಾಲ್ಗಳ ನಡುವೆ ನನೆಯಂಬಂ ನಡೆವಾಗಳ್ ಬಲಗೆಲದೊಳ್ ಕೈಗೊಟ್ಟು ಬರ್ಪ ನಗೆಗಾಱನಿಂತೆಂದಂ -

ಎಸೆವಲರ್ಗೊಂಚಲಂ ತಳೆದ ಮಲ್ಲಿಗೆ ಪೂವಿನ ಸಂತೆಕೊಂಬಿನಿಂ
ಮಿಸುಗುವ ಮಾಮರಂ ಪೆಸರ ಮಾಳಿಗೆ ಮಾಡಿದ ತೋರವೆಟ್ಟುಗಳ್
ಪೊಸೆಮನೆ ಸುತ್ತಲುಂ ಬಳಸಿ ಪರ್ವಿದ ಕೇದಗೆ ಪಚ್ಚವಾಗಿಲೆಂ
ಬೆಸಕಮನಾಳ್ದು ಪೂಗಣೆಯನಿರ್ಪ ಪೊೞಲ್ಗೆಣೆಯಾದುದೀ ಬನಂ ೮೦

ನಿನ್ನ ಬರವಱಿದು ನಲವಿಂ
ಮುನ್ನಮೆ ಗುಡಿಗಟ್ಟಿದಂತೆ ಪೊಸವೂಗುಡಿಯಿಂ
ದನ್ನೆರೆದು ನಿಮಿರ್ದಕುಡಿಯಿಂ
ಚಿನ್ನಂ ತಳೆದೆತ್ತಿದಂತೆ ಮಲ್ಲಿಗೆಯೆಸೆಗುಂ ೮೧

ಅಡರ್ದೆಲೆವಳ್ಳಿಗಳೆಲೆಯಂ
ಪಿಡಿದಿರ್ಪೆಳಗೌಂಗನಲ್ಲಿ ತರತರದಿಂ ನೇ
ರ್ಪಡೆ ಸಮದೆಲೆವಸರದವೊಲ್
ಕಡು ಚೆಲ್ವಂ ಪಡೆದು ತೋರ್ಪುವೀ ಬನದೆಡೆಯೊಳ್ ೮೨

ಪುದಿದ ತನಿವಣ್ಣ ಬಿರಿಕಿಂ
ದುದಿರ್ದೆತ್ತಂ ರಾಸಿಯಾದ ಬಿಟ್ಟುಗಳಿಂ ಪೆಂ
ಪೊದವಿದ ಪಲವುಂ ದಾಳಿಂ
ಬದ ಮರಗಳ್ ರನ್ನವಸರದಂತೆಸೆದಿರ್ಕುಂ ೮೩

ಮಿಸುಪಲರ್ಗಳ ಬೆಳ್ವೆಳಗಿಂ
ಮುಸುಕಿದ ತಾವರೆಗಳೆಲೆಯನಾಂತ ಕೊಳಂಗಳ್
ಪಸರಿಸಿದ ಕಂಚುಗಾಱರ
ಪಸರದವೋಲ್ ನಾಡೆ ತೋರ್ಪುವೀ ಕೆಲಬಲದೊಳ್ ೮೪

ಬಗೆಗೊಳ್ ಮೆಲ್ಲನೆ ನಡೆವಂ
ಚೆಗಳಂ ತಳೆದಿರ್ಪ ಬಳ್ಳಿಮಾವಿನ ಸಾಲ್ಗಳ್
ನೆಗೞ್ದ ಬೆಲೆವೆಣ್ಗಳಂದದೆ
ಮಿಗೆ ಸೋಲಿಪ ಸೂಳೆಗೇಱಿಯಂತಿವೆ ಬನದೊಳ್ ೮೫

ಇಟ್ಟಣಿಸಿದಲರ್ಗಳೆಸೆದಿರೆ
ಕಟ್ಟುದ್ದಮನಾಂತು ಮಿಸುಪ ಕೊಸಗಿನ ಚೆಲ್ವೇಂ

ಪುಟ್ಟಿಸಿರ್ದುದೊ ಪೊಸಸಿರಿಗೆಱ
ವೆಟ್ಟನೆ ಪೂಗಣೆಯನಿರ್ಪ ನೆಲೆಮಾಡದವೋಲ್ ೮೬

ನನೆಗಳ ಪೂಗಳ ಪೊಱೆಯಿಂ
ದೆನಸುಂ ತಲೆವಾಗುತಿರ್ಪ ಸೆಳೆಗೊಂಬಿಂ ನೆ
ಟ್ಟನೆ ಪರಿವಡೆದೀ ಸಂಪಿಗೆ
ನಿನಗೆಱಗದರೆಱಗಿಪಂತೆ ತೋರ್ಪುವು ಬನದೊಳ್ ೮೭

ನೆಗಟ್ದಿರವಂತಿಯ ಮನೆಗಳೊ
ಳಗಲಮನೊಳಕೊಂಡು ಪಲವು ಪಳುಕಿನ ಸಱಿಗಳ್
ಬಗೆಗೊಳೆ ನಿನಗಿಕ್ಕಿದ ಗ
ದ್ದುಗೆಗಳವೊಲ್ ಕೂಡೆ ತೋರ್ಪುವೀ ಕಟ್ಟೆದಿರೊಳ್ ೮೮

ಎಂದು ಮುನ್ನಮಿಾ ಬನಂ ಪಟ್ಟಣದಂತಿರ್ಪುದೆಂದು ನುಡಿದ ನುಡಿಯಂ ಪರಿವಿಡಿಯಿಂ ನನ್ನಿ ಮಾಡಿದೆಯಂದು ತೊನೆಯುತ್ತೆ ಕಿಱಿದೆಡೆಯಂ ಪೋಗೆವೋಗೆ –

ಕನರ್ಗೊನರಿರ್ಕೆ ನುಣ್ದಳಿರ ಬಾಟ್ವನೆ ಕೆಂದಳಿರಿರ್ಪ ಬೀಡು ಬ
ಲ್ನನೆಯ ಪೊದಱ್ ಮುಗುಳ್ನನೆಯ ಪೆರ್ಮನೆ ಮೊಗ್ಗೆಯ ತಾಣಮಚ್ಚವೂ
ವಿನ ನೆಲೆ ಸಣ್ಣ ಗಾಯ ಬಲುಗಾಯ ಪೊಟಿಲ್ ನಸುದೋರೆವಣ್ಣ ತಾ
ಯ್ವನೆ ಪೊಸವಣ್ಣ ಗೊತ್ತಿದೆನೆ ಕಣ್ಗೆಸೆದಿರ್ದುದದೊಂದು ಮಾಮರಂ ೮೯

ಮೊರೆಯದ ತುಂಬಿಯಂ ಕುರುಳ ಸಂದಣಿ ಸೋಲಿಸೆ ಜಕ್ಕವಕ್ಕಿಯಂ
ಪರಿವಡದಿರ್ದ ತೋರ ಮೊಲೆ ಬಗ್ಗಿಸೆ ನೈದಿಲನೆಯ್ದೆ ಕಣ್ಮಲರ್
ಕೊರಗಿಸೆ ನಾಡೆ ಕೆಂದಲಿರೋವದೆ ಕೆಂದಳಮಿಕ್ಕಿ ಮೆಟ್ಟೆ ಮಾ
ಮರದಡಿಯಲ್ಲಿ ನಿಂದ ಬನವೆಣ್ಣೆನಿಪಂದದಿನೊರ್ವಳೊಪ್ಪಿದಳ್ ೯೦

ಅವಳಂ ತೊಟ್ಟನೆ ಕಟ್ಟೆದರೊಳ್ಕಂಡು ನನೆಯಂಬಂ ತನ್ನ ಬಗೆಯೊಳಿಂತೆಂದಂ –

ಕರಮೆಸೆವ ರೂಪು ಕಣ್ಗ
ಚ್ಚರಿಯಂ ಪುಟ್ಟಿಸಿದುದೀಕೆಯಾವಳೋ ನೆಲದೊಳ್
ಪಿರಿದುಂ ಮಾನಸಿಯರ್ಗೀ
ಪರಿ ಚೆಲ್ವಿನಿತುಂಟೆ ಸಗ್ಗದಾಕೆಯೆ ದಿಟದಿಂ

ಎಂದು ಪತ್ತೆ ಸಾರ್ದು ನೀಮಾರ್ ಎಂದು ಮೆಲ್ಲನೆ ಬೆಸಗೊಳ್ವುದುಂ; ಆ ಅಚ್ಚರಿಸಿ ಬಿನದದಿಂ ಬನದ ಸೊಂಪಂ ನೋಡಲೆಂದೈತಂದೆಂ ಎನೆ ನಾಡೆಱೆಯನಿಂತೆಂದಂ –

ಮಿಗೆ ಮುನ್ನಂ ಕಂಡವೋಲಿರ್ದಪುದು ಮಿಸುಗುವೀ ಬಾಟಿಯೀ ಕಾಲ್ಗಳೀ ಸಂ
ಪಗೆಯಾ ನೇಱಿಲ್ಗಳೀಪಾದರಿ ಬಿಡೆಮೊರೆವೀ ತುಂಬಿಯಾ ಕೊಂಚೆಯಾ ಮ
ಲ್ಲಿಗೆಯಾ ತಣ್ಗಾಳಿಯಾ ಕೋಗಿಲೆಯ ಬಳಗಮಾ ಸೋಗೆಯಾ ಸೊಂಪಿನಿಮ್ಮಾ
ವುಗಳೀ ಚೆನ್ನ ಚೆನ್ನೈದಿಲೀ ಕೆಂದಳಿರ ತುಱುಗಲೀಯಂಚೆಯಾ ಕರ್ವುದೋಂಟಂ ೯೨

ಅಱಿತಂ ನಿಮಗುಂಟೆಂತಾ
ತೆಱನಂ ನೀಮೆನಗೆ ಪೇೞ್ವುದುಳ್ಳುದನೆನೆ ಬಾ
ಯ್ದೆಱೆ ಸುಲಿಪಲ್ಗಳ ಮಿಂಚಂ
ಕಱೆಯುತ್ತಿರೆ ತಿಳಿಯೆ ಪೇೞಲೆಂದಿಂತೆಂದಳ್ ೯೩

ಅದೇನೆಂದೊಡೆ ಪೊಂಗೇದಗೆಯ ಬಾೞ್ವೇಲಿಯೊಳಂ, ಪನ್ನೀರ್ಗಾಲ್ವೆಯೊಳಂ, ಕುಂಕುವದ ಮಡುಗಳೊಳಂ, ಬಕುಳದ ಬಾಗಿಲ್ವಾಡದೊಳಂ, ಮರುಗದಟ್ಟಳೆಯೊಳಂ, ಪೊಂಬಾಟೆಯ ಪೞವಿಗೆಗಳೊಳಂ, ಪಾದರಿಯ ನೆಲೆವಾಡಂಗಳೊಳಂ, ದವನದ ದಾವಣಂಗಳೊಳಂ, ಮಲ್ಲಿಗೆಯ ಮನೆಗಳೊಳಂ, ಕಪ್ಪುರದ ಸೊದೆಯೊಳಂ, ಸೊಂಪುವಡೆದ ಕಂಪಿನ ಪೊೞಲೆಂಬ ಬೀಡುಬಗೆಗೊಳಿಸುತಿರ್ಪುದು –

ಚದುರುಂ ಮಿಕ್ಕಿರ್ದ ತಕ್ಕುಂ ನೆಲಸಿದ ಸೊಬಗುಂ ಮೈಮೆಯುಂ ಚಾಗಮುಂ ಪೆ
ರ್ಚಿದ ಸೊಂಪುಂ ಪೆರ್ಮೆಯುಂ ನನ್ನಿಗೆ ನೆಲೆಯೆನಿಸಿರ್ದಾಯಮುಂ ಬೀರಮುಂ ಕುಂ
ದದ ಚೆಲ್ವುಂ ರೂಡಿಯುಂ ಕೈಮಿಗೆ ನೆಲನನಿತಂ ಗೆಲ್ದು ತನ್ನಿಚ್ಛೆಯಿಂದಿ
ನ್ನಿದನಾಳ್ವಂ ಕರ್ವುವಿಲ್ಲಂ ಪಡೆದೊಡವೆಗಳಂ ಸಾರ್ದವರ್ಗೀಯ ಬಲ್ಲಂ ೯೪

ಇನಿಯರನೆಂದುಂ ನೆರೆಯಿಪ
ಬಿಸದಮೆ ತನ್ನಿಚ್ಚೆಯಾಗೆ ರೂಡಿಸಿದಾ ಕಾ
ವನ ನಚ್ಚಿನ ಪೆಂಡಿತಿ ಚೆ
ಲ್ವಿನ ಪುತ್ತೞಿಯಿಚ್ಚೆಗಾರ್ತಿಯೆಂಬಳ್ ಪೆಸರಿಂ ೯೫

ಸೊಗಯಿಪ ಜಕ್ಕವಕ್ಕಿಗಳನೇಱಿಪ ಪೆರ್ಮೊಲೆಯಿಂದೆ ಮಾನ್ಗಳಂ
ನಗುವಲರ್ಗಣ್ಗಳಿಂದೆ ಸುೞಿಯಂ ಪೞಿದೊಪ್ಪುವ ಪೊರ್ಕುೞಿಂದೆ ಮೆ
ಲ್ಲನೆ ನಡೆವಂಚೆಯಂ ಜಡಿವ ಮೆಲ್ನಡೆಯಿಂದೆ ಸಮಂತು ನೋೞ್ಪರಿ
ಚ್ಚೆಗೆ ಪೊಸವೂಗೊಳಂ ಬೊಲಮದೊರ್ಪುವಳೊಪ್ಪದಿನಿಚ್ಚೆಗಾರ್ತಿ ತಾಂ ೯೬

ಅವಳ ಮೊಗದಂತೆ ಮೆಯ್ಸಿರಿ
ಸವನಿಸದೆನಗೆಂದು ಕಂದನೆರ್ದೆಯೊಳ್ ತಾಳ್ದಂ

ಹಿವಗದಿರನೆಂದೊಡಿನ್ನುಱ
ದವರೇನಂ ಪೊಗೞಲಾರ್ಪರಾಕೆಯಮೊಗಮಂ ೯೭

ಮತ್ತಮವಳಕಾಲ ನೇವುರದಿಂಚರಮೆಂಬ ಪೆಣ್ಣಂಚೆಯ ದನಿ ಕರ್ವುವಿಲ್ಲನೆಂಬಂಚೆಯಂ ಬೞವೞಯೊಳ್ ಬರಿಸೆಯುಂ, ನುಣ್ದೊಡೆಯೆಂಬ ಪೊಂಬಾೞಯ ಬಾೞ್ಗಿಂಬಮಲರ್ಗಣೆಯನೆಂಬ ಸೊರ್ಕಾನೆಯಂ ತೊಲಗಲೀಯದೆ ನಿಲಿಸೆಯುಂ, ಪರಿವಡೆದ ಪೊಱವಾಱಿಂಬ ತಿಳಿಗೊಳಂ ಕಮ್ಮಂಗೋಲನೆಂಬ ಜಕ್ಕವಕ್ಕಿಯನೋಲಾಡಿಸೆಯುಂ, ತೊಳಪ ತೋರಮೊಲೆಗಳೆಂಬ ಪೂಗೊಂಚಲ್ ಪೂಸರಲನೆಂಬ ತುಂಬಿಗಿಂಬಾಗೆಯಂ, ನುಣ್ಪುವಡೆದ ನಳಿತೋಳ್ಗಳೆಂಬ ಸೆಳೆಗೊಂಬುಗಳ್ ಕಾವನೆಂಬ ಗಂಡುಗೋಗಿಲೆಯುಂತೇಂಕಿಸೆಯುಂ, ಮಿಸುಪ ಸುಲಿಪಲ್ವೆಳಗೆಂಬ ಕಾರಮಿಂಚಿಗೋಲ್ವಿಲ್ಲನೆಂಬ ಸೋಗೆಯಂ ಸೋಲಿಸೆಯುಂ, ಮಿಳಿರ್ವ ಬಂಬಲ್ಗುರುಳೆಂಬ ತೊಡಂಕುವಲೆ ಬಸಂತನ ಕೆಳೆಯನೆಂಬೆರಲೆಯಂಸಿ ಲಿಕ್ಕಿಸೆಯುಂ ಇಂತಳವಿಗೞದ ಸೊಬಗಿನ ಸೊಂಪು ಪೆರ್ಕಳಮಾಗಿರ್ಪುದುಂ –

ಆವರಿರ್ವರ ಮೈಮೆಯುಮಂ
ತವರಿರ್ವರ ರೂಡಿವಡೆದಪೊಸಗಾಡಿಯುಮಂ
ತವರಿರ್ವರ ಬೇಟಮುಮಂ
ತವರಿರ್ವರೊಳಲ್ಲದಿಲ್ಲ ಪೆಱತೊರ್ವರೊಳಂ ೯೮

ಮತ್ತಮವರೊರ್ಮೆ ಪಲತೆಱದ ಮರಂಗಳಿಂದೆಡೆಗಿಱದಡವಿಗಳೊಳ್ ಕಾಡೊಡೆಯರಂತೆ ಬಿರಿಯಿಗಲೆಂಬ ಮಿಗಂಗಳ ಬೇಂಟೆಯನಾಡಿಯುಂ, ಮತ್ತಮವರೊರ್ಮೆ ಪೊಳೆವಕಟ್ಟಣಕದ ಕಟ್ಟಗೆಗಳಿಂದಿಟ್ಟಣಮಾದ ತಿಳಿಗೊಳಂಗಲೊಳಾನೆಯಂತೆ ನೀರಾಟಮ. ನಾಡಿಯುಂ, ಮತ್ತಮೋರೊರ್ಮೆ ಪಲತೆಱದ ನಳನಳಿಸಿ ಬೆಳೆದೆಳವಾೞಯಸುೞಯೆಲೆಯ ನುಡಿಯೊಳಮರ್ಚಿಯುಂ, ಮತ್ತಮೋರೊರ್ಮೆ ಕಟ್ತಿಲೆಗೆ ನೆಲೆವನೆಯೆನಿಪೆಳವಳ್ಳಿಯ ಬಳಸಿಂಗೊಳಗಾದಸುಗೆಯ ಜೊಂಪಂಗಳೊಳ್ ಕೋಗಿಲೆಯಂತೆ ಕೂಟಮನೊಡರ್ಚಿಯುಂ ಇಂತು ಪಲವುಂ ಪಗಲಂ ಕಳೆಯುತ್ತು ಮಿರ್ದೊರ್ಮೆ –

ಬೆಳೆದಳವಳ್ಳಿಯೊಳ್ ಪುದಿದು ತೋಱುವ ಮಾವಿನ ತೋರಗಂಬದಿಂ
ತಳಿರ್ಗಳನಿಂಬುವೆತ್ತ ಪೊಸಲೋವೆಗಳಿಂ ನಸುಬಾಗಿ ಕೊಂಬಿನೊಳ್
ಪೊಳೆವೆಳಗಾಯ ನುಣ್ಬೊಗರಿಯಿಂಸು ೞತರ್ಪಲರಿಂದೆ ಬಿಟ್ಡಿ ಪೂ
ಗಳಪುಡಿಯಿಂ ಕರಂ ಸೊಗಯಿಪೋಲಗಸಾಲೆಯೊಳಿರ್ದರೊಪ್ಪದಿಂ ೯೯

ನಡೆ ಕೆಲಕಂಚೆ ಬಿನ್ನವಿಸು ಬೇಗದೆ ಕೋಗಿಲೆ ಪಾಡಿನೋಜೆಯಂ
ಗಡಣಿಸು ತುಂಬಿ ಸೋಗೆ ದನಿಯೆತ್ತದಿರೊಯ್ಯನೆ ಬಂದು ಕುಳ್ಳಿರೀ
ಯೆಡೆಗೆ ಬಸಂತಯೆಂದು ಗಿಳಿಗಳ್ ಕಡುಪಿಂ ನಡೆತಂದು ಸುತ್ತಲುಂ
ಪಡಿಯಱರಾಗಿ ಚಪ್ಪರಿಪುವೋಲಗದೊಳ್ ಸಲೆ ಕರ್ವುವಿಲ್ಲನಾ ೧೦೦

ತೊಲಗದೆ ಪಕ್ಕದೊಳ್ ನಲಿವ ಕನ್ನಡವಕ್ಕಿಗಳೋಳಿ ಬಿಂಕದಿಂ
ಬಲಗೆಲದೊಳ್ ನೆಗೞ್ತೆವಡೆದಿರ್ಪರಸಂಚೆಯ ಪಿಂಡು ಬೇಟವ
ಗ್ಗಲಿಸಿದ ಜಕ್ಕವಕ್ಕಿಗಳವಂಗಡಮಿಂಬಱಿದಿರ್ಪಗಂಡುಗೋ
ಗಿಲೆಗಳ ತಂಡಮೊಪ್ಪೆ ಬಗೆಗೋಲಗಮೊಪ್ಪಿದುದಂದು ಕಾವನಾ ೧೦೧

ಮಡದಿಯರ ಸುಯ್ಯಕಂಪುಂ
ಕಡುಮೆಱಿವಿನಮಿಟ್ಟ ಕತ್ತುರಿಯ ಪೊಸಗಂಪುಂ
ಮುಡಿಯಲರ್ಗಳ ನಱುಗಂಪುಂ
ಗಡಣಿಸಿ ಕಡೆಗೋಡಿವರಿದುವೊಡ್ಡೋಲಗದೊಳ್ ೧೦೨

ಕೆಂದಳದೊಂದು ಕೆಂಪು ಕಿಸುಸಂಜೆಯನಂಜಿಸೆ ಕರ್ಪುವೆತ್ತ ಕೇ
ಸಂದಳವಾದ ಕಟ್ಟಿಲೆಯನೇೞಿಸೆ ನುಣ್ಮೊಗವಚ್ಚದಿಂಗಳಂ
ಸಂದಿಸೆ ನೀಳ್ದ ಕೆಂಬೆಳಗು ನಾಲ್ದೆಸೆಗಂ ಪೊಸತಪ್ಪ ಜೊನ್ನಮಂ
ಮುಂದಿಡೆ ಬಂದಳಾಗಳಿರುಂದದಿನೋರ್ವಳದೊಂದು ಗಾಡಿಯಿಂ ೧೦೩

ಅಂತು ನೊಸಲೆಂಬ ಪೆಱಿಗೆ ಕೈದಾವರೆಗಳ್ ಮುಗಿಯೆ ಬಱಿದೊಂದು ತೆಂಬೆಲರ್ ಬರೆ, ಅರಸಾ, ಜೊನ್ನಮನುಣ್ಬ ಪಕ್ಕಿಬಾಗಿಲೊಳ್ ಬಂದಿರ್ಪುದೆಂದು ಬಗೆಯಱಿದು ಬಿನ್ನಪಂಗೆಯ್ದು ಒಡಗೊಂಡು ಬರ್ಪಾಗಳ್ –

ಮಿಱುಪ ಕುರುಳೋಳಿ ಮೂಡುವ
ಕಿಱುಮೊಲೆ ತಳತಳಿಸಿ ಪೊಳೆವ ಕೇಸಡಿ ನೀಡುಂ
ತುಱುಗಿದೆವೆ ಚೊಲ್ಲೆಯಂ ಮಿಗೆ
ಮೆಱಿವಿನಮೆಳವೆಂಡಿರಿರ್ದರೆರಡುಂ ಕೆಲದೊಳ್ ೧೦೪

ನೇವುರದಿಂಚರಂ ನೆಗೞಿ ಕಣ್ಬೆಳಗೋಲಗಸಾಲೆಯೆಲ್ಲಮಂ
ತೀವೆ ಬೆಡಂಗುವೆತ್ತ ನೊಸಲೊಳ್ ಕುರುಳೋಳಿಗಳುಯ್ಯಲಾಡೆ ಕೆಂ
ದಾವರೆವೂಗಳಂ ತರದೆ ಕೇಸಡಿ ಸಾಲಿಡೆ ಬಿಂಕದಿಂ ನೆಗ
ೞ್ದಾವಗಮೋಲಗಿಪ್ಪ ಸಱಿಮಿಂಡಿಯರೊಪ್ಪಿದರೆತ್ತ ನೋೞ್ಪೊಡಂ ೧೦೫

ಸಸಿಯಂ ಮೆಯ್ವೆಳಗಿಂದೆ ಪೊನ್ನೊಡೆಯನಂ ಪೆಂಪಿಂದೆ ಮಾದೇವನಂ
ಪೆಸರ್ವೆತ್ತಿಂಚರದಿಂದೆ ಸಂದ ಬಿದಿಯಂ ಜಾಣಿಂದೆ ಮೆಯ್ಗಣ್ಣನಂ
ಪೊಸತಪ್ಪಗ್ಗದ ಗಾಡಿಯಿಂದೆ ಪಿರಿದುಂ ಬೆಳ್ಮಾಡಿ ಬೇೞ್ಪಂತುಟು
ಬ್ಬಸಮಂ ಮಾಡುವ ಬರ್ದೆಯರ್ ಪಲಬರುಂ ಕಣ್ಗೆಂ ಬೆಡಂಗಾದರೋ ೧೦೬

ಅಂತು ಮೆಱೆವೋಲಗದ ನಡುವೆ –

ಕಿವಿಗಿಂಪಂ ಕಱೆವಂತೆ ನುಣ್ಚರದೆ ಪಾಡುತ್ತಿರ್ಪ ಪೆಣ್ದುಂಬಿಗೊಪ್ಪುವ ಬಂಡಂ
ಬಿಡದೀಯುತುಂ ಗಿಳಿಗಳೋದಂ ಕೇಳ್ದು ಮೆಲ್ಪೊಂದಿ ತೋ
ಱುವ ಪಣ್ಣಂ ತಿಱಿದಿಚ್ಚೆಯಿಂದೆ ಕುಡುತುಂ ಚೆಲ್ವಿಂದೆ ಸಾರ್ತಂದು ಬೇ
ಡುವ ಮುದ್ದಂಚೆಗೆ ಕೈಯ ತಾವರೆಯ ಕಾವಂ ಚೆಲ್ಲದಿಂ ನೀಡುತುಂ ೧೦೭

ತೊಡೆಯೊಳ್ ಕಾದಲೆಯಿರೆ ಬಲ
ಗಡೆಯಲ್ಲಿ ಬಸಂತನೊಲವಿನಿಂ ಕುಳ್ಳಿರೆ ತ
ನ್ನೆಡದೆಸೆಯೊಳ್ ಸೊಬಗಿಯರಿರೆ
ಕಡುಚೆಲ್ವಂ ಪಡೆದನಾವಗಂ ನನೆಗಣೆಯಂ ೧೦೮

ಪರಿಪರಿಯ ರನ್ನದೊಡವಿನ
ಬೆರಕೆಯ ಬೆಳಗಡರೆ ಮೆಯ್ಯನಗ್ಗದ ಪೆಂಡಿರ್
ನೆರೆದಲರ ಚವರಮಂ ಬಿ
ತ್ತರದಿಂ ಬೀಸುತ್ತುಮಿರ್ದರೆರಡುಂ ಕೆಲದೊಳ್ ೧೦೯

ಸುಗಿವೆವೆ ಮಲೆವವರಂ ಕೋ
ಡಗಗಟ್ಟಿಂ ಕಟ್ಟಿತರ್ಪೆವೇಂ ಬೆಸಸೆಂದೊ
ಯ್ಯಗೆ ಕಿವಿಮೆಚ್ಚುವ ತೆಱದಿಂ
ಸೊಗಯಿಸಿದುವು ಕಣೆಯ ಗಱಿಪವಲರ್ವಿಲ್ಲವನಾ ೧೧೦

ಮುತ್ತಿನ ಸರಕ್ಕೆ ನುಣ್ಪುಂ
ಬಿತ್ತರಿಸಿದ ಬೆಳ್ಪುಮಲ್ಲದಿಂತೀ ಪೊಸಗಂ
ಪೆತ್ತಣದೆನೆ ನಗುವಂತೆರ್ದೆ
ವತ್ತಿದ ಮಲ್ಲಿಗೆಯ ತಿಸರವೇಂ ಸೊಗಯಿಸಿತೋ ೧೧೧

ತನಗೆಱಕದೆಱಗದವರಂ
ಮುನಿಸಿಂದಿಡಲೆಂದು ಸಮೆದ ಪಾಱುಂಬಳೆಯೆಂ
ದೆನೆ ದಾಳಿಂಬದ ಕೆಂಬಿ
ಟ್ಟಿನ ರನ್ನದ ತೋಳ ಬಂದಿಯೇಂ ತೊಳಗಿದುದೋ ೧೧೨

ಬಿರಯಿಗಳನೆಲ್ಲರಂ ಮುಳಿ
ದುರವಣೆಯಿಂ ಮೆಟ್ಟುವೆಡೆಯೊಳುಚ್ಚಳಿಸುವ ನೆ
ತ್ತರೊಳೊಂದಿದಂತೆ ಬಂದುಗೆ
ಯರಲ ತೊಡರ್ ತೊಡರ್ದು ಕಾಲೊಳೇನೊಪ್ಪಿದುದೋ ೧೧೩

ಅಂತು ನೋಟ್ಪಿರ ಕಣ್ಗೆ ನೆಲೆವೀಡಾದ ನನೆವಿಲ್ಲ ಬಲ್ಲಹನ ಮೇಲಾದ ಸೊಂಪಿಂಗೆ ಬೆಕ್ಕಸಂಬಡುತ್ತುಂ ಬಂದಿಂಗದಿರ್ಗಳಂ ಕಾಮ್ಮೆಗೊಟ್ಟು ಜೊನ್ನವಕ್ಕಿ ಬಿನ್ನವಿಸಿತ್ತದೆಂತೆನೆ –

ನಿನಗೆಂದುಂ ತಲೆವಾಗದ
ನಿನಗಳ್ಕದ ನಿನ್ನ ವೇಳೆಗಾಯದ ಪಿರಿದುಂ
ನಿನಗೆ ಬೆಸಕೆಯ್ದು ಬಾಟಿದ
ನಿನಗೋಡದ ಪಗೆವರೆಂಬರಿಲ್ಲಿಂದುವರಂ ೧೧೪

ಈಗಳ್ ಸಿವನೆಂಬ ದುಟ್ಟಗೊರವಂ ಮಂಜುವೆಟ್ಟಮಂ ಗೊಟ್ಟಂ ಮಾಡಿ ಕಿತ್ತಡಿಗಳಂ ಮರುಳ್ವಡೆಗಳಂ ಕೂಡಿಕೊಂಡು ನಿಮ್ಮಡಿಗಳುಮಂ ಮಱಿದು ಲೆಕ್ಕಿಸದೆ ಮೇಲೆ ಬಿಟ್ಟಿ ಪಾವುಂ ನೇವಾಳಮಾಗೆ ಮೆಯ್ಯಱಿಯದಿರ್ಪನಂತುಮಲ್ಲದೆಯುಂ –

ತಳಿರೆಂದೊಡಸುಗೆಯೊಂದೊಡೆ
ಗಿಳಿಯೆಂದೊಡೆ ಕರೆವ ಕೋಗಿಲೆಗಳೆಂದೊಡೆ ಬಂ
ದೆಳಮಾವೆಂದೊಡೆ ನೆಱಿದಿಂ
ಗಳ ತಣ್ಬೆಳಗೆಂದೊಡುದ್ದಮುರಿವಂ ಗೊರವಂ ೧೧೫

ಪುದಿದುರಿಗಣ್ಣ ನಾಣೆಯನದೇವೊಗಟ್ವಿಂ ಮುಗುಳೆಂದು ಮುಟ್ಟ ಬಾ
ರದು ಬನಮೆಂದು ಬಾಯ್ದೆಱಿಯಬಾರದು ಸಂಪಗೆಯೆಂದು ಸೂಡ ಬಾ
ರದು ಕೊಳನೆಂದು ಕೈದುಡುಕಬಾರದು ತಾವರೆಯೆಂದು ತೋಱಿ ಬಾ
ರದು ಪೊಸಸುಗ್ಗಿಯೆಂದುಸಿರಬಾರದು ತನ್ನಯ ಮಂಜುವೆಟ್ಟಿನೊಳ್ ೧೧೬

ಮತ್ತಮಾತಂ ಸರಿಯೊಳಾದೊಡಮಂಚೆಯೆಂಬುದಂ, ಕೆಱಿಯೊಳಾದೊಡಂ ಬಾಟಿಯೆಂಬುದಂ, ಸಿರಿಕಂಡದೊಳಾದೊಡಮಾಱಿಡಿಯೆಂಬುದಂ, ಕೊಡಗೂಸಿನುಡಿಗೆಯೊಳಾದೊಡಂ ಸೋಗಯೆಂಬುದಂ, ಬೆದಂಡೆಯೊಳಾದೊಡಂ ಪಾಡೆಂಬುದಂ, ಕೇಱಿಯೊಳಾದೊಡಂ ನೆರೆಯೆಂಬುದಂ ಚಪ್ಪರಣೆಯೊಳಾದೊಡಂ ಪಣ್ಣೆಂಬುದಂ ಸೈರಿಸಂ ; ಅಲ್ಲದೆಯುಂ ಈ ಪೋದಿರುಳ್ ಕಲಿಯ ಕಾಳೆಗಮಂ ಕಾದಿ -

ತಾರಗೆಗಳಟಿಯೆ ನೆಯ್ದಿಲ್
ನೀರಂ ಪುಗೆ ಕೂಡೆ ಮರ್ಬು ಮೆಯ್ವೆಚಿ ಕಡಲ್
ನೀರೋಡುವಿನಂ ಪೆಱಿಯಂ
ಬೀರದಿನಾ ಗೊರವನೆಯ್ದೆ ಬಾಟ್ದಿಲೆವಿಡಿದಂ ೧೧೭

ಅದರ್ಕೆ ತಕ್ಕುದಂ ನಿಮ್ಮಡಿಗಳೆ ಬಲ್ಲಿರೆಂದು ಬಗೆಯಟಿಲಾಱಿ ಜೊನ್ನವಕ್ಕಿ ಬಿನ್ನಪಂಗೆಯ್ಯಲೊಡನೆ -

ನೆನೆದುರಿವ ತೆಲೆಯ ಕಿಚ್ಚಿನೊ
ಳೊಗುಮಿಗೆ ನೆಯ್ವೊಯ್ವ ತೆಱದೆ ಪೊಣ್ಮಿದ ಮುನಿಸಿಂ
ಭುಗಿಲನುರಿದೆಟ್ಟಿನಾ ದಿ
ಟ್ಟಿಗಳೊರ್ಮೆಯೆ ತೋರಕಿಡಿಗಳಂ ಕೆದಱುವಿನಂ ೧೧೮

ಕಡಲೊಳ್ ನೇಸಱನಟ್ಟಿಲುಂ ಪೊಡವಿಯಂ ನುರ್ಗೊತ್ತಲುಂ ಕೊಂಕಿ ಫೀ
ಳಿಡೆ ತಳ್ಕಿಂ ದೆಸೆಯಾನೆಯಂ ಮುಱಿಯಲುಂ ಪೊಂಬೆಟ್ಟಮಂ ನೂಂಕಲುಂ
ಪೆಡೆಯಂ ತೊಟ್ಟನೆ ಮೆಟ್ಟಿ ಬಾಸುಗಿಯನಾದಂ ಸೀೞಲುಂ ಪೊತ್ತು ಬಾ
ನೆಡೆಯಂ ಬೇಗದಿನೆತ್ತಲುಂ ಬಗೆದನಾಗಳ್‌ದಪ್ಪದಿಂ ದಪ್ಪಗಂ ೧೧೯

ಅಂತು ದೆಸೆ ದೆಸೆಗೆ ಮಸಗಿ -

ಜನವಂ ಪತ್ತುವೆನೊಂಬತುಂ ಗರಮನೆಣ್ಬುಂ ಗೊಂಟಿನೊಳ್ ಕಟ್ಟಿತೂ
ಗುವೆನೇೞುಂ ಕಡಲಂ ಕಡಂಗಿ ಕುಡಿವೆಂ ತಳ್ತಾಱಲಂ ಪೊಯ್ದು ತೂ
ಱುವೆನೈದುಂ ಮೊಗಮುಳ್ಳನಂ ಕೆಡಪುವೆಂ ನಾಲ್ಕುಂ ದೞಿಂನೂಂಕೆ ನು
ಗ್ಗುವೆನಾಂ ಮೂಱಡಿಯಿಟ್ಟ ನಚ್ಚಿಯೆರಡಂತೊಂದಾಗಿ ನೋೞ್ಪಿನ್ನೆಗಂ ೧೨೦

ಎನಗಂ ಮಾರಿಗಮಿದಿರಾಂ
ಪನದಾವಂ ನಡೆದು ಪೋಗಿ ಬೇಗದೆ ಮುಕ್ಕ
ಣ್ಣನನಿಕ್ಕಿ ಮೆಟ್ಟಿ ಬಿಡೆ ತೊ
ಟ್ಟನೆ ಜಡೆಯಂ ಕಿೞ್ತುಬೞಿಯ ಪೆಱಿಯಂ ತರ್ಪೆಂ ೧೨೧

ಎಂದಿಂತು ನಡೆಯಲೊಡರಿಪುದಂ ಕಂಡು ಕೆಲದೊಳಿರ್ದ ಬಸಂತನಿಂತೆಂದಂ -

ನೆಲದಱಿಕೆಯ ಬಿದಿಯಂ ಪೊಡೆ
ಯಲರನನಿಂದಿರನನದಟರಂ ತವಸಿಗಳಂ
ನೆಲೆನಟ್ಟು ನೋಯಿಸಿದುದಿ
ನ್ನಲರಂಬಿನ ಮೊನೆಗೆ ನಿಲ್ವನೇ ಬಡಗೊರವಂ ೧೨೨

ಜವನಂ ಗೋಣ್ಮುಱಿಗೊಂಡು ಬಾಂಬೊೞಲನುರ್ಕಿಂ ಮೂಱುಮಂ ಸುಟ್ಟು ಜ
ನ್ನವನುಬ್ಬಣ್ಣರನಾರ್ದು ಕೊಂದು ಮುಳಿಸಿಂ ಪೋರ್ದಾನೆ ಮೆಯ್ಯಾತನಾ
ತೊವಲಂ ಮೆಲ್ಪೊದೆ ಮಾಡಿ ಮೂಜಗಕೆ ಕೇಡಂ ಮಾಡುವಾ ನೆತ್ತಿಗ
ಣ್ಣವನೊಳ್ ಕಾದುವ ಬಲ್ಪುಮೊಗ್ಗರನಿಂದಾರಯ್ದು ಮೇಲೆತ್ತುವೆಂ ೧೨೩

ಪಿರಿದಪ್ಪಾಳ್ತನದಿಂದೆ ಕೂರ್ಪವರ ಮಾತಂ ಮೀಱಿದಾಳ್ಗೆಯ್ತದೊಳ್
ನೆರೆದಿಂತೀಗಳೆ ಪೋಗಿ ತಳ್ತಿಱಿವೆನೆಂಬಾ ಮಾತದಂತಿರ್ಕೆ ಚಿ
ಚ್ಚರದಿಂ ನಮ್ಮರಸಾಳನಟ್ಟಿ ಮಗುೞ್ದಾತಂ ಬಂದು ಪೇೞ್ವಿಂತುಟಂ
ತಿರದಿಂದಂ ತಿಳಿದೆತ್ತಿ ಕಾದುವುದು ಲೇಸಲ್ಲರ್ಗಿದೇ ಮಂತಣಂ ೧೨೪

ಎಂದು ಬಿನ್ನಪಂಗೆಯ್ದ ಬಸಂತನ ಮಂತಣದ ಮಾತಂ ಸೊರ್ಕಾನೆ ಮಂತಣೆಯ ಮಾಮಂತನ ಮಾತಂ ಮನ್ನಿಸುವಂತೆ ಮನ್ನಿಸಿ ತೆಂಗಾಳಿಯೆಂಬ ದೂದನಂ ಕರೆದು ಗೊರವನಲ್ಲಿಗೆ ಪೋಗಿ ನಮ್ಮ ಪೆಱೆಯಂ ತಡೆಯದೆ ಬಿಡಿಸಿಕೊಂಡು ಬಾಯೆಂದೊಡಾತಂ ಬೇಗಂ ಮಂಜುವೆಟ್ಟವನೆಯ್ದಿ ತಟ್ಟಿಲ ಬನದ ಚೆಲ್ವಂ ನೋಡಿ ಮೆಚ್ಚುತ್ತುಂ ಬಂದು ತನ್ನ ಬರವಂ ಪಡಿಯಱರ್ಗಱಿಪಿ ತೆಱಪಱಿದೋಲಗದೆಡೆಯಂ ಪುಗಲೊಡನೆ -

ಉರಿಗಣ್ಣನೊಗೆದ ಬೀರಂ
ಬೆರಸೊದವಿದ ನಂಜು ರೂಪುವೆತ್ತವೊಲೇನ
ಚ್ಚರಿಯಂ ಪುಟ್ಟಿಸಿದರೊ ಬಂ
ದೆರಡುಂ ಕೆಲದಲ್ಲಿ ನಿಂದ ಬೀರಗಣೇಸರ್ ೧೨೫

ಬಗೆ ಪೊಱಸೂಸದೆ ಕೈಯಂ
ಮುಗಿದೊಲವಿಂ ನೋಡಿಪೆರ್ಚುತುಂ ತಿರಿಸುಳಿಯಂ
ಪೊಗೞುತ್ತಿರ್ತರದಿಂದೋ
ಲಗದೊಳ್ ಕುಳ್ಳಿರ್ದ ಜತಿಗಳೇನೊಪ್ಪಿದರೋ ೧೨೬

ಬಳಸಿದ ತಾರಗೆಗಳ ಮಾ
ರ್ಪೊಳೆಪೊಂದಿದ ಪೊನ್ನ ಬೆಟ್ಟು ಕೈಯಂ ಕಾಲಂ
ತಳೆದಿರ್ದುದೆಂಬಿನಂ ಕ
ಣ್ಗೊಳಿಸಿದನಂತವರ ಪಕ್ಕದೊಳ್ ಪಲಗಣ್ಣಂ ೧೨೭

ಸೊಗಯಿಪ ಪೊನ್ನ ನೇವುರದ ಮೆಲ್ಲುಲಿ ಮಾಣದೆ ಮೂಱು ಕಣ್ಣನಂ
ಪೊಗೞ್ವವೊಲುಣ್ಮೆ ಪೊಣ್ಮೆ ಪಿರಿದುಂ ಸುೞಿವಾ ನುಡಿವೆಣ್ಣನಾಂತ ನಾ
ಲ್ಮೊಗಮಿರದಚ್ಚದಾವರೆಯ ಚೆಂದಮನಂದೊಳಕೆಯ್ಯೆ ಬಂದು ನೆ
ಟ್ಟಗೆ ಬಲವಕ್ಕದೊಳ್ ನೆಲಸಿ ಕಣ್ಗೆಸೆದಂ ಬಿದಿ ನಿಂದು ನೋೞ್ಪರಾ ೧೨೮

ದರೆಯಂ ಪೊತ್ತಾನೆಯ ಕೈ
ಗೊರೆಯನೆ ಕಡುವೆಟ್ಟಿತಾದ ನಾಲ್ಕುಂ ತೋಳುಂ
ಕರಮೆಸೆದಿರೆ ಕುಳ್ಳಿರ್ದಂ
ಸಿರಿಯರಸಂ ಕಾರ ಮುಗಿಲ ರೂವೆಂಬಿನೆಗಂ ೧೨೯

ಮಿಗೆ ಮಾತಾಡದಿರೇಱದಿರ್ ಮಿಡುಕದಿರ್ ಮೇಲ್ವೀಱದಿರ್ ಸೋರ್ಕದಿರ್
ನಗದಿರ್ ಬಾಯ್ಕಡಿಗೊಳ್ಳದಿರ್ ಕಱಿಚದಿರ್ ಮೆಯ್ಯೊಂಕದಿರ್ ಕೈಗಳಂ
ಮುಗಿದಿರ್ ನೂಂಕದಿರೆತ್ತದಿರ್ ಗಱಪದಿರ್ ನೀನೆಂದು ಮುಕ್ಕಣ್ಣನೋ
ಲಗದೊಳ್ ತನ್ನೊಡನಾಡಿಗೂಡಿ ಜಡಿದಂ ಮಾಕಾಳನೋ ರೋರ್ವರಂ ೧೩೦

ಅಂತು ಮೈಮೆವೆತ್ತೋಲಗದ ನಡುವೆ ಯಾರುಮನೋಸರಿಸದೆ ಬಿಗಿದ ಪಾಸಮಿದೆಂಬಂತೆ ನೀಳ್ದ ಕೆಂಜೆಡೆಗಳೊಳಂ, ಮಿಸುಪ ನೊಸಲ ಚೆಲ್ವು ಕಣ್ದೆಱೆದಂತೆ ತೋರ್ಪ ನೊಸಲ ಕಣ್ಣೊಳಂ, ಪತ್ತೆ ಸಾರ್ದ ಮರುಳ ಮೊತ್ತಮಂ ಬುಸ್ಸೆಂದು ಬೆದಱಿಸುವ ಪಾವಿನ ತೊಡವುಗಳೊಳಂ, ಜಸಮೆ ತನಗೆ ಮೆಯ್ಸಿರಿಯೆಂಬುದನಱಿಪುವಂತೆ ಪೂಸಿದ ಬೂದಿಯೊಳಂ, ನುಣ್ಪುವಟ್ಟು ತೋಱಿ ಬಿಗಿದುಟ್ಟ ಪುಲಿದೊವಲೊಳಂ, ತಕ್ಕಿನಿಂ ಮಿಕ್ಕು ಪೋರ್ದಾನೆರಕ್ಕಸನ ಸಮ್ಮದ ಮೇಲ್ವೊದಿಕೆಯೊಳಂ ಚೆಲ್ವನಾಂತು -

ಹರಿಸದೆ ಸಗ್ಗದ ಜತಿಗಳ್
ನೆರೆದಂತೆರಡುಂ ಕೆಲಂಗಳೊಳ್ ತರದಿಂ ಕು
ಳ್ಳಿರೆ ಕುಳ್ಳಿರ್ದಂ ನಡೆನೋ
ಟ್ಪಿರ ಕಣ್ಗಳ ಹಬ್ಬಮೆಂಬಿನಂ ಕಱಿಗೊರಲಂ ೧೩೧

ಅಂತೆಸೆದಿರೆಯಾ ನಂಜುಗೊರಲನ ಗಾಡಿಯಂ ನೋಡಿ ಬಗೆಯೊಳಚ್ಚರಿವಡುತುಂ ಬಂದು ತುಱಿಲ್ಗೆಯ್ದು ಕೈಗಳಂ ಮುಗಿದು ನೆರೆದೋಲಗಮನಿತುಂ ತನ್ನಂ ನಡೆ ನೋಡೆ ಬಿನ್ನಪಮೆಂದಾ ದೂದನಿಂತೆಂದಂ: ಎಲ್ಲೆಡೆಗಳುಮಂ ತನ್ನಟ್ಟಿದೋಲೆಗ ಮಿಟ್ಟುಂಡಿಗೆಗೆಂ ಬಸಂಮಾಡಿದ ನನೆವಿಲ್ಲ ಬಲ್ಲಹಂ ನಿಮ್ಮಡಿಗಳ ಪೆಸರಂ ಪಲಂಬರಿಂ ಕೇಳ್ದು ಕೆಳೆತನಮಂ ಬಳೆಯಿಸುವಿಚ್ಛೆಯಿಂದೆನ್ನಂ ಕಳಿಪಿದನಾತನ ಬಲ್ಪಂ ಪೊಗೞ್ವೊಡೆನ್ನ ಪವಣಲ್ತು ಆ ದೊಡಮಱಿವನಿತಂ ಪೇೞ್ವೆನದೆಂತೆನೆ -

ಅವನ ನುಡಿಗವನ ಮಂತಣ
ಕವನೆಸಕಕ್ಕವನ ತಕ್ಕಿನೇೞ್ಗೆ ಮೇಲಾ
ದವರ ನುಡಿಯವರ ಮಂತಣ
ಮವರೆಸಕಮುಮವರ ತಕ್ಕು ಕೀೞಾಗಿರ್ಕುಂ ೧೩೨

ತೊಟ್ಟನಿದಂ ನಿಟ್ಟಿಸಿದಂ
ಬಿಟ್ಟನಿದೆಂಬೊಂದು ಬಿಲ್ಲ ಬಲ್ಮೆಯನಾರ್ಗಂ
ದಿಟ್ಟಿಸುವುದರಿದು ಪಗೆವರ್
ತೊಟ್ಟನೆ ಕೆಡೆದುದನೆ ಕಾಣಲುಂಟವನಿದಿರೊಳ್ ೧೩೩

ಕಡುಪಿಂದಾತನೊಳಾಂತರೋಡಿ ಬನಮಂ ಪೊಕ್ಕುಂ ಪೊದಪಾರ್ದು ಕಾ
ಲ್ವಿಡಿದುಂ ಪಚ್ಚೆಲೆವಾರ್ದು ಮೆಯ್ಯಗ್ಗರೆದು ಕೊಂಬಂ ಪೊರ್ದಿಯುಂ ನಲ್ಮೆಯಂ

ನುಡಿದುಂ ಮೆಯ್ಸಿರಿಗೆಟ್ಟುಮಿಂತು ನೆಲದೊಳ್ ನಾಣ್ಗುಂದಿ ನಿಂದಿರ್ಪರು
ಗ್ಗಡದಿಂ ಬಂದಿದಿರೊಡ್ಡಿ ಬಾೞ್ವವರನೆಂದುಂ ಕಂಡುದಿಲ್ಲಿನ್ನೆಗಂ ೧೩೪

ಮಾವುಗಳವು ಮಲೆವರನೆ
ಮ್ಮಾವುಗಳವೊಲುಱದೆ ಮುಱಿವುವೆಂದೊಡೆ ಕೇಳಾ
ಕಾವನ ಬರವಱಿದ ಬೞಿ
ಕ್ಕಾವನ ಸೊಕ್ಕುೞಿಯದಿನಿಸುಮೇನಿರ್ದಪುದೇ ೧೩೫

ಸಸಿ ಕೆಳೆಯಂ ಸರಲ್ ನಿಡಿಯ ಬಲ್ಲನೆ ಕರ್ಬಿನ ಕೋಲೆ ಬಿಲ್ ತಳಿ
ರ್ತೆಸೆವೆಳಿಮಾವು ತುಂಬಿ ಪೊಸದಾವರೆ ಮಲ್ಲಿಗೆಯೆಂಬಿವಾಂತರಂ
ದೆಸೆವಲಿಗೆಯ್ವ ಪಾಳಿ ಮೊನೆಯೊಳ್ ನೆಗೞ್ದಿರ್ದ ಬಸಂತನೆಂ ದೊಡೇಂ
ಪೆಸರ್ವಡೆದಾತನೊಳ್ ಪೊಣರ್ದು ಪೋಪರೆಯೆಂ ಟೆರ್ದೆಯುಳ್ಳರಾದೊಡಂ ೧೩೬

ಮಿಸುಪಲರಂಬುಗಳು ರ್ಕಿಂ
ಬೆಸಕೆಯ್ಯದೆ ಮಲೆವ ಬೀರರಂ ಪರಿದೆಂಟುಂ
ದೆಸೆಗಳೊಳಂ ಕಾಣೆವೆನಿ
ಪ್ಪಸರದೆ ಬಲ್ಮೊಱಿವುವೀಗಳಾಱಡಿ ನೆವದಿಂ ೧೩೭

ನಿನ್ನಯ ಚಾಗಮುಂ ಸಿರಿಯುಮಾಳ್ತನಮುಂ ದೊರೆವೆತ್ತ ಮೈಮೆಯುಂ
ಮನ್ನಣೆಯುಂ ಪೊದೞ್ದ ಜಸಮುಂ ಬಗೆಯುಂ ಚಲಮುಂ ನೆಗೞ್ತೆಯುಂ
ನನ್ನಿಯಮಾರ್ಗಮಚ್ಚರಿಯನಿತ್ತಪುವೆಮ್ಮೊಡೆಯಂಗಮೀ ತೆಱಂ
ಪೊನ್ನದು ಕಮ್ಮಿತ್ತಾದ ತೆಱನಲ್ಲವೆ ನಲ್ವಗೆಗೊಂಡೊಡಿರ್ವರುಂ ೧೩೮

ಪೊಡವಿಯೊಳಿಂತಾತನವೊಲ್
ಕಡುಬಲ್ಲಿದರಿಲ್ಲ ನಿಮ್ಮೊಳಾತಂ ಕೆಳೆಗೊಂ
ಡೊಡೆ ತೀರದುದಿನಿತಿಲ್ಲೀ
ಗಡೆ ಬಿಡುವುದು ಪೆಱಿಯ ಸೆಱಿಯನಿದು ಲೇಸಲ್ತೇ ೧೩೯

ಎನಲೊಡನೆ ಬಗೆಯೊಲ್ಪುಟ್ಟಿದ ಮುಳಿಸಂ ಪೊಱಪೊಣ್ಮಲೀಯದೆ ಮುಗುಳ್ನಗೆ ನೆಗೆವಿನಂ ಮಾದೇವನಿಂತೆಂದಂ –

ಬಱಿವಾತನನಿನಿಸುಪೊೞ್ತುಂ
ಮೆಱಿವಿನೆಗಂ ಗೞಪಲೇಕೆ ನಿನ್ನಯ ಬಗೆಯೊಳ್
ತಱಿಸಂದಿರ್ದುದನೊರ್ಮೊದ
ಲಱಿಪದೆ ನಿನ್ನಂತು ನುಡಿವನಾವನುಮೊಳನೇ ೧೪೦

ಉರ್ಕಾಳ್ಗಳಾದೊಡೇಂ ಕೇಳ್
ಸೊರ್ಕಾನೆಯ ಕೈಯ ಕರ್ವನಿನಿತುಂ ಸೆಳೆಯಲ್
ಬರ್ಕುಮೆ ಪೆಱಿಯಂ ಬಿಡೆನಂ
ತಿರ್ಕದು ಮತ್ತೊಂದು ಕಜ್ಜಮುಳ್ಳೊಡೆ ನುಡಿಯಾ ೧೪೧

ಅಱಿಕೆಯ ರೂವಿಲ್ಲದ ನಿ
ನ್ನೆಱಿಯಂಗುಬ್ಬ(ಟೆ)ಯುಬೀರಮುಂಟೆಂದುದ್ದಂ
ಜಱುಚಿದೆ ಕೇರಿಲ್ಲದೆ ಕ
ಣ್ದೆಱಿವಿನೆಗಂ ಬರೆವೆನೆಂಬ ಮರುಳಂ ಪೋಲ್ತೈ ೧೪೨

ಕೋಡುವ ಕೂಂಕುವ ಚೆಂದಂ
ನೋಡಿರೆ ಕಾಳೆಗಕೆ ಬೆಂಬಲಂ ಗಡ ಪೆಂಡಿರ್
ಸೂಡುವಲರಂಬು ಗಡ ಪಿಡಿ
ದಾಡುವ ಕರ್ಬು ಗಡ ಬಿಲ್ಲಿದೇನಚ್ಚರಿಯೋ ೧೪೩

ಪಡೆ ಮರವಟ್ಟ ಮಾವು ಗಡ ಬೆಳ್ಗೊಡೆಯಾಗಸಕೆಟ್ಟ ಚಂದವಂ
ಗಡ ಪೊಸಬೆಳ್ಳಿದಾವರೆಗಳಾವೆಡೆಯೊಳ್ ನಡೆವಲ್ಲಿ ಪೊಯ್ದುಪೂ
ಗುಡಿ ಗಡ ಕೊಂಬುಗೊಂಡುಸಿರದಿರ್ಪ ಬಸಂತನಿವರ್ಕೆ ತಾನೆ ಪೆ
ರ್ಗಡೆ ಗಡ ಗೆಲ್ವ ತಕ್ಕಱಿಯಲಾದುದು ನಿಮ್ಮಲರಂಬನೆಂಬನಾ ೧೪೪

ಪಿರಿದು ಮಾತಿನೊಳೇನ್ನೈ
ಸರಲಂಗೆ ಪೊಡರ್ಪಿನೇೞ್ಗೆಯುಂಟಾದೊಡೆ ಚಿ
ಚ್ಚರದಿಂದೆತ್ತಿಸಿ ತಂದಿ
ರ್ಪರ ಬಲ್ಪಂ ಬೞಿಕೆ ನೋಡು ನೀಂ ಕಾಳೆಗದೊಳ್ ೧೪೫

ಎಂಬುದುಂ ಕೇಳ್ದು ಮತ್ತಮಾ ದೂದನಿಂತೆಂದಂ –

ಎನ್ನೊಡೆಯನ ಬಲ್ಪಂ ನೀ
ವಿನ್ನುಂ ಕಂಡಱಿದುದಿಲ್ಲ ಬಿದಿಯೆಂಬಣ್ಣಂ
ಬನ್ನಂಬಟ್ಟುದನಱಿಯನೆ
ಮುನ್ನಂ ಮೆಯ್ಗಣ್ಣನಱಿಯನೇ ಪೊಡೆಯಲರಂ ೧೪೬

ಬಾನೆಡೆಯೊಳ್ ಸುಱಿದಾಡುವ
ರೇನಱಿಯರೆ ರಕ್ಕಸರ್ಕಳಱಿಯರೆ ದಿಟದಿಂ

ಮಾನಸರಱಿಯರೆ ಬಾಸುಗಿ
ತಾನಱಿಯನೆ ಮತ್ತಮಱಿಯದೇ ನೆಲನನಿತುಂ ೧೪೭

ಅಂತುಮಲ್ಲದೆಯುಂ ನೀಂ ನಾಲ್ಕೆರಡು ಪಗಲೊಳಿಮ್ಮೊಡೆಯನ ಕೈಯ ನಸೆಯ ಕೋಲ ಕಾಲಾಟಮಂ ಕಾಣ್ಬರೆನುತೋಲಗಸಾಲೆಯುಂ ಪೊಱಮಟ್ಟು ತುರಿಪದಿಂ ಬಂದು, ಕಂಪುವೊಟಿಲಂಪೊಕ್ಕು, ತೆಱಿಪುವಾರ್ದು ನನೆವಿಲ್ಲ ಬಲ್ಲಹನಂ ಕಂಡು, ಕಿತ್ತಡಿ ಪೆಱಿಯಂ ಬಿಡೆನೆಂದು ಕಾಳಿಗಮಂ ಮುಂದಿಟ್ಟುಕೊಂಡಿರ್ದಪನೆನಲೊಡನೆ, ನನೆಗಣೆಯಂ ಕೆಲಬಲದ ಪಸಾಯ್ತರ ಮೊಗಮಂ ನೋಡಿ, ಮುಳಿಸಂ ಮುಕ್ಕುಳಿಸಿ, ನಸು ನಗೆವೆರಸು ಇಂತೆಂದಂ

ಉಡುವ ಪುಲಿದೊವಲೊ ಕೈಯೊಳ್
ಪಿಡಿದಾ ಲಾಗುಳದ ಕೋಲೊ ಬಗರಿಗೆಯೋ ಕೆಂ
ಜೆಡೆಯೋ ಪೂಸುವ ಬೂದಿಯೊ
ಬಡಗೊರವಂಗವೇಕೆ ತನಗೆ ಕಾದುವ ಬೆಸನಂ ೧೪೮

ಎನ್ನೆಡಗೈಯಗುರ್ವಿಸುವ ಕರ್ಬಿನ ಬಿಲ್ಲೊಗ್ಗೆಯಲ್ಲಿ ಬಾರದಿ
ರ್ಪನ್ನೆಗಮೆನ್ನ ಜೇವೊಡೆಯ ಬಲ್ಲುಲಿ ನಾಲ್ದೆಸೆಯಂ ಪಳಂಚದಿ
ರ್ಪನ್ನೆಗಮೆನ್ನ ಪೂಗಣೆಗಳೋವದೆ ಬೆನ್ನನೆಪೋಗಿ ನಾಂಟದಿ
ರ್ಪನ್ನೆಗಮುಂಟು ತನ್ನ ಕಡು ಸೊರ್ಕು ಬಟಿಕ್ಕದು ಪಾಱಿಪೋಗದೇ ೧೪೯

ಕಡಲೊಳ್ ಮೆಯ್ಯಗ್ರೆದಿರ್ದೊಡಂ ಪೊಡವಿಯೊಳ್ ಪೊಕ್ಕಿರ್ದೊಡಂ ಬೆಟ್ಟದೊಳ್
ನಡೆದೇಱಿರ್ದೊಡಮಳ್ಕುತುಂದೆಸೆಗಳೊಳ್ ಬಳ್ಕುತ್ತಡಂಗಿರ್ದೊಡಂ
ಕಡುಪಿಂದೊರ್ಮೆಯೆ ಪೂವಿನಂಬದಟರಂ ಮೆಯ್ದಾಗಿ ನೋಯಿಪ್ಪುದೆಂ
ದೊಡೆ ಕೇಳೆನ್ನಯ ಬಾರಿಯೊಳ್ ತಿಸುಳಿ ತಾನಿನ್ನೆತ್ತ ಪೋಗಿರ್ದಪಂ ೧೫೦

ಅದಟಿನಳುರ್ಕೆಯಂ ಕಿಡಿಸಲಾಂಬರಮೇ ತನಗೊಂದು ಕರ್ಬುಸಾ
ಲದೆ ಮಱಿದುಂಬಿ ಸಾಲದೆ ಪಸುರ್ಮಿಡಿ ಸಾಲದೆ ಬಂದ ಮಾವು ಸಾ
ಲದೆ ಸುಟಿವಂಚೆ ಸಾಲದೆಳಗೌಂಗುಱಿಸಾಲದೆ ಕಾಯ್ತು ತೆಂಗು ಸಾ
ಲದೆ ಪೊಸನೀಱಿವೆಣ್ಣನುಡಿ ಸಾಲದೆ ತೆಂಕಣ ಗಾಳಿ ಸಾಲದೇ ೧೫೧

ಎಂದು ಗದ್ದುಗೆವೊಯ್ದು ಕಣ್ಣ ಕೆಂಪು ಕಿಸುಸಂಜೆಯಂ ಪಸರಿಸೆ ದೆಸೆ ದೆಸೆಗೆ ಮಸಗೆ ನಿಸ್ಸಾಳಮಂ ಸೂಳೈಸಲ್ವೇಟಿಪ್ದಾಗಳ್ –

ಮಾಣದೆ ನಿಚ್ಚಮುಂ ಪೊಣರ್ವ ರಾಯರ ತಕ್ಕಡಿಗಾಟಿ ಬಳ್ಕಿ ನೀ
ರ್ದಾಣಮನಂತುಗೊಂಡದಟರಾಗಳಿ ಬಾಯ್ವಿ ಡೆಸೊರ್ಕಿನಿಂದೆ ಕ

ಣ್ಣಾಣದ ಬೀರರುಗ್ಗಡಿಸೆ ಬಗ್ಗಿಪ ಕೋಗಿಲೆಯೆಂಬ ಪೊಯ್ವ ನಿ
ಸ್ಸಾಣದ ಬಲ್ಸರಂ ಕಿವಿಯ ಬಾನೆಡೆಯಂ ಬಳಸಿತ್ತು ಬೇಗದಿಂ ೧೫೩

ಅಂತು ತೊಟ್ಟನೆ ಪಳಂಚಲೆದು ತನ್ನ ಮನದನ್ನರಪ್ಪ ಬಸಂತಮೆಲ್ಲೆಲರ್ಗಳೆಂಬ ಕೆಳೆಯರೊಡನೆ ಇಂದು ಪಡೆಯೆಲ್ಲಮಂ ಪಲವುಂ ಸನ್ನಣದಿಂ ಬರಲಿಮೆಂದು ಪೇೞ್ದು, ಕಮ್ಮಂಗಣೆಯನ ನುಡಿಯನಾಲಿಸಿ ಹಸಾದವನಿಟ್ಟು ಸುಗ್ಗಿಯುಮಾ ತೆಂಗಾಳಿಯುಮಿರ್ವರುಂ ಸಜ್ಜುವಂ ಪಡೆದು ಚೌವಂದದ ದಟಿಕಂ ಸೆಲವಿತ್ತೊಡಗೊಂಡು ಬರೆಯಾಗಳ್ ಪಲವೆಡೆಯ ಕಡೆಯ ಬಾಡಗಳ ಬನಂಗಳೊಳ್ ತಾಣಂದರಮಾಗಿರ್ಪ ಕೆಂಗಣ್ವಕ್ಕಿಯಲರ್ವಕ್ಕಿ ಕನ್ನಡವಕ್ಕಿ ಪೊಣರ್ವಕ್ಕಿ ಮೊದಲಾದ ದಟ್ಟಿಯ ಕೂರಾಳ್ಗಳುಂ ತಂತಮ್ಮ ಪಡೆವೆರಸು ಬಂದು ಕಾಣ್ಬುದುಮವರಂ ಮನ್ನಿಸಿ ನಾಲ್ಕುಂ ತೆಱದ ಪುಸಿವಡೆಯಂ ಬಿಜ್ಜೆಯಿಂ ಪುಟ್ಟಿಸಿ ಮುಂಗುಡಿಯೊಳ್ ನಡೆವಂತೆ ಬೆಸಸಿ ಕಣ್ಗಂಬಾಗಿರೆ ಬೀರವಸದನಂಗೆಯ್ದು –

ಪಲವುಂ ಮೇಳದ ಬೀರರ್
ಕೆಲದೊಳ್ ಬರೆ ತುಱುಗಿ ಪಿಡಿದ ಬೆಳ್ಗೊಡೆ ಚೆಲ್ವಂ
ಗೆಲೆ ತನ್ನರಮನೆಯೊಳ್ ಸಿರಿ
ನಲವಿಂ ನೆಲಸಿರ್ಪ ಪೊೞ್ತಿನೊಳ್ ಪೊಱಮಟ್ಟಂ ೧೫೪

ಸೊಗಯಿಪ ತಳಿರ್ದೋರಣಮಂ
ನುಗುಳುತ್ತುಂ ಪಲರ ಪರಕೆಯಂ ಕೈಕೊಳುತುಂ
ಪೊಗೞ್ವವರಂ ಮನ್ನಿಸುತುಂ
ಬಗೆವುಗೆ ಪೊಱವೊಟಲನೆಯ್ದಿದಂ ನನಗಣೆಯಂ ೧೫೫

ಮೊಗಸಾಲೆ ಚಂಪೆಯಂ ಚೌ
ಕಿಗೆ ಮೆಱೆದಿರೆ ಹರಿಸದಿಂದೆ ಬೀಡಂ ಬಿಟ್ಟಾ
ಪಗಲಂ ಕಳೆದಂದಿನ ಮಱು
ವಗಲಂ ನಡೆದೆತ್ತಿ ಬರುತುಮಿರ್ದರ್ದಂ ಕಾವಂ ೧೫೬

ಅಗಳ್ –

ಅರಗಿಳಿವಿಂಡು ವಾರುವದ ಮೋಹರವಾಱಡಿವಿಂಡು ಬಿಲ್ಲ ಬೀ
ರರ ಪಡೆ ಕೊಂಚೆವಿಂಡು ಪಲವಡ್ಡಣದೊಡ್ಡಮಳ್ವಕ್ಕಿವಿಂಡು ಮೆ
ಯ್ವೆರಸುವ ಕೊಂತಗಾಱರಣೆಯಾಗಿರೆ ಬಂದು ಬಸಂತನೊಲ್ದು ಸಂ
ವರಣೆಯನೆಯ್ದೆ ತೋಱೆ ತಲೆದೂಗಿಸಿದಂ ನನೆವಿಲ್ಲಬೀರನಾ ೧೫೭

ಅಂತೊಯ್ಯನೆ ಮುಂದೆ ಮೋಹರಂ ಬಡೆದು ತಳರ್ವ ಪುಸಿವಡೆಯಲ್ಲಿ –

ಗಲ್ಲದ ಸೊರ್ಕುನೀರ ಪೊನಲಿಂ ನೆಲೆವರ್ಚೆ ಕಡಲ್ ತುಳುಂಕೆ ಬೆ
ಟ್ಟೆಲ್ಲವನೌಂಕುವಂತಿಡುವ ಕಾಲ್ವೊಳಿಯಿಂ ನೆಲನಾೞೆ ಬೇಗದಿಂ
ನೆಲ್ಲಿಯ ಕಾಯ್ಗಳಂ ಬಡಿಗೆ ಕೊಂಡವೊಲೆತ್ತಿದ ತೋರಹತ್ತದಿಂ
ಜಲ್ಲನೆ ತುಂಬಿಗಳ್ ಕೆದಱೆ ಬಂದುವು ಬಿಂಕದಿನಂಕದಾನೆಗಳ್ ೧೫೮

ತೊಳಗುವ ಪೊನ್ನ ಪಲ್ಲಣದ ನುಣ್ಬೆಳಗಾಗಸಮಂ ಮುಸುಂಕೆ ಪ
ಜ್ಜಳಿಸುವ ಪಕ್ಕರಕ್ಕೆಗಳ ಗೆಜ್ಜೆಯ ಬಲ್ಲುಲಿನೀಳ್ದು ದಿಕ್ಕಿನೊಳ್
ಬಳಸೆ ಕೊಡಂಕೆಯೊಳ್ ಪೊಳೆವ ಚೌರಿಯ ಗಾಳಿಯ ಕೋಳ್ಗೆಬೆಟ್ಟುಗಳ್
ತಳರೆ ಪೊಗೞ್ತೆಯಿಂ ತಳೆದ ತೇಜಿಯ ತಟ್ಟು ತೆರಳ್ದುದೆತ್ತಲುಂ ೧೫೯

ಪೂಡಿದ ವಾರುವಂಗಳ ತೆರಳ್ಕೆಗೆ ನೇಸಱ ತೇರ ತೇಜಿಗಳ್
ಪಾಡಟೆದಿರ್ಪಿನಂ ಪರಿವ ಗಾಲಿಯ ಕೋಳ್ಗೆ ಕೆಳರ್ತು ಬೆಟ್ಟುಗಳ್
ಕೂಡೆ ಸಡಿಲ್ವಿನಂ ಪೊಡೆವ ಬೀರರ ಜಂಕೆಗೆ ಗೊಂಟೆನಾನೆಗಳ್
ಕೋಡುವಿನಂ ಕಡಂಗಿಪರಿತಂದುವು ತೋರ್ಕೆಯ ತೇರ್ಗಳೋಳಿಯಿಂ ೧೬೦

ಸಿಡಿಲ ಪೊಡರ್ಪನೇೞಿಸುವ ಸಿಂಗಮನಂಜಿಪ ರಕ್ಕಸರ್ಕಳಂ
ನಡುಗಿಪ ಮಾರಿಯಂ ಪೊಸೆದು ಮುಕ್ಕುವ ಮಿಟ್ಟುವನೊತ್ತಿ ಸೊರ್ಕಿನಿಂ
ಪಿಡಿವ ಕಡಂಗಿ ನಿಂದ ಜವನಂ ಮುಱಿದಿಕ್ಕುವ ತಕ್ಕನಾಂತು ಮುಂ
ಗುಡಿಯೊಳೆ ಬಂದುದಂದು ತುೞಿಲಾಳ್ಗಳ ಬಲ್ಲಣಿಗೆಲ್ಲವೆಂಬಿನಂ ೧೬೧

ಕುದುರೆಯ ತಟ್ಟುಗಳ್ ನೆರೆದ ಬಲ್ದೆರೆಯಿಂ ಪಿಡಿದಿರ್ದಬಾಳ್ಗಳು
ಣ್ಮಿದ ನಿಡುವಾಳೆಯಿಂ ಬಿಳಿಯ ಸತ್ತಿಗೆಗಳ್ ನೊರೆವಿಂಡನಾನೆಗಳ್
ಕೆದಱಿದೆ ಹಂತಿಗೊಂಡ ನೆಗಟಿಂ ಪೊಸತೇರ್ ಪಡಗಂ ನೆಗೞ್ಚಿಪೆ
ರ್ಚಿದ ಕಡಲೆಂಬಿನಂ ಮಸಗಿ ಬಂದುದು ಪೆರ್ಬಡೆ ಕರ್ಬುವಿಲ್ಲನಾ ೧೬೨

ಅಂತು ಬೆಡಂಗುವೆತ್ತು ನಡೆವ ಪುಸಿವಡೆಯ ಪೆಱಗೆ ಪೞೆಯ ಪಾಡಿಯಂ ಕೂಡಿಕೊಂಡು –

ಮಿಳಿರ್ವ ಪೊಸದಳಿರೆ ಪಟಿಯಿಗೆ
ಗಿಳಿಗಿಳೆ ಪೂಡಿರ್ದ ಕುದುರೆ ತಂಗಾಳಿಯೆ ಕ
ಣ್ಗೊಳೆ ತೇರೆಸಗುವನೆನೆ ಬಂ
ದೆಳಮಾವಿನ ತೇರನೇಱೆ ನಡೆದಂ ಕಾವಂ ೧೬೩

ತರದಿಂದೆತ್ತಿದ ಕೆಂದಾ
ವರೆಗಳ್ ಕೆಂಗೊಡೆಗಳಂದಮಂ ಪಡೆವಿನಮಾಂ

ತರಸಂಚಿಯೆಂಬ ಸಾವಂ
ತರ ಬಳಗಂ ಬಳಸೆ ಬಂದನಂದು ಬಸಂತಂ ೧೬೪

ನನೆಯೆಸಳಂದಮಾದ ಗುಟಿಮುಂ ಪೊಳೆಯುತ್ತಿರೆ ನೀಳ್ಪುವೆತ್ತ ಪೂ
ವಿನ ಪೊಸಟೆಕ್ಕೆಯಂಮಿಳಿರೆ ಪಕ್ಕದ ಕೋಗಿಲೆಯೆಂಬ ಗಂಟೆಗಳ್
ದನಿಗುಡೆ ಕೈಯ ಕೋಳ್ಗೆ ಕಡುಗೂರದವರ್ ದೆಸೆಯತ್ತ ಚೆಲ್ಲೆ ಮೆ
ಲ್ಲನೆ ನಡೆತಂದುವಂದು ಪೊಸಮಾವೆನಿಪ್ಪುಗ್ಗಡದಗ್ಗದಾನೆಗಳ್ ೧೬೫

ಕೆಂದಳಿರೆಪಕ್ಕರಕ್ಕೆಗ
ಳಂದಬಂಡೆದೆಸೆವ ಪಲ್ಲಣಂಗಳ ಸೊಂಪುಂ
ಸಂದಿಸೆ ನೀಳ್ಪಿಂ ನಡೆದುದು
ಸಂದರಗಿಳಿಯೆಂಬ ಕುದುರೆಗಳ ದಟಿವೆತ್ತಂ ೧೬೬

ಮಿನುಗುವ ಕೊಂಬಿನಚ್ಚು ಕಿಱುಗೊಂಬಿನ ತಳ್ತರಗೀಲ್ ಕವಲ್ತ ಕೊಂ
ಬಿನ ಮಡವಡ್ಡವಂದ ನಳಿಗೊಂಬಿನ ಪತ್ತುಗೆ ಜೋಲ್ವ ಬಳ್ಳಿಗೊಂ
ಬಿನ ಬಲೆ ತೋರಗೊಂಬಿನ ನೊಗಂ ನಿಡುಗೊಂಬಿನ ಮೂಂಕು ಕಣ್ಗೆ ಚೆ
ಲ್ವಿನೆ ನಡೆತಂದುವಂದಸುಗೆಯೆಂಬ ನೆಗಟ್ತೆಯ ತೇರ್ಗಳೆತ್ತಲುಂ ೧೬೭

ಕಿಱುಮುಗುಳ ಗೆಜ್ಜೆಯಿಂದಂ
ಮಿಱುಗುವ ಕೆಂದಳಿರ ಹರಿಗೆ ಬಗೆಗೊಳೆ ಬಂದ
ತ್ತುಱದೆ ಮಱಿಗೋಗಿಲೆಗಳೆಂ
ಬಱಿಕೆಯ ಪೆಸರ್ವೆತ್ತ ಹರಿಗೆಕಾಱರ ತಂಡಂ ೧೬೮

ಪಿಡಿದಲರ್ವಿಲ್ಲುಂ ಮೆಲ್ಲೆಸ
ಳುಡೆದೊವಲುಂ ಮಿಸುಪ ನನೆಯ ಮೊನೆಯಂಬುಂ ನೇ
ರ್ಪಡೆ ಮೇಲೆ ಮೇಲೆ ನಡೆದುದು
ಗಡಣದೆ ಮಱಿದುಂಬಿಯೆಂಬ ಬಿಲ್ಲಣಿ ಬೀರರ್ ೧೬೯

ಕಡು ನಿಮಿರ್ದು ಪೊಳೆವ ಪೊಸಪೂ
ಗುಡಿಯೆಂಬಗ್ಗಳಿಕೆವಡೆದ ಸಬಳಮನೊಲವಿಂ
ಪಿಡಿದು ಬರುತಿರ್ದುದೆತ್ತಂ
ಕಡು ಸೊರ್ಕಿದ ತುಂಬಿಯೆಂಬ ಡೊಂಕಣಿಕಾಱರ್ ೧೭೦

ಅಂತು ನಡೆತರ್ಪ ಪಡೆವೆರಸು ನಿಚ್ಚವಯಣಂ ಬರುತಿರ್ಪಾಗಳ್ ಪಲವುಂ ಪರಿಯ ಪಕ್ಕಿಗಳ ಪೆರ್ಚಿದ ಸರಂಗಳಿಂ ಹರಣಂಬಡೆದಂತೆ ಪರಿವಡೆದು ತಿಂತಿಣಿವಡೆದ ಪೇರಡವಿಯೊಳ್ ಪೊಗಟ್ತೆವೆತ್ತು -

ತುಱುಗಿ ನಡೆವ ಮುಗಿಲ ನಡುವೆ ಪೊಳೆವ ಮಿಂಚಿದೆಂಬಿನಂ
ಮಿಱುಪ ತೆರೆಗಳೆಡೆಗಳೊಳಗೆ ಸುಱಿವ ಮೀನ್ಗಳಾವಗಂ
ಮೆಱೆವ ತೊಱೆಯ ತಡಿಯ ತಳಿರ ಮನೆಗಳಲ್ಲಿ ನಿಚ್ಚ ಮುಂ
ಬಱಿದೆ ಮುಳಿದು ತಿಳಿಪೆ ತಿಳಿದು ನೆರೆವ ಬೇಡವೆಣ್ದಿರಿಂ ೧೭೧

ಅಂತುಗಾಡಿವಡೆದ ಕಾಡಂ ಪಿಂದಿಕ್ಕಿ ಮೆಲ್ಲ ಮಲ್ಲನೆ ನಡೆವಾಗಳ್ -

ಕಟ್ಟಿದ ತಂತಿಯಂ ಮಿಡಿದು ಗೊಂದಣದಿಂದರುಹಂತನೇೞ್ಗೆಯಂ
ನೆಟ್ಟನೆ ಪಾಡಿ ಸೋಲಿಸುವ ಸಗ್ಗದ ಪೆಣ್ದಿರ ನುಣ್ಚರಕ್ಕೆ ಮೆ
ಯ್ಗೆ ಟ್ಟೆಳವುಲ್ಲೆಗಳ್ ಪಲವು ಮಾಲಿಸೆ ಮೆಯ್ಸಿರಿಮೆತ್ತ ತಟ್ಟಿಲಿಂ
ಬೆಟ್ಟಮದೊಂದು ದಿಟ್ಟಗೆಡೆಯಾದುದು ತೊಟ್ಟನೆ ಕರ್ಪುವಿಲ್ಲನಾ ೧೭೨

ಅಂತು ನೆಗೞ್ದಿರ್ದ ಬೆಟ್ಟಂ
ಸಂತಸದಿಂ ನಿಂದು ನೋಡುತಿರೆ ಬಿನ್ನಪವೆಂ
ದಿಂತೆಂದಂ ಕೈಮುಗಿದು ಬ
ಸಂತಂ ಜತಿಯೊರ್ವನಿಲ್ಲಿ ನೆಲಸದೆ ಮಾಣಂ ೧೭೩

ಎಂಬನ್ನೆಗಂ -

ಕೊಲ್ಲುದುದೆ ದಿಟದಿನಱನೆಂ
ದೆಲ್ಲಾ ಪರಿಯಿಂದೆ ಪೇೞ್ದ ಪಿರಿಯರ ನುಡಿಯಂ
ಬಲ್ಲಿತೆನೆ ನಂಬಿ ಬೇಂಟೆಯ
ನೊಲ್ಲದೆ ಬಿಟ್ಟರ್ದ ಬಿಯದರೊಪ್ಪಿದರದಱೊಳ್ ೧೭೪

ಮಡುಗಳೊಳಗಲರ್ದ ಪೂವಂ
ಕಡು ನಲವಿಂ ತಿಱಿದು ಬೇಗದಿಂ ಸವಣನ ಮೆ
ಲ್ಲಡಿಗೆ ತಲೆದುಡಿಗೆ ಮಾಡುವ
ಪಿಡಿಗಳ್ ನೆಗೞ್ದಿರ್ದುವದಱ ತಟ್ಟಿಲ ಬನದೊಳ್ ೧೭೫

ತೊಲಗದೆಗೆಡೆಗೊಂಡಿರ್ದುವು
ಸಲೆಮುಳಿಸಂ ಬಿಟ್ಟು ಸೋಗೆಯುಂ ಪಾವುಗಳುಂ
ಪುಲಿಯುಂ ಮಱಿವುಲ್ಲೆಗಳುಂ
ಕಲಿಸಿಂಗಮುಮಾನೆಯುಂ ಕರಂ ನಲವಿಂದಂ ೧೭೬

ಅಂತು ಮ್ಮೆಮೆವಡೆದ ಬೆಟ್ಟದ ಮೇಲೆ ಕೈಯೆತ್ತಿ ಪಲರುಂ ಜತಿಗಳ್ ತವಸಿಂಗೊಳಗಾಗಿ –

ಬಗೆ ನೊಸಲಲ್ಲಿ ಕೂಡೆ ನಿಲೆ ತಪ್ಪದೆ ಮೂಗಿನ ಚೌಕದಲ್ಲಿ ದಿ
ಟ್ಟಿಗಳಿರೆ ಮೆಯ್ಯ ಮಣ್ ಕೊರಲ್ಗೆ ಪುತ್ತಿಡೆ ಪರ್ಬಿದ ಬಳ್ಳಿ ಸುತ್ತಲುಂ
ಸೊಗಯಿಸೆ ಕೈಯನಿಕ್ಕಿ ಮಿಗೆ ತನ್ನನೆ ತಾನೊಲವಿಂದೆ ಜಾನಿಸು
ತ್ತಗಲದೆ ನಿಂದನೊರ್ವ ಸವಣಂ ಬಗೆಗೊಳ್ವಿಱಿತಟ್ಟಿತೆಂಬಿನಂ ೧೭೭

• ಅವರಂ ಭೋಂಕನೆ ಕಟ್ಟದಿರೊಳ್ ಕಂಡು ಕಿಡಿಕಿಡಿಯಾಗಿ ಕರ್ವುವಿಲ್ಲನಿಂತೆಂದಂ - ಇನ್ನೆಗಮೆನಗಿದಿರಾಗಿ ಮಲೆದು ಪೋಗದೆ ಪೋಗದೆ ನಿಲ್ವ ತವಸಿಗಳನೊರ್ವರುಮಂ ಕನಸಿನೊಳಂ ಕಂಡೆನಿಲ್ಲ, ಸವಣನೊರ್ವನೆ ತೊಲಗದಿದಿರಾಗಿನಿಂದಂ ಇದರ್ಕೆ ತಕ್ಕುದಂ ಮಾಱ್ಪೆನೆಂದು ಕರ್ವುವಿಲ್ಗೆ ಕೈಯಂ ನೀಡೆ ಬಸಂತನಿಂತೆಂದಂ -

ತನಗೆ ಸವನಪ್ಪವಂ ಪೊಣ
ರ್ದನೆ ಕಾದುವುದಜ್ಞನಪ್ಪವಂಗೆಱಗುವುದೆಂ
ಬನಿತೆ ವಲಮರಸುಗಾದೆಗ
ಳನುವಂ ನೀನಱಿದು ಬಿಲ್ಗೆ ಕೈನೀಡುವರೆ ೧೭೮

ಪಲವಗೆಗಳಾಱುಮಂ ಗೆ
ಲ್ದಳವಿಂ ಕೈಯಿಕ್ಕಿ ನಿಂದ ಕಲಿಯೆಂದುಂ ತ
ನ್ನೊಳಗುಂ ಪೊಱಗುಂ ತೋಱದ
ಬಳಿಯಂಗೆಱಗಿರ್ದು ಬಾೞ್ವುದೀ ಮೂಲೋಕಂ ೧೭೯

ಕಿಱುಕುಳನೆಂದೇಟಿ್ಸಲೀ
ತೆಱನಲ್ಲವೆ ಮುಂದೆ ನಿಂದ ಸವಣನರೂಪೇ
ತರ ಮಾತೊ ಗಂಡುತನಮಂ
ಮೆಱೆ ತಿಸುಳಿಯೊಳೆಱಗು ಪಿಱಿಯವರ್ಗೆಳೆಯೊಡೆಯಾ ೧೮೦

ಎನೆ ಗದಗದನೆ ನಡುಗಿ ಮುಂದೆ ತಿಸುಳಿಯಂ ಗೆಲ್ವುದರ್ಕೆ ಮುಡಿಗಿಕ್ಕುವಂತೆ ನಿಡುಗೈಗಳಂ ಮುಡಿಗಿಕ್ಕಿ ನಡೆದು, ಅಂತುಮಲ್ಲದೆಯುಂ –

ಉಱದಟಲಿಂದಮಾ ತವಸಿಯಂ ಮುಳಿದೆಚ್ಚೊಡೆ ಕರ್ವುವಿಲ್ಲು ತಾಂ
ಮುಱಿಯದೆ ಪೂವಿನಂಬು ಕರಿಕೇಱದೆ ತುಂಬಿಯ ನಾರಿ ಬೇಗದಿಂ
ಪಱಿಯದೆ ತನ್ನ ನಚ್ಚಿನೆಲರೊಯ್ಯನೆ ಜಾಱದೆ ಬಂದ ಮಾವು ಬೀ
ತೊಱಗದ ಗಂಡುಗೋಗಿಲೆಯ ಸೊರ್ಕೊಳಸೋಱದೆ ಸೈತೆಪೋಕುಮೇ ೧೮೧

ಎಂದು ಬಗೆವರ ಬಗೆಪಿಂದುಟ್ಟಿಯೆ ತಳರ್ದು ಬಸಂ ಬಿಡಿದು ಕಟ್ಟುದ್ದಮಾಗಿ ಬೆಳೆದಬಿದಿರ ಕೊನೆಯ ಕೋಳ್ಗೆ ಪಱಿವಱಿಯಾದ ಮುಗಿಲಪೊಱೆಯಿಂ ಸುರಿವ

ಮುತ್ತುಗಳಂ ಕಾರ ಮುಂಬನಿಯ ತಂದಲೆಂದು ಬಂದು ನುಂಗಲಂಗೈಸುವ ಚಾದಗೆಯ ಮಱಿಗಳುಮಂ ಬೆಂಗದಿರ್ಗಂ ತಣ್ಗದಿರ್ಗಂ ತೆಱಿಪುಗುಡದ ಮರದುಱು ಗಲ ಕಟ್ಟಿಲೆಯಂ ಕಾರಿರುಳ್ಗೆತ್ತು ಸುಟಿ'ಯಲನುಗೆಯ್ವ ಗೂಗೆಗಳುಮಂ ತನಿವಣ್ಣ ಗೊಂಚಲಿಂ ಮಿಂಚುವಡೆದ ಮೇಲ್ಮರನನಡರ್ವ ಕೋಡಂಗಂಗಳ ಬಳ್ಳಿವಾಲಮನೆಳನಾಗರೆಂದು ಸೆಳೆದುಕೆಡಪಿ ಕಡದೀಡಾದಲವ್ವಳಿಸುವ ಮುದಿ ಮುಂಗುಲಿಗಳುಮಂ, ಕಡವೆ ತುಟಿ'ದು ಕಡದಿಡೆದೆಯೊಳಿಲೆ ಕಟಿಲ್ದು ಕೆಡೆದ ತೋರಗೊಂಬುಗಳಂ ಪೆರ್ವಾವೆಂದು ಪೊರ್ದಲಂಜಿ ಗೆಂಟಱಿ'ೊಳ್ ತೂಗಿನೋಡಿ ಪೆಱಕಾಲೊಳೋಡುವ ಕಿಱುನರಿಗಳುಮಂ, ಈಡಿಱಿ'ವ ಕಾಡಾನೆಗಲ ಕೋಡಪೊಯ್ಲಿಂದುದಿರ್ದೆತ್ತಲುಂ ಪರೆದ ಗುರುಗುಂಜಿಯಂ ನೋಡಿ ಕೆಂಬರಲೆಂದು ಬಗೆದು ಬೇಗದಿಂದಾಯಲೆಂದುಜ್ಜುಗಿಪ ಬಿಯದರೆಳವೆಣ್ದಿರುಮಂ ಬಿಱುಗಾಳಿಯ ಪೊಯ್ಲಿಂ ನೆಗೆದೊಗೆದ ಬಿದಿರ ಬಿಲ್ಲುಲಿಯಿಂ ಬೇಡರ ಬಲ್ಲುಲಿಯಿನೆ ಲ್ಲಿಯುಂ ನಿಲ್ಲದೆ ತಲ್ಲಣದಿನೋಡಲೊಡರ್ಚುವೆಳವುಲ್ಲೆಗಳುಂ, ಸುಟಿ'ಗಾಳಿಗೆ ಸುಟಿ'ಯೆ ನೆಗೆದು ಪಾಱುವ ತಱಗೆಲೆಯ ತುಱುಗಲಂ ಕಿಱುವಕ್ಕಿವಿಂಡೆಂದು ಕೂಱಿಂಡುಗಳಂ ಮಡುಮಿಡಿವಿಲ್ಲೊಳಿಸಲೆಸಗಿ ಮಱುಗುವ ತುಱುಗಾವ ಕಿಱುಕುಳದ ಕೆಳೆಯರುಮಂ ನೋಡುತ್ತುಂ ನಿಚ್ಚವಯಣದಿಂ ಬರವರೆ -

ಬಿಡದೆಸಪೆಲರಿಂದಂ ಪೊಣ್ಮುತ್ತಿರ್ಪಚ್ಚಗಂಪಂ
ಪಿಡಿದಲರ್ಗಳ ಚೊಂಪಂ ಜೋಲ್ದು ಚೆಲ್ವಾಗೆ ಬಿಣ್ಪಂ
ದಿಡಿದ ಮರಗಳಿಂದಂ ಬೆಳ್ಳಿವೆಟ್ಟಕ್ಕೆ ನಿಚ್ಚಂ
ಪಡಿಯೆನಿಸುವುದೆತ್ತಂ ರನ್ನಗಲ್ಲೆಂಬ ಬೆಟ್ಟಂ ೧೮೨

ಹರಿಸದೆ ಕೂಡುವ ಬಿಜ್ಜೋ
ದರಿಯರ ಕೊರಲುಲಿಗಳಿಂದಮಂತಾ ಬೆಟ್ಟಂ
ಬಿರಯಿಗಳ ಮೊತ್ತಮಂ ಚ
ಪ್ಪರಿಪಂತಿರೆ ಸಾರ್ದು ನೋಡಿದಂ ನನೆಗಣೆಯಂ ೧೮೩

ನೋಟ್ಪಿರ ಕಣ್ಗಚ್ಚರಿಯಂ
ಮಾಟ್ಪವೊಲಾಗಸಮನಣೆವ ಕೋಡುಂಗಲ್ಲಿಂ
ನೀಟ್ಪಿಂ ತಳೆದಾ ಬೆಟ್ಟದ
ತಾಟ್ಪುದಿದ ಬನಂಗಳಲ್ಲಿ ಬೀಡಂ ಬಿಟ್ಟಂ ೧೮೪

ಆಗಳೆಡೆಗಿಱಿ'ದ ಪೂಗುಡಿಯ ಗುಡಿಗಳೊಳಂ, ನೆಗೆದ ಸುರಹೊನ್ನೆಯ ಮೊಗಸಾಲೆಯೊಳಂ, ಮಡಲ್ಗೊಂಡ ಮಲ್ಲಿಗೆಯ ಮಂಡವಿಗಳೊಳಂ ಸಂಪಗೆಯ ಜೊಂಪದ ಚಂಪೆಯದೊಳಂ, ಕಂಪನಪ್ಪಿದಿರವಂತಿಯ ಕಾವಣಂಗಳೊಳಂ, ಗಾಡಿವಡೆದ ಬಕುಳದ ಗೂಡಾರದೊಳಂ, ಬೀಗಿ ಪಟಿಪಟನೆ ಬೆಳೆದ ಬಾಟಿ'ಯ ತೀವುರಿಯೊಳಂ, ಸೊಂಪಾದ

ಪಾದರಿಯ ಚೌಕಿಗೆಗಳೊಳಂ, ಬಿಟ್ಟ ಬೀಡು ಬರೆದಂತೆ ಕಂಡರಿಸಿದಂತೆ ಕಣ್ಗೆಸೆದಿರ್ದುದನ್ನೆಗಮಿತ್ತಲ್ -

ಪೂಗಣೆಯನೆತ್ತಿ ಬಂದುದ
ನಾಗಳೆ ಸಿವನಱಿದು ನೊಸಲ ಕಣ್ಬಾಯ್ದವನಂ
ಬೇಗದೆ ನಡೆದವನೊಳ್ ನೀಂ
ತಾಗೆನೆ ನಸುನಗುತುಮಾತನಂದಿಂತೆಂದಂ ೧೮೫

ನೆಲನಂ ಪೋಗೊದೆಯೆಂಬುದೇನುಗಿದುಬೆಟ್ಟಂ ಹಿಟ್ಟು ಮಾಡೆಂಬುದೇ
ನುಲಿದೆಣ್ಬುಂ ದೆಸೆಯಾನೆಯಂ ಪಿಡಿದು ಕೋಡಂ ಕಿಬ್ಬಿ ತಾರೆಂಬುದೇ
ನೆಲೆ ಪೆರ್ಮಾರಿಯನಾವಗಂ ಪೊಸೆದು ನೀಂ ಮುಕ್ಕೆಂಬುದೇನಳ್ಕದೀ
ಯಲರ್ವಿಲ್ಲಾತನ ಪಾಡಿಯಂ ಕಡುಪಿನಿಂ ತಾಗೆಂಬುದೇಂ ಬೀರಮೇ ೧೮೬

ಮತ್ತಮೊರ್ವಂ ಮೂದಲಿಸಿಯಲ್ಲದೆ ತಗದ ಮುನ್ನೆಱಗಿದಲ್ಲದಿಱಿಯದ ಸಾಱಿದಲ್ಲದೆ ಕೊಲ್ಲದ ಮುಱಿಯಿಱಿದಲ್ಲದೆ ಮೊರೆದೆಸೆಯದ ಪೆಸರಂ ತಳೆದ ಕೂರಾಳಿಂತೆಂದಂ –

ಕಡುಮುಳಿದೋಡಿ ನಿಂದ ತುೞಿಲಾಳ್ಗಳನಾಂ ತಱಿದೊಕ್ಕಲಿಕ್ಕದಿ
ರ್ದೊಡೆ ಬಿಡದಾಂತ ಸೂನಿಗೆಯ ಭಂಡಿಗಳಂ ಸಿಡಿಲಂತೆ ಪೊಯ್ಯದಿ
ರ್ದೊಡೆ ನಡೆತರ್ಪ ತೇಜಿಗಳನೋವದೆ ಭಂಡಣದಲ್ಲಿ ಸೀಱಿದಿ
ರ್ದೊಡೆ ಪೆಸರಾನೆಯಂ ಮುಱಿಯದಿರ್ದೊಡೆ ನಚ್ಚಿನ ನಿನ್ನ ಲೆಂಕನೇ ೧೯೭

ಮಿಸುಪ ಸುಲಿಪಲ್ಲ ಬೆಳಗೆ
ಣ್ದೆಸೆಯಂ ಪರಿದಡರ್ದು ಪೊಳೆವ ಜೊನ್ನದ ಸೊಂಪಂ
ಮಸುಳಿಸೆ ಮತ್ತಮದೊರ್ವಂ
ಬಿಸುಗಣ್ಣನ ಮುಂದೆ ನಿಂದು ತಾನಿಂತೆಂದಂ ೧೮೮

ಕೊಂಡಾಡುವ ಕಲ್ಗಾಪಿನ
ಗಂಡರ್ಕಳನಱಿಸಿ ಕೆದಱಿ ನಿಟಿಲೆನೆ ಮುಱಿವೆಂ
ಬಂಡಣದೆಡೆಯೊಳ್ ಬಾೞಿಯ
ದಿಂಡಂ ಮುಱಿವಂತೆ ಕಾವನಾನೆಯ ಕೊಂಬಂ ೧೮೯

ಮತ್ತಮೊರ್ವಂ ತಕ್ಕಿನ ರಕ್ಕಸರನೊಕ್ಕಲಿಕ್ಕಿದ ಪೆಸರ ಪೇರಱಿಕೆಯೊಳಿಂತೆಂದಂ –

ತೋಱಿಯಂ ಪೊಕ್ಕಾದಂ ಮೆ
ಯ್ಯಱಿಯದೆ ಸೊರ್ಕಾನೆ ಮುಳಿದು ಬೆಳ್ದಾವರೆಯಂ

ಮುಱಿವವೊಲಾ ಕಾಳೆಗದೊಳ್
ತಱಿಸಂದೊಳವೊಕ್ಕು ಮುಱಿವೆನಾತನ ಕೊಡೆಯಂ ೧೯೦

ಬಂದ ಕಡುಗುದುರೆ ಪೊಲದೊಳ್
ನಿಂದವರಂ ತಿವಿದುವಕಟ ನೋಡಿರೆ ತಾನಿಂ
ತೆಂದಱಿಯ ಬಾರದಿದು ಪೊಸ
ತೆಂದೊರ್ಮೆಯೆ ಪೊಱಗೆ ಪುಯ್ಯಲಾದತ್ತಾಗಳ್ ೧೯೧

ಅಂತಳುರ್ವ ಮಾಸಬುದಮಂ ಕೇಳ್ದು ಇವು ಕಾವನ ಕುದುರೆಗಳಾಗದೆ ಮಾಣವೆಂದು ಬಗೆಯೊಳಿಟ್ಟಣಿಸಿ ಕಡು ಮುಳಿದು

ಪೊಸತಪ್ಪ ಕಡಲಿದೆಂಬಂ
ತೆಸೆದೊಪ್ಪಿರೆ ತಿಸುಳಿ ಬೇಗದಿಂ ಪುಟ್ಟಿಸಿದಂ
ಪುಸಿವಡೆಯಂ ಕಡುಮೆಱಿದಿರೆ
ಪಸರಂಬಡದಾನೆ ಕುದುರೆ ತೇರಾಳ್ಗಳುಮಂ ೧೯೨

ಅಂತು ಪುಟ್ಟಿಸೆ ಮೊದಲಿಗನಪ್ಪ ಬಿಸುಗಣ್ಣೊಳೊಗೆದ ಬೀರಂ ತನ್ನೊಡನಾಡಿಗಳಪ್ಪಗ್ಗದಬೀರರ್ವೆಗ್ಗರಸು ಆ ಪಡೆಯಂ ಕೂಡಿಕೊಂಡು ಸೂಟಿಸುವ ನಿಸ್ಸಾಳದ ತಾಟಿಸುವ ತಂಬಟದ ಬಾರಿಸುವ ಬೀರವಱಿಯ ಪೊಡೆವ ಡಕ್ಕೆಯ ಪಿಡಿದ ಬಿರುದಿನ ಕಾಳೆಯ ಬಲ್ಲುಲಿಯ ಸಡಗರಮೆಲ್ಲಾ ದೆಸೆಗಳಂ ಕಿವುಂಡುವಡಿಸೆ ಮಂಜುವೆಟ್ಟದಿಂ ಪೊಱಮಡಲೊಡನೆ –

ಮಿಾನಗೆಯಾಂತ ನೀಳ್ದ ಪೊಸಟೆಕ್ಕೆಯಮೊಪ್ಪಿ ರೆ ಬರ್ಪ ಗಾಲಿಯಂ
ತಾನೊಳಗಾದ ಬೆಟ್ಟು ಪುಡಿಯಾಗಿರೆ ಪೆರ್ಚಿದ ಕಾಲದೂಳಿಯಿಂ
ಬಾನೆಡೆ ನಾಡೆಯುಂ ಪೊಡವಿಯಂತಿರೆ ಕೈದುಗಳಿಂದೆ ಬಂದುವಂ
ದಾನೆಗಳೊಡ್ಡು ತೇರ್ಗಳಣಿ ತೇಜಿಯ ತಟ್ಟುಲಿವಾಳ ಮೊಗ್ಗರಂ ೧೯೩

ತರದಿಂ ಮೇಲೊಗೆದಿರ್ಪ ಪೀಲಿದಟಿಗಳ್ ತಳ್ತಾಗಸಂ ರೂಪುಗೆ
ಟ್ಟಿರೆ ಕೂರ್ವಾಳ ತೊಳಪ್ಪ ನುಣ್ಬೊಗರದೆತ್ತಂ ಪರ್ವಿ ಕಾರ್ಮಿಂಚಿನಂ
ತಿರೆ ಬಿಲ್ಲಾಳ್ಗಳ ಬಲ್ಸರಂ ದೆಸೆಗಲಂ ತಳ್ಪೊಯ್ಯೆ ಮಾಱಾಂತ ಬೀ
ರರ ಸೊರ್ಕೊಮೊದಲ್ಗೋಡೆ ಬಂದುದಳವಿಂಪಾಡಿಂತು ಮುಕ್ಕಣ್ಣನಾ ೧೯೪

ಕೆಲಬರ್ ಬಟ್ಟೆಯ ಬೆಟ್ಟನಾರ್ದೊಡೆದು ಸೆಂಡಾಡುತ್ತು ಮೆಕ್ಕೆಕ್ಕೆಯಿಂ
ಕೆಲಬರ್ ಸಿಂಗಮನೊತ್ತಿ ಪಲ್ಲಣಿಸಿ ಬಲ್ಪಿಂದೇಱುತುಂ ಬೇಗದಿಂ
ಕೆಲಬರ್ ಪೆರ್ಚಿದ ನೇಸಱಿಂ ನೊಣೆಯುತುಂ ಕೈ ನೀಡಿ ಮುನ್ನೀರ್ಗಳಂ
ಕೆಲಬರ್ ಪೀರ್ದರೆ ಮಾಡುತುಂ ನಡೆದರೆತ್ತಂ ಬೀರರಾ ಪಾಡಿಯೊಳ್ ೧೯೫

ಪೊಡವಿ ನಿಲಲಾಱದೊಲೆದೋ
ಗುರ್ಡಿಸುಗುಮೆಂದಲ್ಲಿ ಬೆಟ್ಟನಿಟ್ಟಾರ್ಪಿಂದಂ
ಪಿಡಿದೆಣ್ದೆಸೆಯಾನೆಗಳಂ
ಕಡುನಲವಿಂದೇಱಿ ಬರುತುಮಿರ್ದರ್ ಕೆಲರ್ ೧೯೬

ಬಿಸುಪಮರ್ದ ನೊಸಲ ಕಣ್ಣುಂ
ತಿಸುಳಂಗಳನಾಂತ ಕೈಗಳುಂ ನೋಟ್ಪರನಂ
ಜಿಸೆ ನಡೆತಂದರ್ ಕೆಲಬರ್
ಪೆಸರಾಳ್ಗಳ್ ಬೆಟ್ಟನಣ್ಣೆಕಲ್ಲಾಡುತ್ತುಂ ೧೯೭

ತಕ್ಕಿನೊಳಾಂತಾ ಜವನೊಳ
ವೊಕ್ಕಮ್ಮೊಳ್ ಪೊಣರ್ದನಾದೊಡಂ ಮಿಗೆ ಸುಗಿವಂ
ತಿಕ್ಕುವವೆನುತ್ತೆ ಸಾಸಿಗ
ರೆಕ್ಕೆಕ್ಕೆಯಿನಿರದೆ ಕೆಲಬರಿದಿರೇಟ್ಟಿಂದರ್ ೧೯೮

ಅಂತಾಗಸಮಿಾಂದುಂತೆಯುಮೆಳೆ ಬೆಸಲಾದಂತೆಯುಂ ಮುನ್ನೀರ್ ಮೇರೆವರಿದಂತೆಯುಂ ನಡೆದು ಭಂಡಣದೆಡೆಯೊಳ್ ತಂಡತಂಡದಿಂದೆಡ್ಡಮಪ್ಪಂತೊಡ್ಡಿ ನಿಲಲೊಡನೆ –

ಕಾಲಾಳ್ಗಳ ತೇರ್ಗೊಡೆಯರ
ಮೇಲಾಳ್ಗಳ ಜೋದರುಲಿಗಳೆಣ್ಬುಂ ದೆಸೆಯೊಳ್
ಕಾಲೂಱಿ ತಕ್ಕು ನಿಂದುದು
ಮೇಲೊಡ್ಡಿದುದ್ಯದೆ ಬಂದ ಮಾರ್ಪಡೆಯನಿತುಂ ೧೯೯

ಕುಱುಪಿನ ಮಾಣಿಕವರಿಗೆಯ
ತೆಱಪುಗಳೊಳ್ ಪೊಳೆವ ಬಾಲ ಬೆಳ್ವೆಳಗಂದೇಂ
ಮೆಱೆದುವೊ ಕೆಮ್ಮುಗಿಲೆಡೆಯೊಳ್
ಮಿಱುಗುವ ಮಿಂಚೆಂಬ ತೆಱದಿನೆರಡುಂ ಪಡೆಯೊಳ್ ೨೦೦

ಪಡೆಯಿಂದಮೊಗೆದು ಪರ್ವಿದ
ಪುಡಿ ಮೆಯ್ಯಂ ಪತ್ತೆ ಪೋಗಿ ಬಾಂದೊಱೆಯಂ ಪೊ
ಕ್ಕಡಿಗಡಿಗೋಲಾಡುವವೊಲ್
ಕಡುನೆಗೆದೊಪ್ಪಿದುವು ಮಿಳಿರ್ವ ಕೆಂಬಟವಿಗೆಗಳ್ ೨೦೧

ಪೊಸಪಸಗೆಯ ಮಂಜಿಟಿಗೆಯ
ಮಿಸುಗುವ ದೋರಿಯದ ಪಟೆಯ ಪುಲ್ಲಿಯ ಸೊಂಪಂ

ಪಸರಿಸಿದ ಪಕ್ಕರಕ್ಕೆಗ
ಳೆಸೆದಿರ್ದುವು ತರದಿನೊಡ್ಡಿದೆರಡುಂ ಪಡೆಯೊಳ್ ೨೦೨

ಬೆಚ್ಚಂತಾನೆಯ ತಟ್ಟಿನೊ
ಳಚ್ಚರಿಯಿಂ ತಳೆದ ಱೆಂಚೆಯಂಗಳ್ ನಡೆನೋ
ಟ್ಟಿಚ್ಚಿಗೆ ಚೆಲ್ವಂ ಬೀಱಿದು
ವಚ್ಚರಸಿಯರೇಱಿ ಬಂದ ಪಾಱಿನ ತೆಱದಿಂ ೨೦೩

ಪರಿಗೆಗಳಲ್ಲಿ ಕೀಲಿಸಿದ ಗೆಜ್ಜೆಯ ಬಚ್ಚಣೆವೆತ್ತ ಬಿಲ್ಗಳ
ಚ್ಚರಿಗೆಡೆಯಾದ ಕನ್ನಡಿಯ ಕೂರ್ಪಿನ ಡೊಂಕಣೆಯಲ್ಲಿ ಜುಂಜಿನಂ
ತಿರೆ ಮಿಳಿರ್ದಾಡುತಿರ್ಪ ಪೊಸಚೌರಿಯ ದಿಟ್ಟಿಗಳುಳ್ಕೆ ಮಿಂಚು ಬಿ
ತ್ತರಿಸುವ ತೋಳ ಬಾಳ ಪರಿ ನಾಡೆಯುಮೊಪ್ಪಿದುದಿರ್ವಲಂಗಳೊಳ್ ೨೦೪

ಆಗಳೆರಡುಂ ಪಡೆಯೊಡೆಯರ್ ಕಾದುವ ಪೋಟ್ಟಱಿದು ಕಡು ಮುಳಿದು ಕೈಯ ಕುಂಚಮಂ ಬೇಗ ಬೇಗಂ ಬೀಸಲೊಡನೆ-

ತಡಿಮೀಱಿ ಬಂದು ತೆಂಕಣ
ಬಡಗಣ ಕಡಲೊಂದನೊಂದು ತಾಗುವ ತೆಱದಿಂ
ಬಿಡೆ ಗಜಱಿ ಮಿಕ್ಕುಂ ತಕ್ಕಿಂ
ಪಡೆಯೆರಡುಂ ದೆಸೆಗೆ ಮಸಗಿ ತಾಗಿದುದೆತ್ತಂ ೨೦೫

ಆಗಳಾಗಸಕ್ಕೆ ನೆಗೆದು ಪರ್ವಿದ ದೂಳಿಗಟ್ಟಲೆಯೊಳ್ ತಂತಮ್ಮ ಪಿಡಿದ ಬಾಳ್ವೆಳಗಿಂ ಮಾಱೊಡ್ಡಂ ಕಂಡು ಕಾಲಾಳ್ ಕಾಲಾಳ್ಗಳೊಳ್ ಕುದುರೆಗಳ್ ಕುದುರೆಗಳೊಳ್ ತೇರ್ಗಳ್ ತೇರ್ಗಳೊಳ್ ಆನೆಗಳಾನೆಗಳೊಳೋವದೆ ಕಾದಿ ಮೆಯ್ಯೇರ್ಗಳಿಂ ಜುಮ್ಮನೆಚ್ಚು ಪಾಯ್ವ ಪೊಸನೆತ್ತರಂ ನೆಗೆದ ದೂಳಿಯಿಂ ನಂದಿಸಿ ಪೆಱದೆಗೆಯಲೊಡನೆ -

ಕಡು ನೆಗೆದಬ್ಬರಂ ಮೂೞಗಿನಂತಿರೆ ಬಿಲ್ಲೊಳಮರ್ಕೆವೆತ್ತ ಕ
ನ್ನಡಿಗಳ ಬಳ್ಳಿವೆಳ್ಪು ಕುಡುಮಿಂಚಿನವೋಲಿರೆ ಗಾಳಿವಟ್ಟೆಯೊಳ್
ನಡೆವನ ಕಾಯ್ಪು ತಣ್ಣಗಿರೆ ಕಾರ್ಮುಗಿಲೊಡ್ಡುಗಳಿಂತಿವೆಂಬಿನಂ
ಗಡಣಿಸಿ ಬಂದು ಕೋಲ ಮೞೆಯಂ ಕಱೆದರ್ಮಿಗೆ ಬಿಲ್ಲ ಬಲ್ಲಹರ್ ೨೦೬

ಮಸಗಿ ಕವಿದಾರ್ಪಿನಿಂ ಬ
ಗ್ಗಿಸಿ ನಾಲ್ಕುಂ ದೆಸೆಗೆ ಸರಲ ಸರಿಯಂ ಸುರಿವಂ
ತಿಸುವವರ್ಗಳ ಕೈಯೊಳ್ ನಿ
ಟ್ಟಿಸಬಾರದು ತುಡುವ ಬಿಡುವ ಪವಣಂತಾರ್ಗಂ ೨೦೭

ತಪ್ಪದೆ ನಟ್ಟಲಗಿಂದಂ
ತೊಪ್ಪನೆ ಕರುಳೊಕ್ಕು ಬೇಗದಿಂದಂ ನೆಲದೊಳ್
ಕುಪ್ಪಳಿಸಿದೊಡಂ ಬೀೞದೆ
ಚಪ್ಪರಿಸುತ್ತೆಚ್ಚರೆಕ್ಕೆಯಿಂ ಬಿಲ್ಲಾಳ್ಗಳ್ ೨೦೮

ಕಣೆ ತೀರೆ ಕಟ್ಟಿದಲಗಿಂ
ಮಣಿಯದೆ ಕೀಱ್ಕೈದುಗೊಂಡು ಕಡು ಮುಳಿಸಿ ಬಿ
ಲ್ಲಣಿ ತಳ್ತಿಱಿಯುತ್ತಿರ್ದುದು
ಖಣಿಲೆನೆ ತಲೆಪಱಿದು ಪೊಡವಿಯೊಳ್ ಬೀೞ್ವನೆಗಂ ೨೦೯

ಪೊಡೆದಾಡುತೊರ್ಮೆ ಬಿಲ್ವಡೆ
ಪಡಲಿಡೆ ಕಂಡಾರ್ದು ಪರಿಗೆಕಾಱರ ತಂಡಂ
ನಡೆದು ಪಳಂಚಿದುದುರಿದಾ
ಗಡೆ ಮುಗಿಲೊಂದೊಂದಱೊಳ್ ಪಳಂಚುವ ತೆಱದಿಂ ೨೧೦

ತೊಲಗದ ಕಂಬದಾನೆಯ ಪಸುಂಬನ ಪಕ್ಕಿಯ ಸೂಲ ಸೂಲದಿಂ
ಗಿಲಿತದ ಗಂಡಗತ್ತರಿಯ ಗೂಳಿಯ ಪಂದಿಯ ಪೊನ್ನ ಬೀರಸಂ
ಕಲೆಯ ತೋಳಪ್ಪ ಕನ್ನಡಿಯ ಚಿನ್ನಡಿಯಡ್ಡಣವೆಡ್ಡಮಾಗೆ ಮೂ
ದಲಿಸಿ ಪೊಡರ್ಪು ಪೆರ್ಚಿ ಕೆಲರುರ್ಕುಡಿಗಳ್ ತಱಿಸಂದು ಕಾದಿದರ್ ೨೧೧

ಕಡುಗದ ಪೊಯ್ಲಿಂದಂ ಕಾ
ಲಡಿಗಳ್ ಕಡಿಯಾಗೆ ನೀಡಿದುಪ್ಪರವೊಯ್ಲಿಂ
ಪೊಡವಿಗೆ ಬೀೞ್ತರೆ ತಲೆಸೊ
ರ್ಕಡಗದೆ ಕೆಲರಿಱಿದು ಬೀರಸಿರಿಯೊಳ್ ನೆರೆದರ್ ೨೧೨

ಅಂತು ಪೂಣ್ದು ನುಡಿದು ಪೆಱದೆಗೆಯದೆ ಪೊಕ್ಕು ಬೆರಸಿ ಸಣ್ಣ ನಾದ ಪೇರಱಿಕೆಯ ಪರಿಗೆಕಾಱರಂ ಕಂಡು –

ಬಿಱುವರಿಯ ಬೇಗದಿಂದಂ
ಕುಱುಪಿನ ಪಟಿಯಿಗೆಗಳೊಲೆಯೆ ಪೆರ್ಗಡಲೆಡೆಯೊಳ್
ನೆಱೆ ನಾವೆ ತಾಗುವಂದದೆ
ತೆಱಪಿಲ್ಲದೆ ತೇರ್ಗಳೊಡ್ಡು ತಾಗಿದುದಾಗಳ್ ೨೧೩

ತೇರೊಳಗಿರ್ದು ನಾಡೆಱೆಯರೆಚ್ಚರಲಂಬಿನ ಸೋನೆ ಸುತ್ತಲುಂ
ಭೋರೆನುತೊರ್ಮೆ ಸೈಗಱೆಯೆ ತೊಟ್ಟನೆ ಪರ್ವಿದ ಮರ್ವಿನಿಂದ ಮಾ

ತಾರಗೆವಟ್ಟೆಯಂ ದೆಸೆಗಳಂ ನೆಲನಂ ಕಡಲಂ ಬನಂಗಳಂ
ಕಾರಿರುಳ್ಳಿದೆ ನುಂಗಿದವೊಲಾದುದು ಕಾಳೆಗಮೇನಳುಂಬಮೋ ೨೧೪

ತೇರೊಳ್ ಪೂಡಿದ ತೇಜಿಗಳ್ ಸರಲ ಕೂರ್ಪಿಂಗಳ್ಕಿ ಪಿಮ್ಮೆಟ್ಟೆ ಕೆ
ನ್ನೀರೇಱಿಂದೊಗೆದೆಚ್ಚು ಪಾಯೆ ಪೊಡೆವಾತಂ ಜೋಲ್ದು ಕೈಗುಂದೆ ಕಂ
ಡಾರುತ್ತುಂ ಮುಳಿದೊತ್ತಿ ನೂಂಕಿ ಕಣೆಯಂ ಬಿಲ್ಲಂ ಬಿಸುಟ್ಟೆಕ್ಕೆಯಿಂ
ಕೂರಾಳೊಳ್ ತಲೆಯೊತ್ತಿ ಕಟ್ಟಿದಲಗಿಂದಂ ಕುತ್ತಿ ಮೈಯಿಕ್ಕಿದರ್ ೨೧೫

ತೇರ್ಗಳ ಗೊಂದಣಂ ಮುಱಿದು ಮೆಟ್ಟಿದ ಕೊಂಬುಡಿದಂತೆ ಬೇಗದಿಂ
ನೆರ್ಗನೆ ಬಿಟ್ಟು ನುಚ್ಚುನುಱಿಯಾಗೆ ಕನಲ್ದಳವಿಂದೆ ಮಾಱಿ ಕೆ
ನ್ನೀರ್ಗಳ ಕಾಟಿಕ್ಪೊನಲ್ ಮಸಗಿ ಕೂಡೆ ಪೆಣಂಗಳನೆತ್ತಿ ಗುಂಪಿನಿಂ
ಭೋರ್ಗರೆದೆತ್ತಲುಂ ಪರಿಯೆ ಗೋಟಿಯಿಲರ್ ಕಡುಕೆಯ್ದು ಕಾದಿದರ್ ೨೧೬

ಮುಳಿಸಿಂದಂ ಕಿಟ್ಟು ಬಾಳಂ ಜಡಿದಳವಿಯನಾರಯ್ದು ಝಾರೇ ಜಝಾರೇ
ಹಳುರೇ ಹೋಹೋ ಮಝಾ ಎಂಬುಲಿ ನೆಗೆವಿನೆಗಂ ಬಿಟ್ಟು ಮಾಱಾಂತ ಮೇಲಾ
ಳ್ಗಳನಾಗಳ್ ತಳ್ತು ಪೊಯ್ದಾರ್ದಿಟಿಪಿ ಕುದುರೆಯಂ ಕೊಂಡು ತಮ್ಮೊಡ್ಡಿನೊಳ್ ಕ
ಣ್ಗೊಳಿಪನ್ನಂ ಪೊಕ್ಕು ಗೆಲ್ಲಬಡೆದರದಟನಿಂ ರಾಯ ರಾವುತ್ತರಾಗಲ್ ೨೧೭

ಇಕ್ಕಿದ ಸೀಸಕಂ ಪಱಿದು ನೆತ್ತಿ ಸಿಡಿಲ್ದೊಡೆದೊಂದೆ ಗಾಯದಿಂ
ಚಕ್ಕನೆ ಭೋಂಕನೆಟ್ಟು ಮಿಗೆ ಬೆನ್ನೊಳಮರ್ಚಿದ ಪೊನ್ನ ಪಲ್ಲಣಂ
ಪಕ್ಕರೆ ತೇಜಿವಾರು ಕಟಿದಿರ್ಕಡಿಯಾದುವು ಬಾಳ ಬಾಯೊಳಿಂ
ತಕ್ಕುಮೆ ತೋರ ತಕ್ಕಿದೆನೆ ಗೋಟಿಯಿಲರ್ ಕೆಲರಲ್ಲಿ ಕಾದಿದರ್ ೨೧೮

ತೊಟ್ಟನೆ ಪೊಂದಿದ ಕುದುರೆಯ
ತಟ್ಟಂ ಕಂಡಣೆದು ನೂಂಕಿ ಬಲ್ಮಾವಂತರ್
ಬಿಟ್ಟಕ್ಕಿದರಾನೆಗಳಂ
ಬೆಟ್ಟುಗಳೊರ್ಮೊದಲೆ ಮಸಗಿ ಕವಿದವೊಲೆತ್ತಂ ೨೧೯

ಕೋಲ್ಗಾರೊಳ್ ಸುರಿವಾಲಿವ
ರಲ್ಗಳವೊಲ್ ನೆತ್ತಿಯಡೆಯ ಮುತ್ತುಗಳೆತ್ತಂ
ಗಲ್ಗಲನೆ ಸುರಿಯೆ ಜೋದರ್
ಬಲ್ಗಣೆಯಿಂದೆಚ್ಚರದಟನಿಂದಾನೆಗಳಂ ೨೨೦

ಜಾಱಿದೆ ತನ್ನಾನೆಯಿನಾ
ಮಾಱಾನೆಯ ಕುಂಬತಳಕೆ ಪಾಯ್ದಳವಿಂ ಕೈ

ದೋಱ್ ಮಱುವಾನಿಸಂ ಮೆ
ಯ್ಯೇಱಿಂ ಕಂಡಗಿದು ಜೋಲೆ ಕೊಂದನದೊರ್ವಂ ೨೨೧

ಅಣೆದುದುಕೊತ್ತಿ ನೂಂಕಿದುದು ಪೊಕ್ಕೊಡನಿಕ್ಕಿದುದೇಱಿಬಾಯ್ಗಳಿಂ
ನೆಣನುಗೆ ನೆತ್ತರುಚ್ಚಳಿಸೆ ಜಾದಿನ ಬೆಟ್ಟು ಮಗುಳ್ಚುವಂತೆ ಬಂ
ಡಣದೆಡೆಯೊಲ್ ಪೊಣರ್ವ ಪಲವಾನೆಗಳಂ ಕೆಡಪಿತ್ತದೊಂದು ಮ
ನ್ನಣಾವಡೆದಾನೆ ಬೊಬ್ಬಿಱಿಯೆ ತನ್ನಯ ಮೇಗಣ ಜೋದನಾರ್ಪಿನಿಂ ೨೨೨

ತಲೆಗಳ ಬಟ್ಟಲಿಂ ಮೊಗೆದು ನೆತ್ತರನಾಗಳೆ ಈಂಟಿಯಿಂಟಿ
ಮೆಯ್ಗಲಿಗಳ ಕಂಡದಿಂಡೆಗಳ ಬಕ್ಕಣಮಂ ತವೆ ಮೆಲ್ದು ಮೆಲ್ದುಮೆ
ಯ್ಯೊಲೆದುಡೆ ಜೋಲ್ದು ನಾಣಱಿದು ಕಣ್ ನಸು ಮುಚ್ಚಿರೆ ತೇಗಿ ತೇಗಿ ಮಾ
ರ್ಮಲೆದಿದಿರಾಗಿ ಕೈಪಱಿಯೊಳಾಡುವ ರಕ್ಕಸಿಯರ್ಕಳೊಪ್ಪಿದರ್ ೨೨೩

ಅಂತು ನೋಟ್ಪರ ಕಣ್ಗೆ ಕೊಕ್ಕರಿಕೆಯಾದಾನೆಗಾಳಗದೊಳ್ ನಿಲ್ಲದೆ ತಲ್ಲಣದಿಂ ಪೆಱದೆಗೆವ ಬಿದಿವೆಡಂಗನೆಂಬ ಬಿಂಜಮಾಣಿಕನೆಂಬ, ಹರಿರಾಯನೆಂಬ, ತೋರಹತ್ತನೆಂಬ, ಚೌವಟಮಲ್ಲನೆಂಬ, ಮುಱಿವ ರಕ್ಕಸನೆಂಬ, ರಾಯದಟಸೂಱೆಕಾರನೆಂಬ, ತನ್ನೊಡ್ಡಿನ ಪೇರಾನೆಗಳಂ ಕಂಡು ಕಡು ಮುಳಿದು ಬಿಸುಗಣ್ಣೊಳೊಗೆದ ಬೀರಂ ಕೂರಾಳ್ಗಳಂ ಕೂಡಿಕೊಂಡಲಗನುಗಿದು ಗಿಱ್ಱನೈತಂದಾ ನನೆವಿಲ್ಲ ಬಲ್ಲಹನ ಪಾಡಿಯಂ ಕೂಡೆ ಪಾಡಱಿಯೆ ನೀಡುಂ ಮುಱಿವಾಗಳ್ –

ಕಟ್ಟಿದಿರೊಳಾಂತರಂ ನೆಱೆ
ನಿಟ್ಟಿಸಿ ನನೆವಿಲ್ಲ ಬಲ್ಲಹಂ ಮಾಱಣಿಯಂ
ನೆಟ್ಟನೆ ತೋಳ್ವಲದಿಂದೆ
ಟ್ಟಿಟ್ಟಿದನವನಿದಿರೊಳಾವನುಂ ನಿಂದಪನೇ ೨೨೪

ಅಂತು ಕೈಕೊಳ್ಳದೆ ಬೆಂಬತ್ತಿ ತೇನ ತೇನಂ ಮಸಗಿ ಸಂದಣಿಸಿ ಬರ್ಪ ಸೋರ್ಕಾನೆಗಳ ಕಾಲ್ವೊಱಗೆ ನೆಲನೊಂದೆಸೆಗೊಲೆದು ಜಾಱುಂಗಲ್ಲಂತೆ ತೋಱಿಯುಂ, ಮುಗಿಲಂ ಮುಂಡಾಡುವಂತಿರುದ್ದಮಾದ ಪಲತೆಱದ ಕುಱುಪಿನ ಮಿಳಿರ್ವ ಪಟಯಿಗೆಗಳ ಗಾಳಿ ಗಾಳಿವಟ್ಟೆಯೊಳ್ ನಡೆವ ಪಗಲೊಡೆಯನ ಕುದುರೆಯ ಸೇದೆಯಂ ಪಿಂಗಿಸೆಯುಂ, ತಟ್ಟೊಡೆಯದೆ ತೆರಳ್ವ ತೇಜಿಗಳ ಕಾಲ ದೂಳಿ ನೆಗೆದು ಕೊಳುಗಳದೊಳ್ ಪಸರಿಸಿ ಬೀರರನರಸುವಚ್ಚರಸಿಯರಂ ಪೊಲಂಬುಗಿಡಿಸೆಯುಂ, ಕಾಲಾಳ್ಗಳಬ್ಬರಕ್ಕೆ ತಾಯ್ಮಟಿಲ್ದೋಱ ಮೇರೆದಪ್ಪಿದ ಮುನ್ನೀರೊಳ್ ಕಡಲೊಡೆಯನಟ್ಟಿಡಂಗೆಯುಂ, ಜವನಮಂತಣ ಸೂಲದಂತೆ ನೆಗೆದ ಕೊಂತದ ಕೂರ್ಮೊನೆಯ ಕೋಲಾಟಕ್ಕೆ ತಾರಗೆವಟ್ಟೆಯೊಳ್ ನಡೆವ ಬಿಜ್ಜೋದರಿಯರ್ ಪುಗಲಱಿಯದೆ ಸಿಡಿಮಿಡಿಗಳೊತ್ತಿರೆಯುಂ, ತೆಱಪುಗುಡದೆ ಸೂಟ್ಕೆಸುವ ನಿಸ್ಸಾಳದ ಬಲ್ಸರಕೆ

ದೆಸೆವಟ್ಟುಗಳ್ ನಿಬ್ಬರಂ ಬಿರಿಯೆಯುಂ, ಬೇಗದಿಂ ನಡೆದೆತ್ತಿ ಬಂದು ಮಂಜುವೆಟ್ಟಮಂ ಮೂವಳ ಸಾಗಿಮುತ್ತಿದಾಗಳ್ -

ನನೆವಿಲ್ಲಾತನ ಮುಕ್ಕ
ಣ್ಣನ ತಕ್ಕಂ ನೋಡನೇಱುಮೆಂದೊಲವಿಂದಂ
ತನ ತನಗೆ ಬಂದು ಮುಗಿಲೊ
ಡ್ಡಿನ ಕೆಲದೊಳ್ ಸಗ್ಗದವರ್ಗಳೆಲ್ಲರ್ ನಿಂದರ್ ೨೨೫

ಕೋವಣಮುಂ ಗುಂಡಿಗೆಯುಂ
ನೇವರಿಸಿದ ಬೂದಿಯುಂ ಜಲಕ್ಕನೆ ಚೆಲ್ವಿಂ
ತೀವಿರೆ ಬಿಸುಗಣ್ಗೊರವಂ
ಕಾವನ ತೋಳ್ವಲಮನಱವೆನೆಂದೇಱಂದಂ ೨೨೬

ಮಿಸುಗುವ ನಾಲ್ಕುಂ ಕೋಡಿಂ
ದೆಸೆವಾನೆಯನೇಱ ಪಿಡಿದ ಬೆಳ್ಗೊಡೆ ಸಸಿಯಂ
ಮಸುಳಿಸೆ ಬಂದಿರ್ದಂ ಪಾ
ಡಿಸುತುಂ ಪೆಸರ್ವಡೆದ ಗಾಣರಿಂ ಪಲಗಣ್ಣಂ ೨೨೭

ತೊಳಗುವ ಸಂಕುಂ ಪಾಱುಂ
ಬಳೆ ನೇರ್ಪಡೆ ಪರ್ದನೇಱ ಬಂದೊಲವಿಂ ಪ
ಜ್ಜಳಿಪ ಮುಗಿಲೆಡೆಯೊಳಿರ್ದಂ
ತಳತಳಿಸುವ ತೊಡವನಾಂತು ಸಿರಿವೆಣ್ಣರಸಂ ೨೨೮

ಕರಮೊಪ್ಪುವೆಣ್ಬು ತೋಳುಂ
ಬರಿವೂವಂ ನಗುವ ನಾಲ್ಕು ಮೊಗಮುಂ ಚೆಲ್ವಿಂ
ಪೊರೆಯೇಱರೆ ಬಂದಿರ್ದಂ
ಸರಸತಿವರನಂಚೆಯೇಱ ನಲವಿಂ ಬೊಮ್ಮಂ ೨೨೯

ಅನ್ನೆಗಮಿತ್ತಲ್ -

ಕೆಟ್ಟೋಡಿ ಪಾಡಿಯೆಲ್ಲಂ
ಪಿಟ್ಟುಂ ಪಿಟ್ಟಾಗಿ ಪೋದೊಡಂ ಬಗೆಯದೆ ಕ
ಣ್ಗೆಟ್ಟಳವೆನಿಸಿದ ಬೆಳ್ಳಿಯ
ಬೆಟ್ಟನೆ ಪೆಱದೆಗೆಯದೀಸನೋರ್ವನೆ ನಿಂದಂ ೨೩೦

ಅದುಂ ಕುಂಡು ಕುಂಗನೆ ಕನಲ್ದು ಮುಟ್ಟೆವಂದು ಮೂದಲಿಸಿ ನನೆವಿಲ್ಲ ಬಲ್ಲಹನಿಂತೆಂದುಂ -

ಕಡುಪಿಂ ಪೂವಿನ ಕೋಲ್ಗಳ್
ಗಡಣಿಸಿ ಕವಿತಂದು ನಾಂಟುವಾಗಳ್ ನಿನ್ನೀ
ಜಡೆಯುಂ ತೊವಲುಂ ಪಾವಿನ
ತೊಡವುಂ ಲಾಗುಳಮುಮಡ್ಡಮೇಂ ಬಂದಪುವೇ ೨೩೧

ನಿನ್ನಗ್ಗದ ಪಡೆಯೆಲ್ಲಮ
ದೆನ್ನಯ ಪೂಗಣೆಯ ಕೊಲೆಗೆ ಗುಱಿಯಾದುದು ಕೇಳ್
ಇನ್ನಾದೊಡಮೆಳವೆಱೆಯಂ
ಕೆನ್ನಂ ಪಿಡಿದಿರದೆ ಬಿಟ್ಟು ಬಾೞ್ ಬಡಗೊರವಾ ೨೩೨

ಎಡಗೈಯೊಳೊತ್ತಿ ಬಿಲ್ಲಂ
ಪಿಡಿದೊಯ್ಯನೆ ತೀಡಿಗೊಣೆಯುಮಂ ಕಡುಪಿಂ ಜೇ
ವೊಡೆವಾಗಳ್ ನೆಲನನಿತುಂ
ನಡುಗುವುದೆಲರ್ವೊಯ್ಲನಾಂತ ತಾವರೆಯಲೆವೋಲ್ ೨೩೩

ಬಿರಯಿಗಳಂಜೆ ಕೂಡದರ ಕಲ್ಲೆರ್ದೆ ಪವ್ವನೆ ಸೀೞ್ಬಿರ್ಚಿದೋ
ಪರ ಕುಡುಸೊರ್ಕು ಮೆಯ್ದೆಗೆಯೆ ಪಿಂಗಿದ ನೀಱರ ಬಲ್ಪು ಪಾಱೆಪಾ
ದರಿಗರನಾಣ್ಗೆಳುರ್ಕುಗಿಡೆ ಬಲ್ಮೆಸಿಂದಮಗಲ್ಕೆವೆತ್ತ ನ
ಲ್ಲರ ಬಗೆ ಬಳ್ಕೆ ಜೇವೊಡೆಯ ಬಲ್ಲುಲಿ ನೀಳ್ದುದು ಕರ್ವುವಿಲ್ಲನಾ ೨೩೪

ಬಿಸುಗದಿರನ ಕಡುಗಾಯ್ಪುಂ
ಮಸುಳಿಸಿದುವು ತುಱುಗಿ ನೆಗೆದು ನಾಲ್ಕುಂ ದೆಸೆಯಂ
ಮುಸುಕಿದುವು ಮುಳಿದರಂ ಜಂ
ಕಿಸಿದುವು ಬಿಡದಾರ್ದು ಕಾವನೆಚ್ಚಲರ್ಗಣೆಗಳ್ ೨೩೫

ಚಲದಿಂ ಕಾವಂ ತೆಗೆದ
ಚ್ಚಲರಂಬೆಡೆಗೊಂಡು ತೊಱೆಗಳುಂ ಬೆಟ್ಟುಗಳುಂ
ಪೊಲನುಂ ಬಾನುಂ ದೆಸೆಯುಂ
ಜಲಕ್ಕನಲರಿಂದೆ ಸಮೆದವೋಲಾಯ್ತೆತ್ತಂ ೨೩೬

ಇವು ಮುನ್ನಾರಾರ ಬಲ್ಪಂ ನೆಲೆಗಿಡಿಸವಿವಾರಾರ ತಕ್ಕಂ ನೆಲಕ್ಕಿ
ಕ್ಕವಿವಾರಾರುರ್ಕನೊತ್ತಂಬರಿದು ಕಿಡಿಸವಾರಾರ ಕಾಯ್ಪೆಲ್ಲಮಂ ನೂಂ

ಕವಿವಾರಾರೇಟಿಗ್ಗಿಯಂ ಕುಂದಿಸಿ ಕಳಿಯವಿವಾರಾರಕಲ್ಮೆಯ್ಗಳೊಳ್ ನಾಂ
ಟವೆನುತ್ತಂತೆಲ್ಲರುಂ ಬಾಯ್ವಿಡೆ ಗಡಣದೆ ಪೂಗೋಲ್ಗಳೈತಂದುವಾಗಳ್ ೨೩೮

ಅದಟರ್ ಬಾಯ್ಬಿಡೆ ಬಲ್ಲಿದರ್ ಪೆಳರೆ ಗಂಡರ್ ಜಾಱಿ ಕೈಕೊಳ್ಳದ
ಗ್ಗದ ಬೀರರ್ ತೆಗೆದೋಡೆ ತೋರಱಿಕೆಯಾಳ್ಗಳ್ ಬಳ್ಕಿ ಬೆಂಬೀಟಿ ಪೆ
ರ್ಚಿದ ಕಂಪಿಂಗಳೆಸಿರ್ಪ ತುಂಬಿಕರಿಕಂ ತಾಗಿರ್ಪಿನಂ ಬಂದುದೊ
ರ್ಮೊದಲೊಳ್ ಮಾವಿನ ಬಳ್ಳಿ ಮಲ್ಲಿಗೆಯ ಕೋಲೆತ್ತೆತ್ತಲುಂ ಕಾವನಾ ೨೩೯

ಕಣೆ ಕಣೆಯನುಗುಳ್ವ ತೆಱದಿಂ
ಕಣೆ ಕಣೆಯಂ ಕಱಿವ ತೆಱದಿನೆಂಟುಂ ದೆಸೆಯೊಳ್
ಕಣೆ ಕಣೆಯನೀಂಬತೆಱದಿಂ
ಪಣೆದರನಗಿದಳರೆ ಕವಿದುವಾಗಳ್ ಕಣೆಗಳ್

ಮುಗಿಲೆಡೆಯಲ್ಲಿ ಬಂದು ಸುಟಿದಾಡುವ ಪೆಣ್ದಿರ ಕಣ್ಣ ಬೆಳ್ಪೊ ತಾ
ರಗೆಗಳ ನೀಳ್ದ ನುಣ್ಬೆಳಗೊ ಮಿಂಚಿನ ಗೊಂಚಲೊ ಹಾದಿಗೆಟ್ಟು ತೊ
ಟ್ಟಗೆ ನೆಗೆತರ್ಪನುಣ್ಗದಿರೊ ಪೇಟಿನೆ ನೋಟ್ಪರ ಕಣ್ಗೆ ಸುತ್ತಲುಂ
ಸೊಗಯಿಸಿ ಮೇಲೆ ಮೇಲೆ ಕವಿತಂದುವು ಭೋಂಕನೆ ಪೂವಿನಂಬುಗಳ್ ೨೪೦

ಗಡಣದೆ ಮಾದೇವಿಯ ಬಗೆ
ಯೊಡೆಯನ ನೊಸಲೊಳ್ ಕದಂಪಿನೊಳ್ ಕೈಮೊಗದೊಳ್
ತೊಡೆಯೆಡೆಯೊಳ್ ತೋಳೆಡೆಯೊಳ್
ಬಿಡೆ ನಟ್ಟುವು ಕಾವನಂಬುಗಳ್ ತಾವೈದುಂ ೨೪೧

ಕಟ್ಟಾಳ್ಗಳೆನಿಪ ರಕ್ಕಸ
ರೊಟ್ಟಜೆಗೆಟ್ಟಟಿಲೆ ಸಗ್ಗಿಗರ್ ನೆಲನನೊಡಂ
ಬಟ್ಟಿರೆ ಕಾಳೆಗದೆಡೆಯೊಳ್
ತೊಟ್ಟನೆ ಮಾದೇವಿಯರಸನರೆವೆಣ್ಣಾದಂ ೨೪೨

ಮೊರೆದಾಡುವ ಮಱಿದುಂಬಿಯ
ನೆರವಿಗಳೈತಂದು ಮುಸುಱಿ ಪೊಸಗಂಪನುಣು
ತ್ತಿರೆ ಕಾವನ ಮೇಲಂದ
ಚ್ಚರಸಿಯರಿಚ್ಚೆಯೊಳೆ ಮುಗುಳೆ ಮಟಿಯಂ ಕಱಿದರ್ ೨೪೩

ಅದಂ ಕಂಡು ಕಡುಮುಳಿಸೆಂಬ ಕಿಚ್ಚಿನ ಕರ್ಬೇಗೆಯಂತಗುರ್ಬುವಡೆದು ನೊಸಲೊಳ್ ಗಂಟಿಕ್ಕಿದ ಪುರ್ಬುಗಳಂ, ಆ ಕಿಚ್ಚಿನ ನಾಲಗೆಯಂತೆ ಕೆಂಪಡರ್ದ ಕಣ್ಗಳುಂ ಪೊಱಮಡುವ

ಸಾಪದಕ್ಕರದ ಪೊಯ್ಲಿಂಗೆ ನಡುಗುವಂತೆ ಕೆತ್ತುವ ತುಟಿಯುಂ, ಪರ್ಬುವ ಕನಲ್ಕೆಯೆಂಬ ಬಳ್ಳಿಕೂರ ದಂಟಾದಂತೆ ಪಿಡಿದ ಲಾಗುಳಮುಂ ಅಂಜಿಕೆಯಂ ಪುಟ್ಟಿಸೆ -

ಎರಗುವ ತುಂಬಿವಿಂಡಗಿಯೆ ಬಗ್ಗಿಪ ಕೋಗಿಲೆ ಕೊಂಬುಗೊಂಡು ಬ
ಳ್ಳುಱಿ ಮುಳಿದಡ್ಡವಾಯ್ದು ಗಿಳಿ ಮಲ್ಲಟಿಗೊಂಡೊಳಸಾರೆ ಮಾವು ಕೈ
ಮಱಿಯೆ ತೆರಳ್ದು ರೂವುಗಿಡೆ ತೆಂಬೆಲರಂಚೆಗಳೊಡ್ಡು ಪಾಱಿ ಬಾಂ
ದೊಱಿದಲೆಯಂ ಕನಲ್ದು ನಡೆತಂದು ಬಸಂತನ ಸೊರ್ಕು ಸೋರ್ವಿನಂ ೨೪೪

ಮುಂದೆ ನಿಂದು ಪಿರಿಯರೆಂಬುದಂ ಬಗೆಯದುರ್ಕಿಂದೆನ್ನೊಳ್ ಕಾದಿದೆ ಅಂತದಱಿಂ ನಿನ್ನೋಪಳಂ ಕೂಡದೆ ಪೆಱರಱಿಯದಂತೆಲ್ಲಿಯಾದೊಡಂ ನೀ ಕಾವನೆಂಬುದಂ ಮಱಿದಿರ್, ಎಂದು ಬೇಗದೆ ಪೂಗಣೆಯಂಗೆ ಸಾಪಮನಿತ್ತುದಂ ಬಸಂತನಿಂ ನೆಲೆವೀಡಿನೊಳಿರ್ದಿಚ್ಚೆಗಾರ್ತಿ ಕೇಳ್ದು ಮುಚ್ಚೆವೋಗಿ ಬಟಿಯಮೆಂತಾನುಮೆಚ್ಚತ್ತಿರಲೊಡನೆ-

ಪರಿಗಿಡೆ ಕಣ್ಣನೀರಱತುದೆಕ್ಕಸರಂಗಳ ತೋರ ಮುತ್ತುಗಳ್
ಪುರಿದವೊಲಾದುವಿಟ್ಟ ಸಿರಿಕಂಡದ ಬೊಟ್ಟು ಕಱಂಗಿ ಕಣ್ಗೆ ಕ
ತ್ತುರಿಯವೊಲೊಪ್ಪಿ ತೋಱಿದುದು ಸೂಡಿದ ಬಾಸಿಗಮಾಗಳಂತೆ ದ
ಳ್ಳುರಿ ತಗುಳ್ದಂದದಿಂ ಕಱಿದುದಾಕೆಯ ಮೆಯ್ಬಿಸುಪೇನಳುಂಬಮೋ ೨೪೫

ನೋಡಿದ ಮಾಮರಂ ಕೊರಗಿ ಸೀಕರಿವೋದುದು ಪೊಕ್ಕ ಪೂಗೊಳಂ
ಪಾಡಟಿದ್ದೆದೆ ಕಾಯ್ದು ಕುದಿಗೊಂಡುದು ನೀಳ್ದೊಗೆತರ್ಪ ಸುಯ್ಯೆಲ
ರ್ಗೂಡಿದ ಗಾಳಿ ಸೋಂಕಿದವರಂ ಸುಡುತಿರ್ದುದು ಪೊತ್ತ ಪೂತಳಿರ್
ಬಾಡಿ ಕಱಂಗಿ ಚುಯ್ಯೆನುತುಮಿರ್ದುವು ನೀಱಿಯ ಮೆಯ್ಯ ಬೆಂಕಿಯಿಂ ೨೪೬

ಮತ್ತಮೊರ್ಮೆ ಮಿಸುಪೆಸಳ ಪಸರದಿನೆಸೆವ ಪೊಸಪಸೆಯೊಳ್ ಮೈಯನೀಡಾಡಿ ಪೊಳೆವುವಡೆದ ಪಾಲ್ಗಡಲ ತೆರೆದುಱುಗಲೊಳ್ ಪವಡಿಸುವ ಸಿರಿಯಂ ಪೋಲ್ತಿರ್ಪಳ್; ಒಡನಾಡಿಗಳಡಿಗಡಿಗೆ ತಳಿವ ಪನ್ನೀರ ತುಂತುರ್ವನಿಗಳಿಂ ಪೊಸತಪ್ಪ ಕಾರಸಿರಿಯ ಪರಿಯಂ ಪಡೆದಂತಿರ್ಪಳ್; ಅಂದಂಬಡೆದ ಕೆಂದಳಿರ ಗೊಂದಣದೊಳೊಂದಿ ನಿಂದು ಸಂದಣಿಸಿ ನೆಗೆದ ಕೆಮ್ಮುಗಿಲ ನಡುವೆ ಪೊಳವೆಳವೆಱಿಯಂತಿರ್ಪಳ್; ನಳನಳಿಸಿ ಬೆಳೆದ ಬೆಳ್ದಾವರೆಯ ತೊಳಗುವೆಳದಾವರೆಯ ಬಳಗಮಂ ತಳೆದು ಪಾವಿನ ಪಚ್ಚದಿನಚ್ಚರಿವಡೆದ ಜೋಗಿಣಿಯಂತಿರ್ಪಳ್; ಮನ್ನಣೆವೆತ್ತ ಮೇಳದ ಕೆಳದಿಯರ್ಮಾಣದೆ ಮೇಲೆ ಮೇಲೆ ತಂದೊಟ್ಟಿದ ಸಿರಿಕಂಡದ ಕೋಟಿಕ್ಕೆಸಱಿಂ ಪುದಿದು ಜಂತದಿಂ ಕಡೆದು ಕಂಡರಿಸಿದ ಪುತ್ತಟಿಯಂತಿರ್ಪಳ್; ತಡಿ ತಡಿಯ ತೆಂಗಿನೆಳನೀರ ಕೂಡೆ ಕರೆಕಣ್ಮುವ ಕೊಳಂಗಳೊಳವೊಕ್ಕು ತಾವರೆಯ ಪಚ್ಚೆಲೆಯುಂ ಮೆಯ್ಯೊಳಾಂತು ನುಣ್ಣಿತಪ್ಪೆಳವಿದಿರ ಬಣ್ಣಮಂ ತಳೆದ ನೀರ್ವೆಣ್ಣಂತಿರ್ಪಳ್; ಅಂತುಮಲ್ಲದೆಯುಂ -

ಕುಳಿರ್ವ ಕೊಳಂಗಳೊಳ್ ಮಱಲ ದಿಂಟೆಗಳೊಳ್ ಸಮೆದಿರ್ಪ ಬೆಟ್ಟಿನೊಳ್
ಬೆಳೆದೆಳಮಾವಿನೊಳ್ ತಳಿರ ಕಾವಣದೊಳ್ ಪರಿತರ್ಪ ಕಾಲ್ಗಳೊಳ್
ಬಳಸಿದ ಬಳ್ಳಿ ಮಲ್ಲಿಗೆಯ ಮಂಡಪದೊಳ್ ಸುೞಿದಾಡಿ ಮತ್ತೆಯುಂ
ಕಳೆಯಲಿನಿತ್ತುಮಾಱಳವಳುರ್ಬಿದ ತನ್ನಯ ಮೆಯ್ಯ ಬೆಂಕೆಯಂ ೨೪೭

ಕೆಂದಳಿರ ಪೞಿವ ಪಾಸಿನೊ
ಳಂದಂಬಡೆದಿರ್ದ್ದಾರ್ತಿ ನನೆವಿಲ್ಲಂ ತಾ
ನೆಂದಿಂಗೆ ಬಂದು ಕೂಡುವ
ನೆಂದಂತಡಿಗಡಿಗೆ ಗಿಳಿಗಳಂ ಬೆಸಗೊಳ್ವಳ್ ೨೪೮

ತನಿವಣ್ಣಂ ಲಂಚಮಿಾವೆಂ ಪುರುಳಿ ನಿನಗೆ ಪೂಗೊಂಚಲಂ ಬೇಗದಿಂದಂ
ನಿನಗೀವೆಂ ತುಂಬಿ ಕೆಂದಾವರೆಯ ಮಿಸುಪ ಮೆಲ್ಲೊಗ್ಗೆಯಂ ಮಾಣದೆಂದುಂ
ನಿನಗೀವೇನಂಚೆ ಕಂಪಂ ನಿನಗೆ ಸಲಿಸುವೆಂ ಕೂಡೆ ತಣ್ಗಾಳಿಯನ್ನೋ
ಪನನಿಂದಾರಯ್ದು ತಂದೆನ್ನೊಡಿರಿಸಿದೊಡೆಂದಾಕೆ ಮಾತಾಡುತಿರ್ಪಳ್ ೨೪೯

ಅನ್ನೆಗಮಿತ್ತಲಾ ಬಾಂದೊಱೆದಲೆಯನ ಸಾಪಂದಳೆದು ಬಂದು ನೀನೀ ಪೂವಿನ ಪೊಟಲೊಳ್ ನನೆಯಂಬನೆಂಬರಸಾದೆ ನಿನ್ನ ಸಾಪಂ ಎನ್ನ ಮಾತನೆಂದು ಕೇಳ್ದೈ ಅಂದೇ ತೀರ್ದುದು ಈ ಬಾೞೆ ಮೊದಲಾದುದೆಲ್ಲಂ ನಿನ್ನ ಪಾಡಿ - ಎಂದಚ್ಚರಿಸಿ ಪೇೞ್ದು ತನ್ನ ನೆಲೆಗೆ ಪಾಱೆ ಪೋಗೆ -

ಗಿಳಿಯೊಂದಾಮಾತಂ ಕೇ
ಳ್ದೆಳದರಿರಂ ಗುಡಿಯನೆತ್ತಿ ಕೊಂಡೊಲವಿಂ ಕ
ಣ್ಗೊಲೆ ಪೋಗಿ ಕಂಪುವೊಟಲಂ
ಗೞಲನೆ ಪೊಕ್ಕಱೆಪಿದುದು ಬಸಂತಂಗಾಗಳ್ ೨೫೦

ಅಂತಱೆಪಲೊಡನೆ ಕೋಗಿಲೆ ಕೈವಂದ ಮಾವಂ ಸಾರ್ದಂತೆಯುಂ, ಬಿಸಿಲೊಳ್ ಬೇಗುದಿಗೊಂಡವಂ ತಣ್ಗೊಳನಂ ಪೊಕ್ಕಂತೆಯುಂ, ಬಡವಂ ಕಸವರಮಂ ಕಂಡಂತೆಯುಂ, ನಲ್ಲಳ ನುಡಿಯಂ ಕಾದಲಂ ಕೇಳ್ದಂತೆಯುಂ, ನೀಱೆಯ ಕಾಲ್ಪೊಯ್ಲಿನಸುಗೆ ತಳಿರ್ತಂತೆಯುಂ, ಪಿರಿದಪ್ಪ ಸಂತಸಮನೆಯ್ದಿ ಬಸಂತಂ ತಳಿರ್ವನೆಯೊಳ್ ನಲ್ಲನಂ ನೆನೆದು ದೂಱೆಸುತಿರ್ಪಚ್ಚೆಗಾರ್ತಿಗಾ ತೆಱನೆಲ್ಲಮಂ ಬಿನ್ನಪಂಗೆಯ್ದು ನಿಸ್ಸಾಳಮಂ ಸೂೞೈ ಸವೇೞಲೊಡನೆ -

ಪಡೆಯೆಲ್ಲಂ ನಡೆ ನೋಡಿ ಮೆಚ್ಚೆ ಬಿದಿಯಂ ನಾಣ್ಗೊಡೆ ಬೆಂಕೊಂಡವಂ
ಕಡಲೊಳ್ ಪಟ್ಟನನಿಕ್ಕಿ ಮೆಟ್ಟಿದದಟಂ ಮುಕ್ಕಣ್ಣನಂ ಗೆಲ್ದನೆ

ಮೊಮ್ಮಡೆಯಂ ಬಂದಪನೀಗಳಿಂತೆ ನಲವಿಂದಂ ಬಳ್ಳಿ ಮಾಡಂಗಳೊಳ್
ಗುಡಿಯಂ ಬೇಗದೆ ಕಟ್ಟಿಮೆಂದು ಪಡೆವಳ್ಳರ್ ಸುತ್ತಲುಂ ಸಾಱಿದರ್ ೨೫೧

ಕಳಸಂ ಕನ್ನಡಿ ಗುಡಿ ಪ
ಜ್ಜಳಿಸುವ ಮಾಂದಳಿರ ತೋರಣಂ ದೆಸೆದೆಸೆಯಂ
ಬಳಸಿರೆ ಬಾಜಿಪ ಪಱೆ ಕ
ಣ್ಗೊಳಿಸಿರೆ ಪೊಱಮಟ್ಟರೊಸಗೆಯಿಂ ಪೊಸವೆಂಡಿರ್ ೨೫೨

ಅಂತು ಪೊಟಿಲಂ ಪೊಱಮಟ್ಟು ಸಿಂಗರಗಡಲ್ ಕರೆಗಣ್ಮಿದಂತೆ ಬರ್ಪ ಪೆಂಡಿರ ತಂಡಕ್ಕೆ ತಲೆದುಡುಗೆಯಾಗಿ, ಬೆಳ್ಗೊಡೆಯ ಕುಂಚದ ಅಡಪದ ಡವಕೆಯ ಬಿಜ್ಜಣಿಗೆಯ ಕಜ್ಜಳದ ಕನ್ನಡಿಯ ಚೆನ್ನೆಯರ್ವೆರಸು ಇಚ್ಚೆಗಾರ್ತಿ ನಡೆವಾಗಳ್ -

ಸುರಯಿಯ ಚೊಲ್ಲೆಯಮುಂ ಪೊಸ
ಸುರಹೊನ್ನೆಯ ಮೊಗ್ಗೆ ಯೆಕ್ಕಸರಮುಂ ಪೊಂಬಾ
ದರಿಯ ಕಿಱುಮುಗುಳ ತೊಡರುಂ
ಪರಿವಡೆದಿರೆ ಬಂದನಟ್ಟಿಯಿಂದೆ ಬಸಂತಂ ೨೫೩

ನಡೆವರಸಂಚೆಯ ತಂಡ
ಕ್ಕೆಡೆ ನೆಱೆಯದು ಪೊಡವಿ ಗಂಡುಗೋಗಿಲೆಯಣೆಗ
ಳ್ಗೆಡೆ ನೆಱೆಯದಿನಿತುಮಾಗಸ
ಮೆಡೆ ನೆಱೆಯದು ಗಿಳಿಯ ದಟಿಕೆ ದೆಸೆಯೆನಿತನಿತುಂ ೨೫೪

ಅಂತು ಬಂದು ಪಿರಿದಪ್ಪೊಸಗೆಯಿಂದಿಚ್ಚೆಗಾರ್ತಿ ಕಾವನನಿದಿರ್ಗೊಳ್ವಲ್ಲಿ -

ಅಡಿಯಂ ಬಲ್ಪಿಡಿದುವು ನು
ಣ್ಗೊಡೆಯಂ ಪಿಡಿಕಿಸಿದುವಡರ್ದು ಕಾವನ ತೋಳಂ
ಬಿಡದಪ್ಪಿದುವಂದಾಕೆಯ
ಕೊಡಕೆವರಂ ನಿಮಿರ್ದು ಪೊಳೆವ ತುಱುಗೆಮೆಗಣ್ಗಳ್ ೨೫೫

ಬಿರಿದೊಳ್ದಾವರೆಗಂಪಂ
ಕೊರಲುದ್ದಂ ಪೀರ್ವ ತುಂಬಿಯೆನೆ ನೀಱನೆ ಚೆ
ಲ್ವೊರೆದ ಸವಿದುಟಿಯನೊಲವಿಂ
ಬರೆ ಪೀರ್ದುವು ನೋಡುವಿಚ್ಚೆಗಾರ್ತಿಯ ಕಣ್ಣಳ್ ೨೫೬

ನಗೆಮೊಗದೊಳ್ ತೆಱಂಬೊಳೆದು ನುಣ್ದುಟಿಯೊಳ್ ಮೊಗಮಿಕ್ಕಿ ಗಲ್ಲದೊಳ್
ಜಗುಟ್ದು ಕೊಡಂಕೆಯೊಲ್ ನುಸುಳ್ದು ಪೇರುರದೊಳ್ ಸುೞಿದಾಡಿ ತೊಳ್ಗಳೊಳ್

ಸೊಗಯಿಸಿ ಸೊರ್ಕಿ ಪೊರ್ಕುೞೊಳಡಂಗಿ ತೊಳಪ್ಪುಡೆಯೊಳ್ ಸಡಿಲ್ದು ಕಾ
ಲುಗುರ್ಗಳೊಳ್ಪೆದೆ ಮಾರ್ಪೇೞಿದುವಾಕೆಯ ಡಾಳಮನಾಂತ ದಿಟ್ಟಿಗಳ್ ೨೫೭

ನನೆಗಣೆಯನ ಮೆಯ್ವೆಳಗೆಂ
ಬಿನಿಗೊಳದೊಳ್ ಮೊದಲೆ ಮಿಳಿರ್ದು ನೆಗೆದಾಡಿದುವಂ
ದೆನಸುಂ ಕಡು ನೀಱೆಯ ಚೆ
ಲ್ವೆನೆ ತೊಳಗುವ ಕಣ್ಗಳೆಂಬ ಪೊಸಮೀಂಬೊಣರ್ಗಳ್ ೨೫೮

ಸವನಿಸೆ ಹಮ್ಮದಂ ನಡುಪಕಾಲ್ಬೆವರಂ ಬಿಡುತಿರ್ಪ ಗಲ್ಲಮು
ಣ್ಮುವ ನವಿರೆಚ್ಚು ಪಾಯ್ವ ಕಡೆಗಣ್ಸೊಸರಾಱುವ ಬಾಯ್ ಜಗುಳ್ದು ತೋ
ಱುವಪೊಱವಾಱೊಳುಚ್ಚಳಿಪ ತೆಳ್ವದಮಿರ್ವರೊಳೊಪ್ಪೆ ನೋಡಿದರ್
ತವಕಿಪ ಕಣ್ಮಲರ್ ಸುಸಿಲನೊಪ್ಪಿಸೆ ಕಾವನುಮಿಚ್ಚೆಗಾರ್ತಿಯುಂ ೨೫೯

ಬೞಿಕ್ಕೆ ಬಸಂತಂ ಮುಂತಾಗಿ ಬಂದು ಕಾಣ್ಕೆಗೊಟ್ಟು ಕಂಡು ತನ್ನ ಪಡೆಯೆಲ್ಲಮನಳವಱಿದು ಮನ್ನಿಸಿ ನನೆವಿಲ್ಲ ಬಲ್ಲಹಂ ಕೈವಂದ ಮಾವೆಂಬಾನೆಯನಿಚ್ಚೆಗಾರ್ತಿವೆರಸೇಱಿ ನಡೆತಂದು ಕಂಪಿನ ಪೊಟಿಲಂ ಪೊಕ್ಕು ಬೀದಿಗೊಂಡು ಬರ್ಪಾಗಳ್ -

ನೆಗೆದ ನೆಲಮಾಡದೊಳ್ ಪೊಸ
ದುಗುಲಮನೊಲವಿಂದೆ ಪೊದೆದು ನೋಡುವಳೊರ್ವಳ್
ಸೊಗಯಿಸಿದಳ್ ಮಿಱುಗುವ ಬೆ
ಳ್ಮುಗಿಲಂ ಮಱೆಗೊಂಡು ನಿಂದ ಬಿಜ್ಜೋದರಿವೋಲ್ ೨೬೦

ಮುಡಿ ಜಗುೞೆ ನೇವುರಂ ದನಿ
ಗುಡೆ ಬಡನಡು ಬಳ್ಕೆ ಮೇಲುದೋಸರಿಸೆ ತೊಳ
ಪ್ಪುಡೆ ಸಡಿಲೆ ಬಂದಳೊರ್ವಳ್
ನಡೆ ನೋಡಿದಳಾಗಳಂತೆ ನಾಣೞಿವಿನೆಗಂ ೨೬೧

ಮುತ್ತಿನಪಚ್ಚಮಂ ತುಡುವುದಂ ಮಱೆದೊಪ್ಪಿರೆ ಮೇಳದಾಕೆಗಳ್
ಕತ್ತುರಿ ಬೊಟ್ಟನೆಂತಿಡುವೊಡಂ ನಿಲಲೊಲ್ಲದೆ ಸಾರ್ದು ನಲ್ಮೆಯಿಂ
ದೊತ್ತೆಯನಿತ್ತನಂ ಬಿಸುಟು ಚೌಕಿಗೆಯಂ ಪೊಱಮಟ್ಟುಗಾಡಿ ಬೆಂ
ಬತ್ತಿರೆ ಬಂದಳೊರ್ವಳೆಮೆಯಿಕ್ಕದೆ ನೋಡಿದಳೊಲ್ದು ಕಾವನಂ ೨೬೨

ಸೋರ್ಮುಡಿ ಬೆನ್ನನಪ್ಪಳಿಸೆ ಬಿಂಕದಿನಿಕ್ಕಿದ ರನ್ನದೈಸರಂ
ಪೆರ್ಮೊಲೆಯಂ ಪಳಂಚೆ ನಗೆಗಣ್ ಮಱೆವುಲ್ಲೆಯ ಚೆಲ್ಲಗಣ್ಗಳಿಂ

ನೂರ್ಮಡಿ ಚೆಲ್ವನಾನೆ ನೊಸಲೊಳ್ ಕುರುಳುಯ್ಯಲನಾಡೆ ಬೇಗದಿಂ
ಕೂರ್ಮೆಯನಾಂತುನೀಱಿ ನಡೆತಂದಲರ್ವಿಲ್ಲನನ್ನೆದೆ ನೋಡಿದಳ್ ೨೬೩

ಮತ್ತಂ -

ಕುರುಳೋ ತುಂಬಿಯ ಬಂಬಲೋ ತೊಡೆಗಳೋ ಪೊಂಬಾೞೆಯೋ ಕಣ್ಗಳೋ
ದೊರೆವೆತ್ತೊಪ್ಪುವ ನೈದಿಲೋ ಬೆರಲೊ ಕೂರ್ಪಾಗಿರ್ದ ಪೂಗೋಲ್ಗಳೋ
ಕೊರಲೋ ನುಣ್ಪಳವಟ್ಟ ಕೌಂಗೊ ಪೊಸತಾಗಿರ್ಪಪ್ಪುವೆಂದ್ಯೆದೆ ಮಿಂ
ಡರ ತಂಡಂ ಬೞಸಲ್ವಿನಂ ನಡೆದು ಬಂದಾ ನೀಱಿನಂ ನೋಡಿದಳ್ ೨೬೪

ಇಕ್ಕಿದ ರನ್ನದೋಲೆ ಪೊಸಮುತ್ತಿನ ಮೂಗುತಿ ತೋಳ ಬಂದಿ ನೀ
ಳ್ದೆಕ್ಕಸರಂ ತೊಳಪ್ಪ ಬೆರಲುಂಗುರಮಿಂಚರಮಿಾವ ನೇವುರಂ
ಚೊಕ್ಕಳವಪ್ಪ ಚೆಲ್ವನೊಳಕೊಂಡಿರೆ ಬೆಳ್ಳಿಯ ಬಳ್ಳಿಮಾಡಮಂ
ತಕ್ಕನೊಳೇರಿ ನೋಡಿದಳದೊರ್ವಳಗುರ್ವಿಪ ಕರ್ವುವಿಲ್ಲನಂ ೨೬೫

ಅಂತು ನಡೆನೋಡುವ ನಗೆಮೊಗದ ಮುದ್ದು ಮೊಗದ ನುಣ್ಮೊಗದ ತನ್ನೋಲಗದ ಪಲತೆಱದ ಪೆಂಡಿರ ಕಣ್ಗೆ ಗಾಡಿಯಂ ಬೀಱುತುಂ ಬಂದರಮನೆಯಂ ಪೊಕ್ಕು ಪರಿವಡೆದ ಪಿರಿಯ ಕರುಮಾಡದ ಮುಂದಣ ಓಲಗಸಾಲೆಯೊಳ್ ಸಿಂಗರದ ಚೆನ್ನನಾಂತ ಪಟ್ಟವಣೆಯ ಮೇಲೆ ಇಚ್ಚೆಗಾರ್ತಿವೆರಸು ನನೆವಿಲ್ಲ ಬಲ್ಲಹಂ ಕುಳ್ಳಿರಲೊಡನೆ-

ನಿಗಳದ ನುಣ್ಚರಂ ನೆಗೆವಿನಂ ನುಡಿಗಳ್ ಕಿಪಿಗಿಂಪನೀವಿನಂ
ಮಗಮಗಿಸುತ್ತುಮಿರ್ಪ ನಱುಸುಯ್ಗಲರ್ವಕ್ಕಿ ಜಿನುಂಗುತಿರ್ಪಿನಂ
ಬಗೆಗೊಳೆ ಬಂದು ನಿಂದು ನೆಱೆದಗ್ಗದ ನೀಱೆಯರೊಲ್ದು ಪರ್ವುವಾ
ಪೊಗೞುಲಿ ಪೊಣ್ಮೆ ಬಿತ್ತರದ ಮುತ್ತಿನ ಸೇಸೆಯನಾಗಳಿಕ್ಕಿದರ್ ೨೬೬

ನೊಸಲೆಡೆಯಲ್ಲಿ ನೀಳ್ದ ಕುರುಳೋಳಿಗಳುಯ್ಯಲ ನಾಡೆಡಾಳಮಂ
ಪಸರಿಪ ತೋರ ಮುತ್ತಿನ ಸರಂ ಮೊಲೆಯೊಳ್ ತಲೆಯೊತ್ತೆ ನಾಡೆಯುಂ
ಮಿಸುಗುವ ಕಣ್ಣ ನುಣ್ಬೆಳಗು ಜೊನ್ನದೊಲೋರಗೆಯಾಗೆ ಸೊಂಪು ಸಂ
ದಿಸೆ ಪೊಸರನ್ನದಾರತಿಯನೆತ್ತಿದರಗ್ಗದ ಗಾಡಿಕಾರ್ತಿಯರ್ ೨೬೭

ಬಿಳಿಯ ನೆನೆಯ ಕಣೆಗೆ ನಾಡೆ ಪಗೆವರೊಡಲ ಸುಗಿಯೆ ಕೂಡೆ
ನೆಲನನೊಂದೆ ಕೊಡಯಿನಾಳ್ದು ಮಿಸುಪ ಜಸಮೆ ನಿಮಿರೆ ಕೇಳ್ದು
ಕುಳಿರ್ವ ಪೂಗೊಳಂಗಳಲ್ಲಿ ತಳಿರ ಕಾವಣಂಗಳಲ್ಲಿ
ಪಳಿಕುವೆಸದ ಬೆಟ್ಟದಲ್ಲಿ ಪರಿವ ತೊಱೆಯ ತಡಿಗಳಲ್ಲಿ
ತುಂಬಿವಿಂಡಿನಂತೆ ಪಾಡಿ ಜಕ್ಕವಕ್ಕಿಯಂತೆ ಕೂಡಿ
ದೆಸೆಯನಿಚ್ಚೆಯಿಂದೆ ನೋಡಿ ಸೊಗಯಿಪಂಚೆಯಂತಿರಾಡಿ

ಪೊಳೆವ ತಳಿರ ನನೆಯ ಮೊನೆಯ ತುಱುಗಿದಲರ ಬಳಸುವೆಲರ
ಮಿಳಿರ್ವ ಮಿಡಿಯ ಗಿಳಿಯ ನುಡಿಯ ಪರಿವ ಕಾಲ ಕರ್ವುಗೋಲ
ಚೆಲ್ವನಾಂತು ತೋರ್ಪ ಬನದ ನಡುವೆ ತನ್ನದೊಂದು ಬಿನದ
ಮಮರೆ ಮಿಱುಪ ಬಟ್ಟಮೊಲೆಯ ಸೊಬಗು ರೂಡಿವಡೆದ ನೆಲೆಯ
ಚೆನ್ನೆಯರ್ಕಳೊಡನೆ ಕೂಡಿ ಮುಗುಳ ಸರಮನಡರೆ ಸೂಡಿ
ನಲ್ಲರೊಡನೆ ಕೂರ್ಮೆಯಿಂದೆ ಕಾವನೊಡನೆ ಪೆರ್ಮೆಯಿಂದೆ
ಮಾವಿನಡಿಯೊಳಾಡುತುಂ ಪಾಡನೆಯ್ದೆ ಕೇಳುತುಂ
ಪೊಟ್ತಿನಿಂತು ಕಳೆಯುತುಂ ತೊಲಗದಿರ್ದರೆಸೆಯುತುಂ ೨೬೮

ಇಂತು ಕಾವದೇವನುಂ ಬಸಂತನುಂ ರೂಡಿವೆತ್ತು ಗಾಡಿಯಿಂದೊಪ್ಪಿದರ್ -

ಪುರುಳುಂ ಲಕ್ಕಣಮುಂ ಮೆ
ಯ್ಸಿರಿಯುಂ ಮೆಯ್ವೆತ್ತು ಸೋಲಿಪುದಱಿಂದೊಲ್ದ
ಕ್ಕರಿಗರಿದನೋದಿ ಪೊಸತಾ
ಗಿರೆ ಸೊಬಗಿನ ಸುಗ್ಗಿಯೆಂಬ ಪೆಸರಂ ಕೊಟ್ಟರ್ ೨೬೯

ಮತ್ತಂ ಸಕ್ಕದಮಱಿವರ್
ಬಿತ್ತರದಿಂ ಮದನವಿಜಯಮೆಂದೊಲವೆರ್ದೆಯಂ
ಪತ್ತಿರೆ ಪೆಸರಿಟ್ಟರಿದ
ಕ್ಕತ್ತಳವೆನಿಪುದೆನೆ ಮಿಸುಪ ಪೆಸರೆಸೆವಿನೆಗಂ ೨೭೦

ದೋಸದ ಮಾತು ಪೊರ್ದದೆನೆ ಬಲ್ಲವರಗ್ಗದ ಕನ್ನಡಂಗಳಿಂ
ಬಾಸಣಮಾಗೆ ಪೇೞ್ದನೊಲವಿಂ ನೆಱಿಕಬ್ಬಿಗರೊಪ್ಪೆ ನಾಡೆಯುಂ
ಗೋಸಣೆ ಮಿಱುವನ್ನಮಿದು ರಾಯನ ನಾಟ್ಕಳೊಳಿರ್ಕೆ ನಿಚ್ಚಮುಂ
ದೇಸೆಯ ಗೊತ್ತು ಜಾಣ್ನುಡಿಯ ತಾಯ್ವನೆ ನುಣ್ಬುರುಳೇೞ್ಗೆಯೆಂಬಿನಂ ೨೭೧

ಪದಪಿಂ ಪೊರ್ದಿದರಚ್ಚೆಯಿಾವ ಪದಿನೆಂಟುಂ ದೋಸಮುಂ ಪೊರ್ದದಾ
ಡಿದ ಮಾತೆಲ್ಲರ ಬಾೞ್ಕೆಯಪ್ಪಱಿವಿನೊಳ್ ಮೂಲೋಕಮಂ ಕಾಣ್ಬ ಪು
ಟ್ಟಿದವೊಲ್ ಕಣ್ಗಮರ್ದೊಪ್ಪಿ ತೋಱುವರುಹಂತಂ ನಲ್ಮೆಯಂ ಮಾೞ್ಕೆ ಬೇ
ದಿಡುದಂ ತನ್ನಟಿವಟ್ಟೆಗೆರ್ಗೆ ನೆಲನುಂ ಮುನ್ನೀರುಮಿರ್ಪನ್ನೆಗಂ ೨೭೨

ಇದು ಪಸುಳೆವಿಸಿಲ ಮಸಕದಿನೆಸಳ್ಮಿಸುಪ ಪೊಸದಾವರೆಯ ಪಸೆಯೊಳಸದಳ ಮೆಸೆವ ಸರಸತಿಯಡಿದಳಿರ್ಗೆ ತಲೆದುಡುಗೆಯೆನೆ ಪೆಸರ್ವಡೆದ ಬಿಜ್ಜೆವಳದಿಂ ಸಮೆದ ಕಾವನಗೆಲ್ಲಂ ಮೆಱೆಯುತಿರ್ಪುದು.

॥ ಮಂಗಳ ಮಹಾ ಶ್ರೀ ಶ್ರೀ ॥

ಅನುಬಂಧಗಳು

ಅನುಬಂಧ ೧

ಶಿಕಾರಿಪುರಶಾಸನ ೧೩೬

ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ ।
ಜೀಯಾತ್ರೈಲೋಕ್ಯನಾಥಸ್ಯ ಶಾಸ (ನಂ ಜಿನ ಶಾ) ಸನಂ ॥

ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭಮಹಾರಾಜ ಪಗಮೇಶ್ವರ (ಪರಮ) ಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರೈ ಲೋಕ್ಯಮಲ್ಲನಾಹಮಮ(ಲ್ಲದೇ)ವಂ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತ ಮಿರೆಯಿಲೆ

* ಮಲೆಪರ್ಮ್ಮಾೞ್ಪಾಂಪರಿಲ್ಲಕ್ರಮದಿಂ (ನಧಟ) ರಾಟರ್ಪ್ಪರಿಲ್ಲುರ್ಕ್ಕಿ ದರ್ಕುಂ
ದಲೆವಾಯ್ದುರ್ದ್ವೃತ್ತರಿಲ್ಲೊಟ್ಟಜೆವೆರಸು ಕುಱುಂಬರ್ತ್ತಂಱುಂಬಿರ್ಪ್ಪರಿಲ್ಲೆ ।
ತ್ತಲುಮುದ್ದಂಬರ್ಪ್ಪ ದಳ್ಳೆಂದುರಿವ ರಿಪುಗಳಿಲ್ಲೆಂಬಿನಂ ಕುನ್ತಳೋರ್ವ್ವೀ
ತಿಳಕಂ ತ್ರೈಲೋಕ್ಯಮಲ್ಲಕ್ಷಿತಿಪತಿಗೆ ಧರಾಚಕ್ರದೊ.....ಕಚಕ್ರಂ (೦) ॥

* ಲಾಟ ಕಳಿಂಗ ಗಂಗ ಕರಹಾಟ ತುರುಷ್ಕ ವರಾಳ ಚೋಳಕ
ರ್ಣ್ನಾಟ ಸುರಾಷ್ಟ್ರ ಮಾಳವ ದಶಾರ್ಣ್ನ ಸುಕೋಶಳ ಕೇರಳಾದಿ ದೇ ।
ಶಾಟವಿಕಾಧಿಪರ್ಮ್ಮಲೆದು ನಿಲ್ಲದೆ ಕಪ್ಪಮನಿತ್ತು ನಿರ್ಮ್ಮಿತಾ
ಘಾಟದೊಳಿರ್ಪ್ಪ.... ಯಳವೀ ದೊರೆತಾಹವಮಲ್ಲದೇವನ ॥

ಇಂತು ಚತುರಂತ ಧಾತ್ರೀ
ಕಾಂತೆಯನಳವಡಿಸಿ ಚಕ್ರವರ್ತ್ತಿ ಶ್ರೀಯಂ ।
ತಾಂ ತಳೆದು ಸುಖದೆ ಪಲಕಾ
ಲಂ ತವೆ ತವನಿಧಿಗಧೀಶನಾಹವ ಮಲ್ಲಂ ॥

ಮ(ಗ ಧಾಂ) ದ್ರಾವನ್ತಿ ವಂಗದ್ರವಿಳಕುರುಖಸಾಭೀರ ಪಾಂಚಾಳಲಾಳಾ
ದಿಗಳಂ ಪೇಸೇಳಿ ಕೊನ್ದುಂ ಕವರ್ದುಮಸದಳಂ ಕೊಟ್ಟಜಂಗೊಣ್ಡುಮಾಳೋ

---

* ಈ ಚಿಹ್ನೆಯಿರುವ ಪದ್ಯಗಳು 'ಸುಕುಮಾರಚರಿತಂ'ನಲ್ಲಿ ದೊರೆಯುತ್ತವೆ.

ಳಿಗೆದಂದುಂತೋಳನುಂ ಮನದ ತವಕಮ್ಗುಂ ಪೋಗದೆಂದಿನ್ನ್ರನಂ ಕಾ
ದಿ ಗೆಲಲ್ಕಪ್ಪಂಗೊಡಲ್ಪರಿಸಿ ತಳರ್ದನೇಕಾಂಗದಿಂ ಸಾರ್ವಭೌಮಂ ॥

ಗಗನ ನವಾಂಕ ಸಂಖ್ಯೆ ಸಕಕಾಳದೊಳಾಗಿರೆ ಕೀಳಕಾಬ್ದಕಂ
ನೆಗಳೆ ತದೀಯ ಚೈತ್ರಬಹುಳಾಷ್ಟಮಿಯೊಳ್ ರವಿವಾರದೊಳ್ ಜಸಂ ।
ಮಿಗೆ ಕುಜುವರ್ತ್ತಿಯೊಳ್ಪರಮಯೋಗನಿಯೋಗದೆ ತುಂ (ಗ ಭ) ದ್ರೆಯೊ
ಳ್ಜಗದಧಿಪಂ ತ್ರಿವಿಷ್ಟಪಮನೇಱಿದನಾಹವಮಲ್ಲ ವಲ್ಲಭಂ ॥

ಆ ಚಾಳುಕ್ಯಲಲಾಮ ಮ
ಹಾಚಕ್ರಿಯ ಪೆರ್ಮ್ಮಗಂ ಧರಾತಳಮಂ ಗೋ ।
ತ್ರಾಚಳ ಜಳಧಿಪರೀತಮ
ನಾಚಂದ್ರಸ್ಥಾಯಿಯಾಗಲಾಳ್ವ ಮಹಾತ್ಮಂ ॥

ಉದಿತವ್ಯೋಮಂ ನವಾಂಕ ಸಂಖ್ಯೆಸಕಕಾಳಂ ವರ್ತ್ತಿಸಲ್ಕೀಳಕಾ
ಬ್ದದ ವೈಶಾಖದ ಶುದ್ಧ ಸಪ್ತಮಿಯೊಳಿಜ್ಯಜ್ಯೋತಿಯೊಳ್ ಶುಕ್ರವಾ ।
ರದೊಳತ್ಯಂತ ಕುಳೀರ ಲಗ್ನದೊಳಿಭಾಶ್ವವ್ರಾತರತ್ನಾತಪ
ಚ್ಛದ ಸಿಂಹಾಸನ ಪೂಜ್ಯರಾಜ್ಯಪದಮಂ ಸೋ (ಮೇ) ಶ್ವರಂ ತಾಳ್ದಿದಂ ॥

ಜಯಮಂ ಧರ್ಮ್ಮಕ್ಕೆ ಧರ್ಮ್ಮಾನ್ವಯಮನಸದಳಂ ಸಾಧುವರ್ಗ್ಗಕ್ಕೆ ವರ್ಗ್ಗ ।
ತ್ರಯಮಂ ತನ್ನಂತರಂಗಕ್ಕೊದವಿಸಿ ಧರೆಯಂ ಕೂಡೆ ಸನ್ಮಾನ ದಾನ ।
ಬ್ರಯದಿಂ ಸನ್ತಯ್ಸೆ ಕಾಳಂ ಕೃತಯುಗಮಯಮಾಯ್ತೆಂಬಿನಂ ತನ್ನ ರಾಜ್ಯೋ
ದಯದೊಳ್ ಲೋಕಕ್ಕೆ ರಾಗೋದಯಮೊದವಿದುದೇಂ ಧನ್ಯನೋ ಸರ್ವಭೌಮಂ ॥

ಆ ಪ್ರಸ್ತಾವದೊಳ್
ನವರಾಜ್ಯಂ ವೀರಭೋಜ್ಯಂ ಪುಗಲಿದವಸರಂ ಸುತ್ತುವೆಂ ಗುತ್ತಿಯಂ ಮು ತ್ತುವೆನೆಂಬೀ
ಗರ್ಬ್ಬಂದಿಂ ಚೋೞಿಕನಧಿಕಬಳಂ ಮುತ್ತಿ ಮಾರ್ಗ್ಗುತ್ತಿಯಂ ಪ ।
ಣ್ಣುವುದಂ ಕೇಳ್ದೆತ್ತೆನುತ್ತೆತ್ತಿದ ತುರಗದಳನ್ನಾಗೆ ಸಯ್ತಾಗದು ಗ್ರಾ
ಹವದೊಳ್ ಬೆಂಗೊಟ್ಟು ಸೋಮೇಶ್ವರ ನೃಪನ ಬಳಕ್ಕೋಡಿದಂ ವೀರಚೋಳಂ ॥

* ಪೆಸರಂ ಕೇಳ್ದಳ್ಕಿ ಬೆಳ್ಕುರ್ತುದು ಪರಧರಣೀಮಣ್ಡಳಂ ಗಣ್ದುಗೆಟ್ಟಾ
ಳ್ವೆಸನಂ ಪೂಣ್ದತ್ತು ಶೌರ್ಯೋನ್ನತಿಗಗಿದಸುಹೃನ್ಮಂಡಲಂ ಮೆಲ್ಪನಾವ ।
ರ್ಜ್ಜಿಸಿದೊಂದಾಜ್ಞಾ ವಿಶೇಷಕ್ಕೆಳಸಿದುದು ಸುಹೃನ್ಮಂಡಲಂ ಸಂತಮಿನ್ತಾ
ದೆಸಕಂ ಕೈಗಣ್ಮೆ ಸೋಮೇಶ್ವರನೃಪತಿ ಮಹೀಚಕ್ರಮಂ ಪಾಳಿಸುತ್ತುಂ ॥

ಅನ್ತಃಕಂಟಕರಂ ಪಡಲ್ವಡಿಸಿ ದುರ್ಗ್ಗಾಧೀಶರಂ ದುಷ್ಟ ಸಾ
ಮನ್ತ ದ್ರೋಹರನುದ್ಧತಾಟವಿಕರಂ ನಿರ್ಮ್ಮೂಳನಂಗೆಯ್ದು ವಿ।
ಕ್ರಾನ್ತಾರಾತಿಗಳಂ ಕಳಲ್ಚಿ ಧರೆಯುಂ ನಿಷ್ಕಂಟಕಂ ಮಾಡಿ ನಿ
ಶ್ಚಿನ್ತಂ ಶ್ರೀ ಭುವನೈಕಮಲ್ಲಮಹಿಪಂ ರಾಜ್ಯಂಗೆಯುತ್ತಿರ್ಪ್ಪಿನಂ ॥

ತತ್ಪಾದಪದ್ಮೋಪಜೀವಿ ಸಮಧಿಗತ ಪಂಚಮಹಾಶಬ್ದ ಮಹಾಮಣ್ಡಳಶೇಶ್ವರನುದಾರಮಹೇಶ್ವರಂ ಚಲಕೆ ಬಲ್ಲಗಣ್ಡಂ ಶೌರ್ಯ್ಯ ಮಾರ್ತ್ತಣ್ಡಂ ಪತಿಗೇಕದಾ(ಸಂ) ಸಂಗ್ರಾಮಗರುಡಂ ಮನುಜಮಾನ್ಧಾತಂ ಕೀರ್ತಿವಿಖ್ಯಾತಂ ಗೋತ್ರ ಮಾಣಿಕ್ಯಂ ವಿವೇಕ ಚಾಣಿಕ್ಯಂ ಪರನಾರೀ ಸಹೋದರಂ ವೀರವೃಕೋದರಂ ಕೋದಣ್ಡಪಾರ್ತ್ಥಂ ಮಣ್ಡಳಿಕಕಂಠೀರವಂ ಪರಚಕ್ರಭೈರವಂ ರಾಯದಣ್ಡಗೋಪಾಲಂ ಮಲಯಮಣ್ಡಳಿಕಮೃಗಶಾರ್ದೂಳ ಶ್ರೀ ಮತ್ತ್ರೈಳೋಕ್ಯಮಲ್ಲದೇವಪಾದಪಂಕಜಭ್ರಮರಂ ಶ್ರೀ ಭುವನೈಕಮಲ್ಲವಲ್ಲಭರಾಜ್ಯ ಸಮುದ್ಧರಣಂ ಪತಿಹಿತಾಭರಣಂ ಮಣ್ಡಳಿಕಮಕರಧ್ವಜಂ ವಿಜಯಕೀರ್ತ್ತಿಧ್ವಜಂ ಮಣ್ಡಳಿಕತ್ರಿಣೇತ್ರಂ ರಿಪುರಾಯಮಣ್ಡಳಿಕಯಮದಣ್ಡಂ ಜಯಾಂಗನಾಲಿಂಗಿತದೋರ್ದ್ದಣ್ಡಂ ವಿಸುಳರ ಗಣ್ಡಂ ಗಣ್ಡಭೂರಿಶ್ರವನೆಂಬಿವು ಮೊದಲಾಗೆ ಪಲವು ಮನ್ವರ್ತ್ಥಂಕಮಾಳೆಗಳಿನಳಂಕರಿಸಿ

ತ್ರೈಳೋಕ್ಯಮಲ್ಲವಲ್ಲಭ
ನಾಳೆನಿಸಿದರೊಳಗೆ ಮಿಕ್ಕ ಪಸಯಿತನುಂ ಮಿ।
ಕ್ಕಾಳುಂ ಮಿಕ್ಕಣ್ಮೆನ ಬ
ಲ್ಲಾಳು ಲಕ್ಷ್ಮಣನೆ ಪೆಱರನಱಿವರುಮೊಳರೇ ॥

ಭುವನೈಕಮಲ್ಲ ದೇವನ
ಭವನದೊಳಂ ತಾನೆ ಮಾನಸಂ ತಾನೆ ಮಹಾ।
ವ್ಯವಸಾಯಿ ತಾನೆ ವಿಜಯ
ಪ್ರವರ್ದ್ಧಕನ್ತಾನೆ ಪಸಯಿತಂ ಲಕ್ಷ್ಮನೃಪಂ ॥

ಅನ್ತೆನಿಸಿ
ಅಣುಗಾಳ್ಕಾರ್ಯ್ಯದ ಶೌರ್ಯ್ಯದಾಳ್ವಿಜಯದಾಳ್ ಚಾಳುಕ್ಯ ರಾಜ್ಯಕ್ಕೆ ಕಾ
ರಣಮಾದಾಳ್ ತುಳಿಲಾಳ್ತನಕ್ಕೆ ನೆಱೆದಾಳ್ ಕಟ್ಟಾಯದಾಳ್ ಮಿಕ್ಕಮ।
ನ್ನಣೆಯಾಳ್ ಮಾಂತನದಾಳ್ನೆಗಟ್ತೆವಡೆದಾಳ್ ವಿಕ್ರಾಂತದಾಳ್ ಮೇಳದಾಳ್
ರಣದಾಳಾಳ್ದನನಚ್ಚುವಾವೆಡೆಯೊಳಂ ವಿಶ್ವಾಸದಾಳ್ ಲಕ್ಷ್ಮಣಂ ॥

ಎರಡು ರಾಜ್ಯದೊಳಂ ಪ್ರಜಾಪರಿಜನಂ ಕೊಣ್ಡಾಡೆ ಚಕ್ರೇಶರಿ
ರ್ಬ್ಬರುಮೋರಂದದ ಕೂರ್ಮ್ಮೆಯಿಂದೆ ವನವಾಸೀದೇಶಮಂ ಶಾಸನಂ।

ಬರೆದಶ್ವದ್ವಿಪ ಪಟ್ಟ ಸಾಧನಸಮೇತಂ ಕೊಟ್ಟಕಾರುಣ್ಯದಿಂ
ಪೊರೆಯಲ್ಮಣ್ಡಳಿಕತ್ರಿಣೇತ್ರನೆಸೆದಂ ಭೂಭಾಗದೊಳ್ ಲಕ್ಷ್ಮಣಂ ॥

ಕಿಱಿಯಂ ವಿಕ್ರಮಗಂಗಭೂಪನೆನಗಾ ಪೆರ್ಮ್ಮಾಡಿ ದೇವಂಗೆ ನೇ
ರ್ಗ್ಗಿಱಿಯಂ ವೀರನೊಳಂಬದೇವನೆನಗಂ ಪೆರ್ಮ್ಮಾಡಿಗಂ ಸಿಂಗಿಗಂ ।
ಕಿಱಿಯೈ ನೀಂ ನಿನಗೆಲ್ಲರುಂ ಕಿಱಿಯರೆನ್ದಗ್ಗಳ್ಸಿ ಕಾರುಣ್ಯದಿಂ
ನೆಱೆಕೊಟ್ಟಂ ಪ್ರತಿಪತ್ತಿ ವೃತ್ತಿ ಪದಮಂ ಲಕ್ಷ್ಮಂಗೆ ಸೋಮೇಶ್ವರಂ ॥

ಮಿಗೆ ಬನವಾಸೆನಾಟ್ಕೆ ವಿಭು ಲಕ್ಷ್ಮಣನಾಗೆ ನೊಳಂಬಸಿಂದವಾ
ಡಿಗೆ ವಿಭುವಾಗೆ ವಿಕ್ರಮ ನೊಳಂಬನಳಂಪುರಮಾದಿಯಾದ ಭೂ।
ಮಿಗೆ ವಿಭು ಗಂಗಮಣ್ಡಳಿಕನಾಗೆ ಯಮಾಶೆಗೆ ನೀಳ ಲಾಳವಿ
ಣ್ಡಿಗೆಯೆನೆ ಕಣ್ಡುಕೊಟ್ಟನವರ್ಗಾ ನೆಲನಂ ಭುವನೈಕವಲ್ಲಭಂ ॥

ಮದವದ್ವೈರಿ ನರೇಂದ್ರ ಮಣ್ಡಳಿಕ ಸೇನಾಭಂಜನಂ ವೀರನೀ
ರದ ದುರ್ವ್ವಾರ ಸಮೀರಣಂ ವಿತರಣ ಕ್ರೀಡಾವಿನೋದಂ ಪ್ರತಾ ।
ಪದಿಳೀಪಂ ರಿಪು ಪುಂಜಕಂಜವನಕೇಳೀ ಕುಂಜರಂ ಲಂಜಿಕಾ
ಮದನಾಸ್ತ್ರಂ ಚಲದಂಕರಾಮ ನೃಪ ಲಕ್ಷ್ಮೀಲಕ್ಷ್ಮಣಂ ಲಕ್ಷ್ಮಣಂ ॥

ಬಲಿವಲೆವ ಮಲೆವ ಕೆಲೆವದ
ಟಲೆವ ಪಳಂಚಲೆವ ಮಲೆಪರೆಲ್ವಂ ಮುಱಿದಂ ।
ಮಲೆಯದ ಕೆಲೆಯದ ಬಲಿಯದ
ಮಲೆಪರನಿಸುವೆಸಕೆ ಬೆಸಸಿದಂ ಲಕ್ಷ್ಮನೃಪಂ ॥

ದಾಳಿಯನಿಟ್ಟು ಕೊಂಕಣಮನಂಕಣಿಯೊಕ್ಕಿದಪಂ ತಗುಳ್ದು ಕೊಂ
ಬೇಳುಮನಟ್ಟಿ ಮುಟ್ಟಿ ಮಲೆಯೇಳುಮನಾಗೆ ಮುರ್ಚ್ಚಿ ಮುಕ್ಕಿ ನಿ ।
ಮ್ಮೊರ್ಗಳಿಸಿದಪ್ಪನೆಂದು ಮಲೆಪರ್ತ್ತಲೆದೋಱದೆ ರಾಯದಣ್ಡಗೋ
ಪಾಳನೃಪಂಗೆ ಮುಂದುವರಿದೆಂದುದನೆಂದಪರೇಂ ಪ್ರತಾಪಿಯೋ ॥

ಆಳ್ವಲಮುಳ್ಳಡಶ್ವ ಬಲಮಿಲ್ಲ ಭಟಾಶ್ವ ಬಲಂಗಳುಳ್ಳಡಂ
ತೋಳ್ವಲಮಿಲ್ಲ ಭೃತ್ಯಹಯ ದೋರ್ಬ್ಬಲಮುಳ್ಳಡಮೇರ್ವ್ವಲಂಗಳಿ ।
ಲ್ಲಾಳ್ವೆಸಗೆಯ್ಯದೇಕೆ ಬಲಿವರ್ಮ್ಮಲೆಪರ್ಮ್ಮಲೆಯಂಬುದೇನದಂ
ಬೆಳ್ವಲಮಾಗೆ ಮುಂತುಲಿದನಲ್ಲನೆ ಲಕ್ಷ್ಮನೆಂಬ ರಾವಣಂ ॥

ಕವಿದುರ್ಗ್ಗಂ ಚಾತುರಂಗಂ ಬವಸೆದಳವುಳಂಧಾಳಿ ಸೂಳೇಱಿನಿಪ್ಪಾ
ಹವದೊಳ್ಖಾಳುಕ್ಕರಾಮಂ ಬೆಸಸೆ ರಿಪುಬಳಕ್ಕೆನ್ನನಿಂದ್ರಾರಿಯನ್ನಂ ।

ಭವನನ್ನಂ ಭದ್ರನನ್ನಂ ಸಿಡಿಲಬಳಗದನ್ನಂ ಜ್ವಳಜ್ವಾಳಿಯನ್ನಂ
ಜವನನ್ನಂ ಮಾರಿಯನ್ನಂ ಸಮರ ಸಮಯದೊಳ್ ಲಕ್ಷ್ಮಣಂ ರಾಮನನ್ನಂ ॥

ಕುದುರೆಯಮೇಲೆ ಬಿಲ್ಪರಸು ಸೂಲಿಗೆ ತೀರಿಕೆ ಭಿಣ್ಡಿವಾಳಮೆ
ತ್ತಿದ ಕರವಾಳು ಮಾಟಿಡುವ ಕರ್ಕ್ಕಡೆ ಪಾಱುವ ಚಕ್ರಮೆಂದೊಡೆಂ ।
ತೊದಱುವರೆಂತು ಪಾಯಿಸುವರೆಂತು ತಱುಂಬುವರೆನ್ತು ನಿಲ್ವರೆಂ
ತೊದವುವರೆಂತು ಲಕ್ಷ್ಮಣನೊಳಾಂತು ಬರ್ದುಂಕುವರನ್ಯ ಭೂಭುಜರ್ ॥

ಈಯಲ್ಬಂದಡೆ ಕಲ್ಪವೃಕ್ಷಮಿದಿರಂ ಬಂದಾನ್ತ ವಿದ್ವಿಷ್ಟರಂ
ಸೋಯಲ್ಬಂದಡೆ ಕಾಳಮೃತ್ಯು ಶರಣಾಯಾತಾವನೀಪಾಳರಂ ।
ಕಾಯಲ್ಬಂದಡೆ ವಜ್ರಶೈಳ ಕೃತದುರ್ಗ್ಗಂ ಲೌಲ್ಯಭಾವಂ ಪರ
ಸ್ತ್ರೀಯಲ್ಬಂದಡೆ ರಾವಣಾತ್ಮಜ ಚಮೂವಿದ್ರಾವಣಂ ಲಕ್ಷ್ಮಣಂ ॥

ಬಿಸುಪಳಿದರ್ಕ್ಕನುರ್ಕ್ಕುಡಿಗುಮಿಂದುವ ಕಾಂತಿ ಕಳಲ್ದುಮಾಗಸಂ
ಕುಸಿಗುಮಿಳಾತಳಂ ತಳರ್ಗುಮಂಬುಧಿ ಬತ್ತುಗುಮಿಲ್ಲಿ ಲಕ್ಷ್ಮಣಂ ।
ಪುಸಿದೊಡಮಾರ್ಗ್ಗಟೆಪ್ಪರಮನೊದ್ದಿದೊಡಂ ಮನಮೊಲ್ದು ಕೂಡಿ ಚಿ
ದ್ರಿಸಿದೊಡಮನ್ಯ ನಾರಿಗೆ ಮರುಳ್ದೊಡಮಾಹವದೊಳ್ಮರಲ್ದಡಂ ॥

ಶತ್ರುಘ್ನಹರಿಶೌರ್ಯ್ಯನಂಗದಭುಜಂ ಸುಗ್ರೀವನಾತ್ಮೇಶಸೌ
ಮಿತ್ರಂ ರಾಮನಪಾಮರಂ ನರವರಂ ದುರ್ಯ್ಯೋಧನಂ ಭೀಮಗಾ ।
(ತ್ರ)ತ್ರಂ ಭೀಷ್ಮಯುಧಿಷ್ಠಿರಂ ಗುರುಕೃಪಂ ಸತ್ಕರ್ಣ್ಣನೆಂದಂದೆ ದ
ಲ್ಚಿತ್ರಂ ಭಾವಿಸೆ ಲಕ್ಷ್ಮಭೂಪ ಚರಿತಂ ರಾಮಾಯಣಂ ಭಾರತಂ ॥

ಕಲಿತನಮಿಲ್ಲ ಜಾಗಿಗೆ ವದಾನ್ಯತೆ ಮೆಯ್ಗಲಿಗಿಲ್ಲ ಚಾಗಿ ಮೆ
ಯ್ಗಲಿಯೆನಿಪಂಗೆ ಶೌಚಗುಣಮಿಲ್ಲ ಕರಂ ಕಲಿಚಾಗಿ ಶೌಚಿಗಂ ।
ನಿಲೆ ನುಡಿವೊಜೆಯಿಲ್ಲ ಕಲಿಚಾಗಿ ಮಹಾಶುಚಿ ಸತ್ಯವಾದಿ ಮ
ಣ್ಡಳಿಕರೊಳೀತನೆಂದು ಪೊಗಳ್ದು ಬುಧಮಣ್ಡಲಿ ಲಕ್ಷ್ಮಭೂಪನಂ ॥

ಮುನಿಯಿಂ ಕಿಸುಕಣ್ಚುವರೊಸೆ
ದು ನಗುವರಿನ್ತಿನಿತೆ ಪೆಱರ ಮುನಿಸುಂ ಮೆಚ್ಚುಂ ।
ಮುನಿಯಿಸೆ ಮುನಿದ ಜವಂ ಹ
ರ್ಷನಾಗೆ ಹರ್ಷಂಗವೃಷಭಲಕ್ಷ್ಮಂ ಲಕ್ಷ್ಮಂ ॥

ಎನೆ ನೆಗಟ್ದಿ ಲಕ್ಷ್ಮಭೂಪಂ
ವಿನಮಿತ ರಿಪುನೃಪತಿ ಮಕುಟ ಘಟ್ಟಿತ ಚರಣಂ ।

ಬನವಸೆ ಪನ್ನಿರ್ಚ್ಛಾಸಿರ
ಮನಾಳುತುಂ ಸುಖದಿನರಸುಗೆಯ್ಯುತ್ತಿರ್ದ್ದಂ ॥

ಇರೆ ಬನವಸೆ ಪನ್ನಿರ್ಚ್ಛಾ
ಸಿರಕ್ಕಮರ್ತ್ಥಾಧಿಕಾರಿಯುಂ ಕಾರ್ಯ್ಯ ಧುರ ।
ನ್ಧರನುಂ ತದ್ರಾಜ್ಯಸಮು
ದ್ಧರಣನುಮೆನೆ ನೆಗಟ್ದಿ ಮಂತ್ರಿ ಮಂತ್ರಿನಿಧಾನಂ ॥

ಕವಿತಾಚೂತಾಂಕುರ ಶ್ರೀಮದಕಳಕಳಕಣ್ಠೋಪಮಂ ಕಾವ್ಯ ಸೌಧಾ
ರ್ಣ್ಣವವೇಳಾಪೂರ್ಣಚಂದ್ರಂ ಸಮವಿಷಯ ಮಹಾಕಾವ್ಯವಲ್ಲೀ ಲತಾಂತೋ ।
ತ್ಸವ ಚಂಚಚ್ಚಂಚರೀಕಂ ವಸುಧೆಗೆಸದನುರ್ವ್ವೀನುತಂ ದಣ್ಡನಾಥ
ಪ್ರವರಂ ಶ್ರೀ ಶಾನ್ತಿನಾಥಂ ಪರಮಜಿನಮತಾಂಭೋಜಿನೀ ರಾಜಹಂಸಂ ॥

ಕುನಯಂಗಳ್ ಜೈನಮಾರ್ಗ್ಗಾಮೃತದೊಳಿರೆ ಜಲಕ್ಷ್ಮೀರದನ್ತಲ್ಲಿ ಸದ್ವಾ
ಕ್ಯ ನಿಶಾತೋಚ್ಚಂಚುವಿನ್ದಂ ಕುಮತಕಲುಷಪಾನೀಯಮಂ ತೂಳ್ದಿ ಜೈನಾ ।
ನನನಿರ್ಯ್ಯತ್ತತ್ವ ದುಗ್ಧಾಮೃತಮನಖಿಳ ಭವ್ಯೋತ್ಕರಂ ಮೆಚ್ಚಲಾಸ್ವಾ
ದನೆಗೆಯ್ವೊಳ್ವಿಂದಮಾದಂ ಪರಮಜಿನಮತಾಂಭೋಜಿನೀರಾಜಹಂಸಂ ॥

* ಪರಮಾತ್ಮಂ ನಿಷ್ಠಿತಾತ್ಮಂ ಜನಪತಿ ಪರಮಸ್ವಾಮಿ ತದ್ಧರ್ಮಮಾರ್ಮ್ಮಂ
ಗುರುವಂದ್ಯಂ ವರ್ದ್ಧಮಾನ ಬ್ರತಿಪತಿ ಜನಕಂ ಸಂದ ಗೋವಿನ್ದರಾಜಂ ।
ಪಿರಿಯಣ್ಣಂ ಕನ್ನಪಾರ್ಯ್ಯಂ ತನಗಧಿಪತಿ ಲಕ್ಷ್ಮ ಕ್ಷ್ಮಾಮಾಪಾಳನಾತ್ಮಾ
ವರಜಂ ವಾಗ್ಭೂಷಣಂ ರೇವಣನನೆ ನೆಗಟ್ದಂ ಧಾತ್ರಿಯೊಳ್ ಶಾನ್ತಿನಾಥಂ ॥

* ಸಹಜಕವಿ ಚತುರಕವಿ ನಿ
ಸ್ಸಹಾಯಕವಿ ಸುಕವಿ ಸುಕರಕವಿ ಮಿಥ್ಯಾತ್ವಾ ।
ಪಹರಕವಿ ಸುಭಗಕವಿ ನುತ
ಮಹಾಕವೀನ್ದ್ರಂ ಸರಸ್ವತೀ ಮುಕಮುಕುರಂ ॥

* ಸುಕರರಸಭಾವದಿಂ ವ
ರ್ನ್ನಕದಿಂ ತತ್ವಾರ್ತ್ಥ ನಿಚಯದಿಂ ಸೂಕ್ತಮೆನ ।
ಲ್ಸುಕುಮಾರಚರಿತಮಂ ಪೇ
ಳ್ದ ಕವೀನ್ದ್ರಾಗ್ರಣಿ ಸರಸ್ವತೀ ಮುಖಮುಕುರಂ ॥

* ಅಸಹಾಯನಾಗಿಯುಂ ಸುಜ
ನಸಹಾಯಂ ಮದವಿಹೀನನಾಗಿಯುಮರ್ತ್ಥಿ ।

ಪ್ರಸರೋತ್ಕಟದಾನಿ (ಯ)ಧಿಕ
ನಸದೃಶ ವಿಭವಂ ಸರಸ್ವತೀ ಮುಖಮುಕುರುಂ ॥

ಹರಹಾಸಾಕಾಶಗಂಗಾಜಳಜಳರುಹ ನೀಹಾರ ನೀಹಾರ ಧಾತ್ರೀ
ಧರ ನೀಹಾರಾಂಶು ತಾರಾವನಿಧರ ಶರದಂಭೋದರ ಕ್ಷೀರ ನೀರಾ ।
ಕರ ತಾರಾ ಭಾರತೀ ದಿಗ್ರದನಿರದನ ಪೀಯೂಷಡಿಣ್ಡೀರಮುಕ್ತಾ
ಕರಕುಂದೇನ್ದ್ರೇ ಭ ಹಂಸೋಜ್ವಳ ವಿಶದ ಯಶೋವಲ್ಲಭಂ ಶಾನ್ತಿನಾಥಂ ॥

ಒಡವೆಯನೊಳ್ಪಿನಿಂ ಪಡೆದು ಪುಂಜಿಸಿ ಪೂಜಿಸಿ ಕೋಣ ತಾಣದೊ
ಳ್ಮಡಗದೆ ಶಿಷ್ಟರಿಟ್ಟೆಡೆಗೆ ಬನ್ದುಗಳಿಲ್ಲಮೆಗಪ್ಪುದೆಂದುಮೆ ।
ನ್ನೊಡಮೆ ಶರೀರಮೆನ್ನದು ನಿಯೋಗದ ಪರ್ವ್ವಮಿದೆನ್ನದೆಂದು ಮೇ
ಳ್ವಡದಿರಿಮೆಂದು ಗೋಸನೆ ತೊಳಲ್ವುದುದೆ... ಶಾನ್ತಿನಾಥನ ॥

ಎನೆ ನೆಗಟ್ದಿ ಶಾನ್ತಿನಾಥಂ
ಜಿನಶಾಸನ ಸತ್ಸರೋಜಿನೀ ಕಳಹಂಸಂ ।
ವಿನಯದೆ ನಿಜಾಧಿಪತಿ ಲ
ಕ್ಷ್ಮನೃಪಂಗೆ ಸುಧರ್ಮ್ಮ ಕಾರ್ಯ್ಯಮಂ ಬಿನ್ನವಿಪಂ ॥

ಚಂಚಚ್ಚಾಮೀಕರ ರ
ತ್ನಾಂಚಿತ ಜಿನರುದ್ರ ಬುದ್ಧ ಹರಿ ವಿಪ್ರಕುಳೋ ।
.... ಹಸಂಕುಳದಿಂ
ಪಂಣ್ಚಮಠಸ್ಥಾನಮೆನಿಸುಗುಂ ಬಳಿನಗರಂ ॥

ಅನ್ತು ಸಮಸ್ತ ದೇವತಾ ನಿವಾಸ ಪವಿತ್ರೀಭೂತಮಪ್ಪ ರಾಜಧಾನಿಯೊಳಾದಜಿನಧರ್ಮ್ಮ ಪ್ರಭಾವಮಂ ಪೇಳ್ವಡೆ

ಸಲೆ ಜಂಬೂದ್ವೀಪಮೊಳ್ಪನ್ತಳಿದುದು ಪಲವುಂ..... ಭಾರತೋರ್ವ್ವೀ
ವಳಯಂ ತದ್ವೀಪದೊಳ್ ರಂಜಿಸುಗುಮೆಸೆಗುಮಾ ಕ್ಷೇತ್ರದೊಳ್ಕುಂತಳಂಕು ।
ನ್ತಳದೊಳ್ಸನ್ತಂ ಬಸನ್ತಂ ಬನವಸೆ ವನವಾಸೋರ್ವ್ವಿಯೊಳ್ ಭವ್ಯಸೇವ್ಯಂ
ಬಳಿನಾಮಂ ಗ್ರಾಮಾಮಾ ಗ್ರಾಮದೊಳಮರನುತಂ ಶಾನ್ತಿತೀರ್ತ್ಥೇಶ ವಾಸಂ ॥

ಆ.....ರ್ಮ್ಮ ನಿರ್ಮ್ಮಿತ
ಮದಂ ಶಿಳಾಕರ್ಮ್ಮಮಾಗೆ ಮಾಡಿಸು ಕೋಳ್ಳೋ ।
ದುದು ನಿನಗೆ ಧರ್ಮ್ಮಮೆಂಬದು
ಮದರ್ಕ್ಕೆ ಬಗೆದಂದು ಧರ್ಮ್ಮ ನಿರ್ಮ್ಮಳ ಚಿತ್ತಂ ॥

ಜಿನನಾಥಾವಾಸಮಂ ವಾಸವಕೃತಮೆನೆ ಮುನ್ನಂ ಶಿಳಾಕರ್ಮ್ಮದಿಂ ಶಾ
ಸನಮಪ್ಪಂತಾಗಿರಲ್ಮಾಡಿಸಿ ಬಳಿಕೆ ಶಿ..... ಸ್ತಂಭಮಂ ತ
ಜ್ಜಿನಗೇಹದ್ವಾರದೊಳ್ನಿರ್ಮ್ಮಿಸಿ ವಿಲಿಖಿತನಾಮಾಂಕ ಮಾಳಾವಳೀ ಶಾ
ಸನಮಂ ಚಂದ್ರಾರ್ಕ್ಕತಾರಂ ನಿಲೆ ನಿಲಿಸಿದನೇಂ ಧನ್ಯನೋ ಲಕ್ಷ್ಮಭೂಪಂ ॥

* ಮಿಗೆ ಮೂಳ ಸಂಘದೊಳ್ದೇ
ಸಿಗ ಗಣದೊಲ್ಲಂದ ಕೊಣ್ಡಕುನ್ದಾನ್ವಯಮಂ ।
ಜಗತೀತ ..... ನ್ತಿರೆ
ನೆಗಳ್ಚಿದರ್ನೆಗಟ್ದಿ ವರ್ದ್ಧಮಾನ ಮುನೀನ್ದ್ರರ್ ॥

ವೃ । ಪಡೆದಡೆ ಪೆಂಪನೆಯ್ದೆವಡೆಯಶ್ರುತಮಂ ಶ್ರುತದೊಂದು ಮಯ್ಮೆಯಂ
ಪಡೆದಡೆ ದಿವ್ಯಮಪ್ಪ ತಪಮಂ ಪಡೆಯತ್ತ್ತಪಮಂ ನಿರನ್ತರಂ
ಪಡೆದಡೆಕೀರ್ತ್ತಿಯಂ ಪಡೆಯರೀಕ (ಮನೀಯ) ಗುಣಂಗಳ ।
ಪ್ಪಡೆವಡೆ ವರ್ದ್ಧಮಾನಮುನಿಪುಂಗವರನ್ತಿರೆ ಮುನ್ನೆನೋಂತ (ರಾರ್) ॥

ಸಂತತಮೊದಿ ನಿನ್ದ ತಪದೊಳ್ ಶ್ರುತದೊಳ್ಗುಣದೊಳ್ವಿಶೇಷರಿ ।
ನ್ನಿಂತಿವರೆಲ್ಲರಿಂ ಪಿರಿಯರಿನ್ತಿವರಗ್ಗಳದಗ್ರಗಣ್ಯರೋ ।
ರನ್ತಿವರೆಂದು ಕೀರ್ತಿಪುದು ಕೂರ್ತು (ದಿವಾಕರ) ದೇವಸಿ ।
ದ್ಧಾನ್ತ ಮುನೀಂದ್ರರಂ ನತನರೇಂದ್ರರನಬ್ಧಿಪರಿತಭೂತಳಂ ॥

ಮು(ನಿ) ಸಣಮಾಗಲಾಗಮುನಿಸಿಂ ಮುನಿಯುಂ ಮುನಿವಂದ್ಯನಾಗನಾ ।
ಮುನಿಸು ಮಮತ್ವದಿಂ ಮಮತೆ ಮಾಯೆಯಿನನ್ತದು ಲೋಭದಿಂ ಪ್ರವ
ರ್ದ್ಧನಕರಮೆಂದು....ವೀತಕಷಾಯರಾದ ಸ ।
ನ್ಮುನಿ ಮುನಿಚಂದ್ರ ದೇವರೆ ಧರಿತ್ರಿಗೆ ದೇವರ(ರ) ದೇವರಲ್ಲರೇ ॥

* ಸಾರಕಳಾಪ್ರಬೋದಿತ ಸುದಾಕರರೂರ್ಜ್ಜಿತ ಸಾಧುಸಂಘನಿ ।
ಸ್ತಾರಕರಂ(ಗ) ಜಾತಮಹಿಜಾತವಿದಾರಕರುಗ್ರ ಕರ್ಮ್ಮ ಸಂ।
ಹಾರಕರತ್ಯುದಾರ (ತರನೂತನ ಗುಣಾನ್ವಿ)ತ ಸರ್ವ್ವಣನ್ನಿ ಭ ।
ಟ್ಟಾರಕರಲ್ತೆ ಭವ್ಯಸುಕುಮಾರಕ ಕೈರವತಾ..... ಧಿಪರ್ ॥

ಉರಗಪಿಶಾಚಭೂತವಿಹಗೋಗ್ರ ನವಗ್ರಹಶಾಕಿನೀ ನಿಶಾ।
ಚರ ಭಯವಿ-ಶಾಚರದೊಳದ್ಭುತದಿಂ ವಿಪರೀತಮಾದಡಂ ।
ಬರೆದುದು ಯಂತ್ರಮೊಲ್ದುದೆ ತಂತ್ರಮೆಂ......... ಜಿತಕುಸುಮಾ
ಸ್ತ್ರ ರೂರ್ಜ್ಜಿತ ಯಶೋಧನರಾರ್ಜ್ಜಿತ ಪುಣ್ಯಕರ್ಮ್ಮರನ್ವಿತ ಬಹುಶಾಸ್ತ್ರರಾದ್ಯ

ತಸುಶೀಳರದ್ಧಃ ಕೃತಕಿಖಿಳ್ಳಿಜಶರ್ಪ್ರಬೋಧಿತ ಬುಧ.....

....ಪಕರಭಪಿನು

ತರ್ ಶ್ರೀ ಮಾಘನನ್ದಿದೇವರ್ಪ್ಪಲವುಂ ಜಿನನಿಳಯಂಗಳನಖಿಳಾವನಿ ಬಣ್ಣಿಸೆ ಬಳ್ಳಿಗಾ.............

....ಜಿನಪೂಜಾಭಿ........................

ರ್ಚ್ಚನಾನಿರತನಾಹಾರಾದಿ ದಾನಪ್ರವರ್ದ್ಧನಶೀಳಂ ನುತಭವ್ಯ.......................

....ಹಾಮಂಡಳೇಶ್ವರ ಲಕ್ಷ್ಮರಸಂ ಶ್ರೀ ಮಲ್ಲಿಕಾಮೋದ ಶಾನ್ತಿನಾಥಜಿ..................

....ಕೀಲಕ ಸಂವತ್ಸರದ ಭಾದ್ರ ಪದದ ಪುಣ್ಣಮೆ ಸೋಮವಾರದ

....ದದೇಸಿಗಗಣದ ತಾಳಕೋ ಲಾನ್ವಯದ ಮಾಘಣನ್ದಿ ಭಟ್ಟಾರ

....ರ್ಗೆ ಮುನ್ನಂ ಶ್ರೀಮಜ್ಜಗ ದೇಕಮಲ್ಲ ದೇವರ್ಬ್ಬಳ್ಳಿಗಾವೆಯ ತಾ

....ಟ್ಟಿಮತ್ತರ್ಪ್ಪನ್ನೆ ರಡ ಆಲ್ಲಿಯ ಗೊಳಪಯ್ಯನ ಬಸದಿಗೆ

....ಶ್ರೀಮಚ್ಚಾಳುಕ್ಯಗಂಗ ಪೆರ್ಮ್ಮಾನಡಿ ವಿಕ್ರಮಾದಿತ್ಯ ದೇವರ್

....ಮುಮಂ ನನ್ದನ ವನದ ಬಸದಿಗೆ ಪೂರ್ವದಿನ್ನಡೆವ

....ಭೂಪಂ ಸಮುಚಿತವಿನಯಂ ಬಿನ್ನಪಂ ಗೆಯ್ಯೆ..............

....ದರ್ಪ್ಪದೇವಂ ॥ ಅನಘ ಶ್ರೀಶಾನ್ತಿ ತೀರ್ತ್ಥೇಶ್ವರಪದ................

.... ಸೋದಕ ವಿಧಿಸಹಿತಂ

ಶಾಸನಂ ಮಾಡಿಕೊಟ್ಟ .... ಇನ್ತೀ ಧರ್ಮ್ಮಮನಾವನೋರ್ಬ್ಬಂ ಪ್ರತಿಪಾಳಿಸಿ

....ಮಿದನಳಿದನನಿಬಬ್ರಾಹ್ಮ ಣರುಮನನಿತು ಕವಿಲೆಯುವನಾ ಪುಣ್ಯ ತೀರ್ತ್ಥಂಗಳೊ

....ಸ್ತಂತೇಷಾಂ ಮಯಾ ವಿರಚಿ ತೋಂಜಳಿರೇಫ ಮೂರ್ದ್ಧ್ನಾ ॥ ಸಾಮಾನ್ಯೋಯಂ ಧರ್ಮ್ಮಸೇತುರ್ನ್ನೃ

....ಸುನ್ದರಾಷಷ್ಟ್ವರ್ಷ್ಷಸಹ ಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿ : ॥ ಬಹುಭಿ

....ವುಗ್ರಾಣದ .... ವಭೋಗದ ಸದಾಯಾಮಾತ್ಯರೂರೊಳ್ಕುಳ

....ಆತ್ಮಕುಳದ್ವಿಜವೂ ಗವ ಗೋಕುಳಮನಳಿದ

....ಪೊಂಜಿಡ್ಡುಳಿಗೆಗುಟಿ'ದ ನಾಲ್ಕೂಖು ಪೊಂಮಾನಿಗರ್ದ್ಧಂ

....॥ ಎರಡಕ್ಕು ಕೃಷ್ಣಭೂಮಕ್ಕರಜಿರೆ ಕಿಸು

....ಮದಜಿರೆಯುಂ ನೋಡಿ ಸಿದ್ಧಾಯ ಮಕ್ಕುಂ ॥

....ಗ ದಾಸೋಜಂ ಖಣ್ಡರಿಸಿದಂ ಮಂಗಳಮಹಾಶ್ರೀ ॥

ಅನುಬಂಧ-೨

ಸುಕುಮಾರ ಚರಿತಂ ಶಬ್ದಕೋಶ

ಅ

ಅಕಿಂಚನ	i-೨೬;	ಬಡವ
ಅಖಲ್ಯ	ii-೧೮	ಹೇಡಿ
ಆಗುರ್ವು	ix-೪೭	ಹೆದರಿಕೆ
ಅಚ್ಚರೆ	x-೨೨	ಅಪ್ಸರೆ.
ಅಚ್ಚಿಗ	iii-೬ ವ	ವ್ಯಥೆ, ಉದ್ವೇಗ
ಅಚ್ಚುಳಾಯ್ತ	xi-೨೫	ಪರಿಚಾರಕ
ಅಟ್ಟ	v-೫೪	ಅಂಗಡಿ
ಅಟ್ಟು	xi-೪೧ ವ	ಅಟ್ಟ, ಅಟ್ಟಣೆ.
ಅಡಗು	xi-೪೨	ಮಾಂಸ
ಅಡಪವಳ್ಳ	xi-೩೨ ವ	ತಾಂಬೂಲವಾಹಕ; ಎಲೆ ಅಡಕೆಯು ಚೀಲವನ್ನು ತರುವ ಆಳು.
ಅಡಸು	v-೧೨, ವ, ೧೮	ಪ್ರಾಪ್ತವಾಗು, ಮೇಲೆ ಬೀಳು.
ಅಡಹಡಿಸು	iv-೧೦, vii-೧೯	ಸಡಗರ ಪಡು
ಅಣ್ಮು	vii-೩೩ (ವ)	ಪ್ರಯತ್ನಿಸು
ಅತ್ತಳಗ	i-೭೯	ಅಸಾಧ್ಯ.
ಅದಟು	iv ೪೨	ಪರಾಕ್ರಮ.
ಅನೀಕ		ಸೈನ್ಯ
ಅನೋಕಹ	viii ೫೮	ಮರ.
ಅಪಗತ	ix ೨	ಕಳೆದು ಹೋದ; ನಿವಾರಣೆಯಾದ
ಅಪ್ಪಯಿಸು	vii ೩೦ ವ	ಒಪ್ಪಿಸು
ಅಪ್ಪುಕೆಯ್	ix ೯	ಸ್ವೀಕರಿಸು

ಅಮಳ್	iv ೫	ಅವಳಿಜವಳಿ
ಅಮೃತಾವಾಸ	i ೧	ಮೋಕ್ಷ.
ಅಯಸ	vii ೩೨	ಕಬ್ಬಿಣ
ಅಯ್ಕಿಲ್	iv ೧೨	ಚಳಿ, ಮಂಜು
ಅರಾತಿ	i ೩೯ ವ;	ಶತ್ರು
ಅರಿಯಿಸು	x ೧೨೦ ವ	ಕತ್ತರಿಸು
ಅಸುಕೆ	ix ೪೮	ಅಶೋಕ ವೃಕ್ಷ
ಅಳಂಕೆವೆತ್ತಿರು	x ೬೨	ಚಿತ್ರಿತವಾಗಿರು
ಅಳವು	vii ೨೪, x ೩೩	ಪ್ರಮಾಣ, ಅಳತೆ
ಅಳಿಪು	xi ೧೯ ವ	ಅತ್ಯಾಶೆ.
ಅಳುರ್	iii ೪೦ v ೭ ವ	ವ್ಯಾಪಿಸು
ಅಳುಂಬಂ	ii ೩.೭, iv ೫೯	ಅತಿಶಯ.
ಅಳ್ಕುಱು	vii ೩೬	
ಅಳ್ಳಿಱಿ	v ೫೧	ನಡುಗಿಸು, ಸ್ಪಂದಿಸು.
ಅೞ್ತಿ	ii ೪೭ ವ, iv ೨೩,	ಪ್ರೀತಿ.
ಅೞ್ವಿ	v ೨೭, xii ೪೦	ವಿಶೇಷವಾಗಿ ಸುಡು, ದಹಿಸು.
ಅಂಗಚಿತ್ತ	vii ೫ ವ, ೪೬	ಬಹುಮಾನ
ಅಂಚಿರ	viii ೬೫	ಅಸ್ಪಷ್ಟ, ಅಶಾಶ್ವತ

ಆ

ಆಟಿಸು	vii ೨೭ ವ	ಅಪೇಕ್ಷಿಸು
ಆಭ	xi ೪೧	ಕಾಂತಿ.
ಆಭೀಳ	ii ೫೨, i	ಭಯಂಕರ
ಆಭೋಗ	viii ೬೪	ವಿಸ್ತಾರ
ಆರ್ಜಿಕೆ	viii ೬೯	ಜೈನತಪಸ್ವಿನಿ.
ಆರ್ಮ	i ೬, ೫೫;	ಆಶ್ರಯ.
ಆಲಿವರಲ್	x ೫೭ ವ	ಆಲಿಕಲ್ಲು.
ಆಲೀಢ	i ೭೯ ವ	ಹೀರಿದ; ನುಂಗಿದ.
ಅವಹ	i ೬೮	ಉಂಟು ಮಾಡುವ
ಆವಿದ್ಧ	viii ೬೪	ಕೊರೆದ; ರಂಧ್ರಗೈದ.
ಆಸಾರ	ix ೨೦	ಜಡಿ ಮಳೆ
ಆಳಿಸು	xi ೮೩ ವ	ಸೇರಿಸು, ಕೂಡಿಸು
ಆಳ್ವೆರಿ	x ೫೨	ಕೋಟೆ ಬುರುಜು

ಇ

ಇಕ್ಕುಟಿಸು	ix ೪೪	ಇಕ್ಕಳದಲ್ಲಿ ಸಿಕ್ಕಿಸು; ಕಷ್ಟದಲ್ಲಿ ಸಿಕ್ಕಿಸು
ಇಭ್ಯಕುಲ	x ೪	ಶ್ರೀಮಂತ ಜಾತಿ; ವೈಶ್ಯ
ಇಂದೋಳ, (ಇಂದೊಳ)	i ೭೧, v ೫೧	ಹಿಂದೋಲ ರಾಗ
ಇಂಬುಕೈ	ix ೩೭	ಮನೋಹರವಾಗು

ಈ

ಈಳೆ	xi ೨೦	ಒಂದು ಜಾತಿಯ ಮರ
ಈಜ್ಕೊಳ್	x ೫೬	ಸೆಳೆದುಕೊ

ಉ

ಉಕ್ಕೆವತನ	ii ೬೨ ವ	ಕಪಟ; ಮೋಸ
ಉಗಿ	i ೪೨, ii ೧೬	ಆಕರ್ಷಿಸು
ಉಗಿಬಗಿ	xi ೪೨	ತುಂಡುಮಾಡು, ಕದಡು
ಉಚ್ಚು	i ೬೫	ನಿಮಿರಿ ನೆಟ್ಟಗೆ ನಿಲ್ಲು
ಉಣ್ಮು	i ೭೨	ಹೊಮ್ಮು, ಉಬ್ಬು, ಹೆಚ್ಚಾಗು
ಉತ್ಸೇಧ	xi ೪೧ ವ	ಎತ್ತರ
ಉದ್ದಂಬರು	i ೮೦	ಗರ್ವಿಷ್ಠನಾಗು
ಉದ್ಧುರ	viii ೬೩	ಸ್ಪಷ್ಟವಾಗಿ ಕೇಳಿಸಿದ
ಉದ್ಧೂತ	i ೨೦, ix ೬೯	ತೊಳೆಯಲ್ಪಟ್ಟ
ಉದ್ಭಾಸೆ	i ೮	ಬೆಳಗುವವಳು
ಉದ್ಭೂತ	iv ೧೩	ಹುಟ್ಟಿದ
ಉಪಕಂಠ	ii ೪೮ ವ, iv ೩೮ ವ	ಸಮೀಪ
ಉಪಗತ	ii ೭, ೧೮	ಸಮೀಪಿಸಿದ; ಸಹವಾಸಮಾಡಿದ
ಉಪದಂಶ	xi ೨೯, ೩೨ ವ	ನಂಜಿಕೊಳ್ಳುವುದು, ಉಪ್ಪಿನಕಾಯಿ
ಉಮ್ಮಚ್ಚ	iii ೬ ವ, ೨೬	ಕ್ರೋಧ

ಊ

ಊಡು	ii ೬೩	ಊಟಮಾಡಿಸು; ತಿನ್ನಿಸು
ಊಳ್	vii ೪೦	(ನರಿಯಂತೆ) ಕೂಗು

ಎ

ಎಕ್ಕಸಿರ್ಕು	ii ೧೦	ರೋಷ, ಉದ್ರೇಕ
ಎಚ್ಚು	xii ೧೮	ಬಳಿ, ಲೇಪಿಸು
ಎಡಂಬಡು	iv ೩೨	ಅಸಮಾಧಾನ, ಎಡವಟ್ಟು
ಎಡೆಮಡಗು	v ೧೪	ಅವಕಾಶಕೊಡು
ಎಡೆವಟ್ಟಲ್	xi ೨೬	ಊಟದ ಬಟ್ಟಲು
ಎಣಿಲ್	vii ೨೭ ವ	ಸುಂದರಿ
ಎಱಕ	ii ೨೮	ಪ್ರೀತಿ
ಎಱೆವಟ್ಟು	ii ೬,	ಶ್ರೇಷ್ಠಸ್ಥಾನ, ಮುಖ್ಯಸ್ಥಳ
ಎಸಕ	vii ೧೧	ಕಾರ್ಯ
ಎಳೆ	ix ೬೯	ಇಳೆ, ಭೂಮಿ

ಏ

ಏಗೊಳ್	xi ೩೮ ವ	ಅಂಗೀಕಾರಮಾಡು
ಏವ	ii ೩೨ ವ	ಅಪಮಾನ
ಏಳಿಸು	vi ೫೫	ಅವಹೇಳನ ಮಾಡು

ಒ

ಒಕ್ಕಲ್	ii ೧೦	ಸಂಸಾರ
ಒಚ್ಚತ	iii ೬ ವ	ಹೊಂದಿಕೆ, ಸಂತೋಷ
ಒಟ್ಟಜೆ	i ೪೪	ಗುಂಪು, ರಾಶಿ
ಒಡರ್ಚು	v ೫೬, vii ೩	ಮಾಡು
ಒಡವಟ್ಟು	v ೧೨	ಜೊತೆಗೆ ಬಾಳಿ
ಒಡ್ಡಯ್ಸು	iv ೨೬	ಸೋಲಿಸು; ಪ್ರತೀಕಾರ ಮಾಡು
ಒಯ್ಯನೆ	iv ೧೮	ಕ್ರಮವಾಗಿ
ಒಱೆ	iv ೫೮	ಜೆನುಗು
ಒಳ್ಪು	i ೬, ೬೬, ೭೧	ಒಳ್ಳೆಯತನ

ಓ

ಓಗರ	xi ೩೫ ವ	ಅನ್ನ
ಓಜೆಗೊಳ್	ix ೨೨	ಕ್ರಮವನ್ನು ಅನುಸರಿಸು; ಅನುಕ್ರಮವಾಗಿರು

ಓವು	i ೪೭	ಸಂರಕ್ಷಿಸು
ಓಸರಿಸು	i ೭೪	ಜಾರು

ಔ

ಔದುಂಬರ ಕುಷ್ಠ	v ೧೧, ೨೭	ಅತ್ತಿಯ ಹಣ್ಣಿನಂತೆ ಹುಳುಬಿದ್ದ ಕುಷ್ಠ ರೋಗ
ಔರ್ವಾನಲ	ix ೭೬	ಬಡಬಾಗ್ನಿ

ಕ

ಕಚ್ಚುಟ	iv ೩೦	ಕೌಪೀನ
ಕಟ್ಟುಕಡೆ	ii ೧೨ ವ	ವ್ಯಥೆಪಡು
ಕಡಕು	xii ೧೮	ಕಿರುಗಲ್ಲು
ಕಡಾರ	vii ೨೮ ವ	ಪಿಂಗಳ
ಕಡುಪು	vi ೩೮	ಉತ್ಸಾಹ
ಕಣಿ	i ೬೯	ಗಣಿ, ವಾಸಸ್ಥಾನ.
ಕಣೆ	i ೭೯	ಬಾಣ
ಕತಿಪಯ	ii ೪೫ ವ	ಕೆಲವು
ಕದಂಬ (ಕ)	i ೪೨	ಗುಂಪು
ಕದಕ್ಕದಿಸು	xi ೧೧	ನಡುಗು
ಕನಲು	vii ೨	ಕೋಪಗೊಳ್ಳು
ಕನೀಯ	v ೨೪	ತಮ್ಮ, ಚಿಕ್ಕಸೋದರ
ಕಬರಿ	x ೨೪	ತುರುಬು
ಕಯ್ಗಗ್ಗಣ್ಮು	vi ೫, ix ೭೩	ಕೈತೊಳೆ
ಕಯ್ಪಿಡಿ	v ೫೪	ಕನ್ನಡಿ
ಕಯ್ಮಿಗು	v ೨೧ ವ	ಹೆಚ್ಚಾಗು
ಕರುವಿಡು	v ೫೬	ಎರಕ ಹೊಯ್ಯಿ
ಕರ್ಗು	x ೧೪	ಕಪ್ಪಾಗು
ಕರ್ದಮ	x ೫೪, ೮೯	ಕೆಸರು
ಕಲ್	iii ೨೮ ವ	ಕಲಿತುಕೊ
ಕಲ್ಪಿ	ii ೮	ವಿದ್ಯೆ
ಕವಡಿಕೆ	iii ೬ ವ	ಮೋಸ
ಕವುಂಗು	i ೭೨	ಅಡಕೆ

ಕಳಮೆ	ix ೫೩	ಭತ್ತ
ಕಳಾಪಿ	ix ೫೪	ನವಿಲು
ಕಳಿಕೆ	x ೬೨	ಬೆಂಕಿಯ ಜ್ವಾಲೆ
ಕಟಿಲ್	xi ೩೧	ಬಡವಾಗು, ಮಜ್ಜಿಗೆ, ಕಾಲ್ಕಡಗ
ಕಾರಂಡ	x ೫೩	ಬಾತಿನ ಜಾತಿಗೆ ಸೇರಿದ ನೀರಹಕ್ಕಿ
ಕಾಸಾರ	xi ೩೨ ವ	ಸರೋವರ
ಕಾಳಸೆ	xi ೫೦ ವ	ಜೋಡಣೆ
ಕಿನಿಸು	ii ೬೭ ವ	ಕೋಪಗೊಳ್ಳು
ಕಿಸಲಯ	ix ೨೦೭ ವ	ಚಿಗುರು
ಕಿಸು	x ೪೫	ಕೆಂಪು
ಕಿಸುಗುಳ	iv ೫೯	ದುಷ್ಟ
ಕೀಲಾರ	vii ೩೫ ವ	ಕೊಟ್ಟಿಗೆ
ಕುಜ	xii ೨೧	ಮರ
ಕುಟ್ಟಿಮ	xii ೪೨ ವ	ಜಗಲಿ
ಕುತ್ಕೀಲ(ಳ)	i ೬೮	ಬೆಟ್ಟ
ಕುತ್ತ	vi ೩೮	ರೋಗ
ಕುನುಂಗು	ii ೨೦	ಕುಗ್ಗು
ಕುಱಿಪು	v ೩೩	ಗುರುತು
ಕುಱುವಡಿ	vii ೨೭ ವ	ಸಣ್ಣ ಬಟ್ಟೆ
ಕುಶೇಶಯ	ix ೧೮	ಕಮಲ
ಕುಸೃತಿ	iv ೬೧	ಕುನೀತಿ, ಕೆಟ್ಟನಡತೆ
ಕುಳಿಕ	ii ೧೯	ವಿಷಸರ್ಪ
ಕುಳಿರ್	iv ೪೦	ಚಳಿ
ಕುಳಿಶ	v ೫೧	ವಜ್ರಾಯುಧ
ಕೂಂಕು	x ೧೦೧ ವ	ತುರುಕು
ಕೂಪಾರ	v ೨೧	ಸಮುದ್ರ
ಕೂರ್	iv ೩೭	ಸ್ನೇಹ, ಪ್ರೀತಿ
ಕೆತ್ತು	iv ೨೬	ಹಾರು, ಅದುರು
ಕೆಮ್ಮನೆ	i ೪೪	ಸುಮ್ಮನೆ
ಕೆಯ್ತ	vii ೧೧	ಕಾರ್ಯ
ಕೆಲ್ಲಯಿಸು	xi ೨೧	ತೊಂದರೆಗೊಳ್ಳು
ಕೇತನ	v ೫೪	ಬಾವುಟ

ಕೇಯೂರ	ix ೩೯	ತೋಳ ಬಂದಿ
ಕೈಗೆಯ್	xi ೩೨ ವ	ಅಲಂಕರಿಸು
ಕೈಘಟ್ಟ	xi ೩೨ ವ	ಅನುಲೇಪನ
ಕೈದು	v ೫೪	ಆಯುಧ
ಕೈರವ	ix ೩೫	ಕೆನ್ನೆಯ್ದಿಲೆ
ಕೊಡಗೂಸು	vii ೨೭ ವ	ಕನ್ಯೆ
ಕೊಡವಿ	vii ೨	ಕನ್ಯೆ
ಕೊಸಗು	x ೫೭	ಬೆಟ್ಟದಾವರೆ
ಕೋಳ್	x ೯೩	ಕೊಳ್ಳೆ
ಕೌಕ್ಷೇಯಕ	i ೭೯ ವ	ಕತ್ತಿ
ಕೌವರೆ	xi ೨೨ ವ	ಸಂಭ್ರಮ
ಕ್ಷುರ	v ೫೧	ಕತ್ತಿ
ಕ್ಷ್ಮಾ	i ೭೯ ವ	ಭೂಮಿ
ಕಂಕೆ	ii ೪೬	ತೆನೆ
ಕಂಬು	v ೫೧, ix ೮೯	ಶಂಖ

ಖ

ಖನನ	vii ೧೮	ಅಗೆಯುವಿಕೆ
ಖಲ್ಯ	ii ೧೮	ಒಂದು ದೊಡ್ಡ ಸಂಖ್ಯೆ
ಖಸ	viii ೭೦	ಇಸಬು, ಕಜ್ಜಿ
ಖೇಡ	i ೭೫, iv ೨೦ ವ	ಹಳ್ಳಿ
ಖೇಯ	ix ೫೭	ತಗ್ಗು

ಗ

ಗಣಿಕೆ	vii ೮	ವೇಶ್ಯೆ
ಗಳಿಪು	x ೧೧೪	ಅತಿಯಾಗಿ ಹರಟು
ಗಾಡಿ	ix ೪೪	ಸೌಂದರ್ಯ
ಗಿಡಿಗಿಡಿಜಂತ್ರ	iv ೪	ಗಿರಿಗಿರಿ ತಿರುಗುವ ಯಂತ್ರ
ಗಿಣ್ಣನ್	vi ೪೩	ಬೆರಳುಗಳು ಉದುರಿ ಹೋಗುವ ತೊನ್ನು
ಗುಡಿ	v ೬೧, x ೨೭	ಬಾವುಟ
ಗುಡ್ಡ	iv ೨೩ ವ	ಭಕ್ತ, ಶಿಷ್ಯ

ಗುಣಣೆ	vii ೧೦	ನಾಟಕ ಶಾಲೆ
ಗುಪ್ತಿಗುಪ್ತ	iv ೩೯, i ೧೫	ಮರೆಯಾಗಿರುವ ಕತ್ತಿ
ಗೂಥ	ii ೭೧	ಹೊಲಸು, ಅಮೇಧ್ಯ
ಗೆಱೆವಡು	i ೬	ತೀಟೆಯನ್ನು ಅನುಭವಿಸು
ಗೊಟ್ಟಂಗೊಱೆ	xi ೪೭ ವ	ದೊಡ್ಡ ರಂಧ್ರವಾಗುವಂತೆ ಕೊರೆ
ಗೊಡ್ಡ	iv ೨೬	ತುಂಟಾಟ
ಗೋಣ್ಮುರಿಗೊಳ್	vii ೩೭ ವ	ಕತ್ತುಹಿಚುಕು
ಗೋಶೀರ್ಷ	xi ೩೨ ವ	ಸುಗಂಧಯುಕ್ತ ಶ್ರೀಗಂಧ
ಗೋಲಾಂಗೂಳ	v ೨೧	ಕಪ್ಪುಕೋತಿ
ಗಂಡುಗೆಡು	vii ೪೨	ಶಕ್ತಿಹೀನನಾಗು
ಗುಂಡಿಗೆ	v ೩೨	ಪಾತ್ರೆ
ಗುಂಡುಗೊಳ್	v ೧೮	ಗುಂಪಾಗು

ಘ

ಘರ್ಮ	x ೧೧೯	ಸೆಖೆ, ಉಷ್ಣ, ಕಾವು

ಚ

ಚತುರಶೀತಿ	xi ೭೯	ಎಂಬತ್ತುನಾಲ್ಕು
ಚಿಕುರ	i ೭೯ ಬಿ	ಕೂದಲು
ಚೀರಘಟ್ಟೆ	v ೫೬	ದೇವಚಿತ್ರಕ
ಚೌವಟ್ಟ	iis	ನಾಲ್ಕು ಬೀದಿಗಳು
ಚಂಚು	iv ೬೩	ಕೊಕ್ಕು
ಚಂದ್ರಾಭ	v ೫೩	ಬೆಳುದಿಂಗಳು
ಚಿಂಗಾರೆ	iv ೫೭	ಕೆಂಪು ಕಾರೆಹಣ್ಣು
ಚೆಂಬೊನ್	vi ೨೯	ಚಿನ್ನ

ಛ

ಛವಿ	iv ೫೪	ಕಾಂತಿ
ಛಾಯಾಂಗಿ	i ೮	ತೆಳುವಾದವಳು

ಜ

ಜಕ್ಕವಕ್ಕಿ	iv ೪೯	ಚಕ್ರವಾಕಪಕ್ಷಿ
ಜತ್ತಿಸು	ix ೬೩	ಸ್ನೇಹಮಾಡು

ಜರತ್	x ೩೧	ಮುಪ್ಪಾದ
ಜಳೂಕ	iv ೯, v ೪೩	ಜಿಗಣೆ
ಜಾತರೂಪಧರ	iv ೩೮ ವ	ತೀರ್ಥಂಕರ, ದಿಗಂಬರ
ಜೊತ್ತಿಸು	vii ೫ ವ	ವಂಚಿಸು
ಜೊನ್ನ	xi ೫೪	(ನಂ) ಜ್ಯೋತ್ಸ್ನಾ, ಬೆಳುದಿಂಗಳು

ಝ

ಝೂಳೆಯ	vii ೩೫ ವ, ೩೭ ವ	ಕಾಂತಿ

ಡ

ಡಂಗೆ	xi ೪೭ ವ	ಕೋಲು

ತ

ತಕ್ಕು	iii ೩೧	ಪರಾಕ್ರಮ, ಶಕ್ತಿ
ತಡವಡಿಸು	iv ೫೮	ಹಿಂದು ಮುಂದೆ ನೋಡು
ತರ್ಗು	v ೧೪	ತಗ್ಗು, ಕೆಳಕ್ಕೆ ಇಳಿ
ತಱಿಸಲ್	ii ೬	ನಿಶ್ಚಯಿಸು
ತಂಡುಲ	x ೧೦೮	ಅಕ್ಕಿ
ತಲೆಯೆಱಕ	ii ೨೮	ತಲೆ ತಗ್ಗಿಸುವುದು
ತಲೆವಱಿ	iii ೨೯	ತಲೆ ಬೋಳಿಸು
ತವಿಲ್	ii ೯	ನಾಶ
ತಳರ್	vii ೧೯	ಹೊರಡು
ಚಟ್ಟೈಸು	vii ೭೩	ಆಲಿಂಗಿಸು
ತಳ್ತ	i ೬೨	ಸೇರಿದ
ತಳ್ಳಂಕಗುಟ್ಟು	ix ೬೩	ತುಂಬಿ ತುಳುಕು
ತಳ್ವು	vii ೨೧	ನಿಧಾನಿಸು
ತಳ್ಪೊಯ್	vii ೧೧	ಸಂಘಟ್ಟಿಸು, ತಗುಲಿಕೊಳ್ಳು
ತಾಯ್‌ಗರು	i ೬	ತಾಯಚ್ಚು, ಮೂಲ ಎರಕ
ತಿಗ್ಮರುಚಿ	ii ೩೯	ಸೂರ್ಯ
ತೀಟ	v ೬೦	ಸ್ಪರ್ಶ
ತೀವು	iv ೫೭	ತುಂಬು
ತುಱುಗಲ್	x ೫೨	ಸಮೂಹ

ತುಹಿನ	i ೫೬	ಮಂಜು
ತೂರ್ಯ	v ೬೧	ಮಂಗಳವಾದ್ಯ
ತೆಱಪು	ii ೧೧	ಅವಕಾಶ
ತೊಂಗಲು	i ೭೨	ಗೊಂಚಲು
ತೊಟ್ಟಗೆ	ii ೬೩	ಶೀಘ್ರವಾಗಿ, ಇದ್ದಕ್ಕಿದ್ದ ಹಾಗೆ
ತೊಡಂಕಿಕ್ಕು	iv ೨೬	ತೊಡಕು ಹಾಕು
ತೊಣೆ	x ೫೧	ಜೊತೆ
ತೊದಳ್	vi ೫೦	ಸುಳ್ಳು
ತೋಟಿ	vii ೪೪	ಜಗಳ
ತೋಡು	x ೫೧	ಜೊತೆ
ತ್ರಸ	viii ೬ ವ	ಜೀವಜಂತುಗಳು
ತ್ರಿಗುಪ್ತಿ	xii ೩೫	ಮೂರು ಬಗೆಯ ನಿಗ್ರಹಗಳು
ತೃಷ್ಣಾತುರ	iv ೫೭	ಬಾಯಾರಿಕೆಯಿಂದ ಬಳಲಿದ

ದ

ದಂದುಗ	x ೬	ಕಷ್ಟ
ದಬ್ಬುಕ	vii ೬	ದಬ್ಬಳ
ದಸಿ	xi ೪೭ ವ	ಶೂಲ
ದಳಿಂಬ	x ೧೦೦ ವ	ವಸ್ತ್ರ
ದಾಂಗುಡಿ	x ೧೦೮	ಕುಡಿ
ದಿಬ್ಯ	xii ೫೧	ದಿವ್ಯ
ದೀನಾರ	x ೧೧೮	ಒಂದು ನಾಣ್ಯ
ದೀವ	xi ೨೧	ಪ್ರಾಣಿಗಳನ್ನು ಆಕರ್ಷಿಸಲು ಒಡ್ಡುವ ಮೃಗ
ದುಂದುಮೆ	x ೧೧೭	ಭೇರಿ, ನಗಾರಿ
ದುಂದುಱುಂಬೆ	vii ೨೯ ವ	ಗಯ್ಯಾಳಿ
ದೇಸೆ	i ೩೮	ಚೆಲುವು
ದೇಹೋಚ್ಛೃತಿ	ix ೩೩	ದೇಹದ ಎತ್ತರ (ದೇಹ + ಉಚ್ಛ್ರಿತಿ)
ದೊಣೆ	i ೭೯	ಬತ್ತಳಿಕೆ
ದೊಮ್ಮಳಿಸು	vii ೪೦	ಸಡಗರಿಸು
ದೋಣಿವೋಗು	v ೧೬	ಹಳ್ಳವಾಗು
ದ್ವಿಪ	i ೭೭	ಆನೆ

ದ್ವಿಷದ್	ix ೭೬	ಹಗೆ
ದ್ಯುಚರ	vii ೧೮	ಖೇಚರ, ಗಂಧರ್ವ
ದ್ರುಮ	ix ೪೧	ಮರ
ಧಮ್ಮಿಲ್ಲ	ix ೫೪	ತುರುಬು
ಧಿಷಣ	ix ೭೬	ಪಂಡಿತ

ನ

ನಚ್ಚು	iii ೬	ನಂಬು
ನಚ್ಚಣೆ	x ೭೭	ನರ್ತಕಿ
ನಡೆಗಜ್ಜಿತ್ತೆ	ii ೫೯ ವ	ಹೇರನ್ನು ಹೊರುವ ಕತ್ತೆ
ನರ್ಮ	v ೫೧	ಲೀಲೆ, ಚೆಲುವು
ನಾಳಿಪುಣ್ಣು	v ೧೬	ಗುಳಿಬಿದ್ದ ಹುಣ್ಣು
ನಿಕುರುಂಬ	v ೫೧	ಗುಂಪು
ನಿಕ್ಕುವ	xi ೭೮	ನಿಶ್ಚಯ, ಸತ್ಯ
ನಿಕುಂಜ	ix ೪೦	ಹೊದರು, ಲತಾಗೃಹ
ನಿಗಳ	x ೩೭	ಸಂಕೋಲೆ
ನಿಗೋದ	xi ೫೦ ವ	ನರಕ
ನಿಟಿಲ	x ೩೮	ಹಣೆ
ನಿಡಿಯ	x ೧೦೧ ವ	ಉದ್ದವಾದ
ನಿತಾಂತ	x ೫	ಯಾವಾಗಲೂ
ನಿಧಾನ	x ೯೩	ನಿಧಿ
ನಿಪ್ಪೊಸತು	ix ೪೪	ಹೊಚ್ಚ ಹೊಸದು
ನಿಮಗ್ನ	ii ೩೦	ಮುಳುಗಿದ
ನಿಮಿತ್ತ	iii ೫ ವ	ಶಕುನ
ನಿರಘ	xi ೭೬	ಪಾಪವಿಲ್ಲದ
ನಿರಯ	viii ೧೩	ನರಕ
ನಿರವದ್ಯ	vi ೪೮	ದೋಷರಹಿತ
ನಿರ್ಜರೆ	xii ೩೬	ಕರ್ಮದ ವಿನಾಶ
ನಿರ್ಣೀತ	i ೪೯	ನಿಶ್ಚಯಿಸಿದ
ನಿರ್ಣಿಕ್ತ	iii ೧೫	ನಿಷ್ಕಲ್ಮಶವಾದ
ನಿರ್ವರ್ತಿತ	iii ೪ ವ	ಮುಗಿಸಲ್ಪಟ್ಟ
ನಿಷಾದಿ	ix ೭೭	ಮಾವಟಿಗ
ನಿಷ್ಕಷಾಯ	i ೨೩	ರಾಗದ್ವೇಷಗಳಿಲ್ಲದಿರುವುದು

ನಿಷ್ಪಂದ	xii ೪೧	ಸ್ತಿಮಿತ
ನಿಸ್ತಾರಕ	i ೨೨	ದಾಟಿಸುವವನು
ನಿಸ್ತ್ರಿಂಶ	ii ೫ ವ	ಕರುಣೆಯಿಲ್ಲದವನು
ನಿಳಿಂಪ	ix ೩೫	ದೇವತೆ
ನೀಡ	x ೪೩	ಗೂಡು, ಆಶ್ರಯ
ನೀರದ	x ೮ ವ	ಮೋಡ
ನೀಹಾರ	ii ೫೨	ಮಂಜು
ನೆಱನ್	ii ೩೭ ವ	ಮರ್ಮಸ್ಥಾನ
ನೆಱಪು	vii ೨೬	ಪೂರ್ಣಮಾಡು
ನೆರಂಬೇೞ್	ii ೫೯ ವ	ಸಹಾಯವಾಗಿ ನೇಮಿಸು
ನೇತ್ರ	x ೯೧	ಒಂದು ಬಗೆಯಾದ ಬಟ್ಟೆ
ನೇರ್ಪು	i ೩೯	ಋಜುತ್ವ
ನೊಚ್ಚಿದ	ii ೯	ಹಗುರವಾದ
ನೋಂಪಿ	ix ೧೦ ವ	ವ್ರತ
ನ್ಯಾಸ	vi ೪೯	ಇಡುವುದು

ಪ

ಪಂಚತ್ವ	viii ೧ ವ	ಸಾವು
ಪಂಚವಿಂಶತಿ	vi ೪೬	ಇಪ್ಪತ್ತೈದು
ಪಂಚಾಸ್ಯ	vii ೪	ಸಿಂಹ
ಪಟ್ಟಣೆಗೆ	x ೯೧	ರೇಷ್ಮೆ ಬಟ್ಟೆ
ಪಡಿ	vii ೨೧	ಬಾಗಿಲು
ಪಡಿಗ	xi ೨೬	ಪಾತ್ರೆ
ಪಡಿಚಂದ	x ೫೨	(ಸಂ) ಪ್ರತಿಚ್ಛಂದ, ಸಮಾನ
ಪಡುವೋವರಿ	vii ೨೧ ವ	ಮಲಗುವ ಕೋಣೆ
ಪತ್ತುವಿಡು	iii ೪	ಸಂಬಂಧವನ್ನು ತೊರೆ
ಪದಪು	vi ೫೦	ಸಂತೋಷ
ಪದುಳಿಕೆ	ix ೧೭	ಹಮುಳತೆ
ಪಂಥ	iii ೭	ಮಾರ್ಗ
ಪರತ್ರ	iii ೩೧	ಪರಲೋಕ
ಪರಡು	v ೫೧	ಹಿಮ್ಮಡಿಯ ಗಂಟು
ಪರದ	vii ೩೧ ವ	ವ್ಯಾಪಾರಿ
ಪರಕಲಿಸು	x ೩೭	ಹರಡು, ಬಿದರು

ಪರಿಕಾಲ್	x ೫೭ ವ	ಕಾಲುವೆ
ಪರಿಗತ	ix ೯೬ ವ	ಹೊರಟು ಹೋದ
ಪರಿಖಾ	x ೫೭ ವ	ಕಂದಕ
ಪರಿಚ್ಛೇದ	ii ೫೬ ವ	ನಿರ್ಣಯ
ಪರಿಜು	v ೫೦	ರೂಪು
ಪರಿಯಣ	xi ೨೯	ತಟ್ಟೆ
ಪರಿವಡಿ	vi ೬	ಕ್ರಮ
ಪಱಿಪಡು	vii ೩೨	ಕತ್ತರಿಸಿ ಬೀಳು
ಪರೇತವನ	vi ೨೭	ಪ್ರೇತವನ, ಶ್ಮಶಾನ
ಪಲಾಲ	x ೧೧೪	ಜೊಳ್ಳು, ನಿಸ್ಸಾರ
ಪವಣ್	i ೫೯	ಪ್ರಮಾಣ
ಪಸರಂಗೊಡು	ii ೫೨ ವ	ಸಲುಗೆಯನ್ನು ಕೊಡು
ಪೞಿ	i ೪೭	ನಿಂದಿಸು
ಪಾಕಶಾಸನ	i ೬೬	ಇಂದ್ರ
ಪಾಂಗು	vii ೪೭	ರೀತಿ
ಪಾದಪ	x ೫೬	ಮರ
ಪಾಸಟಿ	x ೫೧	ಸಮಾನ
ಪಾೞಿ	vii ೨೯	ಕ್ರಮ
ಪಿಂಗು	i ೭೫	ಬತ್ತಿ ಹೋಗು
ಪಿಂಜರ	ix ೫೦	ಮಾಸಲು ಕೆಂಪು ಬಣ್ಣ
ಪಿಧಾನ	vi ೨೨	ಹೊದಿಕೆ
ಪಿಶಿತ	vii ೧೫	ಮಾಂಸ
ಪಿಸುೞ್	vi ೫೨	ಹಿಂಜು
ಪುಗಲ್	i ೭೩	ಪ್ರವೇಶಿಸಬೇಡ
ಪುಟ್ಟಗೆ	x ೯೧ ವ	ಸೀರೆ, ವಸ್ತ್ರ
ಪುಡಿಕೆ	x ೯೧	ಪುಟಿಕಾ (ಸಂ); ಡಬ್ಬಿ
ಪುಂಡ್ರೇಕ್ಷು	iv ೪೩	ಪಟ್ಟೆ ಕಬ್ಬು (ಪುಂಡ್ರ + ಇಕ್ಷು)
ಪುರ್ಗು	v ೭ ವ	ಬೇಯು
ಪುದಿ	iv ೪೧	ತುಂಬು
ಪುದುಗೊಳ್	v ೪೪	ಹುದುವಾಗು, ಹಿತವಾಗು
ಪುನರ್ಜಾತ ಕ್ಷಯಶ್ರಿ	i ೬	ಮೋಕ್ಷ ಲಕ್ಷ್ಮೀ
ಪುೞಿಲ್	iv ೪೦	ತೋಪು
ಪೂವಲಿ	x ೫೭ ವ	ಹೂವಿನ ಪೂಜೆ

ಪೃಚ್ಛೆ	iii ೬	ಪ್ರಶ್ನಿಸುವುದು
ಪೆಟೆಮೆಟಿ	vii ೫ ವ	ದಿಮ್ಮಿಗೆ ಕಟ್ಟಿ ಎಳೆ
ಪೇಂಕುಳಿಗೊಳ್	v ೨೦	ಹುಬ್ಬಾಗು
ಪೊಕ್ಕರಣೆ	ix ೫೧	(ಸಂ) ಪುಷ್ಕರಣಿ, ಕೊಳ
ಪೊಟ್ಟಳಿಗೆ	vii ೮ ವ	ಪೊಟ್ಟಣ
ಪೊಣರ್	v ೫೧	ಜೋಡಿ
ಪೊಣರ್ಚು	x ೫೧	ಸ್ಪರ್ಧಿಸು
ಪೊಣ್ಮು	i ೩	ಹೊರ ಹೊಮ್ಮು
ಪೊದಳ್	ii ೩೨	ವ್ಯಾಪಿಸು
ಪೊರ್ದು	ii ೫೨	ಸಮೀಪಿಸು, ಸೇರು
ಪೊಂಪುಳಿ	i ೬೭	ಹೆಚ್ಚಳ
ಪೊಟಿಲ್	ii ೫೬	ಪಟ್ಟಣ
ಪ್ರಜ್ಞಪ್ತಿ	xi ೩೮ ವ	ಒಂದು ಬಗೆಯ ವಿದ್ಯೆ
ಪ್ರತಿಕ್ರಮಣ	iii ೩೫	ತಪ್ಪೊಪ್ಪಿಸುವುದು
ಪ್ರತಿಪತ್ತಿ	ii ೭೩ ವ	ಕಾಣಿಕೆ
ಪ್ರತಿಬೋಧಿಸು	xii ೧೧	ಎಚ್ಚರಿಸು
ಪ್ರಭಾವಿಸು	vii ೫೩	ಮನ್ನಿಸು
ಪ್ರಥಿತ	vii ೫೪	ಪ್ರಸಿದ್ಧವಾದ
ಪ್ರದೀಪಕ	iii ೧೦	ಬೆಳಗುವವನು
ಪ್ರವಣ	iv ೧೭	ಆಸಕ್ತನಾದ
ಪ್ರವ್ರಜಿತ	iii ೩೦	ಸಂನ್ಯಾಸ
ಪ್ರಾವೃತ	iii ೧೩	ಬಳಸಲ್ಪಟ್ಟ
ಪ್ರೀಣನಕರ	i ೩೯	ಪ್ರೀತಿಯನ್ನುಂಟುಮಾಡುವ
ಪ್ರೋತ್ತುಂಗ	x ೪೮	ಅತ್ಯಂತ ಎತ್ತರವಾದ (ಪ್ರ + ಉತ್ತುಂಗ)

ಬ

ಬರ್ಕುಡಿಗುಟ್ಟು	iv ೪೩	ವಾದಮಾಡು
ಬಗ್ಗಣೆ	ii ೮	ಗದರಿಕೆ
ಬರ್ಚಿಸು	v ೫೬	ಚಿತ್ರಿಸು
ಬಟ್ಟು	ix ೫೦	ಗುಂಡಗಿರುವ ಬಿಲ್ಲೆ
ಬಟ್ಟೆ	i ೪	(ಸಂ) ವರ್ತ್ಮನ್, ದಾರಿ
ಬಣ್ಣವಣ್ಣಿಗೆ	xi ೨೯	ವಿವಿಧ ವರ್ಣದ

ಬಣ್ಣವಾಸಿಗ	x ೫	ಬಣ್ಣ ಬಣ್ಣದ ಹೂ ಹಾರ
ಬದ್ದೆ	vii ೧೩	ಪ್ರೌಢೆ
ಬರ್ಹಿಣ	i ೭೯ ವ	ನವಿಲು
ಬಲವರ್ಪ	i ೬೭	ಪ್ರದಕ್ಷಿ ಮಾಡುವ
ಬಲ್ಲಾಳ್ತನ	vii ೪೨	ಒತ್ತಾಯ
ಬಲ್ಮೊಗ್ಗಂ	ii ೫೨ ವ	ಗಡುಸಾದ ಮುಖ
ಬಸನಿಗ	xi ೪೫	ವಿಷಯಾಸಕ್ತ
ಬಸಮಟಿ	vii ೧೩	ಶಕ್ತಿಗುಂದು
ಬಹಿತ್ರ	iii ೪೧	ತೆಪ್ಪ
ಬಳವಿ	x ೧೩	ಬೆಳವಣಿಗೆ
ಬಳ್ಳವಳ್ಳಿ	xi ೨೧೮	ಆಧಿಕ್ಯ, ಅತಿಶಯ
ಬಟಿ	ii ೨೪	ದಾರಿ
ಬಾದು	ii ೬	ವಾದ, ಜೊತೆ
ಬಾಯಟಿ	vii ೩೫	ಕೂಗಿಕೊಳ್ಳು
ಬಾರಿ	vii ೨೪	ಗಸ್ತಿನ ಸರದಿ
ಬಾರಯ್ಸು	vii ೩೬	ತಡೆ, ನಿಲ್ಲಿಸು
ಬಾಸೆ	x ೧೪	ರೋಮರಾಜಿ
ಬಾಳವಂದ	x ೩೪	ಹುಡುಗರ ತೊಡವುಗಳು
ಬಿಕ್ಕೆನ್ನದೆ	ii ೨೦	ಸದ್ದುಗೈಯದೆ
ಬಿಚ್ಚತ	ix ೪೯	ವಿಸ್ತಾರ
ಬಿಚ್ಚುವ	iii ೬ ವ	ಸಂನ್ಯಾಸಿ (ಭಿಕ್ಷುಕ)
ಬಿಚ್ಚತಿಕೆ	ii ೨೬	ವಿಸ್ತಾರ
ಬಿನ್ನನೆ	vii ೪ ವ	ಮೌನವಾಗಿ
ಬಿತ್ತರಿಗೆ	xi ೨೬	ಪೀಠ
ಬಿಯ	x ೯೨	ವ್ಯಯ
ಬಿರ್ದಿನ	xi ೨೩	ಅತಿಥಿ
ಬಿಸವಂದ	ii ೫೩	ಆಶ್ಚರ್ಯ
ಬೆದಂಡೆ	ii ೨೪	ಒಂದು ಹಾಡು, ಕಾವ್ಯ ಜಾತಿ

ಮ

ಮಚ್ಚು	ix ೬೩	ಮೆಚ್ಚಿಗೆ
ಮಂಚಲ್	vii ೧೮	ವಂಚನೆ ಮಾಡುವುದು
ಮಡ	v ೫೧	ಕಾಲಿನ ಹರಡು

ಮಡಂಬ	i ೭೫	ಐನೂರು ಗ್ರಾಮಗಳಿಂದ ಬಳಸಲ್ಪಟ್ಟ ಪಟ್ಟಣ
ಮಂಡನ	i ೭	ಅಲಂಕಾರ
ಮಂಡವಿಗೆ	x ೪೫	ಮಂಟಪ
ಮದಾಪಹ	i ೩೧	ಗರ್ವವನ್ನು ಹೋಗಲಾಡಿಸುವ
ಮದಾಳಿ	x ೫೮	ಸೊಕ್ಕಿದ ದುಂಬಿ
ಮನಕ್ಷತ	vii ೯	ಮನಸ್ಸಿನ ಗಾಯ
ಮನ್ಯು	iv ೬೦	ದುಃಖ
ಮರೀಚಿ	x ೬೩	ಕಿರಣ
ಮರ್ತ್ಯಾಂಗ	iv ೦೧	ಮನುಷ್ಯದೇಹ
ಮಸಗು	ii ೬೨	ರೇಗು
ಮಸುಳ್	x ೫	ಕಂದು
ಮಸೃಣ	x ೫೭ ವ	ನಯವಾದ
ಮಹೀಧ್ರ	ix ೪೧	ಬೆಟ್ಟ
ಮಳವೆ	x ೯೧	ಬಣಬೆ, ರಾಶಿ
ಮಳೀಮಸ	viii ೩೭	ಕಶ್ಮಲವಾದ, ಕೊಳಕು ಹತ್ತಿದ
ಮಾಡ	x ೪೩	ಮನೆ
ಮಾಣಿ	ii ೩೭ ವ	ಹುಡುಗ, ವಟು
ಮಾಸರ	x ೧೦೭	ಸೊಗಸು, ಚೆಲುವು
ಮಿಸುಪು	iii ೭ ವ	ಹೊಳೆಯು
ಮಿಹಿರ	iii ೧೫	ಸೂರ್ಯ
ಮುಕುರ	i ೫೦	ಕನ್ನಡಿ
ಮುಕ್ಕುವೋಗು	iv ೨೬	ಮುಕ್ಕಾಗು, ನೆಗ್ಗಿಹೋಗು
ಮುಟ್ಟುಗೆಡು	iv ೩೦	ನಿಶ್ಶಸ್ತ್ರನಾಗು, ನಿಸ್ಸಹಾಯನಾಗು
ಮುಮುಕ್ಷು	viii ೪೬	ಮೋಕ್ಷಾಪೇಕ್ಷಿ
ಮೃಗೇಂದ್ರವಿಷ್ಟರ	ii ೧೪ ವ	ಸಿಂಹಾಸನ
ಮೆಯ್ಗರೆ	ii ೯	ಮಾಯಾವಾಗು
ಮೆಲ್ಪು	ix ೭೩	ಮೃದುತ್ವ
ಮೆಲ್ಪಿಡು	vii ೧೫	ಮೋಸಹೋಗು
ಮೇಖಳೆ	xi ೫೯ ವ	ಡಾಬು
ಮೇಲ್ಮಲೆಗೈ	ii ೮೨ ವ	ಮೇಲೆ ಮೇಲೆ ವಿಜೃಂಭಿಸು
ಮೇಳಾಪಕ	iii ೨ ವ	ಹೊಂದಿಕೆಯ ಹಾಡಿಕೆ
ಮೊಗ್ಗು	i ೫೭	ಸಾಧ್ಯ

ಮೊಱೆ	vii ೨೭	ನಂಟಸ್ತಿಕೆ
ಮೊೞ್ಗು	iv ೩೮ ವ	ನಮಸ್ಕಾರ ಮಾಡು
ಮೋದು	v ೮	ಗುದ್ದು

ಯ

ಯಕ್ಷಕರ್ದಮ	x ೧೨೪	ಕಸ್ತೂರಿಮೊದಲಾದ ಸುವಾಸನಾ ದ್ರವ್ಯಗಳ ಲೇಪನ
ಯಮಿ	iii ೨೪	ಸಂನ್ಯಾಸಿ
ಯಷ್ಟಿ	xii ೪೦	ಕೋಲು
ಯಾನ	v ೪೫	ವಾಹನ

ರ

ರಥಾಂಗ	i ೭೩	ಚಕ್ರವಾಕ ಪಕ್ಷಿ
ರದನ	v ೫೩	ಹಲ್ಲು
ರಶನ	ix ೩೫	ಮೇಖಲೆ, ಡಾಬು
ರಹರಹ	viii ೪೮ ವ	ಏಕಾಂತ
ರುಜೆ	ii ೧೧	ರೋಗ
ರೂಪ್ಯ	i ೬೬	ಬೆಳ್ಳಿ
ರೂವಾರ	ix ೫೮	ಶಿಲ್ಪ
ರೋಚಿ	iii ೧೪	ಕಿರಣ
ರೋದೋ ಭಾಗ	viii ೬೪	ಆಕಾಶ

ಱ

ಱಾಟಣ	v ೩೨	ನೀರೆತ್ತುವ ಚಕ್ರ

ಲ

ಲಂಪಳಿಕೆ	vii ೨೪ ವ	ಲಂಪಟತ್ವ
ಲಾಕ್ಷಾ	x ೧೧೫	ಅರಗು
ಲಿಕುಚ	x ೫೬	ಹೇರಳೆ ಹಣ್ಣು
ಲುಳಿತ	ix ೧೭ ವ	ವಕ್ರವಾದ
ಲೋವೆ	x ೧೨೨ ವ	ಸೂರಿನ ಚಾಚು

ವ

ವಂಕದಾರ	x ೧೧೭	ಬಾಗಿಲು
ವಟ್ಟೆ	x ೬೦	ವಸ್ತ್ರ
ವಪ್ರ	x ೫೨	ಕೋಟೆಯ ಗೋಡೆ
ವಕ್ಷಾರ	ix ೪೧	ಒಂದು ಬೆಟ್ಟ
ವಾಗ್ಗುಂಫ	ii ೧೫	ಮಾತಿನ ಸಮೂಹ
ವಾಡಿವ	x ೪೧	ಪಾಡ್ಯ
ವಾಸರ	vii ೯	ವಾರ
ವಾಳುಕ	v ೩೩	ಮರಳು
ವಿಕಚ	i ೮	ಅರಳಿದ
ವಿಕ್ಲಬ	iii ೬	ದೌರ್ಬಲ್ಯ
ವಿಗಲಿತ	ix ೭೮	ಜಾರಿದ
ವಿಚಿಕಿತ್ಸೆ	vi ೪೫	ಚರ್ಚೆ
ವಿಚಿತಿ	ii ೩೬	ಛಂದಸ್ಸು
ವಿಡಂಬಿ	i ೭೮	ತಿರಸ್ಕರಿಸುವ
ವಿತಾನ	x ೫೪	ಮೇಲ್ಕಟ್ಟು
ವಿದ್ರುಮ	x ೬೪	ಹವಳ
ವಿಧು	ii ೫೨ ವ	ಚಂದ್ರ
ವಿಧೂತ	x ೪೯	ತೊಳೆಯಲ್ಪಟ್ಟ
ವಿಧೃತ	ix ೮೩	ಧರಿಸಲ್ಪಟ್ಟ
ವಿನಿವೃತ್ತ	vi ೩೪	ಪೂರೈಸಿದ
ವಿಬೋಧಿತ	i ೨೨	ತಿಳಿಸಲ್ಪಟ್ಟ
ವಿಭೂತಿ	i ೧೧	ಐಶ್ವರ್ಯ
ವಿವರ	ii ೫೨	ರಂಧ್ರ
ವಿಶ್ವಂಭರ	ix ೭೬ ವ	ಭೂಮಿ
ವಿಶೋಧಿ	ix ೧೫	ನಿರ್ಮಲತ್ವ
ವೃಜಿನ	i ೫೧	ಪಾಪ
ವೃಂದಾರಕ	xi ೬೬ ವ	ದೇವತೆ
ವೇಸರಿ	iii ೨	ಹೇಸರಗತ್ತೆ
ವೈಶ್ರವಣ	xi ೩೭	ದೇವೇಂದ್ರ

ವ್ಯತಿಕ್ರಮ	vi ೪೫	ವ್ಯತ್ಯಾಸ
ವ್ಯಂತರ	xi ೫೦ ವ	ದೇವತೆಗಳಲ್ಲಿ ಒಂದು ಗುಂಪು
ವ್ಯಪೇತ	iv ೨೧ ವ	ಕಳೆದು ಹೋದ
ವ್ರಾಜಿತ	ii ೨೫	ಪ್ರಕಾಶಮಾನವಾದ

ಶ

ಶಬ	xii ೨೪ ವ	ಶವ, ಹೆಣ
ಶಲಾಕೆ	x ೨೧	ಸಲಾಕಿ
ಶಾತಕುಂಭ	v ೫೫	ಬಂಗಾರ
ಶಾಬ	ix ೯೦	ಮರಿ
ಶಾರದಾಭ್ರ	i ೫೬	ಶರತ್ಕಾಲದ ಮೋಡ
ಶಾಲದ್ರುಮ	iii ೨೩	ಸಾಲವೃಕ್ಷ
ಶಾಲ್ಮಲೀ	ix ೪೧	ಬೂರಗದ ಮರ
ಶುಂಡಾಳ	iii ೭	ಆನೆ
ಶುದ್ಧಗೆ	ii ३೬	ವರ್ಣಮಾಲೆ
ಶ್ಮಶ್ರು	ix ३೪	ಮೀಸೆ
ಶ್ರುತ	i ೨೩	ಶಾಸ್ತ್ರ

ಷ

ಷಣ್ಡ	iii ೧೪	ಸಮೂಹ

ಸ

ಸಂಕ್ರಂದನ	i ೫೬	ದೇವೇಂದ್ರ
ಸಂಘಾತ	i ೭೯ ವ	ಗುಂಪು
ಸಂಚಳಿಸು	viii ೬೫	ಸಂಚಾರ ಮಾಡು, ಅಲ್ಲಾಡಿಸು
ಸಂದೋಹ	vi ೭	ಗುಂಪು
ಸಂಭೃತ	ix ೧೭ ವ	ಸಿದ್ಧಗೊಳಿಸಿದ, ಒಟ್ಟುಗೂಡಿಸಿದ
ಸಪ್ತಚ್ಛದ	x ೫೬ ವ	ಏಳೆಲೆ ಬಾಳೆಯಗಿಡ
ಸಮೆಕಟ್ಟು	vi ೬	ಏರ್ಪಡಿಸು
ಸಮವಾಯ	v ३೫	ಸಂಪರ್ಕ
ಸಯ್ಪು	i ೨೬	ಪುಣ್ಯ
ಸಲಗೆ	v ३೫ ವ	ಸಲಾಕಿ

ಸಲವು	iv ೪	ಪ್ರವೇಶ
ಸವಣ	vi ೪೯	ಜೈನಯತಿ
ಸವನ	vi ೨೫	(ಸಂ) ಸ್ನಪನ, ಸ್ನಾನ
ಸಹಕಾರ	i ೭೪	ಸಿಹಿ ಮಾವು
ಸಾಮಯಿಕ	vi ೨೮	ಧರ್ಮಕ್ಕನುಸಾರವಾದ
ಸಾವದ್ಯ	v ೪೧	ದೋಷಯುಕ್ತವಾದ
ಸಾರವಣೆ	ix ೬೧	ಸಾರಿಸುವಿಕೆ
ಸಾಹಿಯಾಣ	x ೯೧ ವ	(ಸಂ) ಸೂಚೀಯಾನ, ಕಸೂತಿ ಕೆಲಸ
ಸಿಗ್ಗು	ii ೨೫	ನಾಚಿಕೆ
ಸಿತಸರ್ಷಪ	xi ೬	ಬಿಳಿಯ ಸಾಸಿವೆ
ಸಿಂಧುರ	i ೯	ಆನೆ
ಸಿರ್ಪು	xi ೩೧	ಚಿಪ್ಪು
ಸೀಱುಂಬುಳಾಡು	xii ೩೯	ಚೆಲ್ಲಾಪಿಲ್ಲಿಯಾಗಿ ಎರಚು
ಸುಗಿ	v ೧೪	ಹೆದರು
ಸುತ್ತಿಱೆ	i ೭೫	ಬಳಸು
ಸುಪ್ರಾಸುಕ	xii ೧೮ ವ	ಜೀವಜಂತುಗಳಿಲ್ಲದ
ಸುರುಳ್	iv ೧೨	ಮುದುರಿಕೊಂಡು ಹೋಗು
ಸುಲಿ	iii ೨೯	ಉಜ್ಜು
ಸುರ್ಪು	ix ೪೮	ಸುರುಳಿ
ಸೂರುಳ್	vii ೨೧	ಪ್ರತಿಜ್ಞೆ ಮಾಡು
ಸೂಱಾಯ್ತ	xi ೨೫	ಸೇವಕ
ಸೃಗಾಲ	xi ೪೧ ವ	ನರಿ
ಸೈಕಾಗ್ರ	iv ೧೨	ಏಕಾಗ್ರತೆಯಿಂದ ಕೂಡಿದ
ಸೋಲ	i ೭೨	ಮೋಹ, ಪ್ರೀತಿ
ಸೌಮನಸ	x ೪೬	ದೇವತೆ
ಸಂವೇಗ	vii ೪೮	ದುಃಖ
ಸಂವೇದಿ	ii ೩೮	ಚೆನ್ನಾಗಿ ತಿಳಿದವನು
ಸಂಸೃತಿ	v ೧೯	ಸಂಸಾರ
ಸಂಹನನ	i ೯	ಶರೀರ
ಸ್ತನಿತ	xi ೪೧ ವ	ಗುಡುಗು
ಸ್ತಬಕ	ix ೭೯	ಗೊಂಚಲು
ಸ್ತೋಭ	xi ೭ ವ	ಸ್ತಬ್ಧವಾಗಿರುವಿಕೆ

ಸ್ಮಯ	i ೫೧	ಗರ್ವ
ಸ್ರಗ್ವಿಲಾಸ	iii ೪ ವ	ಹೂಹಾರಗಳ ಸೊಗಸು

ಹ

ಹಟತ್	iii ೧೫	ಹೊಳೆವ
ಹಾಟಕ	x ೭೪ ವ	ಚಿನ್ನ
ಹಿಂತಾಳ	x ೫೬	ತಾಳೆ
ಹಾಸಿ	v ೫೩	ನಗುವುಳ್ಳ
ಹೇಮಕುತ್ಕೀಲ	i ೬೮	ಮೇರುಪರ್ವತ
ಹೈಮನಗ	iv ೧೧	ಹಿಮವತ್ಪರ್ವತ

ಅನುಬಂಧ-೩

ಕಬ್ಬಿಗರ ಕಾವಂ ಶಬ್ದಕೋಶ

ಅಂಕಿಗಳು ಪದ್ಯವನ್ನು ಸೂಚಿಸುತ್ತವೆ

ಅ

ಅಂಗೈಸು	೧೮೧ ವ	ಹವಣಿಸು
ಅಕ್ಕರಿಗ	೨೬೯	ಪಂಡಿತ
ಅಗಿ	೫೬	ಹೆದರು
ಅಗ್ಗಲಿಸು	೧೦೧	ಹೆಚ್ಚಾಗು
ಅಗುರ್ವಿಸು	೧೪೯	ಭಯಪಡಿಸು
ಅಡಸು	೪೧	ಮುನ್ನುಗ್ಗು
ಅಡ್ಡಣ	೩೭	ಗುರಾಣಿ
ಅಣಿ	೨೫೪	ಸೈನ್ಯ
ಅಣ್ಣರ್	೧೨೩	ಹೇಡಿಗಳು, ಮೈಗಳ್ಳರು
ಅತ್ತಳ	೨೭೦	ಅತಿಶಯ
ಅದಿರ್ಮುತ್ತೆ	೪೫	ವಸಂತದೂತಿಯೆಂಬ ಬಳ್ಳಿ
ಅಮರ್ಚು	೯೮ ವ	ಸೇರಿಸು, ಸಮೀಪಕ್ಕೆ ತರು
ಅಮಳ್ವಕ್ಕಿ	೧೫೭	ಚಕ್ರವಾಚ ಪಕ್ಷಿ
ಅರಗೀಲ್	೧೬೭	ಅರೆಕಾಲು
ಅರುಹ	೯	ಅರ್ಹಂತ, ಜಿನ
ಅರೆವೆಣ್ಣ	೧೫೩	ಅರ್ಧನಾರೀಶ್ವರ, ಶಿವ
ಅಱ	೧೭೪	ಧರ್ಮ
ಅಱವಟ್ಟಿಗರ್	೨೭೨	ಧರ್ಮಮಾರ್ಗವಲ್ಲಿ ನಡೆಯುವವರು
ಅಱಕೆ	೧೨೨	ಪ್ರಸಿದ್ಧವಾದ
ಅಲಂಪು	೩೯	ಸೊಗಸು, ವೈಭವ, ಸಂತೋಷ

ಅಲರ್ವಕ್ಕಿ	೧೫೩ ವ	ದುಂಬಿ
ಅವಿ	೪೮	ಮುತ್ತುಕೊಳ್ಳು
ಅಳುಂಬ	೨೧೪	ಅಧಿಕ
ಅಳುರ್ಕೆ	೧೫೧	ವ್ಯಾಪಿಸುವುದು
ಅಳ್ಳೆಗೊಂಬು	೫೩	ತೆಳುವಾದ ಕೊಂಬೆ
ಅೞಲ್	೨೮	ದುಃಖ, ವ್ಯಥೆ, ಸಂಕಟ
ಅೞ್ದಿ	೬೩ ವ	ಮುಳುಗಿದ
ಅೞ್ಗಿಸು	೧೫೩	ಕ್ಷೀಣಗೊಳಿಸು, ನಾಶಮಾಡು

ಆ

ಆನೆರಕ್ಕಸ	೧೩೦ ವ	ಗಜಾಸುರ
ಆಯ	೯೪	ಅರ್ಹತೆ, ಯೋಗ್ಯತೆ
ಆರ್	೧೨೩	ಆರ್ಭಟಿಸು
ಆರೆಕಾಱ	೩೭ ವ	ಆರೈಕೆ ಮಾಡುವವನು, ಸಾಕುವವನು

ಇ

ಇಂಗದಿರ್	೧೧೩ ವ	ಚಂದ್ರ
ಇಂಬು	೩	ಆಶ್ರಯಸ್ಥಾನ, ಮನೋಹರ
ಇಟ್ಟಣ	೩೭ ವ	ಶೋಭೆ, ಮನೋಹರ
ಇಟ್ಟೆಡೆ	೫೮ ವ	ಇಕ್ಕಟ್ಟಾದ, ಜನಜಂಗುಳಿಯ ಸ್ಥಾನ
ಇರ್ಕುಳಿಗೊಳ್	೪೭	ಸೆಳೆದುಕೊಳ್ಳು
ಇರ್ಕೆವನೆ	೪೦	ವಾಸದ ಮನೆ
ಇೞ್ಕುಳಿ	೧೫೩	ಸೆಳೆ, ಸುಲಿ

ಈ

ಈಡಿಱೆ	೧೮೧ ವ	ಕೊಂಬನ್ನು ತೀಡು

ಉ

ಉಂಡಿಗೆ	೧೩೧ ವ	ಮೊಹರು
ಉಗ್ಗಡ	೧೩೪	ಉತ್ಕಟ, ಅಧಿಕ್ಯ
ಉಚ್ಚಳಿಸು	೧೧೩	ಹೊರಗೆ ಚೆಲ್ಲು, ಮೇಲೆ ಹಾರು
ಉಡಿ	೯೮ ವ	ಮಡಿಲು
ಉಪ್ಪರ ವೊಯ್ಲು	೨೧೨	ಮೇಲುಗಡೆಯ ಏಟು
ಉಬ್ಬಟೆ	೧೪೨	ಅಧಿಕವಾದ
ಉರ್ಕು	೧	ಅಧಿಕ್ಯ
ಉರ್ಕುಡಿಗಳ್	೨೧೧	ಪರಾಕ್ರಮಶಾಲಿಗಳು
ಉರವಣೆ	೧೧೩	ವೇಗ
ಉಱೆ	೨೨	ಹೆಚ್ಚಾಗಿ

ಊ

ಊಱ್	೪೫ ವ	ಧ್ವನಿಮಾಡು

ಎ

ಎಕ್ಕೆಕ್ಕೆ	೧೫೯	ಒಟ್ಟೊಟ್ಟಿಗೆ
ಎಡೆಗಿಱೆ	೭೬	ಕಿಕ್ಕಿರಿದ
ಎಡ್ಡ	೧೯೮ ವ	ಮನೋಹರ
ಎರಲೆ	೯೭ ವ	ಜಿಂಕೆ
ಎಱಕ	೧೧೨	ಪ್ರೀತಿ
ಎಱೆವೆಟ್ಟು	೮೬	ದಿಣ್ಣೆ
ಎಱೆ	೫೨	ಬೇಡು
ಎಱೆಯ	೧೪೨	ಒಡೆಯ, ಪ್ರಭು
ಎಳೆ	೩೯	ಇಳಾ, ಭೂಮಿ
ಎಳೆದೇರ	೧೫೩	ಇಳೆಯನ್ನು ತೇರಾಗಿ ಮಾಡಿಕೊಂಡವನು, ಈಶ್ವರ

ಏ

ಏಡಿಸು	೧೭	ಹಾಸ್ಯ ಮಾಡು
ಏಱ್	೨೩ ವ	ಗಾಯ, ಹತ್ತು
ಏಟಿಸು	೧೦೩	ಹಾಸ್ಯ ಮಾಡು

ಐ

ಐಸರಲ	೧೪೫	ಪಂಚಬಾಣ, ಮನ್ಮಥ

ಒ

ಒಕ್ಕಲಿಕ್ಕು	೧೮೭	ನಾಶಪಡಿಸುವ, ಧ್ವಂಸ ಮಾಡು
ಒಗುಮಿಗೆ	೧೧೮	ಅಧಿಕ್ಯ
ಒಗೆ	೧೨೫	ಹುಟ್ಟು, ಮೂಡು
ಒಟ್ಟಜೆ	೨೪೨	ಗೌರವ, ಅಧಿಕ್ಯ, ಗುಂಪು, ಪರಾಕ್ರಮ
ಒಡ್ಡು	೧೫೭	ಸೈನ್ಯ, ಮೂಹ
ಒತ್ತಂಬರಿ	೨೩೭	ಮೇಲೆ ಬೀಳು
ಒಪ್ಪಂಬೂಸು	೫	ಒಪ್ಪವಿಡು
ಒರೆಗಾಱ	೩೬	ಚಿತ್ರಕಾರ
ಒಱಲ್	೨೭ ವ	ಪ್ರೀತಿಸು
ಒಸಗೆ	೨೫೨	ಸಂತೋಷ, ಸಡಗರ
ಒಸೆ	೩	ಪ್ರೀತಿಸು
ಒಳಸೋಱು	೧೮೧	ಮೆಯ್ದಗೆ, ಶಕ್ತಿಗುಂದು

ಓ

ಓಜೆ	೧೦೦	ಪದವಿನ್ಯಾಸ, ಬೆಡಗು
ಓರ್ಗುಡಿಸು	೧೯೬	ಒಂದು ಕಡೆ ಒಟ್ಟಾಗಿ ಬೀಳು, ಕೂಡು
ಓಳಿ	೬೩	ಗುಂಪು

ಕ

ಕಂಡದಿಂಡೆ	೨೨೩	ಮಾಂಸಖಂಡದ ರಾಶಿ
ಕಂಡರಿಸು	೧೮೪ ವ	ಕೆತ್ತು
ಕಂದು	೯೭	ಕಪ್ಪು ಕಲೆ
ಕಜ್ಜಳ	೨೫೭	ಕಣ್ಣು ಕಪ್ಪು
ಕಡಂಗು	೧೨೦	ಉತ್ಸಾಹಿಸು
ಕಡಂದುಱು	೮	ಕಣಜದ ಹುಳು
ಕಡುಪು	೧೦೦	ಕೊಬ್ಬು, ಗರ್ವ
ಕಣ್ಣೆವಲೆ	೬೩ ವ	ಹಗ್ಗದ ಬಲೆ
ಕದಿರ್	೬೪	ಕಿರಣ
ಕನಗೊರ್ನನರ್	೮೯	ಅಪಕ್ವವಾದ ಕೊನೆ
ಕನ್ನಡವಕ್ಕಿ	೧೫೩ ವ	ಗಿಳಿ
ಕಪ್ಪು	೬೩ ವ	ಆನೆಗುಳಿ, ದೊಡ್ಡ ಪ್ರಾಣಿಗಳನ್ನು ಕೆಡಹಲು ತೋಡಿದ ಕುಳಿ
ಕಬ್ಬ	೩	ಕಾವ್ಯ
ಕಮ್ಮಂಗೋಲ	೯೭ ವ	ಮನ್ಮಥ, ಪುಷ್ಪಬಾಣ
ಕರುಮಾಡ	೨೬	ಉಪ್ಪರಿಗೆ
ಕಱೆಗೊರಲ	೧೩೧	ಶಿವ
ಕವರ್	೫೯	ಕಸಿದುಕೊ
ಕವ್ವರೆಗೊಳ್	೩೭ ವ	ಮುತ್ತು
ಕಲಿವೆ	೨೨	ನೆಲ್ಲು, ಬತ್ತದ ಬೆಳೆ
ಕಾಯ್ಪು	೪೩ ವ	ಪರಾಕ್ರಮ
ಕಾಲೂರ್	೧೯	ಸಣ್ಣ ಹಳ್ಳಿ
ಕಾವ	೧೪	ಕಾಮ
ಕಾವಣ	೨೪೭	ಚಪ್ಪರ
ಕಿತ್ತಡಿ	೧೧೪ ವ	ಯತಿ
ಕಿನಿಸು	೫೫	ಕೋಪಿಸು
ಕಿಬ್ಬರಿ	೪೫ ವ	ಬೆಟ್ಟದ ಕಿಬ್ಬಿ
ಕೀಲಿಸು	೩೭ ವ	ಸೇರಿಸು ಕಟ್ಟು
ಕೀಱ್	೨೩ ವ	ಕಡಿವಾಣ
ಕುಂಬತಳ	೨೨೧	ಕುಂಭಸ್ಥಲ

ಕುತ್ತೆಸಳ್	೩೫	ಕಿಱಿದು+ಎಸಳ್ = ಚಿಕ್ಕ ಎಲೆ
ಕುಳಿರ್	೨೪೭	ಚಳಿ, ಶೀಲತವಾದ
ಕುಳಿಸ	೩೨	ವಜ್ರ
ಕೂಂಕು	೧೪೩	ಪಲಾಯನ ಮಾಡು
ಕೂರ್ಮೆ	೧೨೩	ಪ್ರೀತಿ
ಕೆಂಗವಕ್ಕಿ	೧೫೩ ವ	ಕೋಗಿಲೆ
ಕೆತ್ತು	೨೪೩ ವ	ಅದುರು, ನಡುಗು
ಕೆನ್ನೀರ್	೨೧೫	ರಕ್ತ
ಕೆಳರ್	೧೬೦	ಬಿರಿ, ಕೋಪಗೊಳ್ಳು
ಕೇರ್	೧೪೨	ಗೋಡೆ
ಕೈಗೊರೆ	೧೨೯	ಕೈಗೆ + ಒರೆ = ಸಮಾನ
ಕೈಪಱೆ	೨೨೩	ಚಪ್ಪಾಳೆ
ಕೊಂಕು	೫	ವ್ಯಂಗಾರ್ಥ
ಕೊಂಚೆ	೫೬	ಕ್ರೌಂಚ ಪಕ್ಷಿ
ಕೊಕ್ಕರಿಕೆ	೨೨೩ ವ	ಹೇಸಿಕೆ
ಕೊಡಕೆ	೨೫೫	ಕಿವಿ
ಕೊಂತಗಾಱ	೧೫೭	ಸಬಳಗಾರ, ಭರ್ಜಿಗಾರ
ಕೊತ್ತು	೨೨೨	ಕೊಚ್ಚಿ ಹಾಕು
ಕೊಸಗು	೭೦ ವ	ಬೆಟ್ಟದಾವರೆ
ಕೊಳುಗುಳ	೨೨೪ ವ	ಯುದ್ಧ ಕಣ
ಕೋಡು	೫೬	ತಣ್ಣಗಾಗು, ಶೀತವಾಗು; ಭಯಪಡು
ಕೋಡುಗೈ	೪೩ ವ	ದಾನಮಾಡುವ ಕೈ
ಕೋವಣ	೨೨೬	ಕೌಪೀನ
ಕೋಲ್	೧೫೯	ಪೆಟ್ಟು, ಘಾತ
ಕೋಱ್ಗೆಸಱ್	೨೯೬ ವ	ತಣ್ಣನೆಯ ಕೆಸರು
ಕೌಂಗು	೨೦	ಅಡಕೆ

ಗ

ಗರಗರಿಕೆ	೧೭ ವ	ಸೊಗಸು, ಸಂಭ್ರಮ
ಗರುವರ	೩೬	ಶ್ರೇಷ್ಠರು

ಗಬಿಪು	೧೩೦	ಹರಟು, ಶಬ್ದ ಮಾಡು
ಗಾಡಿ	೧	ಸೊಬಗು, ಸೌಂದರ್ಯ
ಗಾಳಿವಟ್ಟೆ	೨೦೬	ವಾಯುಮಾರ್ಗ, ಆಕಾಶ
ಗುಡಿ	೨೫೦	ಧ್ವಜ, ಬಾವುಟ, ದೇವಾಲಯ
ಗುಣ್ಪು	೯೭ ವ	ಆಳ
ಗುಬಿ	೧೬೫	ಜೂಲು, ಆನೆಯ ಮೇಲಿನ ಹೊದಿಕೆ
ಗೂಡಾರ	೧೮೪ ವ	ಗೂಢಗಾರ
ಗೆಂಟು	೩೭ ವ	ದೂರ
ಗೆಡೆಗೊಳ್	೧೭	(ಗೆಡೆ-ಸ್ನೇಹ), ಚೆನ್ನಾಗಿ ಹೊಂದಿಕೊಳ್ಳು
ಗೊಂಟು	೧೬೦	ದಿಕ್ಕು
ಗೊಟ್ಟ	೧೧೪ ವ	ವಾಸಸ್ಥಾನ, ಗೋಷ್ಠ
ಗೊಟ್ಟಿ	೩೬	ಗೋಷ್ಠಿ
ಗೊಣೆ	೨೩೩	ಬಿಲ್ಲಿನ ಹೆದೆ
ಗೊತ್ತು	೩	ನೆಲೆ
ಗೋಣ್	೧೨೩	ಕುತ್ತಿಗೆ, ಕಂಠ
ಗೋಸ	೩೭ ವ	ಶಬ್ದ, ಘೋಷ
ಗೋಜಿಯಿಲ	೨೧೬	ಕುದುರೆ ಸವಾರ

ಚ

ಚಂದವ	೧೪೪	ಚಂದ್ರ
ಚಾಗ	೧೩೮	ತ್ಯಾಗ
ಚುಂಚುಲೋವೆ	೩೭ ವ	ಅಟ್ಟಕ್ಕೆ ಕಟ್ಟಿದ ಸಣ್ಣ ಇಳಿಜಾರು ಮರ
ಚುನ್ನವಾಡು	೫೭	ಹಾಸ್ಯ ಮಾಡು, ನಿಂದಿಸು
ಚೊಕ್ಕಳ	೨೬೫	ಮನೋಹರವಾದ
ಚೊಲ್ಲೆಯ	೧೦೪	ತುರುಬಿನ ಕೊನೆ
ಚೌಕಿಗೆ	೧೮೪ ವ	ಚತುಷ್ಕಿಕಾ, ಚಚ್ಚೌಕ
ಚೌವಟಮಲ್ಲ	೨೨೩ ವ	ನಾಲ್ಕು ದಿಕ್ಕಿನಲ್ಲಿಯೂ ಯುದ್ಧ ಮಾಡುವ ಶೂರ
ಚೌವಂದ	೧೫೩ ವ	ನಾಲ್ಕು ವಿಧ

ಜ

ಜಂಕಿಸು	೨೩೫	ಗದರಿಸು
ಜಂತ	೨೪೬ ವ	ದಂತ
ಜನ್ನವನುಣ್ಬಣ್ಣರ್	೧೨೩	ಯಜ್ಞ ಬಲಿಯನ್ನು ತಿನ್ನುವವರು
ಜಜುಬು	೧೪೨	ಹರಟು
ಜಾದು	೨೨೨	ಧಾತು, ಕೆಂಪುಕಲ್ಲು
ಜೇವೊಡೆ	೧೪೯	ಧನುಷ್ಟಂಕಾರ
ಜೊಂಪ	೬೮	ಗೊಂಚಲು, ಗುಚ್ಛ
ಜೊನ್ನ	೧೦೩	ಜ್ಯೋತ್ಸ್ನ, ಬೆಳುದಿಂಗಳು
ಜೋಡೆ	೩೬	ಸ್ವೈರಿಣಿ, ಸೂಳೆ

ಟ

ಟಕ್ಕೆಯ	೧೬೫	ಧ್ವಜ

ಡ

ಡಕ್ಕೆ	೧೯೨ ವ	ದೊಡ್ಡ ತಂಬಟೆ
ಡವಕೆ	೨೫೨ ವ	ಕಾಳಂಜಿ, ಪೀಕದಾನಿ
ಡಾಳ	೧೭	ಕಾಂತಿ
ಡೊಂಕಣೆ	೨೦೪	ಭರ್ಜಿ, ಸಬಳ
ಡೌಡೆ	೪೬	ವಾದ್ಯ ವಿಶೇಷ

ತ

ತಂಗದಿರ	೧೮೧ ವ	ಚಂದ್ರ
ತಂದಲ್	೧೮೧ ವ	ಜಲಕಣ
ತಟ್ಟು	೧೫೯	ಸಮೂಹ
ತಜಿಸಲ್	೧೪೦	ನಿರ್ಧಾರ ಗೈ
ತಳರ್	೧೫೭ ವ	ಹೊರಡು, ಚಲಿಸು
ತಳ್ತಿಱಿ	೧೨೪	ತಳ್ತು + ಇಱಿ = ಕೊಲ್ಲು
ತಳ್ಕು	೧೧೯	ಆಲಿಂಗನ, ಚಮತ್ಕಾರ
ತಾಣಂದರ	೧೬೩ ವ	ಸ್ಥಾನಾಂತರ
ತಿರಿಸುಳಿ	೧೨೬	ತ್ರಿಶೂಲಿ

ತಿವುರಿ	೧೮೪ ವ	ಬುಡ, ಗುಂಪು
ತಿಸುಳಿ	೧೫೦	ತ್ರಿಶೂಲಿ, ಶಿವ
ತೀಡು	೧೪	ಬೀಸು
ತುಱಿಲಾಳ್	೩೭೫ ವ	ವೀರ, ಬಂಟ
ತುಱಿಲ್ಗೆಯ್	೧೩೧ ವ	ನಮಸ್ಕರಿಸು
ತೆಱಪು	೧೨೪ ವ	ಅವಕಾಶ
ತೆಱಂಬೊಳೆ	೫	ವಿಶೇಷವಾಗಿ ಹೊಳೆ
ತೇಜಿವಾರು	೨೧೮	ಕುದುರೆಗೆ ಕಟ್ಟಿರುವ ಚರ್ಮದ ಬಾರು
ತೊವಲ್	೧೨೩	ಚರ್ಮ
ತೋರ	೪೫ ವ	ದಪ್ಪನಾದ

ದ

ದಟ್ಟಿ	೧೫೩ ವ	ಸೊಂಟ ಪಂಚೆ
ದಪ್ಪುಗ	೧೧೯	ದರ್ಪಕ, ಮನ್ಮಥ
ದರೆ	೧೨೯	ಧರಾ
ದಾವಣ	೭೩ ವ	ಗುಂಪು, ಸಾಲು, ಪಾತಿ
ದಿಮ್ಮಿದರ್	೧೦	ಪ್ರೌಢರು, ಶ್ರೇಷ್ಠರು
ದುಗುಲ	೧೨	ಬಟ್ಟೆ, ವಸ್ತ್ರ
ದುಟ್ಟಗೊರವ	೧೧೪ ವ	ಈಶ್ವರ
ದೂಸರ	೭೨	ಧೂಸರ, ಬೂದಿಬಣ್ಣ
ದೇಸೆ	೧೭	ಚೆಲುವು, ಸೌಂದರ್ಯ
ದೋರಿಯ	೨೦೨	ವಸ್ತ್ರವಿಶೇಷ

ನ

ನನ್ನಿ	೩	ನಿಜ; ಸತ್ಯ
ನವಿರ್	೨೮೯	ಕೂದಲು
ನಾಲ್ಮೊಗ	೧೨೮	ಬ್ರಹ್ಮ
ನಾರಿ	೧೮೧	ಬಿಲ್ಲಿನ ಹೆದೆ
ನಿಗಳ	೨೬೬	ಸಂಕೋಲೆ
ನಿಬ್ಬರ	೨೨೪ ವ	ನಿರ್ಭರ, ವೇಗ
ನಿಸ್ಸಾಳ	೧೫೧ ವ	ವಾದ್ಯ ವಿಶೇಷ

ನುಗುಳ್	೧೫೫	ಪ್ರವೇಶಿಸು, ತೆವಳು
ನುಡಿವೆಣ್	೧೨೮	ಸರಸ್ವತಿ
ನೆಗಱ್	೧೬೨	ಮೊಸಳೆ
ನೆಗಱ್ತೆ	೩	ಕೀರ್ತಿ
ನೆಯ್	೧೧೮	ತುಪ್ಪ
ನೆಱೆದಿಂಗಳ್	೧೧೫	ಪೂರ್ಣಚಂದ್ರ
ನೆಲದೆಱೆಯ	೪೪	ಭೂಮೀಶ, ರಾಜ
ನೆಲೆವಾಡ	೨೩ ವ	ಉಪ್ಪರಿಗೆ ಮನೆ
ನೇವಾಳ	೧೧೪ ವ	ಹಾರ
ನೇವುರ	೯೭ ವ	ನೂಪುರ, ಅಂದುಗೆ
ನೇರ್ಪಡು	೧೬೯	ಸರಿಯಾಗಿರು
ನೇಸಱ್	೧೧೯	ಸೂರ್ಯ
ನೊಣೆ	೧೯೫	ನುಂಗು

ಪ

ಪಂದರ	೫೭ ವ	ಚಪ್ಪರ
ಪಗಲಾಣ್ಮ	೪೫	ಸೂರ್ಯ
ಪಚ್ಚ	೨೬೨	ಆಭರಣ
ಪಚ್ಚೆಲೆ	೧೩೪	ಹಸುರೆಲೆ
ಪಟ್ಟವಣೆ	೧೬೫ ವ	ಗದ್ದುಗೆ, ಸಿಂಹಪೀಠ
ಪಡಿಯಱ	೧೦೦	ದ್ವಾರಪಾಲಕ
ಪಡೆವಳ್ಳ	೨೫೧	ಸೇನಾಧಿಪತಿ
ಪಡ್ಡಳಿ	೭೯ ವ	ಕಣಗಿಲೆ
ಪಣಿದರ	೨೩೯	ಫಣಿಧರ, ಶಿವ
ಪರಿಗೆ	೨೦೪	ಗುರಾಣಿ
ಪರಿವಿಡಿ	೮೮ ವ	ಕ್ರಮ
ಪಱಮೆ	೨	ತುಂಬಿ
ಪಲ್ಲಣ	೧೫೯	ಕುದುರೆಯ ಜೀನು
ಪಸರ	೩೪	ಅಂಗಡಿ
ಪಸಾಯ್ತ	೫೮ ವ	ಅಲಂಕಾರ ಮಾಡುವವನು
ಪಸುಂಬ	೨೧೧	ಹಸುರು ಹಕ್ಕಿ
ಪಳಂಚು	೧೪೯	ಮುಟ್ಟು, ಬಡಿ, ತಾಗು
ಪಱವಿಗೆ	೯೩ ವ	ಧ್ವಜ

ಪಟೆ	೨೪೮	ನಿಂದೆ
ಪಟೆಯ	೩೫	ಪಟ್ಟೆಯ ದಟ್ಟಿ, ನಡುವಿಗೆ ಕಟ್ಟುವ ಪಟ್ಟೆಯ ವಸ್ತ್ರ
ಪಾಂಗು	೬೫	ರೀತಿ
ಪಾಡಟೆ	೧೬೦	ಶಕ್ತಿ ಗುಂದು
ಪಾಡಿ	೧೬೨ ವ	ಸೈನ್ಯ, ಹಳ್ಳಿ
ಪಾದರಿಂಗ	೨೩೪	ವಿಟ
ಪಾರಿವ	೩೭ ವ	ಪಾರಿವಾಳ
ಪಾಱುಬೊಜಗ	೪೫ ವ	ಚಂಚಲನಾದ ವಿಟ
ಪಾಱುಂಬಳೆ	೧೧೨	ಚಕ್ರ
ಪಾಸ	೧೩೦ ವ	ಪಾಶ, ಹಗ್ಗ
ಪಿಡಿ	೨೭ ವ	ಹೆಣ್ಣಾನೆ
ಪೀಲಿಗದಱಿ	೧೯೪	ನವಿಲುಗರಿಯ ಕೊಡೆ
ಪುತ್ತಳಿ	೬೫	ಬೊಂಬೆ
ಪುದಿ	೯೯	ತುಂಬು
ಪುರುಳ್	೬	ಅರ್ಥಗಾಂಭೀರ್ಯ, ತಿರುಳು
ಪುರುಳಿ	೨೪೯	ಗಿಳಿ
ಪುಲ್ಲವಡಿಗಿತಿ	೩೫ ವ	ಹೂವಾಡಗಿತ್ತಿ
ಪುಲ್ಲಿ	೨೦೨	ವಸ್ತ್ರ ವಿಶೇಷ
ಪುಸಿವಡೆ	೧೫೩ ವ	ಮಾಯಾಸೈನ್ಯ
ಪೂಲಿ	೩೪	ವಸ್ತ್ರ ವಿಶೇಷ
ಪೂಸು	೧೩೦ ವ	ಲೇಪಿಸು
ಪೆಂಪು	೧೫	ಉನ್ನತಿ, ಹಿರಿಮೆ
ಪೆರ್ಚಳ	೯೭ ವ	ಅಧಿಕ್ಯ
ಪೆಱೆ	೧೦೩ ವ	ಚಂದ್ರ
ಪೆಳರ್	೨೩೮	ಹೆದರು
ಪೊಂಬೆಸ	೩೭ ವ	ಚಿನ್ನದ ಕೆಲಸ ಮಾಡಿದ
ಪೊಡೆ	೨೩ ವ	ಹೊಟ್ಟೆ, ಹೊಡೆ
ಪೊಡೆಯಲರ	೪೩ ವ	ಪದ್ಮನಾಭ, ವಿಷ್ಣು
ಪೊಣರ್	೧೩೬	ಹೋರಾಡು, ಜೋಡಿ
ಪೊಣರ್ವಕ್ಕಿ	೧೫೩ ವ	ಚಕ್ರವಾಕ
ಪೊದಱ್	೧೩೪	ಪೊದೆ
ಪೊದಟ್	೧೭	ವ್ಯಾಪಿಸು, ಪ್ರಖ್ಯಾತವಾಗು

ಪೊಮ್ಮಿದ್ರರ್	೧೦	ಅಧಿಕವಾದವರು, ಶ್ರೇಷ್ಠರು
ಪೊರೆ	೨	ರಕ್ಷಿಸು, ಕಾಪಾಡು
ಪೊರೆದೋಱು	೨೯	ಅರಳು
ಪೊಱವಾಱ್	೬೩ ವ	ನಿತಂಬ
ಪೊಲಂಬು	೨೨೪ ವ	ದಾರಿ
ಪೊಲಿಲ್	೨೫	ಪಟ್ಟಣ

ಬ

ಬಂಡಣ	೧೮೭	ಕಾಳಗ
ಬಂಡು	೧೦೭	ಮಕರಂದ
ಬಂದ	೫೨	ಫಲಬಿಟ್ಟ
ಬಂಬಲ್	೧೪	ಸಮೂಹ, ಗುಂಪು
ಬಗರಿಗೆ	೧೪೮	ಪಾತ್ರೆ
ಬಗ್ಗಿಸು	೧೫೨	ಕೂಗು, ಧ್ವನಿಗೈ
ಬಚ್ಚಣೆ	೨೦೪	ಬಣ್ಣ ಹಾಕುವುದು
ಬಚ್ಚಿಸು	೬೬ ವ	ಬಣ್ಣ ಹಾಕು
ಬಟ್ಟ	೪೫ ವ	ಗುಂಡಗಿರುವ
ಬನ್ನ	೧೪೬	ಭಗ್ನ
ಬರ್ದು	೩	ಪ್ರೌಢಿಮೆ
ಬರ್ದುನುಡಿ	೫	ಪ್ರೌಢೋಕ್ತಿ
ಬರ್ದುವೆಂಡಿರ್	೪೭	ಪ್ರೌಢ ಸ್ತ್ರೀಯರು
ಬಲ್ಲಣೆ	೧೬೧	ದೊಡ್ಡ ಸೈನ್ಯ
ಬಲ್ಲಹ	೯೭ ವ	ವಲ್ಲಭ, ಒಡೆಯ
ಬಳಿಯ	೧೭೯	ಬಲಿಷ್ಠ
ಬಳ್ಳಿವಾಲ	೧೮೧ ವ	ಬಳ್ಳಿಯಂತಿರುವ ಬಾಲ
ಬಟೆ	೧೮	ಮಾರ್ಗ, ಹತ್ತಿರ
ಬಾಂದೊಱೆ	೨೦೧	ಗಂಗಾನದಿ
ಬಾಂಬೊಲಿಲ್	೧೨೩	ಆಕಾಶದಲ್ಲಿನ ಪಟ್ಟಣ
ಬಾಡ	೧೫೩ ವ	ವಾಟ, ಸಾಲು, ಊರು
ಬಾಸಣ	೨೭೧	ಭಾಷಣ

ಬಾಸುಗಿ	೧೧೯	ವಾಸುಕಿ, ಆದಿಶೇಷ
ಬಾಳ್	೭೦ ವ	ಕತ್ತಿ
ಬಾಟಿಬೆ	೧೧೬ ವ	ಒಂದು ವಿಧವಾದ ಮೀನು
ಬಾಳ್ಗಂಬ	೯೭ ವ	ಆನೆಯನ್ನು ಕಟ್ಟುವ ಕಂಬ, ಜೀವಂತವಾದ ಕಂಬ
ಬಾಳ್ದಲೆವಿಡಿ	೧೧೭	ಜೀವದೊಡನೆ ಸೆರೆಹಿಡಿ
ಬಿಂಜಮಾಣಿಕ	೨೨೩ ವ	ಒಂದು ಬಿರುದು, (ಬಿಂಜ = ವಿಂಧ್ಯ)
ಬಿಜ್ಜೆ	೧೫೩ ವ	ವಿದ್ಯೆ
ಬಿಜ್ಜೆವಳ	೨೭೨	ವಿದ್ಯಾಬಲ, ಪಾಂಡಿತ್ಯ
ಬಿಜ್ಜೋಗರಿ	೨೭ ವ	ವಿದ್ಯಾಧರ ಸ್ತ್ರೀ
ಬಿಣ್ಪು	೫೩	ಭಾರ, ಹೊರೆ
ಬಿದಿವೆಡಂಗ	೨೨೩ ವ	ಹೊಯ್ಸಳ ಸೈನ್ಯದ ಆನೆಗಳ ಬಿರುದು
ಬಿದುಗಲ್	೬೫	ಚಂದ್ರಕಾಂತ ಶಿಲೆ
ಬಿಜುವರಿ	೨೧೩	ವೇಗವಾಗಿ ಓಡು
ಬಿಟ್ತು	೮೩	ಬೀಜ
ಬಿಸವಂದ	೩೭ ವ	ಸೋಜಿಗ, ಆಶ್ಚರ್ಯ
ಬಿಸುಗದಿರ	४೩ ವ	ಸೂರ್ಯ
ಬೀಯ	೩೭ ವ	ವ್ಯಯ
ಬೀರವಸದನ	೧೫೩ ವ	ವೀರರಿಗೆ ಉಚಿತವಾದ ಆಭರಣ
ಬೆಂಚೆ	೧೭ ವ	ಕೊಳ, ಹೊಂಡ
ಬೆದಂಡೆ	೧೧೬ ವ	ವೈದಂಡಿಕಾ, ಕಾವ್ಯಜಾತಿ
ಬೆಲೆವೆಣ್	೨४	ಸೂಳೆ
ಬೆಸನ	೧४೮	ವ್ಯಸನ; ಚಿಂತೆ
ಬೆಸಲ್	೧೯೮ ವ	ಹೆರಿಗೆ
ಬೆಳೆಗೆಯ್	೧೭ ವ	ಪೈರುಳ್ಳ ಹೊಲ
ಬೆಳ್ಮಾಡು	೧೦೬	ಮರುಳುಮಾಡು
ಬೊಬ್ಬುಲಿ	४೫ ವ	ಗೊಬ್ಬಳಿ ಮರ

ಮ

ಮಂಜಟಿಗೆ	೨೦೨	ಮಂಜಿಷ್ಠಾ (ತ್ಸ) ನಸುಹಳದಿ ಹೂ ಬಿಡುವ ಒಂದು ಜಾತಿಯ ಬಳ್ಳಿ ನಸುಹಳದಿ ಬಣ್ಣ
ಮಂಡವ	೨೪೭	ಮಂಟಪ
ಮಂಡವಿ	೧೮೪ ವ	ಮಂಟಪಿಕಾ, ಸಣ್ಣ ಮಂಟಪ
ಮಗರಿ	೩೪	ವಸ್ತ್ರ ವಿಶೇಷ, ಮಕರಿಕಾ (ತ್ಸ)
ಮಡ	೪೩ ವ	ಮಠ, ಕಡಾಣಿ
ಮಡಲ್ಗೊಳ್	೧೮೪ ವ	ಹಬ್ಬು
ಮರವಡು	೧೪೪	ಸ್ತಬ್ಧವಾಗು, ಮರದಂತೆ ಬಿದ್ದಿರು
ಮಲೆ	೧೧೦	ಗರ್ವಿಸು
ಮಲ್ಲಳಿಗೊಳ್	೨೪೪	ಸುತ್ತಾಡು, ತಳಮಳಗೊಳ್ಳು
ಮಸಕ	೨೭೨ ವ	ವೇಗ
ಮಳಿಗೆ	೩೪	ಮಠಿಕಾ, ಅಂಗಡಿ
ಮಾಣಿಕವರಿಗೆ	೨೦೦	ಮಾಣಿಕ್ಯದ ಗುರಾಣಿ
ಮಿಗ	೯೮ ವ	ಮೃಗ, ಜಿಂಕೆ
ಮಿಡಿವಿಲ್	೧೮೧ ವ	ಸಣ್ಣ ಹಿಂಟೆಗಳನ್ನು ಹೊಡೆಯುವ ಬಿಲ್ಲು
ಮಿಡುಕು	೧೩೦	ಚಲಿಸು
ಮಿಸು	೨೭	ಹೊಳೆ
ಮಿಟ್ಟು	೧೬೧	ಮೃತ್ಯು
ಮೀನ್	೪೩ ವ	ನಕ್ಷತ್ರ, ಮೀನು
ಮುಂಗುಡಿ	೧೫೩ ವ	ಅಗ್ರಭಾಗ
ಮುಂಗುಲಿ	೧೮೧ ವ	ಮೊಲ
ಮುನ್ನೀರ್	೧೯೫	ಸಮುದ್ರ, ಕಡಲು (ಮೂರು ನೀರು : ಧ್ರುವಜಲ, ನದೀಜಲ, ಆಕಾಶಜಲ)
ಮೂಂಕು	೧೬೭	ಮೂಕಿ
ಮೆಯ್ಗಣ್ಣ	೧೦೬	ಇಂದ್ರ, ಮೈಯ್ಯೆಲ್ಲ ಕಣ್ಣಾದವನು
ಮೆಯ್ಗರೆ	೧೩೪	ಮೈಮರೆಸಿಕೊಳ್ಳು
ಮೇಲುದು	೨೬೧	ಸೆರಗು

ಮೇಲೂರ್	೧೮	ಸ್ವರ್ಗ
ಮೊಗಸಾಲೆ	೧೫೬	ಮುಖಶಾಲಾ
ಮೊಗ್ಗರ	೧೯೩	ಸಮೂಹ, ಗುಂಪು
ಮೊಗ್ಗಗ	೧೨೩	ಶೂರ
ಮೊನೆ	೧೨೨	ಯುದ್ಧ
ಮೊಜಟೆ	೨೩ ವ	ನಂಟು, ಗೋಳಾಟ
ಮೊಟಗು	೨೦೬	ಗುಡುಗು, ಗರ್ಜನೆ
ಮೋಹರ	೧೫೭	ಸೈನ್ಯ, ಗುಂಪು

ರ

ರನ್ನ ವಸರ	೩೨	ರತ್ನಗಳ ಅಂಗಡಿ
ರಯ್ಯ	೨೭ ವ	ರಮ್ಯ, ಮನೋಹರ

ಱ

ಱೆಂಚೆ	೨೦೩	ಆನೆಯ ಗವುಸು, ಸಜ್ಜು

ಲ

ಲಾಗುಳ	೧೪೮	ಯೋಗದಂಡ, ದೊಣ್ಣೆ
ಲೆಂಕ	೧೮೭	ಸೇವಕ
ಲಕ್ಕಿಗ	೯	ವಿದ್ವಾಂಸ, ಜೋಯಿಸ
ಲೋವೆ	೯೯	ಸೂರು

ವ

ವಂಗಡ	೧೦೧	ಗುಂಪು, ಸಾಲು
ವಾರುವ	೩೭ ವ	ಕುದುರೆ
ವಿಸಟಂಬರಿ	೩೭ ವ	ಸ್ವೇಚ್ಛೆಯಾಗಿ ಓಡಾಡು

ಸ

ಸಂಕಲೆ	೩೭ ವ	ಶೃಂಖಲೆ

ಸಂಕು	೨೨೮	ಶಂಖ
ಸಂವರಣೆ	೧೫೭	ಸಿದ್ಧವಾಗಿರುವಿಕೆ
ಸಕ್ಕದ	೨೭೦	ಸಂಸ್ಕೃತ
ಸನ್ನಣ	೧೫೩ ವ	ಸನ್ನಾಹ
ಸಬರಿ	೧೭	ಶಬರಿ, ಬೇಡಿತಿ
ಸಮ್ಮ	೧೩೦ ವ	ಚರ್ಮ
ಸರಿ	೧೧೬ ವ	ಪ್ರವಾಹ
ಸಜೆ	೮೮	ಕಲ್ಲುಚಪ್ಪಡಿ
ಸವ	೧೭೮	ಸಮ
ಸವಣ	೧೭೫	ಶ್ರಮಣ
ಸಸಿ	೧೦೬	ಚಂದ್ರ
ಸಾಸಿಗ	೧೯೮	ಸಾಹಸಿಗ
ಸಿಡಿಮಿಡಿಗೊಳ್	೨೨೪ ವ	ಹೆದರು, ಚಡಪಡಿಸು
ಸಿರಿಕಂಡ	೪೫ ವ	ಶ್ರೀಗಂಧ
ಸೀಕರಿವೋಗು	೨೪೬	ಕಪ್ಪಾಗು, ಸೀದುಹೋಗು
ಸೀಗುರಿ	೭೨	ಚಾಮರ
ಸೀರೆವರದ	೩೪	ಸೀರೆಯ ವ್ಯಾಪಾರಿ
ಸೀರ್ವನಿ	೨೩	ತುಂತುರು, ಸಣ್ಣ ಸಣ್ಣ ಹನಿ
ಸೀಸಕ	೨೧೮	ಶೀರ್ಷಕ, ಕಲೆಗೆ ಧರಿಸುವ ರಕ್ಷೆ
ಸುಗಿ	೨೬೮	ಹೆದರು
ಸೂಡು	೧೧೬	ಮುಡಿದುಕೊಳ್ಳು
ಸೂನಿಗೆ	೧೮೭	ಕತ್ತಿ
ಸೂಳೈಸು	೧೫೧ ವ	ಶಬ್ದಮಾಡು
ಸೆಲವು	೧೫೩ ವ	ಅನುಮತಿ
ಸೆಳ್ಳುಗುರ್	೬೪	ಚೆಲುವಾದ (ಸೂಕ್ಷ್ಮವಾದ) ಉಗುರು
ಸೇದೆ	೩೦	ಆಯಾಸ, ಶ್ರಮ
ಸೇಸೆ	೨೬೬	ಶೇಷೆ, ಅಕ್ಷತೆ
ಸೈಗಱೆ	೨೧೪	ನೇರವಾಗಿ ಸುರಿ
ಸೊಂದಿಗೋಡಗ	೨೭ ವ	ದೊಡ್ಡ ಅಳಿಲು, ಒಂದು ಜಾತಿಯ ಕೋತಿ ಇರಬಹುದೆ?

ಸೊದೆ	೯೩ ವ	ಸುಧಾ, ಸುಣ್ಣ, ಬಿಳುಪು
ಸೊವಡು	೩೭ ವ	ಸೊಗಡು, ಕಟುವಾದ ವಾಸನೆ
ಸೋಗೆ	೯೭ ವ	ನವಿಲು, ಗರಿ
ಸೋವು	೧೭ ವ	ಅಟ್ಟು, ಓಡಿಸು

ಹ

ಹಂತಿ	೧೬೨	ಪಙ್ತಿ, ಸಾಲು
ಹತ್ತ	೧೫೮	ಹಸ್ತ, ಕೈ
ಹಮ್ಮದ	೨೫೯	ಮೂರ್ಛೆ
ಹಿವಗದಿರ	೯೭	ಚಂದ್ರ

ಅನುಬಂಧ-೪

ಸುಕುಮಾರ ಚರಿತಂ ಪಾರಿಭಾಷಿಕ ಪದಸೂಚಿ

ಅಂತರಾಯ	v.೩	ಮೋಕ್ಷವನ್ನು ಬಯಸಿ ಮುಂದುವರಿಯುವವನಿಗೆ ನಡುನಡುವೆ ಉಂಟಾಗುವ ತೊಡಕು; ಇವುಗಳಲ್ಲಿ ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ ಮತ್ತು ವೀರ್ಯಾಂತರಾಯ ಎಂದು ಐದು ಬಗೆ. ಒಟ್ಟಾರೆ ಇವನ್ನು 'ಅಂತರಾಯಪಂಚಕ' ಎನ್ನುತ್ತಾರೆ.
ಅಣುಬ್ರ(ವ್ರ)ತ	v.೪೦	ಜೈನಗೃಹಸ್ಥರು ಧರಿಸಿ ಪೂರ್ಣ ಶ್ರದ್ಧೆಯಿಂದ ಆಚರಿಸಬೇಕಾದ ಐದು ಚಿಕ್ಕ ವ್ರತಗಳು : ಸತ್ಯ, ಅಹಿಂಸೆ, ಅಸ್ತೇಯ (ಕಳ್ಳತನ ಮಾಡದಿರುವುದು), ಬ್ರಹ್ಮಚರ್ಯ ಮತ್ತು ಅಪರಿಗ್ರಹ (ಅವಶ್ಯಕವಾದುದಕ್ಕಿಂತ ಹೆಚ್ಚಿನದನ್ನು ಕೂಡಿಡದಿರುವುದು)
ಅಭವ್ಯ	v.೨೨	ಸಮ್ಯಗ್ದರ್ಶನಾದಿಗಳಲ್ಲಿ ಪರಿಣತವಾಗದೆ ಸಿದ್ಧಸ್ಥಿತಿಗೆ ಏರದ ಚೇತನ
ಅವಧಿಜ್ಞಾನ	xii.೮	ಕಾಲದೇಶಗಳ ಮಿತಿಯನ್ನು ಮೀರಿ ಯಾವುದೇ ಜಾಗದಲ್ಲಿ ಮತ್ತು ಯಾವುದೇ ಕಾಲದಲ್ಲಿ ನಡೆಯುವ ಸಂಗತಿಗಳನ್ನು ತಿಳಿದುಕೊಳ್ಳುವ ಶಕ್ತಿ. ಇದನ್ನು ಹೊಂದಿದವನು 'ಅವಧಿಜ್ಞಾನಿ'.
ಆಸನ್ನಭವ್ಯ	iii.೮ವ	ಮೋಕ್ಷ ಸಂಪಾದಿಸುವ ಶಕ್ತಿಯಿರುವವನು ಭವ್ಯ. ಮೋಕ್ಷ ಸಂಪಾದನೆಗಿನ್ನೂ ಬಹುಕಾಲ ಕಾಯಬೇಕಾದವನು ದೂರಭವ್ಯ; ಅನತಿಕಾಲದಲ್ಲಿಯೇ (ಕೆಲವೇ ಜನ್ಮಗಳಲ್ಲಿ) ಅದನ್ನು ಪಡೆಯುವ ಶಕ್ತಿಯುಳ್ಳವನು ಆಸನ್ನಭವ್ಯ.
ಏಕಭುಕ್ತ	iii.೨೯	ದಿನದಲ್ಲಿ ಒಂದೇ ಹೊತ್ತು ಊಟಮಾಡುವ ವ್ರತ ತೊಟ್ಟವನು

ಕಷಾಯ	**v.೭ ವ**	ಕರ್ಮಫಲವನ್ನು ಬೆಳೆಸುವ (ಅಂದರೆ ಸುಖದುಃಖ ಗಳನ್ನುಂಟು ಮಾಡುವ) ದೋಷಗಳು. ಇವು ಕ್ರೋಧ, ಮಾನ, ಮಯಾ ಮತ್ತು ಲೋಭ ಎಂಬ ನಾಲ್ಕು ಬಗೆ. ಪ್ರತ್ಯಾಖ್ಯಾನ ಮತ್ತು ಅಪ್ರತ್ಯಾಖ್ಯಾನ ಎಂಬ ಭೇದದಿಂದ ಎಂಟೂ ಆಗುತ್ತವೆ.
ಕಾಲಲಬ್ಧಿ	**iii.೩೯ ವ**	ಗುರೂಪದೇಶದಿಂದ ಆಧ್ಯಾತ್ಮಿಕ ಜೀವನ ಆರಂಭಗೊಂಡು ಮುಂದುವರಿದು ಸಮ್ಯಕ್ತ್ವ ಪಡೆಯುವ ಕಾಲ ಕೂಡಿಬರುವುದೇ ಕಾಲಲಬ್ಧಿ
ಕೇವಲದರ್ಶನಾವವರಣೀಯ		
	iii.೩೯ ವ	ಚಕ್ಷುದರ್ಶನಾವರಣೀಯು ಮತ್ತು ಅಚಕ್ಷು ದರ್ಶನಾವರಣೀಯ, ಅವಧಿದರ್ಶನಾವರಣೀಯ ಮತ್ತು ಕೇವಲದರ್ಶನಾವರಣೀಯ ಎಂಬ ನಾಲ್ಕು ಬಗೆಯ ದರ್ಶನಾವಣೀಯಗಳಲ್ಲಿ ಒಂದು. ಕೇವಲದರ್ಶನಕ್ಕೆ ಆವರಣವನ್ನುಂಟುಮಾಡುವ ಕರ್ಮ.
ಕೇವಲಿಜ್ಞಾನಾವರಣೀಯ	**iii.೬೯**	ಕೇವಲಜ್ಞಾನವೆಂದರೆ ಲೋಕಾಲೋಕಗಳಲ್ಲಿಯ ಹಾಗೂ ತ್ರಿಕಾಲಗಳಲ್ಲಿಯ ಸರ್ವವಸ್ತುಗಳ ಸಮಗ್ರ ಜ್ಞಾನ. ಅಂತಹ ಕೇವಲ ಜ್ಞಾನವನ್ನು ಆವರಿಸುವ ಕರ್ಮ ಕೇವಲಜ್ಞಾನಾವರಣೀಯು. ಇದು ಐದು ಬಗೆಯ ಜ್ಞಾನಾವರಣೀಯಗಳಲ್ಲಿ ಒಂದು.
ಚರಣಾನುಯೋಗ	**iii.೩೫**	ಸದಾಚಾರವನ್ನು ನಿರೂಪಿಸುವ ಶಾಸ್ತ್ರ ಭಾಗ.
ತಿರಿಕೋಪಸರ್ಗ	**xii.೪೧**	ತಪಸ್ಸಿನ ಕಾಲದಲ್ಲಿ ಆಗುವ ತೊಂದರೆ. ಇದು ನಾಲ್ಕು ತೆರ : ದೇವೋಪಸರ್ಗ (ದೇವತೆಗಳಿಂದಾಗುವ ತೊಂದರೆಗಳು), ಮನುಷ್ಯೋಪಸರ್ಗ (ಮನುಷ್ಯರಿಂದ ಉಂಟಾಗಬಹುದಾದ ತೊಂದರೆಗಳು), ತಿರಿಕೋಪಸರ್ಗ (ಪ್ರಾಣಿಗಳಿಂದಾಗಬಹುದಾದ ತೊಂದರೆಗಳು) ಮತ್ತು ಅಚೇತನೋಪಸರ್ಗ (ಪ್ರಾಣಿಗಳಲ್ಲದ ವಸ್ತುಗಳಿಂದಾಗ ಬಹುದಾದ ತೊಂದರೆಗಳು).
ದ್ರವ್ಯಾನುಯೋಗ	**iii.೩೭ ವ**	ಪ್ರಥಮಾನುಯೋಗ, ಕರಣಾನುಯೋಗ, ಚರಣಾನು ಯೋಗ ಮತ್ತು ದ್ರವ್ಯಾನುಯೋಗ ಎಂಬ ನಾಲ್ಕು ಬಗೆಯ ಅನುಯೋಗಗಳಲ್ಲಿ ಒಂದು. ಅನುಯೋಗವೆಂದರೆ ತೀರ್ಥಂಕರರು ಉಪದೇಶಿಸಿದ ಶಾಸ್ತ್ರ ಸಮುದಾಯ.

ಪರೀಷಹ xi.೮೩ ವ ಸಮ್ಯಕ್‌ಜ್ಞಾನಾರ್ಜನೆಗಿರುವ ಇಪ್ಪತ್ತೆರಡು ಬಗೆಯ ಅಡ್ಡಿಗಳು : ಹಸಿವು, ಬಾಯಾರಿಕೆ, ಚಳಿ, ಬಿಸಿ, ಕ್ರಿಮಿ ಕೀಟಗಳ ಕಡಿತ, ಬೆತ್ತಲೆಯಿಂದಾಗುವ ತೊಂದರೆ, ಅರತಿಯ ಬಾಧೆ, ಹೆಂಗಸರಿಂದಾಗುವ ತೊಂದರೆಗಳು, ಓಡಾಡುವಾಗ ಆಗುವ ತೊಂದರೆ, ಮಲಗುವಾಗಿನ ತೊಂದರೆಗಳು, ಕುಳಿತಿ ರುವಾಗಿನ ತೊಂದರೆಗಳು, ಬೈಗುಳು, ಹೊಡೆತ, ಭಿಕ್ಷೆ ಬೇಡುವಾಗಿನ ಕಷ್ಟನಿಷ್ಠುರ, ಭಿಕ್ಷೆ ಸಿಗದಾಗ ಆಗುವ ಖೇದ, ತಪೋಮಹಿಮೆಗಳು ಕಾಣದಿರುವುದು, ರೋಗ, ಮುಳ್ಳುಕಲ್ಲುಗಳಿಂದಾಗುವ ಬಾಧೆ, ತನ್ನ ಪ್ರಜ್ಞೆಗೆ ಅಹಂಕಾರ ಪಡುವುದು, ಉತ್ತಮ ಜ್ಞಾನಾಕಾಂಕ್ಷಿಯಾಗಿ ಅಜ್ಞಾನಕ್ಕೆ ಕೊರಗುವುದು. ಸ್ನಾನಮಾಡದಿರುವುದರಿಂದಾಗುವ ಬಾಧೆ ಮತ್ತು ಜನ ಪುರಸ್ಕರಿಸದಿದ್ದಾಗ ಆಗುವ ದುಃಖ.

ಪೃಥಕ್ತ್ವವಿತರ್ಕವೀಚಾರ viii.೬೨ವ ಎಂಟನೆಯ ಗುಣಸ್ಥಾನದಿಂದ ಹನ್ನೆರಡನೆಯ ಗುಣಸ್ಥಾನದ ವರೆಗಿನ ಕೆಲವು ಭಾಗಗಳವರೆಗೆ ನಡೆಯುವಂತಹ ಶುಕ್ಲಧ್ಯಾನ; ಪ್ರಥಮಶುಕ್ಲಧ್ಯಾನ.

ಪ್ರತ್ಯಾಖ್ಯಾನ iii.೩೯ ವ ಮುಂದೆ ಪಾಪಮಾಡುವುದಿಲ್ಲವೆಂದು ಪ್ರತಿಜ್ಞೆಮಾಡುವುದು ಮತ್ತು ಸೀಮಿತ ಅವಧಿಯವರೆಗೆ ಆಹಾರಾದಿಗಳನ್ನು ತ್ಯಜಿಸುವುದು. ಪಾಪಮಾಡುವುದಿಲ್ಲವೆಂದು ಮನಸ್ಸಿನಲ್ಲಿ ದೃಢ ನಿಶ್ಚಯ ಮಾಡುವುದು 'ಮನಃಪ್ರತ್ಯಾಖ್ಯಾನ'; ಮಾತಿನಲ್ಲಿ ಕೆಡುಕನ್ನು ಮಾಡುವುದಿಲ್ಲವೆಂಬುದು 'ವಚನಪ್ರತ್ಯಾಖ್ಯಾನ'; ಮತ್ತು ಶರೀರದಿಂದ ಪಾಪಕೃತ್ಯಗಳನ್ನು ಎಸಗುವುದಿಲ್ಲವೆಂದು ಪ್ರತಿಜ್ಞೆಗೈಯುವುದು 'ಶರೀರಪ್ರತ್ಯಾಖ್ಯಾನ'.

ಪ್ರಾಯೋಗ್ಯತಾಲಬ್ಧಿ iii.೩೯ ವ ಕರ್ಮವು ಕಾಲಕ್ರಮೇಣ ಕಡಿಮೆಯಾಗುವ ಪ್ರಾಪ್ತಿ. ಲಬ್ಧಿಯಲ್ಲಿ ಐದು ಬಗೆ : ಕ್ಷಯೋಪಶಮ, ವಿಶುದ್ಧಿ, ದೇಶನಾ, ಪ್ರಾಯೋಗ್ಯತಾ ಮತ್ತು ಕರಣ.

ಮಿಥ್ಯಾತ್ವ i.೫೨ ಅತತ್ವಶ್ರದ್ಧಾನದ ಉದಯದಿಂದ ಜೀವನು ಆಪ್ತರು ಮತ್ತು ತೀರ್ಥಂಕರರು ಹೇಳಿದ ಮೋಕ್ಷಮಾರ್ಗದಿಂದ ಪರಾಙ್ಮುಖನಾಗಿ ಸಮ್ಯಕ್ತ್ವರಹಿತನಾಗಿ ಮಿಥ್ಯಾದೃಷ್ಟಿಯನ್ನು ಹೊಂದುವುದು.

ವಿಭಂಗ	**viii.೪ ವ**	'ವಿಭಂಗ' ಅಥವಾ 'ವಿಭಂಗಜ್ಞಾನ'ವೆಂದರೆ ಆತ್ಮನಿಗೆ ಅಹಿತವನ್ನುಂಟುಮಾಡುವ ಪದಾರ್ಥಗಳನ್ನು ತಿಳಿಯಬಲ್ಲ ಜ್ಞಾನ.
ವ್ಯಂತರ	**xi.೫೪ ವ**	ಜ್ಯೋತಿಷಿ, ವಿಮಾನವಾಸೀ, ಭವನಪತಿ ಮತ್ತು ವ್ಯಂತರ ಎಂಬ ನಾಲ್ಕು ಬಗೆಯ ದೇವತಾವರ್ಗಗಳಲ್ಲಿ ಒಂದು. ಮಹಾಮೇರು ಪರ್ವತದ ತುದಿಯಿಂದ ಭವನಲೋಕದ ವರೆಗೂ ಇರುವ ದೇವತೆಗಳು.
ಶ್ರಾವಕವ್ರತ	**v.೪೧ ವ**	ಜೈನ ಗೃಹಸ್ಥರು ಅನುಸರಿಸಬೇಕಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಐದು ಅಣುವ್ರತಗಳು; ದಿಗ್ವ್ರತ, ದೇಶವ್ರತ, ದಂಡವಿರತಿವ್ರತ, ಅತಿಥಿಸಂಗ್ರಹ, ಸಲ್ಲೇಖನ ಎಂಬ ನಾಲ್ಕು ಶಿಕ್ಷಾವ್ರತಗಳು - ಇವೆಲ್ಲ ಸೇರಿ ಶ್ರಾವಕವ್ರತ ಎನ್ನಿಸಕೊಳ್ಳುತ್ತದೆ.
ಶ್ರಾವಕಾಚಾರ	**vi.೨೫ ವ**	ಶ್ರಾವಕಧರ್ಮದ ಆಚರಣೆ
ಸಾಮಾನಿಕ	**ix.೩೧ ವ**	ಒಂದು ದೇವತಾವರ್ಗ ಮತ್ತು ಅದಕ್ಕೆ ಸೇರಿದ ದೇವತೆ.

ಅನುಬಂಧ-೫

ಸಹಾಯಕ ಸಾಹಿತ್ಯ

ಸುಕುಮಾರಚರಿತಂ	ಸಂ.	ಪ್ರೊ. ಡಿ.ಎಲ್. ನರಸಿಂಹಾಚಾರ್ ಪ್ರೊ ತ.ಸು. ಶಾಮರಾಯ
ಸುಕುಮಾರಚರಿತೆಯ ಸಂಗ್ರಹ		ಸಿ.ಆರ್. ಕಮಲಮ್ಮ
ಕಬ್ಬಿಗರ ಕಾವಂ		ಪ್ರೊ. ದೇ. ಜವರೇಗೌಡ
ಕಬ್ಬಿಗರ ಕಾವಂ		ಕನ್ನಡ ಸಾಹಿತ್ಯ ಪರಿಷತ್ತು
ಕರ್ನಾಟಕ ಕವಿಚರಿತೆ		ರಾ. ನರಸಿಂಹಾಚಾರ್ಯ
ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ		ಬೆಂಗಳೂರು ವಿಶ್ವವಿದ್ಯಾಲಯ
ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ		ಮೈಸೂರು ವಿಶ್ವವಿದ್ಯಾಲಯ
ವಡ್ಡಾರಾಧನೆ		ಪ್ರೊ. ಡಿ.ಎಲ್. ನರಸಿಂಹಾಚಾರ್
ಕನ್ನಡ ಸಾಹಿತ್ಯ ಚರಿತ್ರೆ		ರಂ.ಶ್ರೀ. ಮುಗಳಿ
ಚಂಪೂ ಕವಿಗಳು		ಪಿ.ವಿ. ನಾರಾಯಣ



ಸಮಗ್ರ ಕನ್ನಡ ಜೈನಸಾಹಿತ್ಯ

ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ರೂಪಿಸಿ, ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮಹತ್ವಪೂರ್ಣವಾದದ್ದು. ೨೦೦೬ರ ಶ್ರವಣಬೆಳಗೊಳದ ಐತಿಹಾಸಿಕ ಗೊಮ್ಮಟ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯು ಈ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯನ್ನು ರೂಪಿಸಿ ಕರ್ನಾಟಕ ಸರಕಾರಕ್ಕೆ ಸಲ್ಲಿಸಿತು. ಕರ್ನಾಟಕ ಸರಕಾರವು ಈಗಾಗಲೇ ಸಮಗ್ರ ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಸಂಪುಟಗಳನ್ನು ಹೊರತಂದಿದ್ದು, ಈಗ ಸಮಗ್ರ ಜೈನಸಾಹಿತ್ಯ ಸಂಪುಟಗಳ ಪ್ರಕಟಣೆಯ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯದ ಬಹಳ ಮಹತ್ವದ ಶರೀರವೊಂದನ್ನು ಪೂರ್ಣಗೊಳಿಸುತ್ತಿದೆ. ಈ ಸಮಗ್ರ ಜೈನಸಾಹಿತ್ಯ ಸಂಪುಟದ ಯೋಜನೆಯನ್ನು ೨೦೦೬ರ ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದ ಭಾಗವಾಗಿ ಕರ್ನಾಟಕ ಸರಕಾರ ಅಂಗೀಕರಿಸಿ ಸಾರಸ್ವತ ಮಹಾಮಸ್ತಕಾಭಿಷೇಕ ಮಾಡಿದ ಪುಣ್ಯಕ್ಕೆ ಪಾತ್ರವಾಗಿದೆ.

ಪ್ರಾಚೀನ ಕನ್ನಡ ಜೈನ ಸಾಹಿತ್ಯ ಪರಂಪರೆಯಲ್ಲಿ ಶಾಂತಿನಾಥನ 'ಸುಕುಮಾರ ಚರಿತಂ' ಚಂಪೂಕಾವ್ಯವು ಅನೇಕ ದೃಷ್ಟಿಗಳಿಂದ ಅನನ್ಯವಾದ ವಿಶಿಷ್ಟವಾದ ಕೃತಿಯಾಗಿದೆ. ವಸ್ತು ಭಾಷೆ ಛಂದಸ್ಸುಗಳಲ್ಲಿ ಕನ್ನಡತನವನ್ನು ಇಟ್ಟುಕೊಂಡು ಚಂಪೂವಿನ ಕಾವ್ಯಮಾದರಿಯಲ್ಲಿ ಸುಕುಮಾರಚರಿತವನ್ನು ಶಾಂತಿನಾಥ ರಚಿಸಿರುವುದು ಕನ್ನಡ ಜೈನಸಾಹಿತ್ಯದ ಇತಿಹಾಸದಲ್ಲಿ ಒಂದು ಕುತೂಹಲಕಾರಿಯಾದ ಸಂಗತಿ. ಜೈನ ಕವಿಗಳು ಉದ್ದಕ್ಕೂ ದೇಸಿಯ ಕಡೆ ತುಡಿಯುತ್ತಿದ್ದರು ಎನ್ನುವುದಕ್ಕೆ ಶಾಂತಿನಾಥನ ಸುಕುಮಾರ ಚರಿತೆ ಉತ್ತಮ ಸಾಕ್ಷಿಯಾಗಿದೆ. ಕನ್ನಡನಾಡು, ಕನ್ನಡದ್ದೇ ಆದ ದೇಸಿಯ ಭಾಷೆ ಮತ್ತು ಕನ್ನಡದ್ದೇ ಆದ ಒಂದು ಬದುಕು - ಇದರ ಕನಸನ್ನು ಕಂಡು ಕಾವ್ಯ ಬರೆದ ಏಕೈಕ ಕವಿ ಆಂಡಯ್ಯ. 'ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು' ಎಂದು ಕನ್ನಡನಾಡನ್ನು ವರ್ಣಿಸುವ ಪದ್ಯದ ಜತೆಗೆ ಕಾವ್ಯದ ಮಾಧ್ಯಮವಾಗಿ ಅಚ್ಚಗನ್ನಡದ ಭಾಷೆಯೊಂದನ್ನು ನಿರ್ಮಿಸಿದ ಭಾಷಾಕೋವಿದನಾಗಿ ಆಂಡಯ್ಯ ಕನ್ನಡಸಾಹಿತ್ಯ ಮತ್ತು ಕನ್ನಡನಾಡಿನ ಇತಿಹಾಸದಲ್ಲಿ ಏಕಾಂಗಿಯಾಗಿ ಅನನ್ಯನಾಗಿ ಉಳಿಯುತ್ತಾನೆ. ಪರಮ ಜಿನನಿಷ್ಠೆ ಮತ್ತು ಕನ್ನಡ ನಿಷ್ಠೆಗಳ ಒಬ್ಬ ಅವಧೂತನ ಮಾದರಿ ಆಂಡಯ್ಯ ಕವಿಯಲ್ಲಿ ಅಂತರ್ಗತವಾಗಿದೆ.

ಡಾ. ಪಿ.ವಿ. ನಾರಾಯಣ ಅವರು ಕನ್ನಡ ಪ್ರಾಧ್ಯಾಪಕರಾಗಿ ಸಂಶೋಧಕರಾಗಿ ಕನ್ನಡಪರ ಚಟವಟಿಕೆಗಳಲ್ಲಿ ಕ್ರಿಯಾಶೀಲರಾಗಿ, ಕನ್ನಡದ ಕೆಲಸವನ್ನು ನಿರಂತರ ಮಾಡುತ್ತಾ ಬಂದಿದ್ದಾರೆ. ಅವರ ಕೃತಿಗಳು ಕನ್ನಡ ಸಂಶೋಧನೆಯ ಮತ್ತು ವಿಮರ್ಶೆಯ ಕ್ಷೇತ್ರಕ್ಕೆ ಮಹತ್ವದ ಕೃತಿಗಳಾಗಿವೆ. ಕನ್ನಡದ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವ ಡಾ. ಪಿ.ವಿ. ನಾರಾಯಣ ಅವರು ಅಚ್ಚಗನ್ನಡದ ಕವಿ ಆಂಡಯ್ಯನ ಕಬ್ಬಿಗರ ಕಾವವನ್ನು, ದೇಸಿ ಪರಂಪರೆಯ ಕವಿ ಶಾಂತಿನಾಥನ ಸುಕುಮಾರ ಚರಿತೆಯನ್ನು ಸಂಪಾದಿಸಿಕೊಟ್ಟಿರುವುದು ಅರ್ಥಪೂರ್ಣವಾಗಿದೆಯೆಂದು ನಾನು ಭಾವಿಸುತ್ತೇನೆ. ಈ ಎರಡು ವಿಶಿಷ್ಟ ಕಾವ್ಯಗಳನ್ನು ತುಂಬಾ ಪರಿಶ್ರಮ ಮತ್ತು ಆಸಕ್ತಿಯಿಂದ ಸಮರ್ಪಕವಾಗಿ ಸಂಪಾದಿಸಿಕೊಟ್ಟ ಡಾ. ಪಿ.ವಿ. ನಾರಾಯಣ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬಿ.ಎ. ವಿವೇಕ ರೈ
ಕುಲಪತಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ

ರೂ. ೧೦೦/-